ದಕ್ಷಿಣ ಕನ್ನಡ ಜಿಲ್ಲೆಯ ಮಲೆಕುಡಿಯರು : ಸಮಾಜೋ - ಸಾಂಸ್ಕೃತಿಕ ಅಧ್ಯಯನ

ಉಡುಪಿ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಮೂಲಕ

ಪಿಎಚ್. ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧಕ
ಮೋಹನ ಗೌಡ ಎಚ್.
ಕನ್ನಡ ಉಪನ್ಯಾಸಕರು
ಶ್ರೀ ಗುರುದೇವ ಪದವಿಪೂರ್ವ ಕಾಲೇಜು
ಬೆಳ್ತಂಗಡಿ

ಮಾರ್ಗದರ್ಶಕರು
ಡಾ. ಡಿ. ಆರ್. ಪಾಂಡುರಂಗ
ನಿವೃತ್ತ ಪ್ರಾಧ್ಯಾಪಕರು
ಎಂ. ಜಿ. ಎಂ. ಕಾಲೇಜು, ಉಡುಪಿ

ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಹೊಸಪೇಟೆ ತಾಲೂಕು
ಬಳ್ಳಾರಿ ಜಿಲ್ಲೆ - ೫೮೩ ೨೭೬

೨೦೧೧

443

ದಕ್ಷಿಣ ಕನ್ನಡ ಜಿಲ್ಲೆಯ ಮೊಗೇರರು :
ಜನಾಂಗಿಕ — ಸಾಂಸ್ಕೃತಿಕ ಅಧ್ಯಯನ

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ದಕ್ಷಿಣ ಕನ್ನಡ ಜಿಲ್ಲೆಯ ಮಲೆಕುಡಿಯರು : ಸಮಾಜೋ - ಸಾಂಸ್ಕೃತಿಕ ಅಧ್ಯಯನ

ಉಡುಪಿ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಮೂಲಕ

ಪಿಎಚ್. ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧಕ
ಮೋಹನ ಗೌಡ ಎಚ್.
ಕನ್ನಡ ಉಪನ್ಯಾಸಕರು
ಶ್ರೀ ಗುರುದೇವ ಪದವಿಪೂರ್ವ ಕಾಲೇಜು
ಬೆಳ್ತಂಗಡಿ

ಮಾರ್ಗದರ್ಶಕರು
ಡಾ. ಡಿ. ಆರ್. ಪಾಂಡುರಂಗ
ನಿವೃತ್ತ ಪ್ರಾಧ್ಯಾಪಕರು
ಎಂ. ಜಿ. ಎಂ. ಕಾಲೇಜು, ಉಡುಪಿ

ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಹೊಸಪೇಟೆ ತಾಲೂಕು
ಬಳ್ಳಾರಿ ಜಿಲ್ಲೆ – ೫೮೩ ೨೭೬

೨೦೧೧

ಅರ್ಹತಾ ಪತ್ರ

ಶ್ರೀ ಮೋಹನ ಗೌಡ ಎಚ್. ಇವರು **"ದಕ್ಷಿಣ ಕನ್ನಡ ಜಿಲ್ಲೆಯ ಮಲೆಕುಡಿಯರು : ಸಮಾಜೋ - ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯ ಈ ಮಹಾ ಪ್ರಬಂಧವನ್ನು ಪಿಎಚ್. ಡಿ. ಪದವಿಗಾಗಿ ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಮಹಾಪ್ರಬಂಧವು ಸಂಶೋಧಕನ ಸ್ವಂತ ಸಂಶೋಧನೆಯ ಮೂಲಕ ರೂಪುಗೊಂಡಿದೆ.

ಈ ಮಹಾಪ್ರಬಂಧದ ವಿಷಯವನ್ನು ಪೂರ್ಣವಾಗಿ ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇತರ ಯಾವುದೇ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲ ಎಂದು ದೃಢೀಕರಿಸುತ್ತೇನೆ.

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ
(ಎಂ. ಜಿ. ಎಂ. ಕಾಲೇಜಿನ ವಿಶ್ವಸ್ಥ
ಮಂಡಳಿಯ ಅಂಗ ಸಂಸ್ಥೆ)
ಎಂ. ಜಿ. ಎಂ. ಕಾಲೇಜು, ಉಡುಪಿ - ೫೭೬೧೦೨

ಮಾರ್ಗದರ್ಶಕರು
ಡಾ. ಡಿ. ಆರ್. ಪಾಂಡುರಂಗ
ನಿವೃತ್ತ ಪ್ರಾಧ್ಯಾಪಕರು
ಕನ್ನಡ ವಿಭಾಗ
ಎಂ. ಜಿ. ಎಂ. ಕಾಲೇಜು, ಉಡುಪಿ - ೨

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಿಎಚ್. ಡಿ. ಪದವಿಗಾಗಿ ಸಾದರ ಪಡಿಸಿದ **"ದಕ್ಷಿಣ ಕನ್ನಡ ಜಿಲ್ಲೆಯ ಮಲೆಕುಡಿಯರು : ಸಮಾಜೋ - ಸಾಂಸ್ಕೃತಿಕ ಅಧ್ಯಯನ"** ಶೀರ್ಷಿಕೆಯ ಈ ಮಹಾಪ್ರಬಂಧವು ಈ ಸಂಶೋಧಕನ ಸ್ವತಂತ್ರ ಕೃತಿಯಾಗಿದ್ದು ಕ್ಷೇತ್ರಕಾರ್ಯ ಅಭಿಪ್ರಾಯ ಸಂಗ್ರಹ ಮತ್ತು ಅಧ್ಯಯನದ ಫಲ ಸ್ವರೂಪವಾಗಿದೆ. ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದಲ್ಲಿ ಡಾ. ಡಿ. ಆರ್. ಪಾಂಡುರಂಗ ಅವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿದ ಈ ಮಹಾಪ್ರಬಂಧವನ್ನು ಬೇರಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ
(ಎಂ. ಜಿ. ಎಂ. ಕಾಲೇಜಿನ ವಿಶ್ವಸ್ಥ
ಮಂಡಳಿಯ ಅಂಗ ಸಂಸ್ಥೆ)
ಎಂ. ಜಿ. ಎಂ. ಕಾಲೇಜು, ಉಡುಪಿ - ೫೭೬೧೦೨

ಸಂಶೋಧಕ
ಶ್ರೀ ಮೋಹನ ಗೌಡ ಎಚ್.

[illegible]

ಕೃತಜ್ಞತೆಗಳು

❖ "ದಕ್ಷಿಣ ಕನ್ನಡ ಜಿಲ್ಲೆಯ ಮಲೆಕುಡಿಯರು : ಸಮಾಜೋ–ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯದ ಕುರಿತಂತೆ ಪಿಹೆಚ್.ಡಿ ಪದವಿಗಾಗಿ ಅಧ್ಯಯನ ಮಾಡಲು ಅನುಮತಿ ನೀಡಿ ಸಂಶೋಧನೆ ನಡೆಸಲು ಅವಕಾಶ ಕಲ್ಪಿಸಿಕೊಟ್ಟು ಸಲಹೆ, ಮಾರ್ಗದರ್ಶನ ಮಾಡಿದ ಡಾ. ಡಿ. ಆರ್. ಪಾಂಡುರಂಗ ಅವರಿಗೆ.

❖ ಶೀರ್ಷಿಕೆ ಮತ್ತು ಪರಿವಿಡಿಗಳ ಆಯ್ಕೆಯ ಬಗ್ಗೆ ಮಾರ್ಗದರ್ಶನ ಮಾಡಿದ ಡಾ। ಮಲ್ಲೇಪುರಂ ಜಿ. ವೆಂಕಟೇಶ್ ಅವರಿಗೆ

❖ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಶ್ರೀ ಎಚ್. ಕೃಷ್ಣ ಭಟ್ ಅವರಿಗೆ

❖ ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಡಾ. ಅಭಯ್ ಕುಮಾರ್ ಅವರಿಗೆ

❖ ನನ್ನ ಸಂಶೋಧನೆಗೆ ಸದಾ ಪ್ರೋತ್ಸಾಹವನ್ನು ನೀಡುತ್ತಿದ್ದ ನಮ್ಮ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎ. ಕೃಷ್ಣಪ್ಪ ಪೂಜಾರಿ ಇವರಿಗೆ

❖ ನನ್ನ ಸಂಶೋಧನೆಗೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆಯ ಗ್ರಂಥಾಲಯದಿಂದ ಪುಸ್ತಕ ಒದಗಿಸಿಕೊಟ್ಟ ಪ್ರಾಂಶುಪಾಲರಾದ ಡಾ. ಬಿ. ಯಶೋವರ್ಮ ಇವರಿಗೆ

❖ ನನ್ನ ಸಂಶೋಧನೆಯ ಪ್ರಗತಿಯ ಬಗ್ಗೆ ಆಗಾಗ ವಿಚಾರಿಸುತ್ತಿದ್ದ ನನ್ನ ಪ್ರೀತಿಯ ಗುರುಗಳಾದ ಡಾ. ಎಸ್. ಡಿ. ಶೆಟ್ಟಿ ಅವರಿಗೆ

❖ ನನ್ನ ಗುರುಗಳಾದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ ಇಲ್ಲಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಬಿ. ಪಿ. ಸಂಪತ್ ಕುಮಾರ್ ಇವರಿಗೆ

❖ ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಾಲಯದ ಸಹಾಯಕ ಗ್ರಂಥಪಾಲಕರಾದ ಡಾ. ಕೆ. ಮಲ್ಲಯ್ಯ ಮತ್ತು ಅವರ ಸಿಬ್ಬಂದಿ ವರ್ಗದವರಿಗೆ

❖ ಮಂಗಳೂರು ವಿಶ್ವವಿದ್ಯಾನಿಲಯದ ವಾಣಿಜ್ಯ ವಿಭಾಗದ ಪ್ರಾಧ್ಯಾಪಕರುಗಳಾದ ಮತ್ತು ಆತ್ಮೀಯ ಸ್ನೇಹಿತರಾದ ಶ್ರೀ ಪರಮೇಶ್ವರ ಮತ್ತು ಶ್ರೀ ವೇದವ ಇವರಿಗೆ.

❖ ಅಂತರ್ಜಾಲದ ಮೂಲಕ ಮಾಹಿತಿಯನ್ನು ಮತ್ತು ಸಂಶೋಧನಾ ಪೂರಕವಾದ ಅನೇಕ ಮಾಹಿತಿಯನ್ನು ನೀಡಿದ ಸಂಶೋಧನಾ ವಿದ್ಯಾರ್ಥಿಯಾದ ಶ್ರೀಯುತ ಹೆರಾಲ್ಡ್ ಮೊನೀಶ್ ಇವರಿಗೆ.

❖ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಕಛೇರಿ ಸಹಾಯಕರಾದ ಶ್ರೀ ವೆಂಕಟೇಶ್ ಇವರಿಗೆ

- ಪ್ರಾದೇಶಿಕ ರಂಗ ಕಲೆಗಳ ಅಧ್ಯಯನ ಕೇಂದ್ರ ಉಡುಪಿ ಇದರ ನಿರ್ದೇಶಕರಿಗೆ
- ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಜೊತೆಗೆ ಸಹಕರಿಸಿದ ಸ್ನೇಹಿತರಿಗೆ
- ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿಯನ್ನು ನೀಡಿದ ವಕ್ತೃಗಳಿಗೆ
- ಬೆಳ್ತಂಗಡಿ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕರಾದ ಶ್ರೀಮತಿ ವಾರಿಜ ಇವರಿಗೆ ಮತ್ತು ಬೆಳ್ತಂಗಡಿ ತಾಲೂಕಿನ ಆಶ್ರಮ ಶಾಲೆಗಳ ವ್ಯವಸ್ಥಾಪಕರಾದ ಶ್ರೀ ಕೃಷ್ಣಪ್ಪ ಮಲೆಕುಡಿಯ ಇವರಿಗೆ
- ಪುಸ್ತಕ ಪ್ರೀತಿಯನ್ನು ಬೆಳೆಸಿ, ಕಲಿಯಲು ಸ್ವಾತಂತ್ರ್ಯ ಕೊಟ್ಟ ಹೆತ್ತವರಿಗೆ
- ಪ್ರತಿ ಹೆಜ್ಜೆಯಲ್ಲಿ ಬೆನ್ನೆಲುಬಾಗಿ ನಿಂತು ಅಧ್ಯಯನ ಕೆಲಸಗಳೆಲ್ಲ ಸಕಾಲದಲ್ಲಿ ಆಗುವಂತೆ ನೋಡಿಕೊಂಡ ನನ್ನ ಶ್ರೀಮತಿ ಪೂರ್ಣಿಮಾಳಿಗೆ
- ನನ್ನ ಪ್ರೀತಿಯ ಪುಟ್ಟ ಮಗಳಾದ ಮಾನ್ಯಳಿಗೆ
- ನನ್ನ ಸಂಶೋಧನೆಗೆ ಸದಾ ಪ್ರೋತ್ಸಾಹವನ್ನು ನೀಡುತ್ತಿದ್ದ ನನ್ನ ಭಾವ ಶ್ರೀ ವಾಸುದೇವ ಇವರಿಗೆ
- ಪ್ರಬಂಧದ ಬೆರಳಚ್ಚು ಮಾಡಲು ಸಹಕರಿಸಿದ ನನ್ನ ಪ್ರೀತಿಯ ವಿದ್ಯಾರ್ಥಿಯಾದ ಶ್ರೀ ರವಿಯವರಿಗೆ

ಇವರೆಲ್ಲರಿಗೂ ಕೃತಜ್ಞತೆಗಳು

ದಿನಾಂಕ : ೨೦-೧೧-೨೦೧೧

ಸ್ಥಳ : ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ
ಉಡುಪಿ

ಶ್ರೀ ಮೋಹನ ಗೌಡ ಎಚ್.

ಪರಿವಿಡಿ

DAKSHINA KANNADA DISTRICT



ಸಮೀಕ್ಷೆ ನಡೆಸಿದ ಸ್ಥಳಗಳು

ತಾಲೂಕು	ಸ್ಥಳ
ಬೆಳ್ತಂಗಡಿ	ಶಿರ್ಲಾಲು, ಶಿಶಿಲ, ಕೋಲೋಡಿ, ನೆರಿಯ, ನಾರಾವಿ, ಮುಂಡಾಜೆ, ಕೊಕ್ಕಡ, ನಾವೂರು
ಪುತ್ತೂರು	ಸಿರಿಬಾಗಿಲು, ಈಶ್ವರಮಂಗಲ, ಕ್ಯೊಲ, ನೆಲ್ಯಾಡಿ
ಸುಳ್ಯ	ಅರಂತೋಡು, ಗುತ್ತಿಗಾರು, ಪಾಣಾಜೆ, ಬೆಳ್ಳಾರೆ
ಬಂಟ್ವಾಳ	ಕನ್ಯಾನ, ಮಾಣೆ, ಕಲ್ಲಡ್ಕ

ಅಧ್ಯಾಯ ೧ : ವಿಷಯ ಪ್ರವೇಶ

೧.೧ ಅಧ್ಯಯನದ ಉದ್ದೇಶ, ವ್ಯಾಪ್ತಿ, ಆಕರಗಳು

೧.೨ ಮಲೆಕುಡಿಯರ ಈವರೆಗಿನ ಅಧ್ಯಯನ ಕ್ರಮಗಳ ವಿಶ್ಲೇಷಣೆ

೧.೩ ಮಲೆಕುಡಿಯರ ಮತ್ತು ಇತರ ಗಿರಿಜನ ಹಾಗೂ ಪರಿಶಿಷ್ಟ ವರ್ಗದವರ ಸಾಮಾಜಿಕ ಸ್ಥಿತಿಗತಿ

ಅಧ್ಯಾಯ : ೧
ವಿಷಯ ಪ್ರವೇಶ

ಯಾವುದೇ ಒಂದು ಜನಾಂಗದ ಅಧ್ಯಯನವೆಂದರೆ ಅವರು ರೂಢಿಸಿಕೊಂಡು ಬಂದ ಜೀವನ ಮೌಲ್ಯಗಳೇ ಆಗಿದೆ. ಈ ದೃಷ್ಟಿಯಿಂದ ಪರಿಶಿಷ್ಟ ಜಾತಿಗೆ ಸೇರಿದ ಮಲೆಕುಡಿಯರ ಜೀವನ ಮೌಲ್ಯಗಳೇ ಆ ಜನಾಂಗದ ಸಾಂಸ್ಕೃತಿಕ ಅಧ್ಯಯನದ ಮೂಲ ಆಶಯವೆನಿಸಿದೆ. ಅವರ ಬದುಕಿನ ಸಮಗ್ರ ಅಂಶಗಳಲ್ಲಿ ಸಂಸ್ಕೃತಿ ಹಾಸು ಹೊಕ್ಕಾಗಿದೆ. ಈ ದೃಷ್ಟಿಯಿಂದ ಸಂಸ್ಕೃತಿ ಎಂದರೆ ಆಯಾ ಜನಾಂಗ ತಲ ತಲಾಂತರಗಳಿಂದ ರೂಪಿಸಿಕೊಂಡು ಬಂದ ಮೌಲ್ಯಗಳೇ ಆಗಿರುತ್ತದೆ. ಮಾನವ ವರ್ಗದಲ್ಲಿ ನಾವು ಸಂಸ್ಕೃತಿ ರಹಿತವಾದ ಯಾವುದೇ ಜನಾಂಗವನ್ನು ಕಾಣಲು ಸಾಧ್ಯವಾಗುವುದಿಲ್ಲ. ನಾವು ಮನುಷ್ಯರೆಂದು ಗುರುತಿಸಲು ನಮಗಿರುವ ಆಧಾರವೇ ಸಂಸ್ಕೃತಿಯಾಗಿದೆ. ಇತರ ಜೀವಿಗಳಲ್ಲಿ ಅವುಗಳ ಸಾಮಾಜಿಕ ಸ್ವರೂಪಗಳನ್ನು ಅವುಗಳ ಜೈವಿಕ ಆಧಾರದಲ್ಲೆ ಗುರುತಿಸಲಾಗುತ್ತದೆ. ಇದೇ ಕಾರಣದಿಂದಾಗಿಯೇ ಪ್ರಾಣಿ ಸಮಾಜವನ್ನು ಜೈವಿಕ ಸಮಾಜವೆಂದೂ, ಮಾನವ ಸಮಾಜವನ್ನು ಸಾಂಸ್ಕೃತಿಕ ಸಮಾಜವೆಂದೂ ಗುರುತಿಸಲಾಗುತ್ತದೆ. ಈ ಸಂಸ್ಕೃತಿಯ ಕಾರಣದಿಂದಾಗಿಯೇ ಎಲ್ಲಾ ಪ್ರಾಣಿಗಳಿಗಿಂತ ಮೇಲ್ಮಟ್ಟದವನಾಗಿ, ತನ್ನ ಬದುಕಿನಂತೆಯೇ ಇತರರ ಬದುಕನ್ನೂ ಗೌರವಿಸಿ ಸೌಹಾರ್ದ – ಸಾಮರಸ್ಯಗಳ ಮೂಲಕ ಸಹ ಜೀವನಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾನೆ. ಸಂಸ್ಕೃತಿಯನ್ನು ಮಾನವನು ಪ್ರಯತ್ನ ಪೂರ್ವಕವಾಗಿ ರೂಢಿಸಿಕೊಳ್ಳುವುದರಿಂದ ವ್ಯಕ್ತಿ ತನ್ನಲ್ಲಿರುವ ಪ್ರಚ್ಛನ್ನ (ಗುಪ್ತ) ಶಕ್ತಿಯನ್ನು ಬಳಸಿಕೊಂಡು ತನ್ನ ಹಾಗೂ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಾನೆ.

ಸಂಸ್ಕೃತಿಯನ್ನು ಕುರಿತ ವೈಜ್ಞಾನಿಕವಾದ ಅಧ್ಯಯನ ನಡೆದಿರುವುದು ಮಾನವ ವಿಜ್ಞಾನದಲ್ಲಿ. ಮಾನವ ವಿಜ್ಞಾನಿಗಳು ಬಳಸುವ 'culture' ಎಂಬ ಪದವನ್ನೇ ಕನ್ನಡದಲ್ಲಿ 'ಸಂಸ್ಕೃತಿ' ಎಂದು ಬಳಸುತ್ತಿದ್ದೇವೆ. ಮಾನವ ಶಾಸ್ತ್ರದ ಪಿತಾಮಹರೆಂದು ಖ್ಯಾತರಾದ ಇ.ಬಿ. ಟೈಲರ್ ಎಂಬ ವಿದ್ವಾಂಸರು ತಮ್ಮ 'ಪ್ರಿಮಿಟಿವ್ ಕಲ್ಚರ್' (1871) ಎನ್ನುವ ಗ್ರಂಥದಲ್ಲಿ ಮೊದಲ ಬಾರಿಗೆ 'culture' ಎಂಬ ಪದವನ್ನು ಹೆಚ್ಚು ನಿಖರ ಹಾಗೂ ವ್ಯಾಪಕಾರ್ಥದಲ್ಲಿ ಬಳಸಿರುತ್ತಾರೆ. "Culture or civilization is that complex whole which includes knowledge, belief, art, morals, law, custom and any other capabilities and habits acquired by man as a member of the society" (Talyer E.B. Page 25) ಅಂದರೆ ಮಾನವ ತನ್ನ ಸಮಾಜದಲ್ಲಿ ಒಂದು ಜೀವಿಯಾಗಿ ತಾನು ಪರಂಪರಾಗತವಾಗಿ ರೂಢಿಸಿಕೊಂಡು ಬಂದಿರುವ, ವರ್ಗಾಯಿಸುವ, ಹಂಚಿಕೊಳ್ಳುವ ಹಾಗೂ ಗೌರವಿಸುವ ಕ್ರಿಯೆಗಳ, ಆಲೋಚನೆಗಳ, ಮೌಲ್ಯಗಳ ಮತ್ತು ನಿರ್ಮಾಣ ಮಾಡುವ ವಸ್ತುಗಳ

ಮೊತ್ತವನ್ನು 'ಸಂಸ್ಕೃತಿ' ಎನ್ನಬಹುದು. ಇವರ ಮಾತಿನಂತೆ ಸಂಸ್ಕೃತಿ ಅಥವಾ ನಾಗರಿಕತೆಗಳು ಮಾನವ ಸಮಾಜದ ಸದಸ್ಯನಾಗಿ ಪರಿಸರದಿಂದ ಗಳಿಸಿ ಅರಗಿಸಿಕೊಂಡದ್ದೇ ಆಗಿದೆ. ಸಂಸ್ಕೃತಿಯು ಒಟ್ಟಾರೆಯಾಗಿ ಮಾನವ ಜೀವನದ ಸಮಗ್ರ ಸಂಕೀರ್ಣತೆಯ ಕಲ್ಪನೆಯನ್ನು ಮೂಡಿಸುವಂಥದ್ದಾಗಿರುತ್ತದೆ. ಸಂಸ್ಕೃತಿಯು ಮಾನವನ ಆಂತರಿಕ ಮತ್ತು ಬಾಹ್ಯ ಜೀವನವನ್ನು ಅಭಿವ್ಯಕ್ತಿಗೊಳಿಸುತ್ತದೆ. ಈ ಜೀವನವು ಜೈವಿಕ ಪ್ರತಿಬಿಂಬವಾಗಿರದೆ 'super organic' ಕಲ್ಪನೆಯನ್ನು ಕೊಡುತ್ತದೆ. ಏಕೆಂದರೆ ಮನುಷ್ಯನ ಜ್ಞಾನವಾಗಲೀ, ನಂಬುಗೆಯಾಗಲಿ, ಕಲೆ, ನೈತಿಕತೆ, ಕಾನೂನು ಇತ್ಯಾದಿ ಯಾವುದೇ ಆಗಿದ್ದರೂ ಅವು ಮನುಷ್ಯನ ಜೈವಿಕ ನೆಲೆಯಲ್ಲಿ ಕಂಡು ಬರುವಂಥವುಗಳೇನೂ ಅಲ್ಲ. ಇದನ್ನೇ ಮತ್ತೊಬ್ಬ ಮಾನವ ಶಾಸ್ತ್ರಜ್ಞ ರಾಬರ್ಟ್ ಲೂಯಿ "Culture is social heritage" (ಸಂಸ್ಕೃತಿಯು ಸಾಮಾಜಿಕ ಅನುವಂಶಿಕತೆ) ಎಂದಿದ್ದಾನೆ. ಇದನ್ನೇ ಫೆಲಿಕ್ಸ್ ಎಂ.ಕಿಸ್ಲಿಂಗ್ ಅವರು 'ಸಮಾಜದ ಒಬ್ಬ ಜೀವಿಯಾಗಿ ಮಾನವ ಪರಂಪರಾಗತವಾಗಿ ಕಲಿಯುವ, ಹಂಚಿಕೊಳ್ಳುವ ಹಾಗೂ ಗೌರವಿಸುವ ಕಾರ್ಯಗಳ, ಆಲೋಚನೆಗಳ ಮತ್ತು ಮಾನವ ನಿರ್ಮಿತ ವಸ್ತುಗಳ ಮೊತ್ತವೇ 'ಸಂಸ್ಕೃತಿ' ಎನ್ನಬಹುದು (ಪುಟ. 25) ಎಂದಿದ್ದಾರೆ. ಟೇಲರ್ ಅಭಿಪ್ರಾಯವನ್ನೇ ಸಮರ್ಥಿಸುತ್ತಾ ಬ್ರಿಟಿಷ್ ವಿದ್ವಾಂಸರಾದ ಬಿ. ಮಲಿನೋವಸ್ಕಿಯವರು "Culture is an instrumental reality and apparatus for the satisfaction of the biological and derived needs" (1994) ಎಂದಿದ್ದಾರೆ. ಇದರಿಂದಾಗಿ ಮನುಷ್ಯನ ಮೂಲಭೂತ ಜೈವಿಕ ಹಾಗೂ ಸಾಧಿತ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಂಸ್ಕೃತಿಯು ಒಂದು ಸಾಧನವಾಗಿದೆ ಎಂದು ತಿಳಿದು ಬರುತ್ತದೆ.

ಇದೇ ವಾದವನ್ನು ಒಪ್ಪುವ ಮತ್ತೊಬ್ಬ ವಿದ್ವಾಂಸರಾದ ಎ.ಆರ್.ಆರ್.ಬ್ರೌನ್ ಎಂಬವರು "ಸಂಸ್ಕೃತಿಯು ಸಾಮಾಜಿಕ ರಚನೆಯ ಬುನಾದಿಯಾದ ಸಂಸ್ಥೆಗಳನ್ನು ರೂಪಿಸುತ್ತದೆ" ಎನ್ನುತ್ತಾರೆ. ಮಾನವನ ಬದುಕಿಗೆ ಒಂದು ಬಗೆಯ ಸಂಸ್ಥಾತ್ಮಕ ಸ್ವರೂಪವನ್ನು ಸಂಸ್ಕೃತಿಯು ಒದಗಿಸುತ್ತದೆ ಎಂದು ತಿಳಿಯಬಹುದು. ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧ ಹಾಗೂ ಸಮೂಹ ಸಮೂಹಗಳ ನಡುವಿನ ಸಂಬಂಧಗಳನ್ನು ಸ್ಥಿರಗೊಳಿಸಲು ಬೇಕಾದ ನಿಯಮಾತ್ಮಕ ಹಾಗೂ ಮೌಲ್ಯಾತ್ಮಕ ಅಂಶಗಳನ್ನು ಸಂಸ್ಕೃತಿಯು ಒದಗಿಸುತ್ತದೆ ಎಂಬ ಅರ್ಥದಲ್ಲಿ ಬ್ರೌನ್‌ರವರು ವಿಶ್ಲೇಷಿಸುತ್ತಾರೆ.

ಸಂಸ್ಕೃತಿಯನ್ನು 1) Areafacts 2) Socio facts 3) Agree facts 4) Menti facts ಎಂದು ನಾಲ್ಕು ವಿಧವಾಗಿ ವಿಭಜಿಸಿ ವಿಶ್ಲೇಷಿಸುತ್ತ 'ಡೇವಿಡ್ ಬಿಡ್ನಿ' ಎಂಬ ಅಮೇರಿಕಾದ ವಿದ್ವಾಂಸನು "ಎಂದಿಗೆ ಮಾನವನು ತನ್ನ ಸುತ್ತ ಇರುವ ನಿಸರ್ಗವನ್ನು ತನ್ನ ಅನುಕೂಲತೆಗಳಿಗೆ ಅನುಗುಣವಾಗಿ ಸಾಧ್ಯವಾದಷ್ಟು ಪರಿವರ್ತಿಸಿ ಅನುಭವಿಸಲು ಆರಂಭಿಸಿದನೋ ಅಂದಿಗೆ ಸಂಸ್ಕೃತಿಯು ಆರಂಭವಾಯಿತು ಎನ್ನುತ್ತಾನೆ.

ಮನುಷ್ಯನು ಸ್ವತಃ ರಚಿಸಿ ಬಳಸುವ ಎಲ್ಲ ಭೌತಿಕ ಸಾಧನ ಸಲಕರಣೆಗಳು, ಸಾಮಾಜಿಕ ಮತ್ತು ಮಾನಸಿಕ ಸ್ವರೂಪಗಳೆಲ್ಲವೂ ಸಂಸ್ಕೃತಿಯ ಕ್ರಿಯೆಗಳಾಗುತ್ತವೆ. ಇನ್ನೂ ಸರಳವಾಗಿ ಹೇಳುವುದಾದರೆ ತನ್ನ ಬುದ್ಧಿ ಮತ್ತು ಕೈಗಳಿಂದ ನಿಸರ್ಗದ ಶಿಲೆಗಳಿಗೆ ಕೃತಕ ರೂಪಗಳನ್ನು ಕೊಟ್ಟದ್ದು, ತನಗೆ ಬೇಡವಾದ ಸಸ್ಯ ಹಾಗೂ ಪ್ರಾಣಿಗಳನ್ನು ನಾಶಗೊಳಿಸಿ ತನಗೆ ಬೇಕೆನ್ನಿಸಿದ ಸಸ್ಯ ಮತ್ತು ಪ್ರಾಣಿಗಳನ್ನು ಬೆಳೆಸಿದ್ದು ಹಾಗೂ ಪಳಗಿಸಿದ್ದು, ಭಾಷೆಯನ್ನು ನಿರ್ಮಿಸಿ ಬೇರೆಯವರೊಡನೆ ವ್ಯವಹರಿಸಲಾರಂಭಿಸಿದ್ದು, ಕಟ್ಟು ಪಾಡುಗಳನ್ನು ರೂಪಿಸಿದ್ದು, ಧರ್ಮವನ್ನು ಸೃಷ್ಟಿಸಿ ಅದರಂತೆ ಬದುಕಿನ ಅರ್ಥ ಗತಿ ಗ್ರಹಿಸಿದ್ದು–ಹೀಗೆ ಮಾನವನ ಜೀವನದ ಭೌತಿಕ, ಸಾಮಾಜಿಕ ಹಾಗೂ ಮಾನಸಿಕ ಆಯಾಮಗಳನ್ನು ರೂಪಿಸಿಕೊಂಡಿದ್ದೆಲ್ಲವೂ ಸಂಸ್ಕೃತಿ ಎನಿಸುತ್ತದೆ. ಪ್ರೊ. ಎ. ಎಲ್. ಕ್ರೋಬರ್ ಅವರು 'Anthropology' ಎನ್ನುವ ಗ್ರಂಥದಲ್ಲಿ ಸಂಸ್ಕೃತಿಯನ್ನು ೧. Material - ಭೌತಿಕ ೨. Non material - ಅಭೌತಿಕ ಎಂದು ವಿಭಾಗಿಸಿ, ವಿವರಿಸಿದ್ದಾರೆ.

ಸಂಸ್ಕೃತಿಯ ವಿಕಾಸದ ಮೂರು ಹಂತಗಳನ್ನು ಈ ರೀತಿಯಾಗಿ ಗುರುತಿಸಬಹುದು.

1) ಆದಿ ಮಾನವ ಸಂಸ್ಕೃತಿ 2) ಗ್ರಾಮೀಣ ಸಂಸ್ಕೃತಿ 3) ನಗರ ಸಂಸ್ಕೃತಿ – ಇದಲ್ಲದೆ ಸಂಸ್ಕೃತಿಯನ್ನು ಏಳು ಘಟಕ (aspects) ಗಳನ್ನು ಗುರುತಿಸಬಹುದು. 1) ತಾಂತ್ರಿಕ ವಿಜ್ಞಾನ 2) ಆರ್ಥಿಕ ವ್ಯವಸ್ಥೆ 3) ಸಾಮಾಜಿಕ ವ್ಯವಸ್ಥೆ 4) ರಾಜಕೀಯ ವ್ಯವಸ್ಥೆ 5) ಧರ್ಮ 6) ಸೌಂದರ್ಯ ಮೀಮಾಂಸೆ 7) ಭಾಷೆ–ಸಂಸ್ಕೃತಿಯ ಈ ಏಳು ಘಟಕಗಳೂ ಪರಸ್ಪರ ಸಂಬಂಧ ಹೊಂದಿವೆ. ಇವುಗಳಲ್ಲಿ ತಂತ್ರಜ್ಞಾನವನ್ನು ಭೌತಿಕ ಸಂಸ್ಕೃತಿ ಎಂದೂ, ಉಳಿದ ಘಟಕಗಳನ್ನು ಅಭೌತಿಕ ಸಂಸ್ಕೃತಿ ಎಂದು ಕರೆಯುತ್ತಾರೆ. ಭೌತಿಕ ಸಂಸ್ಕೃತಿಯಲ್ಲಿ ಪ್ರಾಚೀನ ಶಿಲಾಯುಗದಿಂದ ಆರಂಭಿಸಿ ಮಾನವನು ನಿರ್ಮಿಸಿದ ನಾನಾ ಉಪಕರಣಗಳು, ಕೃಷಿ ಸಾಮಗ್ರಿಗಳು, ಯಂತ್ರೋಪಕರಣಗಳು, ಆಯುಧಗಳು, ಕೃಷಿಗಾಗಿ ಪರಿವರ್ತಿಸಿದ ಭೂಮಿ, ಕೆರೆ, ಬಾವಿ, ರಸ್ತೆಗಳು, ಬಟ್ಟೆಬರೆಗಳು, ಕೃತಕವಾಗಿ ರೂಪಿಸಿದ ಸಸ್ಯ ತಳಿಗಳು, ಫಲ, ಹೂವು ಇವುಗಳು ಭೌತಿಕ ಸಂಸ್ಕೃತಿಗೆ ಉದಾಹರಣೆಗಳಾಗುತ್ತವೆ. ರಕ್ತಸಂಬಂಧ, ವ್ಯಕ್ತಿಗಳ ಸಂಬಂಧ, ವಂಶಗೋತ್ರ, ವಿವಾಹ, ಸಾವು ಮೊದಲಾದವು ಸಾಮಾಜಿಕ ವ್ಯಾಪ್ತಿಗೆ ಬರುತ್ತದೆ. ನ್ಯಾಯ, ಅಧಿಕಾರ, ಆಡಳಿತ, ಶಾಂತಿ ಮೊದಲಾದ ವಿಷಯಗಳು ರಾಜಕೀಯ ವ್ಯವಸ್ಥೆಗೆ ಸೇರುತ್ತವೆ. ಬ್ರಹ್ಮಾಂಡದ ಬಗೆಗಿನ ಸಂಬಂಧ, ದೇವರು, ಧರ್ಮ, ಮಾಟ, ಭೂತ, ಪ್ರೇತಗಳಪೂಜೆ, ಪ್ರಾರ್ಥನೆ, ಹಬ್ಬ, ಜಾತ್ರೆ ಮತ್ತಿತರ ವಿಷಯಗಳನ್ನು ಧರ್ಮದಲ್ಲಿ ಅಭ್ಯಾಸ ಮಾಡಲಾಗುವುದು. ಸೌಂದರ್ಯ ಮೀಮಾಂಸೆ, ಸಂಗೀತ, ನೃತ್ಯ, ಕಲೆ, ನಾಟಕ ಮೊದಲಾದ ಎಲ್ಲ ವಿಷಯಗಳನ್ನು ಈ ಸಂಸ್ಕೃತಿ ಘಟಕಗಳು ಒಳಗೊಳ್ಳುತ್ತವೆ. ಮಾನವ ಸಂಸ್ಕೃತಿಯನ್ನು ರೂಪಿಸಿಕೊಳ್ಳಲು, ಸಂವಹನಗೊಳಿಸಲು, ಭಾಷೆ ಬಹು ಪ್ರಮುಖ ಮಾಧ್ಯಮವೆನಿಸಿದೆ. ಒಂದು ಸಂಸ್ಕೃತಿಯಿಂದ ಮತ್ತೊಂದು ಸಂಸ್ಕೃತಿಗೆ ಭಾಷೆ ವ್ಯತ್ಯಾಸಗೊಂಡರೂ ಭಾಷೆಯ ಕಾರ್ಯ ಮಾತ್ರ ಎಲ್ಲ ಸಂಸ್ಕೃತಿಗೂ ಒಂದೇ ಆಗಿದೆ.

ಮಾರ್ಗರೆಟ್ ಮಿಲಾಟ್ ಎಂಬ ವಿದ್ವಾಂಸರು ಮನುಷ್ಯನ ಬದುಕಿನ ಮೂರು ಬಗೆಯ ಆಯಾಮಗಳನ್ನು ಗುರುತಿಸುತ್ತಾರೆ. 1) ವ್ಯಕ್ತಿತ್ವ ವ್ಯವಸ್ಥೆ 2) ಸಾಮಾಜಿಕ ವ್ಯವಸ್ಥೆ 3) ಸಾಂಸ್ಕೃತಿಕ ವ್ಯವಸ್ಥೆ– ಇವು ಮೂರು ಪರಸ್ಪರ ಅವಲಂಬಿಗಳು ಮತ್ತು ಒಂದರ ಒಳಗೆ ಮತ್ತೊಂದು ಹಾಸು ಹೊಕ್ಕಾಗಿ ಸೇರಿಕೊಂಡವುಗಳು Interdependent and interpenetrating ವ್ಯಕ್ತಿತ್ವಕ್ಕೆ ಸಮಾಜ ಮತ್ತು ಸಂಸ್ಕೃತಿಯು ಪರಿಸರವನ್ನು ಒದಗಿಸಿದರೆ, ಮಾನವನ ವ್ಯಕ್ತಿತ್ವ ಮತ್ತು ಸಂಸ್ಕೃತಿ ಸಮಾಜಕ್ಕೆ ಪರಿಸರವನ್ನು ರೂಪಿಸುತ್ತದೆ.

ಸಾಮಾಜಿಕ ಶಾಸ್ತ್ರಗಳು ಮಾನವನ ಬಗೆಗೆ ಅಭ್ಯಾಸ ನಡೆಸಿದರೆ ಮಾನವ ಶಾಸ್ತ್ರ ಮಾನವನನ್ನೇ ತನ್ನ ಅಭ್ಯಾಸಕ್ಕೆ ವಸ್ತುವನ್ನಾಗಿಸಿಕೊಂಡಿದೆ. ನೂರು ವರ್ಷಕ್ಕಿಂತ ಹೆಚ್ಚು ಇತಿಹಾಸ ಉಳ್ಳ ಈ ಶಾಸ್ತ್ರ ಆದಿವಾಸಿ, ರೈತ, ಗ್ರಾಮೀಣ ಮತ್ತು ನಗರ ಸಂಸ್ಕೃತಿಯನ್ನು ಅಭ್ಯಾಸ ಮಾಡಿದೆ. ಮಾನವ ಶಾಸ್ತ್ರದ ಅಧ್ಯಯನದ ಅವಶ್ಯಕತೆ ಉಂಟಾದದ್ದು ವಸಾಹತುಗಳ ಆಳ್ವಿಕೆಯ ಅನುಕೂಲಕ್ಕಾಗಿ, ಇವರ ಸಮಾಜ ಮತ್ತು ಸಂಸ್ಕೃತಿಗಳನ್ನು ತಿಳಿದು ಇವರನ್ನು ಆಳುವುದು ಇದರ ಉದ್ದೇಶವಾಗಿತ್ತು. 19ನೇ ಶತಮಾನದ ಪ್ರಾರಂಭದಲ್ಲಿ ವಸಾಹತುಗಳ ಆಳ್ವಿಕೆ ಕೊನೆಗೊಂಡಿತು. ನಂತರ ಈ ಬುಡಕಟ್ಟುಗಳ ಜೀವನದ ಅಭಿವೃದ್ಧಿಗಾಗಿ ಅಭ್ಯಾಸ ಮುಂದುವರಿಯಿತು. ಇದನ್ನು ದೇಶೀಯ ವಿದ್ವಾಂಸರೇ ಮುಂದುವರಿಸಿದರು. ಇದರಿಂದ ಬುಡಕಟ್ಟು ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಉತ್ತಮ ಅವಕಾಶ ದೊರೆಯಿತು.

೧. ೧. ಅಧ್ಯಯನದ ಉದ್ದೇಶ, ವ್ಯಾಪ್ತಿ, ಆಕರಗಳು :

ಬದುಕು ಸಾಗಿಸುತ್ತಿರುವ ಯಾವುದೇ ಒಂದು ಜಾತಿಯಲ್ಲಿ ತನ್ನದೇ ಆದ ಹಲವಾರು ಜೀವನ ಕ್ರಮಗಳ ಆಚರಣೆಗಳಿರುತ್ತವೆ. ಇದು ಜಾತಿಯಿಂದ ಜಾತಿಗೆ ವಿಭಿನ್ನವಾಗಿರುತ್ತದೆ. ಹಾಗೆ ಮಲೆಕುಡಿಯರ ಜೀವನ ಚಕ್ರವೂ ತನ್ನದೇ ಆದ ವೈಶಿಷ್ಟ ಹೊಂದಿದೆ ಮತ್ತು ಇಲ್ಲಿಯ ಕೆಲವಾರು ಪದ್ಧತಿಯನ್ನು ಅಳವಡಿಸಿಕೊಂಡಿದೆ. ಇಂಥವುಗಳ ಅಧ್ಯಯನ ಅಗತ್ಯ. ಇವರಲ್ಲಿ ಎಲ್ಲರಂತೆಯೇ ಇರಬಹುದಾದ ಜನಪದ ಸಾಹಿತ್ಯ, ಭಾಷೆ, ಮನೋರಂಜನಾ ಅಂಶಗಳು, ಕಲೆ ಮುಂತಾದ ಪ್ರತಿಭೆಗಳನ್ನು ಗುರುತಿಸಬಹುದು. ಒಟ್ಟಿನಲ್ಲಿ ಒಂದು ಜನಾಂಗ ಸಾಮಾಜಿಕ ಆವರಣದಲ್ಲಿ ಬದುಕು ಸಾಗಿಸಲು ಮಾಡಿಕೊಂಡಿರಬಹುದಾದ ವ್ಯವಸ್ಥೆ, ಕಟ್ಟಿಕೊಂಡ ನಾಗರಿಕತೆ ಹೊಂದಿರುವ ಸಂಸ್ಕೃತಿ, ಧರ್ಮ ಇವೆಲ್ಲವೂ ವಿಭಿನ್ನ ಮತ್ತು ವಿಶಿಷ್ಟವಾಗಿರುತ್ತದೆ. ಇದೆಲ್ಲದರ ಅಧ್ಯಯನ ಈ ಪ್ರಬಂಧದ ಉದ್ದೇಶ.

ಅಧ್ಯಯನದ ವ್ಯಾಪ್ತಿಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು, ಅದಕ್ಕೆ ಸಿಗಬಹುದಾದ ಐತಿಹಾಸಿಕ ಅಂಶಗಳನ್ನು ವಿವೇಚಿಸಲಾಗಿದೆ ಮತ್ತು ಮಲೆಕುಡಿಯರ ಮೂಲ, ನೆಲೆಸಿರುವ ಪ್ರದೇಶ, ಇತರ ಪಂಗಡಗಳು, ಕುಟುಂಬದ ರೀತಿನೀತಿ, ಆಡಳಿತಾದಿ ವಿವರಗಳನ್ನು ಒದಗಿಸಲಾಗಿದೆ. ಈ ಪರಿಸರದಲ್ಲಿ ಬಂದ ನಂತರ ಜೀವನ ನಿರ್ವಹಣೆಗಾಗಿ ಮಾಡಿಕೊಂಡು ಬಂದ ಕೆಲಸಗಳಲ್ಲಿ ಮಲೆಕುಡಿಯರ ತಮ್ಮ ಮೂಲ ವೃತ್ತಿಯನ್ನು

ಉಳಿಸಿಕೊಂಡಿದ್ದು ಅವರ ಆಹಾರ, ಪಾನೀಯ, ಮನೋರಂಜನಾದಿ ಅಂಶಗಳು ಸೇರಿಕೊಳ್ಳುತ್ತವೆ. ಹಿಂದಿನಿಂದ ರೂಢಿಸಿಕೊಂಡು ಬಂದ ವೈದ್ಯ, ಮಂತ್ರ ತಂತ್ರಾದಿಗಳು ಇವರ ಬದುಕಿನ ಸುಗಮತೆಯ ದೃಷ್ಟಿಯಿಂದ ಅಧ್ಯಯನ ಯೋಗ್ಯವಾದವುಗಳು. ಭಾಷೆ ಮತ್ತು ಜನಪದ ಸಾಹಿತ್ಯದ ಅಧ್ಯಯನ ಮಲೆಕುಡಿಯರ ದೃಷ್ಟಿಯಿಂದ ಗಮನಾರ್ಹ. ಇವರ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಅಧ್ಯಯನದ ವ್ಯಾಪ್ತಿಯಲ್ಲಿ ತರಲಾಗಿದೆ.

ಮಲೆಕುಡಿಯರ ಮೂಲ ಸ್ಥಳ, ಮೂಲ ಭಾಷೆ ಮತ್ತು ಇಂದಿನ ಮಲೆಕುಡಿಯರಲ್ಲಿ ಮೂಲ ಸಂಸ್ಕೃತಿ ಉಳಿದಿದೆಯೆ? ಉಳಿದ ಜನಾಂಗಗಳಿಗಿಂತ ಮಲೆಕುಡಿಯರ ಜನಾಂಗ ಹೇಗೆ ವಿಶಿಷ್ಟವಾದುದು? ಮಲೆಕುಡಿಯರ ಕುಟುಂಬ ವ್ಯವಸ್ಥೆ, ಸಮಾಜ ವ್ಯವಸ್ಥೆಗಳ ಸ್ವರೂಪವೇನು? ಎಂಬುದನ್ನು ಅಧ್ಯಯನದ ಮೂಲಕ ತಿಳಿಯುವ ಅಗತ್ಯವಿದೆ.

ಪ್ರತಿಯೊಂದು ಜಾತಿ ತನ್ನದೇ ಆದ ಆಚಾರ–ವಿಚಾರ, ನಡವಳಿಕೆ, ಸಂಪ್ರದಾಯ, ದೈವ, ದೇವರು ಮುಂತಾಗಿ ರೂಢಿಸಿಕೊಂಡಿರುತ್ತದೆ. ಈ ದೃಷ್ಟಿಯಲ್ಲಿ ಮಲೆಕುಡಿಯರ ಬದುಕಿನ ಹಲವು ಮಜಲುಗಳ ಅಧ್ಯಯನ ನಡೆಸುವ ಮತ್ತು ಅವರ ಸಂಸ್ಕೃತಿಯ ಮೂಲಕ ನಮಗೆ ಸಿಗುವ ಉತ್ತಮ ಅಂಶಗಳನ್ನು ಹಾಗೂ ಒಟ್ಟು ಭಾರತೀಯ ಸಂಸ್ಕೃತಿಗೆ ಇವರ ಕೊಡುಗೆಯನ್ನು ಗಮನಿಸುವುದು ಅಗತ್ಯವಾಗಿದೆ.

ಮಲೆಕುಡಿಯರ ಜೀವನ, ಕುಟುಂಬ ಪದ್ಧತಿ, ಇವರ ನ್ಯಾಯ ತೀರ್ಮಾನ, ವಾಸಿಸುವ ಗೃಹ ಇವುಗಳಲ್ಲಿ ತಮ್ಮದೇ ಆದ ವಿಶಿಷ್ಟತೆಗಳಿರುತ್ತವೆ ಮತ್ತು ಆ ಪರಿಸರದ ಪ್ರಭಾವದಿಂದ ಅನೇಕ ಬದಲಾವಣೆಗಳೂ ಉಂಟಾಗಿರುತ್ತವೆ. ಹಾಗೆ ತಮ್ಮ ಮೂಲ ಪ್ರದೇಶದ ಮತ್ತು ನೆಲೆಸಿದ ಪ್ರದೇಶದ ಸಂಸ್ಕೃತಿ, ಇಂಥ ವಿಷಯಗಳಲ್ಲಿ ಪ್ರಭಾವ ಬೀರಬಲ್ಲವು. ಅದನ್ನು ಅವರ ಆಚರಣೆಗಳಲ್ಲಿ ಕಾಣಬಹುದು. ಈ ಪ್ರದೇಶದಲ್ಲಿ ನೆಲೆಸಿದ ನಂತರ ಜೀವನ ನಿರ್ವಹಣೆಗೆ ಕೈಗೊಂಡ ಮಾರ್ಗಗಳು, ಇಲ್ಲಿಯ ನಾಗರೀಕತೆಗೆ ಸ್ಪಂದಿಸಿದ ರೀತಿ ಮತ್ತು ಈ ಪರಿಸರದ ಮನೋರಂಜನೆಯಲ್ಲಿ, ಆರಾಧನೆಯಲ್ಲಿ ಪಾಲ್ಗೊಳ್ಳುವ ಪ್ರಭಾವಿತರಾಗುವ, ರೀತಿ ಇಂಥವನ್ನೆಲ್ಲ ಗುರುತಿಸಲು ಸಾಧ್ಯವಿದೆ.

ಮಲೆಕುಡಿಯ ಜನಾಂಗವು ಒಂದು ಬುಡಕಟ್ಟು ಸಂಸ್ಕೃತಿಗೆ ಸೇರಿದ ಜನಾಂಗ. ಬುಡಕಟ್ಟು ಸಂಸ್ಕೃತಿಯ ಅಧ್ಯಯನ ಎಂದರೆ ನಮ್ಮ ಜನ ಸಮುದಾಯದ ಆದಿಮ ರೂಪಗಳ ಪುನರ್ಮನನ ಎಂದೇ ಅರ್ಥ. ಆಧುನಿಕತೆಯ ಪ್ರಭಾವದಿಂದ ಈಗಿನ ನವನಾಗರಿಕತೆ ಹಾಗೂ ಜಾಗತೀಕರಣದ ತೊತ್ತಳ ತುಳಿತದ ನಡುವೆಯೂ ನಮ್ಮ ಸಂಸ್ಕೃತಿಯ ಬೇರುಗಳನ್ನು ಹುಡುಕಿ, ಅವುಗಳನ್ನು ಅರಿಯುವ ಕುತೂಹಲಕರವಾದ ಪ್ರಯತ್ನಗಳನ್ನು ನಡೆಸುವುದು ಅವಶ್ಯವಾಗಿದೆ. ದಟ್ಟವಾದ ಕಾಡುಗಳಲ್ಲಿ ಜೀವಿಸುತ್ತಿರುವ ಹಲವು ಪ್ರಾಚೀನ ಸಮುದಾಯಗಳ ವೈವಿಧ್ಯಮಯವಾದ ಬದುಕಿನಂತೆಯೇ ನಮ್ಮ ನಡುವಣ ಬುಡಕಟ್ಟುಗಳ ಬದುಕೂ ಸಹ ವರ್ಣಮಯವಾಗಿದೆ. ಪ್ರಕೃತಿಯ ಬಗೆಬಗೆಯ ವಿಕೋಪಗಳು, ನಾಗರಿಕ ಸಮಾಜದ ನಿರ್ಲಕ್ಷ್ಯ ಹಾಗೂ

ಬಂಡವಾಳಶಾಹಿ ವ್ಯಕ್ತಿಗಳ ಕಿರುಕುಳ ಮತ್ತು ಶೋಷಣೆಯ ನಡುವೆಯೂ ತಮ್ಮ ಸಾಂಸ್ಕೃತಿಕ ಬದುಕನ್ನು ಆಬಾಧಿತವಾಗಿ ಕಾಪಾಡಿಕೊಂಡು ಬಂದಿರುವ ಹಲವು ಬುಡಕಟ್ಟು ಸಮುದಾಯಗಳ ಬಗೆಗಿನ ಮಾಹಿತಿಗಳು ಕರ್ನಾಟಕ ಬುಡಕಟ್ಟುಗಳ ಸಂಪುಟಗಳಲ್ಲಿ ದೊರೆಯುತ್ತವೆ. ಕರ್ನಾಟಕ ಜಾನಪದಕ್ಕೆ ಸಂಬಂಧಪಟ್ಟ ಅಧ್ಯಯನವು ಸ್ವಾತಂತ್ರ್ಯ ಪೂರ್ವದಿಂದಲೇ ನಮ್ಮಲ್ಲಿ ನಡೆದಿದೆ.

ಹತ್ತೊಂಬತ್ತನೇ ಶತಮಾನದ ಅಂತ್ಯ ಮತ್ತು ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಆಂಗ್ಲ ವಿದ್ವಾಂಸರಾದ ಇ. ಥರ್‌ಸ್ಟನ್, ಜೆ. ಲೂಯಿಸ್ ಹಾಗೂ ದೇಶೀ ವಿದ್ವಾಂಸರಾದ ಅನಂತಕೃಷ್ಣ ಅಯ್ಯರ್ ಅವರು ಅಪಾರ ಆಸಕ್ತಿ ವಹಿಸಿ ವಿವಿಧ ಜನಸಮುದಾಯಗಳ ಸಂಸ್ಕೃತಿಗಳನ್ನು ಗ್ರಂಥ ರೂಪದಲ್ಲಿ ದಾಖಲಿಸಿದ್ದರು. ಆದರೆ, ಅನಂತರದ ದಿನಗಳಲ್ಲಿ ಬಹುಕಾಲದವರೆಗೆ ಈ ಕ್ಷೇತ್ರದಲ್ಲಿ ಯಾವ ಅಧ್ಯಯನವೂ ನಡೆಯಲಿಲ್ಲ.

ಆಂಗ್ಲ ವಿದ್ವಾಂಸರಾದ ಇ. ಥರ್‌ಸ್ಟನ್ ಜೆ. ಲೂಯಿಸ್ ಹಾಗೂ ಅನಂತಕೃಷ್ಣ ಅಯ್ಯರ್ ಮುಂತಾದವರು ಬುಡಕಟ್ಟುಗಳ ಬಗ್ಗೆ ನೀಡಿರುವ ಮಾಹಿತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ತನಕ ಲಭ್ಯವಿರುವ ಎಲ್ಲ ವಿವರಗಳನ್ನು ಇಟ್ಟುಕೊಂಡು, ಕ್ಷೇತ್ರಕಾರ್ಯದ ಮೂಲಕ ಅಧ್ಯಯನವನ್ನು ನಡೆಸಲಾಗಿದೆ.

ಬಯಲು ಸೀಮೆಯ ಬುಡಕಟ್ಟುಗಳಾದ ಕಾಡುಗೊಲ್ಲರು, ಇರುಳಿಗರು, ಮೈಸೂರು ಭಾಗದ ಮಲೆಸೀಮೆಗೆ ಸೇರಿರುವ ಸೋಲಿಗರು, ಜೇನು ಕುರುಬರು ಮತ್ತು ಕಾಡು ಕುರುಬರ ಬಗ್ಗೆ ಅಲ್ಲಲ್ಲಿ ಅಧ್ಯಯನಗಳು ಆರಂಭಗೊಂಡುವಾದರೂ ಸಹ್ಯಾದ್ರಿಯ ಗರ್ಭದಲ್ಲಡಗಿದ ಹತ್ತಾರು ಬಗೆಯ ಗಿರಿಜನ ಪ್ರದೇಶಗಳು ತೀವ್ರ ನಿರ್ಲಕ್ಷ್ಯಕ್ಕೆ ಒಳಗಾದವು. ಕುವೆಂಪು ಮತ್ತು ಶಿವರಾಮ ಕಾರಂತರಂತಹ ಸೃಜನಶೀಲ ಲೇಖಕರು ತಮ್ಮ ಸಾಹಿತ್ಯ ಪ್ರಕಾರಗಳಲ್ಲಿ ಈ ಗಿರಿಜನರ ಬದುಕಿನ ಬಗ್ಗೆ ಬರೆದುದ್ದನ್ನು ಕಾಣಬಹುದು.

ಮಲೆಕುಡಿಯರು ತಮ್ಮ ತಮ್ಮ ಜೀವನ ಕ್ರಮವನ್ನು ಆಯಾ ಭೌಗೋಳಿಕ ಸನ್ನಿವೇಶಕ್ಕೆ ತಕ್ಕಂತೆ, ತಮ್ಮ ಸುತ್ತಮುತ್ತಲಿನ ಪರಿಸರದ ಸಮುದಾಯದವರೊಡನೆ ದಿನನಿತ್ಯ ಸಂಪರ್ಕವನ್ನು ಬೆಳೆಸಿಕೊಂಡು, ಅವರ ಸಂಸ್ಕೃತಿಯನ್ನು ಆದರ್ಶವನ್ನಾಗಿ ಸ್ವೀಕರಿಸಿ ಅವರನ್ನು ಅನುಕರಿಸುವ, ಅನುಸರಿಸುವ ಪ್ರಯತ್ನದಲ್ಲಿ, ಮೂಲ ಮಲೆಕುಡಿಯ ಜನಾಂಗಕ್ಕೆ ಇದ್ದಿರಬಹುದಾದ ಭಾಷೆಯನ್ನು, ಸಂಸ್ಕೃತಿಯನ್ನು ಇಂದು ಅವರು ಕಳೆದು ಕೊಂಡಿದ್ದಾರೆ.

ಬುಡಕಟ್ಟು ಸಮುದಾಯಕ್ಕೆ ಸೇರಿರುವ ಮಲೆಕುಡಿಯರ ಜೀವನ ಜಗತ್ತು ಅತ್ಯಂತ ಮಹತ್ವಪೂರ್ಣವೂ, ವೈವಿಧ್ಯಮಯವೂ ಆಗಿರುವ ಸೂಕ್ಷ್ಮತಮ ಸಾಂಸ್ಕೃತಿಕ ಸಂಪತ್ತನ್ನು ಹೊಂದಿದೆ. ಅವರಲ್ಲಿರುವ ಪ್ರದರ್ಶನ ಕಲೆಗಳು, ಚೇತೋಹಾರಿಯಾದ ದೃಶ್ಯ ಕಲೆಗಳು, ವಸ್ತ್ರವಿನ್ಯಾಸ, ಗುಡಿ ಕೈಗಾರಿಕೆಗಳು, ಕರಕುಶಲ ಕಲೆಗಳು ದಟ್ಟ ಅರಣ್ಯದ ನಡುವೆ ಇರುವ ಮಲೆಕುಡಿಯರ (ಗಿರಿಜನರ) ಬದುಕು

ಹಾಗೂ ಜೀವವೈವಿಧ್ಯತೆಯಿಂದ ನಿತ್ಯ ಸಮೃದ್ಧವಾಗಿರುವ ನಮ್ಮ ಜನಪದ ಸಂಸ್ಕೃತಿಯ ಸೃಜನಶೀಲತೆಗೆ ಆಧುನಿಕತೆಯಿಂದಾಗಿ ಅಪಾಯ ಉಂಟಾಗಿದೆ.

ಬುಡಕಟ್ಟು ಸಮುದಾಯಕ್ಕೆ ಸೇರಿರುವ ಮಲೆಕುಡಿಯ ಜನಾಂಗ ಗಿರಿ ನಿವಾಸಿಗಳು. ಹಿಂದಿನ ಕಾಲದಲ್ಲಿ ಇವರು ವ್ಯವಸ್ಥಿತವಾಗಿ ಒಂದೆಡೆ ನೆಲೆನಿಂತು ಜೀವನ ನಿರ್ವಹಿಸುವ ಪ್ರವೃತ್ತಿಯವರಲ್ಲ. ಕಾಡುಮೇಡುಗಳಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತ ಅಲ್ಲಿ ದೊರೆಯುವ ಗೆಡ್ಡೆಗೆಣಸು, ಹಣ್ಣು, ಹಂಪಲು, ಸೊಪ್ಪು,ಜೇನು ಮುಂತಾದ ಸಹಜೋತ್ಪನ್ನಗಳನ್ನು ಸೇವಿಸುತ್ತ ಅಗತ್ಯಕ್ಕೆ ತಕ್ಕಂತೆ ಕಾಡಿನ ಪ್ರಾಣಿಗಳನ್ನು ಬೇಟೆಯಾಡುತ್ತ ಬದುಕುವವರು. ಬೇಸಾಯ (ಕುಮೆರಿ ಬೇಸಾಯ) ಮಾಡಿದರೂ ಬೇಸಾಯವನ್ನು ಸ್ಥಳದಿಂದ ಸ್ಥಳಕ್ಕೆ ಬದಲಾಯಿಸುವವರು. ತಮ್ಮ ಮುಂದಿನ ಭವಿಷ್ಯದ ಕನಸನ್ನು ಕಾಣದೆ, ಅದಕ್ಕಾಗಿ ಸಂಪತ್ತನ್ನು ಕೂಡಿಹಾಕದೆ ವರ್ತಮಾನ ಜೀವನಕ್ಕಾಗಿ ಹೆಚ್ಚು ಶ್ರಮವಹಿಸುವ ಜನರಿವರು. ತಮ್ಮ ಕೌಟುಂಬಿಕ ದೈವಗಳನ್ನು ತಮ್ಮದೇ ರೀತಿಯಲ್ಲಿ ಆರಾಧಿಸುತ್ತ, ಹಬ್ಬ ಹರಿದಿನಗಳನ್ನು ಆಚರಿಸುತ್ತ, ಹಾಡಿ ಕುಡಿದು ಕುಣಿಯುತ್ತ, ತಮ್ಮ ಜನಾಂಗದ ಗುರಿಕಾರನ ಆದೇಶಗಳನ್ನು ಪ್ರಶ್ನಿಸದೆ ಪಾಲಿಸುತ್ತ, ವಿಶಿಷ್ಟವಾದ ಅಗತ್ಯ ಉಡುಪು, ಅಲಂಕಾರಗಳನ್ನು ತೊಡುತ್ತಾ, ಸಹಜ ಕೌಟುಂಬಿಕ ಜೀವನವನ್ನು ಅನುಭವಿಸುತ್ತ, ತಮ್ಮದೇ ಸಾಹಿತ್ಯ ಕಲೆಗಳನ್ನು ಸೃಷ್ಟಿಸುತ್ತ, ತಮ್ಮ ಜನಾಂಗದ ಬೇರೆ ಬೇರೆ ಕುಟುಂಬಗಳೊಡನೆ ಪರಸ್ಪರ ಸಹಕಾರ ಸೌಹಾರ್ದಗಳಿಂದ ಅನ್ಯೋನ್ಯವಾಗಿ ಬದುಕುತ್ತ, ತಮ್ಮದೇ ಆದ ನ್ಯಾಯ ವ್ಯವಸ್ಥೆಯನ್ನೂ ಹೊಂದಿ ನಿಸರ್ಗ ಸಹಜವಾಗಿ ಬಾಳುವ ಮುಗ್ಧ ಜನಾಂಗವಿದು.

ಸರ್ಕಾರದ ಕಾನೂನುಗಳು ಮತ್ತು ನಾಗರಿಕರು ವಿವಿಧ ರೀತಿಗಳಲ್ಲಿ ಕಾಡನ್ನು ಪ್ರವೇಶಿಸಿ, ಸಕ್ರಮಗೊಳಿಸಿಕೊಂಡ ಕಾರಣದಿಂದಾಗಿ ಮಲೆಕುಡಿಯರ ನೆಮ್ಮದಿಯ ಬದುಕು ನಾಶಗೊಂಡು ಇದೀಗ ಅವರು ಅತಂತ್ರ ಸ್ಥಿತಿಗೆ ಒಳಗಾಗಿದ್ದಾರೆ. ಕಾಡನ್ನೇ ಸರ್ವಸ್ವವಾಗಿ ನಂಬಿ ನಡೆಸುತ್ತಿದ್ದ ಜೀವನವೀಗ ದುರ್ಭರವಾಗಿದೆ. ನಾಗರಿಕತೆಯ ಪ್ರವೇಶ ಅವರ ಶತ ಶತಮಾನದ ನೆಮ್ಮದಿಯ ಜೀವನಕ್ಕೆ ಭಂಗ ತಂದಿದೆ, ಅಭದ್ರತೆಯ ಭಾವನೆಯು ತುಂಬಿ ಬಿಟ್ಟಿದೆ.

ಶಿಕ್ಷಣದ ಮಹತ್ವ ಮತ್ತು ಆಧುನಿಕ ಸೌಲಭ್ಯಗಳ ಅರಿವು ಇಲ್ಲದೆ, ಹಿಂದಿನ ಕಾಲದ ಅನಾಗರಿಕ ಜೀವನದೊಂದಿಗೆ ಅಜ್ಞಾತ ಮತ್ತು ಅಜ್ಞಾನದ ನೆಲೆಯಲ್ಲಿಯೇ ನಡೆಸಬೇಕೆಂಬ ನಿಯಮವೇನಿಲ್ಲ. ಸುಸಂಸ್ಕೃತ ವ್ಯವಸ್ಥೆಗೆ (ಜನರಿಗೆ) ದೊರಕುತ್ತಿರುವ ಹಾಗೆ, ಅಭಿವೃದ್ಧಿಯ ನೆಲೆಯಲ್ಲಿ ಎಲ್ಲಾ ಸವಲತ್ತುಗಳು ಮಲೆಕುಡಿಯ ಸಮುದಾಯಕ್ಕೂ ಒದಗಬೇಕು. ಅವರಲ್ಲಿರುವ ಮೂಢನಂಬಿಕೆಗಳು ಮತ್ತು ಕ್ರೂರ ಪದ್ಧತಿಗಳು ನಾಶವಾಗಬೇಕು. ಅವರಲ್ಲಿ ಸಾಮಾಜಿಕ ಸಮಾನತೆ ಮತ್ತು ಆರ್ಥಿಕ ಅನುಕೂಲತೆಗಳನ್ನು ಒದಗಿಸಬೇಕು. ಅವರಲ್ಲಿರುವ ಕೀಳರಿಮೆಯನ್ನು ಹೋಗಲಾಡಿಸಿ, ಸ್ವಾಭಿಮಾನವನ್ನು, ವಿಶ್ವಾಸವನ್ನು ಮೂಡಿಸಬೇಕು. ಜೊತೆಗೆ ಅವರನ್ನು ರಾಷ್ಟ್ರದ ಮುಖ್ಯವಾಹಿನಿಗೆ ಬರಮಾಡಿಕೊಳ್ಳಬೇಕು. ಆದರೆ ಈ

ನೆಪದಲ್ಲಿ ಅವರ ಮೂಲನೆಲೆಗಳನ್ನು ನಾಶಮಾಡಿ, ಅವರ ಮೂಲ ಸಂಸ್ಕೃತಿಯನ್ನು ಅಳಿಸಿ ಅವರ ಮನಸ್ಸಿನಲ್ಲಿ ಅಭದ್ರತೆಯ ಭಯದ ಕರಿನೆರಳನ್ನು ಬಿತ್ತಬಾರದು, ಅವರ ಸಂಸ್ಕೃತಿಯ ಜೀವಪರವಾದ ಮುಖ್ಯಾಂಶಗಳನ್ನು ಪೋಷಿಸಿಕೊಳ್ಳುವ, ಸಾವಿರಾರು ವರ್ಷಗಳಿಂದ ಅವರಿಗೆ ಮನೋನೆಮ್ಮದಿಯನ್ನು ನೀಡಿರುವ ಜೀವನಕ್ರಮದ ಮುಖ್ಯ ತಿರುಳನ್ನು ರಕ್ಷಿಸಿಕೊಳ್ಳುವ ಸ್ವಾತಂತ್ರ್ಯವನ್ನು ಅವರಿಗೆ ನೀಡಬೇಕು.

ಸ್ವಾತಂತ್ರ್ಯ ಬಂದು ಅರವತ್ತೈದು ವರ್ಷಗಳಾದರೂ ಈ ಬುಡಕಟ್ಟು ಜನಾಂಗದ ಶೋಷಣೆ ನಿಂತಿಲ್ಲ. ಅವರ ಬದುಕಿನಲ್ಲಿ ಬೆರೆತು ಅವರ ಬದುಕಿನ ನಾಡಿಮಿಡಿತವನ್ನು ಅರ್ಥಮಾಡಿಕೊಂಡು ಅವರನ್ನು ತಿದ್ದುವ ಮತ್ತು ವರ್ತಮಾನದ ಬದಲಾವಣೆಗೆ ಅವರು ತಾವಾಗಿಯೇ ಒಲಿಯುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುವ ಪ್ರಾಮಾಣಿಕ ಪ್ರಯತ್ನಗಳು ಹೆಚ್ಚಾಗಿ ನಡೆಯುತ್ತಿಲ್ಲ. ಅವರಲ್ಲಿ ಬಹಳಷ್ಟು ಜನ ಕಷ್ಟಕರವಾದ ಬದುಕನ್ನು ನಡೆಸುತ್ತಿದ್ದಾರೆನ್ನುವ ಪ್ರಜ್ಞೆ ಸರ್ಕಾರದಲ್ಲಿ, ನಾಗರಿಕರಲ್ಲಿ ಮೂಡಬೇಕಾಗಿದೆ. ಅವರ ಜೀವನ ಕ್ರಮದಲ್ಲಿ ಮೂಲಭೂತ ಸೌಕರ್ಯಗಳು ಇಲ್ಲದೇ ಇರುವ ಅಂಶಗಳನ್ನು ಅರ್ಥಮಾಡಿಕೊಂಡಾಗಲೇ ಅವರಲ್ಲಿ ಅಗತ್ಯ ಬದಲಾವಣೆ ತರುವುದು ಸಾಧ್ಯವಾದೀತು.

"ನಾಗರಿಕತೆಗಿಂತ ಭಿನ್ನವಾದ ಜೀವನ ಕ್ರಮವನ್ನು ವಿವಿಧ ಸಮಾಜ ವಿಜ್ಞಾನಗಳ ಬೆಳಕಿನಲ್ಲಿ ಅಧ್ಯಯನ ಮಾಡುವ ಕ್ರಮ ವಿದೇಶಗಳಲ್ಲಿ ಬಹಳ ಹಿಂದೆಯೇ ಆರಂಭವಾಯಿತು. ರ್‍ಯಾಡ್ ಕ್ಲಿಪ್ ಬ್ರೌನ್, ಮಲಿನೋವೆಸ್ಕಿ, ಮಾರ್ಗರೇಟ್ ಮೀಡ್, ರೂತ್ ಬಿನಿಡಿಕ್ಟ್ ಮುಂತಾದ ವಿದ್ವಾಂಸರು ಈ ದಿಸೆಯಲ್ಲಿ ಮಹತ್ವದ ಸಂಶೋಧನೆ ನಡೆಸಿದ್ದಾರೆ. ಈ ಜನಾಂಗದ ಸಂಸ್ಕೃತಿಯ ವೈವಿಧ್ಯತೆಗಳು, ಅದಕ್ಕೆ ಕಾರಣವಾದ ಸಾಮಾಜಿಕ ಪ್ರಾಕೃತಿಕ ಮಾನಸಿಕ ಕಾರಣಗಳನ್ನು ವಿಶ್ಲೇಷಿಸಿದ್ದಾರೆ. ಭಾರತದಲ್ಲಿ ಈ ಅಧ್ಯಯನ ಸಂಶೋಧನೆ ಎಂದು ಆರಂಭಗೊಂಡಿತೆಂದು ಖಚಿತವಾಗಿ ಹೇಳಲಾಗದಿದ್ದರೂ ಕಳೆದ ಶತಮಾನದಲ್ಲಿ ಇದು ಬೇರೆ ಬೇರೆ ಕ್ಷೇತ್ರಗಳ ವಿದ್ವಾಂಸರ ಗಮನ ಸೆಳೆದಿರುವುದು ಕಂಡು ಬರುತ್ತದೆ. ಈ ಅಧ್ಯಯನಕ್ಕೆ ಆಸಕ್ತಿಗೆ ಮೂಲ ಈ ಜನಾಂಗಗಳ ಸುಧಾರಣೆಗಿಂತ ಹೆಚ್ಚಾಗಿ ಭಾರತದ ನಾಗರಿಕರಿಗಿಂತ ವಿಶಿಷ್ಟ ಸ್ಥಿತಿ ಮತ್ತು ಪರಿಸ್ಥಿತಿಯಲ್ಲಿ ಬದುಕುತ್ತಿರುವ ಈ ಜನರ ನಿಜವಾದ ಸಂಖ್ಯಾಬಲ ಮತ್ತು ಇವರ ಪ್ರತ್ಯೇಕ ಸಾಂಸ್ಕೃತಿಕ ಪ್ರಕ್ರಿಯೆಗಳ ಬಗೆಗಿನ ಕುತೂಹಲ ಮತ್ತು ಆಸಕ್ತಿಗಳೇ ಕಾರಣವಾಗಿದ್ದವು. ಸರ್ ಹರ್ಬರ್ಟ್ ರಿಸ್ಲೆಯವರು ಭಾರತದ ಎಲ್ಲ ರಾಜ್ಯಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಆ ರಾಜ್ಯಗಳ ಜಾತಿಗಳ ಬುಡಕಟ್ಟುಗಳ ಸಂಖ್ಯೆ, ಸ್ಥಳ, ಸಂಪ್ರದಾಯ ಇತ್ಯಾದಿಗಳನ್ನು ಅಧ್ಯಯನ ಮಾಡಿ ಬೃಹತ್ ಸಂಪುಟಗಳ ಮೂಲಕ ಪ್ರಕಟಿಸಿದರು. ಎಚ್. ವಿ. ನಂಜುಂಡಯ್ಯನವರ ಮಾರ್ಗದರ್ಶನದಲ್ಲಿ ಆಗಿನ ಮೈಸೂರಿನ ಬುಡಕಟ್ಟುಗಳ ಬಗ್ಗೆ ಮಾನವಶಾಸ್ತ್ರೀಯವಾದ ಸಮೀಕ್ಷೆ ಅಧ್ಯಯನ ಆರಂಭಗೊಂಡು ಹದಿನೇಳು ವರ್ಷಗಳ ದೀರ್ಘಕಾಲ ಇದು ನಡೆಯಿತು. ಮೂವತ್ತನಾಲ್ಕು ಸಂಪುಟಗಳು ಪ್ರಕಟಗೊಂಡವು. ಅನಂತರ ಎಲ್. ಕೆ. ಅನಂತಕೃಷ್ಣ ಅಯ್ಯರ್ ಅವರು ಈ ಕ್ಷೇತ್ರವನ್ನು ಮುಂದುವರೆಸಿ ಸಂಗ್ರಹವಾದ ಸಾಮಗ್ರಿಯನ್ನು ಪರಿಶೀಲಿಸಿ ಪರಿಷ್ಕರಿಸಿ

ಹತ್ತುವರ್ಷಗಳ ಕಾಲ ಶ್ರಮಿಸಿ "The Mysore Tribes and castes" ಹೆಸರಿನಲ್ಲಿ ನಾಲ್ಕು ಸಂಪುಟಗಳನ್ನು ಪ್ರಕಟಿಸಿದರು. ಎ.ಎ.ಡಿ. ಲೂಯಿಜ್ ಅವರು "Tribes of Mysore" ಎಂಬ ಕೃತಿಯನ್ನು ಹೊರತಂದು ಮೈಸೂರು ರಾಜ್ಯದ 27 ಬುಡಕಟ್ಟುಗಳ ವಿವರಗಳನ್ನು ನೀಡಿದರು. ಇದಲ್ಲದೆ ಎಡ್ಗರ್ ಥರ್ಸ್ಟನ್ ಮತ್ತು ರಂಗಾಚಾರಿ ಅವರು "Castes and Tribes of Southern India" ಎಂಬ ಏಳು ಸಂಪುಟಗಳ ಗ್ರಂಥವನ್ನು ಪ್ರಕಟಿಸಿ ಬುಡಕಟ್ಟುಗಳ ಜೊತೆಗೆ ಜಾತಿಗಳ ವಿವರಣೆಗಳನ್ನು ನೀಡಿದ್ದಾರೆ. Gustor opert ಅವರು ತಮ್ಮ "Original Inhabitants of India" ಎಂಬ ಗ್ರಂಥದಲ್ಲಿ ಹಲವು ಬುಡಕಟ್ಟುಗಳ ಕೆಲವು ಸ್ಥೂಲ ವಿವರಗಳನ್ನು ಪ್ರಕಟಿಸಿದ್ದಾರೆ". (ಕರ್ನಾಟಕ ಬುಡಕಟ್ಟುಗಳು – ಸಂಪುಟ ೧–ಪುಟ ೧– ಪ್ರಧಾನ ಸಂಪಾದಕರು, ಪ್ರೊ. ಎಚ್. ಜೆ. ಲಕ್ಕಪ್ಪ ಗೌಡ)

"ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಒಂದಾದ ಭಾರತವು ಹಲವಾರು ಬುಡಕಟ್ಟು ಜನಾಂಗಗಳ ಸಮುದಾಯವನ್ನು ಹೊಂದಿದೆ. 2001ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆಯ ಶೇಕಡಾ 8.02 ರಷ್ಟು ಜನ ಬುಡಕಟ್ಟು ಜನಾಂಗಕ್ಕೆ ಸೇರಿದವರು. ಕರ್ನಾಟಕದ ಜನಸಂಖ್ಯೆಯ ಶೇಕಡಾ 6.92 ರಷ್ಟು ಬುಡಕಟ್ಟು ಜನಸಂಖ್ಯೆ ಇದ್ದು ವಿವಿಧ ಬುಡಕಟ್ಟುಗಳ ಜನರು ಬೇರೆ ಬೇರೆ ಪ್ರದೇಶಗಳಲ್ಲಿ ಹಂಚಿ ಹೋಗಿದ್ದಾರೆ. ಹೀಗೆ ಬೇರೆ ಬೇರೆ ಪ್ರದೇಶಗಳಲ್ಲಿ ಹಂಚಿ ಹೋದ ಬುಡಕಟ್ಟು ಜನಾಂಗದ ಜನರು ತಮ್ಮ ತಮ್ಮ ಪರಿಸರ, ಭೌಗೋಳಿಕತೆ ಇತ್ಯಾದಿಗಳಿಗನುಸಾರವಾಗಿ ಬದಲಾವಣೆಯ ವಿವಿಧ ಹಂತಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 32 ಬುಡಕಟ್ಟು ಜನಾಂಗಗಳಿಗೆ ಸೇರಿದ ಜನರು ವಾಸವಾಗಿದ್ದಾರೆ. ಇವುಗಳಲ್ಲಿ ಮಲೆಕುಡಿಯ ಜನಾಂಗವೂ ಒಂದು". (ಮೂಲ – ಶ್ರೀಧರ ಗೌಡ, ೧೯೯೫ – ಮಲೆಕುಡಿಯರು – ಬಿ.ಎ. ವಿವೇಕ ರೈ, ಡಿ. ಯದುಪತಿ ಗೌಡ – ೧೯೯೬ – ಪುಟ – ೧)

ಬುಡಕಟ್ಟು ಜನಾಂಗಕ್ಕೆ ಸೇರಿದ ಮಲೆಕುಡಿಯರು ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಮತ್ತು ಕೊಡಗು ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ದಕ್ಷಿಣ ಕನ್ನಡದಲ್ಲಿ ಇವರನ್ನು ಮಲೆಕುಡಿಯರು ಎಂದೂ ಕೊಡಗಿನಲ್ಲಿ ಕುಡಿಯರು ಎಂದೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಲೈಕುಡಿ ಅಥವಾ ಮಲೆಯರು ಎಂದೂ ಕರೆಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಕಾರ್ಕಳ, ಪುತ್ತೂರು ಮತ್ತು ಸುಳ್ಯ ತಾಲೂಕುಗಳಲ್ಲಿ ಇವರು ವಾಸವಾಗಿದ್ದಾರೆ. ಬೆಳ್ತಂಗಡಿ ತಾಲೂಕಿನ ನೆರಿಯ ಗ್ರಾಮದ ಬಾಂಜಾರು ಮಲೆ, ಅಂಬಟೆ ಮಲೆ, ಎಲಿಮಲೆ, ಬಾರಿಮಲೆ, ಗಂಡಿಬಾಗಿಲು, ಕೋಲೋಡಿಗಳಲ್ಲಿಯೂ, ಚಾರ್ಮಾಡಿ, ಶಿಶಿಲ, ಪುದುವೆಟ್ಟು, ಕೊಕ್ಕಡ, ಪಟ್ರಮೆ, ಶಿಬಾಜೆ, ಧರ್ಮಸ್ಥಳ,

ನಾವೂರು, ಮಲವಂತಿಗೆ, ಕಳೆಂಜ, ನಿಡ್ಲೆ, ನಾರಾವಿ, ಕುತ್ಲೂರು, ಶಿರ್ಲಾಲು, ಕಲ್ಮಂಜ, ಸವಣಾಲು, ಬೆಳಾಲು ಮತ್ತು ಮಚ್ಚಿನ ಗ್ರಾಮಗಳಲ್ಲಿಯೂ, ಈಗಿನ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಕಬ್ಬಿನಾಲೆ, ಮಾಳ, ಈದು ಗ್ರಾಮಗಳಲ್ಲಿಯೂ, ಸುಳ್ಯ ತಾಲೂಕಿನ ಅರಂತೋಡು, ಕಲ್ಮಕಾರ್, ಮಡಪ್ಪಾಡಿ, ಮರ್ಕಂಜ, ಬಾಲ್ಲೋಡು, ಸುಬ್ರಾಮ, ನಲ್ಕೂರು, ಸಂಪಾಜೆ ಗ್ರಾಮಗಳಲ್ಲಿಯೂ, ಪುತ್ತೂರು ತಾಲೂಕಿನ ಗುಂಡ್ಯ, ಸಿರಿಬಾಗಿಲು ಪ್ರದೇಶಗಳಲ್ಲಿಯೂ ಮಲೆಕುಡಿಯರು ವಾಸವಾಗಿದ್ದಾರೆ.

ಹಿಂದಿನ ಕಾಲದಲ್ಲಿ ಮಲೆಕುಡಿಯರು ಒಂದೊಂದು ಮಲೆಯನ್ನು ಆಶ್ರಯಿಸಿಕೊಂಡು ಬದುಕುತ್ತಿದ್ದರು. ಆದುದರಿಂದ ತಮ್ಮ ಗುಂಪಿಗೆ ಆಯಾ ಮಲೆಯ ಹೆಸರನ್ನೇ ಇರಿಸಿಕೊಳುತ್ತಿದ್ದರು. ಸುಳ್ಯ ತಾಲೂಕಿನಲ್ಲಿ ಪೂ ಮಲೆ ಕುಡಿಯರು, ತೇಮಲೆ ಕುಡಿಯರು ಹಾಗೂ ಅಡ್ಕೆ ಮಲೆಕುಡಿಯರು ಎಂಬ ಪಂಗಡಗಳಿವೆ. ಪೂಮಲೆ ಕುಡಿಯರ ಪ್ರಕಾರ ಅವರು ವಾಸಿಸುವ ಪೂಮಲೆಯೆ ಅವರ ಮೂಲಸ್ಥಳ. ಅವರ ಆಡು ಭಾಷೆ ತುಳು. ತೇಮಲೆ ಕುಡಿಯರ ಮೂಲ ಕೇರಳವಾಗಿದ್ದು, ಮಲೆಯಾಳ ಇವರ ಆಡು ಭಾಷೆಯಾಗಿದೆ. ತುಳು ಮನೆಮಾತಿನ ಅಡ್ಕೆ ಕುಡಿಯರು ಸಂಪಾಜೆ, ಸುಬ್ರಹ್ಮಣ್ಯ ಕಾಡುಗಳಲ್ಲಿದ್ದಾರೆ. ನಾಲ್ಮಲೆ ಕುಡಿಯರು ಬೆಳ್ತಂಗಡಿ ತಾಲೂಕಿನ ನೆರಿಯದಲ್ಲಿದ್ದಾರೆ. ಇವರು ಬಾಂಜಾರು ಮಲೆ, ಅಂಬಟೆಮಲೆ, ಎಲಿಮಲೆ ಮತ್ತು ಬಾರಿಮಲೆ ಎಂಬ ನಾಲ್ಕು ಮಲೆಗಳಲ್ಲಿ ವಾಸ ಮಾಡುತ್ತಿದ್ದುದರಿಂದ ಇವರಿಗೆ 'ನಾಲ್ಮಲೆಯವರು' ಎಂಬ ಹೆಸರು ಬಂದಿದೆ.

ಕೆಲವು ಕುಟುಂಬದವರು ಸಂಪೂರ್ಣವಾಗಿ ಮಲೆ ತೊರೆದು ಬಯಲು ಪ್ರದೇಶಕ್ಕೆ ಇಳಿದು ತೋಟಗಳಲ್ಲಿ ದುಡಿಯುವ ಆಳುಗಳಾಗಿಯೂ ಈ ಪಂಗಡದವರು ಜೀವನ ನಿರ್ವಹಣೆ ಮಾಡಿಕೊಳ್ಳುತ್ತಿದ್ದಾರೆ.

ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆ, ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹರಡಿಹೋಗಿರುವ ಈ ವರ್ಗದ ಹೆಚ್ಚಿನವರು ಇಂದಿಗೂ ಬೆಟ್ಟದ ತುದಿಗಳನ್ನು ಬಿಟ್ಟುಬಾರದೆ, ಆಧುನಿಕತೆಯ ಎಲ್ಲಾ ಸೌಲಭ್ಯಗಳಿಂದ ಹೊರತಾಗಿ ಕಡುಬಡತನದಲ್ಲಿ ಬದುಕುತ್ತಿರುವ ಕುಟುಂಬಗಳು ಇರುವಂತೆಯೇ; ಆಧುನಿಕ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಾ, ಜೀವನಕ್ಕೆ ಪೂರಕವಾದ ಸೌಲಭ್ಯಗಳನ್ನು ಹೆಚ್ಚಿಸಿಕೊಂಡಿರುವ ಸಂಸಾರಗಳೂ ಇವೆ.

ಪ್ರಸ್ತುತ ಕಾಲದಲ್ಲಿ ಮಲೆಕುಡಿಯರು ಮಲೆಗಳನ್ನು ಅವಲಂಬಿಸಿಕೊಂಡು ತಮ್ಮ ಹಿಂದಿನ ರೀತಿಯಲ್ಲಿಯೇ ಜೀವನ ಕ್ರಮವನ್ನು ನಡೆಸುತ್ತಿರುವವರೂ ಇದ್ದಾರೆ. ಉದಾಹರಣೆಗೆ ಬೆಳ್ತಂಗಡಿ ತಾಲೂಕಿನ ಬಾಂಜಾರು ಮಲೆ, ನೆರಿಯದ ಎಲಿಮಲೆ (ಕೋಲೋಡಿ), ಅಂಬಟೆ ಮಲೆ, ಆಲಂಗಾಯಿ ಮುಂತಾದ ಕಡೆ ಈಗಲೂ ಮಲೆಕುಡಿಯರು ಮಲೆಗಳಲ್ಲಿ ವಾಸವಾಗಿದ್ದಾರೆ. ಆದರೆ ಕೆಲವು ಕಡೆ ಆಧುನಿಕತೆಯ ಸೌಲಭ್ಯವನ್ನು

ಬಯಸಿದ ಮಲೆಕುಡಿಯರು ಮಲೆಗಳನ್ನು ಬಿಟ್ಟು ನಗರಗಳ ಸಮೀಪದಲ್ಲಿ ವಾಸವಾಗಿರುವುದನ್ನು ಕಾಣಬಹುದು.

ಕಳೆದ ಶತಮಾನದಲ್ಲಿ ಪ್ರಾರಂಭಗೊಂಡ ಅರಣ್ಯ ನಾಶವು ಮಲೆಕುಡಿಯರ ಬದುಕಿನಲ್ಲಿ ತೀವ್ರವಾದ ಬದಲಾವಣೆಯನ್ನು ತಂದಿದೆ. ಕಾಡಿನ ನಾಶದಿಂದಾಗಿ, ಕಾಡು ಉತ್ಪತ್ತಿಯನ್ನೇ ಜೀವನಾಧಾರವಾಗಿಟ್ಟುಕೊಂಡು ಬೆಟ್ಟ ಕಾಡುಗಳಲ್ಲಿ ಅಲೆಯುತ್ತಿದ್ದ ಇವರ ಬದುಕಿಗೆ ಕೊಡಲಿಯೇಟು ಬಿದ್ದು, ಇವರು ಸುತ್ತಮುತ್ತಲಿನ ಗ್ರಾಮಗಳ ಕಡೆಗೆ ವಲಸೆ ಹೋಗುವುದು ಅನಿವಾರ್ಯವಾಯಿತು. ಜೊತೆಗೆ ಹೊರ ಜಗತ್ತಿನ ನೇರ ಸಂಪರ್ಕಕ್ಕೆ ಒಳಗಾಗದ ಮಲೆಕುಡಿಯರ ವಾಸಸ್ಥಳದಿಂದ ಕಾಡುತ್ಪತ್ತಿಯನ್ನು ಹೊತ್ತು ಸಾಗಿಸಲು ರಸ್ತೆಗಳ ನಿರ್ಮಾಣವಾಯಿತು. ಇದರಿಂದಾಗಿ ಪೇಟೆಯ ಅನೇಕ ವಸ್ತುಗಳು ಕುಡಿಯರ ಬದುಕಿನಲ್ಲಿ ಸೇರಿಕೊಂಡವು. ಮಲೆಕುಡಿಯರ ಬದುಕಿನ ಈ ಸಂಕ್ರಮಣ ಸ್ಥಿತಿಯನ್ನು ಕುರಿತಂತೆ ಡಾ. ಮೊಹಮ್ಮದ್ ಪೀರ್ ತಮ್ಮ ಅಧ್ಯಯನದಲ್ಲಿ “On account of the clearing of thick forest by the forester contractor, the dependency of the Malekudiyas on the forest products for their livelyhood has weakened. This has given rise to new era in their life” (1992:23) ಎಂದು ಅಭಿಪ್ರಾಯಪಟ್ಟಿದ್ದಾರೆ.

೧.೨. ಮಲೆಕುಡಿಯರ ಬಗ್ಗೆ ಈ ವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ :

ಮಲೆಕುಡಿಯ ಜನಾಂಗದ ಬಗ್ಗೆ ಕಳೆದ ಶತಮಾನದ ಕೊನೆಯಲ್ಲಿಯೇ ಕೆಲವು ವಿದೇಶಿ ವಿದ್ವಾಂಸರು ಮಾಹಿತಿಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಹಾಗೆಯೇ ದೇಶೀಯ ವಿದ್ವಾಂಸರು ಕೂಡ ಬುಡಕಟ್ಟು ಜನಾಂಗವನ್ನು ಉಲ್ಲೇಖಿಸುವಾಗ ಮಲೆಕುಡಿಯ ಜನಾಂಗದ ಆಚಾರ ವಿಚಾರಗಳನ್ನು ವಿವರಿಸಿದ್ದಾರೆ. ನಮಗೆ ಮಲೆಕುಡಿಯರ ಬಗ್ಗೆ ಪ್ರಥಮ ಮಾಹಿತಿ ಸಿಗುವುದು 1895ರಲ್ಲಿ ಪ್ರಕಟವಾದ South Canara Manual Vol- 1-2 ರಲ್ಲಿ.

ಫ್ರೆಂಚ್ ಪಾದ್ರಿ Abbe. J. A . Dubas ಅವರ “Hindu Manners, Customs and Cermonies”ಎಂಬ ಗ್ರಂಥದಲ್ಲಿ (1906) ಮಲೈಕೊಂಡಿಗರು (Malai - Kondigaru) ಎಂಬ ಜನಾಂಗದ ಬಗ್ಗೆ ಪ್ರಸ್ತಾವಿಸುತ್ತ “They live in the forest and their principal occupation is to extract the juice of the palm tree - The women climb trees to obtain it, and they do so in surprisingly agile manner. These people always go about naked. The women only wear a little rag” ಎಂಬುದಾಗಿ ಈ ಜನಾಂಗದ ಲಕ್ಷಣಗಳನ್ನು ವಿವರಿಸಿದ್ದಾರೆ.

Edgar Thurston ತನ್ನ "Caste and Tribes of South India" ಎಂಬ ಕೃತಿಯಲ್ಲಿ (1909) ಮಲೆಕುಡಿಯರ ಬಗ್ಗೆ ಉಲ್ಲೇಖಿಸುತ್ತ – "The Kudiyas or male (hill) kudiyas are found at Neriya , Dharmasthala and Shishila in the South Canara District. Those who live at the two former places are agrestic slaves of landlords, who own cardamom plantations on the Ghats. They live in the most part of the jungles, beneth yocks , in caves , or in low huts and shift from one spot to another. At the season of cardamom crop. They come down to the plains once a week with the produce. They are said to carry off cardamoms to the Mysore frontier and self them frace dulently to contractors or merchants". (ಪುಟ 96-97) ಅಲ್ಲದೆ ಮಲೆಕುಡಿಯರ ವಾಸಸ್ಥಳ, ಅವರ ಆಚರಣೆ, ನಂಬಿಕೆಗಳನ್ನು ಉಲ್ಲೇಖಿಸುತ್ತಾನೆ ಮತ್ತು ತಾಯಿಯನ್ನೇ ಮಗ ಮದುವೆಯಾದ ಉಲ್ಲೇಖವನ್ನು ಕೊಡುತ್ತಾನೆ. "The kudiyas do not object to marriage between a widowed women and her eldest son. Among those attached to a landlord at neriya, to such cases were pointed out. In one, there was no issue, but in the other a son had been born to the mother wife" (P– 97-98).

ಎಂ. ಗಣಪತಿರಾವ್ ಅವರ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' ಎಂಬ ಕೃತಿಯಲ್ಲಿ (1923) ಇಲ್ಲಿನ ಜನಾಂಗಗಳ ಬಗ್ಗೆ ಉಲ್ಲೇಖಿಸುತ್ತ "ಪುರಾತನ ಕಾಲದಲ್ಲಿ ಈ ಜಿಲ್ಲೆಯ ವಿಸ್ತಾರವಾದ ಕಾಡುಗಳಿಂದಲೂ, ಬಯಲುಗಳಿಂದಲೂ ತುಂಬಿ ಹೋಗಿದ್ದಿತು. ಆ ಕಾಲದಲ್ಲಿ ಊರುಗಳು, ಹಳ್ಳಿಗಳು ಯಾವುವೂ ಇರಲಿಲ್ಲ. ಆ ಕಾಡುಗಳ ನಡುವೆ ಅಲ್ಲಲ್ಲಿ ಕಾಡು ಜನರು ವಾಸಮಾಡಿಕೊಂಡಿದ್ದರು. ಈ ವಂಶದಲ್ಲಿ ಮಲೆಕುಡಿಯರೆಂಬ ಒಂದು ವಂಶವು ಈಗಲೂ ಸ್ವಲ್ಪ ಉಳಿದಿದೆ. ಇವರು ಕುಳ್ಳರು ಕರ್ರಗೆ ವಿಕಾರವಾಗಿರುತ್ತಾರೆ. ಬಟ್ಟೆಗಳಿಲ್ಲದೆ ಸ್ವಲ್ಪ ವರುಷಗಳ ಹಿಂದಿನವರೆಗೆ ಎಲೆಗಳನ್ನು, ಗೆಡ್ಡೆ ಗೆಣಸುಗಳನ್ನು ತಿಂದು ಜೀವಿಸುತ್ತಿದ್ದರು. ಒಂದೊಂದು ಸಾರಿ ಬೇಟೆಯಾಡಿ ಮೃಗಗಳನ್ನು ಕೊಂದು ಅವುಗಳ ಮಾಂಸವನ್ನು ತಿನ್ನುವುದು ಉಂಟು. ಅವರು ಅದೇ ಸ್ಥಿತಿಯಲ್ಲಿದ್ದು ಮೆಲ್ಲಗೆ ಉತ್ತಮ ಸ್ಥಿತಿಗೆ ಬಂದು ವಾಸಕ್ಕಾಗಿ ಸಣ್ಣ ಸಣ್ಣ ಗುಡಿಸಲುಗಳನ್ನು ಕಟ್ಟಲಾರಂಭಿಸಿದರು. ಬಿಲ್ಲು ಬಾಣಗಳನ್ನು ಉಪಯೋಗಿಸಲಾರಂಭಿಸಿದರು. (ಪುಟ 2- 3) ಎಂದು ಮಲೆಕುಡಿಯರ ಜೀವನ ವಿಧಾನವನ್ನು ವಿವರಿಸುತ್ತಾರೆ.

'Mysore Tribes and castes' ಎಂಬ ಗ್ರಂಥದಲ್ಲಿ (೧೯೩೧) ಕೆ. ಅನಂತಕೃಷ್ಣ ಅಯ್ಯರ್ ಅವರು ಮಲೆಕುಡಿಯರ ಬಗ್ಗೆ ಪ್ರಸ್ತಾವಿಸುತ್ತ – "Meleru are a Jungle Tribe cofind to wild regions of the Western Malenad. They live in isolated huts, which are however provided with the usual entrance through which one has to crawl in but also with the shy inmates steal out into the jungle at the mere suspicion of danger as on the approach of a stranger. They collect the wild jungle produce such as cardamom for their

customary employer. Whose agrestic slaves they have virtually became. Their huts are shifting from place usually in the most inaccessible and thickest parts of the wilderness" (P.186).

ಎಲ್.ಎ. ಕೃಷ್ಣಯ್ಯರ್ ಅವರ 'Coorg tribes and castes' ಎಂಬ ಕೃತಿಯಲ್ಲಿ (1948) ಮಲೆಕುಡಿಯರ ಬಗ್ಗೆ ಸ್ವಲ್ಪ ಮಾಹಿತಿ ಸಿಗುತ್ತದೆ. ಈ ಮಾಹಿತಿ ಮತ್ತು ಥರ್ಸ್ಟನ್ ನೀಡಿರುವ ಮಾಹಿತಿಯು ಒಂದನ್ನೊಂದು ಹೋಲುತ್ತದೆ.

ಡಾ. ಶಿವರಾಮ ಕಾರಂತರ 'ಕುಡಿಯರ ಕೂಸು' ಕಾದಂಬರಿಯಲ್ಲಿ (1951) ಮಲೆಕುಡಿಯರ ಸಾಂಸ್ಕೃತಿಕ ಬದುಕಿನ ವಿವರಗಳು ಚಿತ್ರಿತವಾಗಿವೆ. ಕಾರಂತರು ಮುನ್ನುಡಿಯಲ್ಲಿ "ಕುಡಿಯರ ಜೀವನದಲ್ಲಿ ಕಟ್ಟು ಕಟ್ಟಳೆ, ನಂಬಿಕೆ, ಆಚರಣೆಗಳ ಕುರಿತ ವಿವರಗಳು ಸಿಗುತ್ತವೆ. ಅವರಿಗೂ ನಿಸರ್ಗಕ್ಕೂ ಇರುವ ಸಂಬಂಧವನ್ನು, ಅವರ ಜೀವನದಲ್ಲಿ ಮಾರ್ಪಾಡಾಗುತ್ತಿರುವ ಆರ್ಥಿಕ ಬದಲಾವಣೆಗಳನ್ನು ತೋರಿಸುತ್ತದೆ. ಇದು ದಕ್ಷಿಣ ಕನ್ನಡದ ಜೀವನ ಚಿತ್ರಗಳಲ್ಲಿ ಒಂದಾದರೂ ಉಳಿದ ಜೀವನ ಚಿತ್ರಗಳಿಗಿಂತ ಇದು ಬೇರೆಯಾದುದು ಎಂಬುದರಿಂದ ಇದಕ್ಕೆ ಬೇರೆಯೇ ಸ್ಥಾನವಿದೆ" ಎಂದಿದ್ದಾರೆ.

Coorg Gazetter (ಸಂ. ಸತ್ಯನ್ 1965) ಕೊಡಗಿನ ತೇಮಲೆ ಮತ್ತು ಪೂಮಲೆ ಕುಡಿಯರ ಜೀವನಕ್ರಮ ಮತ್ತು ಸಂಪ್ರದಾಯಗಳ ಬಗ್ಗೆ ಮಾತ್ರ ವಿವರ ಸಿಗುತ್ತದೆ.

ಕಮಲಾಕ್ಷರ 'ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನ ಸಾಮಾಜಿಕ ಇತಿಹಾಸ (1968) ಎಂಬ ಗ್ರಂಥದಲ್ಲಿ, ದಕ್ಷಿಣ ಕನ್ನಡದ ಮಲೆಕುಡಿಯರ ಬಗ್ಗೆ ಸ್ವಲ್ಪ ವಿವರ ದೊರೆಯುತ್ತದೆ.

Karnataka State Gazetter South Canara District (1973ರ ಮುದ್ರಣ ಸಂ. ಅಭಿಶಂಕರ) ಎಂಬ ಗ್ರಂಥದಲ್ಲಿ, ದಕ್ಷಿಣ ಕನ್ನಡ ಮಲೆಕುಡಿಯರ ಬಗ್ಗೆ ಸ್ವಲ್ಪ ವಿವರ ದೊರೆಯುತ್ತದೆ. ಅವರು ಮಲೆಕುಡಿಯರ ಬಗ್ಗೆ ಉಲ್ಲೇಖಿಸುತ್ತ "Amongest the forest and hill triabes are the Male – Kudiyas who are a schedules tribe . They are found both in the plains and on hill slopes. Their mother tongue is Tulu . The Male –Kudiyas who inhabit the hills dwell in huts. Made of bark and reeds. As the population of Malekudiyas is dwinding , the old system bali is being over looked. In the old days , Male Kudiyas had their own clan system and intermarriages were not allowed. Dr . Haiman dort of the University of London has specially studies the customs and manners of these Malekudiyas and he affirms that the bali system is not strictly adhered to at present. Inter bali marriages have become common among them" (P-112). ಇಲ್ಲಿ ಡಾ. ಹೈಮನ್ ಡಾರ್ಫ್ ಎಂಬವರು

ಮಲೆಕುಡಿಯರ ಜೀವನ ವಿಧಾನ ಮತ್ತು ಬಳಿ ಪದ್ಧತಿಯ ಬಗ್ಗೆ ಅಧ್ಯಯನ ನಡೆಸಿದ್ದಾರೆ ಎಂಬ ವಿವರ ಸಿಗುತ್ತದೆ. ಆದರೆ ಡಾ. ಹೈಮನ್ ಅವರ ಅಧ್ಯಯನದ ವಿವರಗಳು ಈ ವರೆಗೆ ಯಾವ ಸಂಶೋಧಕರಿಗೂ ಲಭ್ಯವಾಗಿಲ್ಲ.

1981ರ ಜನಗಣತಿಯ ವರದಿಯಲ್ಲಿ "A brief Ethnographic note on Malekudiya – A scheduled Tribe" ಎಂಬ ಲೇಖನದಲ್ಲಿ ಬಿ. ಕೆ. ದಾಸ್ ಅವರು ಮಲೆಕುಡಿಯರ ಜೀವನಕ್ರಮ, ಕಟ್ಟು ಕಟ್ಟಳೆಗಳು, ಆಚರಣೆಗಳು, ಐತಿಹ್ಯ ಮುಂತಾದವುಗಳ ಬಗ್ಗೆ ವಿವರಗಳನ್ನು ಕೊಡುತ್ತ, ಮಲೆಕುಡಿಯರಲ್ಲಿ ಹದಿನೆಂಟು ಬಳಿಗಳಿವೆ. ಅವುಗಳು ಉಳಿದ ಇತರ ಜನಾಂಗದ ಬಳಿಯನ್ನೇ ಹೋಲುತ್ತವೆ ಎಂದು ಹೇಳಿ ಹನ್ನೊಂದು ಬಳಿಗಳ ಉಲ್ಲೇಖವನ್ನು ಮಾಡಿದ್ದಾರೆ. ಈ ಲೇಖನದಲ್ಲಿ ಮಲೆಕುಡಿಯರ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ಸಿಗುತ್ತದೆ.

ಡಾ. ಕೆ. ಚಿನ್ನಪ್ಪ ಗೌಡರ 'ನೆಲೆ ತಪ್ಪಿದ ಮಲೆಕುಡಿಯರು' ಎಂಬ ಲೇಖನದಲ್ಲಿ (1986) ಮಲೆಕುಡಿಯ ಶಬ್ದದ ಅರ್ಥ ಮತ್ತು ನಿಷ್ಪತ್ತಿ. ಕುಡಿಯ – ಗೌಡ – ಕುಮೇರಿಗೌಡ – ಬರ್ಕೆಯವರು, ಮಲೆಕುಡಿಯರು, ನಾಲ್ಕುಮಲೆಯವರು, ಮಲೆಕುಡಿಯರ ಸಾಂಸ್ಕೃತಿಕ ಅಧ್ಯಯನದ ಹಂತಗಳು, ಆಧುನಿಕ ಕಾಲದ ಮಲೆಕುಡಿಯ ಜನಾಂಗ, ಅವರ ಆಹಾರ ಪದ್ಧತಿ, ಜೀವನ ಕ್ರಮ, ವೈದ್ಯ ಮುಂತಾದವುಗಳ ವಿವರ ದೊರೆಯುತ್ತದೆ. ಇಲ್ಲಿ ಲೇಖಕರು ಜನಾಂಗದ ಬದುಕಿನ ಸಾಂಸ್ಕೃತಿಕ ವಿಶ್ಲೇಷಣೆಯನ್ನು ಮಾಡಿದ್ದಾರೆ.

ಶ್ರೀಧರ ಗೌಡ ಅವರು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಮಾಜ ಶಾಸ್ತ್ರದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಪ್ರೌಢ ಪ್ರಬಂಧ – "Impact of Science and technology on Tribal occupation: A study on Malekudiyas of Belthangady Taluk" (1992) ವಿಜ್ಞಾನ ಮತ್ತು ತಂತ್ರಜ್ಞಾನವು ಮಲೆಕುಡಿಯ ಜನರ ವೃತ್ತಿಯ ಮೇಲೆ ಹೇಗೆ ಪ್ರಭಾವ ಬೀರಿದೆ ಎನ್ನುವುದರ ಕಡೆಗೆ ಈ ಅಧ್ಯಯನವು ಬೆಳಕು ಚೆಲ್ಲುತ್ತದೆ.

'ಜಾನಪದ ವಿಶ್ವಕೋಶ' ಸಂಪುಟ 1 ರಲ್ಲಿ (ಸಂ. ಚಂದ್ರಶೇಖರ ಕಂಬಾರ 1993) ಮಲೆಕುಡಿಯರ ಬಗ್ಗೆ ಪ್ರಕಟವಾಗಿರುವ ಲೇಖನವು ಏಡ್ಗರ್ ಥರ್ಸ್ಟನ್ ಅವರ "Caste and Tribes of South India" ಕೃತಿಯಲ್ಲಿ ಪ್ರಕಟವಾಗಿರುವ 'ಕುಡಿಯರು' ಎಂಬ ವಿಷಯದ ಅನುವಾದವೇ ಆಗಿದೆ.

ಡಾ. ಡಿ. ಬಿ. ರಾಮಚಂದ್ರಾಚಾರ್ ಅವರು 'ಕುಡಿಯರ ಸಂಸ್ಕೃತಿ' ಎಂಬ ಗ್ರಂಥದಲ್ಲಿ (1993) ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಯ ಕುಡಿಯರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ, ಭಾಷೆ, ಸಾಹಿತ್ಯ, ಆಚರಣೆ, ಕಲೆ, ಸಾಮಾಜಿಕ ಪರಿವರ್ತನೆಯ ಹಿನ್ನೆಲೆಯಲ್ಲಿ ಕುಡಿಯರ ಸ್ಥಿತಿ ಇವುಗಳ ಬಗ್ಗೆ ಅಧ್ಯಯನವನ್ನು ಮಾಡಿದ್ದಾರೆ. ಇಲ್ಲಿ ಕೊಡಗಿನ ಕುಡಿಯರ ಬಗ್ಗೆಯೇ ಹೆಚ್ಚಿನ ಮಾಹಿತಿ ಸಿಗುತ್ತದೆ.

ಲಾರೆನ್ಸ್ ಡಿಸೋಜ ಅವರ 'Malekudiyas – A primitive tribe of South India' ಎಂಬ ಗ್ರಂಥವು (1994) ಮಲೆಕುಡಿಯರ ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳ ಬಗ್ಗೆ ಸ್ಥೂಲವಾದ ಪರಿಚಯವನ್ನು ಮಾಡಿಕೊಡುತ್ತದೆ. (ಮಲೆಕುಡಿಯರು – ಡಾ. ಬಿ. ಎ. ವಿವೇಕ ರೈ, ಡಿ. ಯದುಪತಿ ಗೌಡ – ೧೯೯೬, ಪುಟ – ೨–೫)

ಶ್ರೀಧರ ಗೌಡ ಪಿ. ಅವರು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಮಾಜ ಶಾಸ್ತ್ರದಲ್ಲಿ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾ ಪ್ರಬಂಧ – "Social change Among Male kudiyas in Dakshina Kannada District" – 1996.

Peer, Mohammed – Tribal development programme, a caste study of Karnataka : An Evaluation report submitted to the ministry of welfare, Govt. of India – 1992.

ಪ್ರೊ. ಎಚ್. ಜೆ. ಲಕ್ಕಪ್ಪ ಗೌಡ ಇವರ ಪ್ರಧಾನ ಸಂಪಾದಕತ್ವದಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು, ಇವರು 'ಕರ್ನಾಟಕ ಬುಡಕಟ್ಟುಗಳು' – ಸಂಪುಟ ೧ ಮತ್ತು ಸಂಪುಟ ೨, ೧೯೯೮ ಮತ್ತು ೨೦೦೦ ಇಸವಿಯಲ್ಲಿ ಪ್ರಕಟಪಡಿಸಿದರು. ಈ ಪುಸ್ತಕದ ಸಂಪುಟ ೧ ರಲ್ಲಿ ಮಲೆಕುಡಿಯ ಜನಾಂಗದ ಬಗ್ಗೆ ಡಿ. ನಾಗಣ್ಣ ಎಂಬವರ ಲೇಖನವೊಂದಿದೆ. (ಪುಟ–೬೦೯)

ಡಾ. ಹಿ. ಚಿ. ಬೋರಲಿಂಗಯ್ಯನವರು 'ಕಾಡು ಕಾಂಕ್ರೀಟ್ ಮತ್ತು ಜಾನಪದ' (ಬುಡಕಟ್ಟು ಸಂಸ್ಕೃತಿ, ಪರಿಸರ ಮತ್ತು ಜಾನಪದವನ್ನು ಕುರಿತ ವೈಚಾರಿಕ ಲೇಖನಗಳು) ೧೯೯೫ ರಲ್ಲಿ ಪ್ರಕಟಗೊಂಡ ಗ್ರಂಥದಲ್ಲಿ ಮಲೆಕುಡಿಯರ ಬಗ್ಗೆ ಅಧ್ಯಯನ ಮಾಡಿರುವ ವಿವರ ದೊರೆಯುತ್ತದೆ. (ಪುಟ– ೩೩,೩೪)

ಡಾ. ಕೆ. ಚಿನ್ನಪ್ಪ ಗೌಡರ 'ಸಂಸ್ಕೃತಿ ಸಿರಿ' ಎಂಬ ಪುಸ್ತಕದಲ್ಲಿ 'ಮಲೆಕುಡಿಯ ಜನಾಂಗ ಐತಿಹಾಸಿಕ – ಸಾಂಸ್ಕೃತಿಕ ವಿಶ್ಲೇಷಣೆ' ಎಂಬ ಲೇಖನದಲ್ಲಿ ಮಲೆಕುಡಿಯರ ಬಗ್ಗೆ ನಡೆದ ಸಂಶೋಧನಾತ್ಮಕ ಲೇಖನವೊಂದನ್ನು ಕಾಣಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಸ್ತಾವನೆ :

ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಹಾಗೂ ಈ ಪ್ರದೇಶದ ಕುರಿತಾಗಿ ಉಲ್ಲೇಖಿಸುವ ಹಲವಾರು ಕಾಲಮಾನದ ಸಾಹಿತ್ಯದ ಆಕರಗಳು ದೊರಕುತ್ತವೆ. ಈ ಪ್ರದೇಶವನ್ನು ತುಳುನಾಡು ಎಂದು ಉಲ್ಲೇಖಿಸುವ ಹಲವು ಸಾಹಿತ್ಯಾಕರಗಳು ದೊರಕುತ್ತವೆ. ಸ್ಕಂದ ಪುರಾಣದ ಸಹ್ಯಾದ್ರಿ ಕಾಂಡದಲ್ಲಿ ಈ ಪ್ರದೇಶದ ಉಲ್ಲೇಖವನ್ನು ಕಾಣಬಹುದಾಗಿದೆ. ಕ್ರಿ.ಶ. ಆರಂಭ ಕಾಲದ ಸಂಗಂ ಸಾಹಿತ್ಯದಲ್ಲಿಯೂ ಈ ಪ್ರದೇಶವನ್ನು 'ತುಳುನಾಡು' ಎಂದು ಉಲ್ಲೇಖಿಸಲಾಗಿದೆ. ಅದೇ ರೀತಿ ಆಳುಪ ಒಂದನೇ ಬಂಕಿಮದೇವನ ಬಾಕೊರು ಶಾಸನವು "ತುಳು ವಿಷಯ" ಎಂದು ಕರೆದಿದೆ. ವಿಜಯನಗರ ಶಾಸನಗಳು ಈ ಪ್ರದೇಶವನ್ನು "ತುಳುನಾಡು'

[illegible]

ಎಂದು ಉಲ್ಲೇಖಿಸಲಾಗಿದೆ. ಅದೇ ರೀತಿ ಆಳುಪ ಒಂದನೇ ಬಂಕಿಮದೇವನ ಬಾರಕೂರು ಶಾಸನವು "ತುಳು ವಿಷಯ" ಎಂದು ಕರೆದಿದೆ. ವಿಜಯನಗರ ಶಾಸನಗಳು ಈ ಪ್ರದೇಶವನ್ನು "ತುಳುರಾಜ್ಯ" ಮತ್ತು "ತುಳುದೇಶ" ಎಂದು ಉಲ್ಲೇಖಿಸಿವೆ. ಆದರೆ ಈ ಪ್ರದೇಶದ ಹೊರಗಿನ ಕೆಲವು ಶಾಸನಗಳು ಮಾತ್ರ ಈ ಪ್ರದೇಶವನ್ನು "ಆಳ್ವಖೇಡ" ಎಂದು ಪ್ರಸಿದ್ದವಾಗಿರುವ ಹಾಗೂ ಅದೇ ಹೆಸರಿನಲ್ಲಿ ಇಂದಿಗೂ ಕರೆಯಲ್ಪಡುತ್ತಿರುವ ಒಂದು ಜಿಲ್ಲೆಯೇ "ದಕ್ಷಿಣ ಕನ್ನಡ".

ಇತ್ತೀಚೆಗೆ ಈ ಜಿಲ್ಲೆಯನ್ನು ವಿಭಜಿಸಿ, ಉಡುಪಿಯನ್ನು ಹೊಸ ಜಿಲ್ಲೆಯನ್ನಾಗಿ ರೂಪಿಸಲಾಗಿದೆ. ಹಿಂದಿನ (ಅವಿಭಜಿತ) ಜಿಲ್ಲೆಯ ದಕ್ಷಿಣ ಭಾಗವು ದಕ್ಷಿಣ ಕನ್ನಡ ಜಿಲ್ಲೆಯಾಗಿದ್ದು ಈಗಿನ ಕರ್ನಾಟಕದ ಚಿಕ್ಕಮಗಳೂರು, ಹಾಸನ, ಕೊಡಗು ಮತ್ತು ಉಡುಪಿ ಜಿಲ್ಲೆ ಹಾಗೂ ಕೇರಳದ ಕಾಸರಗೋಡು ಜಿಲ್ಲೆಗಳ ಭೂ ಭಾಗಗಳ ನಡುವೆ ಇದ್ದು, ಪಶ್ಚಿಮದಲ್ಲಿ ಅರಬ್ಬಿ ಸಮುದ್ರಕ್ಕೆ ಹೊಂದಿಕೊಂಡಿದೆ. ಅದೇ ರೀತಿಯ ಪೂರ್ವಭಾಗವು ಪಶ್ಚಿಮ ಘಟ್ಟಗಳಿಂದ ಆವೃತ್ತವಾಗಿರುವ ಈ ಪ್ರದೇಶವು ಐತಿಹಾಸಿಕ ವಿಭನ್ನತೆಯನ್ನು ಹೊಂದಿ ಸಾಂಸ್ಕೃತಿಕವಾಗಿ ವಿಭಿನ್ನ ಕಾಣಿಕೆಯನ್ನು ನೀಡಿದೆ.

ದಕ್ಷಿಣ ಕನ್ನಡ ಜಿಲ್ಲೆಯನ್ನು ಮಂಗಳೂರು, ಬೆಳ್ತಂಗಡಿ, ಬಂಟ್ವಾಳ. ಪುತ್ತೂರು ಮತ್ತು ಸುಳ್ಯ ತಾಲ್ಲೂಕುಗಳನ್ನಾಗಿ ವಿಭಾಗಿಸಿದ್ದು, ಇತ್ತೀಚಿನ ವಿಭಜನೆಯಲ್ಲಿ ಮೂಡುಬಿದ್ರಿ ಹೋಬಳಿಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ವರ್ಗಾಯಿಸಲಾಗಿದೆ. ಈ ಭೂ ಪ್ರದೇಶವು ವಿಪುಲವಾದ ಇತಿಹಾಸವನ್ನು ಹೊಂದಿದೆ.

ದಕ್ಷಿಣ ಕನ್ನಡ ಜಿಲ್ಲೆಯು ಬಹು ಪುರಾತನ ಕಾಲದಿಂದಲೂ ಬಲು ಸಂಪತ್ತಿನ ನಾಡಾಗಿತ್ತು. ಪ್ರಾಚೀನ ಸುಂದರ ಚತ್ರಕಲೆಗಳಿಗೆ ಈ ಜಿಲ್ಲೆಯು ಪ್ರಸಿದ್ದ ಬೀಡಾಗಿತ್ತು. ಎಲ್ಲ ಕಡೆಗಳಲ್ಲಿಯು ತೆಂಗು, ಅಡಿಕೆ, ಬಾಳೆ ಹಸಿರು ಪೈರುಗಳ ಪ್ರಕೃತಿ ಸೌಂದರ್ಯದ ನೆಲೆವೀಡು ದಕ್ಷಿಣ ಕನ್ನಡ ಜಿಲ್ಲೆ. ಈ ಜಿಲ್ಲೆಯಲ್ಲಿ ಕನ್ನಡ ಭಾಷೆಯನ್ನು ವ್ಯವಹಾರಕ್ಕೆ ಬಳಸಿದರೆ, ಅವರ ಮಾತೃಭಾಷೆ ತುಳುವಾಗಿರುತ್ತದೆ. ಈ ಜಿಲ್ಲೆ ಎಲ್ಲಾ ಜಾತಿ ಧರ್ಮಗಳ ನೆಲೆವೀಡು.

ಬಹು ಪ್ರಾಚೀನ ಕಾಲದಲ್ಲಿ ಈ ಜಿಲ್ಲೆಯು ಚಿಕ್ಕದಾದ ಸಮುದ್ರ ಕರಾವಳಿಯಿಂದಲೂ, ಕಾಡುಗಳಿಂದಲೂ, ಎತ್ತರ ಗುಡ್ಡಗಳಿಂದಲೂ ಕೂಡಿದ ಬಂಜರು ಭೂಮಿಯಾಗಿತ್ತು. ಅಲ್ಲಲ್ಲಿ ಅಲ್ಪಸ್ವಲ್ಪ ಬಯಲು ಭೂಮಿಯಿಂದಾವರಿಸಿ, ಹೆಚ್ಚಾಗಿ ಜಿಲ್ಲೆಯು ಕಾಡು ಪಾಲಾಗಿತ್ತು. ಕರಾವಳಿಯಲ್ಲಿ ಮೀನು ಹಿಡಿಯುವ ಬೇಸ್ತರೂ ಅಲ್ಲಲ್ಲಿ ಬಯಲು ಬಂಜರು, ಭೂಮಿಗಳಿರುವಲ್ಲಿ ಗುತ್ತೇದಾರರೂ, ಆಳರಸರೆನ್ನುವ ಚಿಕ್ಕ ಚಿಕ್ಕ ಜಮೀನ್ದಾರರೂ, ಕಾಡು ಗುಡ್ಡಗಳಲ್ಲಿ ಆದಿಮೂಲ ನಿವಾಸಿಗಳೂ, ವಾಸಮಾಡಿಕೊಂಡಿದ್ದರು ಎಂಬುದಾಗಿ ಇತಿಹಾಸಗಾರರ ಅಭಿಪ್ರಾಯ. ಆದಿನಿವಾಸಿಗಳಾದ ಕೊರಗರು, ಮಲೆಕುಡಿಯರು, ಮುಂಡಾಲ, ಮುಗೇರ, ಬಾಕುಡ ಎಂಬಿತ್ಯಾದಿ ಹೆಸರಿನಿಂದ ಕರೆಯಲ್ಪಡುವ ಈ ಪಂಗಡದವರು ಕ್ರಿ.ಪೂ ಸುಮಾರು ೩೦೦೦ ವರ್ಷಗಳ ಮೊದಲೇ ಗಿರಿಕಂದರಗಳಲ್ಲಿಯೂ, ಕಾಡುಗುಡ್ಡಗಳಲ್ಲಿಯೂ, ಅಲ್ಲಲ್ಲಿ ಸಮತಟ್ಟಾದ ಗುಡ್ಡದ ತಪ್ಪಲಲ್ಲಿಯು ವಾಸಮಾಡಿಕೊಂಡಿದ್ದರು.

೧. ೩. ಮಲೆಕುಡಿಯರು ಮತ್ತು ಇತರ ಗಿರಿಜನ ಹಾಗೂ ಪರಿಶಿಷ್ಟ ವರ್ಗದವರ ಸಾಮಾಜಿಕ ಸ್ಥಿತಿಗತಿ :

ಅತೀ ಪುರಾತನ ಕಾಲದಲ್ಲಿ ಜಿಲ್ಲೆಯಲ್ಲಿ ಅಸ್ಪೃಶ್ಯ ವರ್ಗದವರಿಗೆ ಮತ ಸ್ವಾತಂತ್ರ್ಯವಿದ್ದಿಲ್ಲ ಮಾತ್ರವಲ್ಲ ಅವರಿಗೆ ಅಭಿಪ್ರಾಯ ಸ್ವಾತಂತ್ರ್ಯವಾಗಲೀ, ಸಾರ್ವಜನಿಕ ಸ್ಥಳಗಳಲ್ಲಿ ಇತರರಂತೆ ಭಾಗವಹಿಸುವ ಸ್ವಾತಂತ್ರ್ಯಕ್ಕೆ ಎಡೆ ಇದ್ದಿಲ್ಲ. ಇವರು ಸಮಾಜದಲ್ಲಿ ಅಸ್ಪೃಶ್ಯರಾಗಿರುವುದೇ ಇದಕ್ಕೆ ಮೂಲಕಾರಣವಾಗಿತ್ತು. ಜಿಲ್ಲೆಯಲ್ಲಿ ಮುಖ್ಯವಾಗಿ ಕದಂಬ ಅರಸರ, ಆಲೂಪ ಅರಸರ, ಜೈನ ಅರಸರ, ಬಂಟ ಬಾರಗರ ಹಾಗೂ ಜಿಲ್ಲೆಯ ಅಲ್ಲಲ್ಲಿಯ ಗುತ್ತು ಬೀಡುಗಳ ಒಡೆಯರ ಬೇಸಾಯ ಕಸುಬಿನ ಮೂಲದ ಆಳುಗಳಾಗಿಯೂ, ಅವರ ಕಾಡು ಗುಡ್ಡೆಗಳಲ್ಲಿರುವ ಮರಮುಟ್ಟು, ತೋಟಗಳ ತೋಟಗಾರರಾಗಿಯೂ ಜಿಲ್ಲೆಯ ಅಸ್ಪೃಶ್ಯ ಪಂಗಡದವರು ಜೀವಿಸಿಕೊಂಡಿದ್ದರು. ಮಾತ್ರವಲ್ಲ ಅವರ ಗುತ್ತು ಚಾವಡಿಗಳ ನಿತ್ಯ ಚಾಕರಿಗೆ, ಜಾನುವಾರುಗಳ ಪೋಷಣೆಯ ಕೆಲಸಗಳಿಗೆ ಹಾಗೂ ಇನ್ನು ಕೆಲವರು ಅವರ ಜೀತದ ಆಳುಗಳಾಗಿಯೂ ದುಡಿಯುತ್ತಾ ಇದ್ದರು. ಅಂತೆಯೇ ಅವರ ಜಮೀನಿನ ಸಮೀಪದ ಓಣಿಗಳಲ್ಲಿಯೋ, ಪಕ್ಕದ ಗುಡ್ಡಗಾಡುಗಳ ತಪ್ಪಲುಗಳಲ್ಲಿ, ಹುಲ್ಲಿನ ಗುಡಿಸಲನ್ನು ಕಟ್ಟಿಕೊಂಡು ಅಸ್ಪೃಶ್ಯತೆಯಿಂದಾಗಿ ಇವರು ಆಯಾಯ ಜಾತಿ ನೀತಿ, ಶಿಸ್ತು ಬದ್ಧವಾದ ಕಟ್ಟು ಕಟ್ಟಳೆಯ ಸಮಾಜದ ನೀತಿಗನುಸಾರವಾಗಿ ಜೀವನ ಮಾಡುತ್ತಿದ್ದರು. ಇನ್ನು ಕೆಲವರು ಕಾಡುಗುಡ್ಡಗಳಲ್ಲಿ ತಿರುಗಾಡಿಕೊಂಡು, ಕಾಡು ಮೃಗಗಳನ್ನು ಬೇಟೆಯಾಡಿ ಅದರ ಚರ್ಮದಿಂದ ಪಾದರಕ್ಷೆ ಹಾಗೂ ಸೊಂಟದ ಪಟ್ಟಿ (ಬೆಲ್ಟ್) ಗಳನ್ನೂ, ಎಲುಬುಗಳಿಂದ ಕೈಬಳೆ ಮತ್ತು ಇತರ ತಮ್ಮ ಆಭರಣಗಳನ್ನೂ ತಯಾರಿಸುತ್ತಿದ್ದರು. ಮಾತ್ರವಲ್ಲ ನಿತ್ಯೋಪಯೋಗಿ ವಸ್ತುಗಳಾದ ಬುಟ್ಟಿ, ಕುಕ್ಕೆ, ಗೆರಸೆ, ಹುರಿಹಗ್ಗ, ಚಾಪೆ ಇತ್ಯಾದಿ ಕೈಗಾರಿಕಾ ಸಾಮಗ್ರಿಗಳನ್ನೂ ತಯಾರಿಸಿಕೊಂಡು ಜಿಲ್ಲೆಯಲ್ಲಿ ಜೀವಿಸುತ್ತಿದ್ದರು.

ಭಾರತದಲ್ಲಿ ಕಾಲಕ್ರಮೇಣ ಜನರ ಸ್ಥಿತಿಗತಿ, ರಾಜಕೀಯ ಸ್ಥಿತಿಗತಿ ಬದಲಾವಣೆ ಹೊಂದುತ್ತಿರುವಾಗ ಸಾಮಾನ್ಯ ಜನರ ಸ್ಥಿತಿಗತಿ ಕೂಡಾ ಪರಿವರ್ತನೆಗೊಳ್ಳತೊಡಗಿತು. ಅಂತೆಯೇ ಜಿಲ್ಲೆಯಲ್ಲಿ ಅನಾದಿಕಾಲದಿಂದ ಆಳಿಕೊಂಡು ಅನುಭವಿಸಿ ಬರುತ್ತಿದ್ದ ಆಳರಸರ, ಜೈನರಸರ, ಚೌಟರ, ಆಲೂಪರ, ಬಂಟರ ಮತ್ತು ಬಳ್ಳಾಲರ ಆಡಳಿತದಲ್ಲಿಯೂ, ಅವರ ರಾಜನೀತಿಯಲ್ಲಿಯೂ ಬದಲಾವಣೆ ಹೊಂದಿತು. ಭಾರತದ ಅಲ್ಲಲ್ಲಿಯ ಚಿಕ್ಕ ಪುಟ್ಟ ಆಶ್ರಿತ ರಾಜರುಗಳ, ಆಳರಸರುಗಳ ನಿರಂತರ ದ್ವೇಷ, ಕಚ್ಚಾಟ, ಹೋರಾಟಗಳು ಪರಕೀಯರ ಧಾಳಿಗೆ ಎಡೆಮಾಡಿಕೊಟ್ಟವು. ಭಾರತಾದ್ಯಂತ ಚಿಕ್ಕ ಪುಟ್ಟ ಪ್ರಾಂತಿಕ ಅರಸರಲ್ಲಿಯೂ ತಮ್ಮ ತಮ್ಮೊಳಗೆ ರಾಜ್ಯಕ್ಕಾಗಿ ಮತ್ಸರಪಟ್ಟು, ಕಚ್ಚಾಟ ಆರಂಭವಾಗಿ, ದೇಶದಲ್ಲೇ ರಾಜಕೀಯ ಅಸ್ಥಿರತೆ ಉಂಟಾಗಿ, ರಾಜ್ಯದ ರಾಜರುಗಳು ತಮ್ಮೊಳಗೆ ಕಚ್ಚಾಟಕ್ಕಾಗಿ ಪರಕೀಯರ ಸ್ನೇಹಕ್ಕೆ ಕೈಚಾಚಿ ದೇಶದ ಹಾಗೂ ಸಮಾಜದ ಅಸ್ತಿತ್ವವನ್ನೇ ಕಳಕೊಳ್ಳಬೇಕಾಯಿತು. ಕೆಲವು ರಾಜಮನೆತಗಳಂತೂ

ಪರಕೀಯರಾದ ಬ್ರಿಟಿಷರ ಸೈನ್ಯಕ್ಕೆ ಹಾಗೂ ಅಂದಿನ ಕಂಪೆನಿ ಸರಕಾರಕ್ಕೆ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ನೆರವು ನೀಡಿದ ಕಾರಣ ನಮ್ಮ ಪ್ರಾಂತ್ಯದ ಆಡಳಿತ ಕೂಡಾ ಬ್ರಿಟಿಷರ ಆಡಳಿತಕ್ಕೆ ಕ್ರಮೇಣ ಒಳಗಾಗಬೇಕಾಯಿತು. ಅಂತೆಯೇ ತುಳುವವು ಕೂಡಾ ಮೈಸೂರು ರಾಜ್ಯದಿಂದ ಕ್ರಿ.ಶ. 1800ರಲ್ಲಿ ಇಂಗ್ಲೀಷರ ಕೈವಶವಾಗಿ ಬ್ರಿಟಿಷರ ಮದ್ರಾಸು ಪ್ರಾಂತದೊಂದಿಗೆ ಕೂಡಿಕೊಂಡಿತು. ಮುಂದೆ 1799ನೇ ಜುಲಾಯಿಯಲ್ಲಿ ಕೇಪ್ಟನ್ ಮನ್ರೋವ್ ಎಂಬ ಆಂಗ್ಲ ಅಧಿಕಾರಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಕಲೆಕ್ಟರರನ್ನಾಗಿ ಮದ್ರಾಸು ಕಂಪೆನಿ ಸರಕಾರದವರು ನೇಮಕ ಮಾಡಿದರು. ಅಂದಿನಿಂದ ಜಿಲ್ಲೆಯು ಬ್ರಿಟಿಷ್ ಕಂಪೆನಿಯ ಆಡಳಿತಕ್ಕೆ ಒಳಪಟ್ಟಿತು. ಅನಂತರ 1858ರಲ್ಲಿ ವಿಕ್ಟೋರಿಯ ಮಹಾರಾಣಿಯ ಸರಕಾರ ದೇಶದಲ್ಲಿ ಆಡಳಿತಕ್ಕೆ ಬಂದಾಗ ನಮ್ಮ ಜಿಲ್ಲೆಯು ಕೂಡಾ ಕಂಪೆನಿ ಸರಕಾರದಿಂದ ರಾಣಿಯ ಸರಕಾರದ ಅಧೀನಕ್ಕೊಳಗಾಯಿತು. ಬ್ರಿಟಿಷ್ ಸರಕಾರವು ಜಿಲ್ಲೆಯನ್ನು 1860ನೇ ಇಸವಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆ ಎಂದು ವಿಭಾಗಿಸಿತು.

ದೇಶದ ಸ್ವಾತಂತ್ರ್ಯಕ್ಕೆ ಆದ ಈ ಧಕ್ಕೆ ಹಾಗೂ ಪರಕೀಯರ ಧಾಳಿಯಿಂದಾಗಿ ನಮ್ಮ ಜಿಲ್ಲೆಯು ಸರ್ವ ಸ್ವಾತಂತ್ರ್ಯ ಕಳಕೊಂಡಿತು. ಬ್ರಿಟಿಷರ ರಾಜ್ಯಭಾರಕ್ಕೆ ಜಿಲ್ಲೆಯು ಒಳಗಾಗಿ ಬ್ರಿಟಿಷರು ನಮ್ಮ ಜಿಲ್ಲೆಯನ್ನು ಸುಮಾರು 147 ವರ್ಷಗಳ ತನಕ ಆಳಿದುದರಿಂದ ಇಲ್ಲಿಯ ಸಾಮಂತ ಅರಸರ, ಆಳರಸರ ಗುತ್ತು ಒಡೆಯರ ಆಡಳಿತಕ್ಕೆ ಹಾಗೂ ಪ್ರಭಾವಕ್ಕೆ ಸಂಪೂರ್ಣ ಧಕ್ಕೆ ಬಂದು ಕೆಲವು ಅರಸರ ರಾಜ್ಯಗಳು ನಶಿಸಿಹೋಗಿ, ಇನ್ನು ಕೆಲವರ ಪ್ರಭಾವ ಹಳ್ಳಿಯಲ್ಲಿ ಕ್ರಮೇಣ ಅಳಿಯುತ್ತಾ ಬಂತು. ಆಂಗ್ಲರು ತಮ್ಮ ಆಡಳಿತ ಕಾಲದಲ್ಲಿ ಜಿಲ್ಲೆಯಲ್ಲಿ ಅಲ್ಪಸ್ವಲ್ಪ ಹರಿಜನ ಗಿರಿಜನರನ್ನು ಸುಧಾರಿಸಲು ಪ್ರಯತ್ನಿಸಿದರೂ, ಸಾಮೂಹಿಕವಾಗಿ ಸಮಾಜದಲ್ಲಿರುವ ಅಸ್ಪೃಶ್ಯತೆಯನ್ನಾಗಲೀ, ಅವರ ಆರ್ಥಿಕ ಸ್ಥಿತಿಯನ್ನಾಗಲೀ ಅಥವಾ ಅವರಲ್ಲಿರುವ ಅನಕ್ಷರತೆಯನ್ನಾಗಲೀ ಸುಧಾರಿಸಲು ಕಾರ್ಯಕ್ರಮ ಕೈಗೊಂಡದ್ದಿಲ್ಲ. ಬ್ರಿಟಿಷರು ಹರಿಜನ ಗಿರಿಜನರನ್ನು ದಲಿತ (Depressed classes) ವರ್ಗದವರು ಎಂದು ಸಂಬೋಧಿಸಿ ಸರಕಾರೀ ವ್ಯವಹಾರ ಪತ್ರದಲ್ಲಿ ವ್ಯವಹಾರ ಮಾಡುತ್ತಿದ್ದರು. ಜಿಲ್ಲೆಯಲ್ಲಿ ಬ್ರಿಟಿಷರ ಕಾಲದಲ್ಲಿ ದಲಿತ ವರ್ಗದವರಿಗೆ ಸರಕಾರಿ ಉದ್ಯೋಗ ನೀಡುವಲ್ಲಿ ಪ್ರಾಶಸ್ತ್ಯ, ಸೈನ್ಯದಲ್ಲಿ ಸೇರಿಸುವಿಕೆ, ಅಲ್ಪಸ್ವಲ್ಪ ದರಖಾಸ್ತು ಕೊಡುವ ಕಾರ್ಯಕ್ರಮ ಮತ್ತು ಬ್ರಿಟಿಷ್ ಸರಕಾರ ಮಾಡಿದರೂ, ದಲಿತರ ಮೇಲ್ಮೆಗಾಗಿ ಹಾಗೂ ಸರ್ವತೋಮುಖ ಏಳ್ಗೆಗಾಗಿ ಯಾವ ಒಂದು ನಿಯಮಬದ್ಧ ಯೋಜನೆಯನ್ನೂ ಜಿಲ್ಲೆಯಲ್ಲಿ ಕೈಗೊಂಡದ್ದಿಲ್ಲ. ಬ್ರಿಟಿಷರ ಕಾಲದಲ್ಲಿ ಹರಿಜನ ಗಿರಿಜನರನ್ನು ಇನ್ನೊಂದು ರೀತಿಯಲ್ಲಿ ಮಿಶನರಿಗಳ ಸಹಾಯದಿಂದ ಮತಾಂತರಿಸುವಲ್ಲಿ ಪ್ರೋತ್ಸಾಹದಾಯಕ ಕೆಲಸಗಳು ನಡೆಯುತ್ತಿದ್ದವು. ಆದರೂ ಹರಿಜನ ಗಿರಿಜನರ ಸಾಮಾಜಿಕ ಸ್ಥಿತಿಗತಿ, ಅಸ್ಪೃಶ್ಯತೆ ನಿವಾರಣೆ ಶೇಕಡಾ ಒಂದು ಪಾಲು ಕೂಡಾ ಈ ಕಾಲದಲ್ಲಿ ಸುಧಾರಿತವಾಗಲಿಲ್ಲ. ಇದಕ್ಕೆ ಕಾರಣ ಸಮಾಜದಲ್ಲಿ ಅಂದಿನ ಜಾತೀಯತೆಯ ಪ್ರಭಾವವೇ ಬಹು ಮುಖ್ಯವಾಗಿತ್ತು. ಅದರಿಂದಾಗಿ ಅತೀ ಪೂರ್ವದಲ್ಲಿಯೂ ಅನಂತರ ಬ್ರಿಟಿಷರ ಕಾಲದಲ್ಲಿಯೂ ಹರಿಜನ ಗಿರಿಜನರ ಸಾಮಾಜಿಕ ಸ್ಥಿತಿಗತಿ ಅತ್ಯಂತ

ಶೋಚನೀಯವಾಗಿತ್ತು ; ಮಾತ್ರವಲ್ಲ, ಕರುಣಾಜನಕವಾಗಿತ್ತು. ಪ್ರತಿಯೊಬ್ಬ ಹರಿಜನ ಗಿರಿಜನ ವ್ಯಕ್ತಿಯೂ ತಾನು ಹುಟ್ಟಿಬಂದ ಜಾತಿಯ ಹೀನಸ್ಥಿತಿಗಾಗಿ ಕಣ್ಣೀರಿಟ್ಟು ಪರಿತಪಿಸುವ ಕಾಲ ಅದಾಗಿತ್ತು. ಸಮಾಜದಲ್ಲಿ ಅವರು ಸಾಮಾಜಿಕ ಅನ್ಯಾಯಕ್ಕೆ ಒಳಗಾಗಿ ಸಮಾಜದ ಭ್ರಷ್ಟರಾಗಿ ಅಸ್ಪೃಶ್ಯತೆಯ ಅಂಟುರೋಗದಿಂದ ಜೀವನವೇ ಬೇಸತ್ತು, ಹಳ್ಳಿ, ಗುಡ್ಡಗಾಡುಗಳಲ್ಲಿ ಬೇರೆಯೇ ಒಂದು ಕಡೆ ತಮ್ಮ ಗುಡಿಸಲು ಕಟ್ಟಿ ವಾಸ ಮಾಡಿಕೊಂಡಿದ್ದರು. ಮಾತ್ರವಲ್ಲ, ಜಿಲ್ಲೆಯಿಂದ ಅತೀ ದೂರದ ಇತರ ಜಿಲ್ಲೆಯ ಘಟ್ಟದ ಕಾಫಿ, ಚಾ, ಏಲಕ್ಕಿ ತೋಟಗಳ ದಲ್ಲಾಳಿಗಳ ಬಲೆಗೆ ಸಿಕ್ಕಿ ಜೀವಮಾನವಿಡೀ ಒಂದು ರೀತಿಯ ಗುಲಾಮರಂತೆ, ಘಟ್ಟಗಳ ತೋಟಗಳಲ್ಲಿ ಒಂದು ಶರ್ತಕ್ಕೆ ಒಳಗಾಗಿ ದುಡಿಯುವ ರೂಢಿ ಜಿಲ್ಲೆಯ ಹರಿಜನ ಗಿರಿಜನ ವರ್ಗದವರಲ್ಲಿ ಅನಾದಿ ಕಾಲದಿಂದ ಬಳಕೆಯಲ್ಲಿತ್ತು. (ಪಿ. ಕಮಲಾಕ್ಷ – ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ ಪುಟ ೭–೧೦ – ೧೯೯೪)

*****

ಅಧ್ಯಾಯ ೨

ಬ್ರಿಟಿಷ್ ವಸಾಹತು ಮತ್ತು ಬುಡಕಟ್ಟು ಸಂಸ್ಕೃತಿ

೨.೧ ದಕ್ಷಿಣ ಕನ್ನಡದ ಬುಡಕಟ್ಟು ಸಂಸ್ಕೃತಿ

೨.೨ ಮಲೆಕುಡಿಯರು ಮತ್ತು ಇತರ ಬುಡಕಟ್ಟುಗಳ ಸಾಂಸ್ಕೃತಿಕ ಕೊಳ್ಳು ಕೊಡುಗೆಗಳು

ಅಧ್ಯಾಯ ೨ :

ಬ್ರಿಟಿಷ್ ವಸಾಹತು ಮತ್ತು ಬುಡಕಟ್ಟು ಸಂಸ್ಕೃತಿ

ದ. ಕ. ಜಿಲ್ಲೆಯಲ್ಲಿ ಇಂಗ್ಲೀಷರ ಆಡಳಿತ :

ಸುಮಾರು ೧೬ನೇ ಶತಮಾನದಿಂದ ಯುರೋಪಿಯನ್ ವ್ಯಾಪಾರೀ ಚಟುವಟಿಕೆಗಳಿಂದ ತುಂಬಿದ್ದ ಈ ಜಿಲ್ಲೆಯ ಬಂದರುಗಳಲ್ಲಿ ಇಂಗ್ಲೀಷರೂ ಕಾಳು ಮೆಣಸು, ಅಕ್ಕಿ ಮತ್ತಿತರ ಲಾಭದಾಯಕ ವ್ಯಾಪಾರ ಸರಕುಗಳಿಗಾಗಿ ಉಳಿದವರೊಡನೆ ಪೈಪೋಟಿ ನಡೆಸಿದ್ದರು. ಒಂದೆಡೆ ಕೆನರಾ ಮತ್ತು ಮಲಬಾರ್ ಕರಾವಳಿಗಳು ತಮ್ಮ ವ್ಯಾಪಾರದ ಕೇಂದ್ರಗಳಾದ ಬಂದರುಗಳಿಂದ ಮತ್ತು ರಫ್ತು ಮೌಲ್ಯದ ವಿಪುಲ ಸಂಪನ್ಮೂಲಗಳನ್ನು ಹೊಂದಿದ ಹಿನ್ನಾಡುಗಳಿಂದ ಆಕರ್ಷಿಸಿದರೆ, ಇನ್ನೊಂದೆಡೆ ಮುಂಬೈ ಪ್ರಾಂತ್ಯದ ದಕ್ಷಿಣ ಗಡಿಯನ್ನು ಮದ್ರಾಸ್ ಪ್ರಾಂತ್ಯದ ಉತ್ತರ ಗಡಿಗೆ ಜೋಡಿಸಬಹುದಾದ ರಾಜಕೀಯ ಸಾಧ್ಯತೆಯ ಅಕರ್ಷಣೆ– ಹೀಗೆ, ವಸಾಹತು ಶಾಹೀ ವ್ಯವಸ್ಥೆಯೊಂದರ ಅವಳಿ ಉದ್ದೇಶಗಳನ್ನು ಪೂರೈಸುವ ತಾಣವಾಗಿ ಈ ಕರಾವಳಿ ಜಿಲ್ಲೆಗಳು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ಗಮನ ಸೆಳೆದಿದ್ದುವು. ೧೭೩೭ರಲ್ಲಿ ಮಂಗಳೂರನ್ನು ಮೊದಲಾಗಿ ಪ್ರವೇಶಿಸಿದ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯು ಮಂಗಳೂರಿನಲ್ಲಿದ್ದ ಬಿದನೂರಿನ ಗವರ್ನರ್ ಸೂರಪ್ಪಯ್ಯನೊಂದಿಗೆ ಒಪ್ಪಂದವನ್ನು ಮಾಡಿಕೊಂಡಿತು. ಅದರನ್ವಯ ಏಲಕ್ಕಿ ಮತ್ತು ಕಾಳು ಮೆಣಸಿನ ವ್ಯಾಪಾರಕ್ಕೆ ಸಂಬಂಧಿಸಿದಂತೆ ಬಿದನೂರಿನ ಆಳ್ವಿಕೆಯಲ್ಲಿದ್ದ ಕೊಲತ್ತಿರಿಯಲ್ಲಿ ಅವರಿಗೆ ಕೆಲವು ವ್ಯಾಪಾರದ ಸವಲತ್ತುಗಳು ದೊರೆತವು. ಬಿದನೂರು ಮತ್ತು ಇಂಗ್ಲೀಷ್ ಕಂಪನಿಯ ನಡುವಿನ ೧೭೫೧ರ ಇನ್ನೊಂದು ಒಪ್ಪಂದದಂತೆ ಕೇರಳದ ಕೊಲತ್ತನಾಡಿನಲ್ಲಿ ವ್ಯಾಪಾರದ ಸವಲತ್ತುಗಳು ಮತ್ತು ಹೊನ್ನಾವರದಲ್ಲಿ ವ್ಯಾಪಾರದ ಕೇಂದ್ರವನ್ನು ಸ್ಥಾಪಿಸಲು ಅನುಮತಿಯೂ ದೊರೆಯಿತು. ಅದರೆ ಕಾಳು ಮೆಣಸಿನ ವ್ಯಾಪಾರದ ಏಕಸ್ವಾಮ್ಯಕ್ಕಾಗಿ ಬಿದನೂರಿನ ರಾಣಿಯೊಂದಿಗೆ ಒಪ್ಪಂದ ರೂಪಿಸುವ ೧೭೬೧ರ ಅವರ ಯೋಜನೆ ವಿಫಲವಾಯಿತು. ಈ ಹಿನ್ನಲೆಯಲ್ಲೇ ೧೭೬೩ರಲ್ಲಿ ಬಿದನೂರನ್ನು ವಶಪಡಿಸಿಕೊಂಡದ್ದು ಇಂಗ್ಲಿಷರಿಗೆ ಅಸಹನೀಯವಾಗಿತ್ತು. ಎಕೆಂದರೆ ಇದರಿಂದಾಗಿ ಪಶ್ವಿಮ ಕರಾವಳಿಯ ಸಮುದ್ರ ವ್ಯಾಪರಕ್ಕೆ ಬೀಗದ ಕೈಗಳಂತಿದ್ದ ಹೊನ್ನಾವರ ಮತ್ತು ಮಂಗಳೂರು ಬಂದರುಗಳು ಹೈದರನ ವಶವಾದುವು. ಮಾತ್ರವಲ್ಲ, ಮಂಗಳೂರನ್ನು ಆತನು ನೌಕಾನೆಲೆಯಾಗಿ ಮಾಡಿಕೊಂಡಲ್ಲಿ ಅರಬ್ಬೀ ಸಮುದ್ರದಲ್ಲಿನ ನೌಕಯಾನಕ್ಕೆ ಅದರಿಂದ ತೊಂದರೆಯಾಗುತ್ತಿತ್ತು. ಅಲ್ಲದೆ, ಆತನ ಜತೆ ಸಂಘರ್ಷಕ್ಕಿಳಿದರೆ ಆತ ಫ್ರೆಂಚರ ಸಹಾಯ ಕೋರುವ ಸಂಭವವೂ ಇತ್ತು. ಈ ಎಲ್ಲಾ ಕಾರಣಗಳಿಂದಾಗಿ, ೧೭೩೬ರಲ್ಲೇ ಹೈದರನ ಜತೆಗೆ ಒಪ್ಪಂದ ಮಾಡಿಕೊಂಡ ಇಂಗ್ಲೀಷರು ಕೆಲವು ವ್ಯಾಪಾರಿ ಸವಲತ್ತುಗಳನ್ನು ಪಡೆದುಕೊಂಡು ಅದಕ್ಕೆ ಪ್ರತಿಯಾಗಿ ಹೈದರನು ಬಯಸಿದ ಶಸ್ತ್ರಾಸ್ತ್ರ ಪೂರೈಸಲು ಒಪ್ಪಿದರು. ಹೈದರಾಲಿಯು ತನ್ನ ರಾಜ್ಯದ

ಒಳನಾಡು ಹಾಗೂ ಸಮುದ್ರ ವ್ಯಾಪಾರಗಳನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳು ಬ್ರಿಟಿಷರ ಅಸಹನೆ ಮತ್ತು ಅತಂಕವನ್ನು ಹೆಚ್ಚಿಸಿದವು. ಮುಂದೆ ಮೈಸೂರು ರಾಜ್ಯ ಹಾಗೂ ಇಂಗ್ಲೀಷರ ನಡುವೆ ನಡೆದ ನಾಲ್ಕು ಯುದ್ಧಗಳ ಪೈಕಿ ಮೊದಲ ಮೂರರಲ್ಲೂ ಕರಾವಳಿ ಕರ್ನಾಟಕದ ಸಮುದ್ರ ವ್ಯಾಪಾರದಿಂದ ಒದಗಬಹುದಾದ ಲಾಭದ ಆಶೆಯೂ ಒಂದು ಪ್ರಮುಖ ಕಾರಣವಾಗಿತ್ತೆಂದರೆ ತಪ್ಪಾಗಲಾರದು. ಹಾಗಾಗಿಯೇ ಯದ್ಧಾನಂತರದ ಒಪ್ಪಂದಗಳಲ್ಲೂ ಕೆನರಾ ಮತ್ತು ಮಲಬಾರ್ ಕರಾವಳಿಯಲ್ಲಿ ಹೆಚ್ಚಿನ ವ್ಯಾಪಾರ ಸವಲತ್ತುಗಳನ್ನು ಇಂಗ್ಲೀಷರ ಮುಂಬೈ ಪ್ರಾಂತ್ಯ ಸರಕಾರಕ್ಕೆ ನೀಡಬೇಕೆಂಬ ಷರತ್ತುಗಳು ಇದ್ದೇ ಇರುತ್ತಿದ್ದುವು. ಎರಡನೇ ಆಂಗ್ಲೋ ಮೈಸೂರು ಯುದ್ಧದ ಬಳಿಕ ಇಂಗ್ಲಿಷರ ವಿರುದ್ಧ ಸೇಡು ತೀರಿಸಲೆಂಬಂತೆ ಟಿಪ್ಪೂ ಸುಲ್ತಾನ ಈ ಕರಾವಳಿಯಲ್ಲಿ ಕಾಳುಮೆಣಸಿನ ಬಳ್ಳಿಗಳನ್ನು ಮತ್ತು ಶ್ರೀಗಂಧದ ಮರಗಳನ್ನು ಕಡಿಸಿದ್ದು ಮತ್ತು ಕಾಳುಮೆಣಸು, ಶ್ರೀಗಂಧ ಮತ್ತು ಏಲಕ್ಕಿ ರಫ್ತಿನ ಮೇಲೆ ನಿಷೇಧ ಹೇರಿದ್ದು, ಇಂಗ್ಲಿಷರ ವ್ಯಾಪಾರವನ್ನು ಹಾಳುಗೆಡವಿತ್ತು. ಜತೆಗೆ ಕೊಲ್ಲಿ ರಾಷ್ಟ್ರಗಳೊಡನೆ ವ್ಯಾಪಾರ ಸಂಬಂಧವನ್ನು ಹೆಚ್ಚಿಸಲು ಆತ ಕೈಗೊಂಡ ಕ್ರಮಗಳು ಇಂಗ್ಲಿಷರಿಗೆ ಅಸಹನೀಯವಾಗಿದ್ದುವು. ಟಿಪ್ಪೂ ಸುಲ್ತಾನನ ಈ ಎಲ್ಲಾ ಕ್ರಮಗಳು ಇನ್ನೊಂದು ಆಂಗ್ಲೋ ಮೈಸೂರು ಯುದ್ಧಕ್ಕೆ ಕಾರಣವಾದುವು.

೧೭೯೯ರಲ್ಲಿ ನಾಲ್ಕನೆಯ ಆಂಗ್ಲೋ–ಮೈಸೂರು ಯುದ್ಧದಲ್ಲಿ ಟಿಪ್ಪೂವಿನ ಪತನಾನಂತರ, ಬ್ರಿಟೀಷರು ಬಯಸಿದಂತೆ ಈ ಕರಾವಳಿ ಪ್ರದೇಶವಿಡೀ ಬ್ರಿಟಿಷರ ಕೈವಶವಾಗಿ, ಇಲ್ಲಿನ ಒಳನಾಡು ಹಾಗೂ ಸಮುದ್ರ ವ್ಯಾಪಾರಗಳು ಬ್ರಿಟಿಷರ ನಿಯಂತ್ರಣಕ್ಕೆ ಒಳಪಟ್ಟವು. ಒಳನಾಡು ಮತ್ತು ಸಮುದ್ರ ವ್ಯಾಪಾರವನ್ನು ನಿಯಂತ್ರಿಸಲು ಹೊಸ ಸರಕಾರ ಹೊಸ ಕಾನೂನುಗಳನ್ನು ರೂಪಿಸಿತು. ವ್ಯಾಪಾರದ ಏರುಪೇರುಗಳನ್ನು, ಲಾಭದ ಸಾಧ್ಯಾ–ಸಾಧ್ಯತೆಗಳನ್ನು ಗುರುತಿಸಿ ಸರಕುಗಳ ಲಭ್ಯತೆಗೆ ಅನುಗುಣವಾಗಿ, ಅವುಗಳ ಪೂರೈಕೆಯನ್ನು ಹೆಚ್ಚಿಸಲು ನೈಸರ್ಗಿಕವಾಗಿ ಸುಸಜ್ಜಿತವಾದ ಬಂದರುಗಳನ್ನಷ್ಟೇ ಆಯ್ದುಕೊಂಡಿತು. ಉದಾ: ಹತ್ತಿ ರಫ್ತಿಗೆ ಕುಮಟಾ, ಅಕ್ಕಿ ಉಪ್ಪು, ತೆಂಗಿನಕಾಯಿ, ತೆಂಗಿನನಾರು ಮುಂತಾದವುಗಳಿಗೆ ಗಂಗೊಳ್ಳಿ, ಅಕ್ಕಿ, ಹತ್ತಿಬಟ್ಟೆ ಮತ್ತು ಕಾಫಿಗೆ ಮಂಗಳೂರು ಬಂದರು ಇತ್ಯಾದಿ. ವಸಾಹತುಶಾಹೀ ಸರಕಾರವೊಂದು ತನ್ನ ಉದ್ದೇಶಗಳಿಗಾಗಿ ವಸಾಹತುಗಳನ್ನು ಹೇಗೆ ಲಾಭದಾಯಕವಾಗಿ ಬಳಸಿಕೊಳ್ಳುತ್ತದೆಯೋ, ಅದೇ ರೀತಿಯಲ್ಲಿ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪೆನಿಯೂ ತನ್ನ ಲಾಭಕ್ಕೋಸ್ಕರವೇ ಇಲ್ಲಿನ ಒಳನಾಡು ಹಾಗೂ ಸಮುದ್ರ ವ್ಯಾಪಾರವನ್ನು ಮತ್ತೆ ಸಂಪನ್ಮೂಲಗಳನ್ನು ವಳಸಿಕೊಂಡಿತು.

೧೯ನೇ ಶತಮಾನದ ಈ ಜಿಲ್ಲೆಯ ವಿದೇಶ ವ್ಯಾಪಾರದಲ್ಲಿ ದೇಶೀಯ ಮತ್ತು ವಿದೇಶೀ ವ್ಯಾಪಾರಿಗಳು ಪಾಲ್ಗೊಂಡಿದ್ದರು. ದೇಶೀಯ ವ್ಯಾಪಾರಿಗಳಲ್ಲಿ ಪಾರ್ಸಿಗಳು, ಗುಜರಾತೀ ವ್ಯಾಪಾರಿಗಳು, ಮಾಪಿಳ್ಳೆಗಳು, ಬಣಜಿಗರು, ಪನ್ನೆಕಾರರು, ಬಂಜಾರರು, ನವಾಯತರು, ಪೂರ್ವಕರಾವಳಿಯ ಕೋಮಟಿಗಳು, ಚೆಟ್ಟಿಗಳಲ್ಲದೆ, ಸ್ಥಳೀಯ ಕೊಂಕಣಿಗರೂ ಪ್ರಮುಖರಾಗಿದ್ದರು. ವಿದೇಶೀ ವ್ಯಾಪಾರಗಳಲ್ಲಿ ಅರಬರು, ಪರ್ಶಿಯನ್ನರು, ಪೋರ್ಚುಗೀಸ್, ಡಚ್, ಫ್ರಂಚ್ ಹಾಗೂ ಇಂಗ್ಲಿಷ್–ಈಸ್ಟ್ ಇಂಡಿಯಾ

ಕಂಪನಿಯ ವ್ಯಾಪಾರಿಗಳು ಮತ್ತು ಖಾಸಗಿ ವ್ಯಾಪಾರಿಗಳು. ೧೮೫೦ರ ದಶಕದಲ್ಲಿ ಮಂಗಳೂರಿನಲ್ಲಿ ಬಾಸೆಲ್ ಮಿಶನ್ನಿನ ವ್ಯಾಪಾರ ಸಂಸ್ಥೆಯೊಂದು ಆರಂಭವಾದ ಬಳಿಕ ಅದು ಯುರೋಪಿನ ಸರಕುಗಳನ್ನು- ಮುಖ್ಯವಾಗಿ ದೀಪಗಳು, ಚರ್ಮದ ವಸ್ತುಗಳು, ಜರ್ಮನ್ ಸಿಲ್ವರ್ ವಸ್ತುಗಳು, ಚಾಕು, ಗಾಜಿನ ವಸ್ತುಗಳು, ಗಾಜಿನ ಹಂಚುಗಳೇ ಮುಂತಾದವುಗಳನ್ನು ಯುರೋಪಿನಿಂದ ಆಮದು ಮಾಡಿಕೊಂಡು ಇಲ್ಲಿ ಮಾರುತ್ತಿದ್ದರು.

ಸುಮಾರು ೧೬ನೇ ಶತಮಾನದಿಂದ ಈ ಜಿಲ್ಲೆಯಲ್ಲಿ ಚುರುಕುಗೊಂಡ ವಿದೇಶಿ ವ್ಯಾಪಾರದಲ್ಲಿ ಪೋರ್ಚುಗೀಸ್, ಡಚ್, ಫ್ರೆಂಚ್ ಮತ್ತು ಇಂಗ್ಲಿಷರ ಪಾತ್ರ ನಿರ್ಣಾಯಕವಾಗಿದ್ದರೂ, ಪ್ರತಿಯೊಬ್ಬರ ವೈಖರಿಯೂ ಭಿನ್ನರೀತಿಯದ್ದಾಗಿತ್ತು. ತಮ್ಮ ವೈರಿಗಳಾದ ಅರಬರು, ಕಲ್ಲಿಕೋಟೆಯ ವ್ಯಾಪಾರಿಗಳು, ಡಚ್ ಹಾಗೂ ಇಂಗ್ಲೀಷರನ್ನು ಇಲ್ಲಿನ ವ್ಯಾಪಾರದಿಂದ ಹೊರಗಿಡಲು ಅವರು ಸ್ಥಳೀಯ ನಾಯಕರು ಮತ್ತು ವ್ಯಾಪಾರಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು. ಇದಕ್ಕೆ ಸಹಕರಿಸದಿದ್ದಲ್ಲಿ, ಅಲ್ಲಿನ ವ್ಯಾಪಾರಕ್ಕೆ ಅಡ್ಡಿಯುಂಟುಮಾಡುತ್ತಿದ್ದರು. ೧೫೨೫ರಲ್ಲಿ ಕಲ್ಲಿಕೋಟೆಯ ವ್ಯಾಪಾರಿಗಳ ಜತೆ ವ್ಯವಹರಿಸಿದನೆಂಬ ಕಾರಣಕ್ಕಾಗಿ ಮಂಗಳೂರಿನ ವ್ಯಾಪಾರಿಗೆ ಕಿರುಕುಳ ನೀಡಿದ್ದಲ್ಲದೆ, ಪೋರ್ಚುಗೀಸರು ಮಂಗಳೂರನ್ನು ಹಾಳುಗೆಡವಿದರು. ೧೫೫೮ರಲ್ಲಿ ಮಂಗಳೂರಲ್ಲಿ ಮತ್ತೆ ಇದೇ ಪುನರಾವರ್ತನೆಯಾಯಿತು. ಕೆಲವೊಮ್ಮೆ ವ್ಯಾಪಾರಿಗಳು ಪೋರ್ಚುಗೀಸರ ದಾರ್ಷ್ಟ್ಯದ ವಸೂಲಾತಿಯ ವಿರುದ್ಧ ಪ್ರತಿಭಟಿಸಿದರು. ಆದರೂ ಪೋರ್ಚುಗೀಸರ ಸಂಘರ್ಷಗಳ ಅವಕಾಶವನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡೇ ಅವರು ತಮ್ಮ ವ್ಯಾಪಾರವನ್ನು ಇಲ್ಲಿ ಬೆಳೆಸಿದರು. ಫ್ರೆಂಚರು ತಮ್ಮ ಅನುಕೂಲಕ್ಕೆ ತಕ್ಕಷ್ಟೇ ಸೀಮಿತ ವ್ಯಾಪಾರದಲ್ಲಿ ತೊಡಗಿದ್ದರು. ಇಂಗ್ಲಿಷರು ಇವರೆಲ್ಲರಿಗಿಂತ ಭಿನ್ನವಾದ 'ಲಾಭದಾಯಕ ವ್ಯಾಪಾರಕ್ಕಾಗಿ ಅಧಿಕಾರ, ಅಧಿಕಾರದಿಂದ ಹೆಚ್ಚು ಲಾಭದಾಯಕ ವ್ಯಾಪಾರ ಎಂಬ ಧೋರಣೆಯನ್ನು ತಳೆದಿದ್ದರು. ೧೯ನೇ ಶತಮಾನ ಪೂರ್ವಾರ್ಧದಲ್ಲಿ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯು ಇನ್ನಿತರ ಐರೋಪ್ಯರ ವ್ಯಾಪಾರದ ಮೇಲೆ ನಿರ್ಬಂಧಗಳನ್ನು ಹೇರಿದ್ದರ ಪರಿಣಾಮವಾಗಿ ಡಚ್ ಮತ್ತು ಫ್ರೆಂಚರ ವ್ಯಾಪಾರ ಚಟುವಟಿಕೆಗಳು ಕಡಿಮೆಯಾದವು. ಪೋರ್ಚುಗೀಸರು ಗೋವಾದಿಂದ ಪೂರೈಸುತ್ತಿದ್ದ ಶ್ರೇಷ್ಠ ವರ್ಗದ ಉಪ್ಪು, ಬ್ರಿಟಿಷರು ಇಲ್ಲಿ ಅನುಷ್ಠಾನಿಸಿದ ಉಪ್ಪಿನ ಏಕಸ್ವಾಮ್ಯ ನೀತಿಗೆ ಅಗತ್ಯವಿದ್ದುದರಿಂದ ಪೋರ್ಚುಗೀಸರು ಇಲ್ಲಿಗೆ ಉಪ್ಪನ್ನು ತಂದು, ಪ್ರತಿಯಾಗಿ ಇಲ್ಲಿಂದ ಅಕ್ಕಿಯನ್ನು ಒಯ್ಯುತ್ತಿದ್ದರು. ಆದರೂ ಬ್ರಿಟಿಷರ ನಿರ್ಬಂಧಗಳಿಂದಾಗಿ ಅದು ಪೂರ್ಣಪ್ರಮಾಣದ ವ್ಯಾಪಾರವಾಗಿರಲಿಲ್ಲ. ಹೀಗಾಗಿ ಈ ಜಿಲ್ಲೆಯಲ್ಲಿ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ಹಾಗೂ ಇಂಗ್ಲೆಂಡಿನ ಖಾಸಗಿ ವ್ಯಾಪಾರಿಗಳ ವ್ಯಾಪಾರ ಚಟುವಟಿಕೆಗಳಷ್ಟೇ ಮುಂದುವರಿದುವು.

ಬ್ರಿಟಿಷರ ಆಗಮನದ ಪೂರ್ವದಲ್ಲಿ ಮಲೆಕುಡಿಯರು ಸ್ವೇಚ್ಛೆಯಾಗಿ ಅಲೆದಾಡುತ್ತಾ ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸುತ್ತ, ಸಾಧ್ಯವಾದಲ್ಲಿ ಕುಮರಿ ಬೇಸಾಯ ಮುಂತಾದ ಒಂದಿಷ್ಟು ಬೆಳೆಗಳನ್ನು ಮಾಡುತ್ತಾ ತಮ್ಮ ಪಾಡಿಗೆ ತಾವು ಇದ್ದರು. ಆದರೆ ಈ ಬ್ರಿಟಿಷ್ ಸರಕಾರ ಬಂದ ನಂತರ ಮಲೆಕುಡಿಯರು ಎರಡು ರೀತಿಯ ಜನರಿಂದ ತೊಂದರೆಗಳನ್ನು ಅನುಭವಿಸುತ್ತಾರೆ.

೧. ಬ್ರಿಟಿಷರಿಂದ

೨. ಬ್ರಿಟಿಷರ ಆಡಳಿತಕ್ಕೆ ಸಹಕಾರವನ್ನು ನೀಡಿದ ವಿದ್ಯಾವಂತರೆನಿಸಿಕೊಂಡ ನಮ್ಮವರೇ ಆದ ಮೇಲ್ವರ್ಗದವರಿಂದ

ಈ ಸಂದರ್ಭದಲ್ಲಿ ಬ್ರಿಟಿಷರು ರಾಜಕೀಯ ಮತ್ತು ಸಾಂಬಾರ ಪದಾರ್ಥಗಳ ರಫ್ತಿನ ಉದ್ದೇಶದಿಂದ ಕಾಡುಗಳನ್ನು ಕಾಫಿ, ಟೀ, ಏಲಕ್ಕಿ ಮತ್ತು ರಬ್ಬರ್ ಮುಂತಾದ ವಾಣಿಜ್ಯ ಬೆಳೆಗಳ ತೋಟಗಳಾಗಿ ಪರಿವರ್ತಿಸಿದರು. ಇಂತಹ ತೋಟಗಳಿಗೆ ನಮ್ಮವರೇ ಅಂದರೆ ವಿದ್ಯಾವಂತರೆನಿಸಿಕೊಂಡ, ಮೇಲ್ವರ್ಗದವರು, ಬಂಡವಾಳಶಾಹಿ ವ್ಯಕ್ತಿಗಳು ಮತ್ತು ಪುರೋಹಿತಶಾಹಿ ವ್ಯಕ್ತಿಗಳು ಬ್ರಿಟೀಷರ ಆಡಳಿತಕ್ಕೆ ಸಹಕಾರವನ್ನು ನೀಡಿ, ಇವರು ಆ ತೋಟಗಳಿಗೆ ಮಾಲಿಕರಾದರು. ಇಂತಹ ತೋಟಗಳ ಮಧ್ಯೆ ವಾಸವಾಗಿರುವ ಮಲೆಕುಡಿಯರ ಮೇಲೆ ನಮ್ಮವರು 'ಯಾಜಮಾನ್ಯ'ವನ್ನು ಸ್ಥಾಪಿಸಿದರು.

ಬ್ರಿಟಿಷರ ಆಡಳಿತದಿಂದಾಗಿ ಮಲೆಕುಡಿಯರ ಮೇಲಾಗಿರುವ ಪರಿಣಾಮವನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ಮಲೆಕುಡಿಯರಿಗೆ ವಿದ್ಯಾಭ್ಯಾಸಕ್ಕಾಗಿ ಪ್ರೋತ್ಸಾಹ ನೀಡುತ್ತಿರಲಿಲ್ಲ.

೨. ಅರಣ್ಯ ಸಂಪತ್ತುಗಳನ್ನು ಲೂಟಿ ಮಾಡಿ ಮಲೆಕುಡಿಯರಿಂದ ಕಡಿಮೆ ಬೆಲೆಗೆ ಪಡೆದುಕೊಂಡು ತಮ್ಮ ದೇಶಗಳಿಗೆ ರಫ್ತು ಮಾಡುತ್ತಿದ್ದರು.

೩. ಕಾಡುಗಳನ್ನು ನಾಶಮಾಡುವುದರ ಮೂಲಕ ಕಾಡುಗಳಲ್ಲಿ ಸಿಗುತ್ತಿರುವ ಕಾಡುತ್ಪತ್ತಿಗಳು ಸಿಗದೇ ಮಲೆಕುಡಿಯರ ಆರ್ಥಿಕ ಸ್ಥಿತಿ ಹದಗೆಟ್ಟಿತು.

೪. ತಮ್ಮ ವಾಣಿಜ್ಯ ಬೆಳೆಯ ತೋಟಗಳಲ್ಲಿ ಜೀತದಾಳುಗಳನ್ನಾಗಿ ದುಡಿಸಿಕೊಳ್ಳಲು ಆರಂಭಿಸಿದರು.

೫. ಮಲೆಕುಡಿಯರ ಮೇಲೆ ಇಲ್ಲದ ಕಾನೂನುಗಳನ್ನು ಹೇರಲ್ಪಟ್ಟರು.

೬. ಮಲೆಕುಡಿಯ ಹೆಂಗಸರನ್ನು ಲೈಂಗಿಕತೆಗೆ ಬಳಸಿಕೊಂಡು ಅವರನ್ನು ಶೋಷಣೆ ಮಾಡುತ್ತಿದ್ದರು.

೭. ತಮ್ಮ ಜಮೀನ್ದಾರಿಯ ಮೂಲಕ ಮಲೆಕುಡಿಯರ ಮೇಲೆ ಗುಲಾಮಗಿರಿಯನ್ನು ಸ್ಥಾಪಿಸಿದರು.

೮. ಮತಾಂತರಕ್ಕೆ ಒಳಪಡಿಸಿರುವುದು.

ಬುಡಕಟ್ಟು ಸಂಸ್ಕೃತಿ :

ನಾಗರಿಕ ಸಮಾಜದಿಂದ ದೂರವಿದ್ದು, ದಟ್ಟವಾದ ಕಾಡುಗಳ ಮಧ್ಯದಲ್ಲಿ ವಾಸಿಸುವ ಜನರಿಗೆ ಸಾಮಾನ್ಯ ಅರ್ಥದಲ್ಲಿ ಬುಡಕಟ್ಟುಗಳೆಂದು ಕರೆಯುತ್ತಾರೆ. ಇವರು ಆಧುನಿಕ ನಾಗರಿಕತೆಯಿಂದ ಹಲವು ಶತಮಾನಗಳಷ್ಟು ಕಾಲ ಹಿಂದುಳಿದವರಾಗಿದ್ದಾರೆ. ಸಾಮಾನ್ಯವಾಗಿ ಒಬ್ಬ ನಾಯಕನ ಅಧೀನದಲ್ಲಿ ಒಟ್ಟಾಗಿ ಬಾಳುವ ನಾಗರಿಕತೆ ಪ್ರಭಾವವಿಲ್ಲದ ಜನರ ಅಥವಾ ಕುಟುಂಬಗಳ ತಂಡವನ್ನು ಬುಡಕಟ್ಟು ಎಂದು ಕರೆಯಬಹುದು. ಮಾನವ ಶಾಸ್ತ್ರಜ್ಞರು, ಸಮಾಜ ಶಾಸ್ತ್ರಜ್ಞರು ಮತ್ತು ಜಾನಪದ ವಿದ್ವಾಂಸರು ಬುಡಕಟ್ಟಿನ

ಅರ್ಥ ವಿವರಣೆಯನ್ನು ಕೊಟ್ಟಿದ್ದಾರೆ. ಸಮಾಜ ಶಾಸ್ತ್ರಜ್ಞ ಪ್ರೊ. ಜಿ. ಎಸ್. ಘುರ್ರೆಯವರು ಆದಿವಾಸಿಗಳನ್ನು 'ಹಿಂದುಳಿದ ಹಿಂದುಗಳು' ಎಂದು ಕರೆದರೆ, ಗಾಂಧೀಜಿಯವರು ಇವರನ್ನು 'ಗಿರಿಜನರು ಎಂದು ಕರೆದಿದ್ದಾರೆ. (ಡಾ. ಟಿ. ಎಂ. ಭಾಸ್ಕರ್, ಪುಟ – ೬೫– ೨೦೦೫)

ಊರು, ಗ್ರಾಮ, ಪಟ್ಟಣ, ನಗರ, ನಾಡು ಕಟ್ಟಿಕೊಂಡು ಜೀವಿಸುತ್ತ ಕಾಲ ಕಳೆಯುತ್ತಿರುವ ಇತ್ತೀಚಿನ ಮಾನವನ ಮೂಲ ಕುರಿತು ತಿಳಿದುಕೊಳ್ಳಬೇಕಾದರೆ ಬುಡಕಟ್ಟು ಜನಾಂಗಗಳ ಅಧ್ಯಯನ ಮಾಡುವುದು ಅವಶ್ಯವಾಗಿದೆ. ಇದರಿಂದ ನಮಗೆ ಮೂಲದ ಜನಾಂಗಗಳು ಹೇಗೆ ಜೀವಿಸುತ್ತಿದ್ದವು. ಅವರ ಭೌಗೋಳಿಕ ಪರಿಸರ ಮತ್ತು ಅವರ ಕೌಟುಂಬಿಕ ಬದುಕು ಹೇಗಿತ್ತೆಂಬುದು ತಿಳಿಯುತ್ತದೆ.

ಒಂದು ಕಡೆ ತಮ್ಮದೇ ಆಗಿರುವ ಜನ ಸಮುದಾಯವನ್ನು ಹೊಂದಿರುವ ಮತ್ತು ಪ್ರತ್ಯೇಕವಾದ ಉಪ ಭಾಷೆಯನ್ನು ಮಾತನಾಡುವ ಜನಗಳಿಗೆ ನಾವು ಬುಡಕಟ್ಟುಗಳೆಂದು ಕರೆಯುತ್ತೇವೆ. ಬುಡಕಟ್ಟುಗಳಿಗೆ ತಮ್ಮದೇ ಆಗಿರುವ ಒಂದೊಂದು ನಿರ್ದಿಷ್ಟ ಪ್ರದೇಶ ಇರುತ್ತದೆ. ಮೂಲತಃ ನಿಸರ್ಗದ ಮಡಿಲಿನಲ್ಲಿ ಜೀವನ ಸಾಗಿಸುವ ಇವರು ಸದಾ ನಿಸರ್ಗವನ್ನು ಪೂಜಿಸುತ್ತ ಬಂದವರಾಗಿದ್ದಾರೆ. ಸದಾ ನಿಸರ್ಗದ ಮಡಿಲಿನಲ್ಲಿ ಇರುವುದರಿಂದ ಅಲ್ಲಿ ಬೆಳೆಯುವ ಗೆಡ್ಡೆ – ಗೆಣಸುಗಳನ್ನು ಹೆಕ್ಕಿ ತೆಗೆದು ತಿಂದು ಜೀವಿಸುತ್ತಿದ್ದರು. ಅವುಗಳ ಕೊರತೆ ಕಂಡು ಬಂದಾಗ ಹುಡುಕಾಟ ಪ್ರಾರಂಭಿಸುತ್ತಿದ್ದರು. ಅದಕ್ಕಾಗಿ ಸಂಚಾರ ಜೀವನವನ್ನು ಆಹಾರದ ಹುಡುಕಾಟಕ್ಕಾಗಿ ಬುಡಕಟ್ಟುಗಳ ಅಲೆದಾಟ ಪ್ರಮುಖ ಕಾರಣವಾಗುತ್ತದೆ.

ಬುಡಕಟ್ಟು ಜನಾಂಗದ ಗುಣ ಲಕ್ಷಣಗಳು (The Tribal and its characteristics) :

ಬುಡಕಟ್ಟು ಜನರು ತಮ್ಮದೇ ಆದ ಅನನ್ಯತೆಯನ್ನು ಹೊಂದಿದ್ದು, ಇತರ ಜಾತಿಯ ಜನರಿಗಿಂತ, ಗ್ರಾಮವಾಸಿಗಳಿಗಿಂತ ಮತ್ತು ನಗರ ಸಂಸ್ಕೃತಿಯಿಂದ ಬೇರೆಯಾಗಿದ್ದಾರೆ.

ಒಂದು ನಿರ್ದಿಷ್ಟ ಭೂಪ್ರದೇಶ (Definite common Topography) :

ಬುಡಕಟ್ಟುಗಳು ಒಂದು ನಿರ್ದಿಷ್ಟ ಭೂ ಪ್ರದೇಶದಲ್ಲಿ ಜೀವಿಸಲು ಇಷ್ಟ ಪಡುತ್ತಾರೆ. ಅವರ ಜೊತೆಗೆ ಬೇರೆ ಬೇರೆ ಜಾತಿ, ಜನಾಂಗದವರು ಇರುವುದಕ್ಕೆ ಅವರ ಮನಸ್ಸು ಒಪ್ಪುವುದಿಲ್ಲ. ಜೊತೆಗೆ ಕಾಡು, ಗುಡ್ಡ, ಬೆಟ್ಟಗಳಲ್ಲಿ ವಾಸಿಸುವುದಕ್ಕೆ ಪ್ರಯತ್ನಿಸುತ್ತಾರೆ. ಬಹು ಹಿಂದಿನಿಂದಲೂ ಬಂದಿರುವಂತೆ ಬೆಟ್ಟ ಗುಡ್ಡಗಳಲ್ಲಿಯೇ ಜೀವಿಸುತ್ತಾರೆ. ಅನ್ಯ ಮತೀಯರ ಸಂಪರ್ಕ ಇಲ್ಲದಿರುವುದರಿಂದ ತಾವು ಒಂದು ಮೂಲಕ್ಕೆ ಸೇರಿದವರೆಂದು ಹೆಮ್ಮೆ ಪಟ್ಟುಕೊಳ್ಳುತ್ತಾರೆ. ಇದಕ್ಕೆ ಇನ್ನಷ್ಟು ಬಲ ಎಂಬಂತೆ ಬುಡಕಟ್ಟುಗಳು ತಮ್ಮದೇ ಆಗಿರುವ ಭಾಷೆಯನ್ನು ಮಾತನಾಡುವುದರಿಂದ ಬಹು ಬೇಗ ಒಂದು ಕಡೆಗೆ ಕೂಡಿಕೊಳ್ಳುತ್ತಾರೆ. ತಮ್ಮ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ.

ಸಾಮಾನ್ಯ ಭಾಷೆ (Common Language) :

ಬುಡಕಟ್ಟು ಸಮುದಾಯಗಳಿಗೆ ಅವರದೇ ಆದ ಒಂದೊಂದು ಭಾಷೆ ಇರುತ್ತದೆ. ಕೆಲವು ಬುಡಕಟ್ಟುಗಳಿಗೆ ಪ್ರತ್ಯೇಕ ಭಾಷೆ ಇರದೇ ಇರಬಹುದು. ತಮ್ಮ ಸಾಮಾಜಿಕ ಆಗು – ಹೋಗುಗಳನ್ನು ಬಹುಬೇಗ ಅರ್ಥ ಮಾಡಿಕೊಳ್ಳಲು ಮತ್ತು ತಮ್ಮ ಸಮಾಜದ ಒಳಗಿನ ಸೂಕ್ಷ್ಮಾತಿ ಸೂಕ್ಷ್ಮ ವಿಷಯ ಸಂಗತಿಗಳನ್ನು ಅನ್ಯರಿಗೆ ತಿಳಿಯದಂತೆ ನಿರ್ವಹಿಸುತ್ತಾರೆ.

ಏಕಪ್ರಕಾರದ ಪೂಜಾ ಪದ್ಧತಿ (Common worship) :

ನಿಸರ್ಗದ ಮಡಿಲಿನಲ್ಲಿ ಜೀವಿಸುವುದರಿಂದ ಬುಡಕಟ್ಟುಗಳಿಗೆ ಅವರದೇ ಆಗಿರುವ ದೇವ ಪೂಜೆಗಳಿರುತ್ತವೆ. ಬಹುಮುಖ್ಯವಾಗಿ ಮೊದಲು ಅವರು ನಿಸರ್ಗ ಪೂಜಕರಾಗಿರುತ್ತಾರೆ. ಗಿಡ, ಮರ, ಸೂರ್ಯ, ಚಂದ್ರ, ಗಾಳಿ, ನೀರು ಮುಂತಾದ ಶಕ್ತಿಗಳನ್ನು ದಿನ ಪೂಜಿಸುತ್ತಾರೆ, ಜೊತೆಗೆ ತಮ್ಮ ತಮ್ಮ ಪೂರ್ವಜರನ್ನು ಅವರು ಪೂಜಿಸುತ್ತಾರೆ. ಏಕೆಂದರೆ ಅವರ ಪೂರ್ವಜರು ಅವರನ್ನು ಮುನ್ನಡೆಸಿಕೊಂಡು ಬಂದಿದ್ದಾರೆಂದು ತಿಳಿದುಕೊಂಡವರಾಗಿದ್ದಾರೆ.

ಒಂದೇ ಸಂಸ್ಕೃತಿ:

ಬುಡಕಟ್ಟು ಜನರ ಕಲೆ, ಸಾಹಿತ್ಯ, ವೇಷಭೂಷಣ ಮುಂತಾದ ಸಾಂಸ್ಕೃತಿಕ ವಿಷಯಗಳಲ್ಲಿ ಸಾಮ್ಯತೆಯನ್ನು ಹೊಂದಿದ್ದಾರೆ. ಇವರ ಸಂಸ್ಕೃತಿಯು ಜಾತಿ ವ್ಯವಸ್ಥೆಗಿಂತ ಭಿನ್ನವಾಗಿರುತ್ತದೆ. ಈ ಕಾರಣಕ್ಕಾಗಿಯೇ ಬುಡಕಟ್ಟು ಜನರ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸಲು ಸಾಧ್ಯ. ಪ್ರತಿಯೊಂದು ಬುಡಕಟ್ಟು ಜನಾಂಗಕ್ಕೂ ಅವರದೇ ಆಗಿರುವ ಪ್ರತ್ಯೇಕ ಸಂಸ್ಕೃತಿಯೆಂಬುದೊಂದಿರುತ್ತದೆ. ಉದಾಹರಣೆಗೆ ಕೊರಗರ ಸಂಸ್ಕೃತಿ, ಮುಂಡಾಲರ ಸಂಸ್ಕೃತಿ, ಬಾಕುಡ ಸಂಸ್ಕೃತಿ, ಮೇರರ ಸಂಸ್ಕೃತಿ ಇತ್ಯಾದಿ. ಏಕೆಂದರೆ ಒಂದು ಜನಾಂಗ ತನ್ನದೇ ಆಗಿರುವ ಸಂಪ್ರದಾಯಗಳನ್ನು ರೂಢಿಸಿಕೊಂಡು ಬಂದಿರುತ್ತಾರೆ. ತಮಗೆ ಅನಾನುಕೂಲವಾದ ಸಂಧರ್ಭದಲ್ಲಿ ತಮ್ಮ ಮೂಲ ಸ್ಥಳವನ್ನು ಬಿಟ್ಟು ಬೇರೆ ಕಡೆಗೆ ಪ್ರಯಾಣ ಬೆಳೆಸುತ್ತಾರೆ ವಿನಃ ಅನ್ಯ ಸಂಸ್ಕೃತಿಯನ್ನು ಸ್ವೀಕರಿಸುವುದಿಲ್ಲ. ತಲತಲಾಂತರಗಳಿಂದಲೂ ತಮ್ಮ ಆಚಾರ–ವಿಚಾರ, ಪೂಜಾ ವಿಧಿ–ವಿಧಾನ, ಹಬ್ಬ–ಹರಿದಿನ, ಜಾತ್ರೆ–ಉತ್ಸವಗಳನ್ನು ಮತ್ತು ಮದುವೆ, ಮರಣ, ಸಂಪ್ರದಾಯ, ಸಂಸ್ಕಾರಗಳಿಗೆ ಸಂಬಂಧಿಸಿದಂತೆ ಚಾಚೂ ತಪ್ಪದೇ ಪಾಲಿಸಿಕೊಂಡು ಬರುತ್ತಾರೆ. ಹೀಗಾಗಿ ಪ್ರತಿಯೊಂದು ಬುಡಕಟ್ಟುಗಳ ಸಂಸ್ಕೃತಿಯೂ ವಿಶಿಷ್ಟವಾಗಿಯೇ ಇರುತ್ತದೆ.

ಒಂದು ಸಾಮಾನ್ಯ ಹೆಸರು (Common Name) :

ದೇಶದ ತುಂಬೆಲ್ಲ ವಾಸಿಸುವ ಬುಡಕಟ್ಟುಗಳು, ಪ್ರತ್ಯೇಕ ಭೂ ಪ್ರದೇಶದಲ್ಲಿ ವಾಸಿಸುವುದಕ್ಕೆ ಇಷ್ಟಪಡುತ್ತಾರೆ. ಕೆಲವರು ಗಿರಿಗಳಲ್ಲಿ ವಾಸವಾಗಿ ಜೀವನ ಸಾಗಿಸುತ್ತಾರೆ. ಪ್ರತಿಯೊಂದು ಬುಡಕಟ್ಟುಗಳು ಅವರವರ ಭೌಗೋಳಿಕ ವ್ಯಾಪ್ತಿಯಲ್ಲಿ ಒಂದು ಸಾಮಾನ್ಯ ಹೆಸರಿನಿಂದ ಜನ ಅವರನ್ನು ಗುರುತಿಸುತ್ತಾರೆ. ಕೆಲವರಿಗೆ ಆಯಾ ರಾಜ್ಯಗಳಲ್ಲಿ ಒಂದು ಹೆಸರಿನಿಂದ ಗುರುತಿಸಿದರೆ ಕೆಲವರಿಗೆ ದೇಶದ ತುಂಬೆಲ್ಲ ಏಕ ರೀತಿಯಲ್ಲಿಯೇ ಹೆಸರು ಇರುವುದು ಕಂಡು ಬರುತ್ತದೆ. ಉದಾಹರಣೆಗೆ – ನಾಗ, ಗೊಂಡ, ಚೆಂಚು, ಭಿಲ್, ಬಾಸಿ, ತೋಡ, ಬಡಗ, ಬೇಡ, ಕಾಡುಗೊಲ್ಲ, ಕಾಡುಕುರುಬ, ಗಾರೋ, ಕೊರಗ, ಮಲೆಕುಡಿಯ, ಕುಡುಬಿ, ಮರಾಠಿ ನಾಯ್ಕ್ ಮುಂತಾದ ಬುಡಕಟ್ಟು ಹೆಸರುಗಳಿವೆ.

ಭೌಗೋಳಿಕ ನೆಲೆ (Geographical Location) :

ಬುಡಕಟ್ಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಅರಣ್ಯ ಗುಡ್ಡ ಬೆಟ್ಟಗಳಲ್ಲಿ ವಾಸಿಸುವವರಾಗಿದ್ದಾರೆ. ಇದಕ್ಕೆ ಅಲ್ಲಿಯ ಸಂಪನ್ಮೂಲವೇ ಕಾರಣವೆಂದು ಹೇಳಬಹುದು. ಬೇಟೆಯಾಡುವುದು ಅವರಿಗೆ ಹಿಂದಿನಿಂದಲೂ ಬಂದಿರುವ ಮೂಲ ವೃತ್ತಿಯಾಗಿರುವುದರಿಂದ ಕಾಡಿನಲ್ಲಿ ವಾಸಿಸುವ ಚಿಕ್ಕ ಚಿಕ್ಕ ಪ್ರಾಣಿಗಳನ್ನು ಬೇಟೆಯಾಡಿ ಹೊಟ್ಟೆ ಹೊರೆದುಕೊಳ್ಳುತ್ತಾರೆ. ಹಿಂದಿನ ಕಾಲ ಸಂದರ್ಭದಲ್ಲಿ ಕ್ರೂರ ಮತ್ತು ದೊಡ್ಡ ದೊಡ್ಡ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು.

ಅರಣ್ಯಗಳಲ್ಲಿ ವಾಸಿಸುವವರು:

ಬುಡಕಟ್ಟುಗಳು ತಮ್ಮ ಜೀವನವನ್ನು ಕಳೆಯುವುದಕ್ಕಾಗಿ ಪೂರ್ವದಲ್ಲಿ ಅರಣ್ಯಗಳಲ್ಲಿ ವಾಸವಾಗಿದ್ದರೆಂಬುದಕ್ಕೆ ಬುಡಕಟ್ಟಿನ ಚರಿತ್ರೆಯಲ್ಲಿ ಮಾಹಿತಿಗಳು ದೊರೆಯುತ್ತವೆ. ಪ್ರಾಚೀನ ಕಾಲದಿಂದಲೂ ಮೊದಲ್ಗೊಂಡು ಅರ್ವಾಚೀನ ಕಾಲದವರೆಗೆ ಬುಡಕಟ್ಟುಗಳ ಜೀವನ ವಿಧಾನದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಆದರೂ ಅವರು ಇವೆಲ್ಲವುಗಳ ಪ್ರಭಾವದ ಒಳಗಡೆಯೂ ಹೇಗೆ ತಮ್ಮ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದರೆಂಬುದು ಮೆಚ್ಚುವಂಥದ್ದು. ನಿರಂತರ ಮಳೆ, ನಿಸರ್ಗದ ನಿಗೂಢ ರಹಸ್ಯಗಳ ಆರ್ಭಟದಿಂದ ರಕ್ಷಣೆಯನ್ನು ಪಡೆದುಕೊಳ್ಳುವುದಕ್ಕಾಗಿ ಅಂದಿನ ಬುಡಕಟ್ಟುಗಳು ತಮ್ಮ ಸಮೀಪದಲ್ಲಿಯೇ ಇರುವ ದೊಡ್ಡ ದೊಡ್ಡ ಗುಹೆಗಳಲ್ಲಿ ವಾಸಿಸುವುದಕ್ಕೆ ಪ್ರಾರಂಭಿಸಿದರು. ಬಟ್ಟೆ ಹಾಕಿದ ಜನ ಕಾಣಿಸಿಕೊಂಡರೆ ಓಡಿ ಹೋಗಿ ಮರಗಳ ಮರೆಯಲ್ಲಿ ಅಡಗುತ್ತಿದ್ದರು. ಈಗಲೂ ಕೆಲವು ಮಲೆಕುಡಿಯರಿಗೆ ಹೊರಗಿನ ಜನರನ್ನು ಕಂಡರೆ ಒಂದು ರೀತಿಯ ಭಯ, ಅಂಜಿಕೆಗಳಿಗೆ ಒಳಗಾಗುವುದನ್ನು ಗಮನಿಸಬಹುದು

ಅರಣ್ಯಗಳಲ್ಲಿ ವಾಸವಾಗಿದ್ದು ಅಲ್ಲಿಯ ಸಂಪನ್ಮೂಲಗಳನ್ನು ಬಳಸಿಕೊಂಡು ಅನೇಕ ಬುಡಕಟ್ಟುಗಳು ತಮ್ಮ ಜೀವನ ನಡೆಸುತ್ತಿದ್ದಾರೆ. ಆ ಭೌಗೋಳಿಕ ಪರಿಸರದಲ್ಲಿ ಬಹಳ ಸ್ವಚ್ಛಂದ ಮತ್ತು ಸ್ವಾತಂತ್ರ್ಯದಿಂದ ಬದುಕುತ್ತ ಬಂದವರಿವರು. ಅಲ್ಲಿಯ ಪ್ರತಿಯೊಂದು ಜಾಗ – ಸ್ಥಳ, ಗಿಡ, ಮರ, ಬಳ್ಳಿ, ಕಾಡು ಮೃಗಗಳ ಪರಿಚಯವನ್ನು ಹೊಂದಿದವರು. ಸಿಗುವ ಗೆಡ್ಡೆ – ಗೆಣಸುಗಳನ್ನು ತಿಂದು – ಗಂಜಿಯನ್ನು ಕುಡಿದುಕೊಂಡು ಬದುಕುತ್ತಿದ್ದರು. ತಾವು ಸಂಗ್ರಹಿಸುತ್ತಿದ್ದ ಕಾಡುತ್ಪತ್ತಿಗಳನ್ನು ದೂರದ ಹಳ್ಳಿಗೆ – ಪಟ್ಟಣಕ್ಕೆ ಹೋಗಿ ಮಾರಾಟ ಮಾಡಿ ದಿನದ ಸಂಸಾರದ ಹಸಿವನ್ನು ನೀಗಿಸುವವರು.

ಕಾಡಿನ ಅಸ್ತಿತ್ವಕ್ಕೆ ಧಕ್ಕೆ ಬರದಂತೆ ಬದುಕುವವರು :

ಒಂದು ಕಾಲಕ್ಕೆ ತಮ್ಮ ಕುಲ ಹಾಗೂ ಪಂಗಡಗಳಿಗೆ ಗಿಡಮರಗಳ ಹೆಸರನ್ನೇ ಇಟ್ಟುಕೊಂಡು ಅವುಗಳ ಮೂಲಕವೇ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡ ಹತ್ತಾರು ಬುಡಕಟ್ಟುಗಳು ಇಂದಿಗೂ ಆ ಸಂಪ್ರದಾಯವನ್ನು ಅನುಸರಿಸುತ್ತಿವೆ. ದೇವರ ಹೆಸರಿನಲ್ಲಿ ಮೀಸಲಿಟ್ಟ ಕಾಡುಗಳು ಇಂದಿಗೂ ದೇವರ ಕಾಡುಗಳಾಗಿ ಉಳಿದು ಬಂದಿರುವುದನ್ನು ನಾವು ನೋಡುತ್ತಿದ್ದೇವೆ. ಮೀಸಲಿಲ್ಲದ ಕಾಡಿನಲ್ಲಿ ಒಂದು ಮರ ಕಡಿಯಬೇಕಾದ ಪ್ರಸಂಗ ಬಂದರೆ ಅದನ್ನು ಪೂಜಿಸಿ ಅತ್ಯಂತ ಗೌರವದಿಂದ ಮರಗಳನ್ನು ಕಡಿಯುತ್ತಿದ್ದ ಬುಡಕಟ್ಟುಗಳ ಮೌಲ್ಯ ಆದರ್ಶಪ್ರಾಯ. ಹೀಗೆ ಕಾಡಿನ ಆಶ್ರಯದಲ್ಲಿ ಬೆಳೆದ ಮನುಷ್ಯ ಅದು ನೀಡುವ ಜೇನು, ಗೆಡ್ಡೆ ಗೆಣಸು, ಹಣ್ಣು ಹಂಪಲು ಹಾಗೂ ಅದರೊಳಗಿನ ಪ್ರಾಣಿ ಪಕ್ಷಿಗಳನ್ನು ಅಗತ್ಯವಿದ್ದಷ್ಟು ಸೇವಿಸಿ, ಬಿದಿರು, ಬೆತ್ತ ಹಾಗೂ ಹೊಂಬು ಬಳ್ಳಿಗಳಲ್ಲಿ ತಯಾರಿಸಿದ ವಸ್ತುಗಳನ್ನು ಕಾಡಿನಾಚೆಯ ಸಂತೆಗಳಲ್ಲಿ ಮಾರಿ ತಮಗೆ ಬೇಕಾದ ಅಗತ್ಯ ವಸ್ತುಗಳನ್ನು ಕೊಳ್ಳುತ್ತಿದ್ದರು.

ಸ್ವಂತ ಆಸ್ತಿಯ ಕಲ್ಪನೆ ಇಲ್ಲದವರು :

ಬುಡಕಟ್ಟುಗಳು ಆಯಾ ಕಾಡುಗಳನ್ನು ಆಶ್ರಯಿಸಿಕೊಂಡು ಜೀವಿಸುವವರು. ಹೀಗೆ ಹಲವಾರು ಶತಮಾನಗಳು ಕಳೆದಿದ್ದಾರೆ. ಜೀವಿಸುವುದಕ್ಕೆ ಆಹಾರದ ಹುಡುಕಾಟ ಮತ್ತು ಸಂಗ್ರಹಣೆಯ ಜೊತೆಗೆ ಬೇಟೆಯನ್ನು ರೂಢಿಸಿಕೊಳ್ಳಲಾಗಿತ್ತು. ತಮ್ಮ ಕಣ್ಣೆದುರಲ್ಲಿಯೇ ನಾಡಿನ ಜನ ಕಾಡನ್ನು ಕಡಿದು ನೆಲವನ್ನು ತಮ್ಮ ಅಧೀನದಲ್ಲಿ ತೆಗೆದುಕೊಂಡು ಉತ್ತು ಬಿತ್ತುವ ಕಾರ್ಯದಲ್ಲಿ ತೊಡಗಿದ್ದರೂ ಬುಡಕಟ್ಟುಗಳು ಮಾತ್ರ ಭೂಮಿಯ ಬಗ್ಗೆ ಆಸೆ ಪಟ್ಟವರಲ್ಲ. ಇಡೀ ಕಾಡು ನಮ್ಮದು, ನಮ್ಮವರದು ಎಂದು ತಿಳಿದುಕೊಂಡಿರುವ ಬುಡಕಟ್ಟುಗಳು ಅದರ ಯೋಗ ಕ್ಷೇಮವನ್ನು ನೋಡಿಕೊಳ್ಳುತ್ತಾ ಬಂದಿದ್ದಾರೆ. ಆದರೆ ಅವರ ಮನದಲ್ಲಿ ತಪ್ಪಿಯೂ ಕಾಡನ್ನು ಕಡಿಯಬೇಕೆಂಬ ವಿಚಾರ ಹೊಳೆಯಲೇ ಇಲ್ಲ. ಹೀಗಾಗಿ ಬುಡಕಟ್ಟು ಜನಾಂಗಗಳು ತಾವಿರುವಷ್ಟು ಕಾಲ ಅದನ್ನು ಪ್ರೀತಿಸುತ್ತ ಬಂದವರಾಗಿದ್ದಾರೆ. ಹಾಗೆಯೇ ಆಯಾ ಭೌಗೋಳಿಕ ಪರಿಸರವನ್ನು ಅವರು ತಮ್ಮ ಬಾಂಧವರನ್ನು ಪ್ರೀತಿಸುವ ಹಾಗೆ, ಹಿರಿಯರನ್ನು ಗೌರವಿಸುವ ಹಾಗೆ, ತಮ್ಮ ಪ್ರಾಣಕ್ಕಿಂತಲೂ ಹೆಚ್ಚು ಅವರು ಪರಿಸರದ ಜೊತೆಗೆ ಒಡನಾಡಿಗಳಾಗುತ್ತ ಬಂದವರಾಗಿದ್ದಾರೆ. ಜೀವಿಸುವುದಕ್ಕೆ ಆಹಾರವನ್ನು ಹುಡುಕುತ್ತ ಆಗಾಗ ಬೇಟೆಯಾಡುತ್ತ ಹೊಟ್ಟೆಗೆ ಬೇಕಾಗುವಷ್ಟು ಹಿಟ್ಟನ್ನು ಸಂಪಾದಿಸುತ್ತ ಮತ್ತೆ ಪ್ರಯಾಣ ಮಾಡುತ್ತ ತಮ್ಮ ನೆಮ್ಮದಿಯ ಬದುಕನ್ನು ಬಹು ಹಿಂದಿನಿಂದಲೂ ಕಳೆಯುತ್ತ ಬಂದವರಾಗಿದ್ದಾರೆ. ಸಂಪಾದಿಸಬೇಕು, ಆಹಾರ ಕೂಡಿಹಾಕಬೇಕು, ಜಮೀನು –ಆಸ್ತಿ ಗಳಿಸಬೇಕು, ಮಕ್ಕಳು –ಮರಿಗಳಿಗೆ ಗಳಿಸಿ ಇಡಬೇಕೆಂಬ ಮುನ್ನಾಲೋಚನೆಯನ್ನು ಇಟ್ಟುಕೊಂಡವರಲ್ಲ. ನಾಗರಿಕತೆಯಿಂದ ಬಹುದೂರ ಉಳಿದುಕೊಂಡು ಬದುಕು ಸಾಗಿಸುತ್ತ ಬಂದ ಬುಡಕಟ್ಟುಗಳು ಕಾಡನ್ನು ಪ್ರೀತಿಸುವ ಜನರು ಅವರಾಗಿದ್ದರು. 'ಮಲೆನಾಡಿನ ಕೆಲವು –ಆಯಕಟ್ಟಿನ ಜಾಗಗಳಿಗೆ ಭೂ ಮಾಲಿಕರು ಬರತೊಡಗಿದ್ದು ಅಥವಾ ಯುರೋಪಿಯನ್ನರ ಬೆನ್ನ ಹಿಂದೆ ಬಂದು ಭೂ ಮಾಲೀಕರಾದದ್ದು ಇಲ್ಲಿ ಮುಖ್ಯ". ಈ ತೆರನಾಗಿ ಯಾವಾಗ 'ವ್ಯವಹಾರಿಗಳು' ಮಲೆನಾಡಿಗೆ ಕಾಲಿಟ್ಟರೋ ಅಂದಿನಿಂದಲೇ ಗಿರಿಜನರ ಸ್ವಚ್ಛಂದದ ಜೀವನ ಅಸ್ಥಿರವಾಗತೊಡಗಿತು. (ಗಿ.ಸಿ. ೨೨೯. ಅಲೆಮಾರಿಗಳ ಸ್ಥಿತಿಗತಿ– ಸಂಪಾದಕ ಡಾ.ಸಾ.ಚಿ. ರಮೇಶ್– ಅಲೆಮಾರಿಗಳ ಪಯಣದ ಹಿಂದಿನ ಭೌಗೋಳಿಕ ಪರಿಸರ –ಡಾ. ಟಿ.ಎಂ. ಭಾಸ್ಕರ್ ಪುಟ–೭೨)

ಶೈಕ್ಷಣಿಕ ಹಿಂದುಳಿದಿರುವಿಕೆ :

ಬುಡಕಟ್ಟು ಜನರು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದವರಾಗಿರುತ್ತಾರೆ. ಇವರಲ್ಲಿ ಅಕ್ಷರಸ್ಥರ ಸಂಖ್ಯೆ ಕಡಿಮೆಯಿರುತ್ತದೆ. ಇವರು ಶಾಲೆ, ಕಾಲೇಜುಗಳಿಗೆ ಹೋಗಿರುವುದು ಕಡಿಮೆ. ಸಾಮಾನ್ಯವಾಗಿ ಬುಡಕಟ್ಟು ಜನರು ತಮ್ಮ ಶಿಕ್ಷಣವನ್ನು ದಿನನಿತ್ಯದ ಸಾಮಾಜಿಕ, ಆರ್ಥಿಕ ಚಟುವಟಿಕೆಗಳಿಂದಲೇ

ಅನೌಪಚಾರಿಕವಾಗಿ ಪಡೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಲ್ಲಿ ಆಸಕ್ತಿ ತೋರುತ್ತಿದ್ದಾರೆ.

ಆರ್ಥಿಕ ಹಿಂದುಳಿದಿರುವಿಕೆ :

ಆರ್ಥಿಕ ಹಿಂದುಳಿದಿರುವಿಕೆಯು ಬುಡಕಟ್ಟು ಜನರ ಪ್ರಮುಖ ಲಕ್ಷಣವಾಗಿದೆ. ಬುಡಕಟ್ಟು ಜನರು ಕಾಡುಗಳಲ್ಲಿ ವಾಸಿಸುವುದರಿಂದ ಅನೇಕ ನಾಗರಿಕ ಸವಲತ್ತುಗಳಿಂದ ವಂಚಿತರಾಗಿದ್ದು, ಇವರಲ್ಲಿ ಬಡತನ ಎದ್ದು ಕಾಣುತ್ತದೆ. ಎಷ್ಟೋ ಬುಡಕಟ್ಟು ಜನರು ಭೂರಹಿತ ಜನರಾಗಿದ್ದಾರೆ. ಇವರಿಗೆ ಯಾವುದೇ ಅಧಿಕ ಆರ್ಥಿಕ ಮೂಲ ಇರುವುದಿಲ್ಲ. ಬುಡಕಟ್ಟು ಜನರ ಆರ್ಥಿಕ ಹಿಂದುಳಿದಿರುವಿಕೆ ಇವರ ಶೈಕ್ಷಣಿಕ ಹಿಂದುಳಿದಿರುವಿಕೆ ಕಾರಣವಾಗಿದೆ. ದೇಶದಲ್ಲಿ ಶೇ. ೭೫ ರಷ್ಟು ಬುಡಕಟ್ಟು ಜನರು ಬಡತನರೇಖೆಗಿಂತ ಕೆಳಗಿದ್ದಾರೆ.

ಒಂದೇ ರೀತಿಯ ರಾಜಕೀಯ ವ್ಯವಸ್ಥೆ :

ಪ್ರತಿಯೊಂದು ಬುಡಕಟ್ಟು ಸಮುದಾಯವು ತನ್ನದೇ ಆದ ಸಾಂಪ್ರದಾಯಿಕ, ರಾಜಕೀಯ ಆಡಳಿತ ಕ್ರಮವನ್ನು ಹೊಂದಿರುತ್ತದೆ. ಹಾಗೆಯೇ ಪ್ರತಿಯೊಂದು ಬುಡಕಟ್ಟು ಸಮುದಾಯವು ತನ್ನದೇ ಆದ ಮುಖ್ಯಸ್ಥನನ್ನು (ಗುರಿಕಾರನನ್ನು) ಪಡೆದಿದ್ದು, ಎಲ್ಲಾ ಆಗುಹೋಗುಗಳಿಗೂ ಆ ಮುಖ್ಯಸ್ಥನನ್ನು ತೀರ್ಪುಗಾರನನ್ನಾಗಿ ನೇಮಿಸುತ್ತಾರೆ.

ಇವರ ರಾಜಕೀಯ ಸಂಘಟನೆಯು ಸಂಪೂರ್ಣವಾಗಿ ಜಾತಿ ವ್ಯವಸ್ಥೆಯ ರಾಜಕೀಯ ಸಂಘಟನೆಗಳಿಗಿಂತ ಭಿನ್ನವಾಗಿರುತ್ತದೆ. ಸಾಮಾನ್ಯವಾಗಿ ಬುಡಕಟ್ಟುಗಳಲ್ಲಿ 'ಗುರಿಕಾರನ' ಸ್ಥಾನವು ಅನುವಂಶೀಯವಾಗಿರುತ್ತದೆ. ಗುರಿಕಾರನ ವೈಯಕ್ತಿಕ ಸಾಧನೆಯನ್ನು ಗಣನೆಗೆ ತೆಗೆದುಕೊಳ್ಳದೆ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸುತ್ತಾ ಬಂದಿರುತ್ತದೆ. ಇವರ ಬುಡಕಟ್ಟು ನ್ಯಾಯ ವ್ಯವಸ್ಥೆಯಲ್ಲಿ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಗುರಿಕಾರನಿಗಿರುತ್ತದೆ. ಗುರಿಕಾರನ ಅಧಿಕಾರಗಳು ಎಲ್ಲಿಯೂ ಲಿಖಿತವಾಗಿ ದಾಖಲಾಗಿರುವುದಿಲ್ಲ. ಇವು ಬುಡಕಟ್ಟು ಸಂಪ್ರದಾಯದಂತೆ ಬೆಳೆದು ಬಂದವುಗಳಾಗಿರುತ್ತವೆ.

ಒಂದೇ ಧರ್ಮ :

ಬುಡಕಟ್ಟು ಧರ್ಮ ತುಂಬಾ ಪ್ರಾಚೀನವಾದದ್ದು. ಇವರ ಧರ್ಮವು ಜಾತಿಯ ಜನರ ಧರ್ಮಕ್ಕಿಂತ ಭಿನ್ನವಾಗಿದ್ದು, ಇದನ್ನು ಸಾಮಾಜಿಕ ನಿಯಂತ್ರಣಕ್ಕೆ ಮತ್ತು ಸಮುದಾಯದ ಒಳಿತಿಗೆ ಬಳಸುತ್ತಾರೆ. ಬುಡಕಟ್ಟು ಜನರು ಪ್ರಾಣಿ, ಪಕ್ಷಿ, ಗಿಡ, ಮರ, ಕಲ್ಲು, ಬಂಡೆ, ಬೆಟ್ಟ, ಗುಡ್ಡ, ನದಿ ಮುಂತಾದ ಪ್ರಕೃತಿ

ದತ್ತವಾದ ನಿಸರ್ಗದ ಆರಾಧಕರಾಗಿದ್ದಾರೆ. ಸಮುದಾಯಕ್ಕೆ ಕೇಡುಂಟಾದಾಗ ತಮ್ಮ ಬುಡಕಟ್ಟು ದೇವರುಗಳ ಮೊರೆಹೋಗಿ ಪೂಜಿಸುತ್ತಾರೆ. ಇವರು ಮಾಟ ಮಂತ್ರಗಳಲ್ಲಿ ನಂಬಿಕೆವುಳ್ಳವರಾಗಿದ್ದಾರೆ.

ವಿವಾಹ ಪದ್ಧತಿ :

ಬುಡಕಟ್ಟು ಜನರು ಸಮುದಾಯದ ಪಾವಿತ್ರ್ಯತೆ ಮತ್ತು ಐಕ್ಯತೆ ದೃಷ್ಟಿಯಿಂದ ತಮ್ಮ ತಮ್ಮ ಬುಡಕಟ್ಟು ಪಂಗಡಗಳಲ್ಲಿಯೇ ವಿವಾಹ ಸಂಬಂಧವನ್ನು ಬೆಳೆಸುತ್ತಾರೆ. ಹೆಣ್ಣಿನ ಆಯ್ಕೆಯನ್ನು ತಮ್ಮ ಬುಡಕಟ್ಟಿನ ಒಳಗಡೆಯೇ ಆಯ್ದುಕೊಳ್ಳುವುದು ಸಾಮಾಜಿಕ ನಿಯಮವಾಗಿರುತ್ತದೆ. ಬುಡಕಟ್ಟು ಜನರು ವಿವಾಹಕ್ಕೆ ಸಂಬಂಧಿಸಿದಂತೆ ರಕ್ತ ಸಂಬಂಧಕ್ಕೆ ಹೆಚ್ಚು ಮಹತ್ವಕೊಡುತ್ತಾರೆ. ಬುಡಕಟ್ಟು ಜನರು ಒಂದೇ ಕುಲದಲ್ಲಿ ವಿವಾಹ ಮಾಡಿಕೊಳ್ಳುವುದಿಲ್ಲ. ಇವರು ಹೊರಬಾಂಧವ್ಯ ವಿವಾಹ ಸಂಬಂಧವನ್ನು ಬೆಳೆಸುತ್ತಾರೆ. ಕಾರಣವೇನೆಂದರೆ ಒಂದೇ ರಕ್ತ ಸಂಬಂಧವಿರುವ ಕುಲದಲ್ಲಿ ವಿವಾಹ ಮಾಡಿಕೊಂಡರೆ ವಂಶಾಭಿವೃದ್ಧಿಗೆ ತೊಂದರೆಯಾಗುತ್ತದೆ ಎಂಬ ನಂಬಿಕೆ ಬುಡಕಟ್ಟು ಜನರಲ್ಲಿದೆ.

೨. ೧ ದಕ್ಷಿಣ ಕನ್ನಡದ ಬುಡಕಟ್ಟು ಸಂಸ್ಕೃತಿ :

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆದಿ ಮೂಲನಿವಾಸಿಗಳೆನಿಸಿದ ಕೊರಗರಿಂದ ಹಿಡಿದು, ಕರ್ನಾಟಕದ ಬೇರೆ ಬೇರೆ ಪ್ರದೇಶಗಳಿಂದ ವಲಸೆ ಬಂದಿರುವ ಪರಿಶಿಷ್ಟ ವರ್ಗದವರು ವಾಸಿಸುತ್ತಿದ್ದಾರೆ. ಇವರ ಆಚಾರ–ವಿಚಾರ, ಸಂಸ್ಕೃತಿ ಮತ್ತು ಭಾಷೆ ಇವು ಒಂದು ಜಾತಿಯಿಂದ ಮತ್ತೊಂದು ಜಾತಿಯ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ಸಾಮಾಜಿಕವಾಗಿ ಪರಿಶಿಷ್ಟರನ್ನು ಗ್ರಾಮದ ಹೊರಗೆ, ಅಸ್ಪೃಶ್ಯರೆಂದು ಪರಿಗಣಿಸುತ್ತಾರೆ. ಇದಲ್ಲದೆ ಸಮಾಜದ ಮೇಲ್ವರ್ಗದವರ ಮನೆಯ ಕೂಲಿ, ಜಮೀನು ಕೆಲಸ ಮುಂತಾಗಿ ಜೀತದಾಳುಗಳಂತೆ ದುಡಿಯುತ್ತಿದ್ದುದರಿಂದ ಆ ವರ್ಗದವರ ಆಚರಣೆಯ ಪ್ರಭಾವವನ್ನು ನಾವು ಕಾಣಬಹುದಾಗಿದೆ. ತುಳುನಾಡಿನ ಉದ್ದಗಲಕ್ಕೂ ಪರಿಶಿಷ್ಟರ ವಸತಿಗಳಿರುವುದರಿಂದ ಆಯಾ ಪ್ರದೇಶದ ಸಂಸ್ಕೃತಿಯ ವೈಶಿಷ್ಟ್ಯಗಳನ್ನು ಇವರು ಮೈಗೂಡಿಸಿ ಕೊಂಡಿದ್ದಾರೆ. ಇದಲ್ಲದೆ ಪ್ರಬಲವಾದ ಧರ್ಮವೊಂದು ಪ್ರಭಾವ ಬೀರಿದಾಗ ಒಡೆಯನು ಅದನ್ನು ಅನುಸರಿಸಿದರೆ ತಾನೂ ಅದರ ಪ್ರಭಾವಕ್ಕೆ ಒಳಗಾಗಿ ಒಡೆಯ ನಡೆದ ಹಾದಿಯಲ್ಲೇ ನಡೆಯುವುದು ಸಾಮಾನ್ಯವಾಗಿತ್ತು. ಹೀಗಾಗಿ ಪರಿಶಿಷ್ಟರ ಪ್ರಭಾವ, ಬೇರೆ ಧರ್ಮೀಯರ ಪ್ರಭಾವ, ಮೇಲ್ಜಾತಿಯವರ ಪ್ರಭಾವ, ಪ್ರಾದೇಶಿಕ ಸಂಸ್ಕೃತಿಯ ಪ್ರಭಾವ ಇವುಗಳೆಲ್ಲದರ ಮಧ್ಯದಲ್ಲಿ ತಮ್ಮ ಮೂಲಧರ್ಮವನ್ನು ಕಾಪಾಡಿಕೊಂಡು ಬಂದದ್ದು ವಿಶೇಷವೆನ್ನಬಹುದು.

ಕೊರಗ :

ಕೊರಗ ಎಂಬುದು ಮಂಗಳೂರಿನ ಬಜಪೆಯ ಹತ್ತಿರ ಇರುವ ಒಂದು ಊರಿನ ಹೆಸರು. ಅದು ಪುರಾತನ ಕಾಲದಲ್ಲಿ ಕೊರಗರು ನೆಲೆಸಿದ ಕೇರಿಯಾಗಿತ್ತು ಎಂದು ಪೂರ್ವಿಕರ ಅಭಿಪ್ರಾಯವಿದೆ. ಇವರು

ಸಾಮಾನ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಹೊಲೆಯರ ಒಂದು ಉಪಪಂಗಡವೆಂದು ಹೇಳಲಾಗಿದೆ. ಕುರವರು ಎಂಬ ಪದಕ್ಕೆ ಬೆಟ್ಟದಲ್ಲಿ ವಾಸಮಾಡುವವರು ಎಂಬ ಅರ್ಥವಿದೆ. ಈ ಪದದಿಂದ ಕೊರಗ ಎಂಬ ಪದ ಉತ್ಪತ್ತಿಯಾಗಿರಬಹುದು. ಈ ಪದದ ಉತ್ಪತ್ತಿಯ ಬಗ್ಗೆ ನಿಖರವಾಗಿ ಹೇಳುವುದು ಕಷ್ಟ. ಕೊರಗ ಭಾಷೆಯನ್ನು ತಮ್ಮ ಸಮುದಾಯದ ಒಳಗೆ, ಇತರರೊಂದಿಗೆ ತುಳು ಮತ್ತು ಕನ್ನಡ ಭಾಷೆಯನ್ನು ಮಾತನಾಡಿ, ಕನ್ನಡ ಲಿಪಿಯನ್ನು ಬಳಸುತ್ತಾರೆ. ಇವರು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಲ್ಲಲ್ಲಿ ನೆಲೆಯಾಗಿದ್ದಾರೆ.

ಇವರಲ್ಲಿ ಕಂಡುಬರುವ ಮುಖ್ಯ ಉಪ ಪಂಗಡಗಳೆಂದರೆ, ಸೊಪ್ಪುಕೊರಗ, ಕುಂಟುಕೊರಗ, ತಿಪ್ಪಿಕೊರಗ, ಒಂಟಿಕೊರಗ ಕುಪ್ಪಟಕೊರಗ, ಹಂಡೆಕೊರಗ, ಕಡಪಕೊರಗ, ಇತ್ಯಾದಿ. ಕೊರಗರಲ್ಲಿ ಇರುವ ಹದಿನೇಳು ಬಳಿಗಳನ್ನು ಗುರುತಿಸಿರುತ್ತಾರೆ. ಅವುಗಳೆಂದರೆ ಉಪ್ಪರು, ಅಲೇರು, ಪದ್ವಮ್ಮಾ, ಚೆರ್ಕಾಡಿ, ಮುಕ್ಕ, ಕೊನಾರು, ಕುತ್ತಾರು, ತಾಡಿಯಾರು, ಹಂಚಾರು, ಖುಜಗಾರು, ಎಲ್ಕಿಜಿಯಾರು, ಒಜಾರ್ತು, ತಾಲಿಮನ್, ಕುಂಕರಿಸಿ, ಒಡಿಯಾರು, ಬಂಗೇರು. ಎ.ವಿ ನಾವಡರವರು ಕೊರಗರು ಪೂಜಿಸುವ ದೈವ ಅಥವಾ ಭೂತಕ್ಕೆ ಸಂಬಂದಿಸಿದ ಕೆಲವು ಬಳಿಗಳನ್ನು ಈ ರೀತಿ ಗುರುತಿಸಿದ್ದಾರೆ– ಕುಂದನ್ನಾಯ, ತಿರ್ಗನ್ನಾಯ, ಸಾಲೆನ್ನಾಯ, ಮುಂಜಿತ್ತೆನ್ನಾಯ, ಖಂಗೇರನ್ನಾಯ, ತಡ್ವೆನ್ನಾಯ ಇತ್ಯಾದಿ.

ಸಮುದಾಯದ ಮಟ್ಟದಲ್ಲಿ ಒಳಬಾಂಧವ್ಯ ವಿವಾಹದ ಪದ್ಧತಿಯನ್ನು ಅನುಸರಿಸಿದರೆ, ಬಳಿಗಳ ಮಟ್ಟದಲ್ಲಿ ಹೊರಬಾಂಧವ್ಯ ವಿವಾಹ ಪದ್ಧತಿಯನ್ನು ಅನುಸರಿಸುತ್ತಾರೆ. ಇವರಲ್ಲಿ ಗಂಡು, ಹೆಣ್ಣುಗಳ ಪರಸ್ಪರ ಭೇಟಿ ಮಾಡಿ, ಅವರ ಒಪ್ಪಿಗೆಯ ನಂತರವೆ ಹಿರಿಯರು ಮದುವೆ ನಿಶ್ಚಯ ಮಾಡುತ್ತಾರೆ. ಹಿಂದೆ ಮದುವೆ ಮಾಡಲು ತಮ್ಮ ತಮ್ಮ ಭೂಮಾಲೀಕರ ಒಪ್ಪಿಗೆ ಪಡೆಯಬೇಕಿತ್ತು, ಆದರೆ ಇಂದು ಈ ಪದ್ಧತಿ ಬದಲಾಗಿದೆ. ಮದುವೆಯು ತಂದೆಯ ಸಹೋದರಿಯ ಮಗಳು ಅಥವಾ ತಾಯಿಯ ಸಹೋದರನ ಮಗಳ ಜೊತೆ ಸಾಧ್ಯವಿದೆ. ಹೆಂಡತಿಯು ವಿಚ್ಛೇದನ ಬಯಸಿದರೆ ವಧುದಕ್ಷಿಣೆಯನ್ನು ಗಂಡನಿಗೆ ಹಿಂತಿರುಗಿಸಬೇಕಾಗುತ್ತದೆ. ವಿಧವೆ, ವಿಧುರ ಹಾಗೂ ವಿಚ್ಛೇದಿತರ ವಿವಾಹಗಳಿಗೆ ಅವಕಾಶವಿದೆ. ಇವರಲ್ಲಿ ಹೆಂಗಸರು ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಚಟುಚಟಿಕೆಗಳಲ್ಲಿ ಭಾಗವಹಿಸುತ್ತಾರೆ.

ಇವರ ಸಾಂಪ್ರದಾಯಿಕ ವೃತ್ತಿ ಬುಟ್ಟಿ ಹೆಣೆಯುವುದು ಜೊತೆಗೆ ವ್ಯವಸಾಯದ ಕೂಲಿಗಳಾಗಿ ದುಡಿಯುತ್ತಾರೆ. ಇತ್ತೀಚೆಗೆ ಕೆಲವರು ಭೂಮಿ ಉಳುಮೆ ಮಾಡುತ್ತಿದ್ದಾರೆ. ಇತ್ತೀಚೆಗೆ ಕೆಲವು ಕೊರಗ ಜನರು ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ನೌಕರಿಯಲ್ಲಿದ್ದಾರೆ. ಎಲ್ಲಾ ಬುಡಕಟ್ಟು ಸಮುದಾಯಗಳಲ್ಲಿ ಕಂಡು ಬರುವಂತೆ ಕೊರಗ ಸಮುದಾಯದಲ್ಲಿ ಅವರದೇ ಅದ ನ್ಯಾಯವ್ಯವಸ್ಥೆ ಇದೆ. ಇದರ ನೇತೃತ್ವ ಕೊರಗ ಸಮಾಜದಲ್ಲಿ ಹಿಡಿತವಿರುವ ಹಿರಿಯ ವ್ಯಕ್ತಿ ವಹಿಸುತ್ತಾನೆ. ಇವನನ್ನು 'ಗುರಿಕಾರ' ಎಂಬ ಹೆಸರಿನಲ್ಲಿ ಕರೆಯುತ್ತಾರೆ. ನ್ಯಾಯ ವಿಚಾರಣೆಯನ್ನು ಸಾಮಾನ್ಯವಾಗಿ ದೇವರ ಹಬ್ಬ, ಉತ್ಸವ, ಭೂತಕೋಲ ಮದುವೆ, ಸತ್ತವರಿಗೆ ನಡೆಸುವ ವಾರ್ಷಿಕ ಆಚರಣೆಗಳ ಸಂದರ್ಭದಲ್ಲಿ ಕುಟುಂಬದ ಎಲ್ಲಾ ಸದಸ್ಯರು ಸೇರಿ

ಸಮಸ್ಯೆಗಳನ್ನು ವಿಚಾರಣೆಗೆ ಒಳಪಡಿಸುತ್ತಾರೆ. ಸಮೂಹ ಮಾಧ್ಯಮ, ರಸ್ತೆ ಸಂಪರ್ಕ, ಗ್ರಾಮೀಣ ಹಾಗೂ ಬುಡಕಟ್ಟು ಸಮುದಾಯಗಳ ಅಭಿವೃದ್ದಿ, ಸ್ವಯಂ- ಉದ್ಯೋಗವನ್ನು ಬೆಂಬಲಿಸುವ ಕಾರ್ಯಕ್ರಮಗಳನ್ನು ಬಳಸಿಕೊಳ್ಳುವಲ್ಲಿ ಹಿಂದುಳಿದ್ದಿದ್ದಾರೆ. ಆಧುನಿಕ ಶಿಕ್ಷಣ, ಬ್ಯಾಂಕ್ ಹಾಗೂ ಇತರೆ ಆಧುನಿಕ ಸಾಮಾಜಿಕ ಸಂಸ್ಥೆಗಳ ಪ್ರಯೋಜನವನ್ನು ಪಡೆದುಕೊಂಡು ಅಭಿವೃದ್ಧಿ ಸಾಧಿಸಲು, ಕೊರಗ ಯುವ ವಿದ್ಯಾವಂತರು ವ್ಯವಸ್ಥಿತವಾದ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆದರೆ ಇವರ ಸಾಮಾಜಿಕ ಆರ್ಥಿಕ ಪರಿಸ್ಥಿತಿ ಇನ್ನೂ ಸುಧಾರಣೆಯಾಗಬೇಕಾಗಿದೆ.

ಮುಂಡಾಲ :

ಜಿಲ್ಲೆಯಲ್ಲಿ ಮುಂಡಾಲರೆಂದು ಕರೆಯಲ್ಪಡುವ ಪಂಗಡದವರು ಹೆಚ್ಚಾಗಿ ಜಿಲ್ಲೆಯ ಪಡು ಕರಾವಳಿಯ ಬಯಲು ಪ್ರದೇಶದಲ್ಲಿರುವರು. ಜಿಲ್ಲೆಯ ಉತ್ತರದ ಕುಂದಾಪುರ ತಾಲೂಕಿನ ಬಾರಕೂರಿನಿಂದ ಮೊದಲ್ಗೊಂಡು, ದಕ್ಷಿಣದ ಈಗಿನ ಕೇರಳ ಪ್ರಾಂತ್ಯದ ನೀಲೇಶ್ವರದವರೆಗೆ ಪಡುಕರಾವಳಿಯೇ, ಪೂರ್ವದಲ್ಲಿ ಇವರು ಅಧಿಕ ಸಂಖ್ಯೆಯಲ್ಲಿ ವಾಸಮಾಡುತ್ತಿದ್ದ ಸ್ಥಳವಾಗಿದೆ. ಆದರೆ ಕೇರಳದ ನೀಲೇಶ್ವರ ಭಾಗದಲ್ಲಿ ಈಗ ಇವರ ಸಂಖ್ಯೆ ಇಲ್ಲ. ಕೇರಳ ಪ್ರಾಂತ್ಯದ ಕಾಸರಗೋಡಿನ ಮೊಗ್ರಾಲ್ ಪುತ್ತೂರು, ಕುಂಬಳೆ, ಮೊಗ್ರಾಲ್, ಮಂಜೇಶ್ವರ, ಉಚ್ಚಿಲ ಮುಂತಾದ ಕಡೆ ಇವರ ಕುಟುಂಬಗಳು ಈಗಲೂ ಅಧಿಕ ಸಂಖ್ಯೆಯಲ್ಲಿವೆ. ಜಿಲ್ಲೆಯ ಮಂಗಳೂರು ನಗರ ಹಾಗೂ ಈ ತಾಲೂಕಿನ ಇತರ ಭಾಗಗಳಾದ ಉಳ್ಳಾಲ, ತಲಪಾಡಿ, ಅರ್ಕುಳ, ನೀರುಮಾರ್ಗ, ಬಜಪೆ, ಗುರುಪುರ, ಪಣಂಬೂರು, ಸುರತ್ಕಲ್ ಮೊದಲಾದ ಕಡೆಗಳಲ್ಲಿ ಈ ಪಂಗಡದ ಜನರು ಹೆಚ್ಚಾಗಿರುವರು. ಅಂತೆಯೇ ಜಿಲ್ಲೆಯ ಇನ್ನಿತರ ಸ್ಥಳಗಳಾದ ಉಡುಪಿ, ಕಾಪು, ಮಲ್ಪೆ, ಪಡುಬಿದ್ರೆ, ಕುಂದಾಪುರ ಕಡೆ ಕೂಡಾ ಇವರ ಸಂಖ್ಯೆ ಅಧಿಕವಿದೆ.

ಜಿಲ್ಲೆಯಲ್ಲೇ ಅತೀ ಪುರಾತನ ಕಾಲದಿಂದಲೂ ವಾಸಮಾಡಿಕೊಂಡಿದ್ದ ಈ ಪಂಗಡವು ಜಿಲ್ಲೆಯ ಆದಿ ಮೂಲನಿವಾಸಿ ಪಂಗಡಗಳಲ್ಲಿ ಒಂದು ಪಂಗಡವೆಂದು ಹೇಳಲಾಗಿದೆ. ಅದರಿಂದಾಗಿ ಇವರಲ್ಲಿ ಕೆಲವರು ತಾವು ಆದಿದ್ರಾವಿಡರೆಂಬುದಾಗಿ ಕೂಡಾ ಕರೆಸಿಕೊಳ್ಳುವರು. ಹೆಚ್ಚಾಗಿ ಉಡುಪಿ, ಕುಂದಾಪುರ, ಕಡೆಗಳಲ್ಲಿ ಮುಂಡಾಲ ಜಾತಿಯವರೇ ಆದಿ ದ್ರಾವಿಡರೆಂದು ತಮ್ಮ ಹೆಸರನ್ನು ಶಾಲಾ ದಾಖಲೆಗಳಲ್ಲಿ ಸೇರಿಸಿದ ಅನೇಕ ನಿದರ್ಶನಗಳಿವೆ. ಆದರೆ ಇವರು ತಮ್ಮ ಮೂಲ ಹುಟ್ಟುಜಾತಿಯಾದ ಮುಂಡಾಲರೆಂದೇ ಹೆಚ್ಚಾಗಿ ಹೇಳಿಕೊಳ್ಳುವರು ಮತ್ತು ಆ ರೀತಿ ಕರೆಸಿಕೊಳ್ಳುವುದರಲ್ಲಿ ಬಹು ಹೆಮ್ಮೆ ಪಡುವರು. ಅತೀ ಪುರಾತನ ಕಾಲದಿಂದಲೂ ಜೀವಿಸಿಕೊಂಡು ಬಂದ ಈ ಪಂಗಡದವರು, ಆದಿಯಲ್ಲಿ ಜಿಲ್ಲೆಯ ಜೈನರ, ಆಲೂಪ ಅರಸರ, ಬಂಟರ, ಬಲ್ಲಾಳ ಅರಸರ ಹಾಗೂ ಜಮೀನುಗಳ ಒಡೆಯರ ಮೂಲದ ಆಳುಗಳಾಗಿ ಅವರ ಜಮೀನುಗಳಲ್ಲಿ ಒಂದು ನಿಶ್ಚಿತ ಸಂಬಳಕ್ಕೆ ದುಡಿಯುವುದೇ ಇವರ ಮೂಲ ಕಸುಬು. ಇವರು ಹೊಲೆಯರು ಎಂಬ ಸಾಮಾನ್ಯ ವಾಡಿಕೆಯ ಹೆಸರಿನ ಪಂಗಡಗಳಲ್ಲಿ ಒಂದು ಪಂಗಡ ಎಂದು ಹೇಳಲಾಗಿದೆ.

ಕುಂದಾಪುರ ಭಾಗದಲ್ಲಿ ಇವರನ್ನು 'ಉಪ್ಪಾರರು' ಎಂಬುದಾಗಿ ಕೂಡಾ ಕರೆಯುವರಾಗಿ ಹೇಳಿಕೊಳ್ಳುವರು. ಆದರೆ ಉಪ್ಪಾರ ಪಂಗಡದ ಆಚರಣೆ, ನೀತಿ, ವ್ಯವಹಾರಕ್ಕೂ ಮುಂಡಾಲರ ಕಟ್ಟುನೀತಿಗೂ ವ್ಯತ್ಯಾಸವಿದೆ ಎಂದು ತಿಳಿದು ಬಂದಿದೆ. ಮಾತ್ರವಲ್ಲ, ಉಪ್ಪಾರರಿಗೆ ಶಿವಮೊಗ್ಗದ ಕೂಡ್ಲಿಗೆ ಎಂಬಲ್ಲಿ ಒಬ್ಬ ಗುರು ಇದ್ದಾನೆ. ಅಂತೆಯೇ ಅವರಿಗೆ ಅಲ್ಲಿ ಒಂದು ಗುರುಮಠ ಕೂಡಾ ಇದೆ ಎಂದು ಹೇಳಲಾಗಿದೆ. ಕುಂದಾಪುರ ಕಡೆ ಉಪ್ಪಾರ ಪಂಗಡದವರು ಕನ್ನಡ ಮಾತನಾಡುವರು. ಮುಂಡಾಲರು ತುಳು ಮಾತನಾಡುವರು. ಕುಂದಾಪುರ ಕಡೆಗೆ ಉಪ್ಪಾರರು ಉಪ್ಪು ತಯಾರಿಸುವುದರಿಂದಾಗಿ ಮತ್ತು ಅದು ಅವರ ಮೂಲವೃತ್ತಿಯಾದುದರಿಂದ ಅವರನ್ನು 'ಉಪ್ಪಾರ' ರೆಂಬುದಾಗಿ ಕರೆಯಲಾಯಿತೆಂದು ಹೇಳಲಾಗಿದೆ. ಉಪ್ಪಾರರು ಶಿವಭಕ್ತರು. ಉಪ್ಪಾರ ಮತ್ತು ಮುಂಡಾಲರೊಳಗೆ ಹೆಣ್ಣು ಸಂಬಂಧ ಈಗ ನಡೆದು ಬರುವುದಾಗಿ ಒಂದೇ ಪಂಗಡದವರು ಎಂದು ಹೇಳಲಾಗಿದೆ. ಆದರೆ 'ಉಪ್ಪಾರ' ಎಂಬ ಹೆಸರು ಮೈಸೂರು ಸರಕಾರ ಪ್ರಕಟಿಸಿದ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಪ್ರಕೃತ ಇಲ್ಲವಾಗಿದೆ. ಆದಕಾರಣ ಉಪ್ಪಾರರು ಪರಿಶಿಷ್ಟ ವರ್ಗದವರೆಂದು ಪರಿಗಣಿಸಲಾಗುವುದಿಲ್ಲ. ಉಪ್ಪಾರರು ಮದುವೆ ಸಮಯ ಮದುಮಗನಿಗೆ ಜನಿವಾರ ಹಾಕಲೇಬೇಕೆಂಬ ನಿಯಮವಿದೆ. ಮುಂಡಾಲರಲ್ಲಿ ಜನಿವಾರ ಹಾಕುವ ಪದ್ಧತಿ ಇಲ್ಲವಾಗಿದೆ. ಅನಾದಿಕಾಲದಿಂದಲೂ ಮುಂಡಾಲರು ಬೇಸಾಯ ವೃತ್ತಿಯನ್ನೇ ತಮ್ಮ ಜೀವನೋಪಾಯವಾಗಿ ಇಟ್ಟುಕೊಂಡಿದ್ದಾರೆ. ಮಾತ್ರವಲ್ಲ, ಪೂರ್ವದಲ್ಲಿ ಅನೇಕರು ಮೈಸೂರು ಪ್ರಾಂತ್ಯದ ಮಲೆನಾಡು ಪ್ರದೇಶಗಳ ತೋಟಗಳ ದಲ್ಲಾಳಿಗಳ ಬಲೆಗೆ ಸಿಕ್ಕಿ ಅಲ್ಲಿಯ ಕಾಫಿ, ಏಲಕ್ಕಿ ಯಾ ಕರಿಮೆಣಸಿನ ತೋಟಗಳಲ್ಲಿ ಅಲ್ಲಿಯ ಕಂಪೆನಿಗಳ ಯಾ ಒಡೆಯರ ಒಂದು ತರ್ಕಕ್ಕೆ ಒಳಗಾಗಿ ಜೀವಮಾನವಿಡೀ ಜೀತದ ಆಳುಗಳಾಗಿ (Bonded Labourer) ದುಡಿಯುವ ಪದ್ಧತಿ ಬಳಕೆಯಲ್ಲಿತ್ತು. ಇಂದಿಗೂ ಈ ಪದ್ಧತಿ ಮಲೆನಾಡಿನ ಅನೇಕ ಕಾಫಿ, ಏಲಕ್ಕಿ ತೋಟಗಳಲ್ಲಿ ಬಳಕೆಯಲ್ಲಿದೆ. ಇವರಲ್ಲಿ ಕಪ್ಪು ಬಿಳಿ ಎರಡೂ ವರ್ಣದವರು ಇದ್ದಾರೆ. ಇವರದು ಗಟ್ಟಿಮುಟ್ಟಾದ ಶರೀರ. ಪೂರ್ವದಲ್ಲಿ ಇವರು ಹೆಚ್ಚಾಗಿ ತಲೆಗೆ ಕಂಗಿನ ಹಾಳೆಯ 'ಮುಟ್ಟಾಳೆ' ಎಂಬ ಸಪೂರದ ತಲೆಕವಚವನ್ನು ತಲೆಗೆ ಇಟ್ಟುಕೊಳ್ಳುವರು. ಇವರಲ್ಲಿ ದೈವದ ಪಾತ್ರಿಗಳು ಕೈಬಳೆ ಧರಿಸುವರು. ಅಂತೆಯೇ ಪೂರ್ವದಲ್ಲಿ ಹೆಚ್ಚಾಗಿ ಗಂಡಸರು ಹೆಂಗಸರಂತೆ ಉದ್ದನೆಯ ಜುಟ್ಟು ಬಿಡುವ ಪದ್ಧತಿ ಇತ್ತು. ಇವರ ಹೆಂಗಸರು ನೋಡಲು ರೂಪವಂತರಾಗಿದ್ದು ತಮ್ಮ ಗಂಡಸರ ಜತೆ ದುಡಿಯುವರು. ಬಿಡುವಿನ ಸಮಯದಲ್ಲಿ ಕಾಡಿಗೆ ಹೋಗಿ ಸೊಪ್ಪು, ಕಟ್ಟಿಗೆಗಳನ್ನು ಕಡಿದು ತಂದು ವಿಕ್ರಯಿಸಿ ತಮ್ಮ ಸಂಸಾರಜೀವನದಲ್ಲಿ ಗಂಡಸರ ಜತೆ ಸಹಕರಿಸುವರು. ಇತ್ತೀಚೆಗೆ ಪೇಟೆಪಟ್ಟಣಗಳಲ್ಲಿ ಸರಕಾರಿ ದರಖಾಸ್ತು ಮಾಡಿಕೊಂಡು ಎತ್ತಿನಗಾಡಿಯ ಕೆಲಸ, ಮೇಸ್ತ್ರಿ ಕೆಲಸ, ಕಂಟ್ರಾಕ್ಟ್ ಕೆಲಸ ಇತ್ಯಾದಿ ದುಡಿಮೆಯಿಂದ ಜೀವಿಸುವರು. ಹೆಚ್ಚಿನವರು ಅವಿದ್ಯಾವಂತರು. ಆದರೆ ಈಗೀಗ ಇವರಲ್ಲಿ ವಿದ್ಯಾಭಿರುಚಿ ಅಧಿಕವಾಗಿ ಬೆಳೆದು, ಸರಕಾರಿ ಕೆಲಸ ಪಡೆಯುವುದೇ ಇವರ ಹಿರಿಯಾಸೆ ಮತ್ತು ಸರಕಾರಿ ಕೆಲಸವೆಂದರೆ ಇವರು ತುಂಬಾ ಹೆಮ್ಮೆ ಪಡುವರು. ಹೆಂಗಸರು ಇತ್ತೀಚೆಗೆ ಪೇಟೆ ಪಟ್ಟಣಗಳಲ್ಲಿ ಗೇರುಬೀಜದ, ಹಂಚಿನ ಹಾಗೂ

ಬೀಡಿಕಟ್ಟುವ ಕೈಗಾರಿಕೆಗಳಲ್ಲಿ ಅಧಿಕವಾಗಿ ದುಡಿಯುವರು. ಇನ್ನು ಕೆಲವರು ದೂರದ ಹಳ್ಳಿಗಳಿಂದ ಹುಲ್ಲು ತಂದು ಪೇಟೆಯಲ್ಲಿ ಮಾರಿ ಸಂಪಾದನೆ ಮಾಡುವರು. ಇವರ ಹೆಂಗಸರು ಗಂಡಸರಿಗಿಂತಲೂ ಹೆಚ್ಚು ಕಷ್ಟಪಟ್ಟು ದುಡಿಯುವ ಮನೋವೃತ್ತಿಯವರು. ಮಾತ್ರವಲ್ಲ, ಹೆಂಗಸರೇ ಮನೆಯ ಸೂತ್ರಧಾರಿಗಳು. ಮುಂಡಾಲರು ಸ್ವಭಾವತಃ ಸ್ವಲ್ಪ ಮುಂಗೋಪಿಗಳು. ತಮ್ಮ ಜಾತಿಯನ್ನು ಹೀನೈಸಿ ಯಾ ತುಚ್ಛೀಕರಿಸಿ ಮಾತನಾಡುವುದನ್ನು ಎಂದಿಗೂ ಸಹಿಸುವವರಲ್ಲ. ಅಂತೆಯೇ ಅನ್ಯಾಯಕ್ಕೂ ಎಂದಿಗೂ ಬಗ್ಗುವವರಲ್ಲ ಮತ್ತು ತುಂಬಾ ಧೈರ್ಯಶಾಲಿಗಳು, ತಮ್ಮ ಯಾ ಕುಟುಂಬದ ಹಕ್ಕಿಗೆ ಧಕ್ಕೆ, ಅಪಮಾನ, ಅಗೌರವವನ್ನು ಸಹಿಸಲಾರರು. ಮಾತ್ರವಲ್ಲ ತಮ್ಮ ಜಾತಿಯ ಹಾಗೂ ಕುಟುಂಬದ ಮಾನ ಮರ್ಯಾದೆಗೋಸ್ಕರ ತಮ್ಮ ಮನೆಮಾರು ಮಾರಿಯಾದರೂ ಗೌರವ ಪ್ರತಿಷ್ಠೆ ಉಳಿಸುವ ಸ್ವಭಾವದವರು. ಕುಟುಂಬದೊಳಗೆ ಜಗಳವಾದರೆ ಇವರು ಮುಯ್ಯಿಗೆ ಮುಯ್ಯಿ ತೀರಿಸುವ ಹಠವಾದಿಗಳು. ಇವರು ಅಸ್ಪೃಶ್ಯರಾದರೂ ಪೂರ್ವದಲ್ಲಿ ಹಳ್ಳಿಯ ಬಂಟರ, ಬಲ್ಲಾಳರ, ಜೈನ ಅರಸರ ನಿಷ್ಠಾವಂತ ಸ್ವಾಮಿಭಕ್ತರು. ಮಾತ್ರವಲ್ಲ ಬಂಟರ, ಬಲ್ಲಾಳರ ಬಲಕೈಗಳು. ನಂಬಿದ ಸ್ವಾಮಿಗೆ ಕೇಡು ಬಗೆಯುವವರಲ್ಲ. ಜೈನ ಅರಸರ ಕಾಲದಲ್ಲಿ ಮುಂಡಾಲರು ಸೇನಾಧಿಪತಿಗಳಾಗಿದ್ದರು ಎಂದು ತಿಳಿದುಬಂದಿದೆ. ಮತ್ತು ಜಿಲ್ಲೆಯಲ್ಲಿ ಈ ಪಂಗಡದವರಿಗೆ ಆದಿಯಲ್ಲಿ ಸೈನಿಕ ದಳವೊಂದು ಕೂಡಾ ಇತ್ತು. ಅದಕ್ಕೆ ಇವರಲ್ಲಿ ಒಬ್ಬ ಸೇನಾನಿ ಮುಖಂಡ ಕೂಡಾ ಇದ್ದನೆಂದೂ ತಿಳಿದುಬಂದಿದೆ.

ಜಿಲ್ಲೆಯ ತುಳುನಾಡಿನ ಗತವೈಭವದ ಕಾಲದಲ್ಲಿ ಜೈನ ಅರಸರ, ಬಂಟ, ಬಲ್ಲಾಳರ ಹಾಗೂ ಗುತ್ತು ಸೀಮೆ ಅರಸರ ಒಡೆತನಕ್ಕೆ ಸೇರಿದ ಜಮೀನುಗಳ ಪೈರುಗಳ ಮತ್ತು ಭತ್ತ ಶೇಖರಣೆ ಇಡುವ, ತುಳುವಿನಲ್ಲಿ 'ತುಪ್ಪೆ' ಎಂಬ ಬೈಹುಲ್ಲಿನ ಕಣಜ (ಅಂಗಳದಲ್ಲಿ ಭತ್ತ ದಾಸ್ತಾನು ಇಡುವ ಎತ್ತರವಾದ ಬೈಹುಲ್ಲಿನ ರಾಶಿಯ ಕಟ್ಟೆ) ಗಳನ್ನು ರಾತ್ರಿ ಸಮಯ ಕಳ್ಳಕಾಕರು, ವೈರಿಗಳು ಹಾಗೂ ತಮ್ಮವರೇ ಆದ ಹಿತಶತ್ರುಗಳಿಂದ ಬರುವ ಅಪಾಯಗಳನ್ನು ರಕ್ಷಿಸಲೋಸುಗ ಈ ಪಂಗಡದವರನ್ನು ತುಪ್ಪೆಗಳ ರಕ್ಷಕರನ್ನಾಗಿ ಕಾವಲು ಕೆಲಸಕ್ಕೆ ಇಟ್ಟುಕೊಳ್ಳುತ್ತಿದ್ದರು. ಅಂತೆಯೇ ಇತರ ಅರಸುಗಳು ಅಥವಾ ಅನ್ಯದೇಶದ ಶತ್ರುಗಳು ಹಾಗೂ ದಾಳಿಕೋರರು (ಮುಖ್ಯವಾಗಿ ಒಂದು ಮಾಗಣೆಯ ಅರಸನಿಗೆ ಇನ್ನೊಂದು ಮಾಗಣೆಯ ಅರಸನೊಡನೆ ವೈರತ್ವವುಂಟಾಗಿ ರಾಜ್ಯಕ್ಕೆ ಅಪಾಯ ಬಂದಾಗ) ತಮ್ಮ ಸೀಮೆಯ ಆಕ್ರಮಣವಾಗುವಂತಹ ಸಮಯದಲ್ಲಿ ತಮ್ಮ ಮೂಲದ ಆಳಾದ ಈ ಮುಂಡಾಲ ಜಾತಿಯ ಮುಖ್ಯ ಗುರಿಕಾರರನ್ನು ಗುತ್ತಿನ ಅರಸನು ಯಾ ಸೀಮೆಗುತ್ತುಗಳ ಒಡೆತನದ ಯಜಮಾನನು ಕರೆದು, ತಮ್ಮ ಬೀಡಿನ ಅರಮನೆಯಲ್ಲಿ ಆ ಉದ್ದೇಶ ನಿಮಿತ್ತಕ್ಕಾಗಿ ತಯಾರಿಸಲಾದ ಒಂದು ದೊಡ್ಡ ಬಡಿಗೆಯ (ತಾಳೆಮರದಿಂದ ನಾಜೂಕಾಗಿ ಕೆತ್ತಿ ತಯಾರಿಸಲಾದ, ತುಳುವಿನಲ್ಲಿ 'ತಂದೇಲು' ಎಂದು ಹೇಳುವ ಸುಮಾರು ನಾಲ್ಕೈದು ಅಡಿ ಉದ್ದದ ಕೋಲು)ನ್ನು ಗುರಿಕಾರನ ಕೈಯಲ್ಲಿ ನೆರೆದ ಸಭೆಯ ಮುಂದೆ ಕೊಟ್ಟು, ಹೋಗು, ಮುಂದಾಗಿ ನಮ್ಮ ಗದ್ದೆಯ ಗಡಿ ಸ್ಥಳಕ್ಕೆ! ನಾವು ನಂಬಿದ ಮತ್ತು ನಿಮ್ಮ ಕುಲದೈವವಾದ ಕೋಟೆದ ಬಬ್ಬು ದೈವವನ್ನು

ನೆನವರಿಕೆ ಮಾಡಿಕೋ! ನಮ್ಮ ಬೀಡಿನ ಸೀಮೆಯ ಹಾಗೂ ಮನೆತನದ ಗೌರವ ಉಳಿಸುವವನಾಗು! ಮಾತ್ರವಲ್ಲ, ನಿಮ್ಮ ಜಾತಿಯ ಗೌರವ, ಪ್ರತಿಷ್ಠೆಯನ್ನು ಉಳಿಸು. ಮೂಲದ ಆಳಾಗಿ, ನಾವು ನಂಬಿದ ನಮ್ಮ ಬೀಡಿನ ವಿಶ್ವಾಸದ ಆಳುಗಳಾದ ನಿಮ್ಮಿಂದಲೇ ಸಾಧ್ಯ. ಎಂಬುದಾಗಿ ನುಡಿವಚನಗಳಿಂದ ಅನುಜ್ಞೆ ಇತ್ತು. ತಮ್ಮ ಗದ್ದೆಗಳ ಗಡಿ ಸ್ಥಳಕ್ಕೆ ಮುಂದಾಗಿ ಕಳುಹಿಸಿಕೊಡುವ ಪದ್ಧತಿ ಹಿಂದೆ ಬಳಕೆಯಲ್ಲಿತ್ತು. ಎಂಬುದಾಗಿ ಪೂರ್ವಿಕರ ಹಾಗೂ ಬಲ್ಲವರ ಅಭಿಪ್ರಾಯವಾಗಿದೆ. ಅಂತೆಯೇ ಇತಿಹಾಸಗಾರರ ಅಭಿಮತವಾಗಿದೆ. ಅರಸನ ಅಪಾಯ ಕಾಲದಲ್ಲಿ ರಾಜ್ಯದ ಗಡಿಸ್ಥಳಕ್ಕೆ ಮುಂದೆಹೋಗಿ, ಗಡಿಯನ್ನು ರಕ್ಷಿಸುವ ಈ ಪಂಗಡಕ್ಕೆ "ಮುಂದಿನ ಆಳು" ಎಂದು ಕರೆಯುವ ವಾಡಿಕೆಯ ಹೆಸರು ಉಂಟಾಯಿತು ಎಂದು ಹೇಳಲಾಗಿದೆ. ಕ್ರಮೇಣ ಮುಂಡಾಲು ಹೋಗಿ ಮುಂಡಾಲರು ಎಂದು ಕರೆಯುವ ಪದ್ಧತಿ ಬಳಕೆಗೆ ಬಂತು ಎಂದು ಹೇಳಲಾಗಿದೆ. ಮುಂಡಾಲರಲ್ಲಿ ವರ್ಷಂಪ್ರತಿ ತಮ್ಮ ದೈವವಾದ (ಮಹಾ ಕಾರಣಿಕ ಪುರುಷ) 'ಕೋಟೆದ ಬಬ್ಬು' ದೈವಕ್ಕೆ ನೇಮ, ಉತ್ಸವ ಇತ್ಯಾದಿ ಕಾರ್ಯಗಳನ್ನು ಜರುಗಿಸಿ ಆರಾಧಿಸುವರು. ಮಾತ್ರವಲ್ಲ, ಇವರು ನೆಲೆಸಿಕೊಂಡ ಪ್ರತಿಯೊಂದು ಕಾಲೊನಿಯಲ್ಲೂ ಕೋಟೆದ ಬಬ್ಬುವಿನ ಪ್ರತ್ಯೇಕ ದೈವಸ್ಥಾನವಿದ್ದು, ಈ ಕೋಟೆದ ಬಬ್ಬು ದೈವಕ್ಕೆ ಊರಿನ ಹತ್ತು ಸಮಸ್ತರ ಸೇರುವಿಕೆಯಿಂದ ವಾರ್ಷಿಕ ನೇಮ, ಬಲಿ ಉತ್ಸವಗಳಿಗೆ ಇವರು ಶಕ್ತಿಮೀರಿ ಖರ್ಚುಮಾಡುವರು. ಇವರು ತಾವು ನಂಬಿದ ಭೂತ, ದೈವಗಳ ಹಾಗೂ ದೈವಿಕ ಶಕ್ತಿಗಳ ದೇವತೆಗಳಿಗೆ ತಮ್ಮಲ್ಲಿದ್ದ ಯಾವುದೇ ವಸ್ತು, ಒಡವೆ, ಬಂಗಾರ ಇತ್ಯಾದಿ ಅಮೂಲ್ಯ ವಸ್ತುಗಳನ್ನು ಒತ್ತೆ ಇಟ್ಟಾದರೂ ಕುಲದೈವಕ್ಕೆ ಸಲ್ಲುವ ವರ್ಷದ ನೇಮ, ಬಲಿ ಸಲ್ಲಲೇ ಬೇಕು ಎಂಬ ಅಚಲ ಭೂತಾರಾಧಕರಾಗಿರುವರು. ಅಲ್ಲದೆ ಇತರ ತುಳುನಾಡಿನ ಜನರ ಆರಾಧ್ಯ ಭೂತ, ದೈವಗಳಾದ ಪಂಜುರ್ಲಿ, ಗುಳಿಗ, ಧರ್ಮದೈವ, ಕಲ್ಲುರ್ಟಿ, ಚಾಮುಂಡಿ, ಕೊರತಿ, ಸಂಕಲೆಗುಳಿಗ, ಮೈಸಂದಾಯ, ಸುಬ್ಬಗುಳಿಗ, ಕೋಮರಾಯ, ಕೊರಗಜ್ಜ, ಕತ್ತಲೆ, ಕಾನದ ಗುಳಿಗ ಮುಂತಾದ ೩೯ ಭೂತಗಳ ಮಹಾಭಕ್ತರು. ಇವರಷ್ಟು ಭೂತಗಳನ್ನು ಆರಾಧಿಸುವ ಪಂಗಡ ಹರಿಜನ, ಗಿರಿಜನರಲ್ಲಿ ಬೇರೊಂದು ಇಲ್ಲವಾಗಿದೆ. ಸಮಾಜದ ಯಜಮಾನನಿಗೆ ಮುಖಾರಿ, ಬುದ್ಧಿವಂತ, ಗುರಿಕಾರ ಎಂಬುದಾಗಿ ಕರೆಯುವರು. ಇವರಲ್ಲಿ ಸುಮಾರು ೧೬ ಬಳಿಗಳ (ಗೋತ್ರಗಳ) ಕುಟುಂಬದ ಸಂಪ್ರದಾಯವಿದೆ. ಈಗಲೂ ಪ್ರತಿಯೊಂದು ಕುಟುಂಬದ (ಬಳಿಗಳ ಹಾಗೂ ಗೋತ್ರಗಳ) ದೈವಗಳಿಗೆ ವರ್ಷಂಪ್ರತಿ ತಮ್ಮ ಕುಲದೈವಕ್ಕೆ ಆರಾಧನೆ ಮಾಡುವರು. ಕುಟುಂಬಗಳ ಬಳಿ ಸಂಪ್ರದಾಯಕ್ಕೆ ಇವರು ತುಂಬಾ ಮಹತ್ವ ಕೊಡುವರು.

ಹಿಂದಿನ ಕಾಲದಲ್ಲಿ ಇವರು ಸತ್ತ ಎಮ್ಮೆ, ದನ, ನಾಯಿ, ಬೆಕ್ಕು ಮುಂತಾದ ಪ್ರಾಣಿಗಳನ್ನು ಮುಟ್ಟುತ್ತಿದ್ದಿಲ್ಲ. ಹೆಂಗಸರ ಹೆರಿಗೆ ಸಮಯದಲ್ಲಿ ಭಂಡಾರ ಇಡುವ ಮನೆಯಾದರೆ ಸೂತಕ ಪದ್ಧತಿಯನ್ನು ಆಚರಿಸುವರು. ಆ ಮನೆಗೆ ಉಳಿದವರು ಮೂರುದಿನ ಹೋಗಬಾರದು. ಇವರಲ್ಲಿ ಹುಡುಗಿ ಮೈನೆರೆದರೆ ಅವಳನ್ನು ಅಂದು ಬೇರೆ ಕೋಣೆಯಲ್ಲಿಟ್ಟು ಏಳು ಗಡಿಗೆಯ ನೀರಿನಿಂದ ಸ್ನಾನ ಮಾಡಿಸಿ (ತುಳುವಿನಲ್ಲಿ ಹೇಳುವ ಮದಿಮಾಲ್ ಮದಿಮೆ) ಎಂಬ ಮಂಗಳ ಕಾರ್ಯ ಮಾಡುವ ಪದ್ಧತಿ ಇದೆ. ಇವರು ಮದುವೆ

ಸಮಾರಂಭವನ್ನು ಬಹಳ ಗೌಜಿಯಿಂದ ನೆರವೇರಿಸುವರು. ಹೆಚ್ಚಾಗಿ ತಮ್ಮ ಮದುವೆ ಕಾರ್ಯ ಜನಮೆಚ್ಚುಗೆ ಪಡೆಯಬೇಕೆಂಬ ಮನೋವೃತ್ತಿಯಿಂದ ಸಾಲಮಾಡಿಯಾದರೂ ದುಬಾರಿ ಖರ್ಚಿನಿಂದ ಮದುವೆ ಸಮಾರಂಭ ನಡೆಸುವರು. ಹಿಂದೆ ಹೆಣ್ಣು ಹುಡುಕುವ ಕಾರ್ಯಕ್ಕೆ ಸಮಾಜದ ಯಜಮಾನನ ಜತೆ ಗಂಡಿನ ತಂದೆ ಯಾ ಸಮೀಪದ ಸಂಬಂಧಿಕರು ಹೋಗುತ್ತಿದ್ದರು. ಅನೇಕ ಬಳಿ (ಗೋತ್ರ)ಗಳ ಸಂಪ್ರದಾಯಸ್ಥರಾದ ಇವರಲ್ಲಿ ಹುಟ್ಟು ಬಳಿ ತಪ್ಪಿಸಿ ಮದುವೆ ಸಂಬಂಧ ನಡೆಸಲು ಬಲು ಪ್ರಯಾಸವಾಗುತ್ತಿತ್ತು. ಮದುಮಗನ ಕಡೆಯವರು ಹೆಣ್ಣು ನೋಡಿ ಒಪ್ಪಿಗೆಯಾದ ಬಳಿಕ 'ಮದುಮಗಳ ನಿಶ್ಚಯ' ಎನ್ನುವ ದಿನ ಮದುಮಗಳಿಗೆ ಉಂಗುರ ಹಾಕಿ ಮದುವೆಗೆ ದಿನ ನಿರ್ಧರಿಸಿ ಒಂದು ಸಮಾರಂಭ ಮಾಡುವರು. ಅಂದು ವರನ ಕಡೆಯ ಸಮಾಜದ ಗುರಿಕಾರನೂ ಮತ್ತು ಅವರ ಗ್ರಾಮದ ಹತ್ತು ಸಮಸ್ತರೂ ಸೇರಿ ಮದುಮಗಳ ಮನೆಗೆ ರಾತ್ರಿ ಸಮಯ ಹೋಗಿ ವಧುದಕ್ಷಿಣೆ ರೂಪದಲ್ಲಿ ವರನು ಕೊಡಬೇಕಾದ ನಾಲ್ಕು ವರಹ ಹಣ (ಒಂದು ವರಹ ಅಂದರೆ ನಾಲ್ಕು ರೂಪಾಯಿ), ಕೈಬಳೆಯ ಖರ್ಚು ಒಂದು ರೂಪಾಯಿ, ವಧುವಿನ ದಾರಿ ಖರ್ಚು ಎಂದು ಒಟ್ಟು ರೂಪ್ಯಾ ಹದಿನಾರನ್ನು ಹಿಂದೆ ವರನು ಕೊಡುವ ಪದ್ಧತಿ ಇತ್ತು. ಈಗ ಈ ದರವನ್ನು ರೂ. 27 ಕ್ಕೇರಿಸಲಾಗಿದೆ. ಅಂತೆಯೇ ಹೆಣ್ಣಿನ ಬೆರಳಿಗೆ ಬೆಳ್ಳಿ, ಹಿತ್ತಾಳೆ ಅಥವಾ ಬಂಗಾರದ ಉಂಗುರ ತೊಡಿಸಿ ಮದುವೆಗೆ ದಿನ ನಿರ್ಧರಿಸುವರು. ಆ ದಿನ ರಾತ್ರಿ ವರನ ಕಡೆಯವರಿಗೆ ಭಾರಿ ಭೋಜನ ನಡೆಯುವುದು. ಶೇಂದಿ, ಸಾರಾಯಿ, ಕೂಡಾ ಅಂದು ಧಾರಾಳವಾಗಿ ಉಪಯೋಗ ಮಾಡುವರು. ಮದುವೆಯು ಹೆಚ್ಚಾಗಿ ಹಿಂದೆ ರಾತ್ರಿ ಸಮಯದಲ್ಲಿಯೇ ಜರಗುತ್ತಿತ್ತು. ವರನ ಕಡೆಯವರು ಗ್ರಾಮಸ್ಥರಿಂದ ಕೂಡಿದ ಗಂಡಸರು ಹೆಂಗಸರು ಮತ್ತು ಮಕ್ಕಳು ಸಮೇತರಾಗಿ ದಿಬ್ಬಣ ಬಲು ಗೌಜಿ ಗದ್ದಲದಿಂದ ತುಳು ಪಾಡ್ದನ ಹಾಡನ್ನು ಹಾಡುತ್ತಾ, ಹಾಡಿಗೆ ತಕ್ಕಂತೆ ಕೋಲುಗಳಿಂದ ಸ್ವರವೇರಿಸಿ ಬಡಿಯುತ್ತಾ ಹಾಗೂ ಒಂದು ಹಿತ್ತಾಳೆಯ ದೊಡ್ಡ ತಾಳವನ್ನು ಹಾಡಿಗೆ ತಕ್ಕಂತೆ ಬಡಿಯುತ್ತಾ ನಲಿದುಕೊಂಡು ಹೋಗುವರು. ಇವರ ಈ ತರದ ಕುಣಿತದ ಹಾಗೂ ತುಳು ಪಾಡ್ದನ ಹಾಡುತ್ತಾ ಹೋಗುವ ದಿಬ್ಬಣವು ನೋಡಲು ಬಲು ಚಂದ. ವರನ ದಿಬ್ಬಣವು ರಾತ್ರಿ ಸಮಯ ವಧುವಿನ ಮನೆಗೆ ಹೋಗುವ ಪದ್ಧತಿಯಿತ್ತು. ಅಲ್ಲಿ ವರನು ವಿಶ್ರಮಿಸಲು ಒಂದು ಹೊಸ ಚಾಪೆಯನ್ನು ಕೊಡುವರು. ರಾತ್ರಿ ಮದುವೆಯ ಮುಹೂರ್ತಕ್ಕೆ ಮೊದಲು ವರನನ್ನು ಸಿಂಗರಿಸಿ, ವರನಿಗೆ ಕೈಮಗ್ಗದ ಹೊಸ ಮುಂಡು ಎಂಬ ವಸ್ತ್ರವನ್ನು ಸೊಂಟಕ್ಕೆ ತೊಡಿಸಿ, ಕೈಗಳಿಗೆ ಹಿತ್ತಾಳೆ ಯಾ ಕಂಚಿ ಆಭರಣಗಳನ್ನು ತೊಡಿಸಿ, 'ಒಂಟಿ'ಯನ್ನು ಕಿವಿಗೂ 'ಪಿಜಿರ್' ಎಂದೂ ಹೇಳುವ ಹಿತ್ತಾಳೆ ಯಾ ಬಂಗಾರದ ಮೆರುಗು ಇರುವ ಸರವನ್ನು ಕಿವಿಯ ಮೇಲ್ಭಾಗದಲ್ಲಿ ಸುತ್ತಾಗಿ ತೊಡಿಸುವರು. ಈ ರೀತಿಯಾಗಿ ಕಿವಿಗಳಿಗೆ ಆಭರಣ ತೊಡಿಸದೆ ಮದುಮಗನನ್ನು ಮದುವೆಯ ಚಪ್ಪರಕ್ಕೆ ಪ್ರವೇಶಿಸಲು ಇವರ ಗುರಿಕಾರರು ಬಿಡಲಾರರು. ಅಂತೆಯೇ ತಲೆಗೆ ಕೆಂಪು ಮುಂಡಾಸನ್ನು ವರನಿಗೆ ತೊಡಿಸುವರು. ವರನ ಒಂದು ಕೈಯಲ್ಲಿ ಖಡ್ಗವನ್ನೂ (ತುಳುವಿನಲ್ಲಿ ಕಡ್ತಲೆ) ಎಡಕೈಯಲ್ಲಿ ಸಣ್ಣ ರುಮಾಲನ್ನು ಕೊಟ್ಟು ಮುಹೂರ್ತಕ್ಕೆ ನಿಲ್ಲಿಸುವರು. ಮದುಮಗಳಿಗೆ ಬಹಳ ಅಲಂಕಾರಯುತವಾಗಿ ವಸ್ತ್ರ, ಹೂ, ಆಭರಣಗಳನ್ನು ಹೆಂಗಸರು ಸೇರಿ

ಮನೆಯೊಳಗೆ ತೊಡಿಸುವರು. ವೀಳ್ಯದೆಲೆ ಅಡಿಕೆ ಮತ್ತು ಬಿಳಿವಸ್ತ್ರದ ರುಮಾಲನ್ನು ಕೊಟ್ಟು ಧಾರೆಯೆರೆಯುವ ಮೊದಲು ತಮ್ಮ ಕುಲದೈವಗಳಿಗೂ ನಾಗಬ್ರಹ್ಮ ದೇವರಿಗೂ ಗ್ರಾಮದ ಗುರಿಕಾರರು ಪ್ರಾರ್ಥನೆ ಮಾಡಿ ನೆರೆದ ಹತ್ತು ಸಮಸ್ತರ ಒಪ್ಪಿಗೆಯನ್ನು ಗುರಿಕಾರನು ಪಡೆದು, ವಧುವನ್ನು ವರನ ಕೈಗೆ ಜೋಡಿಸಿ ಧಾರೆಯೆರೆಯುವನು. ಅನಂತರ ಅಂಗಳದಲ್ಲಿ ಎತ್ತರವಾದ ಮಣೆಯ ಮೇಲೆ ದೇವರಿಗೆ (ಗಣಪತಿಗೆ) ಹಣತೆ ದೀಪವಿಟ್ಟು ಒಂದು ಬಾಳೆಎಲೆಯಲ್ಲಿ ಅಕ್ಕಿಕಾಳು, ವೀಳ್ಯದೆಲೆ, ಅಡಿಕೆ ಮುಂತಾದುವನ್ನು ಇಟ್ಟು ಎದುರಿಗೆ ವಧೂವರರನ್ನು ಒಟ್ಟಿಗೆ ಕುಳ್ಳಿರಿಸಿ ನೆರೆದ ಸಭಿಕರೆಲ್ಲರ ಅನುಮತಿಯಿಂದ ಗುರಿಕಾರನು ಮೊದಲು ಅಕ್ಕಿ ಕಾಳನ್ನು ವಧುವರರ ತಲೆಗೆ ಹಾಕುವನು. ಇದಾದ ಬಳಿಕ ಸರ್ವರಿಗೂ ಭಾರಿ ಭೋಜನ ಜರುಗುವುದು. ಶೇಂದಿ, ಸಾರಾಯಿ, ಕೂಡಾ ಧಾರಾಳ ಉಪಯೋಗಿಸುವರು. ಅನಂತರ ವಧುವನ್ನು ಒಳಗೆ ಕರೆದುಕೊಂಡು ಹೋಗಿ ವರನನ್ನು ಒಳಗೆ ಕರೆದು, ವಧುವಿನಿಂದ ವರನಿಗೆ ಅನ್ನಬಡಿಸಲ್ಪಡುವ ಕಾರ್ಯಕ್ರಮವೂ ಇದೆ. ವಧುವಿನ ಮನೆಯ ಕಾರ್ಯಕ್ರಮವನ್ನು ಮುಗಿಸಿ ರಾತ್ರಿಯೇ ವರನ ಮನೆಗೆ ವಧುವಿನ ಜತೆ ದಿಬ್ಬಣ ಹಿಂತೆರಳುವುದು.

ಜಿಲ್ಲೆಯಲ್ಲಿರುವ ಮುಂಡಾಲರಲ್ಲಿ ಇದೀಗ ಮದುವೆಯ ರೀತಿ ನೀತಿಗಳಲ್ಲಿ ತುಂಬಾ ಬದಲಾವಣೆಯಾಗಿದೆ. ಹಿಂದಿನ ಕಾಲದ ಕ್ರಮಗಳಲ್ಲಿ ಅನೇಕವು ಬದಲಾವಣೆಯಾಗಿದೆ. ಮಾತ್ರವಲ್ಲ, ಇಂದು ಇವರು ಮದುವೆಗಾಗಿ ಯಥೇಷ್ಟ ಖರ್ಚು ಮಾಡುವರು. ಅಲ್ಲದೆ ಧಾರೆಯೆರೆಯಲು ಕೆಲವರು ಬ್ರಾಹ್ಮಣ ಪುರೋಹಿತರನ್ನು ಕೂಡಾ ಹಣ ಕೊಟ್ಟು ಕರೆತರುವರು. ಪೂರ್ವದಲ್ಲಿ ಇವರ ಪಂಗಡದಲ್ಲಿ ಯಾರೇ ಒಬ್ಬರು ಇತರ ಸರ್ವ ಹಿಂದೂ ಜಾತಿಯ ಹೆಣ್ಣನ್ನು ಅಥವಾ ಗಂಡನ್ನು ಮೋಹಿಸಿ ಗಂಡ ಹೆಂಡಿರಾಗಿ ಬಾಳಿ ನಡೆದರೆ, ಅಂತಹವರನ್ನು ಸಮಾಜದ ಬಾಂಧವರು ಬಹಿಷ್ಕರಿಸುದಿಲ್ಲ. ಆದರೆ ತಮ್ಮ ಜಾತಿಗಿಂತ ಕೀಳು ಜಾತಿಯವರು ಎಂದು ಪರಿಗಣಿಸುತ್ತಿದ್ದ ಪರಿಶಿಷ್ಟ ವರ್ಗದ ಇತರ ಜಾತಿಯ ಹೆಣ್ಣನ್ನು ಗಂಡು ಮೋಹಿಸಿ ಯಾ ಗಂಡನ್ನು ಹೆಣ್ಣು ಮೋಹಿಸಿ ಗಂಡ ಹೆಂಡಿರಂತೆ ಬಾಳಿ ನಡೆದರೆ, ಆಗ ಅಂತಹ ವ್ಯಕ್ತಿಗಳನ್ನು ಇಡೀ ಸಮಾಜದವರೇ, ತಮ್ಮ ಜಾತಿ ಕಟ್ಟಳೆ ಪ್ರಕಾರ ಏಳು ಮಾಗಣೆಗಳ ಸಭೆ ಸೇರಿ ತಮ್ಮ ಸಮಾಜದಿಂದ ಹೊರ ಹಾಕುವ ಜಾತಿ ಕಟ್ಟಳೆ ಇವರಲ್ಲಿದೆ. ಆದರೆ ಈಗೀಗ ಇಂಥಾ ಕ್ರಮ ತುಂಬಾ ಬದಲಾಗಿದೆ. ಇಂತಹ ಘಟನೆಗಳು ಅಲ್ಲಲ್ಲಿ ಅನೇಕ ಆಗಿದ್ದರೂ ಅದನ್ನು ಸಮಾಜದ ಗುರಿಕಾರರು ಅಷ್ಟೊಂದು ಗಣನೆಗೆ ತರುವುದಿಲ್ಲವಾಗಿದೆ.

ಇವರಿಗೆ ಬಲ್ಮೆ, ಮಂತ್ರ, ಮಾಟ ಮುಂತಾದವುಗಳಲ್ಲಿ ಅಚಲ ನಂಬಿಕೆ. ಹಳ್ಳಿಯಲ್ಲಿ ಯಾರಾದರು ತಮ್ಮ ಪೈಕಿ ಕಾಯಿಲೆ ಹಾಗೂ ಬೇನೆ ಬಿದ್ದರೆ ಮೊದಲು ಇವರ ಕುಲದೈವಕ್ಕೆ ಕೈಮುಗಿದು ಪ್ರಾರ್ಥನೆ ಮಾಡಿ ದೈವದ ಗಂಧ ಪ್ರಸಾದ ಹಾಕಿ ಆ ಬಳಿಕ ಬಲ್ಮೆಯವನ ಬಳಿ ಹೋಗಿ ವಿಚಾರಿಸುವರೇ ಹೊರತು ಆಸ್ಪತ್ರೆಗಾಗಲೀ, ವೈದ್ಯರಲ್ಲಾಗಲೀ, ಪಂಡಿತರಲ್ಲಾಗಲೀ ಆರೈಕೆಗಾಗಿ ಕೊಂಡು ಹೋಗುವ ಪದ್ಧತಿ ತೀರಾ

ಕಡಿಮೆ. ಇವರ ಹೆಂಗಸರು ಆಭರಣ ಪ್ರಿಯರು ಮತ್ತು ಅಲಂಕಾರ ಪ್ರಿಯರು. ಯಾವುದೇ ಉತ್ಸವ ಸಮಾರಂಭಕ್ಕೆ ಹೂ ಮುಡಿದು ಅಲಂಕಾರಯುತರಾಗಿ ಹೋಗುವುದೆಂದರೆ ಇವರಿಗೆ ಬಲು ಹೆಮ್ಮೆ. ಹೆಂಗಸರು ಕೊರಳಿಗೆ ಕನ್ನಡಿ ಮಣಿ, ಹಿತ್ತಾಳಿಯ ಪಟ್ಟಿ ಹಾಗೂ ಕೈಗಳಿಗೆ ಕಂಚಿನ ಯಾ ಹಿತ್ತಾಳಿಯ ವ ತಾಮ್ರದ ಕಂಕಣ ಎಂದು ಕರೆಯುವ ಕೈಬಳೆಗಳನ್ನು ಹಿಂದಿನ ಕಾಲದಲ್ಲಿ ತೊಡುತ್ತಿದ್ದರು. ಅಂತೆಯೇ ಕಿವಿಗಳಿಗೆ ಬೆಂಡೋಲೆ, ಮೂಗಿಗೆ ಮೂಗುತಿ ಪೂರ್ವದಲ್ಲಿ ಧರಿಸುತ್ತಿದ್ದರು. ಇವರ ಗಂಡಸರು ಕೂಡಾ ಕಿವಿಗೆ ತುಳುವಿನಲ್ಲಿ 'ಕೊಡಂಗೆ' ಎಂದು ಕರೆಯುವ ಹಿತ್ತಾಳೆಯ ಬೆಂಡುಗಳನ್ನು ಹಿಂದಿನ ಕಾಲದಲ್ಲಿ ಧರಿಸುತ್ತಿದ್ದರು. ಈಗೀಗ ಇಂತಹ ಆಭರಣಗಳನ್ನು ಧರಿಸುವುದು ಕಡಿಮೆಯಾಗಿದೆ. ಗಂಡನ ಆಪತ್ಕಾಲದಲ್ಲಿ ಹೆಂಗಸರು ತಮ್ಮ ಪ್ರಾಣ ಕೊಡುವುದಕ್ಕೆ ಹಿಂಜರಿಯಲಾರರು. ಅಂತೆಯೇ ತನ್ನ ಗಂಡನ ಮಾನವುಳಿಸುವಲ್ಲಿ ಇವರ ಹೆಂಗಸರದು ಎತ್ತಿದ ಕೈ.

ಇವರಲ್ಲಿ ಕೂಡಾ ಸಂಜೆ ಅಥವಾ ರಾತ್ರಿ ಸಮಯ ಹಳ್ಳಿ ಪೇಟೆಗಳಲ್ಲಿ ವಾಸ ಮಾಡುವವರು ತುಳು ಪಾಡ್ದನದ ಹಾಡುಗಳನ್ನು ದೈವದ ತುಳು ಸಂಧಿಗಳನ್ನು ಹಾಡುವ ಅಭ್ಯಾಸ ಅನೇಕರಲ್ಲಿದೆ. ಇವರು ವಿದ್ಯೆಯಲ್ಲಿ ಈಗೀಗ ಮುಂದೆ ಬಂದವರಿದ್ದರೂ ಕೆಲ ಹಳೆ ಸಂಪ್ರದಾಯಗಳನ್ನು ಬಿಟ್ಟವರಲ್ಲ. ಅಂಧಃ ಶ್ರದ್ಧೆ, ಮೂಢನಂಬಿಕೆಗೆ ಇವರಲ್ಲಿ ಹೆಚ್ಚಿನವರು ಬಲು ಬೇಗನೆ ಮರುಳಾಗುವರು. ಇವರು ತುಂಬಾ ಮಾತುಗಾರರು ಮುಂದಿನ ತಮ್ಮ ಜೀವನದ ಯೋಚನೆಗೆ ಇವರಿಗೆ ಬಲು ದೂರದ ಮಾತು. ಮಿತವ್ಯಯವೆಂಬುದರ ಅರಿವೇ ಇಲ್ಲ. ಇಂದು ಸುಖಪಟ್ಟರೆ ಸಾಕು, ನಾಳೆಗೆ ಆ ದೈವಗಳೂ, ನಾಗಬ್ರಹ್ಮ ದೇವರುಗಳೂ ನೋಡಿಯಾರು ಎಂಬ ಕಲ್ಪನಾ ಭಾವನೆಯ ಜನರು ಹಾಗೂ ಅಂಥಾ ಭಾವನೆ ಇಂದಿಗೂ ಇರುವುದರಿಂದಾಗಿ ಇವರ ನಿತ್ಯ ಜೀವನವೆಂಬುದು ನಿಜವಾಗಿಯೂ ಹಗಲು ರಾತ್ರಿ ಮೃತ್ಯುವಿನ ವಿರುದ್ಧ ಹೋರಾಟದ ದುರಂತ ಜೀವನವಾಗಿದೆ.

ಇವರ ಪ್ರತಿ ಗ್ರಾಮಕ್ಕೆ ಒಬ್ಬನಂತೆ ಸಮಾಜದ ಗುರಿಕಾರನಿದ್ದಾನೆ. ಈತನೇ ಇವರ ಸಮಾಜದ ಸೂತ್ರಧಾರಿ, ಮದುವೆ, ಮರಣ, ಉತ್ತರಕ್ರಿಯೆ ಮುಂತಾದ ಸಮಾರಂಭದ ಸಮಯ ಗುರಿಕಾರನ ನಿರ್ಣಯಕ್ಕೆ ತುಂಬಾ ಮಹತ್ವ ಹಾಗೂ ಮನ್ನಣೆ ಕೊಡುವರು. ಜಾತಿಯ ನೀತಿಗೆ ಧಕ್ಕೆ ಬಂದರೆ ಮೊದಲು ಗ್ರಾಮದಲ್ಲಿ ನ್ಯಾಯ ಇತ್ಯರ್ಥವಾಗಬೇಕು. ಅನಂತರ ೫ ಗ್ರಾಮಗಳು ಒಟ್ಟಾಗಿ ಹಾಗೂ ಮುಂದೆ ಸೀಮೆ, ಹೋಬಳಿಯವರು ನ್ಯಾಯ ಕೊಡುವ ಪೂರ್ವ ಪದ್ಧತಿ ಇದೆ. ಚಿನ್ನ ಯಾ ಹಿತ್ತಾಳಿಯ ಮೆರಗು ಇರುವ ಕೈ ಬಳೆಯನ್ನು ತನ್ನ ಕೈಗಳಿಗೆ ತೊಟ್ಟುಕೊಂಡು ಸಮಾರಂಭದಲ್ಲಿ ಮೆರೆದಾಡುವುದೆಂದರೆ ಮುಖಾರಿಯಾದವನಿಗೆ ಬಲು ಹೆಮ್ಮೆ ಮತ್ತು ಗೌರವ ಪೂರ್ವದಲ್ಲಿ ಇವರ ಸಮಾಜದ ಗುರಿಕಾರನನ್ನು ನೇಮಿಸುವ ಅಧಿಕಾರ ಅವರು ನೆಲೆಸಿದ ಗುತ್ತು, ಬೀಡುಗಳ ಯಜಮಾನರಿಗಿತ್ತು ಎಂದು ಹೇಳಲಾಗಿದೆ.

ಮುಂಡಾಲರಲ್ಲಿ ಈಗೀಗ ಕೆಲವರು ವಿದ್ಯಾವಂತ ತರುಣರು ಹಾಗೂ ಪ್ರಗತಿಪರ ವಿಚಾರವಂತರು ತಮ್ಮ ಸಮಾಜದ ಪೂರ್ವ ಸಂಪ್ರದಾಯಕ್ಕೆ ಅಂಟಿಕೊಳ್ಳದೇ ತಮ್ಮದೇ ಆದ ಹಿಂದೂ ಕ್ರಮದ ರೀತಿ ನೀತಿಗಳಂತೆ ಹಾಗೂ ಅಲ್ಲಲ್ಲಿಯ ಗ್ರಾಮ ಸಂಘ, ಭಜನೆ ಸಂಘಗಳ ಕಾರ್ಯಕರ್ತರನ್ನು ಕೂಡಿಸಿ, ತಮ್ಮ ಮದುವೆ ಮಂಗಳ ಕಾರ್ಯ ಅನುಕೂಲಕ್ಕೆ ತಕ್ಕಂತೆ ಜರಗಿಸಿದ ಅನೇಕ ಘಟನೆಗಳು ಇದೀಗ ನಡೆಯುತ್ತಾ ಬಂದಿವೆ. ಪೂರ್ವ ಕಾಲದ ಜಾತಿ ನೀತಿ ಆಚರಣೆ ಅತಿ ಬಿಗುವಾಗಿದ್ದು, ಅದು ಈಗಿನ ವಿದ್ಯಾವಂತ ಯುವಕರಿಗೆ ಸರಿ ಬೀಳದಿರುವುದೇ ಇದಕ್ಕೆ ಮುಖ್ಯ ಕಾರಣ. ಪೂರ್ವದಲ್ಲಿ ಈ ಪಂಗಡದವರು ಮಗ್ಗದ ಕೆಲಸದವರಾದ ತುಳುವಿನಲ್ಲಿ ಕರೆಯುವ 'ತಾಲ್ಯ' ಎಂಬುವರಲ್ಲಿ ಮತ್ತು ಕ್ಷೌರದ ಕೆಲಸ ಮಾಡುವ 'ಕೆಲೆಸಿ' ಎಂಬವರಲ್ಲಿ ಊಟೋಪಚಾರ ಹಾಗೂ ನೀರನ್ನು ಸ್ವೀಕರಿಸುತ್ತಿದ್ದಿಲ್ಲ. ಇವರಲ್ಲಿ ವಿಧವೆಯರು ಪುನಃ ಮದುವೆಯಾಗಬಹುದು. ಅಂತೆಯೇ ಓರ್ವ ಗಂಡಸು ೨ ಯಾ ೩ ಹೆಣ್ಣುಗಳನ್ನು ಮದುವೆಯಾಗಬಹುದು. ಹೆಣ್ಣಿನ ನಡತೆ ಗಂಡಿಗೆ ಸರಿಬಾರದಿದ್ದಲ್ಲಿ ಗಂಡಸು ಹೆಣ್ಣನ್ನು ಬಿಡಬಹುದು. ಹೆಣ್ಣು ಕೂಡಾ ಗಂಡಬೇಡವೆಂದಾದರೆ ಬಿಡಬಹುದು. ಆದರೆ ಹೆಣ್ಣು ಗಂಡ ಬೇಡವೆಂದು ಬಿಟ್ಟು ಬಿಡುವುದಾದರೆ ಗಂಡನಿಂದ ಪಡೆದ ವಧುದಕ್ಷಿಣೆ ಮತ್ತು ದಾರಿ ಖರ್ಚಿನ ಹಣ ಇತ್ಯಾದಿ ಮರಳಿ ಕೊಡಬೇಕಾಗುವುದು. ಇವರಲ್ಲಿ ಒಂದೇ ಬಳಿಯ (ಗೋತ್ರದ) ಹೆಣ್ಣು ಗಂಡು ಯಾ ಒಂದೇ ಬಳಿಗೆ (ಗೋತ್ರಕ್ಕೆ) ಹುಟ್ಟಿಕೊಂಡ ಗಂಡು ಹೆಣ್ಣು ಗಂಡ ಹೆಂಡಿರಾಗಿ ಸಂಸಾರ ನಡೆಸುವುದು ಸಮಾಜದವರ ತಿಳುವಳಿಕೆಗೆ ಬಂದರೆ ಅಂತಹ ತಪ್ಪಿತಸ್ಥರನ್ನು ಬಹಿಷ್ಕರಿಸಿ ಸಮಾಜದಿಂದ ಹೊರ ಹಾಕುವರು. ಒಂದು ವೇಳೆ ತಮ್ಮ ತಪ್ಪನ್ನು ತಿದ್ದಿಕೊಂಡು ಸಮಾಜದವರೊಂದಿಗೆ ಸೇರಿ ಸಂಸಾರ ನಡೆಸಲು ಅಂತಹ ವ್ಯಕ್ತಿಗಳು ಮನಸ್ಸು ಮಾಡಿದರೆ, ಆಗ ಅಂತಹ ತಪ್ಪಿತಸ್ಥರಾದ ಗಂಡು ಯಾ ಹೆಣ್ಣನ್ನು ಶುದ್ಧ ಮಾಡಿ (ದೂರದ ಕಾಡಿನಲ್ಲಿ ಬಿದಿರಿನ ಏಳು ಸಣ್ಣ ಗುಡಿಸಲು ಕಟ್ಟಿ ಅದಕ್ಕೆ ತೆಂಗಿನ ಸೋಗೆಯನ್ನು ಮುಚ್ಚಿ ತಪ್ಪಿತಸ್ಥರನ್ನು ಆ ಗುಡಿಸಲ ಒಳಗಿನಿಂದ ಓಡಿಸುವರು. ಈ ರೀತಿ ಓಡಿಸುವಾಗ ಗುಡಿಸಲಿಗೆ ಬೆಂಕಿ ಕೊಟ್ಟು ಗುಡಿಸಲ ಒಳಗೆ ಓಡುತ್ತಿರುವ ತಪ್ಪಿತಸ್ಥನಿಗೆ ಕೋಲುಗಳಿಂದ ಹೊಡೆಯುವರು. ತಪ್ಪಿತಸ್ಥ ವ್ಯಕ್ತಿ ಏಳು ಗುಡಿಸಲಿಂದ ಹೊರ ಬರಬೇಕು. ಅನಂತರ ಅರಸಿನ (ತುಳುವಿನಲ್ಲಿ ಕುರಿನೀರು ಎಂದು ಹೇಳುವ) ನೀರನ್ನು ತಪ್ಪಿತಸ್ಥ ವ್ಯಕ್ತಿಗೆ ಕುಡಿಯಲು ಕೊಡುವುದಲ್ಲದೆ ಅಂತಹ ವ್ಯಕ್ತಿಗಳ ತಲೆಗೂ ಹೊಯ್ದು ಸಭೆಗೆ ಸೇರಿಸಿಕೊಳ್ಳುವರು. ಈ ರೀತಿ ಶುದ್ಧ ಮಾಡುವ ಖರ್ಚನ್ನು ತಪ್ಪಿತಸ್ಥ ವ್ಯಕ್ತಿಗಳು ಯಾ ಅವರ ಸಂಬಂಧಿಕರು ವಹಿಸಿಕೊಳ್ಳತಕ್ಕ ಜಾತಿ ನಿಯಮ ಇವರಲ್ಲಿ ರೂಢಿ ಇದೆ.

ಮುಂಡಾಲರು ಸತ್ತರೆ ಹೆಚ್ಚಾಗಿ ಹೂಳಿಡುವ ಕ್ರಮ. ಈಗೀಗ ಮಾತ್ರ ದಹನ ಕೂಡಾ ಮಾಡುವರು. ಸತ್ತ ೧೬ ನೇ ದಿನ ಉತ್ತರಕ್ರಿಯೆ ಮಾಡುವರು. ಉತ್ತರ ಕ್ರಿಯೆಯ ದಿನ ಸತ್ತವರ ಸಂಬಂಧಿಕರು ಮೀಸೆ, ಗಡ್ಡ ಬೋಳಿಸಿ, ಉತ್ತರ ಕ್ರಿಯೆ ಜರಗುವ ಮನೆ ಅಂಗಳದಲ್ಲಿ ದುಃಖ ಮಾಡುವವರ ಸಾಲಿನಲ್ಲಿ ನಿಂತು 'ಮುರಿಯೋ' ಎಂದು ಕೂಗುವರು. ಅಂತೆಯೇ ಹೆಂಗಸರು ಮನೆಯ ಒಳಗೆ ಬಿಳಿ ಸೀರೆ ತೊಟ್ಟು

'ಮುರಿಯೋ' ಎಂದು ದುಃಖಿಸಿ ಹಲವರು ಕೂಗುವರು. ಮನೆಯ ಸಮೀಪ ಮೂರು ಮಾರ್ಗ ಕೂಡುವಲ್ಲಿ ಒಂದು ಸಣ್ಣ ಬಿದಿರಿನ ಗುಡಿಸಲು ಕಟ್ಟಿ, ಅದಕ್ಕೆ ಬಿಳಿ ವಸ್ತ್ರ ಮುಚ್ಚಿ, ಅದರ ಒಳಗೆ ಮಣ್ಣಿನಲ್ಲಿ ಮನುಷ್ಯನ ರೂಪ ಮಾಡಿ ಅದನ್ನು ಸುಡುವ ಪದ್ಧತಿ ಇದೆ. ಆ ಮೇಲೆ ಸತ್ತವರಿಗೂ ದೈವಗಳಿಗೂ ಅನ್ನ ಬಡಿಸುವರು. ಒಂದು ಬಾಳೆ ಎಲೆಯಲ್ಲಿ ಅನ್ನ ಬಡಿಸಿ ಕಾಗೆಗಳಿಗೆ ಇಡುವರು. ಆಗ ಕಾಗೆಗಳು ಬಡಿಸಿದ ಅನ್ನ ತಿನ್ನದಿದ್ದರೆ ಸತ್ತವರ ಆತ್ಮಕ್ಕೆ ನೆಮ್ಮದಿ ಇಲ್ಲವೆಂದು ತಿಳಿಯುವರು. ಅದಕ್ಕಾಗಿ ಎಲ್ಲರೂ ಸತ್ತವರನ್ನು ನೆನೆದು ಪ್ರಾರ್ಥಿಸಿಕೊಳ್ಳುವರು. ಆ ಮೇಲೆ ನೆರೆದವರೆಲ್ಲರೂ ಊಟ ಮಾಡುವರು.

ಇವರ ಮಾತೃಭಾಷೆ ತುಳು. ತಾವು ಪರಿಶಿಷ್ಟ ವರ್ಗದವರಲ್ಲಿ ಮೇಲ್ತರಗತಿಯವರು ಎಂಬ ಭಾವನೆ ಇವರಲ್ಲಿದೆ. ಇವರು ಆಚರಿಸುವುದು ಅಳಿಯಕಟ್ಟು. ಜಿಲ್ಲೆಯಲ್ಲಿ ಇವರು ಅಸ್ಪೃಶ್ಯರು. (ಪಿ. ಕಮಲಾಕ್ಷ – ದ. ಕ. ಜಿಲ್ಲೆಯ ಹರಿಜನ ಮತ್ತು ಗಿರಿಜನ ಸಾಮಾಜಿಕ ಇತಿಹಾಸ – ಪುಟ : ೭೯)

ಬಾಕುಡ ಅಥವಾ ಬತ್ತಡರು :

ಇವರನ್ನು ಐಪಟ್ಟು ಕುಲದವರು ಎಂದು ಕರೆಯುವರು. ಇದಕ್ಕೆ ಕಾರಣ ಇವರಲ್ಲಿ ೫೦ ಬಳಿಗಳಿವೆ ಎಂದು ಹೇಳುತ್ತಾರೆ. ಮೈಸೂರು ಕಡೆಯಲ್ಲೂ ಇವರ ಪಂಗಡವಿದೆ. ಅಲ್ಲಿ ಇವರು ಮೋಡಿ ಕನ್ನಡದಲ್ಲಿ ಮಾತನಾಡುವರು. ಇವರು ಕೇರಳದ ಕಾಸರಗೋಡು, ಮಂಜೇಶ್ವರ ಮಂಗಲ್ಪಾಡಿ, ಕುಂಬಳೆ, ಮೊಗ್ರಾಲ್ ಮತ್ತು ಪುತ್ತೂರು ಕಡೆಯಲ್ಲಿ ಹೆಚ್ಚಾಗಿದ್ದಾರೆ. ಇವರನ್ನು ಕುಂದಾಪುರದ ಕಡೆ ಬತ್ತಡರು ಎಂದು ಕರೆಯುತ್ತಾರೆ. ಕೃಷಿ ಇವರ ಮೂಲ ಕಸುಬು. ಬಂಟರು, ಬಲ್ಲಾಳರ ಆಳುಗಳಾಗಿಯೂ ದುಡಿಯುತ್ತಿದ್ದರು. ಕಾಫಿ ತೋಟಗಳಲ್ಲಿ ಜೀವನ ನಡೆಸಲು ಖಾಯಂ ಆಳುಗಳಾಗಿಯೂ ದುಡಿಯುತ್ತಿದ್ದಾರೆ. ಈ ಜಿಲ್ಲೆಯ ಬಯಲು, ತಪ್ಪಲು ಪ್ರದೇಶಗಳಲ್ಲಿ ಇವರು ವಾಸಿಸುತ್ತಾರೆ. ಜೈನ ಅರಸರ ಕಾಲದಲ್ಲಿ ಸೇನಾಪತಿಗಳೂ ಆಗಿದ್ದರು.

ಈ ಜಿಲ್ಲೆಯ ಮಂಗಳೂರು, ಅತ್ತಾವರ, ಉಳ್ಳಾಲಗಳಲ್ಲಿ ಕೆಲವು ಕುಟುಂಬಗಳಿವೆ. ಇವರಲ್ಲಿಯೂ ಅನೇಕ ಬಳಿಗಳಿವೆ. ಇವರ ಸಮಾಜದ ಮುಖ್ಯಸ್ಥನಿಗೆ ಮುಖಾರಿ, ಜಮಾನ, ಬೊಂಡಾರಿ ಎಂದು ಕರೆಯುತ್ತಿದ್ದರು. ಇವರ ಮೂಲ ದೈವ, ಕಂಗಿರ್ಲು ಮತ್ತು ಕೋಮರಾಯ ಎಂದು ನಂಬುವರು. ಬಾಕುಡರು ಮೂಲತಃ ನಾಗಾರಾಧಕರು ಎಂದು ಹೇಳಿಕೊಳ್ಳುತ್ತಾರೆ. ಈ ಜಿಲ್ಲೆಯಲ್ಲಿ ಇವರು ತುಂಬಾ ಬಡತನದಲ್ಲಿ ಜೀವಿಸುತ್ತಿದ್ದಾರೆ. ತಲೆಗೆ ಮುಟ್ಟಾಳೆ ಧರಿಸುತ್ತಾರೆ. ಇವರ ವಿವಾಹ ಕ್ರಮ ತುಂಬಾ ಸರಳವಾದುದು. ಮದುವೆ ಗೊತ್ತಾದ ನಂತರ ಮದುವಣಿಗಳ ದಿಬ್ಬಣ ಮದುಮಗನ ಮನೆಗೆ ಬರುವುದು, ಮದುಮಗಳು ಮದುಮಗನ ಮನೆಯಲ್ಲಿ ಬಿಳಿ ವಸ್ತ್ರದಲ್ಲಿ ೩ ಕಟ್ಟು ಅಕ್ಕಿ ಮತ್ತು ನಾಲ್ಕು ರೂ. ಪಡೆಯುತ್ತಾಳೆ. ಮದುಮಗನು ಮುಹೂರ್ತದ ಸಮಯದಲ್ಲಿ ಕೆಂಪು ಮುಂಡಾಸು ಕಟ್ಟುತ್ತಾನೆ. ಸಭೆಯಲ್ಲಿ ಗ್ರಾಮದ ಮುಖಾರಿಯು, ಐದು ಜನ ಮುಂದಾಳುಗಳನ್ನು ಕರೆದು ವಧೂವರರ ಕೈಗಳನ್ನು ಜೋಡಿಸಿ ಗ್ರಾಮದ ಗುರಿಕಾರನು ದೇವಸ್ಥಾನದಿಂದ ತಂದ ನೀರಿನಿಂದ ಧಾರೆ ಎರೆಯುವನು. ನಂತರ ಅಕ್ಕಿ ವೀಳ್ಯದೆಲೆ

ಇಟ್ಟು ದೀಪ ಹೊತ್ತಿಸಿ ಗ್ರಾಮದ ಗುರಿಕಾರನು ಅಕ್ಕಿಯನ್ನು ತಲೆಯ ಮೇಲೆ ಹಾಕುವನು. ನಂತರ ಸರ್ವರೂ ಹಾಕುವರು. ನಂತರ ಶೇಂದಿ ಕುಡಿಯಲು ಹೋಗುವರು. ಜೊತೆಯಲ್ಲಿ ಭೋಜನವೂ ನಡೆಯುವುದು. ನಂತರ ವಧೂ ವರರನ್ನು ಅಂಗಳದಿಂದ ಮನೆಯ ಬಳಿಗೆ ಕರೆದುಕೊಂಡು ಹೋಗುತ್ತಾರೆ. ಒಂದು ಎಲೆಯ ಮೇಲೆ ಮದುಮಗಳು ಅನ್ನ ಬಡಿಸುತ್ತಾಳೆ. ಈ ಎಲೆಯಲ್ಲಿ ಐದು ತುಂಡು ಮೀನನ್ನು ಇಡುತ್ತಾರೆ. ಮದುಮಗ ಒಂದಂಶ ಊಟ ಮಾಡುತ್ತಾನೆ. ಮದುಮಗಳ ಮಾವನ ಮಗನು ಒಂದಂಶ ಉಣ್ಣುವನು. ನಂತರ ವಧೂವರರನ್ನು ಚಾಪೆಯ ಮೇಲೆ ಕೂರಿಸಿ ಅವರ ಕೈ ಜೋಡಿಸಿ ಹೀಗೆ ಹೇಳುವನು ಇಂದಿನ ಮದುವೆ ಕ್ರಮಬದ್ಧವಾಗಿ ಸಮಾಜದ ಪೂರ್ವದ ರೀತಿ ನೀತಿ, ಕಟ್ಟು ಕಟ್ಟಳೆಯಂತೆ ನಡೆದಿದೆ. ಸಮಾಜ ಬಾಹಿರ ಕ್ರಮವನ್ನೇನೂ ನಾವು ಅನುಸರಿಸಿಲ್ಲ. ಒಂದೇ 'ಬಳಿ'ಯೊಳಗೆ ಸಂಬಂಧ ನಡೆದಿಲ್ಲ ಎಂದು ಸಭೆಗೆ ತಿಳಿಸಿ ದೇವಸ್ಥಾನದ ನೀರನ್ನು ಚಿಮುಕಿಸುವನು.

ಇವರು ಗುಳಿಗ ಧರ್ಮದೈವ, ಜುಮಾದಿ, ಕಲ್ಲುರ್ಟಿ ಇತ್ಯಾದಿ ಭೂತಗಳನ್ನು ನಂಬುತ್ತಾರೆ. ವರ್ಷಕ್ಕೆ ಒಂದು ಸಾರಿ ಕುಲದೈವ ಹಾಗೂ ಭೂತಗಳಿಗೆ ನೇಮ ಕೋಲ ನಡೆಸುವರು. ಬೇರೆ ಜಾತಿಯವರನ್ನು ಬಾಕುಡ ವರ್ಗದವರು ವಿವಾಹವಾದರೆ ಕೊರಗರಲ್ಲಿ ಶುದ್ಧೀಕರಿಸುವಂತೆಯೇ ಆಚಾರ ನಡೆಸುತ್ತಾರೆ. ತಪ್ಪಿತಸ್ಥರ ಮೇಲೆ ದೇವರ ತೀರ್ಥ ಅಥವಾ ಗೋಮೂತ್ರ ಚಿಮುಕಿಸಿ ಶುದ್ಧೀಗೊಳಿಸುತ್ತಾರೆ. ಹೆಂಗಸರು ತಪ್ಪು ಮಾಡಿದರೆ ಒಂದು ಕೂದಲು, ರೆಪ್ಪೆ ಕೂದಲು ಮತ್ತು ಬೆರಳಿನ ಉಗುರನ್ನು ಕತ್ತರಿಸಿ ಸುಡುವ ಗುಡಿಸಲಿಗೆ ಹಾಕುವರು.

ಸತ್ತವರನ್ನು ಬಿಸಿ ನೀರಿನಲ್ಲಿ ಸ್ನಾನ ಮಾಡಿಸಿ ಹೂಳುವರು. ಗುರಿಕಾರನು ಶ್ರಾದ್ಧದ ದಿನ ತಿಳಿಸುವನು. ಅಂದು ಭೂತ, ಪ್ರೇತಗಳಿಗೆ ಅನ್ನ ಬಡಿಸಿದಾಗ ಸಂಬಂಧಿಕರು 'ಮುರಿಯೋ' ದುಃಖಿಸಿ ಕೂಗುತ್ತಾರೆ. ಶ್ರಾದ್ದದ ದಿನ ಗುಡಿಕಟ್ಟಿ ಮಗನು ಅನ್ನ ಬಡಿಸುವ ಪದ್ಧತಿಯಿದೆ. ಅಂದು ಮುಖ ಕ್ಷೌರ ಮಾಡಿ ಮೀಸೆ ಬೋಳಿಸಬೇಕು. ಇವರು ನಾಲ್ಕು ಕಾಲಿನ ಕುರ್ಚಿ, ಮೇಜುಗಳನ್ನು ಅಥವಾ ಬೇರೆ ಯಾವುದನ್ನೂ ತಲೆಯ ಮೇಲೆ ಹೊರುವುದಿಲ್ಲ. ಇವರ ಭಾಷೆ ತುಳು. ಅಳಿಯ ಸಂತಾನ ಕಟ್ಟನ್ನು ಆಚರಿಸುತ್ತಾರೆ. ಕೆಲವರಲ್ಲಿ ಮಕ್ಕಳ ಕಟ್ಟೂ ರೂಢಿಯಲ್ಲಿದೆ. ಇವರು ಈ ಜಿಲ್ಲೆಯಲ್ಲಿ ಅಸ್ಪೃಶ್ಯರಾಗಿಯೇ ಇದ್ದಾರೆ. (ದ. ಕ. ಜಿಲ್ಲೆಯ ಭೈರರು – ಡಾ. ಡಿ. ಆರ್. ಪಾಂಡುರಂಗ ಪುಟ : ೨೪೮.)

ಮೇರರು : (ಮುಗೇರರು)

ಮುಗೇರರು ತುಳುನಾಡಿನಾದ್ಯಂತ ವಾಸವಾಗಿದ್ದಾರೆ. ಅವರ ವ್ಯಾಪ್ತಿಯನ್ನು "ತೆನ್ಕಾಯಿ ನೀಲೇಶ್ವರೊಡ್ಡು, ಬಡೆಕ್ಕಾಯಿ ಬಾರ್ಕೂರು ಮುಟ್ಟ, ಪಡ್ಡಾಯಿ ಕಡಲ್ ಮೂಡಯಿ ಗಟ್ಟದ ಬರಿಮುಟ್ಟ. (ದಕ್ಷಿಣದಲ್ಲಿ ನೀಲೇಶ್ವರದಿಂದ ಬಡಗು ಬಾರ್ಕುರುವರೆಗೆ ಪಶ್ಚಿಮದಲ್ಲಿ ಕಡಲು ಮತ್ತು ಪೂರ್ವದಲ್ಲಿ ಘಟ್ಟದವರೆಗೆ) ಎಂದು ಪಾರ್ತನಗಳಲ್ಲಿ ಸೂಚಿಸಲಾಗಿದೆ. ಇತ್ತೀಚೆಗೆ ಉದ್ಯೋಗಕ್ಕಾಗಿ ಕೊಡಗು, ಹಾಸನ,

ಚಿಕ್ಕಮಗಳೂರು ಮತ್ತು ತೀರ್ಥಹಳ್ಳಿಗಳಲ್ಲಿ ಕಾಫಿ ತೋಟದ ಕೆಲಸಗಾರರಾಗಿ, ಕಾಸರಗೋಡು ಪ್ರದೇಶದಿಂದ ವಯನಾಡ್ ಜಿಲ್ಲೆಯ ಚಹ ತೋಟಗಳಿಗೆ ವಲಸೆ ಹೋಗಿದ್ದಾರೆ. ಗುಂಪು ಮನೆಗಳಲ್ಲಿ ವಾಸಿಸುವ ಮುಗೇರರು ಹೆಚ್ಚಾಗಿ ಹಳ್ಳಿಗಳಲ್ಲಿಯೇ ಕಂಡುಬರುತ್ತಾರೆ. ಸಾಮಾನ್ಯವಾಗಿ ಮುಗೇರರು ಕಾಡಿನ ಗುಡ್ಡದ ಬದಿಗಳಲ್ಲಿ ಪ್ರತ್ಯೇಕವಾಗಿಯೇ ಗುಂಪಾಗಿ ವಾಸಿಸುವರು. ಸಮೂಹ ಸಂಸ್ಕೃತಿಯನ್ನೇ ಇವರು ಮೂಲದಲ್ಲಿ ಒಳಗೊಂಡಿದ್ದುದರಿಂದ ಗುಂಪಾಗಿಯೇ ಕಂಡು ಬರುತ್ತಾರೆ. ಮುಗೇರರ ವಾಸ ಸ್ಥಳ ಸಾಮಾನ್ಯವಾಗಿ ಊರಿನ ಹೊರಗೆ ಇರುತ್ತದೆ. ಎತ್ತರ ಪ್ರದೇಶದಲ್ಲಿ, ಗುಡ್ಡದ ಬದಿಯಲ್ಲಿ ವಾಸಿಸುತ್ತಾರೆ. ಯಾವುದೇ ಫಲವತ್ತಾದ ಭೂಮಿಯ ಒಡೆತನವನ್ನು ಹೊಂದಿರದೆ, ಜೀವನಕ್ಕಾಗಿ ದೈಹಿಕ ಶ್ರಮವನ್ನೇ ಅವಲಂಬಿಸಿದ್ದಾರೆ. ಭೂ ಒಡೆತನವಿಲ್ಲದ ಕಾರಣ ಕೃಷಿಯೋಗ್ಯವಲ್ಲದ, ಎತ್ತರದ ಪ್ರದೇಶಗಳಲ್ಲಿಯೇ, ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಗುಡ್ಡದ ಅಥವಾ ಬದಿಯಲ್ಲಿ, ಚಿಕ್ಕ ಚಿಕ್ಕ ಮನೆಗಳನ್ನು ನಿರ್ಮಿಸಿಕೊಂಡಿರುತ್ತಾರೆ. ನಗರದಲ್ಲಿ ಇತ್ತೀಚೆಗೆ ಪೇಟೆಯಿಂದ ಹೊರಗೆ ಇರುವ ಸರಕಾರಿ ಜಮೀನಿನಲ್ಲಿ ಮನೆಯನ್ನು ಕಟ್ಟಿಕೊಂಡಿದ್ದಾರೆ. ಸಾಮಾಜಿಕ ವ್ಯವಸ್ಥೆಯ ಕೆಳಸ್ತರದವರಾದುದರಿಂದ ಊರಿನ ಮಧ್ಯೆ ವಾಸಿಸುವ ಅವಕಾಶವನ್ನು ಇವರಿಗೆ ನೀಡಲಿಲ್ಲ. ಹಾಗಾಗಿ ಊರಿನಿಂದ ದೂರವಾದ ಯಾವುದೇ ಇತರ ಜಾತಿಗಳಿಗೆ ಸಂಪರ್ಕವಿಲ್ಲದಂತಹ ಸ್ಥಳಗಳಲ್ಲಿ ಇವರು ವಾಸವಾಗಿರುತ್ತಾರೆ.

ಮುಗೇರರು ವೃತ್ತಿಯಲ್ಲಿ ಕೃಷಿ ಕಾರ್ಮಿಕರು. ಮೂಲದಲ್ಲಿ ಬೇಟೆಯಾಡುವುದು ಮತ್ತು ಮೀನು ಹಿಡಿಯುವುದು ಇವರ ಕಸುಬಾಗಿತ್ತು. ಇದಕ್ಕೆ ಈಗಲೂ ಈ ಜಾತಿಯಲ್ಲಿ ಹಲವಾರು ಆಧಾರಗಳು ಸಿಗುತ್ತವೆ. ಬೇಟೆಯಲ್ಲಿಯೂ ಬಿಲ್ಲು ಬಾಣಗಳಿಂದಲೇ ಪ್ರಸಿದ್ಧರು. ಅವರು ಸಾಂಸ್ಕೃತಿಕ ವೀರರು ಕೂಡಾ. ಹಂದಿ ಬೇಟೆಯಲ್ಲಿ, ಮೀನು ಬೇಟೆಯಲ್ಲಿ ನಿಷ್ಣಾತರಾಗಿದ್ದರೆಂದು ಮುಗೇರ್ತಿ ಕೋಲಗಳಲ್ಲಿ ಕಂಡು ಬರುತ್ತದೆ. ಇತ್ತೀಚೆಗೆ ಕೃಷಿಯಲ್ಲದೆ, ಅಡಿಕೆ ತೋಟದ ಕೆಲಸ, ಕಲ್ಲು ಕಡಿಯುವುದು ಇತ್ಯಾದಿ ಕೆಲಸಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ವೃತ್ತಿಯ ಜೊತೆಗೆ ಅವರಿಗೆ ಬಂದಿರುವ ಇನ್ನೊಂದು ವೃತ್ತಿ ಕಳ್ಳು ಇಳಿಸುವುದು. ಬಿಲ್ಲವರಿಗೆ ಇದು ಕುಲಕಸುಬಾದರೂ, ಬಿಲ್ಲವರ ನಂತರ ಕಳ್ಳು ಇಳಿಸುವ ಅಧಿಕಾರವಿರುವುದು ಮುಗೇರರಿಗೆ ಮಾತ್ರ. ಹಾಗಾಗಿಯೇ ಮುಗೇರ ಮತ್ತು ಬಿಲ್ಲವರ ಆರಾಧನೆ, ಕುಟುಂಬ ಪದ್ಧತಿ, ಬಳಿಗಳು ಇವುಗಳಲ್ಲಿ ಸಾಮ್ಯತೆ ಕಂಡು ಬರುತ್ತದೆ. ಈ ಕಸುಬುಗಳಲ್ಲದೆ, ಚಾಪೆ ಹೆಣೆಯುವುದು, ಗೊರಬು ಮಾಡುವುದು ಮತ್ತು ಇತರ ಗೃಹೋಪಯೋಗಿ ವಸ್ತುಗಳ ನಿರ್ಮಾಣದಲ್ಲಿಯೂ ಇವರು ನಿಪುಣರು. ಈ ವೃತ್ತಿಯನ್ನು – ಮರ ಏರುವುದು, ಹೊಲಿಗೆ ಕೆಲಸ, ಬೇಟೆ ಗಮನಿಸಿದಾಗ ಮೂಲತಃ ಇವರು ಕಾಡಿನಲ್ಲಿ ಅಥವಾ ಕಾಡಿನ ಬದಿಯಲ್ಲಿಯೇ ಬದುಕುತ್ತಿದ್ದವರೆಂದು ನಿರ್ಧರಿತವಾಗುತ್ತದೆ.

ಮುಗೇರರ ಕುಟುಂಬ ಪದ್ಧತಿಯನ್ನು ಗಮನಿಸಿದಾಗ ಮಾತೃಪ್ರಧಾನ ಮತ್ತು ಪಿತೃಪ್ರಧಾನ ಕುಟುಂಬಗಳ ಸಮ್ಮಿಶ್ರ ಲಕ್ಷಣಗಳು ಕಂಡು ಬರುತ್ತವೆ. ಕುಟುಂಬದಲ್ಲಿ ತಂದೆ ಮತ್ತು ತಾಯಿಗೆ ಸಮಾನ

[illegible]

ಸ್ಥಾನಮಾನಗಳಿವೆ. ಬಳಿಗಳು ತಾಯಿಂದ ಮಕ್ಕಳಿಗೆ ಬರುತ್ತವೆ. ಅಂದರೆ ತಂದೆಯ ಬಳಿಯನ್ನು ಮಕ್ಕಳಿಗೆ ಇಡದೆ, ತಾಯಿಯ ಬಳಿಯಿಂದ ಮಕ್ಕಳನ್ನು ಗುರುತಿಸುತ್ತಾರೆ. ಈ ಕುಟುಂಬದ ಯಾವುದೇ ಕಾರ್ಯಕ್ರಮಗಳಲ್ಲಿಯೂ ಸೋದರ ಮಾವನಿಗೆ ಪ್ರಮುಖ ಸ್ಥಾನಮಾನಗಳಿರುವುದು. ಮದುವೆಯ ಸಂದರ್ಭದಲ್ಲಿ ಹುಡುಗಿಯನ್ನು ಧಾರೆ ಎರೆದುಕೊಡುವುದು ತಾಯಿಯ ಅಣ್ಣ/ತಮ್ಮ ಅಂದರೆ ಸೋದರ ಮಾವ. ಈ ಎರಡು ಅಂಶಗಳಿಂದ ಮುಗೇರರಲ್ಲಿ ಮಾತೃಪ್ರಧಾನ ಕುಟುಂಬ ಪದ್ಧತಿಯಿದೆ ಎಂದು ಕಂಡುಬರುತ್ತದೆ. ಆದರೆ ಕುಟುಂಬದ ಯಜಮಾನನಾಗಿ ತಂದೆಯೇ ಇರುತ್ತಾನೆ. ಮನೆಯ ಯಾವುದೇ ಜವಾಬ್ದಾರಿಗಳು ತಂದೆಗೆ ಬಂದಿರುತ್ತವೆ. ತಂದೆಯ ನಂತರ ಮನೆಯ ಜವಾಬ್ದಾರಿಗಳೆಲ್ಲ ಮಗನಿಗೆ ವರ್ಗಾಯಿಸಲ್ಪಡುತ್ತವೆ. ಆಸ್ತಿಯ ಹಕ್ಕು ಗಂಡು ಮಕ್ಕಳಿಗೆ ಇದೆ. ಆದರೆ ಈ ಆಸ್ತಿಯ ಹಕ್ಕು ಮುಗೇರರಲ್ಲಿ ತುಂಬಾ ಗೌಣವಾಗುತ್ತದೆ. ಭೂ ಒಡೆತನವನ್ನು ಪಡೆದುಕೊಂಡಿರುವ ಕುಟುಂಬಗಳು ಬಹಳ ವಿರಳ. ಹಾಗೆ ಒಂದು ವೇಳೆ ಆಸ್ತಿಯಿದ್ದರೆ, ಅದನ್ನು ಗಂಡು ಮಕ್ಕಳಿಗೆ ಬಿಟ್ಟು ಬಿಡುತ್ತಿದ್ದರೆ, ಹೆಣ್ಣು ಮಕ್ಕಳು ಮದುವೆಯಾಗಿ ಗಂಡನ ಮನೆಗೆ ತೆರಳುವುದರಿಂದ, ಅವರಿಗೆ ಅದರಲ್ಲಿ ಪಾಲನ್ನು ಬಿಡುವುದಿಲ್ಲ. ಆದರೆ ಇತ್ತೀಚೆಗೆ ಸರ್ಕಾರದ ಕಾನೂನಿಗೆ ಅನುಗುಣವಾಗಿ ಹೆಣ್ಣಿಗೆ ಕೂಡಾ ಆಸ್ತಿಯ ಹಕ್ಕಿನ ವಿಚಾರ ಮುಗೇರರಲ್ಲಿ ಅಷ್ಟೊಂದು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುವುದಿಲ್ಲ. ಏಕೆಂದರೆ ಮೂಲದಲ್ಲಿ ಮುಗೇರರು ಯಾರು ಕೂಡ ಆಸ್ತಿಯ ಒಡೆತನವನ್ನು ಹೊಂದಿದವರಲ್ಲ. ಇತ್ತೀಚೆಗೆ ಆಸ್ತಿಯನ್ನು ಸಂಪಾದಿಸಿಕೊಂಡಿರುವುದರಿಂದ, ಅದನ್ನು ಗಂಡು ಮಕ್ಕಳಿಗೆ ಬಿಟ್ಟು ಬಿಡುತ್ತಾರೆ. ಕುಟುಂಬದಲ್ಲಿ ಗಂಡ ಮತ್ತು ಹೆಂಡತಿಗೆ ಸಮಾನ ಅವಕಾಶ ಮತ್ತು ಸ್ಥಾನಮಾನಗಳಿವೆ. ಇದಕ್ಕೆ ಮುಖ್ಯ ಕಾರಣ ಹೆಣ್ಣು, ಗಂಡಿನಷ್ಟೇ ದುಡಿಮೆಯಲ್ಲಿ ಪಾಲ್ಗೊಳ್ಳುತ್ತಾಳೆ. ಯಾವುದೇ ಸ್ಥಿರವಾದ ಆರ್ಥಿಕ ಆಧಾರಗಳಿಲ್ಲದಿರುವುದರಿಂದ ಇಬ್ಬರೂ ದುಡಿಮೆಯನ್ನು ಅವಲಂಬಿಸಿರಬೇಕಾಗುತ್ತದೆ. ಈ ದುಡಿಮೆ ಅವರಿಗೆ ಸಮಾನತೆಯನ್ನು ತಂದುಕೊಟ್ಟಿದೆ. ಅಲ್ಲದೆ ಗಂಡನನ್ನು ಹೆಂಡತಿ ಏಕವಚನದಲ್ಲಿ ಮತ್ತು ಹೆಂಡತಿಯನ್ನು ಗಂಡನು ಏಕವಚನದಲ್ಲಿಯೇ ಸಂಬೋಧಿಸುತ್ತಿರುತ್ತಾರೆ. ಶುಭ ಸಮಾರಂಭಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಇಬ್ಬರಿಗೂ ಸಮಾನ ಸ್ಥಾನಮಾನಗಳಿವೆ. ವಿವಾಹ ವಿಚ್ಛೇದನಕ್ಕೆ ಗಂಡನಿಗೆ ಎಷ್ಟು ಅವಕಾಶಗಳಿವೆಯೋ ಹೆಂಡತಿಗೆ ಅಷ್ಟೇ ಅವಕಾಶಗಳಿವೆ. ತನಗೆ ಗಂಡನ ಜೊತೆ ಬಾಳಲು ಸಾಧ್ಯವಿಲ್ಲದಿದ್ದರೆ, ಆಕೆ ಗಂಡನನ್ನು ಬಿಟ್ಟು, ಬೇರೆಯವರನ್ನು ಮದುವೆ ಆಗಬಹುದು. ಮದುವೆಯಲ್ಲಿಯೂ ಹೆಣ್ಣು, ಗಂಡಿನ ಎಡಭಾಗದಲ್ಲಿಯೇ ಕುಳಿತಿರಬೇಕೆಂಬ ನಿಯಮವಿಲ್ಲ. ಅಲ್ಲದೆ ಈ ಎಡಬಲಗಳ ತಾರತಮ್ಯ ಮುಗೇರರಲ್ಲಿ ಕಂಡುಬರುವುದಿಲ್ಲ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಮುಗೇರರದು ಮಾತೃಪ್ರಧಾನ ಕುಟುಂಬ ಎಂದು ಕಂಡುಬರುತ್ತದೆ.

ಮುಗೇರರಲ್ಲಿ ಒಟ್ಟು ೧೮ ಬಳಿಗಳಿವೆ – ಕೂರ್ಮೆರ್, ಬಂಗೇರ, ಸಾಲಿಯಾನ್, ಕುಂಡದಣ್ಣ, ಐರದಣ್ಣ, ಬೀಮದಣ್ಣಾ, ಕುಮೇರ್ದಣ್ಣ, ಮಟ್ಟೆದಣ್ಣ, ಪೂವದನ್ನ, ಅರ್ಪುದನ್ನ, ಉಪ್ಪೆನ್ನ, ಮಾರದಣ್ಣ, ಮಂಜದಣ್ಣ, ಭದ್ರದನ್ನ, ಕನ್ನಪನ್ನ, ಪುಲ್ಲೇಟ್ಟನ್ನ, ಮರ್ದೆರ್ – ಹೀಗೆ ೧೮ ಬಳಿಗಳನ್ನು ಹೇಳಿದ್ದರೂ ಇನ್ನು

ಕೆಲವು ಬಳಿಗಳು ಕಂಡು ಬರುತ್ತವೆ. ಉದಾ : ವಾಗೆಟ್ಟನ್ನ, ಕಂರ್ಬೆರ್, ಭಾಗ್ಯ, ಬಿದ್ರನ್ನ, ಕೆಸರ್ದನ್ನೆ. ಮುಗೇರರಲ್ಲಿ ಸಮಾನ ಬಳಿಗಳಲ್ಲಿ ಮದುವೆ ನಡೆಯುವುದಿಲ್ಲ. ಅವರು ಸಹೋದರ ಸಹೋದರಿಯರಾಗುತ್ತಾರೆ. ಈ ೧೮ ಬಳಿಗಳಲ್ಲಿ ಕೂರ್ಮೆರ್ ಬಳಿಯೇ ಅತೀ ಶ್ರೇಷ್ಠವೆಂದು ಪ್ರತಿಯೊಬ್ಬರು ಒಪ್ಪಿಕೊಳ್ಳುತ್ತಾರೆ. ಅಲ್ಲದೆ ಈ ಬಳಿಯ ಹೆಣ್ಣುಗಳನ್ನೇ ಮದುವೆಯಾಗಲು ಹೆಚ್ಚಾಗಿ ಇಷ್ಟಪಡುತ್ತಾರೆ.

ಮುಗೇರರು ತಮ್ಮ ಮದುವೆಯನ್ನು ಅನುಕೂಲಕ್ಕೆ ತಕ್ಕಂತೆ ಮಾಡುವರು. ಹಿಂದಿನ ಕಾಲದಲ್ಲಿ ಇವರ ಮದುವೆ ಹೆಚ್ಚಾಗಿ ಭಾನುವಾರ ರಾತ್ರಿ ಸಮಯದಲ್ಲಿ ಜರಗುತ್ತಿತ್ತು. ಅಂದು ರಾತ್ರಿ ವರನ ದಿಬ್ಬಣ ವಧುವಿನ ಮನೆಗೆ ಅತೀ ವಿಜೃಂಭಣೆಯಿಂದ ('ದುಡಿ' ಎಂದು ತುಳುವಿನಲ್ಲಿ ಕರೆಯುವ ಚರ್ಮದ ಡೋಲಿನ ಆಕೃತಿಯ ಡಮರನ್ನು ಗಂಡಸರು ಬಾರಿಸುತ್ತಾ) ಹೋಗುವುದು. ಜೊತೆಗೆ ಕೊಳಲು, ತಾಳ, ಬಿದಿರಿನ ಸಲಾಕೆಗಳ ಬಡಿತ ಹೆಂಗಸರ ಕುಣಿತ ಹಾಗೂ ಹಿರಿಯರು ಮದುವೆಯ ತುಳು ಪಾಡ್ದನದ ಹಾಡನ್ನು ಹಾಡುತ್ತಾರೆ. ಈ ರೀತಿ ವರನ ದಿಬ್ಬಣ ಹೋಗುವ ಪದ್ಧತಿ ಹಿಂದಿನ ಕಾಲದಲ್ಲಿ ಇತ್ತು. ಈಗಲೂ ಹಳ್ಳಿಗಳಲ್ಲಿ ಅದೇ ಕ್ರಮ ಇದೆ. ಆದರೆ ಕೊಳಲು ಮತ್ತು ತಾಳದ ಬದಲು ವಿದ್ಯಾವಂತರಾದವರು ವಾದ್ಯ, ಬೇಂಡು ಇತ್ಯಾದಿ ನವೀನ ವಾದ್ಯಗಳೊಂದಿಗೆ ವಿಜೃಂಭಣೆಯಿಂದ ಮದುವೆ ಜರಗಿಸುವರು. ವರನ ದಿಬ್ಬಣ ವಧುವಿನ ಮನೆಗೆ ಬಂದಾಗ, ಮದುಮಗನನ್ನು ವಧುವಿನ ಮನೆಯ ಅಂಗಳದಲ್ಲಿ ಹೊಸದಾದ ಚಾಪೆಯಲ್ಲಿ ಕೂತುಕೊಳ್ಳಿಸುವರು. ಅನಂತರ ಮುಹೂರ್ತ ಸಮಯ ಸಮೀಪಿಸಿದಂತೆ ವರನನ್ನು ಸಿಂಗರಿಸಿ, ಸೊಂಟಕ್ಕೆ ಮಗ್ಗದ ವಸ್ತ್ರವನ್ನು ತೊಡಿಸಿ, (ಸೊಂಟದ ಮೇಲೆ ಹೆಚ್ಚಾಗಿ ವಸ್ತ್ರ ತೊಡುವ ಪದ್ಧತಿ ಹಿಂದೆ ಇರಲಿಲ್ಲ) ಕೈಗಳಿಗೆ, ಕಿವಿಗಳಿಗೆ ಆಭರಣ ತೊಡಿಸುವರು. ತಲೆಗೆ ಕೆಂಪು ಯಾ ಹಳದಿ ಬಣ್ಣದ ವಸ್ತ್ರದಿಂದ ಮುಂಡಾಸು ಕಟ್ಟುವರು. ವಧುವನ್ನು ಕೂಡಾ ಹೂ ಮುಡಿಸಿ, ಸಿಂಗರಿಸಿ, ಮಗ್ಗದ ಸೀರೆ ತೊಡಿಸಿ, ಸೊಂಟದ ಮೇಲೆ ಮಗ್ಗದ ವಸ್ತುವನ್ನು ಸುತ್ತುವರು. (ರವಕೆ ಹಾಕುವ ಪದ್ಧತಿ ಹಿಂದೆ ಇರಲಿಲ್ಲ) ಅಂತೆಯೇ ವಧುವಿನ ಕೈ ಮತ್ತು ಕಿವಿಗಳಿಗೆ ಹಿತ್ತಾಳೆ, ಬೆಳ್ಳಿ ಅಥವಾ ಕಂಚಿನ ಆಭರಣಗಳನ್ನು ಅತಿಯಾಗಿ ತೊಡಿಸುವರು. ಕೊರಳಿಗೆ ತುಂಬಾ ಮಣಿ ಸರಗಳನ್ನೂ ಧರಿಸುವರು. ಆ ಮೇಲೆ ಧಾರೆಯ ಮೊದಲು ಎರಡೂ ಕಡೆಯ ಗ್ರಾಮದ ಗುರಿಕಾರರು ಸೇರಿ ತಮ್ಮ ದೈವ, ಕುಲದೈವ, ದೇವರುಗಳಿಗೆ ಪ್ರಾರ್ಥನೆಯನ್ನು ಸಲ್ಲಿಸಿ, ವಧೂವರರಿಗೆ ಶುಭವನ್ನು ಪ್ರಾರ್ಥಿಸುವರು. ಮುಂದೆ ವಧೂವರರ ಕೈಗಳನ್ನು ಗುರಿಕಾರನು ಮೇಲಕ್ಕೆ ಎತ್ತಿ ಧಾರೆಯೆರೆಯುವನು. ಅನಂತರ ಗುರಿಕಾರನು ವಧುವಿಗೆ ತಾಳಿ ಕಟ್ಟುವನು. ತಾಳಿಯ ಜೊತೆಗೆ ಬೆಳ್ಳಿಯ ಉದ್ದದ ನೂಲನ್ನು ವಧುವಿನ ಬೆನ್ನಿನ ಸುತ್ತ ಕಟ್ಟುವ ಪದ್ಧತಿ ಹಿಂದೆ ರೂಢಿಯಲ್ಲಿತ್ತು. ಆದರೆ ಈಗ ಇಲ್ಲ. ಅನಂತರ ಎಲ್ಲರೂ ಸೇರಿ ಅಕ್ಕಿಕಾಳನ್ನು ವಧೂವರರಿಗೆ ಹಾಕುವರು. ಅಕ್ಕಿಕಾಳು ಹಾಕುವ ಮೊದಲು ಒಂದು ಬಾಳೆ ಎಲೆಯಲ್ಲಿ ಒಂದು ಸೇರು ಅಕ್ಕಿ, ಎಲೆ ಅಡಿಕೆ ಇತ್ಯಾದಿ ಇಟ್ಟು ಅದರ ಜೊತೆಗೆ ಹಣತೆಯ ದೀಪ ಕೂಡಾ ಇಟ್ಟು ಎಲೆಯನ್ನು ಎತ್ತರದ ಮರದ ಮಣೆಯ ಮೇಲೆ ಇಡುವರು. ಇದಕ್ಕೆ ಗಣಪತಿ ಇಡುವುದು ಎಂದು ಕರೆಯುವರು. ಈ ರೀತಿ ಇವರ ಮದುವೆ ಕಾರ್ಯಕ್ರಮ ಹಿಂದಿನ ಕಾಲದಲ್ಲಿ ಸುಮಾರು ಐದು

ದಿನಗಳವರೆಗೆ ಜರಗುತ್ತಿತ್ತು. ಆದರೆ ಈಗ ಒಂದೇ ದಿನದಲ್ಲಿ ಜರಗುತ್ತದೆ. ಇವರಲ್ಲಿ ಮದುವೆಯ ಮರುದಿನ ವಧೂವರರ ಹತ್ತಿರದ ನದಿಗೆ ಯಾ ಕೆರೆಗೆ ಹೋಗಿ, ಹೊಸ ಚಾಪೆಯನ್ನು ಕೆರೆಯಲ್ಲಿ ಮುಳುಗಿಸಿ, ವಧೂವರರಿಬ್ಬರೂ ಕೂಡಿ ಮೀನು ಹಿಡಿಯುವ ಪದ್ಧತಿ ಹಿಂದೆ ಬಳಕೆಯಲ್ಲಿತ್ತು. ಆದರೆ ಈಗೀಗ ಇವರ ಮದುವೆಯ ಪದ್ಧತಿ ತೀರಾ ಸುಧಾರಿತವಾಗಿದೆ. ಈಗೀಗ ನವೀನ ರೀತಿಯ ಉಡುಪನ್ನು ಧರಿಸುವರು, ಬೇಂಡು ವಾದ್ಯಗಳಿಂದ ವರನ ದಿಬ್ಬಣ ಹೋಗುವುದು ಮತ್ತು ಮದುವೆಯನ್ನು ವಿಜೃಂಭಣೆಯಿಂದ ಜರುಗಿಸುವರು. ಮಾತ್ರವಲ್ಲ ವಧೂವರರು ಮೀನು ಹಿಡಿಯುವಂತಹ ಹಿಂದಿನ ಪದ್ಧತಿಯನ್ನು ಆಚರಿಸುವುದಿಲ್ಲ, ಮುಗೇರರಲ್ಲಿ ವರನು ವಧುವಿಗೆ ಹಿಂದೆ ರೂ. ೧೬ನ್ನು ವಧು ದಕ್ಷಿಣೆಯಾಗಿ ಕೊಡುವ ರೂಢಿ ಇತ್ತು. (ತುಳುವಿನಲ್ಲಿ ಇದಕ್ಕೆ 'ನಾಲ್‌ವರನ್' ಎಂದು ಹೇಳುವರು) ಅಂತೆಯೇ ಜೊತೆಗೆ ವರನ ಅಕ್ಕಿಕಾಳು, ವೀಳ್ಯದೆಲೆ ಇತ್ಯಾದಿಗಳನ್ನು ದಿಬ್ಬಣದ ಜೊತೆ ಹಿಂದಿನ ಕಾಲದಲ್ಲಿ ಕೊಂಡುಹೋಗುವ ಪದ್ಧತಿ ಇತ್ತು. ಈಗ ಅದು ಇಲ್ಲವಾಗಿದೆ. ಆದರೆ ಈಗ ವಧುದಕ್ಷಿಣೆ ರೂ. ೫೦ನ್ನು ಕೊಡಬೇಕಾಗಿದೆ. ಮುಗೇರರಲ್ಲಿ ಮೃತಪಟ್ಟರೆ ಅನುಕೂಲಕ್ಕೆ ತಕ್ಕಂತೆ ಹೂಳಿಡುವ ಅಥವಾ ದಹನ ಮಾಡುವ ಎರಡೂ ಕ್ರಮಗಳನ್ನು ಆಚರಿಸುವರು. ಇವರು ಉತ್ತರ ಕ್ರಿಯೆಯನ್ನು ಮೃತಪಟ್ಟ ೧೧ ಯಾ ೧೩ ನೇ ದಿನದಲ್ಲಿ ಮಾಡುವರು. ಅಂದು ಮೃತಪಟ್ಟವನಿಗೂ ತಮ್ಮ ದೈವ, ಭೂತಗಳಿಗೂ ಅನ್ನ ಬಡಿಸಿ, ಸತ್ತವರ ಆತ್ಮಕ್ಕೆ ಪ್ರಾರ್ಥನೆ ಮಾಡುವರು. ಪ್ರಾರ್ಥನೆಯಲ್ಲಿ ಗ್ರಾಮಸ್ಥರೂ, ನೆಂಟರೂ ಸೇರುವರು. ಅನಂತರ ಸತ್ತವರ ಆತ್ಮಕ್ಕೆ ಶಾಂತಿ ಕೋರಿ, ಕಾಗೆಗಳಿಗೆ ಅನ್ನವಿಟ್ಟು ಪ್ರಾರ್ಥಿಸುವ ಪದ್ಧತಿಯಿದೆ. ಮುಗೇರರು ಈಗೀಗ ತಮ್ಮ ಸಮಾಜದಲ್ಲಿ ತುಂಬಾ ಸುಧಾರಣೆ ಬಯಸುವರು. ಬಹು ಸಂಖ್ಯೆಯಲ್ಲಿ ವಿದ್ಯಾವಂತರಾಗಿ ಮುಂದೆ ಬರಲು ಆಸಕ್ತರಾಗಿರುವರು. ಅಂತೆಯೇ ಹಳ್ಳಿಗಳಲ್ಲಿ ಸ್ವಂತ ದರಖಾಸ್ತು ಜಮೀನು, ಮನೆ, ಕೃಷಿ ಇತ್ಯಾದಿ ಮಾಡಿಕೊಂಡು ಸ್ವಾವಲಂಬನೆಯಿಂದ ಜೀವನ ಮಾಡುವ ಸ್ವತಂತ್ರ ಮನೋವೃತ್ತಿ ಹೆಚ್ಚಿನವರಲ್ಲಿ ಬೆಳೆದು ಬಂದಿದೆ. ಇವರಲ್ಲಿ ವಿದ್ಯಾವಂತರಾದವರು ಸರಕಾರಿ ಉದ್ಯೋಗದಲ್ಲಿದ್ದು ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಲು ಪ್ರಯತ್ನಪಟ್ಟು ದುಡಿಯುತ್ತಿರುವರು. ಆದರೆ ಜಿಲ್ಲೆಯ ಹಳ್ಳಿಗಳಲ್ಲಿರುವ ಮುಗ್ಗೇರರು ಬಹಳ ಬಡತನದ ಜೀವನ ನಡೆಸುತ್ತಿರುವರು. ಸರಕಾರದ ಯಾವತ್ತೂ ಸವಲತ್ತುಗಳಿಂದ ದೂರವಾಗಿರುವರು. ಪ್ರಾಮಾಣಿಕತೆಯೇ ಇವರ ಜೀವನದಲ್ಲಿ ತೋರುವ ಆದರ್ಶ ಧ್ಯೇಯ. ಮುಗೇರರು ಜಿಲ್ಲೆಯಲ್ಲಿ ಅಸ್ಪೃಶ್ಯರಾಗಿದ್ದರೂ ಹರಿಜನ, ಗಿರಿಜನರಲ್ಲಿ ಮಾದರಿ ಜೀವನ ನಡೆಸಿ, ಇತರರಿಗೆ ಆದರ್ಶರಾಗಿರುವರು. ಜಿಲ್ಲೆಯಲ್ಲಿ ಮುಗೇರರು ಅಸ್ಪೃಶ್ಯರು, ಮುಗೇರರನ್ನು 'ಕೈಪುಡರು' ಎಂಬುದಾಗಿ ಕೂಡಾ ಜಿಲ್ಲೆಯಲ್ಲಿ ಕರೆಯುವರು. ಅಲ್ಲದೆ ಮುಗೇರರು 'ಮಹಾಕಾಳಿ' ಎಂಬ ಹೆಣ್ಣು ದೈವವನ್ನು ಇವರ ಹೆಚ್ಚಿನ ಗ್ರಾಮಸ್ಥರು ಕೂಡಿ ಬಲು ಗೌಜಿಯಿಂದ ನೇಮ ಮಾಡಿ ಆರಾಧಿಸುವರು. (ಡಾ. ಅಭಯ್ ಕುಮಾರ್ – ಮುಗೇರರ – ಜನಾಂಗ ಜಾನಪದ ಅಧ್ಯಯನ ಪುಟ : ೨೫)

ಮಲೆಕುಡಿಯರು :

ಮಲೆಕುಡಿಯರು ಒಂದು ಬುಡಕಟ್ಟು ಸಮುದಾಯಕ್ಕೆ ಸೇರಿರುವ ಜನಾಂಗ. ಮಲೆಕುಡಿಯರನ್ನು ಕುಡಿಯ, ಮಲೆಕುಡಿಯ, ಬರ್ಕೆಯವರು ಮತ್ತು ಗೌಡ ಎಂಬಿತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. 'ಮಲೆಕುಡಿಯ' ಎಂಬುದು 'ಮಲೆ' ಎಂದರೆ 'ಬೆಟ್ಟ'ವೆಂದು 'ಕುಡಿ' ಎಂದರೆ ವಂಶ (ಮಕ್ಕಳು) ಎಂಬ ಅರ್ಥ ಇದೆ. ಈ ಪದದ ಅರ್ಥ 'ಬೆಟ್ಟಗಳ ಮಕ್ಕಳೆಂದು' ಆಗುತ್ತದೆ. ತುಳುನಾಡಿನ ಜನ 'ಮಲೆತ್ತಾಯ' (ಮಲೆತ್ತಕುಲು) ಎಂದು ಕರೆಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ಬಂಟ್ವಾಳ, ಬೆಳ್ತಂಗಡಿ, ಮುಂತಾದ ಕಡೆಗಳಲ್ಲಿ ವಾಸವಾಗಿದ್ದಾರೆ. ಕುಡಿಯರು ಮತ್ತು ಮಲೆಕುಡಿಯರು ಬೇರೆ ಬೇರೆ ಬುಡಕಟ್ಟು ಪಂಗಡಕ್ಕೆ ಸೇರಿದವರು ಎಂಬ ಭಿನ್ನಾಭಿಪ್ರಾಯವು ವಿದ್ವಾಂಸರಲ್ಲಿದೆ. ಆದರೆ ಇದೇ ವಾದವನ್ನು ಥರ್ಸ್ಟನ್ ಮತ್ತು ರಂಗಾಚಾರಿಯವರು ಕುಡಿಯ ಮತ್ತು ಮಲೆಕುಡಿಯ ಗುಂಪುಗಳು ಒಂದೇ ಎಂದು ಹೇಳಿದ್ದಾರೆ. (ಕರ್ನಾಟಕ ರಾಜ್ಯ ಕೋಶ : ೪–ಜನಸಮುದಾಯ ಸಂಪುಟ–ಸಂಪಾದಕ ಎಚ್. ಡಿ.ಪ್ರಶಾಂತ್, ಪ್ರಸಾರಾಂಗ: ಕನ್ನಡ ವಿಶ್ವವಿದ್ಯಾಲಯ ಹಂಪಿ–ಪುಟ –೨೦,–೨೦೦೦)

ಮಲೆಕುಡಿಯರು ಮಾತನಾಡುವ ಭಾಷೆ ತುಳು. ಇವರ ತುಳು ಭಾಷೆ ತಮಗೆ ಅರ್ಥವಾಗುವುದಿಲ್ಲವೆಂದು ಇತರ ತುಳು ಭಾಷಿಕರು ಹೇಳುತ್ತಾರೆ. ಮಲೆಕುಡಿಯರ ತುಳು ಅದು ಪ್ರಾಚೀನ ಸ್ವರೂಪದ ತುಳು ಆಗಿರಬೇಕು ಎಂಬ ಅಭಿಪ್ರಾಯವಿದೆ. ಆ ಪ್ರಾಚೀನ ಸ್ವರೂಪದ ತುಳು ಭಾಷೆಯನ್ನು ಆ ಸಮೂದಾಯದವರು ತಮ್ಮ ಸಮುದಾಯದ ವ್ಯಕ್ತಿಗಳ ಜೊತೆ ಮಾತ್ರ ಮಾತನಾಡುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಆ ತುಳು ಮಾಯವಾಗುತ್ತಿದೆ. ಆದರೆ ಇವರಲ್ಲಿ ಕೆಲವರು ವ್ಯವಹಾರ ಭಾಷೆಯಾಗಿ ಕನ್ನಡವನ್ನು ಮಾತನಾಡಿ ಕನ್ನಡ ಲಿಪಿಯಲ್ಲಿ ಬರೆಯುತ್ತಾರೆ.

ಮಲೆಕುಡಿಯರಲ್ಲಿ ಮುಖ್ಯವಾಗಿ ಎರಡು ಉಪ ಪಂಗಡಗಳನ್ನು ಗುರುತಿಸಬಹುದು. ೧. 'ಒರುಮಲೆ' ಮಲೆಕುಡಿಯರು ೨. 'ನಾಲ್ಮಲೆ' ಮಲೆಕುಡಿಯರು. 'ಒರುಮಲೆ' ಎಂದರೆ ಇಡೀ ಸಮುದಾಯ ಒಂದೇ ಕಾಡಿನಲ್ಲಿ (ಮಲೆಯಲ್ಲಿ) ವಾಸವಾಗಿರುವವರು, 'ನಾಲ್ಮಲೆ'ಯವರು ಎಂದರೆ ಬೆಳ್ತಂಗಡಿ ತಾಲೂಕಿನ ನೆರಿಯದ ಹತ್ತಿರವಿರುವ ಅಂಬಟೆಮಲೆ, ಬಾಂಜಾರುಮಲೆ, ಬಾರಿಮಲೆ ಮತ್ತು ಎಲಿಮಲೆಗಳಲ್ಲಿ ವಾಸಿಸುವವರು ಎಂಬ ಅರ್ಥ. ಮಲೆಕುಡಿಯರ ಪ್ರತಿಯೊಂದು ಆಚಾರ ವಿಚಾರಗಳು ತಮ್ಮ ಸಮುದಾಯದ 'ಗುರಿಕಾರನ' ಸಮ್ಮುಖದಲ್ಲಿ ನಡೆಯುತ್ತದೆ.

ಹಿಂದಿನ ಕಾಲದಲ್ಲಿ ಮಲೆಕುಡಿಯರು ಆಹಾರಕ್ಕಾಗಿ ಕಾಡುಗಳಲ್ಲಿ ಸಿಗುವ ಗೆಡ್ಡೆ ಗೆಣಸುಗಳನ್ನು ಸಂಗ್ರಹ ಮಾಡುತ್ತಿದ್ದರು. ಜೊತೆಗೆ ಇವರು ಉತ್ತಮ ಭೇಟೆಗಾರರೂ ಹೌದು. ಮಲೆಕುಡಿಯರಲ್ಲಿ ಕೆಲವರು ಸ್ವಂತ ಜಮೀನು ಹೊಂದಿದ್ದರೆ, ಇನ್ನು ಕೆಲವರು ಬಂಡವಾಳಶಾಹಿಗಳ ತೋಟಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ನಾಲ್ಮಲೆ ಮಲೆಕುಡಿಯರಲ್ಲಿ ಕೆಲವರು ಸರ್ಕಾರದಿಂದ ಭೂಮಿಯನ್ನು ಪಡೆದುಕೊಂಡು,

ಇತರ ಉಪ ಕಸುಬುಗಳಾದ ಬಿದಿರಿನಿಂದ ತಯಾರಿಸಿದ ಬುಟ್ಟಿ ಹಾಗೂ ಚಾಪೆಯನ್ನು ತಯಾರಿಸಿ ತಮ್ಮ ಆರ್ಥಿಕತೆಯನ್ನು ಉತ್ತಮಗೊಳಿಸಿಕೊಂಡಿದ್ದಾರೆ. ಆದರೆ ಇವರಲ್ಲಿ ಇನ್ನೂ ಕೆಲವರು ಆಧುನಿಕ, ಸಾಮಾಜಿಕ ವ್ಯವಸ್ಥೆಗಳನ್ನು ಬಳಸಿಕೊಳ್ಳುವಲ್ಲಿ ಇವರು ಹಿಂದುಳಿದಿದ್ದಾರೆ.

೨. ೨. ಮಲೆಕುಡಿಯರು ಮತ್ತು ಇತರ ಬುಡಕಟ್ಟುಗಳ ಸಾಂಸ್ಕೃತಿಕ ಕೊಳ್ಳು ಕೊಡುಗೆಗಳು :

ಮಲೆಕುಡಿಯರು ಕುಮೇರಿ ಬೇಸಾಯ ಮಾಡುತ್ತಿದ್ದ ಸಂದರ್ಭದಲ್ಲಿ ತಮ್ಮ ಮೂಲ ವಾಸಸ್ಥಳವನ್ನು ಬಿಟ್ಟು, ಕುಮೇರಿ ಬೇಸಾಯ ಮಾಡುತ್ತಿದ್ದ ಸ್ಥಳದಲ್ಲಿ ವಾಸವಾಗುತ್ತಿದ್ದರು. ಈ ಸಂದರ್ಭದಲ್ಲಿ ಮಲೆಕುಡಿಯರಿಗೆ ಒಂದು ನಿರ್ದಿಷ್ಟ ವಾಸಸ್ಥಳದ ಕೊರತೆಯಿತ್ತು. ಮಳೆಯಿಂದ ರಕ್ಷಣೆಗೆ ಮತ್ತು ತಾವು ಬಿತ್ತಿದ ಕುಮೇರಿ ಕೃಷಿಯ ರಕ್ಷಣೆಗೆ ಒಂದು ನಿರ್ದಿಷ್ಟವಾದ ಸಮಯದಲ್ಲಿ ಮಾತ್ರ ತಾತ್ಕಾಲಿಕವಾಗಿ ಕಟ್ಟಿದ ಗುಡಿಸಲುಗಳ ಅವಶ್ಯಕತೆಯಿತ್ತು. ಮಳೆ ದೂರವಾದ ಸಂದರ್ಭಗಳಲ್ಲಿ ಬೇಟೆಯಾಡುತ್ತಿದ್ದರು. ಆ ಸಮಯದಲ್ಲಿ ಗೆಡ್ಡೆ ಗೆಣಸುಗಳನ್ನು ಅರಸುತ್ತಾ ಜೀವನವನ್ನು ನಡೆಸುತ್ತಿದ್ದರು. ಆ ಸಂದರ್ಭದಲ್ಲಿ ಮಲೆಕುಡಿಯರು ನೆಲೆನಿಂತ ನಾಗರಿಕರ ನಿರಂತರ ಸಂಪರ್ಕಕ್ಕೊಳಗಾಗಲೇ ಇಲ್ಲ. ಹೀಗೆ ಒಂದು ನಿರ್ದಿಷ್ಟ ಸಂಸ್ಕೃತಿಯ ಆಕರ್ಷಣೆಗೆ ಒಳಗಾಗದ ಮಲೆಕುಡಿಯರು ತಮ್ಮತನವನ್ನು ಉಳಿಸಿಕೊಂಡು ಬಂದರು. ಕ್ರಮೇಣ ತಾವು ಬೆಳೆದ ಬೆಳೆ – ಬೀಜವನ್ನು ತಾವು ಹೋದಲೆಲ್ಲಾ ಹೊತ್ತು ಸಾಗುವುದು ಕಷ್ಟಕರವೆಂದಾಗ ಗುಡಿಸಲುಗಳನ್ನು ನಿರ್ಮಿಸಿ, ಸುತ್ತಮುತ್ತ ಕಾಡು ಮೇಡುಗಳಲ್ಲಿ ಅಲೆಯುವುದನ್ನು ರೂಢಿಸಿಕೊಂಡ ಮಲೆಕುಡಿಯರು ಕ್ರಮೇಣ ಒಂದು ಕಡೆ ನೆಲೆ ನಿಂತರು. ನೆರಿಯಾದ ಎಲಿಮಲೆಯಲ್ಲಿ (ಕೋಲೋಡಿ) ವಾಸವಾಗಿರುವ ದೇರಪ್ಪ ಮಲೆಕುಡಿಯರ ಹೇಳಿಕೆಯನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಹೀಗೆ ಸುತ್ತಲಿನ ನಾಗರಿಕ ಜಗತ್ತಿನ ಸಂಪರ್ಕಕ್ಕೆ ಒಳಗಾದ ಮಲೆಕುಡಿಯರು ಜೀವನಕ್ಕಾಗಿ ಲೌಕಿಕ ಸಂಸ್ಕೃತಿಯನ್ನು ರೂಢಿಸಿಕೊಂಡರು. ದಿ. ಶ್ರೀಮತಿ ಇಂದಿರಾಗಾಂಧಿಯವರು ಜಾರಿಗೆ ತಂದ ಭೂಮಸೂದೆ ಕಾನೂನಿನನ್ವಯ ಇವರು ಸ್ವತಂತ್ರರೆನಿಸಿಕೊಂಡರು.

ಒಂದು ಸಮಾಜದ ಬದಲಾವಣೆಗೆ ಇನ್ನೊಂದು ಸಮಾಜದ ಸಂಸ್ಕೃತಿಯ ಕೊಳ್ಳುಕೊಡುಗೆಗಳು ಬಹಳ ಮುಖ್ಯವಾದ ಅಂಶಗಳಾಗಿವೆ. ಇಂತಹ ಪ್ರಕ್ರಿಯೆಯಲ್ಲಿ ಶಿಕ್ಷಣ, ಸಾರಿಗೆ, ಸಮೂಹ ಮಾಧ್ಯಮಗಳು ಒಂದು ಸಮಾಜದಿಂದ ಇನ್ನೊಂದು ಸಮಾಜಕ್ಕೆ ಪ್ರಸಾರಗೊಂಡು ಆ ಸಮಾಜದ ಮೇಲೆ ಪ್ರಭಾವ ಬೀರುತ್ತವೆ. ಮಲೆಕುಡಿಯರ ಸಂಸ್ಕೃತಿ ಮತ್ತು ದ. ಕ. ಜಿಲ್ಲೆಯ ಇತರ ಬುಡಕಟ್ಟುಗಳಾದ ಕೊರಗರು, ಮುಂಡಾಲರು, ಬಾಕುಡರು ಮತ್ತು ಮೇರರ ಸಂಸ್ಕೃತಿಗಳ ನಡುವೆ ಸಾಮ್ಯತೆಗಳು ಕಂಡು ಬರುತ್ತವೆ. ಆ ಸಮಾನ ಅಂಶಗಳನ್ನು ಈ ರೀತಿಯಾಗಿ ಗುರುತಿಸಬಹುದು.

೧. ಮಲೆಕುಡಿಯರಲ್ಲಿರುವ ಆಧುನಿಕ ಬೇಸಾಯ ಪದ್ಧತಿ ಇವತ್ತು ದಕ್ಷಿಣ ಕನ್ನಡ ಜಿಲ್ಲೆಯ ಇತರ ಬುಡಕಟ್ಟುಗಳಲ್ಲಿಯೂ ಕಂಡು ಬರುತ್ತದೆ.

೨. ಮಲೆಕುಡಿಯರಲ್ಲಿರುವ ಕರಕುಶಲ ಕಲೆಗಳು ದಕ್ಷಿಣ ಕನ್ನಡ ಜಿಲ್ಲೆಯ ಇತರ ಬುಡಕಟ್ಟುಗಳಲ್ಲಿಯೂ ಇದೆ. ಉದಾಹರಣೆಗೆ ಚಾಪೆ ಹೆಣೆಯುವುದು, ಬುಟ್ಟಿ ತಯಾರಿಕೆ, ಗೊರಬು ಮಾಡುವುದು.. ಇತ್ಯಾದಿ.

೩. ಮಲೆಕುಡಿಯರು ಆಚರಿಸುವ ಹಬ್ಬಗಳಾದ ದೀಪಾವಳಿ, ಮಕ್ಕಳ ಹುಣ್ಣಿಮೆ, ಕೆಡ್ಡಸ, ಯುಗಾದಿ ಮುಂತಾದುವುಗಳನ್ನು ದಕ್ಷಿಣ ಕನ್ನಡದ ಇತರ ಬುಡಕಟ್ಟುಗಳು ಆಚರಿಸುತ್ತವೆ.

೪. ಮಲೆಕುಡಿಯರಲ್ಲಿರುವ ಕೌಟುಂಬಿಕ ಆಚರಣೆಗಳು ಮತ್ತು ಆರಾಧನೆಗಳು ದಕ್ಷಿಣ ಕನ್ನಡದ ಇತರ ಬುಡಕಟ್ಟುಗಳಲ್ಲಿಯೂ ಕೆಲವೊಂದು ಅಂಶಗಳು ಸಮಾನವಾಗಿ ಕಂಡುಬರುತ್ತದೆ.

***

ಅಧ್ಯಾಯ ೩

ಮಲೆಕುಡಿಯರ ಕುಟುಂಬಗಳ ಶಾಸ್ತ್ರೀಯ ಅಧ್ಯಯನ

೩.೧ ಮಲೆಕುಡಿಯರ ಜನಾಂಗದ ಹುಟ್ಟಿನ ಬಗೆಗಿನ ಪುರಾಣ – ಐತಿಹ್ಯ

೩.೨ ಕುಟುಂಬ ಪದ್ಧತಿ, ಗುರಿಕಾರ ಮತ್ತು ಕೂಡುಕಟ್ಟು

೩.೩ ಮಲೆಕುಡಿಯ ಪದದ ಅರ್ಥ – ಪದ ನಿಷ್ಪತ್ತಿ

೩.೪ ಮಲೆಕುಡಿಯ – ಗೌಡ – ಕುಮೇರ ಗೌಡ – ಬರ್ಕೆಯವರು

೩.೫ ಮಲೆಕುಡಿಯರು – ನಾಲ್ಕುಮಲೆಯವರು

೩. ೬ ಮಲೆಕುಡಿಯರ ಜನಸಂಖ್ಯೆ

೩. ೭ ಮಲೆಕುಡಿಯರ ಕೌಟುಂಬಿಕ ಮತ್ತು ಧಾರ್ಮಿಕ ಆರಾಧನೆ

೩. ೭. ೧. ಹುಟ್ಟು, ಬಳಿಗಳು, ಮದುವೆ, ಬಯಕೆ, ಮೈನೆರೆಯುವುದು,
ಮುಟ್ಟಿನ ಮನೆ, ಅಂತ್ಯ ಸಂಸ್ಕಾರ

೩. ೭. ೨. ದೇವಾರಾಧನೆ, ಭೂತಾರಾಧನೆ, ಹಬ್ಬಗಳು

೩. ೭. ೩. ಜೀವನ ವಿಧಾನಗಳು – ಕಸುಬು, ಆಹಾರ ಪದ್ಧತಿ,
ಉಡುಗೆ ತೊಡುಗೆ

೩. ೭. ೪. ಜನಪದ ವೈದ್ಯ

೩. ೭. ೫. ಪ್ರದರ್ಶನಾತ್ಮಕ ಕಲೆಗಳು

೩. ೭. ೬. ಕ್ರೀಡೆಗಳು

೩. ೭. ೭. ಭಾಷೆ ಮತ್ತು ಸಾಹಿತ್ಯ

ಅಧ್ಯಾಯ – ೩

ಮಲೆಕುಡಿಯರ ಕುಟುಂಬಗಳ ಶಾಸ್ತ್ರೀಯ ಅಧ್ಯಯನ

೩. ೧. ಮಲೆಕುಡಿಯರ ಜನಾಂಗದ ಹುಟ್ಟಿನ ಬಗೆಗಿನ ಪುರಾಣ – ಐತಿಹ್ಯ :

ಪ್ರತಿಯೊಂದು ಜನಾಂಗದ ಬಗ್ಗೆ ಐತಿಹ್ಯಗಳಿರುವುದು ಸಾಮಾನ್ಯ. ಈ ಐತಿಹ್ಯಗಳನ್ನು ಪೂರ್ತಿಯಾಗಿ ಒಪ್ಪಬೇಕಾಗಿಲ್ಲ. ತುಳುನಾಡಿನ ಒಂದು ಜನಾಂಗವಾದ ಮಲೆಕುಡಿಯರ ಹುಟ್ಟಿಗೆ ಶಿವ–ಪಾರ್ವತಿಯರೇ ಮೂಲ ಕಾರಣರೆಂದು ತಿಳಿಸುವ ಜನಪದ ದಂತಕಥೆಯೊಂದು ಮಲೆಕುಡಿಯರಲ್ಲಿಯೇ ಪ್ರಚಾರದಲ್ಲಿದೆ.

ಈಶ್ವರ ಮತ್ತು ಪಾರ್ವತಿಗೆ ಮಕ್ಕಳಿರಲಿಲ್ಲ. ಪಾರ್ವತಿಗೆ ಮಕ್ಕಳು ಬೇಕೆಂದು ತೀವ್ರ ಅಪೇಕ್ಷೆ ಉಂಟಾಗುತ್ತದೆ. ಹೆಂಡತಿಯ ಚಿಂತೆಯನ್ನು ಪರಿಹರಿಸುವ ಸಲುವಾಗಿ ಈಶ್ವರನು ಬೆವರಿನ ಮಣ್ಣಿನಿಂದ ಮಗುವೊಂದನ್ನು ಸೃಷ್ಟಿ ಮಾಡಿ ಜೀವ ತುಂಬಿದನು. ಮಗು ಕಿರುಚುವುದಕ್ಕೆ ತೊಡಗಿತು. ಮಗುವನ್ನು ಸಂತೈಸಲು ಪಾರ್ವತಿ ತನ್ನ ಮೊಲೆ ತೊಟ್ಟನ್ನು ಮಗುವಿನ ಬಾಯಿಗಿಟ್ಟು 'ಮೊಲೆ ಕುಡಿಯ'ಎಂದಳಂತೆ. ಮಗು ಎದೆ ಹಾಲು ಚೀಪಿತು. 'ಮೊಲೆ ಕುಡಿಯ' ಎಂಬುದೇ 'ಮಲೆಕುಡಿಯ'ಎಂದಾಗಿ ಮುಂದೆ ಈ ಹೆಸರು ಇಡಿಯ ಜನಾಂಗಕ್ಕೆ ಅನ್ವಯವಾಯಿತು. ಮಲೆಕುಡಿಯ ಜನಾಂಗಕ್ಕೂ ಈಶ್ವರ–ಪಾರ್ವತಿಯರಿಗೂ ನೇರವಾದ ಸಂಬಂಧ ಕಲ್ಪಿಸಿರುವ ಈ ಕತೆ ಮಲೆಕುಡಿಯರಲ್ಲಿಯೇ ಪ್ರಚಾರದಲ್ಲಿದೆ. ಈ ಕತೆಗೆ ಇನ್ನೊಂದು ಪಾಠಾಂತರವೂ ಇದೆ. ಪಾರ್ವತಿಯ ಬೆವರು ಮಣ್ಣಿನಿಂದ ಗಂಡು– ಹೆಣ್ಣಿನ ಸೃಷ್ಟಿಯಾಗುತ್ತದೆ. ಶಿವ ಅದಕ್ಕೆ ಜೀವ ತುಂಬುತ್ತಾನೆ. ಹೀಗೆ ಜೀವ ತಳೆದ ಗಂಡು ಮತ್ತು ಹೆಣ್ಣನ್ನು ಅವರು ಕಾಡಿಗೆ ಕಳುಹಿಸುತ್ತಾರೆ. ಈಗ ಅಣ್ಣ–ತಂಗಿಯಾಗಿದ್ದರೂ ಮುಂದೆ ಕಾಡಿನಲ್ಲಿ ಲೈಂಗಿಕ ಸಂಬಂಧವನ್ನು ಬೆಳೆಸಿ ಮಕ್ಕಳನ್ನು ಪಡೆದು ಸಂತಾನವನ್ನು ವೃದ್ಧಿಗೊಳಿಸಿರಿ ಎಂಬ ಆದೇಶವನ್ನು ಪಡೆಯುತ್ತಾರೆ. ಶಿವ–ಪಾರ್ವತಿಯರ ಅಪ್ಪಣೆಯನ್ನು ಪಡೆದು ಕಾಡಿನಲ್ಲಿ ನೆಲೆನಿಂತ ಆ ಗಂಡು ಹೆಣ್ಣಿನ ಮಕ್ಕಳೇ ಈ ಮಲೆಕುಡಿಯರು ಎಂಬುದಾಗಿ ಕರೆಯಿಸಿಕೊಳ್ಳುತ್ತಾರೆ.

೩. ೨ ಕುಟುಂಬ ಪದ್ಧತಿ, ಗುರಿಕಾರ ಮತ್ತು ಕೂಡುಕಟ್ಟು :

ಪ್ರತಿಯೊಂದು ಜಾತಿ ಬುಡಕಟ್ಟು ವ್ಯವಸ್ಥೆಯಲ್ಲಿ ಅದರದ್ದೇ ಆಗಿರುವ ಕುಟುಂಬ ಪದ್ಧತಿಯಿದೆ. ಬುಡಕಟ್ಟು ವ್ಯವಸ್ಥೆಗೆ ಸೇರಿರುವ ಮಲೆಕುಡಿಯರಲ್ಲೂ ಅವರದ್ದೇ ಆಗಿರುವ ಕುಟುಂಬ ಪದ್ಧತಿಯನ್ನು ಕಾಣಬಹುದು. ಇವರ ಕುಟುಂಬ ಪದ್ಧತಿಯಲ್ಲಿ ಮುಖ್ಯವಾಗಿ ಎರಡು ವಿಧಗಳನ್ನು ಕಾಣಬಹುದು. ೧. ಮಕ್ಕಳ ಕಟ್ಟು (ಪಿತೃ ಪ್ರಧಾನ ವ್ಯವಸ್ಥೆ) ೨. ಅಳಿಯಕಟ್ಟು (ಮಾತೃಪ್ರಧಾನ ವ್ಯವಸ್ಥೆ). ಮಕ್ಕಳ ಕಟ್ಟನ್ನು

ಅನುಸರಿಸುವ ಕುಟುಂಬಗಳು ಪುರುಷ ಪ್ರಧಾನವಾದ ಕುಟುಂಬಗಳು. ಅಂದರೆ ತಂದೆಯ ಆಸ್ತಿಯು ಮಗನ ಪಾಲಿಗೆ ಬರುವುದು. ಅಳಿಯ ಕಟ್ಟನ್ನು ಅನುಸರಿಸುವ ಕುಟುಂಬಗಳಲ್ಲಿ ಸ್ತ್ರೀಯೆ ಪ್ರಧಾನ ಅಂದರೆ ಆಸ್ತಿಯು ಮಗಳ ಪಾಲಿಗೆ ಬರುವುದು ಎಂಬ ಅರ್ಥ. ಸ್ತ್ರೀ ಪ್ರಧಾನವಾದ ಕುಟುಂಬದಲ್ಲಿ ಆಸ್ತಿ ಹಕ್ಕು ಹೆಂಗಸರಲ್ಲಿಯೇ ಉಳಿದಿರುತ್ತದೆ. ನಾಲ್ಕೂರ ಮಲೆಕುಡಿಯರಲ್ಲಿ 'ಮಕ್ಕಳ ಕಟ್ಟು' (ಪಿತೃ ಪ್ರಧಾನ ವ್ಯವಸ್ಥೆ) ರೂಢಿಯಲ್ಲಿದೆ.

ಹಿಂದಿನ ಕಾಲದಲ್ಲಿ ಮಲೆಕುಡಿಯರಲ್ಲಿ ಹೆಚ್ಚಾಗಿ ಅವಿಭಕ್ತ ಕುಟುಂಬ ಪದ್ಧತಿ ಇತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಇತರ ಜಾತಿ ವ್ಯವಸ್ಥೆಯಲ್ಲಿ ಇರುವ ಹಾಗೆ ಮಲೆಕುಡಿಯರಲ್ಲಿಯೂ ವಿಭಕ್ತ ಕುಟುಂಬಗಳು ಕಾಣಿಸಿಕೊಳ್ಳುತ್ತವೆ. ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಪರಿವರ್ತನೆಗೊಂಡರೂ, ಒಂದು ಕುಟುಂಬದ ಹಿರಿಯ ಮಗ ಆ ಕುಟುಬಂದ ಆಗು ಹೋಗುಗಳಲ್ಲಿ ಪ್ರಮುಖ ಪಾತ್ರವಹಿಸುತ್ತಾನೆ.

ನಾಲ್ಕೂರ ಮಲೆಕುಡಿಯರ ಗುಂಪಿನಲ್ಲಿ ಕುಲಗಳನ್ನು 'ಬರಿ' ಎಂದು ಕರೆಯುತ್ತಾರೆ. ತುಳುವಿನ ಬರಿ ಎಂಬುದು ಕನ್ನಡದ 'ಬಳಿ' ಆಗಿದೆ. ಹಿಂದಿನ ಕಾಲದಲ್ಲಿ ಮಲೆಕುಡಿಯರಲ್ಲಿ ೧೮ ಬಳಿಗಳು ವ್ಯವಹಾರದಲ್ಲಿ ಇದ್ದುವು ಎಂದು ಹೇಳುತ್ತಾರೆ. ಆದರೆ ಇಂದಿನ ಮಲೆಕುಡಿಯರಲ್ಲಿ ಅಷ್ಟೊಂದು ಬಳಿಗಳು ಆಚಾರದಲ್ಲಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸುತ್ತಾರೆ.

ಮಲೆಕುಡಿಯರಲ್ಲಿ ಯಾವುದಾದರೂ ಶುಭ ಸಂದರ್ಭಗಳಲ್ಲಿ ಕನಿಷ್ಠ ಏಳು ಬಳಿಯವರಾದರೂ ಬಂದು ಶುಭಸಮಾರಂಭಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಉದಾಹರಣೆಗೆ ಹುಡುಗಿ ಮೈ ನೆರೆದಾಗ, ಆ ಮೈಲಿಗೆಯನ್ನು ಕಳೆಯಲು ಏಳು ಬಳಿಯ (ಬರಿ) ಮುತ್ತೈದೆಯರು ಬಂದು ಏಳು ಕಳಶವನ್ನಿಟ್ಟು ಪೂಜಿಸಿ, ಆ ಕಳಶದಲ್ಲಿದ್ದ ನೀರನ್ನು ಅವಳ ಮೇಲೆ ಪ್ರೋಕ್ಷಿಸಿದಾಗ ಮಾತ್ರ ಅವಳು ಮೈಲಿಗೆಯನ್ನು ಕಳೆದು ಶುದ್ಧಳಾಗುತ್ತಾಳೆ ಎಂಬ ನಂಬಿಕೆ ಮಲೆಕುಡಿಯರಲ್ಲಿತ್ತು. ಹಿಂದಿನ ಕಾಲದಲ್ಲಿ ಮಲೆಕುಡಿಯರಲ್ಲಿ ಮಗು ಹುಟ್ಟಿದ ಸಂದರ್ಭದ ಮೈಲಿಗೆಯನ್ನು ಮತ್ತು ಹುಡುಗಿ ಮೈ ನೆರೆದ ಮೈಲಿಗೆಯನ್ನು ಕಳೆಯಲು ಮಡಿವಾಳ ಜಾತಿಯ ಹೆಂಗಸು ಬಂದು ಮೈಲಿಗೆಯನ್ನು ಕಳೆಯುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಳು. ಆದರೆ ಇತ್ತೀಚಿನ ದಿನಗಳಲ್ಲಿ ಇದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುವುದಿಲ್ಲ.

ಕೆಲವು ಮಲೆಕುಡಿಯರಲ್ಲಿ ತಮ್ಮ ವಂಶದ ಹೆಸರನ್ನು, ತಮ್ಮ ಹೆಸರಿನ ಹಿಂದೆ ಸೇರಿಸಿ ಕರೆಯಿಸಿಕೊಳ್ಳುವ ಪದ್ದತಿಯೂ ಇದೆ. ಉದಾಹರಣೆಗೆ ನಾಲ್ಕೂರ ಮಲೆಕುಡಿಯರಲ್ಲಿ ತಮ್ಮ ಹೆಸರಿನ ಹಿಂದೆ ಬೋಂದ್ರ, ಕೆಳೆಂಜೋಡಿ, ಪೇರಾಜೆ, ಬರ್ಕೆ, ಕುಂಟ್ಯಣ, ಕತ್ಯಳ ಮೊದಲಾದ ವಂಶದ ಹೆಸರನ್ನು ಸೇರಿಸಿಕೊಳ್ಳುತ್ತಾರೆ.

ಗುರಿಕಾರ ಮತ್ತು ಕೂಡುಕಟ್ಟು :

ಮಲೆಕುಡಿಯರಲ್ಲಿ ಯಜಮಾನಿಕೆ ಎಂಬುದು ವಂಶಪರಂಪರೆಯಾಗಿ ಬರುವ ಪದ್ಧತಿಯಿದೆ. ಯಜಮಾನಿಕೆ ಎಂದರೆ ಅವರ ಸಮೂಹದ 'ಗುರಿಕಾರ' ಎಂಬ ಅರ್ಥ. ಮಲೆಕುಡಿಯರಲ್ಲಿ ಅವರವರ ಗ್ರಾಮಕ್ಕೆ ಅಥವಾ ಮಲೆಗಳಿಗೆ ಒಬ್ಬ ಗುರಿಕಾರ ಇರುತ್ತಾನೆ. ಕೆಲವು ಕಡೆಗಳಲ್ಲಿ 'ಮಾಘನೆ' ಗುರಿಕಾರ ಎಂಬುದು ಇದೆ. ಅಂದರೆ ೮ ಗ್ರಾಮಗಳ ಸಮೂಹಕ್ಕೆ ಒಂದು 'ಮಾಘನೆ' ಎಂದು ಕರೆಯುತ್ತಾರೆ. ಇಂತಹ ಕೆಲವು ಮಾಘನೆಗಳ ಸಮೂಹವನ್ನು 'ಹೋಬಳಿ' ಎನ್ನುತ್ತಾರೆ.

ಮಲೆಕುಡಿಯರಲ್ಲಿ ಅನೇಕ ಕುಟುಂಬದವರು ಸೇರಿ (ಕೂಡುಕಟ್ಟು) ಒಬ್ಬ ಗುರಿಕಾರನನ್ನು ಆಯ್ಕೆ ಮಾಡುತ್ತಾರೆ. ಇದು ಅವರ ಜಾತಿ ಪರಿಷತ್ತಿನ ನಿಯಮ. ಆ ಗುರಿಕಾರನಿಗೆ ಪ್ರಾದೇಶಿಕ ಯಜಮಾನಿಕೆ ಇಲ್ಲ. ಆದರೆ ಅವರ ಜಾತಿಯ ಜನರ ಯಜಮಾನಿಕೆಯಿದೆ. ಮಲೆಕುಡಿಯರ ಕೂಡುಕಟ್ಟಿನಲ್ಲಿ ಜಾತಿಯಿಂದ ತೆಗೆಯಿಸುವ, ಸೇರಿಸಿಕೊಳ್ಳುವ ವಿಷಯ ಬರುತ್ತದೆ. ಮದುವೆಯ ಮಾತು ಬೊಜ್ಜದ ಮಾತು ಬರುತ್ತದೆ.

ಮಲೆಕುಡಿಯರಲ್ಲಿ ಗುರಿಕಾರನ ಮಾತನ್ನು ಎಲ್ಲರೂ ಗೌರವಿಸುತ್ತಾರೆ. ಅವರ ಜಾತಿ ನಿಯಮಗಳನ್ನು ಮುರಿದಾಗ ಗುರಿಕಾರ ಆ ಕುಲದ ಸಭೆ ನಡೆಸಿ, ಅಪರಾಧಿಯ ವಿಚಾರಣೆ ನಡೆಸಿ, ಅಪಾರಾಧಕ್ಕೆ ತಕ್ಕಂತೆ ಶಿಕ್ಷೆಯನ್ನು ನೀಡುವ ಕೆಲಸವನ್ನು ಆ ಗುರಿಕಾರ ನಿರ್ವಹಿಸುತ್ತಾನೆ. ಅವರಲ್ಲಿ ಧಾರ್ಮಿಕ ಆಚರಣೆಗಳನ್ನು ನಡೆಸುವಾಗ ಗುಂಪಿನ ಮುಖ್ಯಸ್ಥನಾಗಿ ಗುರಿಕಾರ ಉಳಿದವರಿಗೆ ಮಾರ್ಗದರ್ಶನ ಮಾಡುತ್ತಾನೆ. ಮದುವೆಯ ಸಂಬಂಧಗಳನ್ನು ಬೆಳೆಸುವ ಸಂದರ್ಭದಲ್ಲಿ ತನ್ನ ಕುಲ ಬಾಂಧವರ ಸ್ಥಿತಿ–ಗತಿಗಳಿಗೆ, ಮಾನ–ಮರ್ಯಾದೆಗಳಿಗೆ ಚ್ಯುತಿ ಬಾರದಂತೆ, ಬೇರೊಂದು ಕುಲದ ಗುರಿಕಾರನೊಡನೆ ವ್ಯವಹರಿಸುತ್ತಾನೆ. ಒಟ್ಟಿನಲ್ಲಿ ಮಲೆಕುಡಿಯರಲ್ಲಿ 'ಗುರಿಕಾರ' ಎಂಬುದು ಆ ಸಮೂಹದ ಜವಾಬ್ದಾರಿಯುತವಾದ ವ್ಯಕ್ತಿ. ಆ ಸಮಾಜದ ಕಣ್ಣು. ಗುರಿಕಾರನ ಮಾತಿಗೆ ಬೆಲೆಕೊಡದ ವ್ಯಕ್ತಿಯನ್ನು ಅವರ ಕುಲದಿಂದ ಉಚ್ಚಾಟನೆ ಮಾಡುವ ಸಂಭವವು ಇದೆ. ಮಲೆಕುಡಿಯರಲ್ಲಿ ಕುಲದ 'ಗುರಿಕಾರ' ಸ್ಥಾನ ಎಂಬುದು ಒಬ್ಬ ಮನೆಯ ಹಿರಿಯ ವ್ಯಕ್ತಿ ಇದ್ದ ಹಾಗೆ ಎಂಬುದು ತಿಳಿದು ಬರುತ್ತದೆ. (ಪುತ್ತೂರು ತಾಲೂಕಿನ ಸಿರಿಬಾಗಿಲು ಗ್ರಾಮದ ಗುರಿಕಾರರಾದ ಹೊನ್ನಪ್ಪ ಮಲೆಕುಡಿಯ ಈ ಮೇಲಿನ ಮಾಹಿತಿಯನ್ನು ತಿಳಿಸಿರುತ್ತಾರೆ.)

ಶಿವರಾಮ ಕಾರಂತರ ಸೃಜನಶೀಲ ಕಾದಂಬರಿಯಾದ 'ಕುಡಿಯರ ಕೂಸು' ಇದರಲ್ಲಿ ಮಲೆಕುಡಿಯರಲ್ಲಿರುವ ಗುರಿಕಾರ ಸ್ಥಾನದ ಮಹತ್ವದ ಕುರಿತು ಈ ರೀತಿಯಾಗಿ ವಿವರಿಸಿದ್ದಾರೆ.

"ಕುಲಚಾರದ ಮಾತಿನಲ್ಲಿ ನೀವು ಕೈ ಹಾಕಬಾರದು. ಇದು ನಮ್ಮ ಕೂಡು ಕಟ್ಟಿಗೆ ಸಂಬಂಧಿಸಿದಂಥ ಸಂಗತಿ. ನಾಳೆ ಒಬ್ಬನನ್ನು ಜಾತಿಯಿಂದ ತೆಗೆಯಿಸುವ ವಿಷಯ, ಸೇರಿಸಿಕೊಳ್ಳುವ ವಿಷಯ, ಮದುವೆಯ ಮಾತು, ಬೊಜ್ಜದ ಮಾತು ಪ್ರತಿಯೊಂದು ಅಲ್ಲಿ ಬರುತ್ತದೆ. ಧನಿಗಳು ಆ ವಿಷಯದಲ್ಲಿ ಏನೂ

ಅಪ್ಪಣೆ ಕೊಡಿಸಬಾರದು. ನಿಮ್ಮ ತೋಟದ ಕಸುಬಿನ ವಿಚಾರವೋ, ಏಲಕ್ಕಿ ತರುವುದೋ, ಹೆಕ್ಕುವುದು,ಏನೇನು ಆಗಬೇಕೋ ಅದೆಲ್ಲ ಸಂಗತಿಯಲ್ಲಿ ನೀವು ಯಾರನ್ನೆ ತೋರಿಸಿ ಅವರನ್ನು ಒಪ್ಪಿಕೊಂಡು ಚಾಚೂ ತಪ್ಪದೆ ನಡೆದುಕೊಂಡು ಬರುತ್ತೇವೆ. ನಿಮಗೆ ಇಷ್ಟ ಕಂಡರೆ ತುಕ್ರನನ್ನೇ ಮಾಡಿ. ಬೇಡ ಅನ್ನುವುದಿಲ್ಲ, ಉಳಿದ ಸಂಗತಿಗಳನ್ನು ನಮಗೆ ಬಿಟ್ಟು ಬಿಡಿ". (ಡಾ. ಶಿವರಾಮ ಕಾರಂತ–ಕುಡಿಯರ ಕೂಸು–ಪುಟ–೧೩೨–೫ ನೇ ಮುದ್ರಣ–೧೯೮೫)

೩. ೩ ಮಲೆಕುಡಿಯ ಪದದ ಅರ್ಥ – ಪದ ನಿಷ್ಪತ್ತಿ :

'ಮಲೆ' ಅಂದರೆ ಎತ್ತರವಾದ ಗುಡ್ಡಗಾಡು ಪ್ರದೇಶ. ಗುಡ್ಡಗಾಡು ಪ್ರದೇಶಗಳ ಎತ್ತರವಾದ ತುದಿಗಳಲ್ಲಿ ಮತ್ತು ಇಳಿಜಾರುಗಳಲ್ಲಿ ವಾಸಮಾಡುವುದರಿಂದ 'ಮಲೆಕುಡಿಯ'ರೆಂಬ ಹೆಸರು ಬಂದಿದೆ. ಪಶ್ಚಿಮ ಘಟ್ಟಗಳಲ್ಲಿ ವಾಸಮಾಡುವ ಜನಾಂಗದ ಹೆಸರೆಂಬುದಾಗಿ 'ಮಲೆಕುಡಿಯ' ಪದಕ್ಕೆ ಕಿಟೆಲ್ ಕೋಶದಲ್ಲಿ ಅರ್ಥಕೊಡಲಾಗಿದೆ. (ಕಿಟೆಲ್ಲರ ಕನ್ನಡ–ಇಂಗ್ಲೀಷ್ ನಿಘಂಟು ಸಂಪುಟ ೩–೧೯೬೯ ಪು. ೧೨೯೫) 'ಕುಡಿ' ದ್ರಾವಿಡ ಪದ. ತಮಿಳು ಮತ್ತು ಮಲೆಯಾಳ ಭಾಷೆಯಲ್ಲಿ 'ಕುಡಿ' ಎಂಬ ಪದಕ್ಕೆ ಗುಡಿಸಲು ಎಂಬ ಅರ್ಥವಿದೆ. (ಕಿಟೆಲ್ ಸಂ. ೨ ಪು. ೪೬೨) "ಕುಡಿಯೊಕ್ಕಲಿಗ" ಅಂದರೆ ಬೆಟ್ಟದಲ್ಲಿ ಒಕ್ಕಲು (ಕೃಷಿ) ಮಾಡುವವರು ಎಂದರ್ಥ.

ನನ್ನ ಅಭಿಪ್ರಾಯದ ಪ್ರಕಾರ 'ಮಲೆಕುಡಿಯ' ಎಂಬ ಪದವು 'ಮಲೆ' ಎಂದರೆ 'ಗುಡ್ಡಗಾಡು ಪ್ರದೇಶ' ಮತ್ತು 'ಕೊಡಿ' (ಕೋಡಿ) ಎಂದರೆ 'ತುದಿ' ಎಂಬ ಅರ್ಥವಿದೆ. ಕೊಡಿ ಎಂಬ ಪದವೇ 'ಕುಡಿ' ಆಗಿರಬಹುದು. ಹಾಗಾಗಿ 'ಮಲೆಕುಡಿಯ' ಎಂಬುದು ಎತ್ತರವಾದ 'ಬೆಟ್ಟಗಳ ತುದಿಯಲ್ಲಿ' ವಾಸವಾಗಿರುವವರು ಎಂಬ ಅರ್ಥವೂ ಬಂದಿರಬಹುದು. 'ಮಲೆಕೊಡಿ' ಎಂಬ ಪದವೇ 'ಮಲೆಕುಡಿ' ಆಗಿರಬಹುದು.

'ಕೋಡಿ' –ಪದದ ಶಬ್ದಾರ್ಥ ನಿಘಂಟುಗಳಲ್ಲಿರುವಂತೆಯೇ

೧. 'ಕೋಡಿ' (ನಾ) – ತುದಿ, ಕುಡಿ, ಕೊನೆ, ಮೂಲೆ (ವೆಂಕಟಸುಬ್ಬಯ್ಯ – ೧೯೭೭: ೨೨೩೧)

೨. 'ಕೋಡಿ' – ಹುಟ್ಟು, ಉಗಮ, ತುದಿ, ಕೊನೆ, ತುಂಬಿತುಳುಕು (ವೆಂಕಟ ಸುಬ್ಬಯ್ಯ ೧೯೭೫:೨೫೬)

೩. Kodi – tip, top, end, sprout, desire to eat (T. Burrow and M.B. Emeneau 1984:185 & 188)

ಮಲೆಕುಡಿಯರ ಜನಾಂಗ ವಾಸ ಮಾಡುವ ಪ್ರದೇಶ, ಕಸುಬು, ಜೀವನಕ್ರಮ, ಆಹಾರ ಪದ್ಧತಿಗಳನ್ನು ಪರಿಶೀಲಿಸಿದರೆ 'ಮಲೆಕುಡಿಯ' ಎಂಬ ಜನಾಂಗವಾಚಕ ಪದ ಪಡೆದು ಕೊಂಡಿರುವ ಪ್ರಾದೇಶಿಕ ಹಿನ್ನೆಲೆ ಅರ್ಥವಾಗುತ್ತದೆ. ಪ್ರಧಾನವಾಗಿ ಬೆಳ್ತಂಗಡಿ, ಸುಳ್ಯ ಮತ್ತು ಈಗಿನ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕುಗಳಲ್ಲಿ ಮಲೆಕುಡಿಯರು ವಾಸವಾಗಿದ್ದಾರೆ. ಈ ಮೂರು ತಾಲೂಕುಗಳು ಕೂಡಾ ತಮ್ಮ ಒಂದು ಪಾರ್ಶ್ವದಲ್ಲಿ ಪಶ್ಚಿಮ ಘಟ್ಟದ ಸೆರಗನ್ನು ಪಡೆದುಕೊಂಡಿದೆ. ಕಾರ್ಕಳ ತಾಲೂಕಿನ ಕೆಲವು ಭಾಗಗಳು ಸುಳ್ಯ ತಾಲೂಕಿನ ಎಳೊಲಿ ಮಲೆ, ನಿಡ್ಯ ಮಲೆ, ಬೆಳ್ತಂಗಡಿ ತಾಲೂಕಿನ ಮುಂಡಾಜೆ, ಚಾರ್ಮಾಡಿ, ಹತ್ಯಡ್ಕ, ಶಿಬಾಜೆ, ಶಿಶಿಲ, ಕೊಕ್ಕಡ, ಪುದುವೆಟ್ಟು, ಕಳೆಂಜ, ನಿಡ್ಲೆ, ಪಟ್ರಮೆ, ನೆರಿಯ, ನಾವೂರು, ಮಲವಂತಿಗೆ, ಚಿಬಿದಿರೆ, ನಿಟ್ಟಡೆ ಮೊದಲಾದ ಗ್ರಾಮಗಳಲ್ಲಿ ಮಲೆಕುಡಿಯ ಕುಟುಂಬಗಳು ವಾಸವಾಗಿದ್ದು, ವಲಯಗಳು ಭೌಗೋಳಿಕವಾಗಿ ದಟ್ಟವಾದ ಅರಣ್ಯ, ಎತ್ತರದ ಗುಡ್ಡ, ಕೊರಕಲಾದ ಇಳಿಜಾರು, ಬಂಡೆಕಲ್ಲುಗಳನ್ನು ಹೊಂದಿದೆ. ಮುಂಡಾಜೆ ಗ್ರಾಮದ ಕಲ್ಲಾಜೆ, ಚಾರ್ಮಾಡಿಯ ಅಣಿಯೂರು, ಹತ್ಯಡ್ಕದ ಮೂಜಿನಡು, ಶಿಬಾಜೆಯ ಬಂಡಿಹೊಳೆ, ಶಿಶಿಲದ ಬದಿಗುಡ್ಡೆ ಮೇರತಡ್ಕ, ಧರ್ಮಸ್ಥಳದ ಕುಮೇರಡ್ಕ, ನೆರಿಯದ ಆಲಂಗಾಯಿ, ಗಂಡಿಬಾಗಿಲು, ಎಲಿಮಲೆ, ಬಾಂಜಾರುಮಲೆ, ಅಂಬಟೆಮಲೆ, ಮಲವಂತಿಗೆಯ ಎಳನೀರು, ಕಜಕ್ಕೆ ಮೊದಲಾದ ಕಡೆಯ ಮಲೆಕುಡಿಯ ಕೊಪ್ಪಲುಗಳನ್ನು ಸರ್ವೇಕ್ಷಣೆ ನಡೆಸಿದರೆ ಈ ಪ್ರದೇಶಗಳಲ್ಲಿ ವಾಸಮಾಡುವ ಜನಸಮುದಾಯಕ್ಕೆ 'ಮಲೆಕುಡಿಯ' ಎಂಬ ಜನಾಂಗ ವಾಚಕ ಹೆಸರನ್ನು ಕೊಟ್ಟಿರುವುದು ಸಹಜ ಎನಿಸುತ್ತದೆ. ಮಲೆಯ ಮಕ್ಕಳನ್ನು 'ಮಲೆಕುಡಿಯರು' ಎಂದು ಗ್ರಾಮಗಳಲ್ಲಿ ವಾಸವಾಗಿರುವ ಜನ ಗುರುತಿಸಿರಬಹುದು. ಈ ಮಲೆಕುಡಿಯರು 'ಗುಡ್ಡವಾಸಿ ಜನಾಂಗ' ಎಂಬುದನ್ನು ದ. ಕ. ಜಿಲ್ಲೆಯ ಗೆಜೆಟಿಯರ್‌ನಲ್ಲಿಯೂ ಉಲ್ಲೇಖಿಸಲಾಗಿದೆ.

೩. ೪. ಮಲೆಕುಡಿಯ– ಗೌಡ –ಕುಮೇರ ಗೌಡ–ಬರ್ಕೆಯವರು :

'ಮಲೆಕುಡಿಯ' ಎಂಬ ಪದಕ್ಕೆ ಮಲೆಯ 'ಒಕ್ಕಲು' ಎಂಬ ಅರ್ಥವನ್ನು ಇಟ್ಟುಕೊಂಡರೆ, ಅಲ್ಲಿ ಭೂಮಿ ಮತ್ತು ದುಡಿಮೆಯ ವೃತ್ತಿವಾಚಕ ಸಂಬಂಧ ಬರುತ್ತದೆ. ಮಲೆಕುಡಿಯರಲ್ಲಿ ಕೆಲವರು ತಮ್ಮನ್ನು 'ಗೌಡ' ರೆಂದು ಹೇಳಿಕೊಳ್ಳುತ್ತಾರೆ. ಇಲ್ಲಿ 'ಗೌಡ' ಎಂಬ ಪದ ಜಾತಿವಾಚಕವಾಗಿ ಬರದೆ, ಅದರ ಬದಲು ಮಲೆಕುಡಿಯರ 'ಕುಟುಂಬ ಮುಖ್ಯಸ್ಥ' ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಬೆಳ್ತಂಗಡಿ ತಾಲೂಕಿನ ಕೆಲವು ಕಡೆ ಮಲೆಕುಡಿಯರ ಕುಟುಂಬಗಳ ಮುಖ್ಯಸ್ಥನ ಹೆಸರಿನ ಮುಂದೆ 'ಗೌಡ' ಎಂಬ ಪದದಿಂದ ಗುರುತಿಸಿರುವುದನ್ನು ಕಾಣಬಹುದು. ಬಹುತೇಕವಾಗಿ ಮಲೆಗಳಲ್ಲಿ ಮಲೆಕುಡಿಯರು ಒಕ್ಕಲುಗಳಾಗಿ ಉಳಿದುಕೊಂಡ ಕಾರಣ ಮತ್ತು ತಪ್ಪಲು ಪ್ರದೇಶಗಳಲ್ಲಿ ಒಕ್ಕಲು ಕೃಷಿಯನ್ನು ಮಾಡುತ್ತಾ ವಲಸೆ ಬಂದ

ಸಮುದಾಯವು ಗೌಡ ಜನಾಂಗವಾಗಿರಬೇಕು. ಗೌಡ ಜನಾಂಗದ ಭತ್ತದ ಕೃಷಿಯನ್ನು ಕುಮೇರಿಗಳಲ್ಲಿ ಮಲೆಕುಡಿಯರು ನಡೆಸಿದ್ದರಿಂದ, ಕುಮೆರಿ ಬೆಳೆಯನ್ನು ಬೆಳೆಯುವ ಮಲೆಕುಡಿಯರನ್ನು ಕುಮೆರಿ ಗೌಡರೆಂದು ಕರೆದಿರಬೇಕು. ಕೆಲವು ಕಡೆ ಮಲೆಕುಡಿಯರನ್ನು 'ಬರ್ಕೆಯವರು' ಎಂದು ಕರೆಯುವ ಸಂಪ್ರದಾಯವಿದೆ. 'ಬರ್ಕೆಯವರು' ಎಂದರೆ ಕೆಲವು ಕುಟುಂಬಗಳ ಪ್ರಮುಖ ವ್ಯಕ್ತಿಗಳು ಎಂಬ ಅರ್ಥವೂ ಇದೆ.

೩. ೫. ಮಲೆಕುಡಿಯರು-ನಾಲ್ಕುಮಲೆಯವರು :

'ಮಲೆಕುಡಿಯರು' ಮತ್ತು 'ನಾಲ್ಕುಮಲೆಯವರು' ಜಾತಿಯ ದೃಷ್ಟಿಯಿಂದ ಇವೆರಡು ವರ್ಗಗಳ ನಡುವೆ ಯಾವುದೇ ರೀತಿಯ ವ್ಯತ್ಯಾಸ ಇಲ್ಲ. ಮಲೆಕುಡಿಯರ ಜೊತೆ ಅವರ ಹೆಸರನ್ನು ಕೇಳಿದಾಗ ತಮ್ಮ ಹೆಸರನ್ನು ಮಾತ್ರ ಹೇಳುತ್ತಾರೆ. ಆದರೆ ಜಾತಿಯನ್ನು ಕೇಳಿದಾಗ ನಾವು ಮಲೆಕುಡಿಯರು, ನಾಲ್ಕುಮಲೆಯವರಲ್ಲ ಎಂಬ ಮಾತನ್ನು ಹೇಳುತ್ತಾರೆ. ಅಂದರೆ ಅವರ ಮಾತಿನ ಅರ್ಥ ನಾವು ನಾಲ್ಕುಮಲೆಯವರಿಗಿಂತ ಮೇಲಸ್ತರದವರು ಎಂಬರ್ಥ. ಹಿಂದಿನ ಕಾಲದಲ್ಲಿ ಮಲೆಕುಡಿಯರು ನಾಲ್ಕುಮಲೆಯವರ ಜೊತೆ ಸಂಬಂಧವನ್ನು ಏರ್ಪಡಿಸುತ್ತಿರಲಿಲ್ಲ. ಕಾರಣ ನಾಲ್ಕುಮಲೆಯ ವರ್ಗದವರು ಗೊಬ್ಬರ ಮುಟ್ಟುವುದಿಲ್ಲ. ಈ ಕಾರಣಕ್ಕಾಗಿ ಅವರೊಳಗಡೆಯೇ ಮೇಲು ಕೀಳು ಎಂಬ ಭಾವನೆಯಿದೆ. ಶಿಕ್ಷಣ ಸಂಸ್ಥೆಗಳಲ್ಲಿ, ಸರಕಾರಿ ಕಛೇರಿಗಳಲ್ಲಿ ನಾಲ್ಕುಮಲೆಯವರು ಮಲೆಕುಡಿಯರೆಂದೇ ಹೆಸರಿಸಿ ನೊಂದಾಯಿಸಿಕೊಳ್ಳುತ್ತಾರೆ. ನಾಲ್ಕುಮಲೆಯವರು ತಮ್ಮ ಹೆಸರುಗಳ ಮೊದಲಿಗೆ ಮನೆತನವನ್ನು ಸೂಚಿಸುವ ಬೋಂಟ್ರ, ಕೆಲೆಂಜೋಡಿ, ಪೇರಾಜೆ, ಬರಿಕ್ಕೆ, ಕುಂಟ್ಯಣ, ಕುತ್ಯಳ ಇವುಗಳಲ್ಲಿ ಯಾವುದಾದರೂ ಒಂದನ್ನು ಸೇರಿಸಿ ಹೇಳುತ್ತಾರೆ. ಬೆಳ್ತಂಗಡಿ ತಾಲೂಕಿನ ನೆರಿಯ ಸಮೀಪದ ಅಂಬಟೆ ಮಲೆ, ಬಾಂಜಾರು ಮಲೆ, ಬಾರಿ ಮಲೆ ಮತ್ತು ಎಲಿಮಲೆಗಳಲ್ಲಿ ವಾಸಿಸುವ ಮಲೆಕುಡಿಯರಿಗೆ 'ನಾಲ್ಕುಮಲೆಯವರು' ಎಂದು ಕರೆಯುತ್ತಾರೆ.

ಒಂದೇ ವರ್ಗದ ಮಲೆಕುಡಿಯರಲ್ಲಿ ಕೆಲವರು 'ನಾಲ್ಕುಮಲೆಯವರು' ಎಂಬುದಾಗಿ ಪ್ರತ್ಯೇಕಗೊಂಡ ಐತಿಹಾಸಿಕ ರಹಸ್ಯವೊಂದನ್ನು ಡಾ. ಕೆ. ಚಿನ್ನಪ್ಪ ಗೌಡ ಈ ರೀತಿ ಪ್ರಸ್ತಾಪಿಸುತ್ತಾರೆ. 'ಮಲೆಕುಡಿಯರು' ಮತ್ತು 'ನಾಲ್ಕುಮಲೆಯವರು' ಎಂಬ ಈ ವರ್ಗೀಕರಣದ ಹಿಂದೆ ದುಡಿಸುವ ವರ್ಗದ ಸ್ವಾರ್ಥ ಇದೆ. ಈ ಭೇದವನ್ನು ಇತ್ತೀಚೆಗೆ ಕಲ್ಪಿಸಿ ಒಂದೇ ನೆಲದ ಮಕ್ಕಳನ್ನು ಎರಡು ಪ್ರತ್ಯೇಕ ಪಂಗಡಗಳನ್ನಾಗಿ ಮಾಡಿರುವುದಕ್ಕೆ ಶೋಷಕ ವರ್ಗದ ಆರ್ಥಿಕ ಸಿದ್ಧಾಂತವೇ ಕಾರಣವಾಗಿದೆ. ಉದ್ಯೋಗ, ಕೈ ಕಸುಬು, ಆಹಾರನಿಯಮ, ಕೌಟುಂಬಿಕ ಅಂಶಗಳಲ್ಲಿ ಈ ಎರಡು ಪಂಗಡಗಳ ಮಧ್ಯೆ ಹೋಲಿಕೆಗಳಿವೆ; ಸಮಾನ ಸಂಗತಿಗಳಿವೆ. ಮೂಲತಃ ಕುಡಿಯರು ಮತ್ತು ನಾಲ್ಕುಮಲೆಯವರು ಒಂದೇ ಎಂಬುದಕ್ಕೆ ಜಾನಪದ ಸಮರ್ಥನೆಗಳಿವೆ. ಆದರೆ ಮದುವೆ ಸಂದರ್ಭದಲ್ಲಿ ಅನುಸರಿಸುವ 'ಕಟ್ಟು' ವಿಚಾರದಲ್ಲಿ ಮಲೆಕುಡಿಯರಿಗೆ

ಮತ್ತು ನಾಲ್ಕುಲೆಯವರಿಗೆ ವ್ಯತ್ಯಾಸವಿದ್ದು ಅನುಕ್ರಮವಾಗಿ 'ಅಳಿಯಕಟ್ಟು' ಮತ್ತು 'ಮಕ್ಕಳ ಕಟ್ಟು' ಪ್ರಚಾರದಲ್ಲಿದೆ.


ನಾಲ್ಕುಲೆಯವರು ಒಂದು ಪರಿಮಿತ ಪ್ರದೇಶದ ಜನಾಂಗವಿದ್ದು ಈ ಪ್ರದೇಶವು ಒಂದು ನಿಶ್ಚಿತ ಆಡಳಿತ ವರ್ಗಕ್ಕೆ ಒಳಪಟ್ಟದ್ದಾಗಿದ್ದು ಈ ನಾಲ್ಕುಲೆಯವರು ಮಕ್ಕಳ ಕಟ್ಟನ್ನು ಅಳವಡಿಸುವುದಕ್ಕೆ ಆಡಳಿತ ವರ್ಗದ ಪ್ರೇರಣೆ, ಒತ್ತಡ, ಒತ್ತಾಯಗಳಿತ್ತೆಂದು ತಿಳಿಯುವುದಕ್ಕೆ ಸಾಧ್ಯವಿದೆ. ನಾಲ್ಕುಲೆಯವರ ಮೇಲೆ ಹೇರಲ್ಪಟ್ಟ ಈ ಕಟ್ಟು ಒಂದು ಕಾರಣವಾಗಿ ಮಲೆಯ ಮಕ್ಕಳಲ್ಲಿ ಕೆಲವರು ನಾಲ್ಕುಲೆಯವರಾಗಿ ಬೇರ್ಪಟ್ಟರು. ಅಳಿಯ ಕಟ್ಟಿನ ಪ್ರಕಾರ ಹುಟ್ಟಿದ ಮಗು ತವರು ಮನೆಯ ಸ್ವತ್ತಾಗುತ್ತಿತ್ತು ಮತ್ತು ಅಳಿಯಕಟ್ಟನ್ನು ಅನುಸರಿಸುವ ಕುಟುಂಬಕ್ಕೆ ಸಹಜವಾಗಿ ಸದಸ್ಯ ಸಂಖ್ಯೆ ಅಧಿಕ ಬರುತ್ತಿತ್ತು ನಾಲ್ಕುಲೆಯ ಮಲೆಕುಡಿಯರು ಈ ಪದ್ಧತಿಯನ್ನು ಅನುಸರಿಸುವುದಕ್ಕೆ ಆಳುವ ವರ್ಗದ ವಿರೋಧ ಇತ್ತು. ನೆರೆಯ ಆಡಳಿತ ಮತ್ತು ಅಧೀನಕ್ಕೊಳಪಟ್ಟಿದ್ದ ಎಷ್ಟೋ ನಾಲ್ಕುಲೆಯವರ ಮದುವೆಯ ವಿಷಯದಲ್ಲಿ ಧನಿಗಳು ಹಸ್ತಕ್ಷೇಪ ಮಾಡಿ ದೂರದ ಸಂಬಂಧ ಬೆಳೆಸದಂತೆ ತಡೆಯೊಡ್ಡುತ್ತಿದ್ದರು. ಕಾಟಾಜೆ ಮತ್ತು ಕೊಲೋಡಿ ಕೊಲೊನಿಯ ನಾಲ್ಕುಲೆಯ ಕುಡಿಯರು ವರದಿ ಮಾಡುವ ಪ್ರಕಾರ ನಾಲ್ಕುಲೆಯ ಪರಿಸರ ಬಿಟ್ಟು ಬೇರೆ ಕಡೆಯ ಮಲೆಕುಡಿಯರ ಜೊತೆ ಮದುವೆ ಸಂಬಂಧ ಮಾಡದಂತೆ ಧನಿಗಳು ನಿರ್ಬಂಧ ಹೇರುತ್ತಿದ್ದರು. ಅಳಿಯ ಕಟ್ಟಿನ ಮಲೆಕುಡಿಯರಿಂದ ಹೆಣ್ಣು ತಂದರೆ ಪದ್ಧತಿ ಪ್ರಕಾರ ಮಕ್ಕಳನ್ನು ಮರಳಿಸುವ ವಿಧಿಯಿರುವುದರಿಂದ, ಮಲೆಕುಡಿಯರ ಸಂಬಂಧ ಮಾಡದಂತೆ ತಡೆಹಿಡಿಯುತ್ತಿದ್ದರು. ಈ ಎಲ್ಲಾ ಪಾಳೆಯಗಾರಿ ಪ್ರವೃತ್ತಿಯ ಹಿನ್ನೆಲೆಯಲ್ಲಿ ಅವಲೋಕಿಸಿದರೆ ನಾಲ್ಕುಲೆಯವರು ಮಾತ್ರ ಅನುಸರಿಸುವ 'ಮಕ್ಕಳ ಕಟ್ಟು' ಪದ್ಧತಿಗೆ ದುಡಿಸಿ ಶೋಷಣೆ ಮಾಡುವ ಬಂಡವಾಳಶಾಹಿ ಆರ್ಥಿಕ ಸಿದ್ಧಾಂತವೇ ಮೂಲ ಕಾರಣವಾಗಿದೆ. ಮೂಲಭೂತವಾಗಿ, ಬೆಟ್ಟ ಇಳಿಜಾರುಗಳಲ್ಲಿ ವಾಸವಾಗಿದ್ದ ಮಲೆಕುಡಿಯರ ಒಂದು ಪಂಗಡ ಪರಕೀಯ ಹಸ್ತಕ್ಷೇಪದ ಕಾರಣದಿಂದ ಮತ್ತು ಮೇಲ್ವರ್ಗದವರ ಸ್ವಾರ್ಥಸಾಧಕ ಬುದ್ಧಿಯಿಂದ 'ಮಲೆಕುಡಿಯರು' ಮತ್ತು 'ನಾಲ್ಕುಲೆಯವರು' ಎಂದು ಎರಡು ಸೀಳಾಗಿ ವಿಂಗಡಣೆಗೊಂಡಿತು. 'ಮಲೆಕುಡಿಯರು' ಮತ್ತು 'ನಾಲ್ಕುಲೆಯವರು' ಹೀಗೆ ದೂರವಾದ, ಬೇರೆಯಾದ ಕತೆಯ ಹಿಂದೆ ಐತಿಹಾಸಿಕ ಸತ್ಯ ಅಡಗಿದೆ.

ಮಲೆಕುಡಿಯರು ಮತ್ತು ನಾಲ್ಕುಲೆಯವರು ಇವರೊಳಗೆ ವೈವಾಹಿಕ ಸಂಬಂಧ ನಡೆಯುವುದಿಲ್ಲ ಮತ್ತು ಕುಟುಂಬ ಕಟ್ಟಳೆಗಳಲ್ಲಿ ಭಿನ್ನತೆಗಳಿರುತ್ತವೆ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಉಳಿದಂತೆ, ಇವೆರಡು ಪಂಗಡಗಳನ್ನು ಒಂದೇ ಘಟಕವಾಗಿ ಅವರದ್ದೇ ಎನ್ನಬಹುದಾದ ಕೆಲವು ನಿಯಮಗಳಿವೆ ಎಂದು ಪರಿಭಾವಿಸಿಕೊಳ್ಳಲಾಗಿದೆ." (ಸಂಸ್ಕೃತಿ ಸಿರಿ ಡಾ. ಕೆ. ಚಿನ್ನಪ್ಪ ಗೌಡ ಪುಟ-೨೧೨)

೩. ೬ . ದಕ್ಷಿಣ ಕನ್ನಡ ಜಿಲ್ಲೆಯ ಮಲೆಕುಡಿಯ ಜನಾಂಗದ ಸಂಖ್ಯೆ :

ಇತ್ತೀಚಿಗಿನ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ ಮಲೆಕುಡಿಯರ ಒಟ್ಟು ಜನಸಂಖ್ಯೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ. ಈ ಅಂಕಿ ಅಂಶವನ್ನು ಮಂಗಳೂರಿನ ಐ.ಟಿ.ಡಿ.ಪಿ. ಕಛೇರಿಯಿಂದ ಸಂಗ್ರಹಿಸಲಾಗಿದೆ.

ಕ್ರ. ಸಂ.	ತಾಲೂಕು	ಕುಟುಂಬಗಳು	ಜನಸಂಖ್ಯೆ	ಕಾಲನಿ
1	ಮಂಗಳೂರು	16	71	02
2	ಬಂಟ್ವಾಳ	77	440	08
3	ಪುತ್ತೂರು	90	440	–
4	ಸುಳ್ಯ	138	653	13
5	ಬೆಳ್ತಂಗಡಿ	989	4908	57
ಒಟ್ಟು		**1310**	**6512**	**80**



೩.೨. ಮಲೆಕುಡಿಯರ ಕೌಟುಂಬಿಕ ಮತ್ತು ಧಾರ್ಮಿಕ ಆರಾಧನೆ :

ಮಲೆಕುಡಿಯರು ಇತರ ಸಂಸ್ಕೃತಿಯ ಜನರ ಪರಿಚಯವಾಗುವ ಮೊದಲು ಅವರದ್ದೇ ಆದ ಒಂದು ಸಂಸ್ಕೃತಿಯನ್ನು ರೂಪಿಸಿಕೊಂಡಿದ್ದರು. ಆದರೆ ಆ ಸಂಸ್ಕೃತಿ ಈಗ ಅವರಲ್ಲಿ ಇಲ್ಲ. ಯಾಕೆಂದರೆ ಅವರು ಇತರ ಜನಾಂಗಗಳ ಜತೆ ಬೆರೆತಾಗ ಆ ಜನಾಂಗಗಳ ಆಚಾರ ವಿಚಾರಗಳು ಮಲೆಕುಡಿಯ ಆಚಾರ-ವಿಚಾರಗಳ ಮೇಲೆ ಪ್ರಭಾವವನ್ನು ಬೀರಿವೆ. ಆದುದರಿಂದ ಇಂದು ನಮಗೆ ಸಿಗುವ ಮಲೆಕುಡಿಯರ ಜೀವನಾವರ್ತನದ ಆಚರಣೆಗಳು ಬದಲಾದ ಒಂದು ಸಂಸ್ಕೃತಿಯ ಆಚರಣೆಗಳಂತೆ ಕಾಣುತ್ತವೆ. ಅವರ ಆಚಾರ-ವಿಚಾರಗಳ ಬಗ್ಗೆ ಅವರನ್ನೇ ಸಂದರ್ಶಿಸಿದಾಗ ಅವರು ತಿಳಿಸುವ ಮಾಹಿತಿಯಲ್ಲಿಯೇ ಸ್ಪಷ್ಟವಾದ ವಿವರಣೆಗಳು ದೊರೆಯುವುದಿಲ್ಲ. ಬದಲಾದ ಮತ್ತು ಬದಲಾಗುತ್ತಿರುವ ಅವರ ಸಂಸ್ಕೃತಿಯ ಅರಿವು ನಮಗಾಗುತ್ತದೆ.

೩. ೨. ೧. ಹುಟ್ಟು, ಬಳಿಗಳು, ಮದುವೆ, ಬಯಕೆ, ಮೈನೆರೆಯುವುದು, ಮುಟ್ಟಿನ ಮನೆ, ಅಂತ್ಯ ಸಂಸ್ಕಾರ

ಹುಟ್ಟು :

ಮಲೆಕುಡಿಯರಲ್ಲಿ ಮಗು ಹುಟ್ಟಿದ ಐದು ಅಥವಾ ಏಳು ದಿನಗಳಲ್ಲಿ 'ಅಮೆ' (ಶುದ್ಧೀಕರಣ)ಯನ್ನು ಆಚರಿಸುತ್ತಾರೆ. ಈ ಆಚರಣೆಗೆ ಹೆಣ್ಣಿನ ಕುಟುಂಬದವರು ಮತ್ತು ನೆರೆಕರೆಯ ಸ್ವಜಾತಿ ಭಾಂದವರನ್ನು ಕರೆಯುತ್ತಾರೆ. ಆ ದಿನ ಮಡಿವಾಳಗಿತ್ತಿ ಬಂದು ಮಗುವಿಗೆ ನೂಲು ಕಟ್ಟಿ ಹೆಸರು ಇಡುವ ಕ್ರಮ ಇತ್ತು. ಈಗ ಮಡಿವಾಳಗಿತ್ತಿ ಬರುವುದು ಕಡಿಮೆ. ಜಾತಿಯ ಹಿರಿಯರೇ ಮಗುವಿಗೆ ಹೆಸರಿಡುತ್ತಾರೆ. ಹಾಗೆಯೇ ಕುಟುಂಬದಲ್ಲಿ ಮಗು ಹುಟ್ಟಿದರೆ ಒಂಭತ್ತು ದಿನದ ಸೂತಕ ಇದೆ. ಆ ಸಮಯದಲ್ಲಿ ದೈವ, ದೇವರುಗಳಿಗೆ ಯಾವುದೇ ಹರಕೆ ಕೊಡುವ ಕ್ರಮ ಇಲ್ಲ. ಅಲ್ಲದೆ ದೇವಸ್ಥಾನಗಳಿಗೂ ಹೋಗುವುದಿಲ್ಲ. 'ಅಮೆ'ಯ ದಿನ ಮಗುವಿನ ಬಾಯಿಗೆ ಹಾಲು ಕೊಟ್ಟು, ಹೆಸರು ಇಡುತ್ತಾರೆ. ಸುಬ್ರಹ್ಮಣ್ಯದ ಮಲೆಕುಡಿಯರಲ್ಲಿ ಹೆಣ್ಣು ಮಗು ಜನಿಸಿದರೆ ನಾಲ್ಕನೇ ದಿನದಲ್ಲಿಯೂ, ಗಂಡು ಮಗು ಜನಿಸಿದರೆ ಏಳನೇ ದಿನದಲ್ಲಿಯೂ 'ಅಮೆ' ಯನ್ನು ಮಾಡುತ್ತಾರೆ. ಆ ದಿನ ಮಗುವನ್ನು ತೊಟ್ಟಿಲಲ್ಲಿ ಹಾಕಿ ಹೆಸರನ್ನು ಇಡುತ್ತಾರೆ. ಆ ದಿನ ಸ್ವಜಾತಿ ಹೆಂಗಸರೆಲ್ಲರೂ ಸೇರುತ್ತಾರೆ. ಹಿಂದಿನ ಕಾಲದಲ್ಲಾದರೆ ಮಗು ಹುಟ್ಟಿದ ವಾರದ ಹೆಸರನ್ನೇ ಇಡುತಿದ್ದರು. ಸೋಮವಾರ ಹುಟ್ಟಿದರೆ ಚೋಮ (ಗಂಡು) ಚೋಮು (ಹೆಣ್ಣು) ಮಂಗಳವಾರ ಹುಟ್ಟಿದರೆ ಅಂಗರ (ಗಂಡು) ಅಂಗರು (ಹೆಣ್ಣು) ಇತ್ಯಾದಿ. ಆದರೆ ಈಗ ರೀತಿ ಹೆಸರಿಡುವ ಕ್ರಮ ಇಲ್ಲ. (ಈ ಮಾಹಿತಿಯನ್ನು ನೀಡಿದವರು ಸುಬ್ರಹ್ಮಣ್ಯದ ಸಿರಿಬಾಗಿಲು ಎಂಬಲ್ಲಿ ವಾಸವಾಗಿರುವ ಮಡಿವಾಳ ಜಾತಿಯ ಗಂಗಮ್ಮ ಎಂಬವರು).

ಬಳಿಗಳು:

ಮಲೆಕುಡಿಯರಲ್ಲಿ ಮದುವೆಯು ಹೆಣ್ಣಿನ ಮನೆಯಲ್ಲಾಗಲೀ ಗಂಡಿನ ಮನೆಯಲ್ಲಾಗಲೀ ನಡೆಯುತ್ತದೆ. ಬಹಳ ಹಿಂದಿನ ಕಾಲದಲ್ಲಿ 'ಬಳಿ' ಪದ್ಧತಿಯನ್ನು ಇವರು ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದರು. ಇವರ ಜನಸಂಖ್ಯೆ ಕಡಿಮೆ ಇದ್ದ ಕಾರಣ ಮತ್ತು ಈ ರೀತಿ ಬಳಿಯನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತ ಬಂದ ಕಾರಣ ಅವರ ಜನಸಂಖ್ಯೆ ಕಡಿಮೆಯಾಗುತ್ತಾ ಬಂತು. ಇದಕ್ಕೆ ಸಂಬಂಧಪಟ್ಟಂತೆ ಈ ಪದ್ಧತಿಯನ್ನು ಕುರಿತ ಹೈಮನ್ ಡಾರ್ಫ್ ಅವರ ಮಾತನ್ನು ಗಮನಿಸಬಹುದು.

"As the population of malekudiyas is dwindling , the old system of bali is being overlooked . In the olden days, Malekudiyas had their own clan system and intermarriages were not allowed . Dr. Heimon Drof of the university of London has specially studied the customes and manners of these Malekudiyas and the affirms that the bali system is not strictly adhered to at present. Inter –bali marriages have become common among them". (South Canara Geze – page 112-1973)

ನಂತರದ ಕಾಲಘಟ್ಟದಲ್ಲಿ ಮಲೆಕುಡಿಯರು ಬಳಿಯನ್ನು ಅಷ್ಟಾಗಿ ಗಮನಿಸದೆ ಮದುವೆಯಾಗುತ್ತಿದ್ದರು. ಒಂದೇ ಕುಟುಂಬದ ಒಳಗಡೆ ಮದುವೆ ನಡೆಯುತ್ತಿತ್ತು. ಸಾಮಾಜಿಕ ಅರಿವು ಮಲೆಕುಡಿಯ ಜನಾಂಗದ ಮೇಲೆ ಆದ ನಂತರ ಒಂದೇ 'ಬಳಿ'ಯಲ್ಲಿ ಮದುವೆಯಾಗುವುದನ್ನು ನಿಷೇಧಿಸಿದ್ದಾರೆ. ಮಲೆಕುಡಿಯರಲ್ಲಿ ಹದಿನೆಂಟು ಬಳಿಗಳಿವೆ ಎಂದು ಅವರು ಹೇಳುತ್ತಾರೆ. ಆದರೆ ಆ ಹದಿನೆಂಟು ಬಳಿಗಳ ಹೆಸರು ಸಿಗುವುದಿಲ್ಲ. ಸುಮಾರು ಹದಿನೈದು ಬಳಿಗಳ ವಿವರ ಸಿಗುತ್ತದೆ. ಕೆಲವೊಮ್ಮೆ ಒಂದೇ ಬಳಿಯನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುವುದು ಕಾಣಿಸುತ್ತದೆ.

ಮಲೆಕುಡಿಯರಲ್ಲಿರುವ ಬಳಿ (ಬರಿ) ಗಳ ವಿವರ :

1. ಮೂಲ್ಮೆರೆ ಬರಿ 2. ಬಂಗೇರ ಬರಿ 3. ಬಲಸನ್ನ ಬರಿ 4. ಗುಂಡೆರೆ ಬರಿ 5. ಸಾಲೆರ ಬರಿ 6. ಪೆರ್ಬರೆ/ ಪೆರ್ಗಡೆ ಬರಿ 7. ನಂದೆರೆ ಬರಿ 8. ಚೌಟೆರೆ ಬರಿ 9. ಕರಂಬೆರೆ ಬರಿ 10. ಬಾಗ್ಯಾಟ್ಟಿ ಬರಿ 11. ಪುಲ್ಯೆಟ್ಟಿ ಬರಿ 12. ಉನ್ನಿತನ್ನ ಬರಿ 13. ಮುಚ್ಚುರಿನ ಬರಿ 14. ಬನ್ನಾಲು ಬರಿ 15. ಬಾರ್ತೆರೆ ಬರಿ.

ಇದರಲ್ಲಿ ಗುಂಡರ ಬಳಿಯಲ್ಲಿ 'ಕುತ್ತಿಗುಂಡೆರ್' ಮತ್ತು 'ಪೇರ್‌ಗುಂಡೆರ್' ಎಂದು ಎರಡು ವಿಧಗಳಿವೆ.

ಡಾ. ಎಚ್. ಎಮ್. ಮರುಳಸಿದ್ಧಯ್ಯ ಪಟೇಲ್ ಅವರು ತಮ್ಮ ಬುಡಕಟ್ಟುಗಳ ಅಧ್ಯಯನದ ಸಂದರ್ಭದಲ್ಲಿ ಮಲೆಕುಡಿಯರಲ್ಲಿರುವ ಬಳಿಗಳನ್ನು ಈ ರೀತಿಯಾಗಿ ಗುರುತಿಸಿದ್ದಾರೆ. ಸಾಲ್ಯಾನ, ಮೂಲ್ಯ,

ಪೆರ್ಗಡೆ, ಬಂಗೇರ, ಬಲಸೆರ್ನ ಗುಂಡೆರೆ. (Ethnographic Atlas of Indian Tribes" – Dr. H. M. Maralusiddaiah Patel – Page No. 354)

ಬಿ. ಕೆ. ದಾಸ್. ಉಲ್ಲೇಖಿಸಿರುವ ಮಲೆಕುಡಿಯರ ಹನ್ನೊಂದು ಬಳಿಗಳು – ಬಂಗೇರ, ಸಾಲಿಯಾನ್, ಪೆರ್ಗಡೆ, ಮೂಲ್ಯ, ಚಾಲ್ಯೆರ್‌ನಾಯ, ಬುನ್ನಾಲು, ಬಳಸರ್ನ, ಕರೆಂಬೆರ್, ಗುಂಡೆರ್, ಬಾರ್ತೆರ್, ಭಾಗ್ಯೆಟ್ನಯ.

ಪುತ್ತೂರು ತಾಲೂಕಿನ ಸಿರಿಬಾಗಿಲು ಗ್ರಾಮದ ಮಲೆಕುಡಿಯರ ಗುರಿಕಾರರಾದ ಹೊನ್ನಪ್ಪ ಮಲೆಕುಡಿಯ ಅವರು ಹೇಳುವ ಪ್ರಕಾರ ನಮ್ಮಲ್ಲಿ ಹಿಂದೆ ೧೮ ಬಳಿಗಳು ಇದ್ದವು. ಆದರೆ ಈಗ ನಮ್ಮಲ್ಲಿ ೬ ಬಳಿಗಳಿಂದ ಮಾತ್ರ ಗುರುತಿಸುತ್ತಾರೆ. ಆ ೬ ಬಳಿಗಳ ವಿವರ ಈ ರೀತಿಯಾಗಿ ಹೇಳುತ್ತಾರೆ. – ಸಾಲ್ಯಾನ, ಮೂಲ್ಯ, ಪೆರ್ಗಡೆ, ಬಂಗೇರ, ಬಲಸನ್ನ, ಗುಂಡೆರ.

ಮದುವೆ :

ಮಲೆಕುಡಿಯರಲ್ಲಿ 'ಅಳಿಯಕಟ್ಟು' ಮತ್ತು 'ಮಕ್ಕಳಕಟ್ಟು' ಈ ಎರಡೂ ಸಂಪ್ರದಾಯಗಳು ಆಚರಣೆಯಲ್ಲಿವೆ. ಈ ಎರಡು ಕಟ್ಟುಗಳ ಮಲೆಕುಡಿಯರ ನಡುವೆ ಮದುವೆ ನಡೆಯುತ್ತದೆ. ಮಲೆಕುಡಿಯರಲ್ಲಿ ನಡೆಯುವ ಮದುವೆಯ ಆಚರಣೆಗಳು, ಗೌಡರ ಹಾಗೂ ಬಂಟರ ಜಾತಿಯ ಮದುವೆಯ ಆಚರಣೆಗಳನ್ನೇ ಬಹುಮಟ್ಟಿಗೆ ಹೋಲುತ್ತದೆ. ಮಲೆಕುಡಿಯರಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ಗಂಡಿನ ಮನೆಯವರು ಹೆಣ್ಣಿನ ಮನೆಗೆಹೋಗಿ, ಪರಸ್ಪರ ಒಪ್ಪಿಗೆಯಾದ ನಂತರ, ಮದುವೆ ನಡೆಯುವುದು ಗಂಡಿನ ಮನೆಯಲ್ಲಿ ಗಂಡಿನವರ ಖರ್ಚಿನಲ್ಲಿ. ಗಂಡಿನ ಕಡೆಯವರು ಹೆಣ್ಣಿನ ಕಡೆಯವರಿಗೆ ದಕ್ಷಿಣೆ ಕೊಡುವರು.

ಮಲೆಕುಡಿಯರಲ್ಲಿ ಮದುವೆಗೆ ಮುನ್ನ ಗಂಡು, ಹೆಣ್ಣಿನ ತಂದೆಯ ಮನೆಗೆ ಎಳ್ಳೆಣ್ಣೆಯನ್ನು ಕೊಡುವುದು ವಾಡಿಕೆ. ಅದನ್ನು ಹೆಣ್ಣಿನ ತಂದೆ ತಾಯಿಯರು ಸ್ವೀಕರಿಸದಿದ್ದರೆ ಆ ಸಂಬಂಧ ಒಪ್ಪಿಗೆಯಿಲ್ಲವೆಂದು ಅರ್ಥ.

ಇಂದು ಪರಿಸ್ಥಿತಿ ಸ್ವಲ್ಪ ವ್ಯತ್ಯಾಸವಾದಂತೆ ತೋರುತ್ತದೆ. ಈಗ ಹೆಣ್ಣಿನ ಕಡೆಯವರೇ ಗಂಡಿನ ಕಡೆಯವರಿಗೆ ವರದಕ್ಷಿಣೆ ಕೊಡುವ ಪ್ರಸಂಗಗಳು ಸಾಕಷ್ಟು ಇದೆ.

ಹುಡುಗನ ತಂದೆ ತಾಯಿಯರು ಹುಡುಗಿಯನ್ನು ನೋಡಿ ಒಪ್ಪಿದರೆ ಮದುವೆಯಾಗುವ ಪದ್ಧತಿ ಹಿಂದೆ ಇತ್ತು. ಈಗ ಹುಡುಗನೇ ಹುಡುಗಿ ನೋಡಲು ಹೋಗುವ ಕ್ರಮ ಇದೆ. ಹುಡುಗಿ ಒಪ್ಪಿಗೆಯಾಯಿತು ಎಂದಾದರೆ ಒಂದು ಹರಿವಾಣದಲ್ಲಿ ವೀಳ್ಯವನ್ನು ಕೊಡುತ್ತಾರೆ. ಮತ್ತೊಂದು ದಿನ ಹುಡುಗಿಯ ಮನೆಯಲ್ಲಿ ನಿಶ್ಚಿತಾರ್ಥವನ್ನು ಇಟ್ಟುಕೊಳ್ಳುತ್ತಾರೆ. ಆ ದಿನ ಮದುವೆ ನಡೆಸುವ ಬಗ್ಗೆ ಎಲ್ಲಾ ಮಾತುಕತೆಗಳು

ನಡೆಯುತ್ತವೆ. ಈಗ ಹೆಚ್ಚಾಗಿ ಸಭಾಗೃಹಗಳಲ್ಲಿ ಮಲೆಕುಡಿಯರ ಮದುವೆ ನಡೆಯುತ್ತದೆ. ಮನೆಯಲ್ಲಿ ಮದುವೆ ನಡೆಯುವುದಾದರೆ ಮನೆಯ ಅಂಗಳಕ್ಕೆ ಚಪ್ಪರವನ್ನು ಹಾಕುತ್ತಾರೆ. ಮದುವೆಯ ಮೊದಲನೆಯ ದಿನ "ಮದರಂಗಿ" ಶಾಸ್ತ್ರವನ್ನು ಮಾಡುತ್ತಾರೆ. ಅಂಗಳದ ನಡುವೆ ಒಂದು ಮುಹೂರ್ತದ ಕಂಬವನ್ನು ನೆಡುತ್ತಾರೆ. ಅದಕ್ಕೆ ಬಿಳಿವಸ್ತ್ರವನ್ನು ಸುತ್ತುತ್ತಾರೆ. ಈ ಮುಹೂರ್ತದ ಕಂಬಕ್ಕೆ ಮದುಮಗ ಮತ್ತು ಮದುಮಗಳು ಮೂರು ಅಥವಾ ಐದು ಸುತ್ತು ಬರುತ್ತಾರೆ. ಬಳಿಕ ಗಂಡು ಹೆಣ್ಣಿಗೆ ತಾಳಿಯನ್ನು ಕಟ್ಟುತ್ತಾನೆ. ಆಮೇಲೆ ಸೋದರ ಮಾವ ಹೆಣ್ಣನ್ನು ಧಾರೆ ಎರೆದು ಕೊಡುತ್ತಾನೆ. ನಂತರ ಮದುಮಕ್ಕಳ ಬಂಧುಗಳೆಲ್ಲರೂ ಅಕ್ಷತೆ ಹಾಕುತ್ತಾರೆ. ಈ ಅಕ್ಷತೆ ಹಾಕುವಾಗಲೂ ಪ್ರಾರಂಭದಲ್ಲಿ ಜಾತಿಯ ಗುರಿಕಾರನೆ ಆರಂಭದಲ್ಲಿ ಗಂಡು ಹೆಣ್ಣಿನ ಕೈಯಲ್ಲಿ ಉಡುಗೊರೆಯನ್ನು ಕೊಟ್ಟು ಅಕ್ಷತೆ ಹಾಕುತ್ತಾನೆ.

ಮದುಮಗನನ್ನು ಕಚ್ಚೆ, ಅಂಗಿ ಮತ್ತು ತಲೆಗೆ ಮುಂಡಾಸು ಕಟ್ಟಿ ಅಲಂಕರಿಸುತ್ತಾರೆ. ಈಗ ಮುಂಡಾಸಿನ ಬದಲು ಪೇಟವನ್ನು ಧರಿಸುತ್ತಾರೆ. ಹೆಣ್ಣಿಗೆ ಸೀರೆ, ರವಕೆ, ಕಾಲುಂಗುರ, ಮೂಗುತ್ತಿ, ಕೈಬಳೆ ಹಾಕಿ ಅಲಂಕರಿಸುತ್ತಾರೆ. ಮದುವೆಗೆ ಸಿಹಿ ಊಟವನ್ನು ಮಾಡುತ್ತಾರೆ. ಹಿಂದಿನ ಕಾಲದಲ್ಲಿ ಮಾಂಸದ ಅಡುಗೆಯನ್ನು ಮಾಡುತ್ತಿದ್ದರು. ಮದುವೆ ಮುಗಿದ ಮೇಲೆ ಓಕುಳಿ ಆಟ, ಉಂಗುರದ ಆಟ ನಡೆಯುತ್ತದೆ. ಮದುವೆ ಮುಗಿದ ಒಂದು ವಾರದಲ್ಲಿ 'ತುಪ್ಪದ' ಕ್ರಮ ಇದೆ. ಒಂದು ಕುಡುತೆ ತುಪ್ಪವನ್ನು ಗಂಡನ ಮನೆಯಿಂದ ಕಟ್ಟಿಕೊಂಡು ತವರು ಮನೆಗೆ ಹೋಗುವುದು. ಅಂದು ತವರು ಮನೆಯಲ್ಲಿ ಮಾಂಸದ ಅಡುಗೆ ಮಾಡುತ್ತಾರೆ. ತೆಗೆದುಕೊಂಡು ಹೋದ ತುಪ್ಪವನ್ನು ಹಿರಿಯರಿಗೆ (ಕುಲೆಗಳಿಗೆ, ಪ್ರೇತಗಳಿಗೆ) ಬಡಿಸುತ್ತಾರೆ.

ಮಲೆಕುಡಿಯರಲ್ಲಿ ವಿಧವಾ ವಿವಾಹ ಕ್ರಮ ಇದೆ. ಒಂದು ವೇಳೆ ಗಂಡ ಸತ್ತರೆ ವಿಧವೆ ಬೇರೊಬ್ಬನನ್ನು ಮದುವೆಯಾಗಬಹುದು. ಇದಕ್ಕೆ ಮದುವೆಯೆಂದು ಕರೆಯುವುದಿಲ್ಲ. 'ಕೈ ಹಿಡಿಯುವುದು' ಎನ್ನುತ್ತಾರೆ. ಮೊದಲಿನ ಗಂಡನಲ್ಲಿ ಹುಟ್ಟಿದ ಮಕ್ಕಳಿದ್ದರೂ ಅವಳು ಬೇರೊಬ್ಬನನ್ನು ಕೈ ಹಿಡಿದಾಗಲೂ ಆ ಮಕ್ಕಳು ಅವಳ ಜೊತೆಯಲ್ಲಿಯೇ ಇರುತ್ತಾರೆ.

ಬಯಕೆ :

ಗಂಡನು ತನ್ನ ಹೆಂಡತಿ ಪ್ರಥಮ ಬಾರಿಗೆ ಗರ್ಭಿಣಿಯಾದಾಗ ಏಳನೇ ತಿಂಗಳಲ್ಲಿ ಮಾಡುವ ವಿಶೇಷ ಕಾರ್ಯಕ್ರಮವೇ ಬಯಕೆ. ಇಲ್ಲಿ ಹೆಣ್ಣನ್ನು ಸಿಂಗರಿಸಿ ಕುರ್ಚಿಯಲ್ಲಿ ಕುಳ್ಳಿರಿಸಿ ಗಂಡನ ಕಡೆಯವರು ತಂದ ಉಡುಗೊರೆಗಳನ್ನು ಕೊಡುತ್ತಾರೆ. ನಂತರ ವಿವಿಧ ಬಗೆಯ ಸಿಹಿ ತಿಂಡಿಗಳನ್ನು ಮಾಡಿ ಬಡಿಸುತ್ತಾರೆ. ನಂತರ ತಾಯಿ ಮನೆಗೆ ಹೊರಡುವ ಮೊದಲು ಇವೆಲ್ಲವನ್ನು ಆಕೆಯ ಕೈಗೆ ನೀಡುತ್ತಾರೆ. ಮುಂದೆ ಆಕೆಯ ತಾಯಿ ಮನೆಯಲ್ಲಿ ಹೆರಿಗೆಯಾದ ನಂತರ ತಾಯಿ ಮಗುವನ್ನು ಪ್ರತ್ಯೇಕವಾಗಿ ನೋಡಿಕೊಳ್ಳುತ್ತಾರೆ.

ಮೈ ನೆರೆಯುವುದು (ಮದಿಮ್ಮಾಳ ಮದಿಮೆ) :

ಮಲೆಕುಡಿಯರಲ್ಲಿ ಈ ಘಟನೆ ಸಂಭ್ರಮದ ಘಟನೆ. ಹುಡುಗಿ ಮೈ ನೆರೆದಾಗ, ಆಕೆಯ ವಾಸಕ್ಕೆ ಪ್ರತ್ಯೇಕವಾದ ಗುಡಿಸಲನ್ನು ರಚಿಸುತ್ತಾರೆ. ಮೂರನೆ ದಿನ ತಲೆಗೆ ಸ್ನಾನವಾದರೂ ಅದೇ ಗುಡಿಸಲಲ್ಲಿಯೇ ಸ್ವಲ್ಪ ದಿವಸ ಇರಬೇಕು. ಹೊರಗಾದ ಹನ್ನೆರಡನೆ ದಿನ 'ಮದಿಮ್ಮಾಳ ಮದಿಮೆ' ಸಮಾರಂಭ ಜರಗುತ್ತದೆ. ಅರಿಶಿನ, ಎಣ್ಣೆ, ಸೀಗೆ ಮುಂತಾದವುಗಳನ್ನು 'ಗರಿಕೆ' ಹುಲ್ಲಿನಿಂದ ಅದ್ದಿ ಹುಡುಗಿಯ ಮೈಗೆ ಮುಟ್ಟಿಸಲಾಗುತ್ತದೆ. ಈ ಸಮಯದಲ್ಲಿ ಹುಡುಗಿಯ ಜೊತೆ ಒಬ್ಬಳು 'ಪಾಸಡಿ' (ಜೊತೆಗಾರ್ತಿ) ಇರುತ್ತಾಳೆ. ಸ್ನಾನವಾದ ನಂತರ ಹುಡುಗಿಯನ್ನು ಹೊಸ ಸೀರೆ, ಹೊಸ ರವಿಕೆ ಮತ್ತು ಹಿಂಗಾರ ಹೂಗಳಿಂದ ಅಲಂಕರಿಸುತ್ತಾರೆ. ಅವರ ಗುರಿಗಾರ್ತಿ 'ಐತೋಸಿಂಗಾರ' ಮಾಡುತ್ತಾಳೆ. ಈ ಸಮಾರಂಭಕ್ಕೆ ಗುರಿಕಾರ್ತಿ ಹಿಂಗಾರ ಮತ್ತು ಐದು ಬಗೆಯ ಹೂಗಳನ್ನು ತರಬೇಕು. ಮಡಿವಾಳಗಿತ್ತಿ ಜೇಡಿ ಮಣ್ಣಿನಿಂದ ಮಂಡಲ ಒಂದನ್ನು ಬಿಡಿಸುತ್ತಾಳೆ. ಆ ಮಂಡಲದಲ್ಲಿ ಮೂರು ಕಾಲಿನ ಮಣೆಯ ಮೇಲೆ ಕೂಡಿಸಿ, ಮಡಿವಾಳಗಿತ್ತಿ ಹುಡುಗಿಯ ತಲೆಯ ಮೇಲೆ ಒಂದು ಬಿಳಿಯ ಬಟ್ಟೆಯನ್ನು ಬಿಡಿಸಿ ಹಿಡಿಯುತ್ತಾಳೆ. ಈ ಸಂದರ್ಭದಲ್ಲಿ 'ಏಳುಬರಿ'ಯ (ಕಡೆಯ ಪಕ್ಷ) ಮುತ್ತೈದೆಯರು ಏಳು ಕಳಸಗಳನ್ನು ಸ್ಥಾಪಿಸಿ, ಅದಕ್ಕೆ ಪೂಜಿಸಿ, ಆ ಕಳಸದ ತೀರ್ಥವನ್ನು ಹುಡುಗಿಯ ತಲೆಯಮೇಲೆ ಪ್ರೋಕ್ಷಿಸುತ್ತಾರೆ. ನಂತರ ಅಕ್ಕಿಯ ಅಕ್ಷತೆಯಿಂದ ಹರಸುತ್ತಾರೆ. ಈ ಸಂದರ್ಭದಲ್ಲಿ ಹುಡುಗಿಗೆ ರವಿಕೆಯ ಖಣ ಹಾಗೂ ಹಣವನ್ನು ಉಡುಗೊರೆಯಾಗಿ ನೀಡುತ್ತಾರೆ. ನಂತರ ಗಂಗೆಯ ಪೂಜೆಯನ್ನು ಹುಡುಗಿಯ ಕೈಯಲ್ಲಿ ಮಾಡಿಸುತ್ತಾರೆ. ಆ ದಿನ ರಾತ್ರಿ ಹುಡುಗಿ ತನ್ನ ತಂದೆ ತಾಯಂದಿರ ಮನೆಯಲ್ಲಿ ಮಲಗುವ ಹಾಗಿಲ್ಲ. ಆ ರಾತ್ರಿ ಹುಡುಗಿಯನ್ನು ಸೋದರ ಮಾವನ ಮನೆಗೆ ಕರೆದುಕೊಂಡು ಹೋಗುತ್ತಾರೆ.

ಹದಿಮೂರನೆ ದಿವಸ ಹುಡುಗಿ ಮನೆಯನ್ನು ಪ್ರವೇಶ ಮಾಡಿದ ಮೇಲೆ ಒನಕೆ, ಮಡಿಕೆ ಇತ್ಯಾದಿ ಅಡಿಗೆ ವಸ್ತುಗಳನ್ನು, ತೆಂಗು, ಕಂಗು, ಬಾಳೆ, ಹಲಸು ಮುಂತಾದ ಗಿಡಮರಗಳನ್ನು (ಫಲ ನೀಡುವ ಮರಗಳು) ಮುಟ್ಟಿ ವಂದಿಸಬೇಕು. ಈ ಎಲ್ಲಾ ಕ್ರಿಯೆಗಳ ಹಿಂದಿರುವ ಆಶಯ ಎಂದರೆ ಹುಡುಗಿ ದೊಡ್ಡವಳಾಗಿದ್ದಾಳೆ. ಮದುವೆಗೆ ಸಿದ್ಧವಾಗಿದ್ದಾಳೆ, ಇನ್ನು ಅಡಿಗೆಯ ಮನೆಯ ಜವಾಬ್ದಾರಿಯನ್ನು ಆಕೆ ಹೊರುವಂತೆ ಆಗಬೇಕು ಅಷ್ಟೇ ಅಲ್ಲ, ಹೂವು, ಕಾಯಿ, ಫಲಗಳನ್ನು ನೀಡುವ ವೃಕ್ಷಗಳಂತೆ ಆಕೆಯೂ ಸಂತಾನವನ್ನು ವೃದ್ಧಿಸುವ ವ್ಯಕ್ತಿಯಾಗಿ ವಿಕಾಸ ಹೊಂದಬೇಕು ಎಂಬುದೇ ಅದರ ಆಶಯ.

ನಾಲ್ಕಮಲೆಯವರಲ್ಲಿ 'ಗುಮ್ಮನ ಪೂಜೆ' (ಗಂಗೆಯ ಪೂಜೆ) ಸಂಪ್ರದಾಯ ಇಲ್ಲ. ಉಳಿದ ಎಲ್ಲ ಸಂಪ್ರದಾಯಗಳನ್ನೂ ಆಚರಿಸುತ್ತಾರೆ. ಈ ಮಾಹಿತಿಯನ್ನು ಪುತ್ತೂರು ತಾಲೂಕಿನ ಬಿಳಿನೆಲೆ ಗ್ರಾಮದ ಮಡಿವಾಳ ಜಾತಿಯ ಗಂಗಮ್ಮ ಇವರು ನೀಡಿರುತ್ತಾರೆ.

ಒಟ್ಟಿನಲ್ಲಿ ನೆಲ, ನೀರು, ಗಿಡ, ಮರ ಇತ್ಯಾದಿಗಳ ಪಾವಿತ್ರ್ಯತೆ ಈ ಆಚರಣೆಯಲ್ಲಿ ಕಂಡು ಬರುವುದಲ್ಲದೆ, ಕುಡಿಯರಲ್ಲಿರುವ ಪ್ರಕೃತಿ ಪ್ರೇಮ, ಸಂತಾನದ ಅಪೇಕ್ಷೆ, ಹೆಣ್ಣಿನ ಬಗ್ಗೆ ಇರುವ ಗೌರವ ಭಾವನೆಗಳು ವ್ಯಕ್ತವಾಗುತ್ತವೆ.

ಮುಟ್ಟಿನ ಮನೆ :

ಹಿಂದಿನ ಕಾಲದಲ್ಲಿ ಸ್ತ್ರೀಯರು ಮುಟ್ಟಾದಾಗ ಯಾರಿಂದಲೂ ಮುಟ್ಟಿಸಿಕೊಳ್ಳಬಾರದು ಎನ್ನುವ ಆಚಾರ- ವಿಚಾರವು ಸರ್ವೆ ಸಾಮಾನ್ಯವಾಗಿತ್ತು. ಸ್ತ್ರೀಯರ ಮುಟ್ಟಿನ ಬಗ್ಗೆ ಇರುವ ಭಯವೂ ಅದಕ್ಕೆ ಒಂದು ಕಾರಣವಿದ್ದಿರಬಹುದು. ಮುಟ್ಟು ಎನ್ನುವುದು ಅಸ್ಪೃಶ್ಯತೆಯ ಪರಿಕಲ್ಪನೆಯನ್ನು ಮತ್ತು ರೂಢಿಯಿಂದ ಬಂದಿರುವ ಸಂಪ್ರದಾಯ ಎನ್ನುವ ಕಲ್ಪನೆ. ಇಲ್ಲಿ ಮೈಲಿಗೆ ಎನ್ನುವುದು ಒಂದು ಜೀವನ ದೃಷ್ಟಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೈಲಿಗೆ ಎಂದರೆ 'ಹೊರಗೆ' ಎಂಬ ಮಾತು ಹೆಚ್ಚು ಪ್ರಚಲಿತ.

ಮುಟ್ಟಾದ' ಹೆಣ್ಣು ಪ್ರತ್ಯೇಕ ಮನೆಯೊಂದರಲ್ಲಿ ಮೂರು ದಿನಗಳ ಕಾಲ ವಾಸವಾಗಬೇಕು. ಮುಟ್ಟಾದ ಮೊದಲ ದಿನ ಅವಳು ತಲೆಗೆ ಸ್ನಾನ ಮಾಡಿ, ತಾನು ಉಟ್ಟುಕೊಂಡಿರುವ ಬಟ್ಟೆಗಳನ್ನು ಮಡಿಗೊಳಿಸಿ ನಂತರ ಊಟ ಮಾಡಬೇಕು. ಆ ಮೂರು ದಿನಗಳ ಕಾಲ ಅವಳು ಶುಭ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಹಾಗಿಲ್ಲ. ಮನೆಯವರು ನೀಡಿದ ಆಹಾರಗಳನ್ನು ಮಾತ್ರ ಸ್ವಿಕರಿಸಬೇಕು. ನಾಲ್ಕನೇ ದಿನ ತಲೆಗೆ ಸ್ನಾನ ಮಾಡಿ, ಬಟ್ಟೆಗಳನ್ನು ಶುಚಿತ್ವಗೊಳಿಸಿ ತನ್ನ ಮನೆಗೆ ಪ್ರವೇಶ ಮಾಡುತ್ತಾಳೆ. ಆದರೆ ಇತ್ತೀಚಿನ ದಿನಗಳಲ್ಲಿ ಮುಟ್ಟಾದ ಸ್ತ್ರೀಯರು ಶುಭ ಸಮಾರಂಭಗಳಲ್ಲಿ ಪಾಲ್ಗೊಳ್ಳದಿದ್ದರೂ ಉಳಿದಿರುವ ವಿಚಾರಗಳು ಸಾಮಾನ್ಯವಾಗಿರುತ್ತದೆ.

ಉತ್ತರಕ್ರಿಯೆ :

ಮಲೆಕುಡಿಯರಲ್ಲಿ ಸತ್ತ ವ್ಯಕ್ತಿಯನ್ನು ಸುಡುತ್ತಾರೆ. ಹಿಂದಿನ ಕಾಲದಲ್ಲಿ ಮಣ್ಣಿನಲ್ಲಿ ಹೂತಿಡುತ್ತಿದ್ದರು. "ಸತ್ತ ವ್ಯಕ್ತಿಯ ಹೆಣವನ್ನು ಸ್ನಾನ ಮಾಡಿಸಿ ಬಿಳಿ ಬಟ್ಟೆ ಹೊದಿಸಿ, ಹೆಣವನ್ನು ಹೊತ್ತುಕೊಂಡು ಹೋಗಿ ಕಾಟದಲ್ಲಿ (ಕಟ್ಟಿಗೆಯ ರಾಶಿ) ಇಡುತ್ತಾರೆ. ಅಲ್ಲಿ ಕುಟುಂಬದವರೆಲ್ಲರೂ ಸೇರಿ "ನೀವು ಸ್ವರ್ಗಕ್ಕೆ ಹೋಗಿ" ಎಂದು ಹೇಳಿ ಹೆಣದ ಬಾಯಿಗೆ ನೀರು ಬಿಡುತ್ತಾರೆ. ನಂತರ ಸತ್ತ ವ್ಯಕ್ತಿಯ ಮಗ ಕಾಟಕ್ಕೆ ಬೆಂಕಿಯನ್ನು ಕೊಡುತ್ತಾನೆ. ತಂದೆ ಸತ್ತಾಗ ಹಿರಿಮಗ ಮತ್ತು ತಾಯಿ ಸತ್ತಾಗ ಕಿರಿಮಗ ಕಾಟಕ್ಕೆ ಬೆಂಕಿಯನ್ನು ಕೊಡುತ್ತಾನೆ.

ವ್ಯಕ್ತಿ ಸತ್ತ ಮೂರನೇ ದಿನ ಅಥವಾ ಐದನೇ ದಿನ ಶುದ್ದವನ್ನು ಮಾಡುತ್ತಾರೆ. ಆ ದಿನ ಕುಟುಂಬದವರು ಒಟ್ಟು ಸೇರುತ್ತಾರೆ. ವ್ಯಕ್ತಿಯನ್ನು ಸುಟ್ಟ ಸ್ಥಳದಲ್ಲಿರುವ ಬೂದಿಯನ್ನು ಒಟ್ಟು ಮಾಡಿ 'ಧೂಪೆ' ಮಾಡುತ್ತಾರೆ. 'ಧೂಪೆ' ಮಾಡಿರುವ ಜಾಗದಲ್ಲಿ ಸತ್ತ ವ್ಯಕ್ತಿಯನ್ನು ಸುಡುವ ಸಂದರ್ಭದಲ್ಲಿ ಯಾರು ಬೆಂಕಿ ಕೊಟ್ಟಿರುತ್ತಾನೋ ಆತ ಅಕ್ಕಿ ಹಾಕುವ (ತುಳುವಿನಲ್ಲಿ ಅರಿ ಬಿರ್ಕುನ) ಕ್ರಮವನ್ನು

ಮಾಡುತ್ತಾರೆ. ಅಂದು ಕೋಳಿ ಕಡುಬು ಅಡುಗೆ ಮಾಡಿ, ಹೊಸ ಚಾಪೆಯ ಮೇಲೆ ಹೊಸ ಬಿಳಿ ಬಟ್ಟೆಯನ್ನು ಹಾಸಿ ಅದರ ಮೇಲೆ ಹನ್ನೊಂದು ಎಡೆ(ಎಲೆ) ಹಾಕಿ ಮನೆಯ ಒಳಗಡೆ ಬಡಿಸುತ್ತಾರೆ. ಆರ್ಥಿಕವಾಗಿ ಮುಂದುವರಿದಿರುವವರು ಹಂದಿ ಪದಾರ್ಥವನ್ನು ಮಾಡಿ ಬಡಿಸುತ್ತಾರೆ. ಜೊತೆಗೆ ಕುಂಬಳಕಾಯಿ ಮತ್ತು ಬಾಳೆಕಾಯಿ (ತುಳುವಿನ ಭೂದಿ ಜಾತಿಯ ಬಾಳೆಕಾಯಿ) ಪದಾರ್ಥವನ್ನು ಮಾಡಿ ಬಡಿಸುತ್ತಾರೆ. ಆ ದಿನವೇ ಸತ್ತ ವ್ಯಕಿಯನ್ನು 'ಕುಲೆ' ಗಳ (ಪ್ರೇತ) ಸಾಲಿಗೆ ಸೇರಿಸುತ್ತಾರೆ. ಆ ಸಂದರ್ಭದಲ್ಲಿ ಕುಟುಂಬದ ಹಿರಿಯ ವ್ಯಕ್ತಿ ಪಾರಿಯನ್ನು (ಪ್ರಾರ್ಥನೆ) ಹೇಳುತ್ತಾನೆ. "ನಮ್ಮ ಕೈಯಿಂದ ಕೈಲಾಸಕ್ಕೆ ಹೋದಿರಿ, ನಿಮ್ಮ ಸಂಸಾರಕ್ಕೆ ಸಹಾಯವಾಗಿ ನಿಲ್ಲಬೇಕು. ಉಳಿದವರನ್ನು ಕರಗಿಸಬಾರದು, ನಮಗೆ ಉಪದ್ರವ ಕೊಡಬಾರದು, ಎರಡು ಕಾಲಿನ ಮಾನವನಿಗೆ, ನಾಲ್ಕು ಕಾಲಿನ ಪಶುವಿಗೆ, ಉತ್ತಿದ ಬೆಳೆಗೆ, ಕುಡಿಯುವ ನೀರಿಗೆ, ತೊಡಕು ಮಾಡಬೇಡಿ. ಈ ದಿನ ಬಡಿಸಿದ ಎಲೆಯಲ್ಲಿ ಸಾವಿರ ಬಗೆಯ ತಪ್ಪಿರಬಹುದು. ಆ ತಪ್ಪುಗಳನ್ನು ಒಪ್ಪಿಕೊಂಡು ನಮಗೆ ಸಂಕಟ ಕೊಡದೆ ನೀವು ಪೂರ್ವದ ಹಿರಿಯರೊಂದಿಗೆ ಸ್ವರ್ಗಕ್ಕೆ ತೆರಳಿರಿ'' ಎನ್ನುವ ಪ್ರಾರ್ಥನೆಯೊಡನೆ ಉತ್ತರಕ್ರಿಯೆಯ ವಿಧಿಯನ್ನು ಮುಗಿಸುತ್ತಾರೆ. (ಈ ಹೇಳಿಕೆಯನ್ನು ಹೇಳಿದವರು ಪುತ್ತೂರು ತಾಲೂಕಿನ ಸಿರಿಬಾಗಿಲು ಗ್ರಾಮದ ಗುರಿಕಾರರಾದ ಹೊನ್ನಪ್ಪ ಮಲೆಕುಡಿಯ)

ಮಲೆಕುಡಿಯರು ಸಾವಿನ ಬಗ್ಗೆ ಎಡ್ಗರ್ ಥರ್ಸ್ಟನ್ ತನ್ನ ಅಭಿಪ್ರಾಯವನ್ನು ಈ ರೀತಿಯಾಗಿ ಕೊಡುತ್ತಾರೆ.

'If a member of the Tribe dies near the settlement, the body is cremated, and, if far away there from byried. One the third day, a visit is paid to the place where there cremation took place, and the son or some near relatives of the diceased goes round the spot on which the corpse was burnt three times, and sprinkles reice there on thrice. Five leaves of the teak or plantain or, other big leaves are spread on the ground, and fowl;s flesh cooked rice, and vegetable are placed there on, and the ancestors are invoked in the words " oh ! Old souls, gather up new soul, and support it, making it one of you 'on the sixteenth day food is again offered on leaves. In cases where burial is resorted to, an effigy of the deceased is made in straw, and burnt, on the third day the ashes are taken to the graves, and buried" (Edger thrston page 98P)

೩. ೭. ೨. ದೇವಾರಾಧನೆ, ಭೂತಾರಾಧನೆ, ಹಬ್ಬಗಳು :

ದೇವಾರಾಧನೆ :

ಮಲೆಕುಡಿಯರು ದೇವರ ಸೇವೆಯನ್ನು ಬಹಳ ನಿಷ್ಠೆಯಿಂದ ಮತ್ತು ಭಕ್ತಿಯಿಂದ ಮಾಡುತ್ತಾರೆ. ಸುಬ್ರಹ್ಮಣ್ಯ, ಧರ್ಮಸ್ಥಳ, ಬಳ್ಳಮಂಜ ಮತ್ತು ಕೊಕ್ಕಡ ದೇವಸ್ಥಾನಗಳ ಉತ್ಸವಗಳಲ್ಲಿ ಮಲೆಕುಡಿಯರ

ಪಾತ್ರ ಮುಖ್ಯ. ಈಶ್ವರ ದೇವಸ್ಥಾಗಳಲ್ಲಿ ವರ್ಷಾವಧಿ ಜಾತ್ರೆಯ ಸಂದರ್ಭಗಳಲ್ಲಿ ಚಪ್ಪರ ಹಾಕುವುದು, ರಥ ಕಟ್ಟುವುದು, ಅದಕ್ಕೆ ಬೇಕಾದ ಬಿದಿರುಗಳ ಪೂರ್ವ ತಯಾರಿಯನ್ನು ಮಲೆಕುಡಿಯರು ಮಾಡುತ್ತಾರೆ. ಆದರೆ ಇದು ಮಲೆಕುಡಿಯರ ಕೆಲವು ಸಂಸಾರಗಳಿಗೆ ಮಾತ್ರ ಮೀಸಲಾದುದೆ ಹೊರತು ಸಮಸ್ತ ಮಲೆಕುಡಿಯರು ಈ ತಯಾರಿಯಲ್ಲಿ ಭಾಗವಹಿಸುವುದಿಲ್ಲ. ಹಿಂದಿನ ಕಾಲದಲ್ಲಿ ಇವರ ಸೇವೆಗೆ ಆರು ಆಣೆ ದುಡ್ಡು, ಮೂರು ಸೇರು ಭತ್ತ ಮತ್ತು ಮಧ್ಯಾಹ್ನದ ಊಟ ಕೊಡುತ್ತಿದ್ದರು. ೧೫ ಸೇರು ಅಕ್ಕಿ ಮತ್ತು ೫೦ ರೂಪಾಯಿ ಹಾಗು ಬಟ್ಟೆ ಇದು ಮಲೆಕುಡಿಯರಿಗೆ ದೇವಸ್ಥಾನದಲ್ಲಿ ಸಿಗುವ ಪಗಾರ. ಸುಬ್ರಹ್ಮಣ್ಯದಲ್ಲಿ ದೇವರ ಸೇವೆಯನ್ನು ಮಾಡಿಕೊಂಡು ಬರುವ ಮಲೆಕುಡಿಯರಿಗೆ ಸಂಬಂಧಿಸಿದ ಐತಿಹ್ಯಗಳು ಸಿಗುತ್ತವೆ. ಆ ಐತಿಹ್ಯಗಳನ್ನು ಅನುಬಂಧದಲ್ಲಿ ತಿಳಿಸಲಾಗಿದೆ.

ಭೂತಾರಾಧನೆ :

ಮಲೆಕುಡಿಯರು ಇತರ ಜನಾಂಗಗಳಂತೆ ಕೆಲವು ವಾರ್ಷಿಕ ಆಚರಣೆಗಳನ್ನು ಆಚರಿಸುತ್ತಾ ಬಂದಿದ್ದಾರೆ. ಅವರ ಬದುಕಿನ ಆಗುಹೋಗುಗಳ ಬಗ್ಗೆ ದೈವವನ್ನೇ ನಂಬುವವರು. ಅವರ ವಾರ್ಷಿಕ ಆಚರಣೆಗಳಲ್ಲಿ ಭೂತಾರಾಧನೆಯು ಒಂದು. ದೈವ, ದೇವರುಗಳಿಂದ ತಮ್ಮ ಬದುಕು ಸಾಗಿಕೊಂಡು ಬಂದಿದೆ ಎಂದು ನಂಬುವವರು ಮಲೆಕುಡಿಯರು. ದೈವ ಮತ್ತು ದೇವರುಗಳಿಗೆ ಸಂಬಂಧಿಸಿದ ಕ್ರಮಗಳನ್ನು ಅವರ ಹಿಂದಿನ ತಲೆಮಾರಿನವರು ನಡೆಸಿಕೊಂಡು ಬಂದ ಹಾಗೆ ಬಹಳ ಶ್ರದ್ಧೆಯಿಂದ ಇವತ್ತಿನ ಮಲೆಕುಡಿಯರು ಮುಂದುವರಿಸುತ್ತಾ ಬಂದಿದ್ದಾರೆ. ಮುಖ್ಯವಾಗಿ ಮಲೆಕುಡಿಯರು ಮಲೆ ಚಾಮುಂಡಿ, ಗುಳಿಗ, ಕಲ್ಕುಡ, ಕಲ್ಲುರ್ಟಿ, ಪಂಜುರ್ಲಿ, ಮಾಲಕೊರಗ, ಕೊರತಿಭೂತ, ಶಿರಾಡಿಭೂತ, ಬಸ್ತಿನಾಯಕ ಮುಂತಾದ ಭೂತಗಳನ್ನು ನಂಬುತ್ತಾರೆ. ಭೂತಗಳನ್ನು ಹೆಚ್ಚಾಗಿ ತಂಬಿಲ ಕೊಡುವುದರ ಮೂಲಕ ಆರಾಧಿಸುತ್ತಾರೆ. ವಿವಾದಗಳ ಪರಿಹಾರ, ವ್ಯಕ್ತಿಗಳ ಸಮಸ್ಯೆಗಳನ್ನು ಈ ಸಂದರ್ಭದಲ್ಲಿ ಭೂತ ಮುಖೇನ ಪರಿಹರಿಸಿಕೊಳ್ಳಲು ಯತ್ನಿಸುತ್ತಾರೆ.

"ಮಲೆಕುಡಿಯರ ಭೂತಾರಾಧನೆಯಲ್ಲಿ ಕಲ್ಕುಡ ದೈವ ಮುಖ್ಯ. ಇದು ಕುಲದೈವವೂ ಹೌದು. ಕಲ್ಕುಡ ತುಳುನಾಡಿನ ಭೂತಗಳಲ್ಲಿ ಒಂದು. ಗ್ರಾಮದೊಳಗೆ ಕುಟುಂಬ ಮಟ್ಟದಲ್ಲಿ ವ್ಯಾಪಕವಾಗಿ ಆರಾಧನೆ ಹೊಂದುವ ಭೂತಗಳಲ್ಲಿ ಕಲ್ಕುಡವೂ ಒಂದು. "ಕಲ್ಕುಡ" ಎಂಬುದು ಆತ್ಮಹತ್ಯೆ; ಕೊಲೆ ಅಥವಾ ಅಕಾಲ ಮರಣ ಹೊಂದಿ ಆಗಿರುವ ಭೂತಗಳಲ್ಲೊಂದು ಎಂದು ಕೆ. ಚಿನ್ನಪ್ಪ ಗೌಡರು ಅಭಿಪ್ರಾಯ ಪಡುತ್ತಾರೆ."

ಹಬ್ಬಗಳು :

ಮಲೆಕುಡಿಯರು ಕೆಲವು ಹಬ್ಬಗಳನ್ನು ಆಚರಿಸುತ್ತಾರೆ. ಆಟಿ ಅಮಾವಾಸ್ಯೆ, ಕದಿರುಹಬ್ಬ, ಕಾವೇರಿ ಸಂಕ್ರಮಣ, ಕೆಡ್ಡಸ, ದೀಪಾವಳಿ, ಮಕ್ಕಳ ಹುಣ್ಣಿಮೆ ಮತ್ತು ಯುಗಾದಿ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ.

೧. **ಆಟಿ ಅಮಾವಾಸ್ಯೆ :** ಆಟಿ ಅಮಾವಾಸ್ಯೆ ದಿನ ಬೆಳಿಗ್ಗೆ ಹಾಲೆ ಮರದ ತೊಗಟೆಯನ್ನು ತಂದು ಅದರ ರಸವನ್ನು ಕುಡಿಯುತ್ತಾರೆ. ಆ ದಿನ ಹಾಲೆ ಮರದ ರಸದಲ್ಲಿ ಎಲ್ಲಾ ಕಾಯಿಲೆಗಳನ್ನು ವಾಸಿ ಮಾಡುವ ಗುಣವಿದೆ ಎಂದು ನಂಬುತ್ತಾರೆ. ಆದುದರಿಂದ ಇದನ್ನು ಎಲ್ಲರೂ ತಪ್ಪದೆ ಕುಡಿಯುತ್ತಾರೆ. ಸುಬ್ರಹ್ಮಣ್ಯ ಪ್ರದೇಶದಲ್ಲಿ ಆಟಿ ಅಮಾವಾಸ್ಯೆಯ ದಿನ ಕಲ್ಲುರ್ಟಿ ಭೂತಕ್ಕೆ ಆಹಾರವನ್ನು ಬಡಿಸುತ್ತಾರೆ. ಕೆಲವು ಪ್ರದೇಶದಲ್ಲಿ ಗುಳಿಗ ಭೂತಕ್ಕೆ ಬಡಿಸುತ್ತಾರೆ. ಆ ದಿನ ಸಂಜೆ ಮಾಂಸದ ಅಡುಗೆಯನ್ನು ಮಾಡುತ್ತಾರೆ.

೨. **ಕದಿರು ಹಬ್ಬ :** ಮಲೆಕುಡಿಯರಿಗೆ ಇದು ಶುಭ ದಿನ. ಪೈರು ತೆನೆ ಬಿಟ್ಟು ಹಾಲು ತುಂಬಿ ಕೊಯ್ಲಿಗೆ ಬರುವ ಸಂಭ್ರಮದ ಕಾಲ. ಅಂದು ಮನೆ ಅಂಗಳವನ್ನು ಸ್ವಚ್ಛ ಮಾಡುವರು. ಭತ್ತ ಕೊಯ್ದು ಅಂಗಳಕ್ಕೆ ಕೊಂಡು ಹೋಗುವ ಮುಂಚೆ ದೈವಸ್ಥಾನಕ್ಕೆ ಹೋಗಿ ಪ್ರಾರ್ಥನೆ ಮಾಡಿ ಬಹಳ ಭಕ್ತಿಯಿಂದ ಕದಿರುಗಳನ್ನು ಮನೆಗೆ ತರುತ್ತಾರೆ. ಇದಕ್ಕೆ ಮನೆ ತುಂಬಿಸುವುದೆಂತಲೂ ಹೇಳುತ್ತಾರೆ. ಈ ಕದಿರು ಹಬ್ಬವನ್ನು ಇವರಲ್ಲಿ ಬೇಸಾಯ ವೃತ್ತಿಯವರು ಅತಿ ಶ್ರದ್ಧೆಯಿಂದ ಆಚರಿಸುವರು.

೩. **ಕಾವೇರಿ ಸಂಕ್ರಮಣ :** ಕಾವೇರಿ ಸಂಕ್ರಮಣದ ದಿನ ಹೊಸ ಅಕ್ಕಿಯ ದೋಸೆ ಮತ್ತು ರೊಟ್ಟಿಯನ್ನು ಮಾಡುತ್ತಾರೆ. ಅಷ್ಟರವರೆಗೆ ಹೊಸ ಅಕ್ಕಿಯ ದೋಸೆ ಮತ್ತು ರೊಟ್ಟಿಯನ್ನು ಮಾಡಬಾರದು ಎನ್ನುವ ನಂಬಿಕೆ ಮಲೆಕುಡಿಯರಲ್ಲಿದೆ.

೪. **ದೀಪಾವಳಿ :** ದೀಪಾವಳಿ ಹಬ್ಬವನ್ನು ಮಲೆಕುಡಿಯರು ಮೂರು ದಿನಗಳಲ್ಲಿ ಆಚರಿಸುತ್ತಾರೆ. ಈ ಮೂರು ದಿನಗಳನ್ನು ಅಮಾವಾಸ್ಯೆ, ಪಾಡ್ಯ ಮತ್ತು ಕರಿ ಎಂದು ಕರೆಯುತ್ತಾರೆ. ಪಾಡ್ಯದ ದಿನ ದನಗಳನ್ನು ಸಾಕುವವರು ಗೋಪೂಜೆಯನ್ನು ಮಾಡುತ್ತಾರೆ ಮತ್ತು ಅದೇ ವರ್ಷ ಮರಣ ಹೊಂದಿದ ಹಿರಿಯರಿಗೆ ಅವಲಕ್ಕಿ ಬಡಿಸುವ ಕ್ರಮವನ್ನು ಮಾಡುತ್ತಾರೆ. ಹೆಂಗಸರು ಸತ್ತರೆ ಅಮಾವಾಸ್ಯೆಯ ದಿನ, ಗಂಡಸರು ಸತ್ತರೆ ಪಾಡ್ಯದ ದಿನ ಈ ಆಚರಣೆಯನ್ನು ಮಾಡುತ್ತಾರೆ.

೫. **ಮಕ್ಕಳ ಹುಣ್ಣಿಮೆ :** ದೀಪಾವಳಿಯ ಅಮಾವಾಸ್ಯೆ ಕಳೆದ ಸಂದರ್ಭದಲ್ಲಿ ಕುಟುಂಬದಲ್ಲಿ ಯಾವುದಾದರೂ ಸೂತಕಗಳಿದ್ದರೆ ಎಲ್ಲಾ ಆಚರಣೆಯ ಕ್ರಮಗಳನ್ನು ಮಕ್ಕಳ ಹುಣ್ಣಿಮೆಯ ಸಂದರ್ಭದಲ್ಲಿಯೇ ಮಾಡುತ್ತಾರೆ.

೬. **ಕೆಡ್ಡಸ :** ಕೆಡ್ಡಸ ತುಳುನಾಡಿನ ವಿಶಿಷ್ಟ ಹಬ್ಬಗಳಲ್ಲಿ ಒಂದು. 'ಕೆಡ್ಡಸ' ಎಂಬುದು ಭೂಮಿದೇವಿ ರಜಸ್ವಲೆಯಾಗುವ ಕಾಲವೆಂದು ಜನಪದರ ನಂಬಿಕೆ. ಭೂಮಿತಾಯಿ ಋತುಮತಿಯಾಗಿ ಬೀಜೋತ್ಪತ್ತಿಯ ನಿರೀಕ್ಷೆಯಲ್ಲಿರುವ ಸಂಧಿಕಾಲದ ಈ ಹಬ್ಬ ಋತುಮಾನಕ್ಕೆ ಸಂಬಂಧಪಟ್ಟುದಾಗಿದ್ದು ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ದಿನಗಳ ಆಚರಣೆ ಇರುತ್ತದೆ. ಮಲೆಕುಡಿಯರು ಕೆಡ್ಡಸದ ದಿನ ಮೀನು, ಮಾಂಸ ಪದಾರ್ಥ ಮಾಡುತ್ತಾರೆ. ಅಲ್ಲದೆ ತಮ್ಮ ಸಾಕುನಾಯಿಗಳೊಂದಿಗೆ ಕಾಡಿಗೆ ಬೇಟೆಗೆ ಹೋಗಿ ಪ್ರಾಣಿಗಳನ್ನು ಬೇಟೆಯಾಡುತ್ತಾರೆ. ಕೆಡ್ಡಸದ ದಿನ ಮಾಂಸ ತಿನ್ನದಿದ್ದರೆ ತಮ್ಮ ದೇಹದ ಎಲುಬು ಹಾಳಾಗುತ್ತದೆ ಎಂಬ ನಂಬಿಕೆ ಇವರಲ್ಲಿದೆ.

೭. **ಯುಗಾದಿ :** ಯುಗಾದಿ ಎಂಬುದು ಕೃಷಿಕರಿಗೆ ಹೊಸ ವರ್ಷವನ್ನು ಸ್ವೀಕರಿಸಿದ ಸಂಭ್ರಮವಿರುತ್ತದೆ. ಕೃಷಿ ಆರಂಭದ ಉತ್ಸಾಹವಿರುತ್ತದೆ. ಯುಗಾದಿ ದಿನ ಮಣ್ಣಿನ ಸತ್ಯಗಳಾದ ದೈವಗಳಿಗೆ ಯುಗಾದಿಯ ಪ್ರಯುಕ್ತ ವಿಶೇಷ ಸೇವೆ ಸಲ್ಲಿಸಲಾಗುವುದು. ಯುಗಾದಿ ಹಬ್ಬ ಸರಳ, ಭಾವನಾತ್ಮಕ ಆಚರಣೆಯಾಗಿದೆ. (ಈ ಮೇಲಿನ ಮಾಹಿತಿಯನ್ನು ನೀಡಿದವರು ಬೆಳ್ತಂಗಡಿ ತಾಲೂಕು ಶಿಶಿಲ ಗ್ರಾಮದ ವೆಂಕಪ್ಪ ಮಲೆಕುಡಿಯ)

೩. ೭. ೩. ಜೀವನ ವಿಧಾನಗಳು – ಕಸುಬು, ಆಹಾರ ಪದ್ಧತಿ, ಉಡುಗೆ ತೊಡುಗೆ :

ಕಸುಬು:

ಮಲೆಗಳ ಇಳಿಜಾರು ಪ್ರದೇಶದ ಕಾಡನ್ನು ಸವರಿ, ಕುಮರಿ ಬೆಳೆ ಬೆಳೆಯುವುದರಲ್ಲಿ ಬಹು ಹಿಂದೆಯೇ ಚತುರರಾಗಿದ್ದರು. ಭತ್ತ, ರಾಗಿ, ಜೋಳಗಳನ್ನು ಸಮೃದ್ಧಿಯಾಗಿ ಬೆಳೆದು ಅದನ್ನು ಕೆಡದಂತೆ ಸಂಗ್ರಹಿಸುವ ಜಾಣ್ಮೆಯನ್ನು ಸಾಧಿಸಿಕೊಂಡಿದ್ದ ಇವರಿಗೆ ಮುಂದೆ ವ್ಯವಸಾಯವೇ ಮುಖ್ಯ ಕಸುಬಾದುದನ್ನು ಗುರ್ತಿಸಬಹುದಾಗಿದೆ. ಇಂದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ನೆರಿಯಾ, ಸುಳ್ಯ ಮುಂತಾದೆಡೆ ಅಡಿಕೆ ಮತ್ತು ತೆಂಗಿನ ತೋಟಗಳಲ್ಲಿ ಕೃಷಿ ಕೂಲಿಗಳಾಗಿ ದುಡಿಯುತ್ತಿದ್ದಾರೆ.

ಮಲೆಕುಡಿಯರು ಬೆತ್ತದ ಬುಟ್ಟಿ, ಬೀಳಿನ ಬುಟ್ಟಿ, ಮೀನು ಹಾಕುವ ಪುಡಿಕ್ಕೆ, ಕೋಳಿ ಮರಿಗಳನ್ನು ಮುಚ್ಚಿಡುವ ಕೂಟಾಯಿ, ತರಗೆಲೆ ತರುವ ಕುರ್ಕಿಲ್‌ಗಳನ್ನು ತಯಾರಿಸುತ್ತಾರೆ. ಇತ್ತೀಚೆಗೆ ಬೆತ್ತದಿಂದ ಕುರ್ಚಿಗಳನ್ನು ಮಾಡುತ್ತಾರೆ. ಬೆಳ್ತಂಗಡಿ ತಾಲೂಕಿನ ಶಿಶಿಲದಲ್ಲಿ ಮಲೆಕುಡಿಯರಿಗಾಗಿಯೇ ಸಂಘ

ಸ್ಥಾಪನೆಯಾಗಿದೆ. ಅವರು ತಯಾರಿಸಿದ ಬೆತ್ತದ ಮತ್ತು ಮರದ ಎಲ್ಲಾ ವಸ್ತುಗಳನ್ನು ಸಂಘವೇ ಕೊಂಡು ಮಾರಾಟ ಮಾಡುತ್ತದೆ. ಹೆಂಗಸರು 'ಮುಂಡೇವು' ಗಿಡದ ಎಲೆಗಳಿಂದ ಚಾಪೆ ಹೆಣೆಯುತ್ತಾರೆ. ಅಲ್ಲದೆ ಮನೆಯಲ್ಲಿ ವಸ್ತುಗಳನ್ನಿಡಲು ಬೀಳಿನಿಂದ ಮತ್ತು ಬೆತ್ತದಿಂದ ಸಣ್ಣ ಸಣ್ಣ ಪೆಟ್ಟಿಗೆಗಳನ್ನು ತಯಾರಿಸುತ್ತಾರೆ.

ಆಹಾರ ಪದ್ಧತಿ :

ಮಲೆಕುಡಿಯರು ಮಾಂಸಾಹಾರಿಗಳು. ಇವರು ಕಾಡು ಪ್ರಾಣಿಗಳನ್ನು ಬೇಟೆಯಾಡಿ ಹಂದಿ, ಕಡವೆ, ಜಿಂಕೆ ಮೊಲ, ಮುಳ್ಳುಹಂದಿ ಕಾಡುಕೋಳಿ ಮುಂತಾದ ಪ್ರಾಣಿಗಳ ಮಾಂಸವನ್ನು ಆಹಾರವಾಗಿ ತಿನ್ನುತ್ತಿದ್ದರು. ಚಿಕ್ಕ ಚಿಕ್ಕ ಪ್ರಾಣಿಗಳನ್ನು ಮತ್ತು ಕಾಡುಕೋಳಿಯಂತಹ ಪಕ್ಷಿಗಳನ್ನು ಉರುಳು ಹಾಕಿ ಹಿಡಿಯುತ್ತಿದ್ದರು. ಕಾರಯಿ, ಮಡೆಂಜ ಬ್ಯಾರಿಬಿತ್ ಮುಂತಾದ ಬೀಜಗಳನ್ನು ನೀರಿಗೆ 'ಕಡು' ಹಾಕುವುದರ ಮೂಲಕ ಮತ್ತು ಕೂರಿ, ಪುಡ್ಕೆ ಮತ್ತು ಬಲೆಗಳ ಸಹಾಯದಿಂದ ಮೀನುಗಳನ್ನು ಹಿಡಿಯುತ್ತಿದ್ದರು. ಕುಮೇರಿ ಬೇಸಾಯದಿಂದ ಭತ್ತವನ್ನು ರಾಗಿ, ಜೋಳ, ಸಿಹಿಗೆಣಸು, ಮರಗೆಣಸು, ತುಪ್ಪೆಗೆಣಸು, ಸುವರ್ಣ ಗೆಡ್ಡೆಗಳನ್ನು ಬೆಳಸಿ ಇದನ್ನು ಆಹಾರದ ರೂಪದಲ್ಲಿ ಬಳಸುತ್ತಿದ್ದರು. ಕಾಡಿನಲ್ಲಿ ಸಿಗುವ ಈರೊಳು, ನರೆ, ಕಬಲೆ ಕಾರವೊಳು, ಪುಂಡಿಕೇನೆ, ಅಡ್ಕರೆ ಮುಂತಾದ ಗೆಡ್ಡೆ, ಕಾಯಿಗಳನ್ನು ಬೇಯಿಸಿ ತಿನ್ನುತ್ತಿದ್ದರು. ಕೈಪುರೆ ಪುಳಿ, ತೇರೆದಕೊಡಿ, ತಜಂಕ್ ಮುಂತಾದ ಸೊಪ್ಪುಗಳನ್ನು ಸಾರು ಮಾಡಲು ಬಳಸುತ್ತಿದ್ದರು.

ಹಿಂದಿನ ಕಾಲದಲ್ಲಿ ಮಲೆಕುಡಿಯರು ಅಡುಗೆಗೆ ಮಣ್ಣಿನ ಪಾತ್ರೆಗಳನ್ನು ಬಳಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಆಧುನಿಕತೆಯ ಪ್ರಭಾವದಿಂದ ಅವರು ಸ್ಟೀಲ್ ಪಾತ್ರೆಗಳನ್ನು, ಸಾಂಪ್ರದಾಯಿಕ ಒಲೆಯ ಬದಲು ಸರ್ಕಾರ ಕೊಡಮಾಡುವ ಕಬ್ಬಿಣದ ಒಲೆಗಳನ್ನು ಇವರು ಬಳಸುತ್ತಿದ್ದಾರೆ.

ವಸತಿ ವ್ಯವಸ್ಥೆ:

ಹಿಂದಿನ ಕಾಲದಲ್ಲಿ ಕಾಡುಗಳಲ್ಲಿ ವಾಸವಾಗಿರುವ ಮಲೆಕುಡಿಯರ ವಸತಿ ವ್ಯವಸ್ಥೆ ಬಹಳ ವಿಶಿಷ್ಟವಾಗಿತ್ತು. ಕಾಡಿನಲ್ಲೇ ಸಿಗುತ್ತಿರುವ ಸಾಮಾಗ್ರಿಗಳನ್ನು ಬಳಸಿಕೊಂಡು ಮನೆಯನ್ನು ನಿರ್ಮಿಸುತ್ತಿದ್ದರು. ನಾಲ್ಕು ಮೂಲೆಗಳಿಗೆ ನಾಲ್ಕು ಕಂಬಗಳನ್ನು ನೆಟ್ಟು ಗಟ್ಟಿಯಾದ ಬಿದಿರಿನ ಬೊಂಬುಗಳ ಸಹಾಯದಿಂದ ಮತ್ತು ಗಟ್ಟಿಯಾದ ಬೀಳಿನ ಹಗ್ಗಗಳಿಂದ ಬಿಗಿದು ಕಟ್ಟುತ್ತಿದ್ದರು. ಮಾಡಿನ ಮೇಲೆ ಭತ್ತದ ಹುಲ್ಲನ್ನು ಅಥವಾ ಕಾಡನೆಕ್ಕಿಯ ಎಲೆಗಳನ್ನು ಹೆಣೆದು ತೆಗೆದು ಹಾಕಿ ಅದರ ಮೇಲೆ ದರ್ಬೆ ಹುಲ್ಲನ್ನು ಹರಡುತ್ತಿದ್ದರು. ಮನೆಯ ಸುತ್ತ ಗಾಳಿ ನುಸುಳದಂತೆ ವಾಟೆ ಬಿದಿರಿನ ಸಹಾಯದಿಂದ ತಡಿಕೆಗಳನ್ನು ನಿರ್ಮಿಸುತ್ತಿದ್ದರು. ಮನೆಗೆ ಕಿಟಕಿಗಳನ್ನು ಇಡುತ್ತಿರಲಿಲ್ಲ. ಮನೆಯ ಬಾಗಿಲು ಬಹಳ ಚಿಕ್ಕದಾಗಿತ್ತು. ಮನೆಯ ಒಳಗಡೆ ಪ್ರವೇಶ ಮಾಡುವ ಸಂದರ್ಭದಲ್ಲಿ ಒಳಗಡೆ ತೆವಳಿಕೊಂಡು ಹೋಗುವಷ್ಟು ಸ್ಥಳವನ್ನು ಬಿಡುತ್ತಿದ್ದರು. ಈ ರೀತಿ ನಿರ್ಮಿಸಿದ ಮನೆಗಳು ಸರ್ವಋತುವಿಗೂ ಆಹ್ಲಾದಕರವಾಗಿಯೇ ಇರುತ್ತಿತ್ತು.

ಹಿಂದಿನ ಕಾಲದಲ್ಲಿ ಮಲೆಕುಡಿಯರ ಗರ್ಭಿಣಿ ಸ್ತ್ರೀಯರ ಹೆರಿಗೆಗಾಗಿ ಪ್ರತ್ಯೇಕವಾದ ತಾತ್ಕಲಿಕ ಗುಡಿಸಲನ್ನು ನಿರ್ಮಿಸುತ್ತಿದ್ದರು. ಜನನದ ಸೂತಕ (ಮೈಲಿಗೆ) ಕಳೆದ ನಂತರ ಅಂದರೆ ತುಳುವಿನಲ್ಲಿ 'ಅಮೆ' ತೆಗೆಯುವುದು ಎಂದರ್ಥ. ಇದಾದ ಮೇಲೆ ಅವಳು ತನ್ನ ಮಗುವಿನೊಡನೆ ತನ್ನ ಗುಡಿಸಲಿಗೆ ಬರುತ್ತಾಳೆ. ನಂತರ ಹೆರಿಗೆಗಾಗಿ ಉಪಯೋಗಿಸಿದ ಗುಡಿಸಲನ್ನು ಸುಟ್ಟು ಹಾಕುತ್ತಿದ್ದರು. ಈಗ ಈ ರೀತಿಯ ನಂಬಿಕೆಗಳು ಇಲ್ಲ. ಅದರ ಬದಲು ಗರ್ಭಿಣಿ ಸ್ತ್ರೀಯರು ಹೆರಿಗೆ ಸಂದರ್ಭದಲ್ಲಿ ತಮ್ಮ ಊರಿನ ಅಸ್ಪತ್ರೆಗಳಿಗೆ ದಾಖಲಾಗುತ್ತಾರೆ. ಮಗುವಿಗೆ ಅಲ್ಲಿಯೇ ಜನ್ಮ ನೀಡುತ್ತಾರೆ. ಸರ್ಕಾರ ಕೊಡ ಮಾಡುವ ಪ್ರಯೋಜನವನ್ನು ಪಡೆದುಕೊಳ್ಳುವಲ್ಲಿ ಮುಂದಾಗಿದ್ದಾರೆ.

ಅದೇ ರೀತಿ ಹಿಂದಿನ ಕಾಲದಲ್ಲಿ ಮಲೆಕುಡಿಯರ ಹೆಂಗಸರು ಮುಟ್ಟಾದರೆ ಅವಳು ಇರುವುದಕ್ಕೋಸ್ಕರ ಅವಳಿಗೆ ಕೇರಿಯ ತುದಿಯಲ್ಲಿ ಬೇರೊಂದು ಗುಡಿಸಲನ್ನು ನಿರ್ಮಿಸುತ್ತಿದ್ದರು. ಆ ಕೇರಿಯ ಯಾವುದೇ ಹೆಂಗಸರು ಮುಟ್ಟಾದ ಮೂರು ದಿನಗಳನ್ನು ಅಲ್ಲಿ ಕಳೆದು ನಾಲ್ಕನೆಯ ದಿನ ಸ್ನಾನ ಮಾಡಿ ಶುದ್ಧಳಾಗಿ ತನ್ನ ಗುಡಿಸಲಿಗೆ ಬರುತ್ತಿದ್ದಳು. ಇವತ್ತಿನ ದಿನಗಳಲ್ಲಿ ಈ ಕ್ರಮಗಳನ್ನು ಅವರು ಅನುಸರಿಸುತ್ತಿಲ್ಲ. ಇಂದು ಮಲೆಕುಡಿಯರ ವಸತಿ ವ್ಯವಸ್ಥೆಯಲ್ಲಿ ಸಾಕಾಷ್ಟು ಬದಲಾವಣೆಗಳು ಆಗಿವೆ.

ಉಡುಗೆ ತೊಡುಗೆ :

ಇತ್ತೀಚಿನ ದಿನಗಳಲ್ಲಿ ಮಲೆಕುಡಿಯರ ಉಡುಗೆ ತೊಡುಗೆಗಳಲ್ಲಿ, ಅಹಾರ ಪದ್ದತಿ, ದಿನ ಬಳಕೆಯ ವಸ್ತುಗಳು ಸಾಕಷ್ಟು ಬದಲಾವಣೆಗಳಾಗಿವೆ. ಹಿಂದಿನಕಾಲದಲ್ಲಿ ಮಲೆಕುಡಿಯರ ಉಡುಗೆ ತೊಡುಗೆಗಳಲ್ಲಿ ವಿಶಿಷ್ಟ ಅಂಶಗಳನ್ನು ಗುರುತಿಸಬಹುದಿತ್ತು. ಹಿಂದಿನ ಕಾಲದಲ್ಲಿ ಮಲೆಕುಡಿಯರ ಉಡುಗೆ ಬಹಳ ಸರಳವಾದುದು. ಮಲೆಕುಡಿಯರ ಹೆಂಗಸರು ತಮ್ಮ ಎದೆ, ಸೊಂಟ, ಬೆನ್ನು ಮುಚ್ಚವಂತೆ ಒಂದು ತುಂಡು ಬಟ್ಟೆಯನ್ನು ಕಟ್ಟಿಕೊಳ್ಳುವುದು ಸಾಂಪ್ರದಾಯಿಕ ಕ್ರಮವಾಗಿತ್ತು. ಇದಕ್ಕೆ 'ಗೇಂಟಿ' ಕಟ್ಟುವುದು ಎಂದು ಹೆಸರು. ಇದನ್ನು 'ಒಗ್ಗೇರಿ' ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಗೇಂಟಿ ಕಟ್ಟಿದ ಹೆಂಗಸರು ರವಿಕೆ ತೊಡುವ ಕ್ರಮ ಇಲ್ಲ. ಮಲೆಯ ತೋಟಗಳಲ್ಲಿ ಕೆಲಸ ಮಾಡುವ ಮಲೆಕುಡಿಯ ಹೆಂಗಸರಿಗೆ ಅನುಕೂಲಕರವಾಗಿದೆ ಎಂದು ಹೇಳಬಹುದು. ಈ ರೀತಿಯ ಉಡುಗೆಯಿಂದ ಕಾಣಿಸಿಕೊಳ್ಳವ ಹೆಂಗಸರು ಬಹಳ ಕಡಿಮೆ. ಆದರೆ ಬೆಳ್ತಂಗಡಿ ತಾಲೂಕಿ ನೆರಿಯ ಸಮೀಪದ ಕೋಲೋಡಿ ಎಂಬ ಪರಿಸರದಲ್ಲಿರುವ ಕೆಲವೊಂದು ಮಲೆಕುಡಿಯರಲ್ಲಿ ಈ ಉಡುಪು ಧರಿಸಿರುವವರನ್ನು ಕಾಣಬಹುದು. ಗಂಡಸರು ಕಿವಿಗೆ ಕೊಡಂಗೆ, ಕುಡ್ಕೆ, ಕುಂಡಲಗಳನ್ನು ಇಟ್ಟುಕೊಂಡರೆ ಹೆಂಗಸರು ಕಿವಿಗೆ ಓಲೆ, ಮೂಗಿಗೆ ನತ್ತು, ಕೊರಳಿಗೆ ಮಣಿಸರವನ್ನು ಧರಿಸಿಕೊಳ್ಳುತ್ತಿದ್ದರು. ಗಂಡಸರು ತಲೆಕೂದಲನ್ನು ಉದ್ದಕ್ಕೆ ಬಿಟ್ಟು, 'ಅಂಬಡೆಸೂಡಿ' ಹಾಕಿ ಕಟ್ಟುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಗಂಡಸರ ಕಿವಿಗಳಲ್ಲಿ ಆಭರಣಗಳನ್ನು ಕಾಣಬಹುದು ಆದರೆ

ಉದ್ದನೆಯ ತಲೆಕೂದಲನ್ನು ಬಿಡುವ ಮಲೆಕುಡಿಯರು ಬಹಳ ವಿರಳ. (ಬೆಳ್ತಂಗಡಿ ತಾಲೂಕು ಬಾಂಜಾರು ಮಲೆಯ ಗಣೇಶ್ ಇವರು ಈ ಮೇಲಿನ ಮಾಹಿತಿಯನ್ನು ನೀಡಿರುತ್ತಾರೆ).

೩. ೭. ೪. ಜನಪದ ವೈದ್ಯ :

ಹಿಂದಿನ ಕಾಲದಲ್ಲಿ ಮಲೆಕುಡಿಯರಲ್ಲಿ ಮಂತ್ರವಾದಿಗಳು ಮತ್ತು ಜನಪದ ವೈದ್ಯರಿದ್ದರು. ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಜನಪದರಲ್ಲಿ 'ಪೊಯ್ಲೆದ ಬರಾವು' (ಹ್ಯೊಗೆಯ ಬರವಣಿಗೆ) ಎಂಬುದು ಇತ್ತು. ಇದರ ಮೂಲಕ ಅಕ್ಷರಾಭ್ಯಾಸ ಸಾಧ್ಯತೆ ಆಯಿತು. ಆ ಕಾಲದಲ್ಲಿ ಮಂತ್ರ ಕಲಿಯಲು ಪುರೋಹಿತ ಶಾಹಿ ವ್ಯಕ್ತಿಗಳ ಸಂಪರ್ಕವು ಕಾರಣವು ಆಗಿದ್ದಿರಬಹುದು. ಮಲೆಕುಡಿಯರಿಗೆ ಮತ್ತು ಜಾನುವಾರುಗಳಿಗೆ ಬರುವ ಕಾಯಿಲೆಗಳಿಗೆ ಮದ್ದು ನೀಡುವ ಜನಪದ ವೈದ್ಯರಿದ್ದರು. ಉದಾಹರಣೆಗೆ ಮೈಮೇಲೆ 'ಕೆಂಪು' ಬಿದ್ದರೆ (ದಡಿಕೆ, ತುರಿಕೆ) ಅದಕ್ಕೆ ನಿಸರ್ಗದಲ್ಲಿ ಸಿಗುವ ಗರುಡಪಾತಾಳ, ಈಶ್ವರಬೇರು, ಏಕನಾಯ್ಕನಬೇರು, ಪಾತಾಳ ಸೊಪ್ಪಿನ ಬೇರು– ಇವುಗಳನ್ನು ಲಿಂಬೆಹುಳಿರಸದಲ್ಲಿ ಅರೆದು ಮೈಮೇಲೆ ಲೇಪಿಸುತ್ತಾರೆ. ನಂತರ ಕೇಪುಳ ಸೊಪ್ಪಿನ ಕಷಾಯದಲ್ಲಿ ಸ್ನಾನ ಮಾಡಿಸುತ್ತಾರೆ. ಇದೇ ಸಂದರ್ಭದಲ್ಲಿ ಮಂತ್ರವಾದಿ ನೂಲು ಕಟ್ಟುತ್ತಾನೆ, ನೂಲು ಕಟ್ಟುವಾಗ ಮಲೆಕುಡಿಯರು ಹೇಳುವ ವೈದ್ಯ ಮಂತ್ರ ಈ ರೀತಿ ಇದೆ. ಡಾ.ಕೆ. ಚಿನ್ನಪ್ಪಗೌಡ ಬರೆದ 'ಸಂಸ್ಕೃತಿ ಸಿರಿ' ಎಂಬ ಪುಸ್ತಕದಲ್ಲಿ ಈ ರೀತಿ ಇದೆ. – "ಜೋಗಿ ಜೋಗಿ ನಿನ್ನಾಣೆ ಕಟ್ಟಿದೆ. ಜೋಗಿ ಜೋಗಿ ನನ್ನಾಣೆ ಕಟ್ಟಿದೆ. ಬಲದಾರಿ ಕಟ್ಟಿದೆ. ಎಡದಾರಿ ಕಟ್ಟಿದೆ. ಬಲಪಿಂಚ ಕಟ್ಟಿದೆ. ಎಡಪಿಂಚ ಕಟ್ಟಿದೆ. ಪಾತಾಳ ಕಟ್ಟಿದೆ. ಆಕಾಶ ಕಟ್ಟಿದೆ. ನಿನ್ನ ನಡು ಕಟ್ಟಿದೆ. ನಿನ್ನ ಬಾಲ ಕಟ್ಟಿದೆ, ನಿನ್ನ ನಾಲಿಗೆ ಕಟ್ಟಿದೆ. ಕಾಲ ಕರ್ಕಶ ಯಮದೂತ ಹಲ್ಲು ಕಟ್ಟಿದೆ. ಜೋಗಿ ಜೋಗಿ ಇರ್ತ ಭೂಮಿ ತಾಯಿದೇವಿನ ಅಗಿನ ಕಟ್ಟಿದೆ. ನಾರಾಯಣ ದೇವೆರೆ ಅಗಿನ ಕಟ್ಟಿದೆ. ಜೋಗಿ ಜೋಗಿ ಕೊಳ್ಳಿ ಉಳ್ಳಾಕುಳಿನ ಅಗಿನ ಕಟ್ಟಿದೆ, ಜೋಗಿ ಜೋಗಿ ಶರಣು ಬ್ರಹ್ಮ ದೇವೆರೆ ಅಗಿನ ಕಟ್ಟಿದೆ, ಬಂಗಾಡಿ ಉಮ್ಮಾಚಾರೆನ ಅಗಿನ ಕಟ್ಟಿದೆ. ಜೋಗಿ ಜೋಗಿ ಮುಂದೆ ಹೋಗಬೇಡ. ಜೋಗಿ ಜೋಗಿ ಹಿಂದೆ ಹೋಗಬೇಡ ಅದರಲ್ಲೇ ತಪ್ಪನೆ ಬಿದ್ದು ಬೇಕು ಸುಬ್ರಾಯ" ಮಂತ್ರದ ಅಗತ್ಯಕ್ಕೆಂದೇ ಕನ್ನಡ ಕಲಿಯುತ್ತಿರುವುದನ್ನು ಈ ಮೇಲಿನ ವಾಕ್ಯಗಳಿಂದ ತಿಳಿಯಬಹುದಾಗಿದೆ.

ಕತ್ತಿಯ ಗಾಯ ಮತ್ತು ಹುಣ್ಣಿಗೆ ಈ ಕೆಳಗಿನ ಚಿಕಿತ್ಸೆ ವಿಧಾನ – ಬಿಳಿ ನೆಕ್ಕಿ ಸೊಪ್ಪಿನ ಕೊಡಿ, ಕಾಯೊಲೆ ನಾರಿನ ಕೊಡಿ, ಕದಿಕೆ ಹುಲ್ಲು – ಇವುಗಳಿಗೆ ಸ್ವಲ್ಪ ಜೀರಿಗೆ ಹಾಕಿ ಅರೆದು ಪುಡಿ ಮಾಡಿ ತೆಂಗಿನ ಎಣ್ಣೆಯಲ್ಲಿ ಕುದಿಸಬೇಕು. ಗಾಯವನ್ನು ಕೇಪುಳ ಕಷಾಯದಿಂದ ತೊಳೆದು ಬಳಿಕ ಮದ್ದನ್ನು ಲೇಪಿಸಬೇಕು.

ಜಾನುವಾರಿನ ಗಂಟಲಲ್ಲಿ 'ಬಾವು' ನೋವು ಕಾಣಿಸಿಕೊಂಡರೆ ಕರಂಬೆಲ್ ಬಳ್ಳಿಯ ಕೊಡಿ, ತುಂಬೆ, ಕುರೆಜ್ಜಿ ಮರ ಮತ್ತು ನುಗ್ಗೆ ಮರದ ಕೆತ್ತೆ, ಓಮ, ಜೀರಿಗೆ, ಮೆಣಸು, ಬೆಳ್ಳುಳ್ಳಿ ಇವುಗಳನ್ನು ಒಟ್ಟು ಮಾಡಿ

ಚೆನ್ನಾಗಿ ಕಡೆದು ಪುಡಿ ಮಾಡಿ ಕುದಿಸಬೇಕು ಒಂದು ಬಿದಿರ ಅಂಡೆಗೆ ಕುದಿಸಿದ ಈ ಕಷಾಯವನ್ನು ತುಂಬಿಸಿ ಜಾನುವಾರುಗಳ ಗಂಟಲಿಗೆ ಎರೆಯುತ್ತಾರೆ.

ಮನುಷ್ಯ ಸಂಬಂಧಿ ವೈದ್ಯ ಮತ್ತು ಜಾನುವಾರು ಸಂಬಂಧಿ ವೈದ್ಯಗಳು :

೧. ಇಟ್ಟೇವು – ಕಜ್ಜಿಗೆ ಇದರ ಎಲೆಯನ್ನು ಅರೆದು ತೆಂಗಿನ ಎಣ್ಣೆಯಲ್ಲಿ ಕಾಯಿಸಿ ಮೈಗೆ ಹಚ್ಚುತ್ತಾರೆ.

೨. ಕಾಟೊರಿ ಮುಳ್ಳು– ಜ್ವರಕ್ಕೆ ಇದರ ಎಲೆಯ ರಸ ತೆಗೆದು ಕಹಿ ಬೇವಿನ ಎಣ್ಣೆ ಹಾಗೂ ತೆಂಗಿನ ಎಣ್ಣೆಯಲ್ಲಿ ಮಿಶ್ರ ಮಾಡಿ ಶರೀರಕ್ಕೆ ಹಚ್ಚುತ್ತಾರೆ.

೩. ಚಾಕೊಟೆ – ಕೆಮ್ಮು ಹಾಗೂ ಉಬ್ಬಸಕ್ಕೆ ಇದರ ತೊಗಟೆಯನ್ನು ಗಂಜಿಯೊಂದಿಗೆ ಬೇಯಿಸಿ ಊಟ ಮಾಡುತ್ತಾರೆ.

೪. ಪಾದಲ –ಬಿಳಿ ಸೆರಗಿಗೆ ಇದರ ಬೇರನ್ನು ಕಷಾಯ ಇಟ್ಟು ಹಾಲಿನಲ್ಲಿ ಮಿಶ್ರ ಮಾಡಿ ಕುಡಿಯುತ್ತಾರೆ. ಇದರ ಎಲೆಯ ರಸವನ್ನು ತಲೆಗೆ ಹಾಕಿದರೆ ಪಿತ್ತ ಕಡಿಮೆಯಾಗುತ್ತದೆ.

೫. ಪಾಜೆವು – ದನ ಕರು ಹಾಕಿದ ನಂತರ ಅದರ ಚೀಲ ಹೊರ ಹಾಕದಿದ್ದರೆ ಇದರ ಎಲೆಯನ್ನು ತಿನ್ನಲು ಕೊಡುತ್ತಾರೆ.

೬. ನಂಜಿಬಿತ್ತ್ –ಬಾಣಂತಿಯರ ಆರೋಗ್ಯಕ್ಕೆ ಇದರ ಕಾಯಿ, ನೆಲಮುಚ್ಚಿರ್, ಈಚಲು ಮರದ ಚಿಗುರು ಅರೆದು ಬಿಸಿ ಮಾಡಿ ಕುಡಿಯುತ್ತಾರೆ.

೭. ಉರುವೊಲು –ಪಕ್ಷವಾತಕ್ಕೆ ಇದರ ತೊಗಟೆಯನ್ನು ಹುಡಿ ಮಾಡಿ ಉಡದ ಎಣ್ಣೆಯಲ್ಲಿ ಮಿಶ್ರ ಮಾಡಿ ಹಚ್ಚುತ್ತಾರೆ.

೮. ಕಪ್ಪು ಶುಂಠಿ– ತಲೆ ಸಿಡಿತಕ್ಕೆ ಜ್ವರಕ್ಕೆ ಇದರ ಗೆಡ್ಡೆಯನ್ನು ಅರೆದು ಜೇನು ತುಪ್ಪದಲ್ಲಿ ಮಿಶ್ರ ಮಾಡಿ ತಿನ್ನುತ್ತಾರೆ.

೯. ಪಲ್ಲಿ ಸಪ್ಪು – ಮೈಗೆ ಕಜ್ಜಿ ಬಿದ್ದರೆ ಇದರ ಎಲೆಯನ್ನು ಅರೆದು ಕುಡಿಯಲು ಮತ್ತು ಮೈಗೆ ಹಚ್ಚುತ್ತಾರೆ.

೧೦. ಬೊಲಂಗದ ಮರ – ಬಾಯಿಯಲ್ಲಿ ಹುಣ್ಣಾದರೆ ಇದರ ತೊಗಟೆಯನ್ನು ಅರೆದು ಬಿಸಿ ನೀರಿನಲ್ಲಿ ಹಲ್ಲುಜ್ಜಬೇಕು.

೧೧. ಶಾಂತಿ –ಮೈ ನೋವಿಗೆ ಇದರ ತೊಗಟೆಯನ್ನು ಅರೆದು ತೆಂಗಿನ ಎಣ್ಣೆಯಲ್ಲಿ ಕಾಯಿಸಿ ಹಚ್ಚುತ್ತಾರೆ.

೧೨. ಗಡಿಮರ್ದ್–ಗಾಯಕ್ಕೆ ಈ ಗಿಡವನ್ನು ತೆಂಗಿನ ಎಣ್ಣೆಯಲ್ಲಿ ಕಾಯಿಸಿ ಹಚ್ಚುತ್ತಾರೆ.

೧೩. ನಾನಿಲ್ –ದೃಷ್ಟಿ ಮಂದವಿದ್ದರೆ ಇದರ ಕಾಯಿಯ ಎಣ್ಣೆಯನ್ನು ತಲೆಗೆ ಹಾಕಬೇಕು.

೧೪. ಅಣವು –ಕಫಕ್ಕೆ ಇದರ ಎಲೆಯ ರಸವನ್ನು ತೆಗೆದು ಜೀರಿಗೆ ಹಾಕಿ ಮಿಶ್ರ ಮಾಡಿ ಕುಡಿಯಲು ಕೊಡಬೇಕು.

೧೫. ಕೊಂದೆ–ಜಿರಳೆಗಳನ್ನು ಕೊಲ್ಲಲು ಇದರ ಕಾಯಿಯನ್ನು ಉಪಯೋಗಿಸುತ್ತಾರೆ.

೧೬. ಐತಾಲ್– ಬಾಣಂತಿಯರಿಗೆ ಇದರ ಬೇರನ್ನು ಗುದ್ದಿ ತೆಂಗಿನ ಎಣ್ಣೆಯಲ್ಲಿ ಕಾಯಿಸಿ ಮೈಗೆ ಹಚ್ಚುತ್ತಾರೆ. ಅಲ್ಲದೆ ತಲೆ ಕೂದಲು ಉದುರುವುದಕ್ಕೆ ಕೂಡ ಈ ಎಣ್ಣೆಯನ್ನು ಬಳಸುತ್ತಾರೆ.

೧೭. ಕೇಪುಳ –ಕಫಕ್ಕೆ ದಡ್ಡಲ್ ಚಿಗುರು ಮತ್ತು ಇದರ ಚಿಗುರನ್ನು ಅರೆದು ಬಿಸಿ ಮಾಡಿ ಮಕ್ಕಳಿಗೆ ಕೊಡುತ್ತಾರೆ.

೧೮. ಬಿಳಿ ದಾಸವಾಳ– ಕೂದಲು ಉದುರುವುದಕ್ಕೆ ಇದರ ಹೂವನ್ನು ಗುದ್ದಿ ತೆಂಗಿನ ಎಣ್ಣೆಯಲ್ಲಿ ಕಾಯಿಸಿ ತಲೆಗೆ ಹಾಕಬೇಕು.

೧೯. ಬೇವು –ಕಜ್ಜಿಗೆ ಇದರ ಬೇರನ್ನು ಒಣಗಿಸಿ ಹುಡಿ ಮಾಡಿ ತೆಂಗಿನ ಎಣ್ಣೆಯಲ್ಲಿ ಕಾಯಿಸಿ ಹಚ್ಚುತ್ತಾರೆ.

೨೦. ಎಂಜಿರ್ – ಗಾಯಕ್ಕೆ ಇದರ ಎಲೆಯನ್ನು ಅರೆದು ಹದ ಬಿಸಿ ಮಾಡಿ ಹಚ್ಚುತ್ತಾರೆ. ಇದರ ಚಿಗುರೆಲೆಯನ್ನು ಮಕ್ಕಳಿಗೆ ಕಣೇರ್ ಕೊಡುತ್ತಾರೆ. ಎಳೆಯ ಮಕ್ಕಳಿಗೆ ಹೊಕ್ಕುಳಿನ ಗಾಯ ಗುಣವಾಗುವುದಕ್ಕೆ ಇದರ ಕಾಯಿಯನ್ನು ಕರಿ ಮಾಡಿ ಹಚ್ಚಿದರೆ ಬೇಗ ಗುಣವಾಗುತ್ತದೆ.

೨೧. ಕೊಟ್ಟೆ– ಬಾಯಿಯಲ್ಲಿ ಹುಣ್ಣಾದರೆ ಇದರ ತೊಗಟೆ ಮತ್ತು ಚೂರಿ ಕಾಯಿಯ ತೊಗಟೆಯನ್ನು ಜಗಿಯಬೇಕು.

೨೨. ಪುನಾರ್ ಪುಳಿ–ಪಿತ್ತಕ್ಕೆ ಇದರ ಹಣ್ಣಿನ ಸಿಪ್ಪೆಯನ್ನು ನೀರಿನಲ್ಲಿ ಹಿಂಡಿ ರಸ ತೆಗೆದು ಕುಡಿಯುತ್ತಾರೆ ಮತ್ತು ತಲೆಗೆ ಹಾಕುತ್ತಾರೆ.

೨೩. ಕಡೀರ್ –ಬೆನ್ನು ನೋವು, ಹೊಟ್ಟೆನೋವು, ತಂಪಿಗೆ ಇದರ ಬೇರಿನ ಕಷಾಯವನ್ನು ಕುಡಿಯಬೇಕು.

೨೪. ಬಿಳಿಗೋರಟೆ– ತಲೆಹೊಟ್ಟು ನಿವಾರಣೆಗೆ ಇದರ ಬೇರನ್ನು ಬೇಯಿಸಿ ಒಣಗಿಸಿ ಪುಡಿ ಮಾಡಿ ತೆಂಗಿನ ಎಣ್ಣೆಯಲ್ಲಿ ಕಾಯಿಸಿ ತಲೆಗೆ ಹಾಕಬೇಕು.

೨೫. ಶಂಖ ಪುಷ್ಪ– ಜೇಡ ಕಚ್ಚಿದರೆ ಇದರ ಎಲೆಯ ರಸವನ್ನು ಹಾಗೂ ಬೇರನ್ನು ಅರೆದು ಲಿಂಬೆ ಹುಳಿಯ ರಸದಲ್ಲಿ ಹಚ್ಚಬೇಕು.

೨೬. ನೈಕರುಂಬು –ಕಣ್ಣಿಗೆ ಕಸ ಬಿದ್ದರೆ ಇದರ ದಂಟಿನಲ್ಲಿ ಬರುವ ನೀರನ್ನು ಕಣ್ಣಿಗೆ ಬಿಡುತ್ತಾರೆ.

೨೭. ಕುದನೆ –ಜಾನುವಾರುಗಳ ಹೊಟ್ಟೆಯಲ್ಲಿರುವ ಹುಳ ಹೋಗಲಿಕ್ಕೆ ಇದರ ಕಾಯಿಯನ್ನು ಬೈ ಹುಲ್ಲಿನೊಂದಿಗೆ ಸೇರಿಸಿ ಕೊಡುತ್ತಾರೆ.

೨೮. ಪಪ್ಪಾಯಿ- ಗರ್ಭಪಾತಕ್ಕೆ ಇದರ ಎಳೆಯ ಕಾಯಿಯನ್ನು ಉಪಯೋಗಿಸುತ್ತಾರೆ.

೨೯. ಪಂಚಪತ್ರೆ –ಹೊಟ್ಟೆ ನೋವಿಗೆ ಇದರ ರಸವನ್ನು ಹಿಂಡಿ ಉಪ್ಪು ಹಾಕಿ ಕುಡಿಯಬೇಕು.

೩೦. ರಾಮತುಳಸಿ–ಸೋಂಕಿಗೆ ಇದರ ಎಲೆಯ ರಸವನ್ನು ಮೈಗೆ ಹಚ್ಚಬೇಕು ಮತ್ತು ಜೇನು ತುಪ್ಪ ಮಿಶ್ರ ಮಾಡಿ ಕುಡಿಯಬೇಕು.

೩೧. ನೆಲ್ಲಿ ಸಪ್ಪು –ಜಾನುವಾರುಗಳಿಗೆ ಪುಷ್ಟಿ ಬರಲು ಇದನ್ನು ಬೇಯಿಸಿ ಕೊಡುತ್ತಾರೆ.

೩೨. ಕಲ್ಲಿ –ಕಿವಿ ನೋವು ಇದ್ದರೆ, ಕಿವಿ ಸೋರಿದರೆ ಇದರ ದಂಟನ್ನು ಕಾಯಿಸಿ ಅದರ ನೀರನ್ನು ಕಿವಿಗೆ ಬಿಡಬೇಕು.

೩೩. ಉರ್ಕಿ ಗಿಡ –ಕರು ಹಾಕಿದ ಎಮ್ಮೆಗೆ ಪುಷ್ಟಿಗೆ ಮತ್ತು ಹಾಲು ಹೆಚ್ಚಾಗಲು ಈ ಗಿಡವನ್ನು ಬೇಯಿಸಿ ಕೊಡುತ್ತಾರೆ.

ತಮ್ಮ ಸುತ್ತ ಮುತ್ತಲಿನ ಮಲೆಗಳಲ್ಲಿ ದೊರೆಯುವ ನಾರು ಬೇರು ಚಿಗುರು ಸಿಪ್ಪೆಗಳನ್ನು ಬಳಸಿ ಮದ್ದು ತಯಾರಿಸುತ್ತಿದ್ದ ಮಲೆಕುಡಿಯರು ವರ್ತಮಾನದಲ್ಲಿ ಆಸ್ಪತ್ರೆಯ ಮದ್ದುಗಳನ್ನು ಸೇವಿಸುತ್ತಾರೆ. (ಬೆಳ್ತಂಗಡಿ ತಾಲೂಕಿನ ಬಾಂಜಾರು ಮಲೆಯ ಜನಪದ ವೈದ್ಯನಾದ ಎಮ್. ಸೋಮಮಲೆಕುಡಿಯ ಈ ಮೇಲಿನ ಮಾಹಿತಿಯನ್ನು ನೀಡಿರುತ್ತಾರೆ.)

೩. ೭. ೫. ಪ್ರದರ್ಶನಾತ್ಮಕ ಕಲೆಗಳು :

ಮಲೆಕುಡಿಯ ಜನಾಂಗದಲ್ಲಿ ವಿಶಿಷ್ಟವಾದ ಕಲೆಗಳ ಬಗ್ಗೆ ಮಾಹಿತಿ ಸಿಗುತ್ತಿಲ್ಲ. ದಕ್ಷಿಣ ಕನ್ನಡದಲ್ಲಿರುವ ಮಲೆಕುಡಿಯರು ಭೂತಾರಾಧನೆಯ ಸಂದರ್ಭದಲ್ಲಿ 'ದುಡಿ' ಯನ್ನು (ಚರ್ಮದಿಂದ) ಬಳಸುತ್ತಾರೆ. ಆದರೆ ಬೇರೆ ಜನಾಂಗದ ಭೂತಾರಾಧನೆಯ ಸಂದರ್ಭದಲ್ಲಿನ ಕುಣಿತದ ಹೆಜ್ಜೆಗಳು, ಪಾಡ್ದನಗಳು ಇವರಲ್ಲಿ ಇಲ್ಲ.

ಮಲೆಕುಡಿಯರಲ್ಲಿ ವಿಶಿಷ್ಟವಾದ ಈರನೋ ಎಂಬ ಚರ್ಮವಾದ್ಯ, ಮತ್ತು ಸೋರೆ ಬುರುಡೆಯ 'ಮಾವೊರಿ' ಗಳನ್ನು ಸ್ವತಃ ತಯಾರಿಸಿ ಸಂತೋಷಕೂಟಗಳಲ್ಲಿ ಬಳಸುತ್ತಾರೆ. ಬೆತ್ತ ಮತ್ತು ಬೀಳಲುಗಳಿಂದ ವಿವಿಧ ರೀತಿಯ ವಿನ್ಯಾಸಗಳಿಂದ ಬುಟ್ಟಿ ಮತ್ತು ಇತರ ಸಾಮಾಗ್ರಿಗಳನ್ನು ಮಲೆಕುಡಿಯರು ತಯಾರಿಸುತ್ತಾರೆ. ಉದಾಹರಣೆಗೆ ೨೦೦೯–೧೦ರಲ್ಲಿ ಶ್ರೀ ವೆಂಕಪ್ಪ ಮಲೆಕುಡಿಯ ಎಂಬವರು ಕರಕುಶಲ ಕಲೆಗಾಗಿ ಜಾನಪದ ಅಕಾಡೆಮಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

೩. ೭. ೬. ಕ್ರೀಡೆಗಳು :

ಮಾನವ ತನ್ನ ದೈನಂದಿನ ಬದುಕಿನಲ್ಲಿ ಹೆಚ್ಚು ಉಲ್ಲಾಸದಿಂದಿರಲು,ಸಂತೋಷದಿಂದಿರಲು ಹಾಗೂ ದೇಹ, ಮನಸ್ಸಿಗೆ ಮುದ ಒದಗಿಸಲು ರೂಢಿಸಿಕೊಂಡದ್ದು ಆಟಗಳನ್ನು. ಯಾವುದಾದರೊಂದನ್ನು ಒಂಟಿಯಾಗಿ ಅಥವಾ ಸಾಮೂಹಿಕವಾಗಿ ರೂಪಿಸಿಕೊಂಡು ಆಡುವುದೇ ಆಟ. ಆಟ ವ್ಯಕ್ತಿಯೋರ್ವನ ಸ್ವತಂತ್ರ ಪ್ರಿಯತೆಗೆ ಅವಕಾಶ ಮಾಡಿಕೊಡುತ್ತದೆ. ಆಟ ಆಡುವವನಿಗೆ ಹೆಚ್ಚು ದೈಹಿಕ ಮಾನಸಿಕ ಆರೋಗ್ಯ ಉಂಟಾಗುತ್ತದೆ. ಇದಲ್ಲದೆ ಪ್ರಾದೇಶಿಕ ರೂಢಿಗೆ ಅನುಸಾರವಾಗಿ, ಅಲ್ಲಿಯ ಸಂಸ್ಕೃತಿಯ ಅಂಗವಾಗಿ ಆಟಗಳು ರೂಢಿಯಾಗಿರುತ್ತವೆ. ಆಟಗಳ ಮೇಲೂ ಅಲ್ಲಿಯ ಹವಾಗುಣ, ಸಂಸ್ಕೃತಿ, ಆರ್ಥಿಕ ಸ್ಥಿತಿಗತಿ ಪ್ರಭಾವ ಬೀರಿರುತ್ತದೆ. ಆಟ ಎಂದರೆ ಆಡಿದ್ದು. ಆಡುವುದು ಎಂದರ್ಥ.ಇದು ಜೀವನದಿಂದಲೇ ಮೂಡಿ ಜೀವನಕ್ಕೆ ಮಾರ್ಗದರ್ಶಕವಾಗುವಂಥದು. ಮಕ್ಕಳು ನಮಗಿಂತ ದೊಡ್ಡವರಾದವರ ನಡೆನುಡಿಗಳನ್ನು ನೋಡಿ ಅದರಂತೆ ತಾವೂ ಅನುಕರಿಸಲು ಪ್ರಯತ್ನಿಸುತ್ತಾರೆ.ಈ ಅನುಕರಣೆಯೇ ಮೂಲವಾಗಿ ಆಟ ಸೃಷ್ಟಿಯಾಗುತ್ತದೆ. ಆಟಗಳ ಉದ್ದೇಶ ಮನೋರಂಜನೆಯಾದರೂ ಈ ಮೂಲಕ ಮಾನಸಿಕ, ಬೌದ್ಧಿಕ, ದೈಹಿಕ ವಿಕಾಸವೂ ತನಗೆ ಅರಿವಿಲ್ಲದೆಯೇ ಆಗಿರುತ್ತದೆ. ಮಕ್ಕಳ ಚೇತನವನ್ನು ಅರಳಿಸುತ್ತದೆ. ಮುಂದಿನ ಕಾರ್ಪಣ್ಯದ ಬದುಕನ್ನೇ ಮರೆಯಿಸುತ್ತದೆ.

ಬುಗುರಿಯಾಟ :

ಹಲಸು ಅಥವಾ ಹಾಲೆ, ಹೊನ್ನೆ ಮರದ ಕೊಂಬೆಯಿಂದ ಹುಡುಗರೇ ಬುಗುರಿ ಮಾಡಿಕೊಳ್ಳುತ್ತಾರೆ. ಅದರ ಮಧ್ಯದ ಚೂಪು ಮಾಡಿದ ಜಾಗಕ್ಕೆ ನೇರವಾಗಿ ಹೋಗುವಂತೆ ಮೊಳೆ ಹೊಡೆಯುತ್ತಾರೆ. ದರಕು ಕಲ್ಲಿನ ಮೇಲೆ ಬುಗುರಿ ಕಬ್ಬಿಣದ ಮೊಳೆ ಉಜ್ಜಿ ನಯಗೊಳಿಸುತ್ತಾರೆ. ಗೋಣಿ ನೂಲನ್ನು ಹೊಸೆದು ಹುರಿ ಮಾಡುತ್ತಾರೆ. ನಾಲ್ಕಾರು ಹುಡುಗರು, ಕೆಲವು ಸಾರಿ ದೊಡ್ಡವರೂ ಬುಗುರಿಗೆ ಹುರಿ ಸುತ್ತಿ ಬಿಡುತ್ತಾರೆ. ಬುಗುರಿ ಆಡುವ ಕಾಲದಲ್ಲಿ ತಕ್ಷಣ ಹುರಿಯಿಂದ ಮೇಲೆತ್ತಿ ಆತುಕೊಳ್ಳುತ್ತಾರೆ. ಯಾರು ಕೊನೆಗೆ ಆತುಕೊಳ್ಳುವನೋ ಅವನು ಸೋತಂತೆ. ಅವನು ಒಂದು ವೃತ್ತದಲ್ಲಿ ಬುಗುರಿ ಇಡುತ್ತಾನೆ. ಅದಕ್ಕೆ ಒಬ್ಬಿಬ್ಬರು ತಮ್ಮ ಬುಗುರಿಗೆ ಹಗ್ಗ ಸುತ್ತಿ ಮೊಳೆನಾಟುವಂತೆ ಜೋರಾಗಿ ಹೊಡೆಯುತ್ತಾರೆ. ಮೊಳೆಯ 'ಗುನ್ನ' ಬಿದ್ದು ಬುಗುರಿ ಒಡೆಯುತ್ತದೆ. ಏಟು ತಾಗದೆ ಸೋತವನ ಬುಗ ುರಿಯ ಜೊತೆಯೇ ಉಳಿದರೆ ಎರಡಕ್ಕೂ ಉಳಿದವರು ಏಟು ಹಾಕುತ್ತಾರೆ. ಏಟು ತಿಂದು ಬುಗುರಿ ಹೊರಗೆ ಬಂದರೆ ಮತ್ತೆ ಒಳಗುಳಿದವನ ಬುಗುರಿಗೆ ಮಾತ್ರ ಏಟು ಹಾಕುತ್ತಾರೆ. ಅದು ಹೊರಗೆ ಬಂದರೆ ಮತ್ತೆ ಹುರಿ ಸುತ್ತಿ ಬುಗುರಿ ಆಡಿಸುತ್ತಾರೆ. ಅದೇ ರೀತಿ ಮತ್ತೆ ಕೆಲವರು ಬುಗುರಿಯನ್ನು ಬಿಟ್ಟು ಭೂಮಿಗೆ ಬೀಳುವ ಮೊದಲೇ ಅಂಗೈಯಲ್ಲಿ ಹಿಡಿದು ಆಡಿಸಿ ಹಿಡಿಯುತ್ತಾರೆ. ಅಂಗೈಯಿಂದ ಬಿದ್ದವನ ಬುಗುರಿಗೆ ಗುನ್ನದ ಏಟು ಹಾಕುತ್ತಾರೆ. ವೃತ್ತದಲ್ಲಿ ಒಂದು ಬಿದಿರು ಕೋಲಿಟ್ಟು ಅದನ್ನು ಹೊರಗೆ ಹೊರಡಿಸಬೇಕು. ಅದು ಹೊರಗೆ ಬಿದ್ದ ತಕ್ಷಣ ಬುಗುರಿ ಆಡಿಸಿ ಆತುಕೊಳ್ಳಬೇಕು. ಹೊರಗೆ ಹಾಕಿದವನು ಮೂರು ನಾಲ್ಕು ಸುತ್ತು ಹುರಿ ಸುತ್ತಿ ಬೇಗ ಆತುಕೊಂಡು ಗೆಲ್ಲುತ್ತಾನೆ. ಇಲ್ಲದಲ್ಲಿ ಏಟಿಗಾಗಿ ಬುಗುರಿಯನ್ನು ವೃತ್ತಕ್ಕೆ ಹಾಕುತ್ತಾನೆ.

ಕುದುರೆಯಾಟ:

ಈ ಆಟವನ್ನು ಹುಡುಗ ಹುಡುಗಿಯರು ಆಡಬಹುದು. ಹುಡುಗರಿಬ್ಬರು ಅಕ್ಕ ಪಕ್ಕ ಕೈಹಿಡಿದು ನಿಲ್ಲುತ್ತಾರೆ. ಒಬ್ಬನು ತನ್ನ ಕಾಲನ್ನೆತ್ತಿ ಅವರ ಕೈಮಧ್ಯದ ಮೂಲಕ ಮಂಡಿಯವರೆಗೆ ಒಳಕ್ಕೆ ಇಳಿಸಿ ಭಾರ ಬಿಡುತ್ತಾನೆ. ಅವರ ಹೆಗಲು ಹಿಡಿದು ಕುದುರೆಗಳನ್ನು'ಹೈ ಹೈ ಹ ಹ 'ಎಂದು ಕೂಗುತ್ತಾನೆ. ಕುದುರೆ ಓಡುತ್ತದೆ. ಹೀಗೆ ಮೂವರು ಬದಲಾಯಿಸುತ್ತ ಆಟವಾಡುತ್ತಾರೆ.ಈ ಆಟ ಕುದುರೆ ಸವಾರಿಯ ನೆನಪನ್ನು ತರುವಂಥದು.

ಕಬಡ್ಡಿ :

ಇದಕ್ಕೆ ಎರಡು ಗುಂಪುಗಳು ಬೇಕು. ಒಂದೊಂದು ಗುಂಪಿನಲ್ಲೂ 7 ಮಂದಿ ಇರುತ್ತಾರೆ. ಹಣ ಮೇಲೆಸೆದು ಯಾರು ಮೊದಲು ಆಟದ ಕಣಕ್ಕೆ ಇಳಿಯಬೇಕೆಂದು ನಿರ್ಧರಿಸುತ್ತಾರೆ; ದೈಹಿಕ ಸಾಮರ್ಥ್ಯ ಚಟುವಟಿಕೆ, ಉಸಿರು ಕಟ್ಟುವ ಶಕ್ತಿ ಇದ್ದವರು.ಎದುರು ಪಕ್ಷದವರನ್ನು ಬೇಗ ಮುಟ್ಟಬಹುದು.ಸ್ವಲ್ಪ ಶಕ್ತಿ ಇಲ್ಲವಾದರೆ ಬೇಗ ಸಿಕ್ಕಿಕೊಳ್ಳುತ್ತಾರೆ. ಇದು ತುಂಬಾ ಮೋಜಿನ ಲವಲವಿಕೆಯ ಆಟವಾಗಿದೆ. ಕಬಡ್ಡಿ ಕಬಡ್ಡಿ ಎಂದು ಉಸಿರು ತಪ್ಪದೆ ಹೇಳುತ್ತಿರಲೇ ಬೇಕು. ಇದಕ್ಕೆ ಬದಲಾಗಿ ಬೇರೆ ಸೊಲ್ಲುಗಳನ್ನು ಬಳಸಬಾರದು. ಸ್ಪರ್ಧೆಯಲ್ಲಿ ಆಟದ ಹೆಸರನ್ನೇ ಹೇಳಬೇಕು.

ಕುಂಟೆಪಿಲ್ಲೆ (ಜುಬುಲಿ):

ಹೆಣ್ಣುಮಕ್ಕಳು ತಮ್ಮ ಅಂಗಳದಲ್ಲಿ ಎರಡು ಭಾಗವಾಗುವಂತೆ 4 ಮನೆಗಳನ್ನು ಚೌಕಾಕಾರವಾಗಿ ಬರೆಯುತ್ತಾರೆ. ಮೂರು ಉದ್ದ ಗೆರೆ ಎಳೆದು ಅದಕ್ಕೆ ಮೂರು ಅಡ್ಡ ಗೆರೆ ಎಳೆದರೆ ಅಂಕವಾಯಿತು. ಒಂದು ಬೆಣಚುಕಲ್ಲು(ಚಪ್ಪಟೆಕಲ್ಲು) ಚಿಕ್ಕದನ್ನು ತೆಗೆದುಕೊಂಡು ಒಂದೊಂದೆ ಮನೆಗೆ ಹಾಕಿ ಕುಂಟುತ್ತಾ ಗೆರೆ ತುಳಿಯದಂತೆ ಮನೆಗಳಿಗೆ ಹಾರಿ ಚೌಕದ ಕಲ್ಲನ್ನು ಮತ್ತೊಂದು ಕಾಲಿನಿಂದ ಕುಂಟುತ್ತಲೇ ದೂಡುತ್ತಾರೆ. ಅದು ಗೆರೆಯ ಮೇಲೆ ಬಿದ್ದರೆ ಅಥವಾ ಮುಂದಿನ ಮನೆಯಿಂದ ಆಚೆಗೆ ಹೋದರೆ ಸೋತಂತೆ. ಗೆದ್ದವಳು ಮತ್ತೆ ಮೊಣಕೈ ಮೇಲೆ ಕಲ್ಲು ಇಟ್ಟುಕೊಂಡು ಕುಂಟಬೇಕು. ಕಲ್ಲು ಬಿದ್ದರೆ ಮತ್ತೊಬ್ಬರಿಗೆ ಆಟ ಬಿಡಬೇಕು. ಮತ್ತೆ ಮೊದಲಿನಿಂದ ಪ್ರಾರಂಭಿಸಿ ಆಟ ಆಡಿ ಗೆಲ್ಲಲು ಪ್ರಯತ್ನಿಸುತ್ತಾಳೆ.

ಕಣ್ಣು ಮಚ್ಚಾಲೆ:

ಸಂಜೆಯ ಸಮಯದಲ್ಲಿ ಅಜ್ಜಿಯೊಬ್ಬಳು ಹುಡುಗಿಯ ಕಣ್ಣನ್ನು ಕೈಯಿಂದ ಮುಚ್ಚುತ್ತಾಳೆ. "ಕಣ್ಣಾ ಮುಚ್ಚೆ, ಕಾಡೇಗೂಡೇ ಉದ್ದಿನಮೂಟೆ,ಉರುಳಿಬಿಟ್ಟೆ, ನಮ್ಮಯ ಹಕ್ಕಿ ಬಿಡ್ತೀನಿ ನಿಮ್ಮಯ ಹಕ್ಕಿ ಹಿಡ್ಕೀರಿ" ಎಂದು ಅಜ್ಜಿ ಹೇಳಿ ಕೊಡುತ್ತಾಳೆ.ಅಷ್ಟರಲ್ಲಿ ಮಕ್ಕಳು ಸಿಕ್ಕಿದಲ್ಲಿ ಕಾಣದಂತೆ ಅಡಗಿ ಕೊಂಡಿರುತ್ತಾರೆ. ಕಣ್ಣು ಮುಚ್ಚಿಸಿ ಕೊಂಡವಳು ಹುಡುಕಿ ಹೆಸರು ಹಿಡಿದು ಕೂಗಬೇಕು. ಇವಳು

ಹುಡುಕಲು ಹೋದಾಗ ಕಾಣದಂತೆ ಬಂದು ಅಜ್ಜಿ ಮುಟ್ಟಿದರೆ ಅವಳು ಹೆಸರು ಹೇಳುವಂತಿಲ್ಲ. ಅಜ್ಜಿಯು ಜೊತೆಯಲ್ಲಿ ಇರುವುದರಿಂದ ಮಕ್ಕಳಿಗೆ ತುಂಬಾ ಖುಷಿಕೊಡುವ ಆಟ ಇದು.

ಗುಳಿಮಣೆ :

ಇದಕ್ಕೆ 'ಚೆನ್ನಮಣೆ' ಎಂದೂ ಕೆಲವು ಕಡೆ ಹೇಳುತ್ತಾರೆ. ಹೆಚ್ಚಾಗಿ ಹೆಣ್ಣುಮಕ್ಕಳು, ಗಂಡು ಹುಡುಗರು ಕೂಡಿ ಆಡುತ್ತಾರೆ. ಒಂದು ಸಲಕ್ಕೆ ಇಬ್ಬರು ಮಾತ್ರ ಆಡಬಹುದು. ಇದಕ್ಕೆ ಅಳಿಗುಣಿ ಮನೆ, ಚೆಂದದ ಮಣಿ(ಚೆನ್ನಮಣಿ) ಮುಂತಾಗಿ ಕರೆಯುತ್ತಾರೆ. ಮರದಿಂದ ಈ ಮಣೆ ಮಾಡುತ್ತಾರೆ. ಒಂದೇ ಮಣೆಯಲ್ಲಿ 7 ರಂತೆ ಎರಡು ಸಾಲುಗಳಿರುತ್ತದೆ. ಆಟಕ್ಕೆ ಗುಲಗಂಜಿ ಅಥವಾ ಕವಡೆ, ಹುಳಿ ಬೀಜ ಮುಂತಾದ ಬೀಜಗಳನ್ನು ಬಳಸುತ್ತಾರೆ. ಒಂದೊಂದು ಗುಳಿಗೂ ನಾಲ್ಕು ಬೀಜಗಳನ್ನು ಹಾಕುತ್ತಾರೆ. ತಾವು ಯಾವ ಗುಳಿಯ ಎದುರು ಕುಳಿತುಕೊಳ್ಳುತ್ತಾರೋ ಅದು ಅವರು ಆಡಬೇಕಾದ ಸಾಲಾಗಿರುತ್ತದೆ. ಆಡುವವರು ತಮ್ಮ ಸಾಲಿನ ಗುಳಿಯ ನಾಲ್ಕು ಕಾಳು ತೆಗೆದು ಬಲಬದಿಯಿಂದ ಹಾಕುತ್ತಾ ಹೋಗಬೇಕು. ಕೊನೆ ಕಾಳು ಹಾಕಿದ ಮನೆ ಬಿಟ್ಟು ಪಕ್ಕದ್ದನ್ನ ಎತ್ತಿ ಮತ್ತೆ ಎದುರು ಸಾಲೂ ಕೂಡಿದಂತೆ ಹಾಕುತ್ತಾ ಹೋಗಬೇಕು. ಹೀಗೆ ಎರಡು ಸುತ್ತು ಬರುವ ಹೊತ್ತಿಗೆ ಕೊನೆ ಕಾಳು ಹಾಕಿದ ಪಕ್ಕದ ಗುಳಿ ಖಾಲಿ ಇದ್ದರೆ, ಅವರ ಪಕ್ಕದ್ದನ್ನು ಆಟಗಾರ 'ಕೊಂತ' ಅಥವಾ 'ಪಂತ' ಎಂದು ಹೇಳಿ ತೆಗೆದುಕೊಳ್ಳುತ್ತಾನೆ. ಕಾಳು ಎತ್ತಿದ ಮನೆಯಲ್ಲಿ ನಾಲ್ಕು ಕಾಳು ಸೇರಿದಾಗ 'ಕರು' ಎಂದು ಅದನ್ನೂ ತೆಗೆದುಕೊಳ್ಳುತ್ತಾನೆ. ಮತ್ತೆ ಗೆದ್ದವನೇ ಆಟ ಆಡುತ್ತಾ ಹೋಗುತ್ತಾನೆ. ಕಾಳನ್ನು ಖಾಲಿ ಗುಣಿಗೆ ಹಾಕಿದಾಗ ಖಾಲಿಯಾದರೆ ಅಥವಾ ಎರಡು ಗುಣಿ ಖಾಲಿ ಇದ್ದಾಗ ಕಾಳು ಮುಗಿದರೆ ಅವನು ಎದುರಾಳಿಗೆ ಆಟ ಬಿಡಬೇಕು. ಕಾಳುಗಳು ಮುಗಿಯುವವರೆಗೆ ಆಟ ಆಡುತ್ತಾರೆ. ತಾವು ಗೆದ್ದ ಕಾಳನ್ನು ಗುಳಿಗಳಿಗೆ ತುಂಬಿಸುತ್ತಾ ಹೋಗುತ್ತಾರೆ. ಯಾರದು ಕಡಿಮೆ ಇರುತ್ತದೋ ಅವರು ಖಾಲಿ ಗುಳಿಗೆ ಬಳಪ, ಕಲ್ಲು ಚೂರು ಹಾಕಿ ಅದಕ್ಕೆ ಕಾಳು ಹಾಕದಿರಲು ಹೇಳುತ್ತಾರೆ. ಗೆದ್ದವರು ಆಟ ಮೊದಲು ಮಾಡುತ್ತಾರೆ. ಎದುರಾಳಿ ಎಲ್ಲ ಕಾಳನ್ನು ಸೋತರೆ ಆಟ ಮುಗಿದಂತೆ. ಇದು ಬಹು ಹಿಂದಿನಿಂದಲೂ ಜನ ಪ್ರಿಯವಾದ ಆಟ. ಮನೆಯಲ್ಲಿ ಗಂಡಹೆಂಡಿರು, ಮಕ್ಕಳು, ಮುದುಕಿಯರು ಎಲ್ಲರೂ ಆಟ ಆಡುತ್ತಾರೆ.(ಬೆಳ್ತಂಗಡಿ ತಾಲೂಕು ಶಿಶಿಲ ಗ್ರಾಮದ ಶ್ರೀವೆಂಕಪ್ಪಮಲೆಕುಡಿಯ ಇವರು ಈ ಮೇಲಿನ ಮಾಹಿತಿಯನ್ನು ನೀಡಿರುತ್ತಾರೆ.)

೩. ೭. ೭. ಭಾಷೆ ಮತ್ತು ಸಾಹಿತ್ಯ :

ಮಲೆಕುಡಿಯರಿಗೆ ಅವರದೇ ಆದ ಉಪಭಾಷೆ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಕುಡಿಯರು ತುಳು ಭಾಷೆಯನ್ನು ಮತ್ತು ವ್ಯವಹಾರಕ್ಕೆ ಕನ್ನಡವನ್ನು ಬಳಸುತ್ತಾರೆ.

ಮಲೆ ಕುಡಿಯರು ಬಳಸುವ ತುಳುವನ್ನು 'ಕಾಡು ತುಳು' ಎನ್ನುತ್ತಾರೆ. ಅವರು ಬಳಸುವ ಪದ ಮಾತಾನಾಡುವಾಗ ಉಚ್ಚರಿಸುವ ವರಸೆಗಳಿಂದಲೇ ಅವರು ಯಾವ ಪಂಗಡದ ಮಲೆಕುಡಿಯರು ಎಂಬುದನ್ನು ಗುರ್ತಿಸಬಹುದಾಗಿದೆ. ಉದಾಹರಣೆಗೆ ತರಕಾರಿ ಸಾಂಬಾರಿಗೆ ಕೈಪು ಮತ್ತು ಆಮ್ರ ಎಂಬ ಎರಡು ಶಬ್ದಗಳು ಬಳಕೆಯಾಗುತ್ತವೆ. ನಾಲ್ಮಲೆ ಮಲೆಕುಡಿಯರು ಸಾಂಬಾರಿಗೆ ಯಾವಾಗಲೂ ಆಮ್ರ ಎಂದರೆ ಒರುಮಲೆ ಕುಡಿಯರು ಯಾವಾಗಲೂ ಅದನ್ನು ಕೈಪು ಎಂದೇ ಕರೆಯುವುದು. ಇದೇ ರೀತಿ ನಾಲ್ಮಲೆಯವರು ನದಿಗೆ ಅರ್ಬುಂಚಾರ್ ಎಂದು ಹೇಳುತ್ತಾರೆ. ಆದರೆ ಈಗ ಅವರಲ್ಲಿ ಇಂತಹ ಪದಗಳು ಸಿಗುವುದು ಬಹಳ ವಿರಳ. ಅವರು ನಮ್ಮ ಜೊತೆ ಸಹಜ ತುಳುವನ್ನು ಮಾತನಾಡುತ್ತಾರೆ. ಮಲೆಕುಡಿಯರು ಮಾತನಾಡುವ ತುಳು ಭಾಷೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಕೆಳಗಿನಂತೆ ಅಧ್ಯಯನ ಮಾಡಲಾಗಿದೆ.

ಸರ್ವನಾಮ:

ವಾಕ್ಯಗಳನ್ನು ಕರ್ತೃವಿನ ರೂಪದಲ್ಲಿ ಅಭ್ಯಾಸ ಮಾಡುವಾಗ ನಾಮಪದಕ್ಕೆ ಬದಲಿಯಾಗಿ ಸರ್ವನಾಮ ಬರುತ್ತದೆ. ಆತ/ಅವನ್/ತಿಂದ.

'ತಿಂದ' ಕ್ರಿಯಾಪದ ಹಿಂದಿನ ಸರ್ವನಾಮದಿಂದ ಹುಟ್ಟಿದೆ.ಸರ್ವನಾಮದ ಸ್ವರೂಪವೇ ವಾಕ್ಯದ ಸ್ವರೂಪವನ್ನು ನಿರ್ಧರಿಸುತ್ತದೆ. ದ್ರಾವಿಡದ ಬೇರೆ ಬೇರೆ ಭಾಷೆಗಳಲ್ಲಿ ಸರ್ವನಾಮದ ಸ್ವರೂಪ ಹೇಗಿದೆ ಎಂಬುದನ್ನು ನೋಡಬೇಕು. ತುಳುವಿನಲ್ಲಿ ಒಂದು ಪದಕೆ ಎರಡು ರೀತಿಯ ಸರ್ವನಾಮ ಇದೆ. ನಮೊ, ಎಂಕುಲು ಇವು ಬೇರೆ ಬೇರೆ ಅರ್ಥವನ್ನು ಸಂವಹನಗೊಳಿಸುತ್ತದೆ. ಸರ್ವನಾಮಗಳು ತ್ರಿಕೋನ ಸ್ಥಿತಿಯಲ್ಲಿ ಕೆಲಸ ಮಾಡುತ್ತವೆ.

ಉತ್ತಮ ಪುರುಷ	ಯಾನ್	ತಿನ್ಪೆ
ಮಧ್ಯಮ ಪುರುಷ	ಈ	ತಿನ್ಪ
ಪ್ರಥಮ ಪುರುಷ	ಆಯೆ	ತಿನ್ಪೆ

ಇಲ್ಲಿ 'ತಿನ್' ಎಂಬುದು ಕ್ರಿಯಾಧಾತು. ಇದಕ್ಕೆ ಸೇರುವ ಪ್ರತ್ಯಯಗಳು ಅದರ ಹಿಂದಿನ ಸರ್ವನಾಮದ ಕಾರಣದಿಂದ ಬೇರೆಬೇರೆಯಾಗುತ್ತದೆ.

	ಕನ್ನಡ	ತಮಿಳು	ತೆಲುಗು	ಮಲಯಾಳಂ	ತುಳು
ಏ.	ಆನ್/ನಾನು	ಯಾನ್/ನಾನ್	ಏನು/ನೇನು	ಇನ್	ಏನ್/ಯಾನ್
ಬ.	ಆಮ್/ನಾಮ್	ನಾಓಳ್/ಯಾಮ್	ವವು/ನೇವು	ಇಓಳ್/ನಾಮ್	
	ಎಂಕುಲು/ನಮೊ				
	ನಾವು	ನಾಮ್	ಮನಮು	ನೋಮ್	
ಎ	ನೀನ್/ನೀನು	ನೀಮ್/ನೀಯರ್	ಈವು/ನೀವು/ನುಮ್ಮು	ನೀ	ಈರ್/ನಿಕುಲು
ಬ.	ನೀಮ್/ನೀವು	ನಿಓಳ್,ನೀಮ್	ಈರು/ಮೀರು	ನೀಓಳ್	ಈತುಳ್ /ಇನುಕುಳು
ಏ.	ಅವನು/ಅವಳು	ಅವನ್ /ಅವಳ್	ವಾಡು/ಅದಿ	ಅವನ್ /ಅವಳಿ	ಆಯೇ/ಆಲ್
	ಅದು	ಅದು		ಅದು	ಅವು
ಬ.	ಅವರು/ಅವು	ಅವರ್/ಅವ್ವೈ	ವಾರು/ಆದಿ	ಅವರ್/ಅವ್ವೈ	ಆರ್/ಆಕುಲು,
					/ಐಕುಳು/ಅವು.

ಉತ್ತಮ ಪುರುಷ ಸರ್ವನಾಮ:

ಉತ್ತಮ ಪುರುಷ: ಏಕವಚನ – ಏನ್/ಯಾನ್

ಬಹುವಚನ – ಎಂಕುಲು/ನಮೊ

ಉತ್ತಮ ಪುರುಷ ಮಾತಾಡುವ ವ್ಯಕ್ತಿಯನ್ನು ನಿರ್ದೇಶಿಸುವ ಪದ ನಿರ್ದಿಷ್ಟವಾದ ವ್ಯಕ್ತಿಯನ್ನು ಗುರುತಿಸುವುದು.

ಉತ್ತಮ : ನಾನು, ನಾವು

ಮಧ್ಯಮ : ನೀನು, ನೀವು

ಪ್ರಥಮ : ಅವನು, ಅವಳು, ಅವರು, ಅವು. ಇದು, ಇವು, ಇವರು.

ಏಕವಚನ:

ಮೂಲದ್ರಾವಿಡದಿಂದ ತಮಿಳು ಬಹಳ ಹಿಂದಕ್ಕೆ ಪ್ರತ್ಯೇಕಗೊಂಡುದರಿಂದ ತಮಿಳೂ ತನ್ನ ಪ್ರಾಚೀನ ರೂಪವನ್ನು ಹಾಗೆಯೇ ಉಳಿಸಿಕೊಂಡಿದೆ. ಇದೇ ಕಾಲ ಘಟ್ಟದಲ್ಲಿ ತುಳುವೂ ದ್ರಾವಿಡದಿಂದ ಬೇರೆಯಾದುದರಿಂದ ತುಳುವಿನಲ್ಲೂ ರೂಪವನ್ನು ಗುರುತಿಸಬಹುದು.

ಬಹುವಚನ:

ಉತ್ತಮ ಪುರುಷ ಏಕವಚನವಾದ 'ಯಾನ್' ಉತ್ತಮ ಪುರುಷ ಬಹುವಚನವಾಗುವಾಗ 'ಕುಲು' ಎನ್ನುವ ಇನ್ನೊಂದು ಆಕೃತಿಮಾವನ್ನು ಅದು ಸ್ವೀಕಾರ ಮಾಡುತ್ತದೆ ಮತ್ತು ಎಂಬ ರೂಪವನ್ನು ಪಡೆಯುತ್ತದೆ. ಆದರೆ ಇದು (ಉತ್ತಮ ಪುರುಷ ಬಹುವಚನ ಸರ್ವನಾಮ) ಆಕೃತಿಮಾ ಅಲ್ಲ ಯಾಕೆಂದರೆ ಇಲ್ಲಿ ಎನ್+ಕುಲು ಎಂಬೆರಡು ಆಕೃತಿಮಾಗಳಿವೆ. ಆದರೆ ಇಲ್ಲಿ ಸರ್ವನಾಮವೇ ಆಕೃತಿಮ ಅಲ್ಲ. ಆದರೆ ಸರ್ವನಾಮವೂ ಆಕೃತಿಮಾವಾಗುತ್ತದೆ ಎಂಬುದನ್ನು ಗಮನಿಸಬಹುದು.

ತುಳುವಿನ ಉತ್ತಮ ಪುರುಷದಲ್ಲಿ ಇನ್ನೊಂದು ಬಹುವಚನವಿದೆ. ಅದು ನಮೊ

ಉದಾ: ಎಂಕುಲು ಶಾಲೆಗ್ ಪೋಪ

ನಮೊ ಶಾಲೆಗೆ ಪೋಪೊ

ಇಲ್ಲಿ ಅರ್ಥ ವ್ಯತ್ಯಾಸಗೊಳಿಸುವುದು. ಇದನ್ನು ಹಳೆಗನ್ನಡದಲ್ಲಿ. ಆಮ್ ಪೋಪಂ- ನಾಮ್ ಪೋಪಂ ಎಂದು ಕಾಣಬಹುದು.

ಹೀಗೆ ತುಳು ಎರಡು ಬಹುವಚನ ಸರ್ವನಾಮ ಆಕೃತಿಮಾಗಳನ್ನು ಉಳಿಸಿಕೊಂಡಿದೆ. ಅದನ್ನು ಅಭಿವ್ಯಾಪಕ ಸರ್ವನಾಮ, ವ್ಯಾವರ್ತಕ ಸರ್ವನಾಮ ಎಂದು ಕರೆಯುತ್ತಾರೆ.

ಮಧ್ಯಮ ಪುರುಷ ಸರ್ವನಾಮ : ತುಳು ಮತ್ತು ತೆಲುಗು ಬಿಟ್ಟು ಉಳಿದೆಲ್ಲ ದ್ರಾವಿಡ ಭಾಷೆಗಳಲ್ಲಿ ಮಧ್ಯಮ ಪುರುಷ ಸರ್ವನಾಮವು ವ್ಯಂಜನದಿಂದ ಪ್ರಾರಂಭವಾಗುತ್ತದೆ.

ಉದಾ: ಕನ್ನಡದಲ್ಲಿ ನೀನು, ನೀವು, ತೆಲುಗಿನಲ್ಲಿ – ಈಯು, ಈರು

ಏಕವಚನ: ತುಳುವಿನ 'ನೀ' ಯಲ್ಲಿ 'ನ್' ಲೋಪಗೊಳಿಸಿ ಉಳಿಸಿದೆ. ಅಂದರೆ ಸೌಲಭ್ಯಾಕಾಂಕ್ಷೆಯಿಂದ ಭಾಷೆ ಬದಲಾವಣೆಗೊಳ್ಳುತ್ತವೆ.

ಬಹುವಚನ: ತುಳುವಿನಲ್ಲಿ ಎರಡು ರೀತಿಯ ಬಹುವಚನ ಮಧ್ಯಮ ಪುರುಷ ಸರ್ವನಾಮಗಳಿವೆ.

ಈರ್, ನಿಕುಲು –ತುಳು ಹೊರತು ಉಳಿದ ದ್ರಾವಿಡ ಭಾಷೆಗಳಲ್ಲಿ ಏಕವಚನ ಮಧ್ಯಮಪುರುಷ ಸರ್ವನಾಮ ನಿನ್ ಎನ್ನುವ ರೂಪದಲ್ಲಿದೆ. ಆದರೆ ತುಳುವಿನಲ್ಲಿ ಮ. ಪು ಎ. ವ. ಸರ್ವನಾಮ ಈ ಎಂದೇ ಇದೆ. ಆದರೆ ವಿಭಕ್ತಿ ಪ್ರತ್ಯಯಗಳು ಸೇರಿದಾಗ ಅದು ನಿನ್ ಎನ್ನುವ ರೂಪವನ್ನು ಉಳಿಸಿಕೊಳ್ಳುತ್ತದೆ.

ನಿನ/ನಿ, ನಿನ್ನಲ

ನಿಕ್, ನಿನಡ

ತುಳುವಿನ 'ಈ' ಎನ್ನುವ ಏಕವಚನ ಆಕೃತಿಮಕ್ಕೆ 'ಖು' ಎನ್ನುವ ಪದ ಗೌರವಸೂಚಕವಾಗಿ ಸೇರ್ಪಡೆಯಾದಾಗ ಬಹುವಚನ ಆಕೃತಿಮಾ ಆಗುತ್ತದೆ. ಆದರೆ ಒಂದು ಪದ ಮತ್ತು ಸರ್ವನಾಮ ಆದರೆ ಇದರಲ್ಲಿ ಎರಡು ಆಕೃತಿಮಗಳಿವೆ.

ಇಲ್ಲಿ 'ಕುಲು' ಎನ್ನುವ ಪದ ಸಂಖ್ಯಾವಾಚಕವಾಗಿ ಒಂದು, ಎರಡು ಆಕೃತಿಮಗಳುಳ್ಳ ಬಹುವಚನ ಸರ್ವನಾಮ ಸೃಷ್ಟಿಯಾಗುತ್ತದೆ. 'ನಿ' ಎನ್ನುವ ಏಕವಚನ ಸೂಚಕ ಮಧ್ಯಮಪುರುಷ ಏಕವಚನ ಸರ್ವನಾಮದಲ್ಲಿ 'ನ್' ವನ್ನು ಲೋಪಗೊಳಿಸಿ 'ಈ' ಯನ್ನು ದೀರ್ಘಗೊಳಿಸುತ್ತದೆ. ಆದರೆ ಬಹುವಚನಕ್ಕೆ ಬಂದಾಗ ನ್ ವನ್ನು ಲೋಪಗೊಳಿಸಿ ಈ ಯನ್ನು ಸ್ಪಷ್ಟಗೊಳಿಸುತ್ತದೆ. ಇದನ್ನು ಬ್ರಾಹ್ಮಣ ತುಳುವಿನಲ್ಲಿ ನ್–ಇನ್–ಕುಲು–ನ್ ಅನ್ನು ಲೋಪಿಸಿ ಸ್ಪಷ್ಟಿಸುತ್ತದೆ. ಇದು ಮಧ್ಯಮ ಪುರುಷ ಏಕವಚನ ಮತ್ತು ಬಹುವಚನಗಳನ್ನು ಒಳಗೊಂಡಿರುವ ಸರ್ವನಾಮದ ಆಕೃತಿಮಾ ಸ್ವರೂಪ.

ಪ್ರಥಮ ಪುರುಷ ಸರ್ವನಾಮ: ಪ್ರಥಮ ಪುರುಷ ಏಕವಚನ ಸರ್ವನಾಮಗಳು ಲಿಂಗ ಸೂಚಕಗಳು ಆಗಿವೆ.

ಉದಾ: ಆಯೆ, ಆಲ್, ಅವು, ಇಲ್ಲಿ ಬರುವ ಲಿಂಗ ಸೂಚಕ ಪ್ರತ್ಯಯವು ಒಂದು ಪ್ರತ್ಯೇಕ ಆಕೃತಿಮಾವಾಗಿರುವುದನ್ನು ಕಾಣಬಹುದು.

ಏಕವಚನ ಪ್ರಥಮ ಪುರುಷ ಸರ್ವನಾಮ: ಆಯೆ–ಇಂಬೈ,

ಆಲ್ – ಇಂಬಲ್

ಅವು – ಇನ್‌ದು –ಎಂಬ ರೂಪಗಳನ್ನು ಕಾಣಬಹುದು.

ಈ ಪ್ರಥಮ ಪುರುಷ ಏಕವಚನ ಸರ್ವನಾಮಗಳು ಲಿಂಗಸೂಚಕವಾಗಿವೆಯಷ್ಟೇ ಅಲ್ಲದೆ ದೂರ ನಿರ್ದೇಶಿತಗಳಾಗಿಯೂ ಕೆಲಸ ಮಾಡುತ್ತದೆ. ಹಾಗೆ ಕೆಲಸ ಮಾಡುವುದು ಇಲ್ಲಿಯ ಆ ಮತ್ತು ಈ ಎನ್ನುವ ಎರಡು ಸ್ವರಗಳು.

'ಈ' ದೂರ ನಿರ್ದೇಶಿತ ಸ್ವರ ಮತ್ತು ಲಿಂಗಸೂಚಕ ಸೇರಿ ಪ್ರಥಮ ಪುರುಷ ಸರ್ವನಾಮಗಳು ರೂಪುಗೊಂಡಿದೆ.

ತುಳುವಿನಲ್ಲಿ ಮಧ್ಯಂತರ ಸರ್ವನಾಮಗಳು ಈಗಲೂ ಬಳಕೆಯಲ್ಲಿದೆ. ಆದರೆ ಇದು ಕನ್ನಡದಲ್ಲಿ ೧೨ ನೇ ಶತಮಾನದವರೆಗೆ 'ಉ' ರೂಪದಲ್ಲಿ ಚಾಲ್ತಿಯಲ್ಲಿತ್ತು. ಕೇಶಿರಾಜ ಇದನ್ನು ಪ್ರಸ್ತಾಪಿಸುತ್ತಾನೆ.

ಉದು (ಇದು)

ಊತ (ಈತ)

ಊಕೆ (ಈಕೆ)

ಈ ರೂಪದಲ್ಲಿ ಕನ್ನಡದಲ್ಲಿ ಮಧ್ಯಂತರ ಸರ್ವನಾಮಗಳಿದ್ದವು. ಭಾಷೆ ತನ್ನ ಅನುಕೂಲಕ್ಕೆ ತಕ್ಕಂತೆ ತನ್ನ ಭಾಷಿಕ ರಚನೆಗಳಲ್ಲಿ ಸ್ವೀಕರಿಸುವ 'ಯಾ' ನಿರಾಕರಿಸುವ ಕೆಲಸ ಮಾಡುವುದರಿಂದ ಕನ್ನಡ ಇದನ್ನು ಕೈ ಬಿಟ್ಟಿತು. ಆದರೆ ತುಳು ಉಳಿಸಿಕೊಂಡಿದೆ.

ಉಂಬೈ

ಉಂಬಲ್

ಉಂದು.

ಇಲ್ಲಿ 'ಉ' ಸ್ವರವಾಗಲಿ ಅಥವಾ ಆಯೆ, ಆಲ್, ಅವು, ಅ ಸ್ವರವಾಗಲಿ ಅಥವಾ ಇಂಬೆ, ಇಂಬೆಲ್ ಇಂದುವಿನ 'ಇ' ಸ್ವರವಾಗಲಿ ಬರಿಯ ಸ್ವರಗಳಾಗಿ ಮಾತ್ರವಿರದೇ ಸಾಮಾಜಿಕ ಮತ್ತು ಮಾನಸಿಕವಾಗಿರುವ ಅಂತರಗಳನ್ನು ಸಾಂಸ್ಕೃತಿಕವಾಗಿ ವರ್ಗೀಕರಿಸುವ ದೂರ ನಿರ್ದೇಶಿತಗಳಾಗಿ ಬರುತ್ತದೆ.

ಇನಿ, ಇತ್ತೆ

ಇತ್ತೆಗು ಇಲ್ಲಿ 'ಇಂತೊಗು' ಭೂತಕಾಲದಲ್ಲಿದೆ. ಬಹಳವಾಗಿ ಸಂದು ಹೋದ ಕಾಲವನ್ನು 'ಆನಿ' ಸೂಚಿಸುತ್ತದೆ.

ಮುರಾನಿ: ಇದು 'ಮುನ್' ಎನ್ನುವ ಧಾತುವಿನಿಂದ ಆರಂಭವಾಗಿದೆ.'ಇನಿ' ಸಮೀಪವಾಗಿರುವ ಕಾಲವಾಗಿದೆ

ಮುನ್+ಓಡು–ಮುನೋಡು, ಮುವ್ +ಓಡು –ಮುವೊಡು , ಈಒಡು

ಮೇಲು ಇದು ಪ್ರಥಮ ಪುರುಷ ಏಕವಚನ ಸ್ತ್ರೀಲಿಂಗ ಸೂಚಕ ಸರ್ವನಾಮ. ಇಂಬಲ್>ಮ್ಬಲ್> ಮೋಲು ಇದು ಪ್ರಥಮ ಪುರುಷ ಏಕವಚನ ಸ್ತ್ರೀಲಿಂಗ ಸೂಚಕ ಸರ್ವನಾಮ. ಇಮ್ಪಲ್>ಮ್ಪಲ್>ಮೋಲು – ಪದಾದಿಯ ಸ್ವರ ಇಲ್ಲಿ ಲೋಪವಾಗಿ ಸ್ವರ ಧೀರ್ಘವಾಯಿತು. ಅಂತೆಯೇ ಇಲ್ಲಿ

ಇಂಬಲ್>ಮ್ಬಲ್>ಮೋಲು ಆಗುವ ಸಾಧ್ಯತೆಯು ಇದೆ. ಯಾಕೆಂದರೆ 'ಲು' ಮತ್ತು 'ಮೋ' ಈ ಎರಡೂ ಸ್ವರಗಳು ಪಶ್ಚ ಸ್ವರಗಳು ಎಂಬುದನ್ನು ಗಮನಿಸಬೇಕು.

ಬಹುವಚನ ಪ್ರಥಮ ಪುರುಷ ಸರ್ವನಾಮ: ತುಳುವಿನಲ್ಲಿ ಆರ್, ಅಕುಲು, ಮೆಕುಲು, ಮುಕುಲು, ಇಮ್ಬೆರ್/ ಮೆರ್ , ಐಕುಳು ಮುಂತಾದ ಬಹುವಚನ ಸರ್ವನಾಮಗಳಿವೆ.

'ಐಕುಳು' ಎನ್ನುವುದು ಬಹುವಚನವಾದರೂ ಸಚೇತನವಿರುವ ಮಾನವೇತರ ವರ್ಗ ಎಂದು ಪರಿಗಣಿಸಲ್ಪಟ್ಟವನ್ನು ಉದ್ದೇಶಿಸಿರುವ ಸರ್ವನಾಮ.

ಇಮ್ಬೆರ್>ಮೇರ್>ಆರ್.

ಮೆಕುಲು, ಮುಕುಲು, ಅಕುಲು ಇಲ್ಲಿ ಪೂರ್ವ ಸ್ವರದ ಅಂತರಿಕ ಬದಲಾವಣೆ ಅಂದರೆ ಎ>ಈ ಕಾರವಾಗುವುದು

ಉದಾ: ಬೆರಳು > ಬಿರೆಲ್

ಈ ಎನ್ನುವುದು ಸಮೀಪ ನಿರ್ದೇಶಿತ

ಊ ಮಧ್ಯಂತರ ನಿರ್ದೇಶಿತ

ಆ ದೂರ ನಿರ್ದೇಶಿತ ಸ್ವರಗಳಾಗಿವೆ.

ಅಂತೆಯೇ ಪಶ್ಚ ಸ್ವರಗಳ ಒಳಗೆಯೂ ಮತ್ತು ಪೂರ್ವ ಹಾಗೂ ಪಶ್ಚ ಸ್ವರಗಳ ನಡುವೆಯೂ ಆಂತರಿಕ ಬದಲಾವಣೆ ನಡೆಯುತ್ತದೆ. ಇದು ಆಯಾ ಭಾಷಾ ನಿಯಮಗಳ ಪ್ರಕಾರ ಸಾಧ್ಯವಿದೆ.

ಇಂಬೆರ್, ಮೇರ್, ಆರ್, ಗೌರವ ಸೂಚಕವಾಗಿಯೂ ಮೆಕುಲು, ಮುಕುಲು, ಅಕುಲು ಸಂಖ್ಯಾಸೂಚಕವಾಗಿಯೂ ತುಳುವಿನಲ್ಲಿ ಬಳಕೆಯಾಗುತ್ತದೆ. ಅಂದರೆ ಇಲ್ಲಿ 'ರ್' ಗೌರವ ಸೂಚಕ ಪ್ರತ್ಯಯ 'ಕುಲು' ಸಂಖ್ಯಾವಾಚಕ ಪ್ರತ್ಯಯ 'ಮೆಕುಲು' ಎಂಬ ಪದ ಸಮೀಪ ನಿರ್ದೇಶಿತ ಸರ್ವನಾಮ.

'ಮುಕುಲು' ಎಂಬ ಪದ ಮಧ್ಯಂತರ ನಿರ್ದೇಶಿತ ಸರ್ವನಾಮ / ಯಾಕೆಂದರೆ 'ಎ' ಎಂಬ ಸ್ವರ ಪೂರ್ವ ಸ್ವರವಾಗಿದ್ದು ಸಮೀಪ ನಿರ್ದೇಶಕವಾಗಿದೆ.

ಊ ಎಂಬ ಸ್ವರವಾಗಿದ್ದು ಸಮೀಪ ನಿರ್ದೇಶಕವಾಗಿದೆ.

ಊ ಎಂಬ ಪೂರ್ವಸ್ವರವಾಗಿದ್ದು ಮಧ್ಯಂತರ ನಿರ್ದೇಶಕವಾಗಿದೆ.

ಊ ಒಳಗಡೆ ಆಂತರಿಕ ಬದಲಾವಣೆಗಳು ಸಾಧ್ಯ ಎಂಬುದನ್ನು ಗುರುತಿಸಬೇಕು.

ಅವು- ಇದು ಪ್ರಥಮ ಪುರುಷ ದೂರ ನಿರ್ದೇಶಕ ನಪುಂಸಕ ಲಿಂಗ ಏಕವಚನ ಸರ್ವನಾಮ.

ಅ ಎನ್ನುವ ದೂರ ನಿರ್ದೇಶಿತ ಸ್ವರದೊಂದಿಗೆ ಊ ಎನ್ನುವ ಆಕೃತಿಮಾ ಸೇರಿ ಈ ಸರ್ವನಾಮ ಉಂಟಾಗಿದೆ. ಆದರೆ ಇಲ್ಲಿ ಅವು ಸಂಖ್ಯಾವಾಚಕವೂ ಆಗುವ ಸಾಧ್ಯತೆ ಇದೆ.

ಬಹುವಚನ: ಐಕುಲು = ಅವು+ಕುಲು ಮಾನವೇತರ ವರ್ಗದಲ್ಲಿ ಸಚೇತನವಾಗುವುದಕ್ಕೆ ಸಂಖ್ಯಾವಾಚಕವಾಗಿ 'ಅವು' ಪದ ಬಳಕೆಯಾಗುತ್ತದೆ ಇದು ಪ್ರಥಮ ಪುರುಷ ದೂರ ನಿರ್ದೇಶಕ ನಪುಂಸಕ ಲಿಂಗ ಸಂಖ್ಯಾವಾಚಕ ಬಹುವಚನ ಸರ್ವನಾಮ.

ಈ ಹಿಂದೆ ನಾವು 'ಕುಲು' ಎನ್ನುವುದು ಬಹುವಚನ ಪ್ರತ್ಯಯವನ್ನು ಗೌರವ ಸೂಚಕವಾಗಿ ಗುರುತಿಸಿದ್ದೇವೆ. ಆದರೆ ಈ ಸಂದರ್ಭದಲ್ಲಿ ಕುಲು ಸಂಖ್ಯಾವಾಚಕವಾಗಿಯೂ ಬಳಕೆಯಾಗುತ್ತದೆ ಎಂಬುದನ್ನು ಗಮನಿಸಬೇಕು.

ತನ್ಕುಲು >< ಇಂದೆಕುಲು – ಐಕುಲು

ಐಕುಲು — ದೂರ ನಿರ್ದೇಶಿತ

ಇನ್ದೆಕುಲು – ಸಮೀಪ

ಉನ್ದೆಕುಲು – ಮದ್ಯಂತರ

ಇವಿಷ್ಟು ತುಳುವಿನ ಸರ್ವನಾಮದ ಆಕೃತಿಮ ಸ್ವರೂಪವಿವೇಚನೆ.

ತುಳುವಿನ ವಿಭಕ್ತಿ ಪ್ರತ್ಯಯಗಳು: (ಮಲೆಕುಡಿಯರು ಮಾತನಾಡುವ ತುಳು ಪದಗಳನ್ನು ಲಕ್ಷದಲ್ಲಿಟ್ಟುಕೊಂಡು)

ಪ್ರಥಮಾ ವಿಭಕ್ತಿ : ದ್ರಾವಿಡ ಭಾಷೆಗಳಲ್ಲಿ ಪ್ರಥಮ ವಿಭಕ್ತಿ ಪ್ರತ್ಯಯ ಇಲ್ಲ ಪ್ರಕೃತಿಯೇ ಪ್ರಥಮಾ ವಿಭಕ್ತಿಯ ಕೆಲಸ ಮಾಡುತ್ತದೆ ಎಂಬುದು ಆಧುನಿಕ ಭಾಷಾ ವಿಜ್ಞಾನಿಗಳ ಸಿದ್ಧಾಂತ. ಪ್ರಕೃತದ ವಿವೇಚನೆ ತುಳು ಭಾಷೆಯಲ್ಲಿ ಪ್ರಥಮಾ ವಿಭಕ್ತಿ ಪ್ರತ್ಯಯುದ ವಿಚಾರವಾಗಿ ಮಾತ್ರ ಇದೆ. ತುಳುವಿನಲ್ಲಿ ಆಕಾರಾಂತ ಪುಲ್ಲಿಂಗ ಶಬ್ಧಗಳಿಗೆ ಪ್ರಥಮ ವಿಭಕ್ತಿಯಲ್ಲಿ 'ಎ' ಪ್ರತ್ಯಯ ಬರುವಂತೆ ಕಂಡುಬರುತ್ತದೆ.

ಉದಾ: ರಾಮೆ ಬತ್ತೆ

ಗೋವಿಂದೆ ತೋಟೊಗು ಪೊಯೆ.

ಆದರೆ ಆಕಾರಾಂತವಲ್ಲದ ಪುಲ್ಲಿಂಗ ಶಬ್ದಗಳಿಗೆ ಪ್ರಥಮಾ ವಿಭಕ್ತಿಯಲ್ಲಿ ಯಾವುದೇ ಪ್ರತ್ಯಯ ಸೇರುವುದಿಲ್ಲ.

ಉದಾ: ಬಾಬು ಮರನ್ ಕಡ್ತೆ.

ಅಕಾರಾಂತವಲ್ಲದ ಯಾವುದೇ ಸ್ತ್ರೀಲಿಂಗ ಶಬ್ದಗಳಿಗೆ ಪ್ರಥಮ ವಿಭಕ್ತಿಯಲ್ಲಿ ಯಾವುದೇ ಪ್ರತ್ಯಯ ಸೇರುವುದಿಲ್ಲ.

ಉದಾ: ರಮಾ ಬತ್ತಳು.

ಸೀತು ನೇಜಿ ನಡ್ಪಳು

ಅಕಾರಾಂತವಾದ ಯಾವುದೇ ನಪುಂಸಕ ಲಿಂಗ ಶಬ್ದಗಳಿಗೆ ಪ್ರಥಮ ವಿಭಕ್ತಿ ಪ್ರತ್ಯಯ ಬರುವುದಿಲ್ಲ.

ಉದಾ: ಮರ ಬುರುಂಡು

ಕೋರಿ ಅರಿ ತಿನ್ಪುಂಡು.

ಮೇಲಿನ ಉದಾಹರಣೆಗಳನ್ನು ಗಮನಿಸಿದರೆ, ಅಕಾರಾಂತ ಪುಲ್ಲಿಂಗ ಶಬ್ದಗಳನ್ನು ಬಿಟ್ಟು ಬೇರೆ ಎಲ್ಲಿಯೂ ಪ್ರಕೃತಿಗಳಿಗೆ ಪ್ರಥಮಾ ವಿಭಕ್ತಿ ಪ್ರತ್ಯಯ ಸೇರುವುದು ಕಂಡುಬರುವುದಿಲ್ಲ. ಭಾಷಾವಿಜ್ಞಾನದ ದೃಷ್ಟಿಯಿಂದ ಯಾವುದೇ ವಿಭಕ್ತಿಗೆ ಒಂದು ಪ್ರತ್ಯಯವಿರುವುದಾದರೆ ಅದು ಸ್ತ್ರೀಲಿಂಗ, ಪುಲ್ಲಿಂಗ, ನಪುಂಸಕ ಲಿಂಗಗಳಿಗೆಲ್ಲಾ ಅನ್ವಯವಾಗುತ್ತದೆ. ಆದುದರಿಂದ ತುಳುವಿನಲ್ಲಿ ಪ್ರಥಮಾ ವಿಭಕ್ತಿ ಪ್ರತ್ಯಯ ಇಲ್ಲವೆಂದು ತೀರ್ಮಾನಿಸಿ, ಪ್ರಕೃತಿಗಳೇ ಪ್ರಥಮಾ ವಿಭಕ್ತಿಯ ಕೆಲಸವನ್ನು ಮಾಡುತ್ತದೆ ಎಂದು ಸಿದ್ಧಾಂತಿಸಬಹುದು.

೨.ದ್ವಿತೀಯ ವಿಭಕ್ತಿ: ತುಳುವಿನಲ್ಲಿ ದ್ವಿತೀಯಾ ವಿಭಕ್ತಿ ಪ್ರತ್ಯಯ 'ನ್' ಇದು ಕರ್ಮಾರ್ಥದಲ್ಲಿ ಬರುತ್ತದೆ. ತುಳುವಿನಲ್ಲಿ 'ನ್' (ಅನ್ನು) ಕರ್ತೃ ಯಾವ ಕ್ರಿಯೆಯನ್ನು ಮಾಡಿತು ಎಂಬುದನ್ನು ಹೇಳುತ್ತದೆ. ದ್ವಿತೀಯ ವಿಭಕ್ತಿ ಪ್ರತ್ಯಯದಲ್ಲಿ 'ನ್' ಎಂಬ ಪದ ಇಡೀ ವಾಕ್ಯದ ರಚನೆಯನ್ನು ಬದಲಾಯಿಸುತ್ತದೆ.

ಉದಾ: ಯಾನ್ ಶಾಲೆಗ್ ಪೋಯೆ.

ಎನನ್ ಶಾಲೆಗ್ ಕಡಪುಡಿಯೆರ್

ತುಳುವಿನಲ್ಲಿ ದ್ವಿತೀಯ ವಿಭಕ್ತಿ ಪ್ರತ್ಯಯ ಅಗತ್ಯವಾಗಿ ಬರುತ್ತದೆ ಎಂಬುದನ್ನು ನಾವು ಕಾಣಬಹುದು.

ತುಳುವಿನಲ್ಲಿ ದ್ವಿತೀಯ ವಿಭಕ್ತಿ ಪ್ರತ್ಯಯ 'ನ್' (ಉ)

ಉದಾ: ಜಾನು ಸಿನೆಮನ್ ತೂಯೆ

ಆಯೆ ಆಳೆನ್ ತೂಯೆ

ಸೀತು ಪೆತ್ತನ್ ಮಾರಿಯಳ್

ಇದು ನಾಮಪದ ಮತ್ತು ಸರ್ವನಾಮದ ಜೊತೆಗೆ ಸೇರಿ ಬರುತ್ತದೆ. ಇದನ್ನು ತುಳುವಿನ ಆಕೃತಿಮಾ ಎಂದು ಕರೆಯುತ್ತೇವೆ.

೩.ತೃತೀಯ ವಿಭಕ್ತಿ: ತುಳುವಿನಲ್ಲಿ ತೃತೀಯ ವಿಭಕ್ತಿಯ ವಿಚಾರ ಸಮಸ್ಯಾತ್ಮಕವಾದುದು.ಕನ್ನಡದಲ್ಲಿ ತೃತೀಯಾ ವಿಭಕ್ತಿಯ ಪ್ರತ್ಯಯವೆಂದು ಈಗ ಪರಿಗಣಿಸಲಾಗುವುದು 'ಇಂದ' (ನನ್ನಿಂದ ಆತ ಕೊಲ್ಲಲ್ಪಟ್ಟ). 'ಇಂದ' ಎಂಬ ಪ್ರತ್ಯಯವನ್ನು ತುಳುವಿನಲ್ಲಿ ಬಳಸಿದಾಗ 'ಏನಡ್ದ್' ಎಂಬ ಪ್ರತ್ಯಯವು ಪ್ರಯೋಗವಾಗುತ್ತದೆ.

ಉದಾ: ಮರಡ್ದ್ (ಮರದಿಂದ) ಆಳೆಡ್ದ್ (ಅವಳಿಂದ) ರಾಮಡ್ದ್ (ರಾಮನಿಂದ) ಕೇಶಿರಾಜನು "ತೃತೀಯಾ ಪೇಲುತಾ ಪಡೆಗುಂ ಕರ್ತೃಕಾರಣ ಹೇತು ಸ್ಥಿತಿಯೊಳ್" ಎನ್ನುತ್ತಾನೆ. ತುಳುವಿನಲ್ಲಿ, ಕರ್ಮಣಿ ಪ್ರಯೋಗವಿಲ್ಲ- ಕರಣದ ಅರ್ಥದಲ್ಲಿ ಪ್ರಯೋಗವಾದ ಕನ್ನಡದ 'ಇಂದ' ಎಂಬುದಕ್ಕೆ ಸಮಾನವಾದ ತುಳುವಿನ "ಡ್ದ್" ಪ್ರತ್ಯಯವಾಗದೆ, ಸಪ್ತಮಿ ವಿಭಕ್ತಿಯ ಪ್ರತ್ಯಯವಾದ "ಡು" ಅಥವಾ "ಟು" ಬರುತ್ತದೆ.

ಉದಾ: ಮರನ್ ಮಡುಡ್ದ್ ಕಡ್ತೆ ಎಂಬ ಪ್ರಯೋಗ ಇಲ್ಲ.

ಮರನ್ ಮಡುಟ್ಟು ಕಡ್ತೆ.

ಕಣ್ಡು ತೂಯೆ.

ಅಂದರೆ ತೃತೀಯಾ ವಿಭಕ್ತಿಯಲ್ಲಿ ಸಪ್ತಮಿ ವಿಭಕ್ತಿಯ ಪ್ರತ್ಯಯ ಪ್ರಯೋಗವಾಗುತ್ತದೆ. ಅದೇ ರೀತಿ ಪಂಚಮಿ ವಿಭಕ್ತಿಯಲ್ಲೂ ಪ್ರಯೋಗವಾಗುತ್ತದೆ.

ಹೇತುವಿನಲ್ಲಿ ತೃತೀಯಾ ವಿಭಕ್ತಿ ಪ್ರಯೋಗ ಆಗುವಂತೆ ಕಂಡು ಬರುತ್ತದೆ. ಆದರೆ ಹೇತುವೂ ಪಂಚಮಿ ವಿಭಕ್ತಿಯಲ್ಲಿ ಇದೆ.

ಆಯಡ್ದ್ ಎಂಕ್ ಎಡ್ಡೆ ಆಂಡ್

ಇನಿಮುಟ್ಟ ಆಯಡ್ದ್ ಮಲ್ಪೆರೆ ಆತುಜಿ.

'ಟ್' ಮತ್ತು 'ಡ್ದ್' ಎಂಬುದು ಕನ್ನಡದ ಪಂಚಮಿ ಮತ್ತು ಸಪ್ತಮಿ ಪ್ರತ್ಯಯಗಳಲ್ಲಿ ಬರುವ ಕಾರಣ ಇವುಗಳನ್ನು ತುಳುವಿನ ತೃತೀಯ ವಿಭಕ್ತಿ ಪ್ರತ್ಯಯಕ್ಕೆ ಸೇರಿಸಲಾಗುವುದಿಲ್ಲ. ಆದ್ದರಿಂದ ಇದು ತುಳುವಿನ ಆಕೃತಿಮಾ ಆಗುವುದಿಲ್ಲ.

೪.ಚತುರ್ಥಿ ವಿಭಕ್ತಿ ಪ್ರತ್ಯಯ: ತುಳುವಿನಲ್ಲಿ ಚತುರ್ಥಿ ವಿಭಕ್ತಿ ಪ್ರತ್ಯಯ ಕು, ಕ್ಕು, ಗ್ (ಕಿ, ಕ್ಕೀ, ಗೀ) ಆಗುತ್ತದೆ.

ಉದಾ: ಯಾನ್ ಆಯಗ್ ೫ ರೂಪಾಯಿ ಕೊರಿಯೆ

ರಾಮೆ ಮರಕ್ ಕಲ್ಲ್ ಅಡಕ್ಕುವೆ.

೫.ಪಂಚಮಿ ವಿಭಕ್ತಿ ಪ್ರತ್ಯಯ: ಕೇಶಿರಾಜನು ಕನ್ನಡದಲ್ಲಿ ಅಪಾದಾನ ಮೊದಲಾದವುಗಳಲ್ಲಿ ಪಂಚಮಿ ವಿಭಕ್ತಿ ಬರುತ್ತದೆ ಎನ್ನುತ್ತಾನೆ. ಆದರೆ ಕನ್ನಡದಲ್ಲಿ ಪಂಚಮಿ ವಿಭಕ್ತಿ ಪ್ರತ್ಯಯವಿಲ್ಲ ಎಂದು ಆಧುನಿಕ ಭಾಷಾ ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ತುಳುವಿನಲ್ಲಿ ಪಂಚಮಿ ವಿಭಕ್ತಿಯ ಪ್ರತ್ಯಯವೂ ಕನ್ನಡದ 'ಇಂದ' ಎಂಬುದರ ಅರ್ಥವನ್ನು ಕೊಡುವ 'ಡ್ದ್'

ಉದಾ: ಮರಡ್ದ್ ಪರ್ದು ಬೂರುಂಡು

ಆಯಡ ಎಂಕ್ ಎಡ್ಡೆ ಆಂಡ್

ಷಷ್ಠಿ ವಿಭಕ್ತಿ ಪ್ರತ್ಯಯ (ಸಂಬಂಧ ಕಾರಕ) : ಕನ್ನಡದಂತೆಯೇ ತುಳುವಿನಲ್ಲಿ ಷಷ್ಟಿ ವಿಭಕ್ತಿ ಪ್ರತ್ಯಯ 'ಅ' (ಷಷ್ಠಿ ವಿಭಕ್ತಿಯ ಸಂಬಂಧಾರ್ಥದಲ್ಲಿ ಬರುತ್ತದೆ) ಷಷ್ಟಿ ವಿಭಕ್ತಿಯ ಪ್ರತ್ಯಯ 'ಅ' ಪುಲ್ಲಿಂಗ, ಸ್ತ್ರೀಲಿಂಗ ಶಬ್ದಗಳ ಸಂಗಡ ಪ್ರಯೋಗವಾದಾಗ ಪ್ರಕೃತಿ ಮತ್ತು ಪ್ರತ್ಯಯಗಳ ನಡುವೆ 'ನ್' ಆಗಮವಾಗುತ್ತದೆ. ನಪುಂಸಕ ಲಿಂಗ ಶಬ್ದದಲ್ಲಿ 'ತ್' ಅಥವಾ 'ದ್' ಬರುತ್ತದೆ.

ಉದಾ: ರಾಮನ ಪೆನ್

ಪೆತ್ತದ ಕಂಜಿ

ತರೆತ್ತ ಕೂಜಲ್

ನ, ದ, ತ ಇವುಗಳನ್ನು "ಔಪ ವಿಭಕ್ತಿ ಪ್ರತ್ಯಯ" ಎನ್ನುತ್ತಾರೆ. ವ್ಯಂಜನದ ಜೊತೆಗೆ ಸೇರುವ ಸ್ವರಗಳು.–

ಸ್ವರ ವ್ಯಂಜನ ಸೇರಿ ಆಗುವ ವಿಭಕ್ತಿ ಪ್ರತ್ಯಯವಾಗಿದೆ. ಟ, ಡ, ನ ಇಲ್ಲಿ ನಿಜವಾಗಿ ಆ ಮಾತ್ರ ವಿಭಕ್ತಿ ಪ್ರತ್ಯಯ.

ಸಪ್ತಮಿ ವಿಭಕ್ತಿ ಪ್ರತ್ಯಯ: ಯಾವ ಒಂದು ಶಬ್ದವೂ ಒಂದು ಸ್ಥಳ ಅಥವಾ ಪ್ರದೇಶವನ್ನು ಸೂಚಿಸುತ್ತದೆಯೋ ಆಗ ಸಪ್ತಮಿ ವಿಭಕ್ತಿಯ ಪ್ರಯೋಗವಾಗುತ್ತದೆ ಎಂದು ದ್ರಾವಿಡ ಭಾಷಾ ವೈಯಾಕರಣರ ಅಭಿಪ್ರಾಯ. ತುಳುವಿನಲ್ಲಿ ಸಪ್ತಮಿ ವಿಭಕ್ತಿಯ ಪ್ರತ್ಯಯ "ಡು" ಮತ್ತು "ಟ್"ಗಳು ಬರುತ್ತವೆ.

ಉದಾ: ಹಾಸಿಗೆಡ್ ಜೆತ್ತೆ.

ಆಯನ ತರೆಟ್ ದಾಲಾ ಇಜ್ಜಿ,

ಎಂಕೆಲೆ ಇಲ್ಲಲ್ ದಾಲ ಇಜ್ಜಿ.

ತುಳುವಿನಲ್ಲಿ ಪ್ರಾದೇಶಿಕವಾಗಿ 'ಡ್' ಪ್ರತ್ಯಯಕ್ಕೆ 'ಅಲ್' ಎನ್ನುವ ಪ್ರತ್ಯಯ ಸಂವಾದಿಯಾಗಿ ಬರುತ್ತದೆ.

೮. ಸಂಬೋಧನಾ ವಿಭಕ್ತಿ ಪ್ರತ್ಯಯ: ನಾಮಸೂಚಕದ ಅಂತ್ಯ ಸ್ವರ ದೀರ್ಘಗೊಳ್ಳುವುದಾಗಿದೆ. ಇದು ಅರ್ಥವ್ಯತ್ಯಾಸವನ್ನು ಮಾಡುವುದಿಲ್ಲ ಮತ್ತು ಅರ್ಥವನ್ನು ಕೇಡುವುದಿಲ್ಲದ ಕಾರಣವಾಗಿ ಇದನ್ನು ಗುರುತಿಸುವುದಿಲ್ಲ.

ಉದಾ: ರಾಮಾ.

ಸಂಖ್ಯಾವಾಚಕಗಳು:

ಸಂಖ್ಯಾವಾಚಕವನ್ನು ಕೂಡಾ ಆಕೃತಿಮಾ ನೆಲೆಯಲ್ಲಿ ಕಾಣಬಹುದು.

ಸಂಖ್ಯಾವಾಚಕದಲ್ಲಿ ಮುಖ್ಯವಾಗಿ ೨ ರೂಪಗಳನ್ನು ಕಾಣಬಹುದು.

೧. ಮೂಲಾಂಕ ೨. ಸಾಧಿತಾಂಕ.

ಮೂಲಾಂಕ: ಮೂಲಾಂಕದ ಮೂಲ ಅಂಶವೇ ಆಗಿರುತ್ತದೆ.

ಸಾಧಿತಾಂಕ: ಕೂಡಿಸುವಿಕೆ, ಕಳೆಯುವಿಕೆ, ಗುಣಿಸುವಿಕೆ ಇವು ಸಾಧಿತಾಂಕ.

ಮೂಲಾಂಕದಲ್ಲಿ ೧ ರಿಂದ ೮ , ೧೦ ಮತ್ತು ೧೦, ೧೦೦, ೧೦೦೦, ಲಕ್ಷ , ಕೋಟಿ ಮೂಲಾಂಕದಲ್ಲಿ ಬರುತ್ತದೆ.

ಅದೇ ರೀತಿ ಮೂಲಾಂಕವನ್ನು ಪೂರ್ಣಾಂಕವೆಂದು ಕರೆಯುತ್ತಾರೆ. (೧ ರಿಂದ ೮, ೧೦, ೧೦೦, ----)

ಅದೇ ರೀತಿ ಇನ್ನೊಂದು ಅಪೂರ್ಣಾಂಕ (೧/೪. ೧/೨)

ಸಂಖ್ಯಾವಾಚಕದಲ್ಲಿ ಮೂಲಾಂಕವೇ ಆಕೃತಿಮಾ ಆಗುತ್ತದೆ.

ಒಂಜಿ:

ಕನ್ನಡ	ತಮಿಳು	ಮಲಯಾಳಂ	ತುಳು
ಒಂದು	ಒರ್	ಒನ್	ಒಂಜಿ

ಒನ್+ಜಿ= ಒಂಜಿ ಸಂಖ್ಯೆಯ ಅರ್ಥವನ್ನು ಕೊಡುವ ಪದಗಳ ಒಳಗಡೆ ವಿಶೇಷ ಒನ್+ಜಿ=ಒಂಜಿ ರೂಪ ಇದೆ.

ಒರ್+ಕೆನ್ನಿ =ಒರ್ಕೆನ್ನಿ , ಒರ್+ಕೈ =ಒರ್ಕ್ಯೆಯಿ ಇಲ್ಲಿ ಒನ್ ಮತ್ತು ಒರ್ ಎಂಬುದು ಸಂಧಿಯ ರೂಪದಲ್ಲಿ ಬರುತ್ತದೆ.

ರಡ್ಡ್:

ಕನ್ನಡ	ತಮಿಳು	ಮಲಯಾಳಿ	ತುಳು
ಎರಡು	ಎರೆಂಡ್	ರಂಡ್	ರಡ್ಡ್

ಇರ+ವೆರ್= ಇರ್‌ವೆರ್ ಇಲ್ಲಿ ಸಂಧಿಯಾಗುವಾಗ ಇರ್ವೆರ್ ಎಂಬುದು

ಇರ್+ಪತ್ = ಇಪ್ಪತ್ತು ಸಂಖ್ಯಾವಾಚಕದ ಆಕೃತಿಮಾ ಆಗುತ್ತದೆ.

ಮೂಲದ್ರಾವಿಡದ ತಮಿಳಿನ 'ಇ'ಕಾರ ಕನ್ನಡದಲ್ಲಿ 'ಎ'ಕಾರವಾಗಿ ಪರಿವರ್ತನೆಯಾಗುತ್ತದೆ.

ಮೂಜಿ:

ಕನ್ನಡ	ಮಲಯಾಳಿ	ತಮಿಳು	ತೆಲುಗು	ತುಳು
ಮೂರು	ಮೂಂದ್	ಮೂದ್ದು	ಮೂಡು	ಮೂಜಿ

ಮೂಜಿ

ಮೂ + ಓಲು

ಮೂ + ವೆರಿ – ಮೂ ಎಂಬುದು ನಿರ್ದಿಷ್ಟ ಆಕೃತಿಮಾ ಆಯಿತು. ಕನ್ನಡದ 'ರ'ಕಾರ (ಮೂರು) ತುಳುವಿನಲ್ಲಿ 'ಜ' ಕಾರ ಆಗಿದೆ. (ಮೂಜಿ)

ನಾಲ್:

ಕನ್ನಡ	ತಮಿಳು	ಮಲಯಾಳಿ	ತೆಲುಗು	ತುಳು
ನಾಲ್ಕು	ನಾಲ್	ನಾಲ್	ನಾಲುಗು	ನಾಲ್

ನಲ್ + ಕುರಿ   ಇಲ್ಲಿ ನಲ್ ಎಂಬುದು ಸಂಖ್ಯಾವಾಚಕದ ಮೂಲಂಕವಾಗುತ್ತದೆ

ನಾಲ್+ ವೆರಿ=ನಾಲ್ ಎಂಬುದು ಸಂಖ್ಯಾವಾಚಕದ ಆಕೃತಿಮಾ ಆಗಿದೆ

ನಾಲ್ + ಪಾ – ನಾಲ್ ಎಂಬುದು ವಿಶೇಷಣ

ನಾಲ್ + ನೂದು = ನಲ್ ಮತ್ತು ನಾಲ್ ಎಂಬ ಆಕೃತಿಮಾಗಳು ಬರುತ್ತವೆ.

ಐನ್:

ಕನ್ನಡ	ಮಲಯಾಳಿ	ತಮಿಳು	ತೆಲುಗು	ತುಳು
ಐದು	ಅಞ್ಞು	ಐನ್ದು	ಐದು	ಐನ್

ಐ + ನ್ = ಐನ್

ಇಲ್ಲಿ 'ನ್' ಎಂಬುದು ನೋಮಿನಲ್ ಮಾರ್ಕರ್

ಅದೇ ರೀತಿ

ಮೂ+ಜಿ

ಆ + ಜಿ } ಜಿ, ಜಿ, ನ್ ಇವುಗಳು ನೋಮಿನಲ್ ಮಾರ್ಕರ್

ಐ + ನ್

ಕನ್ನಡದ 'ದ'ಕಾರ 'ಜ'ಕಾರವಾಗಿ ಬದಲಾವಣೆಯಾಗುತ್ತದೆ. ತುಳು, ತಮಿಳು, ಮತ್ತು ಮಲಯಾಳಂಗಳ ರೂಪವನ್ನು ಉಳಿಸಿಕೊಂಡಿದೆ.

ಐ+ಒಲಿ

ಐ+ನೂದು } ಐ ಎಂಬುದು ಆಕೃತಿವಾಗಿದೆ.

ಐ + ವೆರಿ

ಆಜಿ

ಕನ್ನಡ	ತಮಿಳು	ಮಲಯಾಳಂ	ತೆಲುಗು	ತುಳು
ಆರು	ಆಱು	ಆಱು	ಆರು	ಆಜಿ

ಆ +ಜಿ + ಪ + ತ + ಅ + ಜಿ – ಅಜಿಪತ್ತಾಜಿ ಈ ರೀತಿ ಸಂಕಲನದಲ್ಲಿ ಕೂಡಾ ದೀರ್ಘ ಬರುತ್ತದೆ.

ಏಳ್

ಕನ್ನಡ	ತಮಿಳು	ಮಲಯಾಳಿ	ತೆಲುಗು	ತುಳು
ಏಳು	ಏೞು	ಏೞು	ಏಡು	ಏಳ್

ಏ + ಲ್

ಏಲ್ + ಪ } ಏಲ್ + ಮಾ } ಏಲ್ ಎಂಬುದು ವಿಶೇಷಣ.

ಏಲ್ + ಅರೆ

ಏಲ್ + ನೂದು

ಎಣ್ಮೊ:

ಕನ್ನಡ	ತಮಿಳು	ಮಲಯಾಳಿ	ತೆಲುಗು	ತುಳು
ಏಂಟು	ಏಟ್ಟು	ಏಟ್ಟ	ಏಸವಿದಿ	ಎಣ್ಮೋ

ಎನ್+ತಿ

ಎನ್+ಮೊ } ಎನ್+ಮೂ+ನೂದು – ಎನ್ ಎಂಬುದು ವಿಶೇಷಣವಾಗಿದೆ.

ಎನ್+ಪೊ

ಒರುಂಬ:

ಕನ್ನಡ	ತಮಿಳು	ಮಲಯಾಳಿ	ತೆಲುಗು	ತುಳು
ಒಂಭತ್ತು	ಒಂಬುದು	ಒಮದು	ತೊಮ್ಮದಿ	ಒರುಂಬ

ತೊಮ್ಮದಿ ಎಂಬುದು ಭಿನ್ನ ಸ್ವರೂಪವಾಗಿ ಬರುತ್ತದೆ. ಒಂಭತ್ತು ಮೂಲಾಂಕದ ರೀತಿಯಲ್ಲಿ ಕಾಣಿಸುತ್ತದೆ.

ತೊಣ್, ತೊಳ್ ಎನ್ನುವುದು ತಮಿಳು ಮೂಲದ್ದೆಂದು ಪರಿಗಣಿಸುತ್ತೇನೆ. ತೊಳ್ ಹಳೆಯದು.

ತೆಲುಗಿನಲ್ಲಿ ಒಂಭತ್ತು ಎನ್ನುವುದಕ್ಕೆ ತೊಮ್ಮದಿ ಎಂದು ೯೦ ತೊಮ್ಮನೂರು ೯೦೦ ತೊಮ್ಮಣ್ಣರ್ ೯೦೦

ಒನ್‌ಪತ್ತು> ಒನ್‌ಬತ್ತು > ಒಂರ್ಬ

ಇದು ಸಾಧಿತಾಂಕ ಹೇಗೆಂದರೆ ಪತ್ತಕ್ಕಿಂತ ಒಂದನ್ನು ಕಳೆಯುವ ಮೂಲಕ ಒನ್+ಪತ್ತು= ಒಂಭತ್ತು. ತುಳುವಿನಲ್ಲಿ ಸೊನ್ಪ – ಕನ್ನಡದಲ್ಲಿ ತೊಂಬತ್ತು ತಮಿಳಿನಲ್ಲಿ >ತೊಂಬುದಿ

ತೊಂ – ಎಂಬ ತಮಿಳು ಪದಕ್ಕೆ 'ಮೊದಲು' ಎಂಬ ಅರ್ಥ ಇದೆ.

ತೆಲುಗಿನಲ್ಲಿ (ತೊಲ್ ಕಾವ್ಯ = ಆದಿಕಾವ್ಯ ಎಂಬರ್ಥವಿದೆ)

ತೊನ್ + ಪತ್ತು }
} ಇಲ್ಲಿ 'ತ' ಕಾರದ ಬದಲು 'ಸ'ಕಾರ ಬಂತು ಯಾಕೆಂದರೆ ದ್ರಾವಿಡ ಭಾಷೆಯ ವೈಶಿಷ್ಟ್ಯ
ಸೊನ್ + ಪ }

ಇದನ್ನು ಸಾಧಿತಾಂಕದಿಂದ ನೋಡಬೇಕಾಗುತ್ತದೆ. ವ್ಯವಕಲನದ ದೃಷ್ಟಿಯಿಂದ ಕಾಣಬೇಕು

ಪತ್ :

ಪತ್ + ಒಂಜಿ = ಪತ್ತೊಂಜಿ

ಪತ್ + ರಡ್ಡ್ = ಪದ್ರಾಡ್ – (೧೩ ರಿಂದ ೧೯ ರವರೆಗೆ ಪದಿ)

ಪತ್ ಮತ್ತು ಪದಿ ಎಂಬುದು ವಿಶೇಷಣ

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಮಲೆಕುಡಿಯರು ಮಾತನಾಡುವ ತುಳುವಿಗೂ ಮತ್ತು ತಮ್ಮ ಸುತ್ತಮುತ್ತಲಿನ ಪರಿಸರದ ಜನ ಮಾತನಾಡುವ ಇತರ ಜನಾಂಗಗಳ ತುಳು ಭಾಷೆಗಳಿಗೂ ತುಂಬ ವ್ಯತ್ಯಾಸ ಕಂಡು ಬರುವುದಿಲ್ಲ.

ಮಲೆಕುಡಿಯರ ಸಾಹಿತ್ಯ :

ಮಲೆಕುಡಿಯರಲ್ಲಿ ಜನಪದ ಕತೆಗಳು, ಕಬಿತ ಮತ್ತು ಪಾಡ್ದನಗಳು ಸಿಗುತ್ತವೆ. ಆದರೆ ಇವರು ಹೇಳುವ ಕತೆ, ಕಬಿತ ಮತ್ತು ಪಾಡ್ದನಗಳನ್ನು ಗಮನಿಸುವಾಗ ಇತರ ಜನಾಂಗದವರ ಜನಪದ ಕತೆ, ಕಬಿತ ಮತ್ತು ಪಾಡ್ದನಗಳಿಗೂ ವ್ಯತ್ಯಾಸಗಳು ಕಾಣುವುದಿಲ್ಲ. ಇವರಲ್ಲಿ ಕತೆ, ಕಬಿತ ಮತ್ತು ಪಾಡ್ದನಗಳು ಹುಟ್ಟಿಕೊಂಡದ್ದು ಇತರ ಜನಾಂಗದವರ ಜೊತೆಗೆ ಬೆರೆತು ಕೆಲಸ ಮಾಡಲು ಪ್ರಾರಂಭಿಸಿದ ನಂತರವೇ ಎಂದು ಕಾಣುತ್ತದೆ. ಮಲೆಕುಡಿಯರು ತಮ್ಮ ಕುಮೇರಿ ಸಂಸ್ಕೃತಿಯನ್ನು ಬಿಟ್ಟು, ಮಲೆಗಳನ್ನು ತ್ಯಜಿಸಿ, ತಪ್ಪಲು ಪ್ರದೇಶಗಳಲ್ಲಿ ಗದ್ದೆಗಳನ್ನು ಮಾಡಿದರು. ಅಲ್ಲಿ ಇತರ ಬೇಸಾಯ ಸಂಸ್ಕೃತಿಯ ಜನರ ಸಂಪರ್ಕ ಬೆಳೆಸಿದ ಕಾರಣ ಇವರು ಕತೆ, ಕಬಿತ, ಪಾಡ್ದನ, ಗಾದೆ ಮತ್ತು ಒಗಟುಗಳನ್ನು ಕಲಿತಿರಬಹುದು ಎಂದು ತಿಳಿಯುತ್ತದೆ.

ಈ ಕೆಳಗಿನ ಭಾಗದಲ್ಲಿ ಉದಾಹರಣೆಯಾಗಿ ಕೆಲವು ಕಬಿತ, ಕತೆ, ಗಾದೆ ಮತ್ತು ಒಗಟುಗಳನ್ನು ವಿವರಿಸಲಾಗಿದೆ.

ತುಳು ಗಾದೆಗಳು :

ಗಾದೆ ಎಂಬುದು ಸಂಕ್ಷಿಪ್ತವಾದ ವಾಕ್ಯ. ಗಾದೆಗಳಲ್ಲಿ ಸಂಕ್ಷಿಪ್ತತೆ, ವಿವೇಕ ಪೂರ್ಣತೆ, ತೀಕ್ಷ್ಣತೆ, ಸೂತ್ರ ಪ್ರಾಯತೆ, ಅಸತೂಕ, ಪ್ರಾಸ, ಅನುಪ್ರಾಸ, ಪುನಾರಾವರ್ತನೆ, ಉಪಮೆ, ರೂಪಕ, ಮುಂತಾದ ಅಲಂಕಾರಗಳು–ಈ ಲಕ್ಷಣಗಳು ಸಾಮಾನ್ಯವಾಗಿ ಕಾಣಿಸುತ್ತವೆ. ತುಳು ಗಾದೆಗಳು ಸಾರ್ವತ್ರಿಕ ಗುಣ ಮತ್ತು ಪ್ರಾದೇಶಿಕ ಸಂಸ್ಕೃತಿಯನ್ನು ಒಳಗೊಂಡಿವೆ. ತುಳುಗಾದೆಗಳಲ್ಲಿ ತುಳುನಾಡಿನ ಸಂಸ್ಕೃತಿ ವಿಶೇಷವಾಗಿ ವ್ಯಕ್ತವಾಗುತ್ತದೆ. ತುಳುನಾಡಿನಲ್ಲಿ ಪ್ರಧಾನವಾಗಿರುವ ಬೇಸಾಯದ ಚಿತ್ರಣ ತುಳು ಗಾದೆಗಳಲ್ಲಿ ಅಧಿಕವಾಗಿದೆ. ಈ ಪ್ರದೇಶದ ಸಸ್ಯಗಳು, ಪ್ರಾಣಿಗಳು, ಜಾತಿ ಕಸುಬುಗಳು, ಸಾಮಾಗ್ರಿಗಳು ಇಂತಹ ಗಾದೆಗಳಲ್ಲಿ ವಿಶೇಷವಾಗಿ ಸ್ಥಾನವನ್ನು ಪಡೆದಿದೆ.

ಗಾದೆಗಳಲ್ಲಿ ಜ್ಞಾನ, ಜೀವನಾನುಭವ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಆದರೆ ಅಲ್ಲಿ ವ್ಯಕ್ತವಾಗುವ ಎಲ್ಲ ವಿಚಾರಗಳೂ ಸತ್ಯವಾಗಿ ಇರಬೇಕಾಗಿಲ್ಲ. ತಮ್ಮ ಅನುಭವಕ್ಕೆ ಬಂದ, ತಮಗೆ ಸರಿಯೆಂದು ಕಂಡ ಯಾವನೋ ಒಬ್ಬನ ಅಭಿಪ್ರಾಯವು ಗಾದೆಯಾಗಿ ಪರಿವರ್ತಿತವಾಗಬಹುದು. ಗಾದೆಗಳಲ್ಲಿ ಭಾಷಾಭಿವ್ಯಕ್ತಿ ಪ್ರಧಾನವಾಗುತ್ತದೆಯೇ ಹೊರತು ಭಾವಾಭಿವ್ಯಕ್ತಿ ಪ್ರಧಾನವಾದುದಲ್ಲ. ಜಾತಿ, ಕಸುಬುಗಳನ್ನು ವಿಡಂಬಿಸುವಾಗ, ಕೌಟುಂಬಿಕ ವ್ಯಕ್ತಿಗಳ ನಡುವಿನ ಸಂಬಂಧವನ್ನು ಹೇಳುವಾಗ, ಯಾವುದೇ ಪ್ರಾಣಿಯೊಂದರ ನಡತೆಯ ಬಗ್ಗೆ ಅಭಿಪ್ರಾಯವನ್ನು ಕೊಡುವಾಗ, ಇದೇ ರೀತಿಯ ಅನೇಕ ಸಂದರ್ಭಗಳಲ್ಲಿ ಯಾವುದೇ ಸತ್ಯಾಂಶವಿಲ್ಲದ ಅನೇಕ ಗಾದೆಗಳು ಹುಟ್ಟಿಕೊಂಡಿವೆ.

೧). ಅಪ್ಪೆ ತೂಪುನೆ ಬಂಜಿನ್, ಬುಡೆದಿ ತೂಪುನೆ ಕೈನ್

(ತಾಯಿ ನೋಡುವುದು ಹೊಟ್ಟೆಯನ್ನು, ಹೆಂಡತಿ ನೋಡುವುದು ಕೈಯನ್ನು)

೨). ಉಡಲ್‌ಡ್ ಪುಟ್ಟೋಡು ಬೆಗರ್, ನೆಲಟ್ಟ್ ಪುಟ್ಟೋಡ್ ಗಾಳಿ

ಮೈಯಿಟ್ ಪುಟ್ಟೋಡು ಬೆಗರ್, ನೆಲಟ್ಟ್ ಪುಟ್ಟೊಡು ಒಸರ್

(ಒಡಲಿನಲ್ಲಿ ಹುಟ್ಟಬೇಕು ಬುದ್ದಿ, ಕಡಲಿನಲ್ಲಿ ಹುಟ್ಟಬೇಕು ಗಾಳಿ, ದೇಹದಲ್ಲಿ ಹುಟ್ಟಬೇಕು ಬೆವರು, ಭೂಮಿಯಲ್ಲಿ ಹುಟ್ಟಬೇಕು ಒರತೆ.)

೩). ಕುಳ್ಳ್‌ದ್ ಉಣಡ, ಜೆತ್ತ್‌ದ್ ನಿದೆರಡ

(ಕುಳಿತು ಉಣ್ಣಬೇಡ, ಮಲಗಿ ನಿದ್ರಿಸಬೇಡ)

೪). ಉಂಡಿನಾಯಗ್ ಬಡವು ಹೆಚ್ಚ, ಮೀಯಿನಾಯಗ್ ಕುರೆ ಹೆಚ್ಚ

(ತಿಂದವನಿಗೆ ಹಸಿವು ಜಾಸ್ತಿ, ಮಿಂದವನಿಗೆ ಕೊಳೆ ಜಾಸ್ತಿ)

೫). ಕೊರಿ ಪೊಣ್ಣು ಕುಲೊಡ್ಡ್ ಪಿದಯಿ

(ಕೊಟ್ಟ ಹೆಣ್ಣು ಕುಲದಿಂದ ಹೊರಗೆ)

೬). ಜಾತಿಗ್ ಜಾತಿ ಪಗೆ, ನಾಯಿಗ್ ನಾಯಿ ಪಗೆ

(ಜಾತಿಗೆ ಜಾತಿ ಹಗೆ, ನಾಯಿಗೆ ನಾಯಿ ಹಗೆ)

೭). ಕುದುರೆಗ್ ಕುತ್ತೊ ತೋಜಿಲೆಕೊ

(ಕುದುರೆಗೆ ರೋಗ ಕಾಣಿಸಿಕೊಂಡ ಹಾಗೆ)

೮) ಮರತ್ತ ಪುರಿ ಮರನೇ ತಿನ್ಪುನೆ)

(ಮರದ ಹುಳು ಮರವನ್ನೆ ತಿನ್ನುವುದು)

೯) ಅಲ್ಪಗ್ ಐಶ್ವರ್ಯೊ ಬತ್ತೆನ ಅರ್ಧರಾತ್ರೆಡ್ ಕೊಡೆ ಪತ್ತಿಲೆಕೊ.

(ಅಲ್ಪನಿಗೆ ಐಶ್ವರ್ಯ ಭಂದರೆ ಅರ್ಧ ರಾತ್ರಿಯಲ್ಲಿ ಕೊಡೆ ಹಿಡಿದಂತೆ)

೧೦)ಕೃಷಿಟ್ಟ್ ಸುರು ಕಷ್ಟೊ, ಸಂಸಾರ ನಡುಕಷ್ಟೊ, ವ್ಯಾಪಾರ ಕಡೆಕಷ್ಟೊ.

(ಕೃಷಿಯಲ್ಲಿ ಪ್ರಾರಂಭದಲ್ಲಿ ಕಷ್ಟ, ಸಂಸಾರದಲ್ಲಿ ಮಧ್ಯದಲ್ಲಿ ಕಷ್ಟ, ವ್ಯಾಪಾರದಲ್ಲಿ ಕೊನೆಯಲ್ಲಿ ಕಷ್ಟ.)

ಇಂತಹ ನೂರಾರು ಗಾದೆಗಳನ್ನು ಗಮನಿಸಬಹುದು. ಆದರೆ ಇತ್ತೀಚಿನ ದಿನಗಳಲ್ಲಿ ತುಳು ಗಾದೆಗಳ ಬಳಕೆ ಕಡಿಮೆಯಾಗುತ್ತಿದೆ. ಈ ಕಾಲದ ಜನ ತುಳು ಗಾದೆಗಳು ಸಾರುವ ಮೌಲ್ಯಗಳನ್ನು ಹೆಚ್ಚು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ.

ಒಗಟುಗಳು :

ತುಳು ಒಗಟುಗಳು 'ಎದುರುಕತೆ' ಅಥವಾ 'ಮಂಡೆಕತೆ' ಎಂದು ಕರೆಯುತ್ತಾರೆ. ವಸ್ತು ಮತ್ತು ರಚನೆಯ ದೃಷ್ಟಿಯಿಂದ ತುಳು ಒಗಟುಗಳು ಕನ್ನಡ ಒಗಟುಗಳಿಗಿಂತ ವಿಶೇಷವಾಗಿ ಭಿನ್ನವಾಗಿಲ್ಲ. ತುಳು

ಒಗಟುಗಳಲ್ಲಿ ತುಳುನಾಡಿನ ಸಂಸ್ಕೃತಿ ವಿಶೇಷವಾಗಿ ಕಾಣಿಸುತ್ತದೆ. ಸಸ್ಯಗಳಲ್ಲಿ ತೆಂಗು, ತೆಂಗಿನ ಉತ್ಪನ್ನಗಳು, ತಾಳೆ, ಬಾಳೆ, ವೀಳ್ಯೆದೆಲೆ, ಅಡಿಕೆ, ಹಲಸು, ಕುಂಬಳಕಾಯಿ, ಪ್ರಾಣಿ-ಪಕ್ಷಿಗಳಲ್ಲಿ ಕೋಳಿ, ಕೋಳಿ ಮೊಟ್ಟೆ, ಮೀನು, ನಾಯಿ, ವಸ್ತುಗಳಲ್ಲಿ ಪಾದರಕ್ಷೆ, ದೀಪ, ಕೋವಿ, ಕೊಡಪಾನ, ಹಿಡಿಸೂಡಿ, ಬೀಸುವ ಕಲ್ಲು, ತಿಂಡಿಗಳಲ್ಲಿ ಕೊಟ್ಟಿಗೆ ಅಡ್ಯೆ, ಸೇಮಿಗೆ ಹೆಚ್ಚು ಸಿಗುತ್ತವೆ. ತುಳುವಿನಲ್ಲಿ ಘಟನಾ ಪ್ರಧಾನ ಒಗಟುಗಳು ಸಿಗುತ್ತವೆ. ಇವುಗಳಲ್ಲಿ ಲೈಂಗಿಕ ವಿಚಾರಗಳು ಹೆಚ್ಚಾಗಿ ಇವೆ. ತುಳು ಒಗಟುಗಳನ್ನು ಹೋಲುವ ಕನ್ನಡ ಒಗಟುಗಳು ಸಾಕಷ್ಟು ಸಂಖ್ಯೆಯಲ್ಲಿ ಸಿಗುತ್ತವೆ.

ಒಗಟುಗಳು ಗಾದೆಗಳಷ್ಟು ಹೆಚ್ಚಿನ ಪ್ರಮಾಣದಲ್ಲಿ ಒಂದು ಸಮಾಜದ ಜನ ಜೀವನದ ಜೊತೆಗೆ ಸಂಬಂಧವನ್ನು ಪಡೆದಿಲ್ಲ. ಒಗಟುಗಳ ಬಳಕೆಯ ಸಂದರ್ಭ ಮತ್ತು ಉದ್ದೇಶ ಸೀಮಿತವಾದುದು. ಒಗಟುಗಳು ಗಾದೆಗಳಂತೆಯೇ ಒಂದು ಸಮಾಜದ, ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದರೂ, ಅವುಗಳ ಕಾರ್ಯಕ್ಕಿಂತ ಸೀಮಿತವಾದುದು ಮತ್ತು ನಿರ್ದಿಷ್ಟವಾದುದು. ತುಳು ಒಗಟುಗಳನ್ನು ಬಳಸುವುದರಿಂದ ಮನೋರಂಜನೆ, ಬೌದ್ಧಿಕ ಕೌಶಲ್ಯ ಹೆಚ್ಚಾಗುತ್ತದೆ.

೧). ಡೋಲು ಉಂಡು, ಪಾಡ್ದನ ಇಜ್ಜಿ, ಅಣಿ ಉಂಡು, ಗಗ್ಗರ ಇಜ್ಜಿ, ಈ ನಲ್ಕೆದ ಬೂತೋ ಓವು?

(ಡೋಲು ಉಂಟು, ಪಾಡ್ದನ ಇಲ್ಲ, ಅಣಿ ಉಂಟು, ಗಗ್ಗರ ಇಲ್ಲ, ಈ ಕುಣಿಯುವ ಭೂತ ಯಾವುದು?

ಉತ್ತರ:- ಮಯಿರ್ (ನವಿಲು)

೨). ಸಾರೊಂತ್ಬೊಂಜಿ ಜೋಕುಳೆಗ್ ಒಂಜೇ ಒಕ್ಕನೂಲು.

(ಸಾವಿರದ ಒಂದು ಮಕ್ಕಳಿಗೆ ಒಂದೇ ಸೊಂಟದ ನೂಲು)

ಉತ್ತರ:- ಮಾಯ್ಪು (ಹಿಡಿಸೂಡಿ)

೩). ಅಪ್ಪೆ ಇಲ್ಲಡೆ ಮಗಳ್ ಪೋಪಳ್
ಮಗಳ ಇಲ್ಲಡೆ ಅಪ್ಪೆ ಪೋಪುಜಳ್
(ತಾಯಿ ಮನೆಗೆ ಮಗಳು ಹೋಗುತ್ತಾಳೆ
ಮಗಳ ಮನೆಗೆ ತಾಯಿ ಹೋಗುವುದಿಲ್ಲ)

ಉತ್ತರ:- ಸೇರು: ಪಾವು

೪). ಪಾರ್ ಬತ್ತೆ
ಅಂಗಿದೆತ್ತೆ
ಗೂವೆಲ್‌ಗ್ ಲಾಯಿತ್ತೆ

ಉತ್ತರ:- ಬಾರೆದ ಪರ್ಂದ್(ಬಾಳೆಹಣ್ಣು)

೫). ಕಿನ್ನಿ ಕಿನ್ನಿ ಜೋಕುಳೆಗ್ ಕಿನ್ನಿ ಕಿನ್ನಿ ಮುಟ್ಟಾಳೆ.

(ಚಿಕ್ಕ ಚಿಕ್ಕ ಮಕ್ಕಳಿಗೆ ಚಿಕ್ಕ ಚಿಕ್ಕ ಟೋಪ್ಪಿ)

ಉತ್ತರ:– ಬಿರೆಳ್‌ಡ್ ಉಗುರು(ಬೆರಳಿನಲ್ಲಿ ಉಗುರು)

೬). ಅಪ್ಪೆಲ ಅಮ್ಮೆಲ ಕಪ್ಪು, ಬಾಲೆ ಬೊಳ್ಳೆನೊ

(ತಾಯಿ ಮತ್ತು ತಂದೆ ಕಪ್ಪು, ಮಗು ಬಿಳಿ)

ಉತ್ತರ:– ಕಾವೊಲಿ, ಬಾವೊಡೆ, ದೊಸೆ (ಕಾವಲಿ, ಉಚ್ಚಳ, ದೋಸೆ)

೭). ಗಟ್ಟದ ಬದನೆಗ್ ತೊಟ್ಟು ಇದ್ದಿ

(ಗಟ್ಟದ ಬದನೆಗೆ ತೊಟ್ಟು ಇಲ್ಲ)

ಉತ್ತರ:– ಕೆತ್ತಿ (ಕೋಳಿ ಮೊಟ್ಟೆ)

೮) ಒಂಜಿ ಪಳ್ಳಡ್ ಏಳ್ ಎರ್ಮೆಳ್

(ಒಂದು ಹಳ್ಳದಲ್ಲಿ ಎಳು ಎಮ್ಮೆಗಳು)

ಉತ್ತರ:– ಅಪ್ಪೊದ ಕಾವೊಲಿ (ಅಪ್ಪದ ಕಾವಲಿ)

೯) ರಡ್ಡ್ ಗೂವೆಲ್‌ಗ್ ಒಂಜೇ ಪಾಮರ

(ಎರಡು ಬಾವಿಗಳಿಗೆ ಒಂದೇ ಪಾಮರ)

ಉತ್ತರ:– ಮೂಂಕು (ಮೂಗು)

೧೦) ಅಜ್ಜಿಗ್ ಮೂಜಿ ಕಣ್ಣ್, ಅಜ್ಜಗ್ ಒಂಜೇ ಕಣ್ಣ್

(ಅಜ್ಜಿಗೆ ಮೂರು ಕಣ್ಣು, ಅಜ್ಜನಿಗೆ ಒಂದೇ ಕಣ್ಣು)

ಉತ್ತರ:– ತಾರಾಯಿ, ಬಜ್ಜೇಯಿ (ತೆಂಗಿನಕಾಯಿ, ಅಡಿಕೆ)

ಈ ರೀತಿಯ ಅನೇಕ ಒಗಟುಗಳು ಲಭ್ಯವಾಗುತ್ತವೆ. ಒಗಟಿನ ಉತ್ತರವು ಕ್ರಿಯಾರೂಪದಲ್ಲಿ ಇರುವುದನ್ನು ಗಮನಿಸಬಹುದು. ಈ ಒಗಟುಗಳು ತುಳುನಾಡಿನ ಹಳ್ಳಿಗಳಲ್ಲಿ ದೈನಂದಿನ ಜೀವನದಲ್ಲಿ ಮಾಡುವ ಕೆಲಸಗಳ ಕುರಿತು ಇರುತ್ತದೆ. ಇಂತಹ ಕೆಲಸಗಳನ್ನು ಕುರಿತು ಒಗಟನ್ನು ನಿರ್ಮಾಣ ಮಾಡುವಾಗ ತಮ್ಮ ಕಲ್ಪನಾ ಸಾಮರ್ಥ್ಯದಿಂದ ಅವುಗಳಿಗೆ ರೂಪಕಗಳ ರೂಪವನ್ನು ಕೊಟ್ಟಿರುವ ಅಂಶಗಳನ್ನು

ಗಮನಿಸಬಹುದು. (ಪುತ್ತೂರು ತಾಲೂಕು ಸಿರಿಬಾಗಿಲು ಗ್ರಾಮದ ಹೊನ್ನಪ್ಪಮಲೆಕುಡಿಯ ಈ ಮೇಲಿನ ಗಾದೆ ಮತ್ತು ಒಗಟುಗಳ ಮಾಹಿತಿಯನ್ನು ನೀಡಿರುತ್ತಾರೆ.)

ಕಬಿತ :

ಕಬಿತದ ಹಾಡುಗಳು ತುಳುನಾಡಿನ ಜನಪದ ಸಾಹಿತ್ಯದ ವೈಶಿಷ್ಟಗಳಲ್ಲೊಂದು. ಕೃಷಿ ಸಂಸ್ಕೃತಿಯನ್ನು ಜನಪದ ಹೆಣ್ಣು ಪರಿಭಾವಿಸಿದ ರೀತಿ ಇಲ್ಲಿ ವ್ಯಕ್ತವಾಗಿದೆ. ಮನೆಯೊಳಗಿನ ಮತ್ತು ಹೊರಗಿನ ದುಡಿಮೆಯನ್ನು ಸಮಾನವಾಗಿ ಪರಿಭಾವಿಸಿ ಗೌರವಿಸುವ ಪ್ರವೃತ್ತಿ ಕೆಲವು ಕಬಿತಗಳಲ್ಲಿದೆ. ಹೆಣ್ಣು ಮಕ್ಕಳ ಆಸೆ–ಆಕಾಂಕ್ಷೆಗಳು, ನೋವು–ನಿರಾಶೆಗಳು, ನಲಿವು–ಸಂಭ್ರಮಗಳು ಕಬಿತಗಳಲ್ಲಿ ನಿರೂಪಿತವಾಗಿವೆ. ಕೃಷಿ ಸಂಸ್ಕೃತಿ ಮತ್ತು ಕೌಟುಂಬಿಕ ಇತಿಹಾಸ ರಚನೆಗೆ ಕಬಿತಗಳು ಅಮೂಲ್ಯ ಆಕರಗಳಾಗಬಲ್ಲವು.

ಹೊಲಗಳಲ್ಲಿ ನೇಜಿ ನೆಡುವ ಕೆಲಸದ ಹಾಡುಗಳಾದ ಕಬಿತಗಳು, ಎಲ್ಲ ಕೆಲಸದ ಹಾಡುಗಳಂತೆಯೇ ಶ್ರಮ ಪರಿಹಾರಕ್ಕಾಗಿ ಮತ್ತು ಮನಸ್ಸಿನ ಸಂತೋಷಕ್ಕಾಗಿ ಬಳಕೆಯಾಗುತ್ತವೆ. ಇಂತಹ ಕೆಲಸದ ಹಾಡುಗಳ ಬಳಕೆಯಿಂದ ಕೆಲಸದ ದಕ್ಷತೆ ಜಾಸ್ತಿಯಾಗುತ್ತದೆ ಎಂದು ಹೇಳುತ್ತಾರೆ. ೧. ಕೆಲಸದ ದಕ್ಷತೆ ಹೆಚ್ಚಾಗುವುದು ೨. ಕೆಲಸದ ಆಯಾಸ ಕಡಿಮೆಯಾಗುವುದು ೩. ಮನಸ್ಸು ಸಂತೋಷದಿಂದ ಕೂಡಿರುವುದು ೪. ಜಾತಿ, ಮತಗಳ ಭೇದವಿಲ್ಲದೆ ಎಲ್ಲರೂ ಒಂದೆಡೆ ಕಲೆತು ಮಾಡುವ ಸಮಾನತೆಯ, ಸಹಬಾಳ್ವೆಯ ತತ್ವ ಪ್ರಾಯೋಗಿಕವಾಗಿ ಕಾಣಿಸಿಕೊಳ್ಳುವುದು. (ಕಬಿತಗಳನ್ನು ಹಾಡುವ ಹೆಂಗಸರು ಜಾತಿ–ಮತಭೇದವಿಲ್ಲದೆ ನಗುನಗುತ್ತಾ, ಒಬ್ಬರ ಮೈ ಮೇಲೆ ಇನ್ನೊಬ್ಬರು ಕೆಸರು ನೀರು ಎರಚುತ್ತಾ, ತಮಾಷೆ ಮಾಡುತ್ತಾ ಆನಂದಿಸುತ್ತಾರೆ. ಉಳಿದ ಸಂದರ್ಭಗಳಲ್ಲಿ ಅಸ್ಪೃಶ್ಯರೆಂದು ಪರಿಣಿತರಾಗುವ ಹರಿಜನರ ಮೈಯನ್ನು ಇಲ್ಲಿ ಮುಟ್ಟುತ್ತಾರೆ ಮತ್ತು ಎಲ್ಲರಂತೆಯೇ ಅವರೊಡನೆ ಹೊಲದಲ್ಲಿ ಸ್ನೇಹಭಾವದಿಂದ ವರ್ತಿಸುತ್ತಾರೆ) ಇವು ಕಬಿತಗಳ ಪ್ರಧಾನವಾದ ನಾಲ್ಕು ಕಾರ್ಯಗಳು.

ಇಂದು ಈ ಕೆಲಸದ ಹಾಡುಗಳು ಮಾಯಾವಾಗುತ್ತಿವೆ. ಇದಕ್ಕೆ ಕೃಷಿ ಕೆಲಸಗಳಿಗೆ ಯಂತ್ರಗಳ ಬಳಕೆಯಾಗುತ್ತಿರುವುದು ಒಂದು ಪ್ರಮುಖ ಕಾರಣ ಎನ್ನುವುದು ಮುಖ್ಯ ವಿಚಾರ. ಹಿಂದೆ ದೇಹ ಶ್ರಮದ ಮೂಲಕ ಆಗುತ್ತಿದ್ದ ಅನೇಕ ಕೆಲಸಗಳು ಇಂದು ಯಂತ್ರದ ಮೂಲಕ ಆಗುತ್ತಿರುವುದರಿಂದ, ಸಾಂಸ್ಕೃತಿಕ ಸಂದರ್ಭವಿಲ್ಲದೆ ಅನೇಕ ಕೆಲಸದ ಹಾಡುಗಳು ಬಳಕೆಯಾಗುತ್ತಿಲ್ಲ. ಕಬಿತಗಳು ಕ್ರಿಯಾತ್ಮಕವಾಗಿರುವುದು ಹೊಲಗಳಲ್ಲಿ ನೇಜಿ ನೆಡುವ ಸಂದರ್ಭದಲ್ಲಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭತ್ತದ ಬೇಸಾಯದಲ್ಲಿ ನೇಜಿ ನೆಡುವ ಕೆಲಸಕ್ಕೆ ಯಂತ್ರಗಳು ಬಳಕೆಯಾಗುತ್ತಿಲ್ಲ. ದಕ್ಷಿಣ ಕನ್ನಡದ ಹೊಲಗಳು ಭೌಗೋಳಿಕವಾಗಿ ಎತ್ತರ ತಗ್ಗಿನಲ್ಲಿ ಇರುವುದರಿಂದ ಇಲ್ಲಿ ಯಂತ್ರಗಳ ಬಳಕೆಗೆ ಸರಿಯಾದ ಅವಕಾಶವಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ ಕೃಷಿ ಚಟುವಟಿಕೆಗೆ ಸಂಬಂಧಿಸಿದ ಕಬಿತಗಳು ಕಡಿಮೆಯಾಗುತ್ತಿರುವುದು ಗೋಚರಿಸುತ್ತದೆ.

ಸಾಮಾನ್ಯವಾಗಿ ಹೆಂಗಸರು ನೇಜಿ ನೆಡುವುದು ತುಳುನಾಡಿನಲ್ಲಿ ಹಿಂದಿನಿಂದ ನಡೆದು ಬಂದ ಸಂಪ್ರದಾಯ. ಅವರಲ್ಲಿ ಒಬ್ಬಾಕೆ ಆ ಗುಂಪಿನ ನೇತೃತ್ವ ವಹಿಸುತ್ತಾಳೆ. ಅವಳು 'ಕಬಿತ'ದ ಒಂದು ಸಾಲನ್ನು ಹಾಡುತ್ತಾಳೆ. ಆಗ ಎಲ್ಲರೂ ಆ 'ಕಬಿತ'ದ ಪಲ್ಲವಿಯನ್ನು ಒಟ್ಟಿಗೇ ಹಾಡುತ್ತಾರೆ. ಬಳಿಕ ಪುನಃ ಆ ಹೆಂಗಸು ಕಬಿತ ಮುಂದಿನ ಸಾಲನ್ನು ಹಾಡುತ್ತಾಳೆ. ಉಳಿದವರು ಹಿಂದಿನದೇ ಪಲ್ಲವಿಯನ್ನು ಹೇಳುತ್ತಾರೆ. ಈ ರೀತಿ 'ಕಬಿತ'ದ ಹಾಡುವಿಕೆಯು ಮುಂದುವರಿಯುತ್ತದೆ. ಇಲ್ಲಿ 'ಕಬಿತ'ದ ಪಠ್ಯವನ್ನು ಹಾಡುವವಳು ಒಬ್ಬಳು ಮಾತ್ರ. ಉಳಿದವರು ಪಲ್ಲವಿಯನ್ನು ಮಾತ್ರ ಪುನರಾವರ್ತಿಸುತ್ತಾರೆ. ಒಂದು ಸಾಲನ್ನು ಹಾಡಿದ ಮೇಲೆ ಪ್ರತಿ ಬಾರಿಯೂ ಪಲ್ಲವಿಯನ್ನು ಹಾಡಬೇಕು.

ಕಬಿತಗಳಲ್ಲಿ ಕತೆ ಇರುವುದು ಬಹಳ ಕಡಿಮೆ. ಹೆಚ್ಚಿನ ಕಬಿತಗಳಲ್ಲಿ ಶಬ್ದಗಳ ಸರಮಾಲೆ, ಹಾಸ್ಯದ ತುಣುಕು, ಒಂದು ಸಾಮಾನ್ಯ ಘಟನೆ, ಒಂದು ಚಿಕ್ಕ ವಿಚಾರ ಇರುತ್ತದೆ. ಕಬಿತಗಳು ಶುದ್ಧ ಕೆಲಸದ ಹಾಡುಗಳಾಗಿರುವುದರಿಂದ ಇಲ್ಲಿ ಸಾಹಿತ್ಯಿಕ ಮೌಲ್ಯ ವಿಶೇಷವಾಗಿ ಕಂಡು ಬರುವುದಿಲ್ಲ. ಆದರೆ ಕೆಲವು ಕಬಿತಗಳಲ್ಲಿ ತುಳುನಾಡಿನ ಸಂಸ್ಕೃತಿಯ ಕೆಲವು ವಿಚಾರಗಳನ್ನು ಕಾಣಬಹುದು.

೧. ಓ ಬೇಲೆ :–ಅತ್ಯಂತ ಜನಪ್ರೀಯವಾದ ಹಾಗೂ ಸಾರ್ವತ್ರಿಕವಾಗಿ ಲಭ್ಯವಾಗುವ –ಕಬಿತ ಓ ಬೇಲೆ.

ಓ ಬೇಲೇ :

(ಪ್ರತಿ ಸಾಲಿನ ನಂತರ ಪಲ್ಲವಿಯನ್ನು ಹಾಡುತ್ತಾರೆ)

ಓ ಬೇಲೇ ಓ ಬೇಲೇ
ಓ ಮಾತೆರ್ಲ್ಲೆ ಪನ್‌ಲೆ
ಓ ಬೇಲೇ
ಓ ಪನಾಂದಿನಕುಲು
ಓ ಮಾಮಿ ಕಳುವೆ
ಓ ಮಗಳೆ ಮಿಂಡೆ
ಓ ರಾಜ ಕಳುವೆ
ಓ ಎನ್ನನೆ ಉಳ್ಳಯೆ
ಓ ದರ್ಭೆನೆ ಪಿರೆವು
ಓ ಅಜಿಪ್ಪೆಟ್ ಆಜಿಮುಡಿ
ಓ ಮುಪ್ಪೇಡೆ ಮೂಜಿ ಮುಡಿ
ಓ ನೇಜಿಲ ಪಾಡ್ಪಯೆರೆ
ಓ ಅಂಚನೆ ಏನ್
ಓ ಬತ್ತ್‌ನ ನಾನ

ಓ ಒರ ಪಾಡಿ ನೇಜಿ
ಓ ಆಟಿದ ಬೊಲ್ಲ
ಓ ಕೊಂಡೊದು ಪೊಂಡ್
ಓ ಬುಕ್ಕೊರ ನಾನ
ಓ ನೇಜಿನೇ ಪಾಡ್ದೆ
ಓ ಪಂಜಿಲ ಗುಜ್ಜರೆ
ಓ ನಕ್ಕ್‌ದ್ ಪೋಂಡ್
ಓ ನೇಜಿಲ ನಾನ
ಓ ಮುತ್ತಾರ್ ಪಾಡ್ದೆ
ಓ ದೊಡ್ಡಿ ಕೊಡಿಪ್ಪು
ಓ ಕೊಡಿಪ್ಪುಲ ನಾನ
ಓ ದೆಪ್ಪರ ಜನ
ಓ ಇಚ್ಚಾಂದೆ ಉಳ್ಳಯೆ
ಓ ಎತ್ತನೆ ನಾನ

ಓ ಕಂಡತ ಪುನಿಯೆನೆ
ಓ ಪೋಪೆರೆ ನಾನಾ
ಓ ಅಪಗ ಬರ್ಪೆ
ಓ ಕಾರ್ಯಂತ ಕಲಲೇ
ಓ ಓಲ್ತುನೇ ಬರ್ಪ
ಓ ಒಂಚಿನೆ ಪೋಪ
ಓ ಕಲ್ಲಾಲ ದಿಕ್ಕ್‌ಂದ್
ಓ ಕೇಂಡೆರೆ ಉಳ್ಳಯೇ
ಓ ನೇಜಿತ ಪೊಂಜೊವೂ
ಓ ಕತೆನೆ ಪನ್ಪ
ಓ ತೂಯ್ಯರೆ ಪೊರ್ಲು
ಓ ಕೇನ್ಯರ ರಂಗ್
ಓ ಬಡವುದು ಇಚರ
ಓ ಪೊಮುಂಡೆ ಆಯಗ್

ಓ ಎಂಕ್‍ನೆ ನಾನ
ಓ ಜನೊಲ ಇಜ್ಯೆ
ಓ ಕಳಲ ದಿಕ್ಕೆ
ಓ ಜನೊನೆ ಕೊಂಡೊದು
ಓ ಎಲ್ಲೆನೆ ಬರೋಡು
ಓ ಪನ್ಪೆರ ನಾನ
ಓ ಪೋಯೆನ ನಾನ
ಓ ಕಳಲ ದಿಕ್ಕ
ಓ ಪೋನಾಗ ನಾನ
ಓ ಜನೊನೆ ನಾನ
ಓ ಅಂದಾಯ ಪೊಣ್ಣುಲೆ
ಓ ಎನ್ನನೇ ಉಳ್ಳಾಯಗ್
ಓ ನೇಜಿನೆ ನಾನ
ಓ ಪೂರಾರಿ ಪೋತುಂಡ್
ಓ ಇಜ್ಜಿಂದೆ ನಾನ
ಓ ಬರೊಡುಂದು ಪಂಡೆ
ಓ ಅಯ್ಯೊಯ ಉಳ್ಳಯ
ಓ ಎಂಕ್‍ಲ್ ಕಂಡನಿ
ಓ ಬೇಲೆಗೆ ಪೋತೆ
ಓ ಆಯನೆ ಬನ್ನಗ
ಓ ಅಡಿಗೆನೆ ಅವೊಡು
ಓ ಬಾಲೆಲು ಬುಳುಪೊ
ಓ ಬರಂತೆ ಕರಿಜಿಂದ್
ಓ ಕಳಲ ದಿಕ್ಕೆ
ಓ ಪನ್ಪನೇ ನಾನ
ಓ ಆವುಂದು ನಾನ
ಓ ಪಂಡೊನೇ ಪೊಣ್ಣುಲು
ಓ ಬೊಲ್ಲೊಗು ಪೋಯೇ

ಓ ಮೇರೆ ಬಾಕಿಲ್‍ಗ್
ಓ ಪಂಡೆಯ ಕಳಲೆ
ಓ ಅಂದಾಯ ಪೂರ್ನನ
ಓ ಎನ್ನಾಲ ಉಳ್ಳಾಯಗ್
ಓ ನೇಜಿನ ಪೂರಾರಿಂಡ್
ಓ ಪೊತ್ತುಂಡೇ ನಾನ
ಓ ಮುಗಿಂಡ್ ನಾನ
ಓ ಬರೊಡುಂದೆ ಪಂಡೆ
ಓ ಆತೇನ ಪೂರ್ತಗು
ಓ ಎಂಕ್‍ಲೇ ಮೇರೆ
ಓ ಬೇಲ್‍ಗ್ ಪೋತೆ
ಓ ಆಯಗ್ ಗಂಜಿ
ಓ ಆವೊಡೆ ಉಳ್ಳಯ
ಓ ತೊಟ್ಟಿಲ್‍ದ ಬಾಲೆಗ್
ಓ ಮಿರೆನೆ ಕೊರೂಡು
ಓ ಅವುನೇ ನಾನ
ಓ ಆಯಿಜೆ ಪೊರ್ನನ
ಓ ಎನ್ನನೆ ಉಳ್ಳಾಯಗ್
ಓ ನೇಜಿನ ಪೂರಾರಿಂಡ್
ಓ ಪೊಂಡ್‍ಂದ್ ಪನ್ಪೆ
ಓ ಆವುಂದು ನನಾ
ಓ ಪಂಡರೆ ಪೊರ್ನನ
ಓ ಜನೋನೇ ನಾನ
ಓ ಲೆತ್ತೊಂದೇ ಬರುವೆನೆ
ಓ ಬರುವೆನೆ ದಿಕ್ಕೆ
ಓ ಬರ್ನಗ ನಾನ
ಓ ಅಂಗದ್‍ನೆಡ್ ಅಚರ
ಓ ನೇಜಿಯ ಇನ್ನು

ಓ ಒಂಜಾಲ್ ದೆತ್ತೆ
ಓ ಕಲಿಕ್ಕೊಂದ್ ದೀಯೆನೆ
ಓ ರಡ್ಡ್‍ಲಾ ದೀಯೇ
ಓ ರಡ್ಡ್ ಸೇರ್ ಕಲಿಯೆ
ಓ ಪರಿಯೆನೆ ನಾನ
ಓ ಬಚ್ಚಿರೆ ತಿನಂದೆ
ಓ ಬಾಲಾಡಿ ಬ್ರಮ್ಮೆ
ಓ ಅತ್‍ಂಡೆ ಆಯಾಗ್
ಓ ಒಂಜಾಲಾ ದೆತ್ತೆ
ಓ ಅಂಗಡಿಡ್ ದೀಯೆ
ಓ ಬಚ್ಚಿರೆಪೂಲು
ಓ ದೆತ್ತೇನೆ ನಾನ
ಓ ಜನೊನೆ ಲೆತ್ತೊನು
ಓ ಬರುವೆನೆ ನಾನ
ಓ ಉಳ್ಳಾಯ ಕಂಡೋಗು
ಓ ಎತ್ಯೇನೆ ನಾನ
ಓ ಉಳ್ಳಾಯ ಮಗೆ
ಓ ಉಲ್ಲೆರೆ ನಾನ
ಓ ಕೊಳ್ಳಿನ ಕುಮಾರೆ
ಓ ಬೊಳ್ಳಿದ ಕೋಲು
ಓ ಪತೊನುದು ನಾನ
ಓ ಜನೊನೇ ಕಮ್ಮಿ
ಓ ದಾನೇನೇ ಆಯಿನ
ಓ ಮಲ್ಲೊಂಜಿ ಕಾಡ್‍ಡೆ
ಓ ಬತ್ತೇನೆ ಉಳ್ಳಯ
ಓ ಬನ್ನಗ ಸಾದಿಡೆ
ಓ ಮಲ್ಲೊಂಜಿ ಸುದೆ
ಓ ಕಡತ್ತೇನೆ ಉಳ್ಳಯ

ಓ ಆಡ್ಡೋನೇ ಬೂರಿಯೇ
ಓ ಮುರಂಪೊಂತೆ ಗರಿಂಡೆ
ಓ ನೀಟೊನೇ ಬೂರಿಯೆ
ಓ ಮುಂಡೊಂತೆ ಗರಿಂಡೆ
ಓ ಎಲ್ಲೆನೆ ರಡ್ಡ್ ಆಳ್
ಓ ಕೊಂಡೊದೆ ಕೊಂಡ್ರುಪೆ
ಓ ದಮ್ಮಯ್ಯ ದಕ್ಕಯ
ಓ ಪಾಡ್ಯೇನೆ ನಾನ
ಓ ಬೇಲೇ
ಓ ಬೇಲೇ

ಕನ್ನಡನುವಾದ

ಓ ಬೇಲೇ ಓ ಬೇಲೇ
ಓ ಎಲ್ಲರೂ ಹೇಳಿ
ಓ ಬೇಲೆ
ಓ ಹೇಳದವರು
ಓ ಅತ್ತೆ ಕಳ್ಳ
ಓ ಮಗಳ ಮಿಂಡ
ಓ ರಾಜ ಕಳ್ಳ
ಓ ನನ್ನ ಒಡೆಯ
ಓ ದರ್ಭೆಯನ್ನು ಕೊಯ್ದು
ಓ ಅರುವತ್ತರಲ್ಲಿ ಆರು ಮುಡಿ
ಓ ಮಾವತ್ತರಲ್ಲಿ ಮೂರು ಮುಡಿ
ನೇಜಿಯನ್ನು ಹಾಕಿಸಿದ್ದಾರೆ
ಓ ಒಮ್ಮೆ ಹಾಕಿದ ನೇಜಿ
ಓ ಆಷಾಡದ ನೆರೆ
ಓ ಕೊಂಡು ಹೋಯಿತು
ಓ ಮತ್ತೊಮ್ಮೆ ಇನ್ನು

ಓ ದೊಡ್ಡ ಮೊಳಕೆ
ಓ ಮೊಳಕೆಯನ್ನು
ಓ ತೆಗೆಯಲು ಜನ
ಓ ಇಲ್ಲದೆ ಒಡೆಯ
ಓ ಗದ್ದೆಯ ಹುಣಿಯಲ್ಲಿ
ಓ ಹೋಗುತ್ತಾರೆ ಇನ್ನು
ಓ ಆವಾಗ ಬರುತ್ತಾನೆ
ಓ ಕಾರ್ಯದ ಕಳಲ
ಓ ಎಲ್ಲಿಂದ ಬರುತ್ತೀ
ಓ ಎಲ್ಲಿಗೆ ಹೋಗುತ್ತಿ
ಓ ಕಳಲ ದಿಕ್ಕ ಎಂದು
ಓ ಕೇಳಿದರು ಒಡೆಯ
ಓ ನೇಜಿಯ ಹೆಂಗಸರು
ಓ ಕತೆಯನ್ನು ಹೇಳುತ್ತಾರೆ
ಓ ನೋಡಲು ಚಂದ
ಓ ಹೇಳಲು ಇಂಪು
ಓ ಹಾಗೆಯೇ ನಾನು
ಓ ಬಂದೆನು ಇನ್ನು
ಓ ನನಗೆ ಇನ್ನು
ಓ ಜನವೇ ಇಲ್ಲ
ಓ ಜನ ಕರಕೊಂಡು
ಓ ನಾಳೆಯೇ ಬರಬೇಕು
ಓ ಹೇಳುತ್ತಾರೆ ಇನ್ನು
ಓ ಕಳಲ ದಿಕ್ಕ
ಓ ಹೋಗುವಾಗ ಇನ್ನು
ಓ ಇನ್ನಾದರೂ ಇನ್ನು
ಓ ಹೌದ ಹೆಂಗಸರೇ

ಓ ಇಲ್ಲದೇನು
ಓ ಬರಬೇಕು
ಓ ಅಯ್ಯೋ ಒಡೆಯ
ಓ ನಮ್ಮ ಗಂಡ
ಓ ಕೆಲಸಕ್ಕೆ ಹೋಗಿದ್ದಾನೆ
ಓ ಆತ ಬರುವಾಗ
ಓ ಅಡುಗೆ ಆಗಬೇಕು
ಓ ಮಕ್ಕಳು ಅಳುತ್ತೇವೆ
ಓ ಬರದೆ ತೀರದು
ಓ ಕಳಲ ದಿಕ್ಕ
ಓ ಹೇಳುತ್ತಾನೆ ಇನ್ನು
ಓ ಆಯ್ತೆಂದು ಇನ್ನು
ಓ ಹೇಳಿದರು ಹೆಂಗಸರು
ಓ ತಲುಪಿದ ಇನ್ನು
ಓ ಮೇರರ ಬಾಗಿಲಿಗೆ
ಓ ಹೇಳಿದ ಕಳಲ
ಓ ಹೌದ 'ಪೊರ್ನನು'
ಓ ನನ್ನ ಒಡೆಯನಿಗೆ
ಓ ನೇಜಿ ಅಳಿದುಹೋಯ್ತು
ಓ ಹೊತ್ತಿತು ಇನ್ನು
ಓ ಮುಗಿಯಿತು ಇನ್ನು
ಓ ಬರಬೇಕೆಂದು ಹೇಳಿದ ಓ
ಓ ಅಷ್ಟೊಹೊತ್ತಿಗೆ
ಓ ನಮ್ಮ ಗಂಡ
ಓ ಕೆಲಸಕ್ಕೆ ಹೋಗಿದ್ದಾನೆ
ಓ ಆತನಿಗೆ ಗಂಜಿ
ಓ ಆಗಬೇಕು ಒಡೆಯ

ಓ ನೇಜಿಯನ್ನು ಹಾಕಿದ್ದಾನೆ
ಓ ಹಂದಿ ಗುಜ್ಜರ
ಓ ನೆಕ್ಕಿ ಹೋಯಿತು
ಓ ಮತ್ತೊಮ್ಮೆ ಹಾಕಿದ
ಓ ತೊಟ್ಟಿಲ ಮಗುವಿಗೆ
ಓ ಮೊಲೆ ಕೊಡಬೇಕು
ಓ ಅದು ಇನ್ನು
ಓ ಆಗುವುದಿಲ್ಲ 'ಪೊರ್ನನ'
ಓ ಒಡೆಯೆನೆ
ಓ ನೇಜಿಯು ಅಳಿದು
ಓ ಹೋಯಿತು ಎಂದ
ಓ ಆಯಿತು ಇನ್ನು
ಓ ಹೇಳಿದರು ಪೊರ್ನನ
ಓ ಜನವೇ ಇನ್ನು
ಓ ಕರಕೊಂಡು ಬರುತ್ತಾನೆ
ಓ ಬರುತ್ತಾನೆ ದಿಕ್ಕ
ಓ ಬರುವಾಗ ಇನ್ನು
ಓ ಬಾಯರಿ ಆಸರ
ಓ ಹಸಿವೆಯಲ್ಲಿ ಈಸರ
ಓ ಹೋಗುತ್ತದೆ ಅವನಿಗೆ
ಓ ಒಂದಾಳು ತೆಗೆದ
ಓ ಕಳ್ಳಿಗಾಗಿ ಇಟ್ಟ
ಓ ಎರಡಾಳು ಇಟ್ಟ
ಓ ಎರಡು ಸೇರು ಕಳ್ಳು
ಓ ಕುಡಿದ ಇನ್ನು
ಓ ವೀಳ್ಯ ತಿನ್ನದೆ
ಓ ಬಾಲಾಡಿ ಬ್ರಹ್ಮ
ಓ ಆಗಿದೆ ಆತಗೆ

ಓ ನನ್ನ ಒಡೆಯನಿಗೆ
ಓ ನೇಜಿಯು ಇನ್ನು
ಓ ಅಳಿದ ಹೋಗಿದೆ
ಓ ಜನವನ್ನು ಕರಕೊಂಡು
ಓ ಬರುತ್ತಾನೆ ಇನ್ನು
ಓ ಒಡೆಯನ ಗದ್ದೆಗೆ
ಓ ತಲುಪಿದ ಇನ್ನು
ಓ ಒಡೆಯನ ಮಗ
ಓ ಕೊಳ್ಳಿ ಕುಮಾರ
ಓ ಬೆಳ್ಳಿಯ ಕೋಲು
ಓ ಹಿಡಕೊಂಡು ಇನ್ನು
ಓ ಜನವೇ ಕಡಿಮೆ
ಓ ಏನು ಆಯಿತು
ಓ ದೊಡ್ಡದೊಂದು ಕಾಡಿನಲ್ಲಿ
ಓ ಬಂದೆ ಒಡೆಯ
ಓ ಬರುವಾಗ ದಾರಿಯಲ್ಲಿ
ಓ ದೊಡ್ಡದೊಂದು ನದಿ
ಓ ದಾಟಿದೆನೆ ಒಡೆಯ
ಓ ಬೊಲ್ಲಕ್ಕೆ ಹೋದ
ಓ ಅಡ್ಡ ಬಿದ್ದೆ
ಓ ಮೊಣಕಾಲು ಪರಚಿತು
ಓ ಉದ್ದಕ್ಕೆ ಬಿದ್ದೆ
ಓ ಹಣೆ ಸ್ವಲ್ಪ ಪರಚಿತು
ಓ ನಾಳೆಯೇ ಎರಡು ಆಳು
ಓ ಕರಕೊಂಡೇ ಬರುತ್ತೇನೆ
ಓ ದಮ್ಮಯ್ಯ ದಕ್ಕಯ್ಯ
ಓ ಹಾಕಿದ ಇನ್ನು
ಓ ಬೇಲೇ

ಓ ಒಂದಾಳು ತೆಗೆದ ಓ ಬೇಲೇ

ಓ ಅಂಗಡಿಯಲ್ಲಿಟ್ಟ

ಓ ವೀಳ್ಯೆದೆಲೆ

ಓ ತೆಗೆದ ಇನ್ನು

ಕನ್ನಡದಲ್ಲಿ 'ಓಬೇಲೇ' ಕಬಿತದ ಸಾರಾಂಶ :

ಒಬ್ಬ ಧನಿಗಳು ಇರುತ್ತಾರೆ. ಅವರು ತಮ್ಮ ಗದ್ದೆಗಳಲ್ಲಿ ಹಾಕಿದ ನೇಜಿಯನ್ನು ಕಿತ್ತು ಮತ್ತೆ ನೆಡಲು ಆಳುಗಳು ಸಿಗದೆ ತೊಂದರೆಯಲ್ಲಿರುತ್ತಾರೆ. ಅವರು ತಮ್ಮ ಹೊಲೆಯ ಆಳನ್ನು ಕರೆದು ನೇಜಿ ನೆಡಲು ಹೆಣ್ಣಾಳುಗಳನ್ನು ಕರೆದು ತರಲು ಹೇಳುತ್ತಾರೆ. ಅವನು ಹಾಗೆಯೇ ಆಚೆಯ ಬೈಲಿಗೆ ಹೋಗಿ ಹೆಣ್ಣಾಳುಗಳಲ್ಲಿ ಹೇಳಿದರೆ ಅವರು ಬರಲಾರರು ಎನ್ನುತ್ತಾನೆ. ಅವನಿಗೆ ಧನಿಗಳಿಂದ ಹೆಚ್ಚಿನ ಸತ್ಕಾರ ಪಡೆಯುವ ಅಭಿಲಾಷೆಯಿಂದ ಆತ ಹಾಗೆ ಹೇಳುತ್ತಾನೆ. ಇವನು ಅವರನ್ನು ನಾಟಿಯ ಕೆಲಸಕ್ಕೆ ಕರೆಯುತ್ತಾನೆ. ಅದಕ್ಕೆ ಅವರು 'ನಾವು ಬರುವುದಿಲ್ಲ' ಗಂಡ ಕೆಲಸದಿಂದ ಬರುವಾಗ ಅಡುಗೆ ಆಗಬೇಕು, ತೊಟ್ಟಿಲಲ್ಲಿರುವ ಮಗುವಿಗೆ ಮೊಲೆ ಹಾಲು ಕೊಡಬೇಕು, ಹಾಗಾಗಿ ಬರಲಾಗುವುದಿಲ್ಲ ಎಂದು ಹೇಳುತ್ತಾಳೆ. ಮತ್ತೇ ಆತ ಒತ್ತಾಯ ಮಾಡಿದಾಗ ಆ ಆಳುಗಳು ಹೆದರಿ ಒಪ್ಪಿಕೊಂಡು ಹೊರಡುತ್ತಾರೆ, ಬರುವಾಗ ಅವನು ಒಂದು ಆಳನ್ನು ಕಳ್ಳಿಗೆ ಗುತ್ತಿಗೆಯಲ್ಲಿ ಅಡವು ಇಟ್ಟು, ಸಾಕಷ್ಟು ಕಳ್ಳು ಕುಡಿದ. ಅಲ್ಲಿಂದ ಮುಂದೆ ಬರುವಾಗ ಎಲೆ ಅಡಿಕೆ ತಿನ್ನದೆ ಅವನಿಗೆ ಬಹು ಭ್ರಮೆಯಾಯಿತು. ಅವನು ಒಂದು ಆಳನ್ನು ಒತ್ತೆಯಿಟ್ಟು ಎಲೆ ಅಡಿಕೆ ತಿನ್ನುತ್ತಾನೆ, ಕೊನೆಗೆ ಧನಿಗಳಲ್ಲಿಗೆ ಬರುತ್ತಾನೆ. ಧನಿಗಳು ಆಳುಗಳನ್ನು ಲೆಕ್ಕ ಮಾಡುವಾಗ ಕಡಿಮೆ ಇರುತ್ತಾರೆ, ಧನಿಗಳು ಕಾರಣವನ್ನು ಕೇಳಿದಾಗ, ಬರುವ ದಾರಿ ಮಧ್ಯೆ ಒಂದು ಹೊಳೆ ದಾಟುವ ಸಂದರ್ಭದಲ್ಲಿ ಬೊಳ್ಳಕ್ಕೆ ಹೋದರು ಎಂದು ಸುಳ್ಳು ಹೇಳುತ್ತಾನೆ. ಸಿಟ್ಟಿನಿಂದ ಧನಿ ಹೊಲೆಯನಿಗೆ ಹೊಡೆಯಲು ಮುಂದಾದಾಗ, ಅವನು ದಮ್ಮಯ್ಯ, ದಕ್ಕಯ್ಯ ಎಂದು ಅಂಗಲಾಚಿ ಸತ್ಯ ಸಂಗತಿಯನ್ನು ಹೇಳುತ್ತಾನೆ.

"ಓಬೇಲೇ" ಕಬಿತಕ್ಕೂ ಆ ಕಬಿತವನ್ನು ಹಾಡುವ ಸಂದರ್ಭಕ್ಕೂ ಸ್ಪಷ್ಟವಾದ ಸಂಬಂಧವಿದೆ.

ತುಳುವಿನಲ್ಲಿ ಬೇಲೆ=ಕೆಲಸ. "ಓ ಬೇಲೆ" ಓ ಕೆಲಸವೇ ಎಂದು ಅರ್ಥ. ಹೊಲಗಳಲ್ಲಿ ನೇಜಿ ನೆಡುವಾಗ ಹಾಡುವ ಹಾಡುಗಳು. 'ಕಬಿತೆ'ಗಳು. ನೇಜಿ ನೆಡುವುದಕ್ಕಾಗಿ ಹೊಲೆಯನೊಬ್ಬನು ಧನಿಗಳ ಅಪ್ಪಣೆಯಂತೆ ಆಳುಗಳನ್ನು ತರುವುದಕ್ಕೆ ಹೋಗುವ ಮತ್ತು ಆಳುಗಳನ್ನು ತರುವ ವಿಷಯವನ್ನು ಈ ' ಓ ಬೇಲೇ' ಕಬಿತವು ಒಳಗೊಂಡಿದೆ. ಇಲ್ಲಿ ಕಬಿತದ ವಸ್ತು ಮತ್ತು ಅದನ್ನು ಹಾಡುವ ಸಂದರ್ಭಗಳ ಸಂಬಂಧ ನೇರವಾಗಿ ಕಾಣಿಸುತ್ತದೆ. ಈ ರೀತಿಯ ಸ್ಪಷ್ಟ ಸಂಬಂಧ ಉಳಿದ ಕಬಿತಗಳಲ್ಲಿ ಕಾಣಿಸುವುದಿಲ್ಲ. ಈ ಕಾರಣದಿಂದಾಗಿ 'ಓ ಬೇಲೇ' ಕಬಿತವು ತುಳುನಾಡಿನಲ್ಲಿ ಸಾರ್ವತ್ರಿಕವಾಗಿ ಕಾಣಸಿಕ್ಕುತ್ತದೆ ಮತ್ತು ಜನಪ್ರಿಯವಾಗಿದೆ ಎಂದು ಭಾವಿಸಬೇಕಾಗುತ್ತದೆ. ಎಲ್ಲ ಕಬಿತಗಳನ್ನು ರೂಢಿಯಲ್ಲಿ 'ಓ ಬೇಲೆ' ಹಾಡುಗಳು

ಎಂದೂ ಕರೆಯುವ ಸಂಪ್ರದಾಯವಿದೆ. ಇದು 'ಓ ಬೇಲೇ' ಕಬಿತದ ಭೌಗೋಳಿಕವಾಗಿ ವ್ಯಾಪ್ತಿಯನ್ನು ಸೂಚಿಸುತ್ತದೆ. 'ಕಬಿತಗಳು 'ಕೆಲಸದ ಹಾಡುಗಳು' ಎನ್ನುವ ಸಂಗತಿಯೂ ಇದರಿಂದ ಗೊತ್ತಾಗುತ್ತದೆ.

ಆಭರಣ ವಿಶೇಷಗಳುಳ್ಳ ಕಬಿತಗಳು :

ಎಲ್ಯಾಲ್ ಎಲ್ಯ ಬಾಲೆ: ಅನೇಕ ಕಬಿತಗಳಲ್ಲಿ ಯಾವುದೇ ಘಟನೆಯಾಗಲೀ ಪ್ರಸಂಗವಾಗಲೀ ಇರುವುದಿಲ್ಲ. ಬರೆ ಶಬ್ದಗಳ ಸರಮಾಲೆಯಿರುವ ಕಬಿತಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುತ್ತದೆ. ಸಾಹಿತ್ಯಿಕವಾಗಿ ಯಾವುದೇ ಮಹತ್ವವೂ ಈ ಕಬಿತಗಳಿಗೆ ಇಲ್ಲ. ಆದರೆ ಇಂತಹ ಕೆಲವು ಕಬಿತಗಳಲ್ಲಿ ಹೆಂಗಸರ ಆಭರಣಗಳ ಹೆಸರುಗಳ ಪಟ್ಟಿ ಸಿಗುತ್ತದೆ. ಇಲ್ಲಿ ಕಾಣಿಸುವ ಎಷ್ಟೋ ಆಭರಣಗಳು ಇಂದು ಕಾಣಸಿಗುವುದಿಲ್ಲ. ತುಳುನಾಡಿನಲ್ಲಿ ಒಂದು ಕಾಲಕ್ಕೆ ಪ್ರಚಲಿತವಾಗಿದ್ದ ಆಭರಣಗಳನ್ನು ಈ ಕಬಿತಗಳಿಂದ ತಿಳಿದುಕೊಳ್ಳಬಹುದು.

ಉದಾ : 'ಎಲ್ಯಾಲ್ ಎಲ್ಯ ಬಾಲೆ', 'ಪೊಣ್ಣು ರಾಮಸ್ವಾಮಿ ಮಗಳಾಳ್'. 'ಡಿಂಬಿಸಾಲೆ', 'ಟ್ರೂವೆಲೇ ಬಾಲೇ ಬಾಲೆ ಪೋಲಿಯೇ' ಇತ್ಯಾದಿ ಕಬಿತಗಳು.

೧) ಎಲ್ಲಾಲ್ ಎಲ್ಲ ಬಾಲೆ:

"ಎಲ್ಯಾಲ್ ಎಲ್ಯ ಬಾಲೆ ತೆಲೆಕ್ಕೇದ ಮೋನೆದಾಳೋ ॥ಪಲ್ಲವಿ॥
ಎಲ್ಯಾಲ್ ಎಲ್ಯ ಬಾಲೆಗ್ ಅಜಿವರಣೊ ತಿರೆಪ್ಪುದ ಪೂವಾವೊಡೋ
ಎಲ್ಯಾಲ್ ಎಲ್ಯ ಬಾಲೆಗ್ ಅಜಿವರಣೊ ಬುಗುಡಿ ಅವೊಡೋ
ಎಲ್ಯಾಲ್ ಎಲ್ಯ ಬಾಲೆಗ್ ಅಜಿವರಣೊ ಉಂಗಿಲೊ ಅವೋಡೋ
ಎಲ್ಯಾಲ್ ಎಲ್ಯ ಬಾಲೆಗ್ ಅಜಿವರಣೊ ಮುಂದಲೆ ಅವೊಡೋ
ಎಲ್ಯಾಲ್ ಎಲ್ಯ ಬಾಲೆಗ್ ಅಜಿವರಣೊ ಮೂಂಕುತಿ ಅವೊಡೋ
ಎಲ್ಯಾಲ್ ಎಲ್ಯ ಬಾಲೆಗ್ ಅಜಿವರಣೊ ಕಾರಉಂಗಿಲೊ ಅವೊಡೋ
ಎಲ್ಯಾಲ್ ಎಲ್ಯ ಬಾಲೆಗ್ ಅಜಿವರಣೊ ಕಾಫಿಸರೊ ಅವೊಡೋ
ಎಲ್ಯಾಲ್ ಎಲ್ಯ ಬಾಲೆಗ್ ಅಜಿವರಣೊ ಬಂಗಾರ್‌ದ ಕಾಜಿ ಅವೊಡೋ
ಎಲ್ಯಾಲ್ ಎಲ್ಯ ಬಾಲೆಗ್ ಅಜಿವರಣೊ ಬಂಗಾರ್‌ದ ಕೇದಗೆ ಅವೊಡೋ
ಎಲ್ಯಾಲ್ ಎಲ್ಯ ಬಾಲೆಗ್ ಅಜಿವರಣೊ ತಾರೆ ಅವೊಡೋ
ಎಲ್ಯಾಲ್ ಎಲ್ಯ ಬಾಲೆಗ್ ಅಜಿವರಣೊ ಟೆಕ್ಕಿ ಅವೊಡೋ
ಎಲ್ಯಾಲ್ ಎಲ್ಯ ಬಾಲೆಗ್ ಅಜಿವರಣೊ ಮಿಸ್‌ರಿದ ಮಾಲೆ ಅವೊಡೋ
ಎಲ್ಯಾಲ್ ಎಲ್ಯ ಬಾಲೆಗ್ ಅಜಿವರಣೊ ಕೊಪ್ಪು ಸರಪಳಿ ಅವೊಡೋ

ಈ ಕಬಿತದಲ್ಲಿ "ಚಿಕ್ಕವಳು ಚಿಕ್ಕ ಹುಡುಗಿ ನಗುವಿನ ಮುಖದವಳು" ಎಂಬುದು ಪಲ್ಲವಿ. 'ಚಿಕ್ಕವಳ ಚಿಕ್ಕ ಹುಡುಗಿಗೆ ಆರು ವರಹದ (ಎಲ್ಯಾಲ್ ಎಲ್ಯ ಬಾಲೆಗ್ ಅಜಿ ವರಣೊ.......) ಇಂತಹ ಆಭರಣ ಆಗಬೇಕು' ಎಂಬ ಸೊಲ್ಲು ಅದೇ ರೀತಿಯಲ್ಲಿ ಪುನರಾವರ್ತನೆಯಾಗುತ್ರದೆ. ಆಭರಣದ ಹೆಸರೊಂದನ್ನು ಬಿಟ್ಟರೆ ಬೇರೆ ಯಾವುದೇ ಪದವೂ ಈ ಕಬಿತದಲ್ಲಿ ವ್ಯತ್ಯಾಸವನ್ನು ಪಡೆಯುವುದಿಲ್ಲ. ಇಲ್ಲಿ ಕಾಣಿಸುವ ಆಭರಣಗಳು : ತಿರ್‌ಪ್ಪದ ಪೂ, ಬುಗುಡಿ, ಉಂಗಿಲೊ, ಮುಂದಲೆ, ಮೂಂಕುತಿ, ಕಾರ್ ಉಂಗಿಲೊ, ಕಾಫಿಸರೊ, ಬಂಗಾರ್‌ದ ಕಾಜಿ, ಬಂಗಾರ್‌ದ ಕೇದಗೆ, ತಾರ್, ಟಿಕ್ಕಿ, ಮಿಸ್‌ರಿದ ಮಾಲೆ, ಕೊಪ್ಪು ಸರಪಳಿ

ಓ ಪೊಣ್ಣು ಕಲ್ಯಾಣೀ ನಮ ಪೋಯಿ ದುಂಬೂ (ಕಬಿತ) :

ಓ ಪೊಣ್ಣು ಕಲ್ಯಾಣೀ ನಮ ಪೋಯಿ ದುಂಬೂ ॥ಪಲ್ಲವಿ॥
ಪೋಯರಾಂಡ ಪೋತೊಲ್ಯಣ್ಣೀರೇ ತುತ್ತ್ಯೆರೆಂಕ್ ಸೀರೆಜ್ಜೇ
ಪೋಯರಾಂಡ ಪೋತೋಲ್ಯಣ್ಣೀರೇ ಕೈಕ್ ಕಾಜೀಲಿಜ್ಜಾಂಡೇ
ಪೋಯರಾಂಡ ಪೋತೊಲ್ಯಣ್ಣೀರೇ ಕೆಕ್ಕಿಲ್‌ಗ್ ಕರಿಯಮಣೀ ಇಜ್ಜೇ
ಪೋಯರಾಂಡ ಪೋತೊಲ್ಯಣ್ಣೀರೇ ಬಿರೆಲ್‌ಗೆಂಕ್ ಉಂಗಿಲ ಇಜ್ಜೇ
ಪೋಯರಾಂಡ ಪೋತೊಲ್ಯಣ್ಣೀರೇ ಪಾಡ್ಯರೆಂಕ್ ರವಕೆಜ್ಜೇ
ಪೋಯರಾಂಡ ಪೋತೊಲ್ಯಣ್ಣೀರೇ ಪಾಡ್ಯರೆಂಕ್ ಲಂಗ ಇಜ್ಜೇ
ಪೋಯರಾಂಡ ಪೋತೊಲ್ಯಣ್ಣೀರೇ ಪಾಡ್ಯರೆಂಕ್ ನೆಕ್ಲೀಸ್ ಇಜ್ಜೇ
ಪೋಯರಾಂಡ ಪೋತೊಲ್ಯಣ್ಣೀರೇ ಕೆಕ್ಕಿಲ್‌ಗ್ ಕಿಲಿಬಂದಿ ಇಜ್ಜೇ
ಪೋಯರಾಂಡ ಪೋತೊಲ್ಯಣ್ಣೀರೇ ಪಾಡ್ಯರೆಂಕ್ ಜೋಡು ಇಜ್ಜೇ
ಪೋಯರಾಂಡ ಪೋತೊಲ್ಯಣ್ಣೀರೇ ಪತ್ಯರೆಂಕ್ ಕೊಡೆಜ್ಜೇ
ಪೋಯರಾಂಡ ಪೋತೊಲ್ಯಣ್ಣೀರೇ ಕಾರ್‌ಗ್ ಚೈನ್ ಇಜ್ಜಾಂಡೇ
ಪೋಯರಾಂಡ ಪೋತೊಲ್ಯಣ್ಣೀರೇ ಸೊಂಟೊಗು ಪಟ್ಟೀ ಎಂಕ್‌ಜ್ಜೇ
ಪೋಯರಾಂಡ ಪೋತೊಲ್ಯಣ್ಣೀರೇ ಪತ್ಯರೆಂಕ್ ಟುವಲ್ ಇಜ್ಜೇ
ಪೋಯರಾಂಡ ಪೋತೊಲ್ಯಣ್ಣೀರೇ ಪತ್ಯರೆಂಕ್ ಬ್ಯಾಗ್ ಇಜ್ಜೇ
ಪೋಯರಾಂಡ ಪೋತೊಲ್ಯಣ್ಣೀರೇ ಕೈಕ್ ಕಾಜೀ ಎಂಕ್‌ಜ್ಜೇ
ಪೋಯರಾಂಡ ಪೋತೊಲ್ಯಣ್ಣೀರೇ ಕೈಕ್ ವಾಚೀ ಎಂಕ್ ಇಜ್ಜೇ
ಓ ಪೊಣ್ಣು ಕಲ್ಯಾಣೀ ನಮ ಪೋಯಿ ದುಂಬೂ

ಕನ್ನಡ ಅನುವಾದ

ಓ ಹೆಣ್ಣೇ ಕಲ್ಯಾಣೀ ನಾವು ಹೋಗುವ ಮುಂದೇ ॥ಪಲ್ಲವಿ॥

ಹೋಗಲು ಹೋಗಬಹುದಿತ್ತಣ್ಣನವರೇ ಉಡಲು ನನಗೆ ಸೀರೆ ಇಲ್ಲವಲ್ಲಾ

ಹೋಗಲು ಹೋಗಬಹುದಿತ್ತಣ್ಣನವರೇ ಕೈಗೆ ಬಳೆ ಇಲ್ಲವಲ್ಲಾ

ಹೋಗಲು ಹೋಗಬಹುದಿತ್ತಣ್ಣನವರೇ ಕುತ್ತಿಗೆಗೇ ಕರಿಯಮಣಿ ಇಲ್ಲವಲ್ಲಾ

ಹೋಗಲು ಹೋಗಬಹುದಿತ್ತಣ್ಣನವರೇ ಬೆರಳಿಗೆ ನನಗೆ ಉಂಗುರ ಇಲ್ಲವಲ್ಲಾ

ಹೋಗಲು ಹೋಗಬಹುದಿತ್ತಣ್ಣನವರೇ ಹಾಕಲು ನನಗೆ ರವಿಕೆ ಇಲ್ಲವಲ್ಲಾ

ಹೋಗಲು ಹೋಗಬಹುದಿತ್ತಣ್ಣನವರೇ ಹಾಕಲು ನನಗೆ ಲಂಗ ಇಲ್ಲವಲ್ಲಾ

ಹೋಗಲು ಹೋಗಬಹುದಿತ್ತಣ್ಣನವರೇ ಹಾಕಲು ನನಗೆ ನೆಕ್ಲೇಸು ಇಲ್ಲವಲ್ಲಾ

ಹೋಗಲು ಹೋಗಬಹುದಿತ್ತಣ್ಣನವರೇ 'ಕುತ್ತಿಗೆಗೆ ಕಿಲಬಂದಿ' ಇಲ್ಲವಲ್ಲಾ

ಹೋಗಲು ಹೋಗಬಹುದಿತ್ತಣ್ಣನವರೇ ಹಿಡಿಯಲು ನನಗೇ ಕೊಡೆ ಇಲ್ಲವಲ್ಲಾ

ಹೋಗಲು ಹೋಗಬಹುದಿತ್ತಣ್ಣನವರೇ ಕಾಲಿಗೆ ಚೈನು ಇಲ್ಲವಲ್ಲಾ

ಹೋಗಲು ಹೋಗಬಹುದಿತ್ತಣ್ಣನವರೇ ಸೊಂಟಕ್ಕೆ ಪಟ್ಟಿ ಇಲ್ಲವಲ್ಲಾ

ಹೋಗಲು ಹೋಗಬಹುದಿತ್ತಣ್ಣನವರೇ ಹಿಡಿಯಲು ಕರವಸ್ತ್ರ ಇಲ್ಲವಲ್ಲಾ

ಹೋಗಲು ಹೋಗಬಹುದಿತ್ತಣ್ಣನವರೇ ಹಿಡಿಯಲು ನನಗೆ ಬ್ಯಾಗು ಇಲ್ಲವಲ್ಲಾ

ಹೋಗಲು ಹೋಗಬಹುದಿತ್ತಣ್ಣನವರೇ ಕೈಗೆ ಬಳೆ ಇಲ್ಲವಲ್ಲಾ

ಹೋಗಲು ಹೋಗಬಹುದಿತ್ತಣ್ಣನವರೇ ಕೈಗೆ ವಾಚು ಇಲ್ಲವಲ್ಲ

ಓ ಹೆಣ್ಣೆ ಕಲ್ಯಾಣಿ ನಾವು ಹೋಗುವಾ ಮುಂದೇ

೨) ಓಯ್ಯ (ಹೋಯ್ಯ)

ಹೊಲದಲ್ಲಿ ನೇಜಿಯನ್ನು ನೆಟ್ಟು, ಕೊನೆಯಾಗುವ ವೇಳೆಗೆ ಹೇಳುವ ಕಬಿತ 'ಓಯ್ಯ' (ಹೋಯ್ಯಾ), 'ಓಯ್ಯ' ಹೇಳುತ್ತಾರೆ, ಎಂದರೆ ನೇಜಿ ನೆಟ್ಟು ಮುಗಿಯಿತು ಎಂದು ಅರ್ಥ, ಈ ಕಬಿತದಲ್ಲೂ ವಿಶೇಷವಾದ ಸಾಹಿತ್ಯಾಂಶ ಇಲ್ಲ, ಕೆಲಸದ ಮುಕ್ತಾಯದಲ್ಲಿ ಇರುವ ತ್ವರೆಯ ಪ್ರವೃತ್ತಿಯನ್ನು ಈ ಕಬಿತದ ಲಯದಲ್ಲಿ ಕಾಣಬಹುದು. 'ಓಯ್ಯ ಓಯ್ಯ' ಎನ್ನುವ ಪಲ್ಲವಿಯಂತೆಯೇ ಉಳಿದ ಸಾಲುಗಳನ್ನು ಬೇಗ ಬೇಗನೆ ಹೇಳುತ್ತಾರೆ, ಈ ಕಬಿತದ ಸಾಮಾನ್ಯ ಪಾಠ ಹೀಗಿದೆ (ಪ್ರತೀವಾಕ್ಯದ ಆರಂಭದಲ್ಲಿ ಓ' ಎಂದು ಇರುತ್ತದೆ).

"ಓಯ್ಯ ಓಯ್ಯ ॥ಪಲ್ಲವಿ॥	ವರ್ಸೊನೇ ಅತೆಂಡೆ
ಓ ನಡಿ ಒಂಜಿ ನಟ್ಟಿ	ನಂಕಾಂಡ ಪೋವೊಡು
ಓಟೆದ ಪುಂಡೆಲ್ದ ಲೆಕೊ	ಉಂಡೊಂಜಿ ಕೇಪುಳ್ದಮರ

ಲಕ್ಕಿದೆ ಬರೊಡು
ಮಲ್ಲೊಂಜಿ ಕಂಡೊ
ಮಲ್ಲ ಬಾರಾಪಿ ಕಂಡೊ
ಕೇಂಡಾರೋ ಮಂದೆ
ನಂಕಾಂಡ ಪೋವೊಡು
ಕಣಂದೂರ ಕಟ್ಟಗೆ
ಒಂಜಿ ಪುಳಿತ್ತ
ಚಬಟೇನೇ ಪತ್ತೊಡು
ನಂಕಾಂಡ ಪೋವೊಡು
ಕಡೇ ಸ್ವಾಲ್ಯ ದೇವೆರೇ
ದೇವಸ್ಥಾನ ಮಗೆರೆದೆ
ಆಜಿ ಮೂಜಿ ಪದ್ರಾಡೆ
ವರ್ಸೊನೇ ಅತೆಂಡೆ
ಕುಡುಂಬಾನ ಇಂಗ್ರೇಜಿ
ಮಗ್‌ರ್‌ದ್ ಅಜಿಮೂಜಿ ವರ್ಸೊನೇ
ಭೂತೋಲೆ ಬರಿಮಾಡೊ
ಮಗ್‌ರ್‌ದ್ ಅಜಿ ಮೂಜಿ

ಕಡ್ಪಿಯಾರೆಂದ್ ಪೋವೊಡು
ಕುದುರೆ ವರ್ಗಾಂತ ಗಡಿಯೆ
ಔಳಾಂಡ್ ದೀಡ್‌ನಗ
ಆನೆ ವರ್ಗಾಂತ ಗಡಿಯೇ ಲಕ್ಕುಂಡು
ಐನೊಂಜಿ ನಡುತುಂಡು
ದೆತ್ತೆದೆ ದೇವೆತೆಡೆ
ದೇವಸ್ಥಾನೊ ಕಟ್ಪಾವೊಡು
ಐನ್ ಕಡೆತುಂಡು ದೆತ್ತೆದೆ
ಭೂತೊಲೆಗ್ ಬದಿಮಾಡೊ ಕಟ್ಟವೊಡು
ಕೊಡಿತುಂಡು ದೆತ್ತೆದೆ
ಕುಡುಂಬಾಗೆ ಇಂಗ್ರೇಜಿ ಕಟ್ಟವೊಡು
ನಮ್ಮನೆ ನಡಿ ಒಂಜಿ ನಟ್ಟಿ
ಬಂಗಬಾರೆ ಸಿಂಗಬಾರೆ
ಸಿರಿಯಾಂಡ ಒಯ್ಯ್‌ದ
ಕೈಲೆನೇ ಪಾಡಿಲೆಕ್ಕೊ
ಬಾರೆದ ಕುರಳ್ ಬರೊಡು
ಓಯ್ಯ ಓಯ್ಯ ॥

ಈ ಕಬಿತದ ಕನ್ನಡ ರೂಪಾಂತರ:

ಹೋಯ್ಯ ಹೋಯ್ಯ ॥ ಪಲ್ಲವಿ ॥
ಓ ನಟ್ಟಿ ಒಂದು ನಾಟಿ
ಬಿದಿರಿನ ಹಿಂಡಿಲಿನಂತೆ
ಎದ್ದು ಬರಬೇಕು
ದೊಡ್ಡದೊಂದು ಗದ್ದೆ
ಹೆಚ್ಚು ಭತ್ತವಾಗುವ ಗದ್ದೆ
ಕೇಳಿದ್ದೀರೋ ಜನಗಳೇ
ನಮಗಾದರೇ ಹೋಗಬೇಕು
ಕಣಂದೂರ ಕಟ್ಟಕ್ಕೆ
ಒಂದು ಹುಳಿಯ

ಮಗುಚಿ ಆರುಮೂರು ವರ್ಷವೇ ಆಯಿತು.
ನಮಗಾದರೆ ಹೋಗಬೇಕು
ಒಂದು ಕಿಸಗಾರದ ಮರ
ಕಡಿಯಲೆಂದು ಹೋಗಬೇಕು
ಕುದುರೆ ವರ್ಗದ ಗಡಿಯು
ಅಲ್ಲಾದರೆ ಇಡುವಾಗ
ಆನೆ ವರ್ಗದ ಗಡಿಯೇ ಏಳುತ್ತದೆ.
ಅದರ ಒಂದು ನಡುತುಂಡು
ತೆಗೆದು ದೇವರಿಗೆ ದೇವಸ್ಥಾನ ಕಟ್ಟಿಸಬೇಕು
ಅದರ ಕಡೆತುಂಡು ತೆಗೆದು

ಚಬಟೆಯನ್ನೇ ಹಿಡಿಯಬೇಕು   ಭೂತಗಳಿಗೆ ಬದಿಮಾಡ ಕಟ್ಟಿಸಬೇಕು
ನಮಗಾದರೇ ಹೋಗಬೇಕು   ತುದಿಯ ತುಂಡು ತೆಗೆದುಕೊಂಡು
ಕಡೇಶ್ವಾಲ್ಯ ದೇವರ   ಕುಡುಂಬನಿಗೆ ಇಗರ್ಜಿ ಕಟ್ಟಿಸಬೇಕು
ದೇವಸ್ಥಾನ ಮಗುಚಿ   ನಮ್ಮದೇ ನಟ್ಟ ಒಂದು ನಾಟಿ
ಆರು ಮೂರು ಹನ್ನೆರಡು   ಬಂಗಬಾಳೆ ಸಿಂಗಬಾಳೆ
ವರ್ಷವೇ ಆಯಿತು   ಸಿಹಿಯಾದರೆ ಎಳೆದು
ಕುಡುಂಬನ ಇಗರ್ಜಿ   ಗೊನೆಯನ್ನೇ ಹಾಕಿದಂತೆ
ಮಗುಚಿ ಆರು ಮೂರು ವರ್ಷವೇ   ಭತ್ತದ ತೆನೆಯೇ ಬರಬೇಕು
ಭೂತಗಳ ಬದಿಮಾಡ   ಹೋಯ್ಯ ಹೋಯ್ಯ ॥

ನೇಜಿ ನೆಟ್ಟು ಮುಗಿಯುವ ಹಂತದಲ್ಲಿ ಈ ಕಬಿತವನ್ನು ಹೇಳುವುದರಿಂದ, ಪೈರು ಚೆನ್ನಾಗಿ ಬೆಳೆಯಬೇಕೆಂಬ ಹಾರೈಕೆ ಇಲ್ಲಿ ಕಾಣಿಸುತ್ತದೆ. ದೇವರು, ಭೂತಗಳ ಸ್ಮರಣೆ–ಬೆಳೆ ಚೆನ್ನಾಗಿ ಬರಬೇಕು ಎಂಬ ಹಾರೈಕೆ. ಇವುಗಳ ಸಂಬಂಧವನ್ನು ನೋಡಬಹುದು. ಕೇಪುಳ್ದ ಮರ (ಕೀಸ್ಗಾರ ಮರ) ವನ್ನು ಒಳ್ಳೆಯ ಕೆಲಸಗಳಿಗೆ–ದೇವಸ್ಥಾನ, ಭೂತದ ಬದಿಮಾಡ, ಇಗರ್ಜಿ–ದೇವಸ್ಥಾನಗಳ ರಚನೆಗಳಿಗೆ ಉಪಯೋಗಿಸುತ್ತಾರೆ. ಈ ವಿಚಾರ ಈ ಕಬಿತದಲ್ಲಿ ಬಂದಿದೆ. ಆನೆಗಡಿ ಮತ್ತು ಕುದುರೆಗಡಿ ಮರವನ್ನು ಕಡಿಯುವಾಗ ಗಡಿಗಳ ವಿಧಗಳು: ದೊಡ್ಡದು ಮತ್ತು ಸಣ್ಣದು ಎಂಬ ಅರ್ಥ, ಬಿದಿರಿನ ಹಿಂಡಿಲು ಮತ್ತು ಬಾಳೆಗೊನೆ–ಸಮೃದ್ಧಿಯ ಸಂಕೇತಗಳು, ಬಿದಿರಿನ ಹಿಂಡಿಲಿನಲ್ಲಿ ಅನೇಕ ಬಿದಿರುಗಳು ಇರುತ್ತವೆ. ಬಾಳೆಗೊನೆಯಲ್ಲಿ ಅನೇಕ ಬಾಳೆಕಾಯಿಗಳು ಇರುತ್ತವೆ. ಹಾಗೆಯೇ ಭತ್ತದ ತೆನೆಯಲ್ಲಿ ಹೆಚ್ಚು ಭತ್ತದ ಕುಂಡಿಗೆಗಳು ಬರಬೇಕು ಎನ್ನುವ ಆಶಯ ಇಲ್ಲಿ ವ್ಯಕ್ತವಾಗಿದೆ. (ಬೆಳ್ತಂಗಡಿ ತಾಲೂಕು ಪುದುವೆಟ್ಟು ಗ್ರಾಮದ ಎಲ್ಯಪ್ಪೆ ಮತ್ತು ಪುತ್ತೂರು ತಾಲೂಕಿನ ಸಿರಿಬಾಗಿಲು ಗ್ರಾಮದ ದೇವಕಿ ಎಂಬವರಿಂದ ಈ ಮೇಲಿನ ಕಬಿತಗಳನ್ನು ಸಂಗ್ರಹಿಸಲಾಗಿದೆ.)

ತುಳು ಜನಪದ ಕಥೆಗಳು :

ಎಲ್ಲ ಜನಪದ ಸಾಹಿತ್ಯದಂತೆಯೇ ತುಳು ಜನಪದ ಸಾಹಿತ್ಯದಲ್ಲಿಯೂ ಜನಪದ ಕತೆಗಳದ್ದು ಒಂದು ಪ್ರಮುಖ ಪ್ರಕಾರ, ತುಳುವಿನಲ್ಲಿ ಜನಪದ ಕಥೆಗಳನ್ನು 'ಕಥೆ' ಅಥವಾ 'ಅಜ್ಜಿಕಥೆ' ಎಂದು ಕರೆಯುತ್ತಾರೆ. ತುಳು ಜನಪದ ಕತೆಗಳನ್ನು– 'ಕಥೆ' ಅಥವಾ 'ಅಜ್ಜಿ ಕಥೆ'ಗಳನ್ನು ಹೆಚ್ಚಾಗಿ ರಾತ್ರಿಯ ವೇಳೆ ಹೇಳುತ್ತಾರೆ. ಅಜ್ಜಿ, ತಾಯಿ ಮುಂತಾದ ವಯಸ್ಸಾದ ಹೆಂಗಸರು ಸಾಮಾನ್ಯವಾಗಿ ಕಥೆ ಹೇಳುವವರು. ಗಂಡಸರೂ ಕಥೆ ಹೇಳುವುದಿದೆ. ಆದರೆ ಬಹಳ ಕಡಿಮೆ, ಮಕ್ಕಳಿಗೆ ಅಥವಾ ಮೊಮ್ಮಕ್ಕಳಿಗೆ ರಾತ್ರಿಯ ವೇಳೆ ನಿದ್ದೆ ಮಾಡಿಸುವ ವೇಳೆ ಕಥೆ ಹೇಳುವ ಪದ್ಧತಿ ಇದೆ. ಮನೋರಂಜನೆಯ ಉದ್ದೇಶದಿಂದಲೇ ಸಮಯ

ಕಳೆಯುವ ರೀತಿಯಲ್ಲಿ ಕತೆಗಳನ್ನು ಹೇಳಲಾಗುತ್ತದೆ. ಈ ಕಥೆ ಹೇಳುವ ಕ್ರಮಗಳು ಈಗ ಕಡಿಮೆಯಾಗುತ್ತಾ ಬಂದಿದೆ.

೧. ಇಲಿಯ ಕತೆ:

ಒಂದಾನೊಂದು ಊರಿನಲ್ಲಿ ಒಬ್ಬಳು ತಾಯಿ ಮತ್ತು ಮಗಳು. ಮಗಳು ಯಾವಾಗಲೂ ಒಂದು ಬಿಲದ ಬಾಗಿಲಿಗೆ ಮೂತ್ರ ಮಾಡಲು ಹೋಗುವುದು. ಆವಾಗ ಒಂದು ಇಲಿ ಬಂದು ಅವಳಲ್ಲಿ ಮಾತನಾಡುವುದು. ಮತ್ತೆ ರಾತ್ರಿ ಯಾವಾಗಲೂ ಇವಳ ಹತ್ತಿರ ಬರುವುದು. ಇದು ತಾಯಿಗೆ ಗೊತ್ತೇ ಇರಲಿಲ್ಲ. ಈ ಇಲಿ ಮತ್ತು ಹುಡುಗಿ ಗಂಡ ಹೆಂಡತಿ. ಈ ವಿಚಾರವು ತಾಯಿಗೆ ಗೊತ್ತಿರಲಿಲ್ಲ. ಇಲಿ ರಾತ್ರಿ ಬಂದು ಮನೆಯಲ್ಲಿ ಎಲ್ಲಾ ಅಡಿಮೇಲು ಮಾಡುವುದು. ಬಾರಿ ಜೋರು ಉಂಟು. ಇದನ್ನು ಒಂದು ದಿನ ಕಾಲಿನಲ್ಲಿ ಹಿಡಿದು ಕೊಲ್ಲಬೇಕು. ಎಂದು ತಾಯಿ ಹೇಳಿದಳು. ಯಾವಾಗಲೂ ಇವಳು ಅದನ್ನು ಹಿಡಿಬೇಕು ಎಂದು ಎದ್ದು ಹೋಗುವಾಗ ಅದು ಹೋಗುತ್ತದೆ. ಮತ್ತೊಂದು ದಿನ ಕೈಗೆ ಸ್ವಲ್ಪ ಕತ್ತಿಯಿಂದ ಗಾಯ ಮಾಡಿಕೊಂಡಳು. ಎಣ್ಣೆಯನ್ನು ಗಾಯಕ್ಕೆ ಮುಟ್ಟಿಸಿ ಕುಳಿತುಕೊಂಡಳು. ಊಟ ಮಾಡಿ ಪಾತ್ರೆಯೆಲ್ಲ ಮುಚ್ಚಳ ಇಟ್ಟು ಹಾಗೆ ಮಲಗಿದರು. ಮಗಳಿಗೆ ನಿದ್ರೆ ಬಂತು, ತಾಯಿಗೆ ಕೈ ನೋವು ಇದ್ದ ಕಾರಣ ನಿದ್ದೆನೆ ಬರಲಿಲ್ಲ. ಮಧ್ಯರಾತ್ರಿ ಆಗುವಾಗ ಇಲಿ ಬಂತು. ಬಂದು ದಡ ಬಡ ಮಾಡುವಾಗ ಮೆಲ್ಲ ಎದ್ದು ಇಲಿಗೆ ಒಂದು ಕೊಟ್ಟಳು. ಇಲಿ ಸತ್ತು ಹೋಯಿತು, ಅದನ್ನು ಒಂದು ಕಡೆ ಇಟ್ಟು ಮಲಗಿದಳು. ಬೆಳಗ್ಗೆ ಎದ್ದು ಮಗಳಲ್ಲಿ ಹೇಳಿದಳು–ನೋಡು ಅಲ್ಲಿ ಒಂದು ಇಲಿ ಇದೆ. ಅದನ್ನು ಕಾಯಿಸಿ ಪದಾರ್ಥ ಮಾಡು ಎಂದಳು. ಇವಳು ಅದನ್ನು ಹಿಡಿದುಕೊಂಡು ಹೊರಗೆ ಹೋಗಿ– ಅಯ್ಯೋ ನನ್ನ ಗಂಡನ ಕಣ್ಣೇ, ಅಯ್ಯೋ ನನ್ನ ಗಂಡನ ಕಾಲೇ, ಅಷ್ಟಾಗುವಾಗ ತಾಯಿ ಏನು ನಿನ್ನದು ಎಂದು ಕೇಳಿದಳು. ಅಲ್ಲ ನನಗೆ ಎಲ್ಲಿಯೂ ನೆಂಟರ ಕಟ್ಟಲಿಕ್ಕೆ ಇಲ್ಲ ಎಂದು ಹೇಳಿದಳು. ಮತ್ತೆ ಪುನಃ ಅಯ್ಯೋ ನನ್ನ ಗಂಡನ ಕೈಯೆ ಎಂದು ಹೇಳುತ್ತಾಳೆ. ಆಗ ಕೂಡ ತಾಯಿ ಏನು ಎಂದು ಕೇಳುತ್ತಾಳೆ. ಆವಾಗ ನನಗೆ ಒಂದು ಒಳ್ಳೆಯ ಸೀರೆ ಇಲ್ಲ ಎಂದಳು. ಅಯ್ಯೋ ನಿನ್ನ ಮೈಯೇ ಎಂದಳು. ತಾಯಿ ಮತ್ತೆ ಏನು ಎಂದು ಕೇಳಿದಳು. ಅಲ್ಲ ನನಗೆ ಬಣ್ಣ ಬಂಗಾರ ಇಲ್ಲ ಎಂದಳು. ಮತ್ತೆ ಅವಳು ಇಲಿಯನ್ನು ಜೀವ ಮಾಡಿ ಇಲಿಯ ಒಟ್ಟಿಗೆ ಹೋದಳು.

೨. ನಾಯಿಯ ಕತೆ :

ಒಂದಾನೊಂದು ಊರಿನಲ್ಲಿ ಒಬ್ಬ ಅರಸು. ಆ ಅರಸ ಒಂದು ನಾಯಿಯನ್ನು ತಂದು ಅದಕ್ಕೆ ಒಳ್ಳೆಯ ಬುದ್ಧಿ ಕಲಿಸಿ ಸಾಕಿದ. ಈ ಅರಸುವಿಗೆ ಏನು ಬೇಕಾದರೂ ಅದರ ಕೊರಳಿಗೆ ಒಂದು ಚೀಟಿ ಬರೆದು ಅಂಗಡಿಗೆ ಕಳುಹಿಸುವುದು, ಹಾಗೆಯೇ ಅಂಗಡಿಗೆ ಹೋಗಿ ಚೀಟಿಯನ್ನು ಕೊಟ್ಟು ಬೇಕಾದ ಸಾಮಾನನ್ನು ನಾಯಿಯ ಕೊರಳಿಗೆ ಕಟ್ಟಿ ಬಿಡುವುದು. ನಾಯಿ ಅದನ್ನು ಹಿಡಿದುಕೊಂಡು ಓಡಿಕೊಂಡೆ ಬರುವುದು. ಅರಸ ಇಲ್ಲಿ ಅದನ್ನು ಬಿಚ್ಚಿಸಿ ತೆಗೆದುಕೊಳ್ಳುವುದು.

ಹಾಗೆಯೇ ದಿನ ನಡೆಯುತ್ತಾ ಇತ್ತು. ಒಂದು ದಿನ ಹೀಗೆ ನಾಯಿಯ ಕೊರಳಿಗೆ ಚೀಟಿ ಬರೆದು ಕಳುಹಿಸಿದ. ನಾಯಿ ಹೋಯಿತು. ಹೋದಾಗ ಗದ್ದೆಯಲ್ಲಿ ಹೆಂಗಸರು ನೇಜಿಯ ಕತೆಯನ್ನು ಹೇಳುತ್ತಾ ಇದ್ದರು. ಅಲ್ಲಿ ಸ್ವಲ್ಪ ಕುಳಿತುಕೊಂಡು ಮತ್ತೆ ಅಂಗಡಿಗೆ ಹೋಗಿ ಬೇಗ ಬರಬೇಕು ಎಂದು ಹೋಯಿತು. ಬೇಗ ಬಂದು ಸ್ವಲ್ಪ ಕತೆ ಕೇಳಬೇಕು ಎಂದು ಓಡಿಕೊಂಡು ಹೋಯಿತು. ಹೋಗಿ ಚೀಟಿಯನ್ನು ಕೊಟ್ಟು ಸಾಮಾನು ಹಿಡಿದುಕೊಂಡು ಬಂದು ನೇಜಿ ನೆಡುವಲ್ಲಿಗೆ ಬಂತು. ಗದ್ದೆಯ ಬದುವಿನಲ್ಲಿ ಕುಳಿತುಕೊಂಡಿತು, ತುಂಬ ಸಮಯ ಕಳೆಯಿತು, ನೇಜಿಯವರು ಹೋಗುವವರೆಗೆ ಕುಳಿತುಕೊಂಡಿತು, ಮತ್ತೆ ಸಂಜೆಯಾದಾಗ ಓಡಿತು.

ಅರಸು ಏನು ಬರಲಿಲ್ಲ ಎಂದು ಕಾದುಕೊಂಡಿದ್ದ, ಹೋಗಿ ಚೀಟು ಮತ್ತು ಸಾಮಾನನ್ನು ಕೊಟ್ಟಿತು, ಅದನ್ನು ತೆಗೆದುಕೊಂಡು–ನೀನು ಅಷ್ಟು ಹೊತ್ತು ಏನು ಮಾಡಿದ್ದು ಎಂದು ಕೇಳಿದ, ನಾನು ಹೋಗುವಾಗ ನೇಜಿಯವರು ಕತೆ ಹೇಳುತ್ತಿದ್ದರು, ಹಾಗೆ ಸ್ವಲ್ಪ ಕೇಳಿದೆ, ಮತ್ತೆ ಹಿಂದೆ ಬರುವಾಗಲೂ ಕತೆ ಹೇಳುತ್ತಿದ್ದರು. ಹಾಗೆ ಕತೆ ಕೇಳುತ್ತಾ ಕುಳಿತದ್ದು ಎಂದ. ಅಷ್ಟಾಗುವಾಗ ಒಂದು ಚಾಟಿಯನ್ನು ತೆಗೆದುಕೊಂಡು – ಎಂಥ ನಿನಗೆ ನಾಯಿಗೆ ಕಥೆ. ನಾಯಿ ಸುಮ್ಮನೆ ಇತ್ತು. ಮತ್ತೆ ಪುನಃ ನೀನು ನಾಯಿ, ನಿನಗೆ ನಾಯಿಗೆ ಕತೆಯಾ ಎಂದು ಹೇಳಿ ನಾಲ್ಕು ಬಿಟ್ಟ.

೩.ಮಾಯದ ಹೆಣ್ಣು :

ಒಬ್ಬ ಅರಸನಿಗೆ ಏಳು ಜನ ಮಕ್ಕಳು. ಆರು ಜನ ಗಂಡುಮಕ್ಕಳು, ಒಬ್ಬಳು ಹೆಣ್ಣು. ಅದರಲ್ಲಿ ಐದು ಜನರಿಗೆ ಮದುವೆಯಾಯಿತು. ಒಬ್ಬನಿಗೆ ಮದುವೆ ಆಗಲಿಲ್ಲ. ತಂಗಿಯ ತಲೆಕೂದಲಿಗೆ ಮುತ್ತು ಪೋಣಿಸಬೇಕು ಎಂದು ಐದು ಜನ ಅಣ್ಣಂದಿರು ಹೋದರು. ಆಗ ದೊಡ್ಡವನ ಹೆಂಡತಿ ಮೈದುನನ್ನು ಕರೆದು ನಿನ್ನ ತಲೆಯ ಹೇನು ತೆಗೆಯುವೆ ಎಂದಳು. ಆಯಿತು ಎಂದ, ತಲೆಯ ಒಂದು ಕಡೆಯ ಹೇನು ತೆಗೆದು ಮತ್ತೊಂದು ಕಡೆಯ ಹೇನು ತೆಗೆಯಲು ತಿರುಗಿ ಮಲಗುವಾಗ–ಅಬ್ಬಾ ನಿನ್ನ ದೊಡ್ಡ ಮೊಲೆ ತಲೆಗೆ ತಾಗಿತೆ ಎಂದ. ಅವಳಿಗೆ ಕೋಪ ಬಂತು, ನೀನು ಎಲ್ಲಿ ಗುಬ್ಬಿ ಮೊಲೆಯ ಹೆಣ್ಣನ್ನು ತರುತ್ತಿ ನೋಡುವ ಎಂದಳು. ಆಗಲೆ ಎದ್ದು ಹೊರಟ, ಹೋಗುವಾಗ ಎಲ್ಲಿಗೆ ಹೋಗುವುದೆಂದು ಆಲೋಚನೆ ಮಾಡುತ್ತಲೇ ಹೋದ, ಹೋಗುವಾಗ ಒಂದು ಕಡೆ ಈಶ್ವರ ದೇವರು ದನ ಮೇಯಿಸುತ್ತಾ ಇದ್ದರು, ದೂರ ಹೋಗುವುದು ಎಂದು ಕೇಳಿದರು, ಅಷ್ಟಾಗುವಾಗ– ನನಗೆ ಹೀಗೆ ಹೀಗೆ ಅತ್ತಿಗೆ ಹೇಳಿದರು. ಅದಕ್ಕೆ ನನಗೊಂದು ಗುಬ್ಬಿ ಮೊಲೆಯ ಹೆಣ್ಣಾಗಬೇಕು ಹಾಗೆ ಯಾರಾದರೂ ಕೊಡುತ್ತಾರೊ ಎಂದು ಹುಡುಕಿಕೊಂಡು ಬಂದದ್ದು ಎಂದ. ಹಾಗಾದರೆ ನನ್ನ ಹೇನು ತೆಗೆ ನಿನಗೊಂದು ದಾರಿ ತೋರಿಸುತ್ತೇನೆಂದು ಹೇಳಿದರು, ಹೇನು ತೆಗೆದ ಅವನಿಗೆ ಮೂರು ಕಲ್ಲು ಮಂತ್ರಿಸಿಕೊಟ್ಟರು. ಸ್ವಲ್ಪ ದೂರ ಹೋಗುವಾಗ ಒಂದು ಮನೆ ಸಿಗುತ್ತದೆ. ಅಲ್ಲಿ ಈ ಕಲ್ಲನ್ನು ಹಾಕಿ–ನನಗೊಂದು ಗುಬ್ಬಿ ಮೊಲೆಯ ಹೆಣ್ಣು ಸಿಗಬೇಕು ಎಂದು ಕಲ್ಲು ಹಾಕು, ಆಗ ಅವರು ನಿನ್ನನ್ನು ನೋಡಿ ಕರೆಯುತ್ತಾರೆ ಎಂದರು, ಹಾಗೆಯೇ ಹೋಗಿ ಮನೆ ಕಾಣುವಾಗ

ಕಲ್ಲನ್ನು ಹಾಕಿದ. ಅವರು ನೋಡಿ ಆತನನ್ನು ಕರೆದರು, ಯಾರು ಮಹರಾಯ ಅಲ್ಲಿ ಬಾ ಬಾ ಎಂದರು, ಕರೆದು ನೀರು ಕೊಟ್ಟು ಮಾತನಾಡಿ ಆದಾಗ ನಾನು ಅತ್ತಿಗೆಯ ಕೋಪದಿಂದ ಹೀಗಿಗೆ ಬಂದೆ ಎಂದ. ಅದಕ್ಕೆ ಯಾಕೆ ನೀನು ಹೆದರುತ್ತಿಯ ಹೆಣ್ಣು ನಮ್ಮ ಮನೆಯಲ್ಲಿದೆ. ನಾವು ಕೊಡುತ್ತೇವೆ ಎಂದರು ಬಾರಿ ಒಳ್ಳೆಯ ಹುಡುಗಿ ಹಾಗೆ ಅವನಿಗೆ ಮದುವೆ ಮಾಡಿ ಸ್ವಲ್ಪ ಸಮಯ ಅಲ್ಲೆ ಇದ್ದರು. ಮತ್ತೆ ಒಮ್ಮೆ ಮನೆಗೆ ಹೋಗಿ ಬನ್ನಿ ಎಂದು ಕಳುಹಿಸಿದರು. ಬರುವಾಗ ಬಾರೀ ಬಿಸಿಲು ಹಾಗೆ ಒಂದು ಮರದ ಅಡಿಯಲ್ಲಿ ಕುಳಿತರು. ಆತನಿಗೆ ಕುಳಿತಲ್ಲಿಗೆ ನಿದ್ರೆ ಬಂತು, ಅವಳು ಕುಳಿತುಕೊಂಡೆ ಇದ್ದಳು, ಅಷ್ಟಾಗುವಾಗ ಒಬ್ಬಳು ಕುಂಬಾರ ಮುದುಕಿ ಅಲ್ಲಿಂದ ಹೋಗುವವಳು, ಇವಳನ್ನು ನೋಡಿ-ಅಯ್ಯೋ ಮಗ ಯಾಕೆ ಕುಳಿತುಕೊಂಡಿದ್ದಿ ಮುಖವೆಲ್ಲ ಬಾಡಿದೆ, ಕೆರೆಯಲ್ಲಿ ನೀರುಂಟು ಬಾ ಕೈ ಕಾಲು ಮುಖ ತೊಳೆದುಕೊಂಡು ಬರುವ ಎಂದಳು. ಹಾಗೆ ಕೆರೆ ದಡಕ್ಕೆ ಹೋದಳು, ನಿನ್ನ ಬಟ್ಟೆ ಬಂಗಾರ ಎಲ್ಲ ತೆಗೆದಿಡು, ಅದು ನೀರು ತಾಗಿದರೆ ಹಾಳಾಗಬಹುದು, ನಿನಗೆ ಬೇರೆ ಬಟ್ಟೆ ನಾನು ಕೊಡುತ್ತೇನೆ ಎಂದು ಮುದುಕಿ ಹೇಳಿತು, ಹಾಗೆ ಇವಳು ಮುದುಕಿ ಕೊಟ್ಟ ಬಟ್ಟೆಯನ್ನು ಉಟ್ಟು ಕೆರೆಗೆ ಇಳಿದಳು. ಒಂದೊಂದೆ ಮೆಟ್ಟು ಇಳಿ ಮಗ ಎಂದು ಮುದುಕಿ ಹೇಳಿ ಅವಳನ್ನು ಕೆರೆಗೆ ಮುದುಕಿ ದೂಡಿತು. ಅವಳು ಸತ್ತೆ ಹೋದಳು. ಮುದುಕಿ ಅಲ್ಲಿಂದ ಕೂಡಲೆ ಮೇಲೆ ಬಂದು ಅವಳ ಬಂಗಾರವನ್ನು ಹಾಕಿಕೊಂಡು ಸೀರೆಯನ್ನು ಉಟ್ಟುಕೊಂಡು ಬಂದು ನಿದ್ದೆ ಮಾಡುತ್ತಿದ್ದವನನ್ನು ಎಚ್ಚರಿಸಿದಳು. ಹೊತ್ತು ಸಂಜೆಯಾಯಿತು, ಗಾಳಿ ಬೀಸುತ್ತಾ ಇದೆ. ಇನ್ನು ಹೋಗುವ ಎಂದು ಅವನನ್ನು ಎಬ್ಬಿಸಿದಳು, ಎದ್ದು ಅಲ್ಲಿಂದ ಬಂದರು, ಬಂದು ಮನೆ ತಲುಪುವಾಗ ಎಲ್ಲರೂ ಗುಬ್ಬಿ ಮೊಲೆಯ ಹೆಣ್ಣನ್ನು ತಂದ ಎಂದು ತಮಾಷೆ ಮಾಡಲು ಪ್ರಾರಂಭಿಸಿದರು.

ಹಾಗೆಯೇ ಆ ಸತ್ತ ಹೆಣ್ಣು ಕೆರೆಯಲ್ಲಿ ತಾವರೆಯ ಹೂವಾಗಿ ಈಜುತ್ತಾ, ಇವರೆಲ್ಲ ಕೆರೆಗೆ ಹೋದರೆ ಆ ತಾವರೆ ಹೂವು ಆಚೆ ಆಚೆಯೇ ಹೋಗುತ್ತದೆ, ಒಂದು ದಿನ ಈತ ನೋಡಲು ಹೋದ, ಹೋದಾಗ ಈತನ ಹತ್ತಿರ ಹತ್ತಿರ ಬಂತು. ಬಂದ ಕೂಡಲೇ ಬಟ್ಟೆ ಹಾಕಿ ಹಿಡಿದ, ತಂದು ನನಗೊಂದು ಕೆರೆಯಲ್ಲಿ ಹೂವು ಸಿಕ್ಕಿತು ಎಂದ, ಅದನ್ನು ನೋಡಿದ ಮುದುಕಿ ನೋಡುವ ಎಂದು ತೆಗೆದುಕೊಂಡು ಇದರ ಭಂಡಾರ ಇಲ್ಲಿಗೂ ಬಂತ ಎಂದು ಹೇಳಿ ಅದನ್ನು ಹಿಸುಕಿ ಗೊಬ್ಬರದ ಹೊಂಡದಲ್ಲಿ ಹಾಕಿದಳು, ಅದು ಮರು ದಿವಸ ನೋಡಿದಾಗ ಒಂದು ಹರಿವೆ ಗಿಡವಾಗಿತ್ತು, ಇದು ಆಗಲಿಕ್ಕಿಲ್ಲ ಎಂದು ಅದನ್ನು ತಂದು ಪದಾರ್ಥ ಮಾಡಿದಳು, ಅದು ಕುದಿಯುವಾಗ 'ಕೊಚ ಕೊಚ ಮುಂಡೆ' 'ಕೊಚ ಕೊಚ ಮುಂಡೆ' ಎಂದು ಹೇಳಿತು, ಇವಳು ಇನ್ನು ಸತ್ತಿಲ್ಲ ಎಂದು ಹೇಳಿ ಮತ್ತೆ ಗೊಬ್ಬರದ ಹೊಂಡದಲ್ಲಿ ಹಾಕಿ ಮುಚ್ಚಿದಳು.

ನಾಲ್ಕು ದಿನ ಕಳೆದಾಗ ನಾಲ್ಕು ದಾಳಿಂಬೆಯ ಗಿಡ ಬೆಳೆಯಿತು. ಅದು ದೊಡ್ಡದಾಗಿ ಮರವಾಗಿ ಅದರಲ್ಲಿ ಒಂದು ಕಾಯಿ ಆಯಿತು. ಅದನ್ನು ದನ ಕಾಯುವ ಹುಡುಗರು ಚೆಂಡಾಟ ಆಡಲು ತೆಗೆದುಕೊಂಡು ಗುಡ್ಡೆಗೆ ಹೋದರು. ಅವರು ಆಡಿ ಸಂಜೆ ಒಂದು ಪೊದರಿನ ಒಳಗಡೆ ಇಟ್ಟು ಹೋದರು. ಮರುದಿವಸ ಬರುವಾಗ ಅದು ಒಂದು ಹೆಣ್ಣಾಗಿದೆ. ಅಲ್ಲಿ ಒಂದು ಮನೆಯು ಆಯಿತು, ಒಂದು ಗಿಳಿಯು ಆಯಿತು. ಆ

ಹೆಣ್ಣು ಮಕ್ಕಳಲ್ಲಿ ಹೇಳಿದಳು–ಅರಸನಲ್ಲಿ ಹೇಳಬೇಕು, ಹೊಸ ಅಕ್ಕನ ಕತೆ ಇದೆ. ನೀವು ಒಮ್ಮೆ ಗುಡ್ಡೆಗೆ ಬರಬೇಕು ಎಂದು ಮಕ್ಕಳಲ್ಲಿ ಹೇಳಿ ಕಳುಹಿಸಿದಳು. ಮಕ್ಕಳು ಬಂದು ಹೇಳಿದವು–ಅರಸರೆ ನಾವು ದನ ಮೇಯಿಸುವಲ್ಲಿ ಒಂದು ಹೆಣ್ಣಿದೆ., ಮನೆಯೂ ಇದೆ, ಒಂದು ಗಿಳಿಯೂ ಇದೆ ಎಂದರು. ಹಾಗೆ ಈತ ಹೋದ, ಗಿಳಿಯಲ್ಲಿ ಹೇಳಿದಳಂತೆ, ಅಂದು ಮರದ ಅಡಿಯಲ್ಲಿ ಕುಳಿತಿರುವಾಗ ಮುದುಕಿ ಕೆರೆಗೆ ದೂಡಿ ಹಾಕಿದ್ದು ಎಲ್ಲವನ್ನು ಹೇಳಿದಳು, ಅದು ಅವನಿಗೆ ಗೊತ್ತಾಯಿತು, ಹಾಗೆ ಬಂದು ಮುದುಕಿಯನ್ನು ಕೊಂದು ಮತ್ತೆ ಹೆಣ್ಣನ್ನು, ಗಿಳಿಯನ್ನು ಕರೆದುಕೊಂಡು ಹೋಗಿ, ಮತ್ತೆ ಸಂತೋಷದಲ್ಲಿದ್ದರು.

ಅವಳಿ ಮಕ್ಕಳು (ಕಥೆ)

"ಒಬ್ಬ ಅರಸನಿಗೆ ಮೂವರು ಹೆಂಡಂದಿರು. ಅವನಿಗೆ ಮಕ್ಕಳಿರಲಿಲ್ಲ. ಕೊನೆಗೆ, ಮೂರನೆಯ ಹೆಂಡತಿ ಸುಮಿತ್ರ ಗರ್ಭಿಣಿಯಾಗುತ್ತಾಳೆ. ಆ ವೇಳೆಗೆ ಅರಸನು ಯುದ್ಧಕ್ಕೆ ಹೋಗುತ್ತಾನೆ. ಅವನ ಕಿರಿಯ ಹೆಂಡತಿಗೆ ಹಿರಿಯ ಹೆಂಡತಿಯರಿಬ್ಬರೂ ಕಷ್ಟ ಕೊಡುತ್ತಾರೆ. ಅವಳು ಒಂದು ಗಂಡು ಮತ್ತು ಒಂದು ಹೆಣ್ಣು ಮಗುವಿಗೆ ಜನ್ಮ ನೀಡುತ್ತಾಳೆ. ಆಗ ಅರಸನ ಹಿರಿಯ ಹೆಂಡಂದಿರು ಆ ಮಕ್ಕಳನ್ನು ಪೆಟ್ಟಿಗೆಯಲ್ಲಿ ಹಾಕಿ ಹೊಳೆಯಲ್ಲಿ ಬಿಡುತ್ತಾರೆ. ಕಿರಿಯ ಹೆಂಡತಿ ನಾಯಿಮರಿಗಳನ್ನು ಹೆತ್ತದ್ದು ಎಂದು ತೋರಿಸಿ, ಪ್ರಚಾರ ಮಾಡುತ್ತಾರೆ. ಅರಸನು ಹಿಂದಿರುಗಿದಾಗ, ತನ್ನ ಕಿರಿಯ ಹೆಂಡತಿಯು ನಾಯಿ ಮರಿಗಳನ್ನು ಹೆತ್ತಳೆಂದು ಭಾವಿಸಿ, ಅವಳನ್ನು ಹೂದೋಟಕ್ಕೆ ನೀರು ಹೊಯ್ಯುವ ಕೆಲಸಕ್ಕೆ ನೇಮಿಸುತ್ತಾನೆ. ಅವಳನ್ನು ಸಾಮಾನ್ಯ ಕೆಲಸದ ಹೆಣ್ಣಿನಂತೆ ಕಾಣುತ್ತಾನೆ. ಹೊಳೆಯಲ್ಲಿ ಬಿಟ್ಟ ಮಕ್ಕಳು ಒಬ್ಬ ಮರಕಲನಿಗೆ (ಮೀನುಗಾರ) ಸಿಗುತ್ತದೆ. ಅವನು ಅವರನ್ನು ಬಹಳ ಸಂತೋಷದಿಂದ ಸಾಕುತ್ತಾನೆ. ಅವನು ತೀರಿ ಹೋದಾಗ, ಈ ಅಣ್ಣ ತಂಗಿ ಅಲ್ಲಿಂದ ಹೊರಟು, ರಾಜನ ಅರಮನೆಯ ಪಕ್ಕದಲ್ಲೇ ಒಂದು ಮನೆ ಮಾಡಿ, ಕೂಲಿ ಕೆಲಸ ಮಾಡಿ ಬದುಕುತ್ತಾರೆ. ಇವರು ಬದುಕಿರುವ ವಿಚಾರ ರಾಜನ ಹಿರಿಯ ಮಡದಿಯರಿಗೆ ಗೊತ್ತಾಗುತ್ತದೆ. ಅವರು ದಾಸಿಯೊಬ್ಬಳ ಮೂಲಕ ಆ ತಂಗಿಯಲ್ಲಿ ಅಣ್ಣನನ್ನು ಏಳು ಕಡಲಿನಾಚೆ ಇರುವ ರಕ್ಕಸನೂರಿನಿಂದ ರಾಜಕುಮಾರಿಯನ್ನು ತರಲು ಪ್ರೇರೇಪಿಸುತ್ತಾರೆ. ತಂಗಿಯ ಒತ್ತಾಯದಿಂದ ಅಣ್ಣನು ಈ ಸಾಹಸಕ್ಕೆ ಹೊರಡುತ್ತಾನೆ. ಹೋಗುವಾಗ ಒಂದು ದೀಪವನ್ನು ಉರಿಸಿ ಇಡಲು ತಂಗಿಯಲ್ಲಿ ಹೇಳಿ, 'ದೀಪವು ನಂದಿ ಹೋದರೆ ತಾನು ಹಿಂದಕ್ಕೆ ಬರುವುದಿಲ್ಲ'ವೆಂದು ತಿಳಿಸಿ ಹೋಗುತ್ತಾನೆ. ಕಡಲ ಬದಿಯಲ್ಲಿ ಸಿಕ್ಕಿದ, ರೆಕ್ಕೆಯುಳ್ಳ ಕುದುರೆಯಲ್ಲಿ ಕುಳಿತು, ಏಳು ಸಮುದ್ರಗಳನ್ನು ದಾಟುತ್ತಾನೆ. ಇವನ ಚೆಲುವನ್ನು ಕಂಡು ಆಕರ್ಷಿತನಾದ ರಕ್ಕಸನು ತಾನು ಹೇಳಿದ ಕೆಲಸವನ್ನು ಮಾಡಿದ ಅವನಿಗೆ ಒಂದು ಮಾಂತ್ರಿಕ ಬೆತ್ತವನ್ನು ಕೊಡುತ್ತಾನೆ. ಆ ಮಾಂತ್ರಿಕ ಬೆತ್ತವು ಬಂಗಾರದ ಅರಮನೆಯನ್ನು ಮಾಡುವ ಶಕ್ತಿ ಪಡೆದಿರುತ್ತದೆ. ಅಲ್ಲಿಂದ ಅವನು ರಾಜಕುಮಾರಿಯಲ್ಲಿಗೆ ಬಂದು ಅವಳನ್ನು ಮೂರು ಬಾರಿ ಕರೆಯುತ್ತಾನೆ. ಅವಳನ್ನು ಕರೆದ ರಾಜಕುಮಾರರೆಲ್ಲಾ ಕಲ್ಲಾಗಿರುತ್ತಾರೆ. ಇವನೂ ಅರ್ಧ ಕಲ್ಲಾಗುತ್ತಾನೆ. ಆಗ ರಾಜಕುಮಾರಿಯು ಬಂದು,

ಮಾಂತ್ರಿಕ ನೀರು ಚಿಮುಕಿಸಿ ಇವನನ್ನು ಬದುಕಿಸುತ್ತಾಳೆ. ಆ ಮೇಲೆ ಅವನು ತನ್ನ ಕುದುರೆಯ ಮೇಲೆ ಆ ರಾಜಕುಮಾರಿಯನ್ನು ಕುಳ್ಳಿರಿಸಿಕೊಂಡು ತನ್ನ ಊರಿಗೆ ಬರುತ್ತಾನೆ. ಆ ರಾಜಕುಮಾರಿಗೆ ಮುಂದೆ ನಡೆಯುವ ಸಂಗತಿಗಳನ್ನೆಲ್ಲಾ ತಿಳಿದುಕೊಳ್ಳುವ ಶಕ್ತಿ ಇರುತ್ತದೆ. ರಾಜಕುಮಾರನು ರಕ್ಕಸನು ಕೊಟ್ಟ ಮಾಂತ್ರಿಕ ಬೆತ್ತದಿಂದ ಬಂಗಾರದ ಅರಮನೆಯನ್ನು ಸೃಷ್ಟಿಸಿ, ತಂಗಿ ಮತ್ತು ಹೆಂಡತಿಯೊಡನೆ ಇರುತ್ತಾನೆ. ಆಗ ಅರಸನ ಹಿರಿಯ ಹೆಂಡಂದಿರು ರಾಜಕುಮಾರನನ್ನು ಕೊಲ್ಲುವುದಕ್ಕಾಗಿ ಒಂದು ಸಂಚು ಹೂಡುತ್ತಾರೆ. ಅವನನ್ನು ತಮ್ಮಲ್ಲಿಗೆ ಊಟಕ್ಕೆ ಬರಹೇಳಿ, ವಿಷ ಮಿಶ್ರಿತ ಆಹಾರವನ್ನು ಆತನಿಗೆ ಸಿದ್ಧಮಾಡುತ್ತಾರೆ. ಈ ವಿಚಾರ ಅವನಿಗೆ ರಾಜಕುಮಾರಿಯಿಂದ ತಿಳಿಯುತ್ತದೆ. ಅವನು ಅಲ್ಲಿ ಊಟದ ವೇಳೆ, ಆ ಅನ್ನವನ್ನು ನಾಯಿಗೆ ಹಾಕಿದಾಗ ಅದು ಸಾಯುತ್ತದೆ. ಹೂ ದೋಟದಲ್ಲಿ ಕೆಲಸದವಳಂತೆ ಇದ್ದ ತನ್ನ ತಾಯಿಯನ್ನು ಭೇಟಿಯಾಗುತ್ತಾನೆ. ತನ್ನ ತಂದೆ ಅರಸನಿಗೆ ನಿಜ ಸಂಗತಿಯನ್ನು ತಿಳಿಸುತ್ತಾನೆ. ಅರಸನು ತನ್ನ ಹಿರಿಯ ಹೆಂಡತಿಯರನ್ನು ಕೊಂದು, ಉಳಿದವರೊಡನೆ ಸುಖವಾಗಿರುತ್ತಾನೆ."

'ಅವಳಿ ಮಕ್ಕಳು' ಕಥೆಯಲ್ಲಿ ಕಿರಿಯ ರಾಣಿಯ ವಿರುದ್ಧ ಹಿರಿಯರು ಮತ್ಸರ ಪಡೆಯುತ್ತಾರೆ. ಅವಳು ಹೆತ್ತ ಮಕ್ಕಳ ಬದಲು ಇಲ್ಲಿ ಇಡುವ ಪ್ರಾಣಿಗಳೆಂದರೆ ನಾಯಿ ಮರಿಗಳು. ಇಲ್ಲಿ ಹೊಳೆಯಲ್ಲಿ ಮಕ್ಕಳು ಸಿಕ್ಕುವುದು ಬೆಸ್ತನಿಗೆ. (ಬೆಳ್ತಂಗಡಿ ತಾಲೂಕು ನೆರಿಯ ಗ್ರಾಮದ ಕೋಲೊಡಿಯ ದೇರಪ್ಪಮಲೆಕುಡಿಯರವರಿಂದ ಈ ಮೇಲಿನ ಕಥೆಯನ್ನು ಸಂಗ್ರಹಿಸಲಾಗಿದೆ.)

****

ಅಧ್ಯಾಯ ೪

ಆಧುನಿಕ ಭಾರತ ಮತ್ತು ಮಲೆಕುಡಿಯರ ಸಂಸ್ಕೃತಿ

೪. ೧ ಮಲೆಕುಡಿಯರ ಮೂಲ ಸಂಸ್ಕೃತಿ (ಕುಮೇರಿ ಸಂಸ್ಕೃತಿ)

೪. ೨ ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಮಲೆಕುಡಿಯರು

೪. ೩ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮಲೆಕುಡಿಯರು

೪. ೪ ಮಲೆಕುಡಿಯರ ಬದುಕಿನಲ್ಲಿ ಆಧುನಿಕತೆಯ ಪ್ರವೇಶ ಮತ್ತು ಸ್ಥಿತ್ಯಂತರ

೪. ೫. ಕರ್ನಾಟಕ ಸಂಸ್ಕೃತಿಗೆ ಮಲೆಕುಡಿಯರ ಕೊಡುಗೆ

ಅಧ್ಯಾಯ ೪ :

ಆಧುನಿಕ ಭಾರತ ಮತ್ತು ಮಲೆಕುಡಿಯರ ಸಂಸ್ಕೃತಿ

೪. ೧. ಮಲೆಕುಡಿಯರ ಮೂಲ ಸಂಸ್ಕೃತಿ (ಕುಮೇರಿ ಸಂಸ್ಕೃತಿ) :

ಇತರ ಜನಾಂಗಗಳಂತೆ ಮಲೆಕುಡಿಯರು ಕೂಡಾ ವಿಶಿಷ್ಟವಾದ ಮತ್ತು ತಮ್ಮದೇ ಆದ ಜೀವನ ಕ್ರಮವನ್ನು ರೂಢಿಸಿಕೊಂಡವರು. ನಿಸರ್ಗವೇ ಅವರ ಬದುಕು. ಮಲೆಕುಡಿಯರ ಮೂಲ ಸಂಸ್ಕೃತಿಯನ್ನು "ಕುಮೇರಿ ಸಂಸ್ಕೃತಿ" ಎಂದು ಗುರುತಿಸಬಹುದು. ಅರಣ್ಯ ಉತ್ಪನ್ನಗಳಾದ ಜೇನು, ಸೀಗೆಕಾಯಿ ಮುಂತಾದವುಗಳನ್ನು ಸಂಗ್ರಹಿಸಿ ವಿನಿಮಯ ಮಾಡಿಕೊಳ್ಳುತ್ತಿದ್ದರು. ಬಗನಿಯ ಹೆಂಡ ಇಳಿಸುವುದು, ಬೇಟೆಯಾಡುವುದು, ಗೆಡ್ಡೆಗೆಣಸುಗಳನ್ನು ತಿನ್ನುವುದು, ತಾಳೆಯ ಹಿಟ್ಟನ್ನು ಅಂಬಲಿ ಮಾಡಿ ಕುಡಿಯುವುದು, ಇದು ಒಂದು ರೀತಿಯ ಜೀವನ ಕ್ರಮವಾದರೆ, ಕುಮೇರಿ ಬೇಸಾಯದ ಪದ್ದತಿ ಇನ್ನೊಂದು ಬಗೆಯದು. ಮಲೆಕುಡಿಯರೆಲ್ಲ ಒಟ್ಟು ಸೇರಿ ಚಳಿಗಾಲ ಕಳೆಯುವ ಸಂದರ್ಭದಲ್ಲೇ ಇಪ್ಪತ್ತು, ಮೂವತ್ತು ಎಕರೆ ಕಾಡುಗಳನ್ನು ಕಡಿದು ಸವರುತ್ತಾರೆ. ಬೆಂಕಿಯಿಟ್ಟು, ಬಿದ್ದ ಮರದ ಕೊಂಬೆ, ಎಲೆಗಳನ್ನೆಲ್ಲ ಸುಟ್ಟು ಬೂದಿ ಮಾಡುತ್ತಾರೆ. ಹಿಂದಿನ ಕಾಲದಿಂದಲೂ ಇದನ್ನು ಮರದ ಮೊನಚು ಕೋಲುಗಳಿಂದ ನೆಲವನ್ನು ಆಗೆತ ಮಾಡುತ್ತಾರೆ. ವಿಷು ಸಂಕ್ರಾಂತಿ ಕಳೆದ ಮೇಲೆ ಆ ಜಾಗದಲ್ಲಿ ಕುಮೇರಿ ಬೀಜವನ್ನು ಬಿತ್ತುತ್ತಾರೆ. ಇದರ ವಿಶೇಷತೆ ಎನೆಂದರೆ ಒಮ್ಮೆ ನೆಟ್ಟ ನೆಲದಲ್ಲಿ ತಿರುಗಿ ನೆಡುವ ಹವ್ಯಾಸ ಮಲೆಕುಡಿಯರಲ್ಲಿ ಇಲ್ಲ.

ಮಲೆಕುಡಿಯರು ಸ್ವತಂತ್ರವಾಗಿ ಅಡ್ಡಾಡುವ ಮಲೆಗಳಿಗೆ ಅಲ್ಲಿನ ಸಂಪತ್ತುಗಳಿಗೆ ಒಡೆಯರಾಗಿ ಬದುಕುತ್ತಿದ್ದ ಕಾಲವದು. ಒಟ್ಟಿನಲ್ಲಿ ಮಲೆಕುಡಿಯರ ಪ್ರಾರಂಭದ ಬದುಕನ್ನು "ಕುಮೇರಿ ಸಂಸ್ಕೃತಿ" ಎಂದು ಕರೆಯಬಹುದು.

- **ಕುಮೇರಿಯ ಪ್ರಾಚೀನತೆ:**

ಅಳಿದು ಹೋಗುತ್ತಿರುವ ಕೃಷಿ ಪದ್ಧತಿಗಳಲ್ಲಿ ಕುಮೇರಿ ಬೇಸಾಯವು ಒಂದು. ಇದು ವಿಶ್ವದ ಎಲ್ಲ ಕಡೆಗೂ ಇದೀಗ ಅಳಿದು ಹೋಗುತ್ತಿದೆ. ಮಾನವ ಶಾಸ್ತ್ರಜ್ಞರು ಅದನ್ನು 'ಸರದಿ ಬೇಸಾಯ' ಅಥವಾ 'ಸಂಚಾರಿ ಬೇಸಾಯ' (ಶಿಫ್ಟಿಂಗ್ ಕಲ್ಟಿವೇಶನ್) ಎಂದು ಕರೆದಿದ್ದಾರೆ. ಅದನ್ನು ಅವರು 'ಸವರು – ಮತ್ತು – ಸುಡು' (ಸ್ಲಾಷ್ –ಆಂಡ್ ಬರ್ನ್) ಬೇಸಾಯ ಎಂದು ವರ್ಣಿಸುವುದೂ ಇದೆ. ಭಾರತದ ವಿವಿಧ ಭಾಗಗಳಲ್ಲಿ ಅದನ್ನು ನಾನಾ ಹೆಸರುಗಳಿಂದ ಕರೆಯಲಾಗುತ್ತದೆ. ಕರ್ನಾಟಕದಲ್ಲಿ ನಾವು ಅದನ್ನು 'ಕುಮೇರಿ' ಅಥವಾ 'ಕುಮ್ರಿ' ಎಂಬ ಸ್ಥಳೀಯ ಹೆಸರಿನಿಂದ ಕರೆಯುತ್ತೇವೆ. ಕುಮೇರಿಯು ಬೆಟ್ಟದ ಇಳಿಜಾರುಗಳಲ್ಲಿ

ಪ್ರಚಲಿತವಿರುವ ಬೇಸಾಯ. ಎಲ್ಲೆಲ್ಲಿ ಬೆಟ್ಟವಾಸಿಗಳಿದ್ದಾರೋ ಅಲ್ಲೆಲ್ಲ ಕುಮರಿ ಬೇಸಾಯವಿದೆ. ಅಥವಾ ಹಿಂದೊಂದು ಕಾಲದಲ್ಲಿ ಇತ್ತು ಎಂದರೆ ಅತಿಶಯೋಕ್ತಿಯಾಗಲಾರದು.

ಪುರಾತತ್ವ ಸಂಶೋಧಕರು ಹೇಳುವಂತೆ ಬೇಟೆಯಾಡಿ ಮತ್ತು ಕಾಡಿಂದ ಕಾಡಿಗೆ ಸಂಚರಿಸಿ ಗೆಡ್ಡೆ ಗೆಣಸು, ಹಣ್ಣು ಹಂಪಲುಗಳನ್ನು ಸಂಗ್ರಹಿಸುತ್ತಿದ್ದ ಮಾನವರು ಕ್ರಿ.ಪೂ. ೨೦೦೦ ವರ್ಷಗಳ ಹಿಂದೆ ತಮಗೆ ಬೇಕಾದ ಆಹಾರವನ್ನು ಬೆಳೆಸಿಕೊಳ್ಳುವುದನ್ನು ಕಲಿತರು. ಅಂದರೆ ಆಹಾರದ ಉತ್ಪಾದಕರಾದರು. ಸಸ್ಯ ನೆಟ್ಟು, ಬೆಳೆಸಿ, ಸುಧಾರಿಸಲು ಕಲಿತರು. ಇದು ಕೃಷಿ. ಆದರೆ ಆ ಆದಿಯ ಕಾಲದಲ್ಲಿ ಕೃಷಿಕರು ಒಂದೆಡೆ ಸ್ಥಾಯಿಯಾಗಿ ನಿಂತು ಹೊಲಗದ್ದೆಗಳನ್ನು ರೂಪಿಸಿ, ಪ್ರಾಣಿಗಳ ಸಹಾಯದಿಂದ ಉತ್ತು, ಬಿತ್ತಿ, ಬೆಳೆ ತೆಗೆಯುವುದನ್ನು ಕಲಿಯಲಿಲ್ಲ. ಆ ಕಾಲದಲ್ಲಿದ್ದ ಕೃಷಿಯು ಸಂಚಾರಿ ಕೃಷಿಯಾಗಿತ್ತು. ಅಂದರೆ ಎಲ್ಲೋ ಒಂದೆಡೆ ಮರಗಿಡ ಪೊದೆಗಳನ್ನು ಸವರಿ ಸುಟ್ಟು, ಬೂದಿ ಹರಡಿ, ನೆಲಕೆದರಿ, ಬೀಜ ಊರಿ, ಮಳೆಯ ನೀರು ಬಿದ್ದಾಗ ಬೆಳೆ ಬರುತ್ತಿತ್ತು. ಒಂದೆರಡು ವರ್ಷಗಳ ಅನಂತರ ಅಲ್ಲಿ ಏನೂ ಬೆಳೆಯದೇ ಇದ್ದಾಗ ಆ ಆದಿಮ ಬೇಸಾಯಗಾರರು ಇನ್ನೊಂದು ನೆಲ ಹುಡುಕುತ್ತ ಹೋಗುತ್ತಿದ್ದರು. ಇದೇ ಕುಮೇರಿ ಅಥವಾ ಸರದಿ ಬೇಸಾಯ. ನಮಗೆ ತಿಳಿದ ಮಟ್ಟಿಗೆ ಇದೇ ಅತಿ ಪ್ರಾಚೀನ ಬೇಸಾಯ ಪದ್ಧತಿ. ಹೊಸ ಶಿಲಾಯುಗದ ಜನರು ಇದೇ ಬೇಸಾಯ ಪದ್ಧತಿಯನ್ನು ಅನುಸರಿಸುತ್ತಿದ್ದರೆಂದು ಸಂಶೋಧಕರು ಹೇಳುತ್ತಾರೆ. ಡೆನ್ಮೊಬ ಕಣಿವೆಯಲ್ಲಿ ಕಂಡುಬಂದ ಹೊಸ ಶಿಲಾಯುಗದ ಸಾಕ್ಷಿಗಳಿಂದ ಇದು ಸಾಬೀತಾಗಿದೆ ಎಂದು ಗಾರ್ಡನ್ ಚ್ಯಾಲ್ಡ ಎಂಬ ಪುರಾತತ್ವ ಶಾಸ್ತ್ರಜ್ಞರು ಹೇಳುತ್ತಾರೆ. ಮಾನವ ಶಾಸ್ತ್ರಜ್ಞರಾದ ಕೆ.ಸಿ.ಚಾಂಗ್ ಪೊರ್ಮೋಸಾದ ರೈತರು ಹೊಸ ಶಿಲಾಯುಗದಲ್ಲಿ ಸರದಿ ಬೇಸಾಯಗಾರರಾಗಿದ್ದರು ಎನ್ನುತ್ತಾರೆ. ಸ್ಥಾಯೀ ಕೃಷಿ ಬಳಕೆಗೆ ಬಂದುದು ಆ ಮೇಲೆ . ಈ ನಡುವೆ ಆದಿಮ ಜನರು ಪ್ರಾಣಿಗಳನ್ನು ಪಳಗಿಸುವ ಕಲೆ ಕಲಿತರು . ಇಂಥ ಪ್ರಾಣಿಗಳನ್ನು ಕೃಷಿ ಕೆಲಸಕ್ಕೆ ಉಪಯೋಗಿಸುವುದನ್ನು ಕಲಿತ ಮೇಲೆ ಸ್ಥಾಯೀ ಕೃಷಿ ಸಾಧ್ಯವೂ, ಲಾಭಕರವೂ ಆಯಿತು ಎನ್ನಬಹುದು.

- **ಕರ್ನಾಟಕದಲ್ಲಿ ಕುಮೇರಿ :**

ಭಾರತದಲ್ಲಿಯೂ ಈ ಅದಿಮ ಕೃಷಿ ಹಲವು ಸಾವಿರ ವರ್ಷಗಳಿಂದ ಇದೆಯೆಂದು ಹೇಳುತ್ತಾರೆ. ಕರ್ನಾಟಕದ ಪುರಾತತ್ವ ಸಾಕ್ಷಿಗಳು ಏನು ಹೇಳುತ್ತವೆಯೋ ಗೊತ್ತಿಲ್ಲ. ಆದರೆ ಸಾಹಿತ್ಯದ ಕೃತಿಗಳೂ ಶಾಸನಗಳೂ ಇಲ್ಲಿ ಪ್ರಚಲಿತವಿದ್ದ ಕುಮೇರಿ ಪದ್ಧತಿಯ ಪ್ರಸ್ತಾಪ ಮಾಡಿದೆ. ಕ್ರಿ.ಶ. ೧೦ನೇ ಶತಮಾನದಷ್ಟು ಹಿಂದೆ ಬರೆದ 'ವಡ್ಡಾರಾಧನೆ'ಯಲ್ಲಿ 'ಕುಮರಿಯಂ ಸುಡಲೆಂದು ಕಡಿದೊಟ್ಟಿದ ಮರಂಗಳ ಮೇಲೆ' ಎಂಬ ಸಾಲು ಬಂದಿದೆ. ಕ್ರಿ. ಶ. ೧೨ನೇ ಶತಮಾನದ ಶಾಸನಗಳಲ್ಲಿ 'ಕುಂಮರಿ'ಯ ಪ್ರಸ್ತಾಪವಿದೆ. ಪಂಪಭಾರತ . ಲೀಲಾವತಿ, ನೇಮಿನಾಥ ಪುರಾಣ ಮುಂತಾದ ಪ್ರಾಚೀನ ಕಾವ್ಯಗಳು ಕುಮರಿಯನ್ನು ಹೆಸರಿಸಿವೆ. 15ನೇ ಶತಮಾನದ 'ಕುಮಾರವ್ಯಾಸ ಭಾರತ' ದಲ್ಲಿ 'ತಳೆದ ಹೊಸ ಕುಮ್ಮರಿಯೊಳಗೆ ರಥ ಹಾಯಬಲ್ಲುದೆ'

ಎಂಬ ಸಾಲಿದೆ. 'ಭೂಮಿಯ ಅಳತೆ' ಎಂಬ ಹಳೆಯ (ಕಾಲ ಗೊತ್ತಿಲ್ಲ) ಗ್ರಂಥವೊಂದರಲ್ಲಿ "ಹಾರಕ; ಸಾವೆ ಮೊದಲಾದ ನಿಕೃಷ್ಟತರವಾದ ಬೆಳೆಯೂ ಕೂಡಾ ಒಂದೊಂದು ವರುಷ ಮಾತ್ರ ಆಗಿ ನಾಲ್ಕು ಮೂರು ವರ್ಷಗಳವರೆಗೆ ಬೀಡು ನಿಲ್ಲಿಸಲ್ಪಡಬೇಕಾಗುವ ಭೂಮಿ ಯಾವುದೋ ಅಂತಪ್ಪ ಭೂಮಿಗೆ ಕುಮರಿಯೆಂದು ಕರೆಯುವುದು" ಎಂಬ ವಿವರಣೆಯಿದೆ. ಹೀಗೆ ಅದು ಕರ್ನಾಟಕಕ್ಕೆ ಪರಿಚಿತವಾದ ಕೃಷಿ ಪದ್ಧತಿ.

ಸುಮಾರು 30 ವರ್ಷಗಳ ಹಿಂದೆ, ಅಂದರೆ 1950ರ ಸುಮಾರಿಗೆ, ಉತ್ತರ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನ ಕುಡುಬಿ ಎಂಬ ಜನಾಂಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಮಲೆಕುಡಿಯರು ಕುಮೆರಿ ಬೇಸಾಯ ಮಾಡುತ್ತಿದ್ದರು. 1980ರ ಸುಮಾರಿಗೆ ಅವರು ಕುಮರಿಯನ್ನು ಮರೆತುಬಿಟ್ಟು ಎಲ್ಲರಂತೆ ಹಳ್ಳಿಯ ಹೊಲಗದ್ದೆಗಳಿಗೆ ಇಳಿದರು. ಅಲ್ಲೊಂದು ಇಲ್ಲೊಂದು ಕುಡುಬಿ ಪಂಗಡ ಇನ್ನೂ ಕುಮರಿ ಮಾಡುತ್ತಿರಬಹುದು; ಆದರೆ ಈಗ ಕುಮರಿಯನ್ನೇ ನಂಬಿ ಕುಳಿತವರು ಕಡಿಮೆ. ಕುಡುಬಿಗಳಂತೆಯೇ ಕುಮರಿ ಕೃಷಿ ಮಾಡುವ ಒಂದು ದೊಡ್ಡ ಪಂಗಡವೆಂದರೆ ಮರಾಠಿ ಬುಡಕಟ್ಟಿನವರು. ಇವರ ಜನಸಂಖ್ಯೆ ಸುಮಾರು ೪೮ ಸಾವಿರ. ಇವರು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಹರಡಿದ್ದಾರೆ. ಮರಾಠಿಗಳು ಈಗ ಸ್ಥಾಯೀ ಬೇಸಾಯಕ್ಕೆ ಒಗ್ಗಿ ಕೊಂಡಿದ್ದಾರೆ ಅಥವಾ ಹಳ್ಳಿಗಳಲ್ಲಿ ಬೇಸಾಯ ಕೂಲಿಗಾರರಾಗಿದ್ದಾರೆ. ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಬೆಟ್ಟ ಪ್ರದೇಶಗಳಲ್ಲಿ ಇರುವ ಕುಡಿಯರು ಕೂಡ ಕುಮರಿ ಬೇಸಾಯಗಾರರು . ಡಾ. ಶಿವರಾಮ ಕಾರಂತರು ಬರೆದ 'ಕುಡಿಯರ ಕೂಸು' ಕಾದಂಬರಿ ಈ ಜನರ ಜೀವನದ ಕಥೆಯನ್ನು ಹೇಳುತ್ತದೆ. ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಜೇನು ಕುರುಬರು, ಬೆಟ್ಟಕುರುಬರು ಮತ್ತು ಬಿಳಿಗಿರಿ ರಂಗನ ಬೆಟ್ಟಗಳಲ್ಲಿ ವಾಸಿಸುವ ಸೋಲಿಗರು ಕರ್ನಾಟಕದ ಕುಮರಿ ಬೇಸಾಯಗಾರರ ಅತ್ಯುತ್ತಮ ಪ್ರತಿನಿಧಿಗಳು.

೪.೨ ಸ್ವಾತಂತ್ರ್ಯ ಪೂರ್ವಭಾರತದಲ್ಲಿ ಮಲೆಕುಡಿಯರು :

ಸ್ವಾತಂತ್ರ್ಯ ಪೂರ್ವದಲ್ಲಿ ಮಲೆಕುಡಿಯರು ಅತ್ಯಂತ ಅಮಾನುಷ ರೀತಿಯಲ್ಲಿ ಶೊಷಣೆಗೆ ಒಳಗಾದರು. ಹೊರಗಿನಿಂದ ಬಂದ ಬಂಡವಾಳಶಾಹೀ ವ್ಯಕ್ತಿಗಳು ಈ ಕಾಡಿಗೆ ನಾವೇ 'ಧನಿ' ಗಳು ಎಂಬ ಬಂಡವಾಳಶಾಹೀ ಮಾತನ್ನು ಹೇಳಿ, ಅದೇ ಕಾಡಿನಲ್ಲಿ ಮಲೆಕುಡಿಯರನ್ನು ಜೀತದಾಳುಗಳನ್ನಾಗಿ ಮಾಡಿದರು. ಕಾಡಿನಲ್ಲಿ ಹೇರಳವಾಗಿ ದೊರೆಯುತ್ತಿದ್ದ ಕಾಡುತ್ಪತ್ತಿಗಳಾದ ಎಲಕ್ಕಿ, ಸೀಗೆಕಾಯಿ, ಗಿಡಮೂಲಿಕೆಯ ಔಷಧಿಗಳನ್ನು, ಬೀಳಲುಗಳಿಂದ ಹೆಣೆದ ಕಲಾತ್ಮಕ ಬುಟ್ಟಿಗಳನ್ನು ಮಧ್ಯವರ್ತಿ ವ್ಯಾಪಾರಿಗಳಿಗೆ ಮಾರಾಟ ಮಾಡಿ ಅವುಗಳಿಗೆ ಪ್ರತಿಯಾಗಿ ಪುಡಿಗಾಸು, ಉಪ್ಪು, ಮೆಣಸು, ಬಟ್ಟೆ, ಸೂಜಿ, ನೂಲು, ಸಾಮಾನು, ಚೂರಿ, ಬೆಂಕಿಪೆಟ್ಟಿಗೆ ಮುಂತಾದ ವಸ್ತುಗಳನ್ನು ಪಡೆದುಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ಮಲೆಕುಡಿಯರು ಹೆಚ್ಚು ಮೋಸ ಮತ್ತು ಶೋಷಣೆಗೆ ಒಳಗಾದ ಕಾಲ. ಲಾಭದ ಉದ್ದೇಶವನ್ನು ಇಟ್ಟುಕೊಂಡು ಬಂದ ಮಧ್ಯವರ್ತಿಗಳು ಮತ್ತು ಈ ಕಾಡಿಗೆ ನಾವೇ 'ಧನಿ'ಗಳು ಎಂದು

ಹೇಳಿಕೊಂಡು ಬಂದ ಜನ ಇಡೀ ಮಲೆಕುಡಿಯರ ಬದುಕನ್ನೇ ನಿಯಂತ್ರಣದಲ್ಲಿಟ್ಟುಕೊಂಡರು. ಕಾಡನ್ನು ಬಿಟ್ಟು ಹೊರಗಡೆ ಹೋಗದಂತೆ, ಮತ್ತು ಹೊರಗಿನ ಜನರ ಸಂಪರ್ಕ ದೊರೆಯದಂತೆ ಎಚ್ಚರ ವಹಿಸುತ್ತಿದ್ದರು. ಬೆಳ್ತಂಗಡಿ ತಾಲೂಕು, ನೆರಿಯ ಸಮೀಪದ ದೇಜಪ್ಪಮಲೆಕುಡಿಯ ಹೇಳುವ ಪ್ರಕಾರ ಹಿಂದಿನ ಕಾಲದಲ್ಲಿ ನಮ್ಮನ್ನು ಧನಿಗಳು ಹೊರಬಿಡದೆ, ನಮಗೆ ಕ್ಷೌರ ಮಾಡಲು ಇದ್ದರೆ, ಕ್ಷೌರಿಕನನ್ನು ಅಲ್ಲಿಗೆ ಬರಹೇಳುತ್ತಿದ್ದರು. ಜಾತ್ರೆಗಳಲ್ಲಿ ಪಾಲ್ಗೊಳ್ಳುವ ಸಂದರ್ಭಗಳಲ್ಲಿ ಮಲೆಕುಡಿಯರ ಜೊತೆ ಮಧ್ಯವರ್ತಿಗಳನ್ನು ಕಳುಹಿಸುತ್ತಿದ್ದರು. ಅರಣ್ಯಸಂಪತ್ತು ಮತ್ತು ಮಲೆಕುಡಿಯರ ಶ್ರಮ ನಿರಂತರ ಸೂರೆಯಾಯಿತು. ಧನಿಯಿಂದ ಧನಿಗೆ ಮಾರಾಟವಾಗುತ್ತಿದ್ದ ಮಲೆಕುಡಿಯರು ಅನಿವಾರ್ಯವಾಗಿ ಸಹಜವಾಗಿ ಸ್ವೀಕರಿಸುತ್ತಿದ್ದರು. ತಾವು ವಾಸವಾಗಿದ್ದ ಪರಿಸರದಿಂದ ಅರಣ್ಯ ಉತ್ಪತ್ತಿಗಳು ಮತ್ತು ಭೂಮಿ ಬರಿದು ಆದಾಗ ಮಲೆಕುಡಿಯರು ಮೂಕರಾಗಿ ನಿಂತರು. ತಾವು ಕಳೆದುಕೊಂಡ ಉತ್ಪನ್ನಗಳಿಗೆ ಬದಲಿಗೆ ಬಂಡವಾಳ ಶಾಹೀ ವ್ಯಕ್ತಿಗಳು ಕೊಡಮಾಡಿದ ಆಧುನಿಕ. ವಸ್ತುಗಳಾದ ಕನ್ನಡಿ, ಗಾಜು ಮಣಿಸರಕು, ಬಳೆ ಮುಂತಾದ ವಸ್ತುಗಳನ್ನು ಸ್ವೀಕರಿಸಿಕೊಂಡು ಸಮಾಧಾನ ಪಟ್ಟುಕೊಳ್ಳುತ್ತಿದ್ದರು. ಈ ಕಾಲದಲ್ಲಿ ಮಲೆಕುಡಿಯರ ಪಾಲಿಗೆ ಸರಕಾರ ನೆರವಿಗೆ ಬರುವುದು ಕನಸಿನ ಮಾತಾಗಿತ್ತು.

೪. ೩ : ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮಲೆಕುಡಿಯರು :

ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿ ಮಲೆಕುಡಿಯರ ಬದುಕಿನಲ್ಲಿ ಮಹತ್ವ ಪೂರ್ಣವಾದ ಬದಲಾವಣೆಗಳಾಗುತ್ತಿವೆ. ಸ್ವಾತಂತ್ರ್ಯ ನಂತರದ ನಮ್ಮ ಸರ್ಕಾರಿ ವ್ಯವಸ್ಥೆಯಲ್ಲಿ ಆಡಳಿತ ನಿರ್ವಹಣೆಗಾಗಿ ಅನೇಕ ಇಲಾಖೆಗಳು ಹುಟ್ಟಿಕೊಂಡಿರುವುದನ್ನು ಕಾಣಬಹುದು. ಇಂದು ಸರ್ಕಾರದ ಇಲಾಖೆಗಳು, ತಾಲೂಕು ಅಭಿವೃದ್ಧಿ ಮಂಡಳಿ ಮತ್ತು ಸಹಕಾರಿ ಸಂಘ ಸಂಸ್ಥೆಗಳ ಪ್ರಯತ್ನದ ಫಲವಾಗಿ ಮಲೆಕುಡಿಯರ ಬದುಕಿನಲ್ಲಿ ಬೆಳಕನ್ನು ಮೂಡಿಸಿವೆ. ಪಂಚವಾರ್ಷಿಕ ಯೋಜನೆಗಳು, ಹಸಿರುಕ್ರಾಂತಿ, ಬಡತನ ನಿರ್ಮೂಲನೆ, ಶಿಕ್ಷಣ ಪ್ರಸಾರ ಮತ್ತು ನೇಮಕಾತಿ ನಿಯಮ– ಇವುಗಳು ಮಲೆಕುಡಿಯರ ಬದುಕಿನ ಮೇಲೆ ಪ್ರಭಾವ ಬೀರಿವೆ.

ಇತ್ತೀಚಿನ ಮಲೆಕುಡಿಯರ ಬದುಕು ಬದಲಾದ ಸಂಸ್ಕೃತಿ ಆಗಿರುತ್ತದೆ. ನಗರ ಸಂಸ್ಕೃತಿಯ ಪ್ರಭಾವ ಮಲೆಕುಡಿಯರ ಮೇಲೆ ಪ್ರಭಾವ ಬೀರಿರುವುದನ್ನು ಕಾಣಬಹುದು. ಸಂಪ್ರದಾಯ ವ್ಯವಸ್ಥೆಯ ಆಚರಣೆ, ಕುಟುಂಬ ಪದ್ಧತಿ ಗೃಹ ನಿರ್ಮಾಣ, ಉಡುಗೆ ಮುಂತಾದ ವಿಚಾರಗಳಲ್ಲಿ ಸಾಕಷ್ಟು ಬದಲಾವಣೆ ಆಗಿವೆ. ಶಾಲೆ, ಆಸ್ಪತ್ರೆ, ಅಂಗಡಿ, ಹೋಟೇಲು, ಅಂಚೆಕಛೇರಿಗಳ ಸಂಪರ್ಕದಿಂದಾಗಿ ಅವರ ಹಿಂದಿನ ಬದುಕು ಬದಲಾಗಿರುವುದನ್ನು ಕಾಣಬಹುದು.

ಬಹಳಷ್ಟು ಜನ ಮಲೆಕುಡಿಯ ಯುವಕ ಯುವತಿಯರು ಕಡ್ಡಾಯ ಶಿಕ್ಷಣದ ಸೌಲಭ್ಯವನ್ನು ಪಡೆದುಕೊಂಡು ವಿವಿಧ ರೀತಿಯ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಶಿಕ್ಷಣದಲ್ಲಿ ಮೀಸಲಾತಿಯಿಂದಾಗಿ ಬಹಳಷ್ಟು ಜನ ಮಲೆಕುಡಿಯರು ಉನ್ನತ ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ.

ರಾಜಕೀಯ ಕ್ಷೇತ್ರದಲ್ಲೂ ಮೀಸಲಾತಿಯಿಂದಾಗಿ ಸಾಕಷ್ಟು ಜನ ಮಲೆಕುಡಿಯರು ಪಂಚಾಯತ್‌ಗಳಲ್ಲಿ, ಪರಿಷತ್ತುಗಳಲ್ಲಿ, ಸಹಕಾರಿ ಸಂಘಗಳಲ್ಲಿ ಸದಸ್ಯರಾಗುವ ಅವಕಾಶ ಒದಗಿಬಂದಿದೆ. ಈ ರೀತಿಯಿಂದಾಗಿ ಅವರಲ್ಲಿರುವ ಹಿಂದಿನ ಮುಗ್ಧತೆ, ಸರಳತೆ ಮತ್ತು ನೇರ ಬದುಕು ಮಾಯವಾಗುತ್ತಿದೆ. ಇಷ್ಟೆಲ್ಲಾ ಮಲೆಕುಡಿಯರ ಬದುಕಿನಲ್ಲಿ ಪ್ರಗತಿಯಾದರೂ ಇನ್ನೂ ಹಲವೆಡೆ ಜಮೀನುದಾರರ ಕಪಿಮುಷ್ಟಿ ಸಡಿಲವಾಗಿಲ್ಲ. ಎಷ್ಟೋ ಮಲೆಗಳಲ್ಲಿ ಇಂದಿಗೂ ಮಲೆಕುಡಿಯರನ್ನು ಬಂಡವಾಳಶಾಹೀ (ದನಿ) ಯ ಅನುಮತಿ ಇಲ್ಲದೆ ಭೇಟಿ ಮಾಡುವುದು ಕಷ್ಟವಾಗಿದೆ. ಉದಾಹರಣೆಗೆ ಬಾಂಜಾರು ಮಲೆಯಲ್ಲಿರುವ ಮಲೆಕುಡಿಯರನ್ನು ಭೇಟಿಯಾದಾಗ ಮಲೆಕುಡಿಯರ ಈಗಿನ ಬದುಕಿನ ಸ್ಥಿತಿಗತಿಯ ನೈಜ ದರ್ಶನವಾಗುತ್ತದೆ.

ಆ ದಟ್ಟ ಕಾನನದ ನಡುವೆ ಮನೆ ಕಟ್ಟಿಕೊಂಡು ತಲ ತಲಾಂತರಗಳಿಂದ ಬದುಕು ನಡೆಸುತ್ತಾ ಬಂದ ಈ ಗಿರಿಜನರ ಅಭಿವೃದ್ಧಿಗೆ ಸರಕಾರದ ಸಹಕಾರ ಯಾವಾಗ ಸಿಗುತ್ತದೋ ಎಂಬುದು ಒಂದು ಕಾತರದ ಪ್ರಶ್ನೆ.

ಬೆಳ್ತಂಗಡಿ ತಾಲೂಕಿನ ಉಜಿರೆಯಿಂದ ಮುಂದೆ ಸಾಗಿ ಚಾರ್ಮಾಡಿ (ಚಾರುಮುಡಿ) ಘಾಟಿಯ ರಸ್ತೆಯಲ್ಲಿ ಮೇಲೇರಿದಾಗ ಘಾಟಿ ರಸ್ತೆಯ ೯ನೇ ತಿರುವಿನಲ್ಲಿ ಕೊಂಚ ಬಲಗಡೆಗೆ ಕಣ್ಣಾಡಿಸಿದರೆ ಮಾತ್ರ ಗೋಚರಿಸುತ್ತದೆ ದಟ್ಟ ಕಾಡಡವಿಯ ಮಧ್ಯೆ ಸಾಗಿರುವ ಮಣ್ಣಿನ ರಸ್ತೆ. ೪ ಚಕ್ರದ ವಾಹನ ಇಲ್ಲವೇ ಕಾಲುನಡಿಗೆಯೊಂದೇ ಈ ಮಣ್ಣಿನ ರಸ್ತೆಗೆ ಸೂಕ್ತ. ಅಂತಹ ಕಡಿದಾದ ರಸ್ತೆಯಲ್ಲಿ ಕಾಡಿನ ಮಧ್ಯೆ ಬರೋಬ್ಬರಿ ೧೦ಕಿ.ಮೀ. ದೂರ ಸಂಚರಿಸಿದರೆ ಒಂದು ಅಚ್ಚರಿಯ ಲೋಕ ತೆರೆದುಕೊಳ್ಳುತ್ತದೆ. ಶತಮಾನಗಳಿಂದ ಇಲ್ಲಿ ಮಲೆಕುಡಿಯರೆಂಬ ಗಿರಿಜನ ಕುಟುಂಬಗಳು ವಾಸಿಸುತ್ತಿವೆ. ಕನಿಷ್ಠ ಮೂಲಭೂತ ಸೌಕರ್ಯಗಳೂ ಇಲ್ಲದೆ ಪ್ರಾಕೃತಿಕ ಸಂಪನ್ಮೂಲಗಳನ್ನೇ ಬಳಸಿಕೊಂಡು ನಾಡಿನ ಪರಿಚಯವೇ ಇರದೇ ಸ್ವಾತಂತ್ರ್ಯ ಪೂರ್ವದಲ್ಲಿ ಇಲ್ಲಿ ಬೀಡು ಬಿಟ್ಟಿದ್ದ ಗಿರಿಜನರು ಖಾಸಗಿ ಒಡೆತನದ ಬಾಂಜಾರು ಎಸ್ಟೇಟ್ ಜಮೀನಿನಲ್ಲಿ ಜೀತದಾಳುಗಳಾಗಿ ಜೀವಿಸುತ್ತಿದ್ದರು. ಈ ಮಂದಿ ಸ್ವಾತಂತ್ರ್ಯಾ ನಂತರ ದಿ. ಶ್ರೀಮತಿ ಇಂದಿರಾಗಾಂಧಿಯವರು ಜಾರಿಗೆ ತಂದ ಭೂಮಸೂದೆ ಕಾನೂನಿನನ್ವಯ ಸ್ವತಂತ್ರರೆನಿಸಿಕೊಂಡರಾದರೂ ರಸ್ತೆ, ವಿದ್ಯುತ್, ಟೆಲಿಫೋನ್ ಸಂಪರ್ಕದ ಅಸಮರ್ಪಕತೆಯಿಂದಾಗಿ ಇನ್ನೂ ಅತಂತ್ರ ಸ್ಥಿತಿಯಲ್ಲಿದ್ದಾರೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಇವರ ಕತ್ತಲೆ ಬದುಕಿನ ಬವಣೆಯನ್ನು ಕಂಡು ಇಲ್ಲಿನ ಪ್ರಾಕೃತಿಕ ಜಲಸಂಪನ್ಮೂಲಗಳನ್ನು ಬಳಸಿಕೊಂಡು ಪಿಕೋ ಸ್ವಯಂ ಸೇವಾಸಂಸ್ಥೆಯೋದಿಗೆ ಕೈ ಜೋಡಿಸಿ ಜಲವಿದ್ಯುತ್ ಸ್ಥಾವರವೊಂದನ್ನು ನಿರ್ಮಿಸಿ ಸುಮಾರು ೩೦೦ ಎಕರೆ ಜಮೀನಿನಲ್ಲಿರುವ ೩೪ ಮನೆಗಳಿಗೆ ಜಲವಿದ್ಯುತ್ತನ್ನು ನೀಡಿರುವುದು ಈ ಭಾಗದ ಗಿರಿಜನರ ಬದುಕಿಗೆ ಹೊಸ ಬೆಳಕನ್ನು ತಂದುಕೊಟ್ಟಂತಾಗಿದೆ.

ದಟ್ಟ ಗೊಂಡಾರಣ್ಯ. ಎಲ್ಲಿ ನೋಡಿದರಲ್ಲಿ ಕತ್ತಲೆ, ಮಧ್ಯಾಹ್ನದ ಹೊತ್ತಿನಲ್ಲಷ್ಟೇ ಸೂರ್ಯಕಿರಣಗಳ ಸ್ಪಷ್ಟತೆ. ಸೂರ್ಯ ಅಸ್ತಂಗತವಾಗುತ್ತಿದ್ದಂತೆ ಆನೆ, ಕರಡಿ, ಹಂದಿಗಳ ಕಾಟ. ಸಾರಿಗೆ

ವ್ಯವಸ್ಥೆ, ಆಸ್ಪತ್ರೆ, ಶಾಲೆ, ದೇವಸ್ಥಾನ, ಅಂಗಡಿ ಮುಗ್ಗಟ್ಟು ಎಲ್ಲವೂ ಇಲ್ಲಿ ಕನಸಿನ ಮಾತು. ಇದಕ್ಕೆ ಕಾರಣ ಸಂಪರ್ಕ ರಸ್ತೆಯಿದ್ದರೂ ಅದರ ಅಸಮರ್ಪಕತೆ. ಒಟ್ಟಾರೆಯಾಗಿ ಹೇಳುವುದಾದರೆ ಬಂಜರು ಭೂಮಿಯಲ್ಲದಿದ್ದರೂ ಈ ಬಾಂಜಾರು ಮಲೆ ಅವ್ಯವಸ್ಥೆಗಳ ಆಗರ.

ಸುತ್ತಮುತ್ತಲು ಖಾಸಗಿ ಒಡೆತನದ ಬಾಂಜಾರು ಎಸ್ಟೇಟಿನ ೬೦೦೦ ಎಕರೆ ಭೂಮಿಯ ಮಧ್ಯೆ ೨೧೮೫ ಎಕರೆ ಜಮೀನಿನ ಸ್ವಂತ ವಾರೀಸುದಾರರಾಗಿರುವ ೩೪ ಮಲೆಕುಡಿಯ ಕುಂಟುಂಬಗಳ ಸಂಪರ್ಕಕ್ಕೆ ಮುಕ್ತ ಅವಕಾಶವಿಲ್ಲ. ಖಾಸಗಿ ಬಾಂಜಾರು ಎಸ್ಟೇಟಿನ ಗೇಟಲ್ಲಿ ಸಕಾರಣ ನೀಡಿದರೆ ಮಾತ್ರ ಪ್ರವೇಶ. ನೆರಿಯಾ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸೇರುವ ಈ ಬಾಂಜಾರು ಮಲೆಕುಡಿಯರಿಗೆ ಪತ್ರ ವ್ಯವಹಾರವೂ ಇಲ್ಲ. ಅಂಚೆ ಪೇದೆಯಾಗಲಿ, ಗ್ರಾಮ ಪಂಚಾಯತ್ನವರಾಗಲಿ ಇಲ್ಲಿಗೆ ಭೇಟಿ ಕೊಡುವುದೇ ಇಲ್ಲ. ಇಲ್ಲಿನ ಎಲ್ಲ ಕುಟುಂಬಗಳಿಗೂ ಹಕ್ಕು ಪತ್ರ ದೊರೆತಿದೆ. ಪಡಿತರ ಚೀಟಿ ಸಿಕ್ಕಿದೆ. ಮತದಾನದ ಹಕ್ಕು ಲಭಿಸಿದೆ. ಮತದಾನದ ಯಾಚನೆಗಾಗಿ ರಾಜಕೀಯ ವ್ಯಕ್ತಿಗಳು ಬರುತ್ತಾರೆ. ಇಲ್ಲಿಯ ಸ್ಥಿತಿಗತಿಯ ದರ್ಶನ ಅವರಿಗೂ ಆಗಿದೆ. ಭರವಸೆಗಳ ಮೂಟೆಗಳನ್ನು ಇವರ ಮನದಲ್ಲಿ ಬಿತ್ತಿ ಹೋಗುತ್ತಾರೆ. ಇದೇ ಆಕಾಂಕ್ಷೆಯಿಂದ ಇಲ್ಲಿನವರು ಮತದಾನ ಮಾಡುತ್ತಾರೆ. ಆದರೆ ಎಷ್ಟು ಬಾರಿ ಮತದಾನ ಮಾಡಿದರೂ ಈವರೆಗೂ ಇವರ ಯಾವುದೇ ಬೇಡಿಕೆಗಳು ಈಡೇರದಿರುವುದು ಈ ಜನರ ದುರಾದೃಷ್ಟವೆಂತಲೇ ಹೇಳಬೇಕು. ಸುಮಾರು ೧೦೦ ರಿಂದ ೨೦೦ ಜನಸಂಖ್ಯೆಯಿರುವ ಈ ಭಾಗದ ಜನರು ಯಾವ ಸರಕಾರದ ಗಮನಕ್ಕೂ ಬಾರದಿರುವುದು ಬಹುಶಃ ಅವರು ಕಾಡಿನಿಂದ ನಾಡಿಗೆ ಬರಲಿ ಎಂಬ ಉದ್ದೇಶದಿಂದಲೋ ಏನೋ! ವಾರಕ್ಕೊಮ್ಮೆ ಚಾರ್ಮಡಿ, ಕಕ್ಕಿಂಜೆ ಪೇಟೆಗೆ ಸಾಮಾನು ಸರಂಜಾಮುಗಳನ್ನು ಖರೀದಿಸಲು ಬರಬೇಕಾಗಿರುವುದು ಇವರಿಗೆ ಅನಿವಾರ್ಯ. ಅದಕ್ಕಾಗಿ ಇಲ್ಲಿನ ೨ ಪ್ರಗತಿಬಂಧು ಗುಂಪಿನ ಸದಸ್ಯರು ಧರ್ಮಸ್ಥಳ ಗ್ರಾಮಭಿವೃಧ್ಧಿ ಯೋಜನೆಯಿಂದ ಸಾಲ ಪಡೆದು ೨ ಜೀಪು ಖರೀದಿಸಿದ್ದಾರೆ. ಒಮ್ಮೆ ಕಕ್ಕಿಂಜೆ, ಚಾರ್ಮಾಡಿ ಪರಿಸರಕ್ಕೆ ಹೋಗಿಬರಬೇಕಾದರೆ ಕನಿಷ್ಟ ೫೦೦ ರೂ. ಬಾಡಿಗೆ. ಕಾಯಿಲೆ ಕಸಾಲೆ ಮೊದಲಾದ ಅನಿವಾರ್ಯ ಸಂದರ್ಭದಲ್ಲಿ ಇದರ ಎರಡು ಪಟ್ಟು ಹಣ ನೀಡಿ ಪ್ರಯಾಣಿಸಬೇಕಾದ ಸಂದಿಗ್ಧತೆ ಇದೆ. "ಕಾಡಿನಿಂದ ಹೊರಬಂದು ನಾಡಿನಲ್ಲಿ ನೆಲೆ ನಿಲ್ಲದಿದ್ದರೆ ಇವರು ಪ್ರಗತಿ ಹೊಂದಲು ಹೇಗೆ ಸಾಧ್ಯ?" ಎಂದು ಬುದ್ಧಿ ಜೀವಿಗಳು, ವಿಮರ್ಶಕರು ಅಭಿಪ್ರಾಯ ಪಡಬಹುದು. ಸ್ವಂತ ಕೃಷಿಭೂಮಿಯನ್ನು ಬಿಟ್ಟು ಇಲ್ಲಿಂದ ಹೊರಬಂದರೆ ನಾಡಿನಲ್ಲಿ ಇಂಥದ್ದೇ ಕೃಷಿಭೂಮಿಯನ್ನು ಯಾವ ಸರ್ಕಾರದಿಂದ ಕೊಡಲು ಸಾಧ್ಯ? ಎಂಬುದು ಈ ಬಾಂಜಾರು ಮಲೆಕುಡಿಯರ ಪ್ರಶ್ನೆ. ಇದೀಗ ಸರಕಾರದ 'ಪುಷ್ಪಗಿರಿ ವನ್ಯಧಾಮದಂತಹ ಸರ್ಕಾರದ ಯೋಜನೆಯಿಂದ ಮಲೆಕುಡಿಯರ ಬದುಕಿಗೆ ಯಾವ ರೀತಿಯ ಪರಿಣಾಮ ಆಗಬಹುದು ಎಂಬುದನ್ನು ಕಾದುನೋಡಬೇಕಾಗಿದೆ.

"೧೯೫೩ರ ಹಿಂದೆ ಕಿ.ಲೋಮೀಟರ್‌ಗಟ್ಟಲೆ ಕಾಲು ನಡಿಗೆಯಲ್ಲೇ ಪೇಟೆ ಸೇರಿತ್ತಿದ್ದೆವು" ಎನ್ನುವುದು ಇಲ್ಲಿನ ಹಿರಿಯರೊಬ್ಬರ ಮಾತು. ಈಗ ಹೆಸರಿಗೊಂದು ರಸ್ತೆ ಇದೆ. ಆದರೆ ಅದರಲ್ಲಿ

ಸಂಚರಿಸುವುದು ಮಾತ್ರ ಬಹು ದೊಡ್ಡ ಸಾಹಸವೇ ಸರಿ. ಸರಕಾರದಿಂದ ಇವರಿಗೆ ದೊರೆತ ಸೌಲಭ್ಯಗಳು ಅತ್ಯಲ್ಪ. ೭ ವರ್ಷದ ಹಿಂದೆ ಊರಿನವರೇ ಸೇರಿಕೊಂಡು ಜಲಾನಯನ ಸಮಿತಿ ಮತ್ತು ಯೋಜನೆಯ ಸಹಾಯದಿಂದ 'ಲಕ್ಕಿತಡ್ಕ', 'ಸುನಾಲ್' ಎಂಬೆರಡು ನದಿಗೆ ಡ್ಯಾಮ್ ಕಟ್ಟಿ ಕಣಿವೆ ಮೂಲಕ ಬಾಂಜಾರಿಗೆ ನೀರು ತಂದು ಅದರಿಂದ ವಿದ್ಯುತ್ ತಯಾರಿಸಿದ್ದಾರೆ. ಸರಿಸುಮಾರು ೫೮೦ ಮೀಟರ್ ದೂರದಿಂದ ಬಂದ ನೀರಿನಿಂದ ಉತ್ಪತ್ತಿಯಾಗುವ ವಿದ್ಯುತ್ ಘಟಕಕ್ಕೆ ೨೦೦೨ರಲ್ಲಿ ಪೂಜ್ಯ ವೀರೇಂದ್ರ ಹೆಗ್ಗಡೆಯವರು ವಿದ್ಯುಕ್ತ ಚಾಲನೆ ನೀಡಿದ್ದಾರೆ. ಈ ಯೋಜನೆಗೆ ಒಟ್ಟು ೧೫ ಲಕ್ಷ ಖರ್ಚಾಗಿದೆ. ಆದರೆ ಇವರ ಯೋಜನೆಗಳಿಗೆ ಇವರುಗಳೇ ಇಂಜಿನಿಯರುಗಳು. ೧೯೮೫ರಲ್ಲಿ ಇಲ್ಲಿದ್ದುದು ಕೇವಲ ೨೦ ಮನೆಗಳು. ಆ ದಿನಗಳಲ್ಲೇ ಗ್ರಾಮಾಭಿವೃದ್ಧಿ ಯೋಜನೆ ಈ ಊರಿಗೆ ಕಾಲಿರಿಸಿತು. ಇವರೆಲ್ಲರ ಕನಸಿಗೆ ಗ್ರಾಮಾಭಿವೃದ್ದಿ ಯೋಜನೆ ಬೆಂಗಾವಲಾಗಿ ನಿಂತಿತು. ಗ್ರಾಮಾಭಿವೃದ್ಧಿ ಯೋಜನೆ ಮತ್ತು ನಾರ್ವೆ ದೇಶದ ಪಿಕೊ ಸ್ವಯಂ ಸೇವಾ ಸಂಸ್ಥೆ ಬಾಂಜಾರಿನ ಮನೆ ಬೆಳಗುವಲ್ಲಿ ಎಲ್ಲಾ ರೀತಿಯ ಸಹಾಕಾರವನ್ನು ನೀಡಿದೆ. ಜಲ ವಿದ್ಯುತ್ ಘಟಕ ತಯಾರಿಕೆಗೆ ಬೇಕಾದ ಮೆಷಿನ್ ಮತ್ತು ಪೈಪನ್ನು ಪಿಕೊ ಸಂಸ್ಥೆ ಉಚಿತವಾಗಿ ನೀಡಿದೆ. ಒಟ್ಟು ೧೨ ಲಕ್ಷ ರೂ. ವೆಚ್ಚದ ಈ ಕಾಮಗಾರಿಗೆ ಸರಕಾರ ಅನುದಾನವಾಗಿ ೬ ಲಕ್ಷ ರೂ.ವನ್ನು ನೀಡಿದೆ. ಒಂದು ಕಾಲು ಲಕ್ಷ ರೂಪಾಯಿ ಧರ್ಮಸ್ಥಳ ಯೋಜನೆಯಿಂದ ಲಭಿಸಿದೆ. ಒಂದು ಲಕ್ಷ ರೂ.ವನ್ನು ಬ್ಯಾಂಕಿನಿಂದ ಸಾಲವಾಗಿ ಪಡೆದಿದ್ದಾರೆ. ಅದು ಸಾಲದಾದಾಗ ಪ್ರತಿ ಮನೆಯಿಂದ ಹತ್ತು ಸಾವಿರ ರೂಪಾಯಿ ಮತ್ತು ೭೫ ಕೂಲಿ ಆಳುಗಳ ಮಾನವ ಸಂಪನ್ಮೂಲವನ್ನು ಒದಗಿಸಿದ್ದಾರೆ. ಕಿರು ಜಲವಿದ್ಯತ್ ಪ್ರಚಾರಕ್ಕಾಗಿ ಆರಂಭವಾದ ನಾರ್ವೆ ಯೋಜನೆ ಇವರ ಪಾಲಿಗೆ ವರವಾಗಿ ಪರಿಣಮಿಸಿದೆ.

ಕಣಿವೆ ಮೂಲಕ ಬಿದ್ದ ನೀರನ್ನು ೮ ಇಂಚ್ ದಪ್ಪದ ೨೦ ಫೀಟ್ ಉದ್ದದ ಕಬ್ಬಿಣದ ಪೈಪ್ ಮೂಲಕ ಇಳಿಯುವಂತೆ ಮಾಡಿ ೩೦ ಮನೆಗಳಿಗೆ ಬೇಕಾಗುವಷ್ಟು (ಒಂದು ಮನೆಗೆ ೨೫೦ ವೋಲ್ಟ್) ವಿದ್ಯುತ್ ತಯಾರಿಸುತ್ತಿದ್ದಾರೆ. ಪ್ರತಿ ಮನೆಯಲ್ಲಿ ೪ರಿಂದ ೬ ಬಲ್ಬ್ ಉರಿಯುತ್ತದೆ. ಹಗಲಿನ ವೇಳೆ ಕಣಿವೆಯ ನೀರನ್ನು ತೋಟಕ್ಕೆ ಬಿಡುತ್ತಾರೆ. ರಾತ್ರಿ ವೇಳೆ ವಿದ್ಯುತ್ ತಯಾರಿಸುತ್ತಾರೆ. ಇಲ್ಲಿ ಎಳೆಂಟು ತಾರಸಿ ಮನೆಗಳಿವೆ. ಹತ್ತು ಮನೆಗಳಲ್ಲಿ ಟವಿ ಇದೆ. ಪ್ರತಿ ಮನೆಯಲ್ಲೂ ಖಾಸಗಿ ಪೋನುಗಳಿವೆ.

"ಹಿಂದೆ ಕತ್ತಲಾಗುತ್ತಿದ್ದಂತೆ ಕಾಡಾನೆಗಳು ನಾಡಿಗೆ ಇಳಿಯುತ್ತಿದ್ದವು. ಇದೀಗ ಅವುಗಳ ಉಪಟಳ ಅಷ್ಟಾಗಿ ಇಲ್ಲ" ಎಂಬುದು ಇಲ್ಲಿನವರ ಅಭಿಮತ. ಊರಲ್ಲೊಂದು ಪುಟ್ಟ ಗಣಪತಿ ಗುಡಿ ಇದೆ. ಸಮಾಜ ಮಂದಿರವನ್ನು ಊರಿನವರೇ ಸೇರಿ ಕಟ್ಟಿಕೊಂಡಿದ್ದಾರೆ. ಬಾಂಜಾರು ಮಲೆಗೆ ಸಂಪರ್ಕ ಸೇತುವೆಯೊಂದರ ಅಗತ್ಯತೆಯಿದ್ದು ಅದರ ಶಿಲಾನ್ಯಾಸದ ಕೆಲಸ ೨೦೦೨ ರಲ್ಲಿ ನಡೆದಿದೆ. ಸೇತುವೆ ಮಾತ್ರ ಇನ್ನೂ ನಿರ್ಮಾಣವಾಗಿಲ್ಲ ಎಂಬುದು ಊರವರ ಅಳಲು. ಇಲ್ಲಿನ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕಾಗಿ ನೆರಿಯ, ಬೆಳ್ತಂಗಡಿ ಶಾಲೆಗಳನ್ನೇ ಅವಲಂಬಿಸಬೇಕಾಗಿದೆ. ಹಾಗೆಂದು! ಇದೇನು ಅನಕ್ಷರಸ್ಥರ ಊರಾಗಿ ಉಳಿದಿಲ್ಲ. ಇಲ್ಲಿನವರ ಛಲ, ಪ್ರಯತ್ನದ ಫಲವಾಗಿ ಡಿಗ್ರಿ, ಡಿಪ್ಲೊಮಾ ಪದವೀಧರರು ಇಲ್ಲಿದ್ದಾರೆ. ಬೆರಳೆಣಿಕೆಯಷ್ಟು

ಮಂದಿ ಮಂಗಳೂರು, ಬೆಂಗಳೂರಿನಲ್ಲಿ ಉದ್ಯೋಗದಲ್ಲಿದ್ದಾರೆ. ಸರಕಾರಿ ಉದ್ಯೋಗದಲ್ಲಿರುವವರ ಸಂಖ್ಯೆ ಮಾತ್ರ ಸೊನ್ನೆ. ಹಾಗೆಂದು! ಇಲ್ಲಿನವರೇನು ಬಡತನದ ಮಡಿಲಲ್ಲಿಲ್ಲ. ತಮ್ಮ ಜಮೀನಿನಲ್ಲಿ ತೆಂಗು, ಕಂಗು, ಗೇರು, ಕರಿಮೆಣಸು ಎಲಕ್ಕಿ ಗಿಡ ಬೆಳಸಿದ್ದಾರೆ. ಕೃಷಿಯೋಗ್ಯ ಭೂಮಿಯಲ್ಲಿ ಕೈತುಂಬಾ ಇಳುವರಿಯಿದೆ. ವರ್ಷಕ್ಕೊಮ್ಮೆ ಊರಿನವರೆಲ್ಲಾ ಒಟ್ಟು ಸೇರಿ ಮಾರಿ ಪೂಜೆಯನ್ನು ಮಾಡುತ್ತಾರೆ. ಇದು ಈ ಊರಿನ ಹಬ್ಬ. ಈ ಕತ್ತಲ ನಾಡಿನಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆಯ ಪ್ರೇರಣೆಯಿಂದ 'ಸ್ನೇಹ', 'ಸ್ಫೂರ್ತಿ', 'ಮಾರುತಿ' ಎಂಬ ಮೂರು ಪ್ರಗತಿ ಬಂಧು ತಂಡಗಳು, 'ಭಾಗ್ಯಲಕ್ಷ್ಮಿ', 'ಶ್ರೀದೇವಿ' ಎಂಬ ಎರಡು ಸ್ವಸಹಾಯ ಸಂಘಗಳಿವೆ. ಆದರೂ ಒಟ್ಟಾರೆ ಇದೊಂದು ಅತಂತ್ರಗಳ ಗೂಡು. ಮೊಬೈಲ್ ಪೋನಂತೂ ಇಲ್ಲಿ ಸದಾ ಮೌನಿ. ಇಷ್ಟೇಲ್ಲಾ ಸಮಸ್ಯೆಗಳಿದ್ದರೂ ಎಲ್ಲದಕ್ಕೂ ಅಷ್ಟು ಕುಟುಂಬಗಳು ಒಂದಾಗಿ ಪರಿಹಾರವನ್ನು ಕಂಡುಕೊಂಡಿವೆ. ಸಫಲತೆಯ ಬದುಕಿಗೊಂದು ಸುಭದ್ರತೆಯ ಬೇಲಿಯನ್ನು ನಿರ್ಮಿಸಿಕೊಂಡಿವೆ. ಕತ್ತಲ ಕಾಡಲ್ಲೂ ಬೆಳಕು ಕಂಡ ಹೆಗ್ಗಳಿಕೆ ಇವರದ್ದು.

ಜಲವಿದ್ಯುತ್ ಸ್ಥಾವರದ ಶಂಕು ಸ್ಥಾಪನೆಗೆ ಆಗಿನ ಸಚಿವ ಕಾಗೋಡ ತಿಮ್ಮಪ್ಪ ಆಗಮಿಸಿದರು. ಇಲ್ಲನವರ ಕತ್ತಲೆ ಬದುಕಿನ ನೈಜ ಸ್ಥಿತಿಯನ್ನು ಅರಿತಿದ್ದರು. ಆದರೆ ಇಲ್ಲಿನ ಯಾವುದೇ ಮೂಲಭೂತ ಸೌಲಭ್ಯಗಳ ಕನಸು ಇನ್ನೂ ಕನಸಾಗಿಯೇ ಉಳಿದಿದೆ.

ನಕ್ಸಲಿಸಂನಂತಹ ಚಟುವಟಿಕೆಗಳು ಹುಟ್ಟಿಕೊಳ್ಳುವುದೇ ಕಾನನವಾಸಿಗಳು ಸರಕಾರದ ಮುಂದಿಟ್ಟ ಮೂಲಭೂತ ಬೇಡಿಕೆಗಳು ಈಡೇರದಿದ್ದಾಗ ಮಾತ್ರ ಎನ್ನುವುದು ವಿಮರ್ಶಕರ ಅಭಿಮತ. ಆಡಳಿತ ವ್ಯವಸ್ಥೆ ಬಗ್ಗೆ ಅಸಹನೆ ಇದ್ದರೂ ಅಂತಹ ಮನೋಭಾವನೆ ಈ ಬಾಂಜಾರು ಮಲೆಕುಡಿಯರಲ್ಲಿ ಹುಟ್ಟಿಲ್ಲ. ಕಾರಣ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆ ಇವರಿಗೆ ತಾಳ್ಮೆಯ, ಸಜ್ಜನ ಬದುಕಿನ ಮಾರ್ಗದರ್ಶನ ನೀಡಿದೆ. ತನ್ನಿಂದಾಗುವ ಸಹಕಾರವನ್ನು ನೀಡಿದೆ. ಬಾಂಜಾರು ಮಲೆಯಂತಹ ಅನಾದಿ ಕಾಲದ ವಾಸ್ತವ್ಯ ಪ್ರದೇಶಗಳಿಗೆ ಸರಕಾರ ಇನ್ನಾದರೂ ಎಚ್ಚೆತ್ತು ಅನುಕೂಲಕರ ರಸ್ತೆ, ವಿದ್ಯುತ್, ಶಾಲೆ ಮುಂತಾದ ಕನಿಷ್ಟ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಡುವಲ್ಲಿ ಮನಸ್ಸು ಮಾಡಬೇಕೇ ಹೊರತು ಕಾಡಿನಿಂದ ನಾಡಿಗೆ ಬನ್ನಿ ಎಂದು ಕರೆ ನೀಡುವುದಾಗಲೀ, ಬಲಾತ್ಕಾರದಿಂದ ಅವರನ್ನು ಒಕ್ಕಲೆಬ್ಬಿಸುವಂತಹ ಕಾರ್ಯಕ್ಕೆ ಮುಂದಾಗುವುದಾಗಲಿ, ಮಾಡುವುದರಿಂದ ಯಾವುದೇ ಉಪಯೋಗವಿಲ್ಲ. "ಸರ್ಕಾರ ನಮ್ಮ ಬೇಡಿಕೆಗಳಗೆ ಇನ್ನಾದರೂ ಒತ್ತು ನೀಡಿ ನಮ್ಮನ್ನೂ ನಾಗರಿಕ ಪ್ರಪಂಚದೆಡೆಗೆ ಸಾಗುವಂತಹ ಕೊಂಡಿಯನ್ನು ಕಲ್ಪಿಸಿಕೊಡಲಿ" ಎಂಬುದು ಈ ಬಾಂಜಾರಿನ ಮಲೆಕುಡಿಯರ ಒಕ್ಕೊರಳಿನ ಬೇಡಿಕೆ. ಈ ಸ್ವತಂತ್ರ ಜೀವಿಗಳ ಅತಂತ್ರ ಬದುಕಿಗೆ ಇನ್ನಾದರೂ ಸರಕಾರ ವರವಾದೀತೇ? ಎಂಬುದು ಕುತೂಹಲದ ಪ್ರಶ್ನೆಯಾಗಿ ಉಳಿದಿದೆ.

೪. ೪ : ಮಲೆಕುಡಿಯರ ಬದುಕಿನಲ್ಲಿ ಆಧುನಿಕತೆಯ ಪ್ರವೇಶ ಮತ್ತು ಸ್ಥಿತ್ಯಂತರ:

ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಂಡುಬರುವ ಕೊರಗರು, ಮಲೆಕುಡಿಯರು, ಮೇರರು ಮನ್ಸರು, ಮತ್ತು ಭೈರರು ಮುಂತಾದ ಹಲವು ರೀತಿಯ ಬುಡಕಟ್ಟುಗಳು ತಮ್ಮದೇ ಆದ ಜೀವನಕ್ರಮದಲ್ಲಿ ಇಂದೂ ಬದುಕು ಸಾಗಿಸುತ್ತಿದ್ದಾರೆ. ಈ ಬುಡಕಟ್ಟುಗಳಲ್ಲಿ ಎರಡು ವರ್ಗಗಳನ್ನು ಕಾಣಬಹುದು ೧)ದಟ್ಟ ಕಾನನದ ನಡುವೆ ಮನೆ ಕಟ್ಟಿಕೊಂಡು ತಲ ತಲಾಂತರಗಳಿಂದ ವಾಸವಿದ್ದ ಮೂಲ ನಿವಾಸಿಗಳದ್ದು ಒಂದು ವರ್ಗವಾದರೆ ೨) ನಾನಾ ಕಾರಣಗಳಿಗಾಗಿ ಬೇರೆ ಬೇರೆ ಪ್ರದೇಶಗಳಿಂದ ವಲಸೆ ಬಂದು ನೆಲೆನಿಂತ ಜನವರ್ಗಗಳೂ ಇಲ್ಲಿವೆ. ಆಹಾರ ಸಂಗ್ರಹಣೆ, ಬೇಟೆ, ಕರಕುಶಲಕಲೆ, ಇವರು ಜೀವನೋಪಾಯಕ್ಕಾಗಿ ಆರಿಸಿಕೊಂಡ ಮಾರ್ಗಗಳು. ಇವರ ಮಾತೃಭಾಷೆ ತುಳು ಆದರೆ ವ್ಯವಹಾರಕ್ಕಾಗಿ ಕನ್ನಡವನ್ನು ಮಾತನಾಡುತ್ತಾರೆ.

ಇಪ್ಪತ್ತೊಂದನೆಯ ಶತಮಾನದ ಆರಂಭದಲ್ಲಿ ಅರಣ್ಯಗಳಲ್ಲಿ ಬದುಕುತ್ತಿರುವ ಮಲೆಕುಡಿಯರ ಸಾಮಾಜಿಕ– ಆರ್ಥಿಕ – ಸಾಂಸ್ಕೃತಿಕ ಬದುಕಿನ ಸ್ಥಿತ್ಯಂತರಗಳನ್ನು ಗುರುತಿಸಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಸುಳ್ಯ, ಪುತ್ತೂರು ತಾಲೂಕಿನ ದುರ್ಗಮ ಪ್ರದೇಶದ ಕಣಿವೆ ಕಂದರಗಳಲ್ಲಿ ನೆಲೆ ಕಂಡುಕೊಂಡಿರುವ ಮಲೆಕುಡಿಯ ಜನಾಂಗ ಕರ್ನಾಟಕದ ಅತ್ಯಂತ ಮೂಲ ನಿವಾಸಿಗಳಲ್ಲಿ ಒಂದು. ಹಿಂದಿನ ಕಾಲದಲ್ಲಿ ಮಲೆಕುಡಿಯರು ತಮ್ಮ ನೆಲೆಯಾಗಿರುವ ಕಾಡುಗಳಲ್ಲಿ ಆಹಾರ ಸಂಗ್ರಹಣೆ ಮತ್ತು ಬೇಟೆಯಿಂದ ಹೊಟ್ಟೆ ಹೊರೆದು ಕೊಳ್ಳುತ್ತಿದ್ದರು. ಇವರು 'ಕುಮರಿ' ಬೇಸಾಯ ಮಾಡುತ್ತಾ ಜಾಗದಿಂದ ಜಾಗಕ್ಕೆ ಸ್ಥಳಾಂತರವಾಗುತ್ತಿದ್ದರು. ಕಾಡಿನೊಳಗಡೆ ಒಂದೆರಡು ಎಕರೆಯಷ್ಟು ಭೂಮಿಯನ್ನು ಮೊನಚಾದ ಕೋಲಿನಿಂದ ಅಗೆದು ಭೂಮಿನ್ನು ಹದ ಮಾಡಿ ಬೀಜವನ್ನು ಬಿತ್ತುತ್ತಿದ್ದರು. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮೂರು ಸಲಕ್ಕಿಂತ ಹೆಚ್ಚು ಬೆಳೆ ತೆಗೆಯದೇ ಅಲ್ಲಿಂದ ಮುಂದಿನ ಪ್ರದೇಶಕ್ಕೆ ಹೋಗುತ್ತಿದ್ದರು. ಬ್ರಿಟಿಷರ ಆಗಮನದ ನಂತರ ಬಂದ ನೇಗಿಲ 'ಗುಳ'ದ ಸಹಾಯದಿಂದ ಕೃಷಿ ಭೂಮಿಯನ್ನು ವಿಸ್ತರಣೆ ಮಾಡಿದರು ನಂತರದ ದಿನಗಳಲ್ಲಿ ರಾಜಕೀಯವಾಗಿ ಭಾರತವನ್ನು ಪ್ರವೇಶಿಸಿದ ಬ್ರಿಟೀಷರು ವ್ಯಾಪಾರ, ವ್ಯವಹಾರದ ಮೂಲ ಉದ್ದೇಶವಾದ ಸಾಂಬಾರಪದಾರ್ಥಗಳ ರಫ್ತಿಗೂ ಹೆಚ್ಚು ಗಮನ ಕೊಟ್ಟರು. ಇದರ ಪರಿಣಾಮವಾಗಿ ಕಾಡುಗಳು ಕಾಪೀ, ಟೀ, ಎಲಕ್ಕಿ, ಮೆಣಸು, ಕೋಕೊ, ಹಾಗೂ ರಬ್ಬರ್ ಮುಂತಾದ ವಾಣಿಜ್ಯ ಬೆಳೆಗಾಗಿ ಪರಿವರ್ತಿತಗೊಂಡವು. ಪರಿವರ್ತಿತಗೊಂಡ ತೋಟಗಳ ಮಾಲಿಕತ್ವವನ್ನು ಬ್ರಿಟೀಷರು ಮತ್ತು ನಮ್ಮವರೇ ಆದ ವಿದ್ಯಾವಂತರೆನಿಸಿಕೊಂಡ ಬಂಡವಾಳಶಾಹಿ ವ್ಯಕ್ತಿಗಳು ತೋಟಗಳ ಮಾಲಿಕರದರು. ಇಂತಹ ತೋಟಗಳಲ್ಲಿ ಅಮಾಯಕರಾದ ಗಿರಿಜನರು (ಮಲೆಕುಡಿಯರು) ದುಡಿಯುವವರಾದರು. ಹೀಗಾಗಿ ಭೂಮಿಯ ಸ್ವಾಧೀನವನ್ನು ಕೆಲವರಿಗೆ ಒಪ್ಪಿಸುವ ಮೂಲಕ ಅದೇ ನೆಲದ ಮೂಲನಿವಾಸಿಗಳನ್ನು ಅತಂತ್ರರನ್ನಾಗಿಸುವ ತಂತ್ರ ಬ್ರಿಟೀಷರ ಕಾಲದಲ್ಲಿ ನಡೆಯಿತು. ಅವರ ತಂತ್ರ ಎರಡು ರೀತಿಯ ಪ್ರಯೋಜನವನ್ನು ತಂದುಕೊಟ್ಟಿತು. ಕೆಲವು ಮಲೆಕುಡಿಯರಿಗೆ ಸ್ವಲ್ಪ

ಭೂಮಿಯನ್ನು ಕೊಟ್ಟು ಭೂ ಒಡೆಯನನ್ನಾಗಿ ಮಾಡುವ ಮೂಲಕ ಅವರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಇಡೀ ಕಾಡಿನ ಅಧಿಕಾರವನ್ನು ತಾವೇ ಪಡೆಯುವುದು ಅವರ ಮೊದಲನೆಯ ಉದ್ದೇಶವಾಗಿತ್ತು. ಈ ರೀತಿಯಾಗಿ ಭೂಮಿಯಿಂದ ಬೇರ್ಪಡಿಸಿ ಕೂಲಿಯಾಳುಗಳನ್ನಾಗಿ ಪರಿವರ್ತಿಸಿದ ಮಲೆಕುಡಿಯರನ್ನು ಮತಾಂತಾರಕ್ಕೆ ಪ್ರೇರೆಪಿಸುವುದು ಅವರ ಎರಡನೆಯ ಉದ್ದೇಶ ಆಗಿತ್ತು. ಮತಾಂತಾರಕ್ಕೆ ಒಪ್ಪಿದವರಿಗೆ ಭೂಮಿ ನೀಡುತ್ತೇವೆ ಎಂಬ ಭರವಸೆ ನೀಡಿ ಅವರಲ್ಲಿ ಆಸೆಯನ್ನು ತುಂಬುವ ಕೆಲಸವನ್ನು ಮಾಡಿದರು. ಸ್ವಾತಂತ್ರ್ಯ ಬಂದ ಮೇಲೂ ಅಧಿಕಾರ ಬದಲಾಗಲಿಲ್ಲ. ನಮ್ಮ ಸ್ವತಂತ್ರ ದೇಶದ ಅಧುನಿಕ ಅಧಿಕಾರ ಶಾಹಿಯ ಆಡಳಿತ ವ್ಯವಸ್ಥೆ ಇಂದಿಗೂ ಇದೇ ನೀತಿಯನ್ನು ಉಳಿಸಿಕೊಂಡು ಬಂದಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು.

ಸ್ವಾತಂತ್ರ್ಯ ನಂತರದ ಕಾಲ ಘಟ್ಟದಲ್ಲಿ ಮಲೆಕುಡಿಯರ 'ಪ್ರಗತಿ'ಯ ಉದ್ದೇಶದಿಂದ ಸರ್ಕಾರಿ ಸ್ವಾಮ್ಯದಲ್ಲಿ ಅನೇಕ ಇಲಾಖೆಗಳು ಹುಟ್ಟಿಕೊಂಡವು. ಇಂತಹ ಇಲಾಖೆಗಳಲ್ಲಿ ಅರಣ್ಯ ಇಲಾಖೆಯು ಒಂದು. ಈ ಇಲಾಖೆಯ ಕೆಲಸ ಎನೆಂದರೆ ಅರಣ್ಯವನ್ನು ರಕ್ಷಿಸುವುದು ಮತ್ತು ಅರಣ್ಯ ಇಲ್ಲದ ಕಡೆ ಬೆಳೆಸುವುದು. ರಕ್ಷಣೆಯ ನೆಪದಲ್ಲಿ ಈ ಕಾಡಿಗೆ ದಾಳಿ ಇಟ್ಟ ಅರಣ್ಯ ಇಲಾಖೆಗೆ ಮೊದಲು ಗೋಚರಿಸಿದ್ದು ಅದರ ಗರ್ಭದಲ್ಲಿ ಜೀವಿಸುತ್ತಿದ್ದ ಮಲೆಕುಡಿಯರು. ಅಲ್ಲಿಯವರೆಗೆ ಸ್ವಚ್ಛಂದವಾಗಿ ಬದುಕುತ್ತಿದ್ದ ಅವರ ಬದುಕಿಗೆ ಅಸ್ಥಿರತೆ ಉಂಟಾಯಿತು. ಅರಣ್ಯ ಇಲಾಖೆಯ 'ಒಕ್ಕಲೆಬ್ಬಿಸುವ' ಕಾರ್ಯದಿಂದ ಅವರ ಬದುಕು ಅತಂತ್ರವಾಗಿದೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇಳಿ ಬರುವ ಕೂಗು ಚಾರ್ಮಾಡಿಯಿಂದ ಶಿರಾಡಿಯವರೆಗಿನ ಕಾಡುಗಳು 'ಪುಷ್ಪಗಿರಿ ವನ್ಯಧಾಮ' ದಂತಹ ಸರ್ಕಾರಿ ಯೋಜನೆ ಫಲಪ್ರದವಾದಲ್ಲಿ ಮಲೆಕುಡಿಯರ ಬದುಕು ಅತಂತ್ರವಾಗುವುದರಲ್ಲಿ ಸಂದೇಹವೇ ಇಲ್ಲ. ಈ ದೃಷ್ಟಿಯಿಂದ ಡಾ.ಹಿ.ಚಿ. ಬೋರಲಿಂಗಯ್ಯನವರ ಕಾಡು ಕಾಂಕ್ರಿಟ್ ಮತ್ತು ಜಾನಪದ ಎಂಬ ಪುಸ್ತಕದಲ್ಲಿ "ಅರಣ್ಯದೊಳಗಿನ ಬುಡಕಟ್ಟುಗಳು: ಒಂದು ವಿವೇಚನೆ" ಎನ್ನುವ ಲೇಖನ ಬಹಳ ಮಹತ್ವವಾದುದು.

೪. ೫. ಕರ್ನಾಟಕ ಸಂಸ್ಕೃತಿಗೆ ಮಲೆಕುಡಿಯರ ಕೊಡುಗೆ :

ದ.ಕ. ಜಿಲ್ಲೆಯಲ್ಲಿ ಅನೇಕ ಪರಿಶಿಷ್ಟ ಪಂಗಡದವರು ನೆಲೆಸಿದ್ದಾರೆ. ಆದರೆ ಇವರಲ್ಲಿ ಕೆಲವರು ಗಿರಿಜನರಾಗಿಯೂ ಇನ್ನು ಕೆಲವರು ನಾಡಿನಲ್ಲಿಯೂ ಬಂದು ನೆಲೆಸಿದ್ದಾರೆ. ಈ ಜನಾಂಗದ ಅಧ್ಯಯನ ಕೆಲವು ಕಾರಣಗಳಿಂದ ಪ್ರಮುಖವೆನಿಸುತ್ತದೆ. ಮಲೆಕುಡಿಯರು ಸಾಂಸ್ಕೃತಿಕವಾಗಿ ತಮ್ಮದೇ ವೈಶಿಷ್ಟ್ಯಗಳನ್ನು ಹೊಂದಿರುವ ಕಾರಣ 'ಸಂಸ್ಕೃತಿ'ಯ ವೈಶಿಷ್ಟ್ಯ ಉಳಿದ ಸಂಸ್ಕೃತಿಗಿಂತ ಹೇಗೆ ಭಿನ್ನ ಎಂದು ತಿಳಿಯಲು ಎಲ್ಲ ಜನಾಂಗಗಳ ಅಧ್ಯಯನ ಅನಿವಾರ್ಯ ಮತ್ತು ಸಮಾಜ ಮತ್ತು ಸಂಸ್ಕೃತಿ ಕುರಿತ ಅಧ್ಯಯನ ಮಹತ್ವದ್ದಾಗಿರುತ್ತದೆ.

ಮಲೆಕುಡಿಯರ ಸಂಸ್ಕೃತಿಯನ್ನು ಹೀಗೆ ಪಟ್ಟಿ ಮಾಡಬಹುದು:

೧. ಇವರಲ್ಲಿ ತಮ್ಮದೇ ಆದ ಒಳಾಡಳಿತ ವ್ಯವಸ್ಥೆ ಇದ್ದು, ಜಾತಿ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಾರೆ.

೨. ಇವರಲ್ಲಿ ಬಳಿಗಳಿವೆ (ಬರಿ). ವಿವಾಹದ ಕಾಲದಲ್ಲಿ ಬಳಿಗಳಿಗೆ ಪ್ರಾಧಾನ್ಯ ನೀಡುತ್ತಾರೆ.

೩. ಸಾಂಪ್ರದಾಯಿಕ ಉಡುಗೆ ತೊಡುಗೆಗಳಲ್ಲಿ ಮಾತ್ರ ಸ್ವಲ್ಪ ಮಟ್ಟಿನ ವಿಶೇಷವನ್ನು ಕಾಣಬಹುದಾಗಿದೆ.

೪. ಇವರಿಗೆ ಜನಪದ ವೈದ್ಯದ ಬಗ್ಗೆ ಒಲವಿದೆ.

೫. ಆಟಗಳಲ್ಲಿ ಪ್ರಾದೇಶಿಕ ಪ್ರಭಾವಗಳಿಗೆ ಒಳಗಾಗಿದ್ದಾರೆ.

೬. ಬುಟ್ಟಿಹೆಣೆಯುವಂತಹ ಪರಂಪರಾಗತ ವೃತ್ತಿಯಲ್ಲಿ ಒಲವುಳ್ಳವರಾಗಿದ್ದಾರೆ.

೭. ಜೀವನ ಚಕ್ರದ ಆಚರಣೆಗಳಲ್ಲಿ ಅವರದೇ ಆದ ಸಾಂಪ್ರದಾಯಿಕ ಮಹತ್ವವಿದೆ.

೮. ಸಂಸ್ಕಾರಗಳಲ್ಲಿ ಅವರದೇ ಆದ ಪದ್ಧತಿಯನ್ನು ಉಳಿಸಿಕೊಂಡಿದ್ದಾರೆ.

೯. ಆರಾಧನೆ ಮತ್ತು ಆಚರಣೆಯಲ್ಲಿ ವೈವಿಧ್ಯಗಳಿರುವಂತೆ ಮೂಲ ಸಂಪ್ರದಾಯವನ್ನು ಉಳಿಸಿಕೊಂಡು ಪರಿಸರದ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿದ್ದಾರೆ.

೧೦. ಮಲೆಕುಡಿಯರು ವ್ಯವಹಾರಕ್ಕೆ ಕೆಲವರು ಕನ್ನಡವನ್ನು, ಇನ್ನು ಕೆಲವರು ತುಳುವನ್ನು ಮಾತನಾಡುತ್ತಾರೆ. ಆದರೆ ಕೆಲವು ಪ್ರದೇಶದ ಮಲೆಕುಡಿಯರು ಒಂದು ಮೋಡಿ ತುಳುಭಾಷೆಯನ್ನು (ತಮ್ಮದೇ ಆದ ಕಾಡು ತುಳು) ಮಾತನಾಡುತ್ತಾರೆ.

೧೧. ಮಲೆಕುಡಿಯರಲ್ಲಿ ಜನಪದ ಕತೆ, ಗಾದೆ, ಒಗಟುಗಳು ಹೇರಳವಾಗಿ ಸಿಗುತ್ತವೆ. ಆದರೆ ಇದು ಬೇಸಾಯ ಸಂಸ್ಕೃತಿ ಜನರೊಂದಿಗಿನ ಸಂಪರ್ಕದಿಂದ ಬಂದುದಾಗಿರಬಹುದು.

*****

ಅಧ್ಯಾಯ ೫

ಮಲೆಕುಡಿಯರ ಪರಿವರ್ತನೆಯ ಸಂಕ್ರಮಣ ಕಾಲ

೫. ೧ ಪರಂಪರೆ ಮತ್ತು ಆಧುನಿಕತೆಯ ಸಂಘರ್ಷ

೫. ೨ ಮಲೆಕುಡಿಯರ ಸಂಸ್ಕೃತಿಯ ಮೇಲೆ ಅನ್ಯ ಸಂಸ್ಕೃತಿಯ ಪ್ರಭಾವ

೫. ೩ ಬುಡಕಟ್ಟುಗಳ ಅಭಿವೃದ್ಧಿಗೆ ಪಂಚವಾರ್ಷಿಕ ಯೋಜನೆಗಳು

೫. ೪ ಬುಡಕಟ್ಟು ಅಭಿವೃದ್ಧಿ ಚಿಂತನೆಗಳು

೫. ೫ ಸಾಂಸ್ಕೃತಿಕ ಅನನ್ಯತೆ

ಅಧ್ಯಾಯ : ೫

ಮಲೆಕುಡಿಯರ ಪರಿವರ್ತನೆಯ ಸಂಕ್ರಮಣ ಕಾಲ

ಜಾತಿ ವ್ಯವಸ್ಥೆಯ ಪ್ರಭಾವ, ಅರಣ್ಯ ನಾಶ, ನಗರೀಕರಣ, ಅಭಿವೃದ್ಧಿಯ ನೆಪದಲ್ಲಿ ಬರುವ ಕಾರ್ಯಕ್ರಮಗಳು, ಆಧುನಿಕ ಪ್ರಕ್ರಿಯೆ ಇತ್ಯಾದಿಗಳು ಮಲೆಕುಡಿಯರ ಸಾಮಾಜಿಕ ಸಾಂಸ್ಕೃತಿಕ ಮತ್ತು ಆರ್ಥಿಕ ಜೀವನದ ಮೇಲೆ ಪ್ರಭಾವ ಬೀರಿವೆ. ಇಂದು ಬುಡಕಟ್ಟು ಜನರ ವಿವಾಹ ಕ್ರಮ, ಕುಟುಂಬ ಪದ್ಧತಿ, ಆಹಾರ, ವೇಷ-ಭೂಷಣ, ಕಸುಬು, ಧಾರ್ಮಿಕ ಅಂಶಗಳು ಆಧುನಿಕ ಬದಲಾವಣೆಯ ಗಾಳಿಗೆ ಸಿಲುಕಿ ತಮ್ಮ ಅನನ್ಯತೆಯನ್ನು ಕಳೆದುಕೊಳ್ಳುತ್ತಿವೆ. ಇಂದು ಮಲೆಕುಡಿಯ ಜನರು ಬುಡಕಟ್ಟು ಜನರಾಗಿ ಉಳಿಯದೆ ಜಾತಿ ವ್ಯವಸ್ಥೆಯ ಸಾಮಾಜಿಕ, ಸಾಂಸ್ಕೃತಿಕ ಅಂಶಗಳನ್ನು ಅನುಕರಿಸಲು ಪ್ರಾರಂಭಿಸಿದ್ದಾರೆ. ಈ ಒಂದು ಪ್ರಕ್ರಿಯೆ ಸಂಚಲನೆ ದೃಷ್ಟಿಯಿಂದ ನೇತ್ಯಾತ್ಮಕವಾಗಿ ಕಂಡರೂ ಸಾಂಸ್ಕೃತಿಕ ಅನನ್ಯತೆಯ ದೃಷ್ಟಿಯಿಂದ ಕನಿಷ್ಠ ಮಟ್ಟಿಗಾದರೂ ಮಲೆಕುಡಿಯರ, ಧರ್ಮ, ಕಲೆ, ಸಂಸ್ಕೃತಿಗಳ ಪರಂಪರೆಯನ್ನು ಸಂರಕ್ಷಿಸುವುದು ಈಗಿನ ಆದ್ಯ ಕರ್ತವ್ಯ.

೫. ೧ : ಪರಂಪರೆ ಮತ್ತು ಆಧುನಿಕತೆಯ ಸಂಘರ್ಷ :

ಬುಡಕಟ್ಟುಗಳು ಬಹು ಹಿಂದಿನಿಂದಲೂ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ನ್ಯೂನ್ಯತೆಗಳನ್ನು ಅನುಭವಿಸುತ್ತಾ ಬಂದಿವೆ. ಅನಾದಿ ಕಾಲದಿಂದಲೂ ಅವು ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಉಳಿಸಿಕೊಂಡಿದ್ದರ ಪರಿಣಾಮವಾಗಿ ಸಮಾಜದ ಇತರ ವರ್ಗಗಳ ಶೋಷಣೆಗೆ ಗುರಿಯಾಗಿ ಬಹು ಹಿಂದುಳಿಯಬೇಕಾಯಿತು. ಔದ್ಯೋಗಿಕತೆಯ ಪ್ರವೇಶವಾದ ಮೇಲೂ ಬಹುಕಾಲದವರೆಗೆ ಅವರನ್ನು ಜೀತದಾಳುಗಳನ್ನಾಗಿ ನೇಮಿಸಿಕೊಂಡು ದುಡಿಸಿಕೊಳ್ಳಲಾಯಿತು. ಆಧುನೀಕರಣ ಮತ್ತು ಕೈಗಾರಿಕರಣ ದೇಶದಲ್ಲಿ ಅರಣ್ಯ ಪ್ರದೇಶವನ್ನು ಕಿರಿದುಗೊಳಿಸಿತು. ಇದು ಬುಡಕಟ್ಟು ಜನರ ಜೀವನೋಪಾಯಕ್ಕೆ ಪ್ರತಿಕೂಲವಾಯಿತು. ಪುನರ್‌ವಸತಿ ಮತ್ತು ಪುನರ್‌ಬಂಡವಾಳ ಯೋಜನೆಗಳು ಅವರನ್ನು ಕಾಡಿನಿಂದ ಬಯಲಿಗೆ ಸ್ಥಳಾಂತರಗೊಳಿಸಿದ ಕಾರಣ ಅವರ ಬದುಕಿನಲ್ಲಿ ಅಸ್ಥಿರತೆ ಉಂಟಾಯಿತು.

ಕರ್ನಾಟಕದ ಬುಡಕಟ್ಟು ಜನರ ಸಮಸ್ಯೆಗಳು ಅರಣ್ಯ ಕ್ಷೇತ್ರದ ಸಂಪಾದನೆಗಾಗಿ ಮದ್ರಾಸ್ ಪ್ರಾಂತ್ಯ ೧೮೬೪ರಲ್ಲಿ ಬುಡಕಟ್ಟು ಜನರನ್ನು ನೇಮಿಸಿಕೊಂಡಾಗಲೇ ಆರಂಭವಾಯಿತು. ಇದು ಅರಣ್ಯ ಸಂಪನ್ಮೂಲಗಳ ವ್ಯಾಪಕ ಶೋಷಣೆಯ ಆರಂಭವೇ ಆಗಿತ್ತು. ಮರಗಳ ನಾಶಕ್ಕಾಗಿ ಬುಡಕಟ್ಟು ಜನರನ್ನು ಅತ್ಯಂತ ಕಡಿಮೆ ಕೂಲಿಗೆ ನೇಮಿಸಿಕೊಳ್ಳಲಾಯಿತು. ಅಂದಿನಿಂದ ಕರ್ನಾಟಕದ ಬುಡಕಟ್ಟು ಜನರು ಅನೇಕ ರೀತಿಯ ನ್ಯೂನ್ಯತೆಗಳನ್ನು ಮತ್ತು ಕೊರತೆಗಳನ್ನು ನಿರಂತರವಾಗಿ ಅನುಭವಿಸಬೇಕಾಯಿತು.

ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಬೇರೆ ಬೇರೆ ಬುಡಕಟ್ಟುಗಳನ್ನು ಗುರುತಿಸಲಾಗಿದೆ. (ಅವರುಗಳೆಂದರೆ ಗೌಡ್ಲು, ಹಸಲರು, ಇರುಳಿಗರು, ಜೇನುಕುರುಬರು, ಕಾಡುಕುರುಬರು, ಮಲೈಕುಡಿ, ಮೊಲೇರು, ಸೋಲಿಗರು, ಗೊಂಡರು, ಚೆಂಚುಗಳು, ಇರುಳರು, ಕೊರಗರು, ಕೋಟ, ತೊದವ, ಕೊರಮ, ಮಲೆಕುಡಿಯ, ಮೇದರು, ಎರವರು ಮುಖ್ಯರಾದವರು) ಈ ಎಲ್ಲಾ ಬುಡಕಟ್ಟು ಜನರೂ ಇಂದಿನ ರೀತಿಯ ನಾಗರಿಕ ಪ್ರಪಂಚದಿಂದ ದೂರವೇ ಉಳಿದವರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬುಡಕಟ್ಟುಗಳ ಸಾಲಿಗೆ ಸೇರಿರುವ ಮಲೆಕುಡಿಯರು ತಮ್ಮದೇ ಆದ ಜೀವನ ವಿಧಾನವನ್ನು ರೂಪಿಸಿಕೊಂಡು ವಿಶಿಷ್ಟವಾದ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದವರು. ಇತರ ಸಮುದಾಯಗಳಷ್ಟೇ ಅಥವಾ ಅದಕ್ಕೂ ಮಿಗಿಲಾಗಿ ಸ್ವಾಭಿಮಾನ ಮತ್ತು ಆತ್ಮ ಶಕ್ತಿಗಳನ್ನು ಗಳಿಸಿಕೊಂಡವರು. ಒಟ್ಟಿನಲ್ಲಿ ಬೆಟ್ಟಗುಡ್ಡಗಳಲ್ಲಿ ನೆಲೆಸಿರುವ ಈ ಗಿರಿಜನರ ಸಂಸ್ಕೃತಿ ಅನನ್ಯವಾದುದು.

ಪ್ರತಿಯೊಂದು ಬುಡಕಟ್ಟು ಸಮೂಹ ಕೂಡ ತನಗೆ ವಿಶಿಷ್ಟವಾದ ಉಪಭಾಷೆ, ಸಂಪ್ರದಾಯಗಳು, ಸಾಹಿತ್ಯ, ಕಲೆ ಮತ್ತು ಆರ್ಥಿಕ ವ್ಯವಸ್ಥೆಯನ್ನು ಹೊಂದಿರುತ್ತದೆ. ಅಲ್ಲದೆ ಒಂದೊಂದು ಬುಡಕಟ್ಟು ಸಮೂಹ ಒಂದು ಸ್ಪಷ್ಟ ಭಾಷಿಕ ಎಲ್ಲೆಯನ್ನು ಗುರುತಿಸಿಕೊಂಡಿವೆ.

ಮಲೆಕುಡಿಯ ಜನಾಂಗವು ತನ್ನ ಪರಂಪರಾಗತ ಕಸುಬಿನೊಡನೆ ಬೇರೆ ಹವ್ಯಾಸಗಳಲ್ಲೂ ಆಸಕ್ತಿ ತೋರುತ್ತಿರುವುದನ್ನು ಕಾಣಬಹುದು. ಬೇಟೆ, ಜೇನು ಸಾಕಾಣಿಕೆ, ಬುಟ್ಟಿ ಹೆಣೆಯುವಿಕೆ, ಬಿದಿರುಕೆಲಸ, ಕೃಷಿ ಇವೇ ಮುಂತಾದ ವೃತ್ತಿಗಳಲ್ಲಿ ತೊಡಗಿದ್ದಾರೆ. ಇವರು ವ್ಯವಸಾಯ ವೃತ್ತಿಯನ್ನು ಅವಲಂಬಿಸಿರುವುದು ಮತ್ತು ಕೃಷಿ ಕಾರ್ಮಿಕರಾಗಿರುವುದು ಸಾಮಾನ್ಯ. ಇವರಲ್ಲಿ ಕೆಲವು ಮಂದಿ ತಮಗೆ ಪ್ರಿಯವಾದ ಅರಣ್ಯ ಕೆಲಸದಲ್ಲೇ ಮುಂದುವರೆದಿರುವುದುಂಟು ಮತ್ತೆ ಕೆಲವರು ಕಾಡಿನ ಗುತ್ತಿಗೆದಾರರಿಗೆ ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸಿಕೊಡುವ ಕಾರ್ಮಿಕರಾಗಿಯೂ ಕೆಲಸ ನಿರ್ವಹಿಸುವವರಿದ್ದಾರೆ. ಬದಲಾದ ಸಾಮಾಜಿಕ ವ್ಯವಸ್ಥೆ ಹಾಗೂ ಕೈಗಾರಿಕೀಕರಣದ ಪರಿಣಾಮದಿಂದಾಗಿ ಅನೇಕರು ತಮ್ಮ ಮೂಲ ಸ್ಥಾನಗಳನ್ನು ತೊರೆದು ಪಾರಂಪರಿಕ ಕಸುಬುಗಳನ್ನು ಕೈಬಿಟ್ಟಿದ್ದಾರೆ. ಅಂತೆಯೇ ಅವರ ಆರ್ಥಿಕ ಜೀವನವೂ ಬದಲಾಗಿದೆ. ಈ ಜನರ ಆರ್ಥಿಕ ವ್ಯವಸ್ಥೆಯ ಗುಣಾತ್ಮಕ ಹಾಗೂ ಪರಿಣಾಮಾತ್ಮಕ ಮುಖಗಳನ್ನು ಗುರುತಿಸಲು ಈ ಕೆಳಗೆ ಕಾಣಿಸಿದ ನಾಲ್ಕು ಅಂಶಗಳನ್ನು ಲಕ್ಷಿಸಬಹುದು.

೧. ಜೀವನೋಪಾಯ ಮೂಲಗಳು

೨. ಆರ್ಥಿಕ ಚಟುವಟಿಕೆಗಳಲ್ಲಿ ಕೆಲಸದ ವಿಂಗಡಣೆ

೩. ಪರಂಪರಾಗತ ವೃತ್ತಿಗಳು ಮತ್ತು ಅವಲಂಬಿಸಿದ ಹೊಸ ವೃತ್ತಿಗಳು

೪. ಆರ್ಥಿಕ ಚಟುವಟಿಕೆಯ ಮೇಲೆ ಬಡತನದ ಪ್ರಭಾವ.

ಸಾಕಷ್ಟು ಮೂಲ ಸ್ವರೂಪದಲ್ಲೇ ತಮ್ಮ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಕಾಯ್ದುಕೊಂಡು ಬಂದಿರುವ ಮಲೆಕುಡಿಯರ ಆರ್ಥಿಕ ಜೀವನ ಈ ಮೇಲೆ ಹೇಳಿದ ಕಾರಣಗಳಿಗಾಗಿ ಅಭ್ಯಾಸಯೋಗ್ಯವಾಗಿದೆ. ಮಲೆಕುಡಿಯರ ಪ್ರಧಾನ ಕಸುಬು 'ಕುಮರಿ ಬೇಸಾಯ' ಬಲು ಸಾಂಪ್ರದಾಯಿಕವಾದುದು. ವ್ಯವಸ್ಥಿತ ರೀತಿಯ ಬೇಸಾಯ ಕ್ರಮವನ್ನು ಇವರು ಅರಿಯರು. ಬೆಟ್ಟದ ಇಳಿಜಾರು ಪ್ರದೇಶದಲ್ಲಿ ತಮ್ಮ ಕುಡುಗೋಲು ಮತ್ತು ಕಳೆ ಗುದ್ದಲಿಗಳಿಂದ ನೆಲವನ್ನು ಕೆರೆದೊ, ಅಗೆದೊ ತಕ್ಕಮಟ್ಟಿಗೆ ಹದ ಮಾಡಿ ಬೀಜ ಬಿತ್ತಿ ಬೆಳೆಯುತ್ತಾರೆ. ಎಷ್ಟೋ ವೇಳೆ ಅವರು ಬೆಳೆದ ಬೆಳೆ ಕೈಗೆ ಬರುವ ಕಾಲದಲ್ಲಿ ಆನೆಗಳ ತುಳಿತಕ್ಕೆ ಸಿಕ್ಕು ಅವರ ಶ್ರಮ ನಿರರ್ಥಕವಾಗುವುದುಂಟು. ಆದರೂ ಬೇಸರವಿಲ್ಲದೆ ಈ ಜನ 'ಕುಮರಿ ಬೇಸಾಯ' ಮುಂದುವರಿಸುತ್ತಿದ್ದರು. ಈ ಕುಮೇರಿ ಬೇಸಾಯದಿಂದ ಇವರ ಹೊಟ್ಟೆಪಾಡು ಹೊರೆಯಲು ಸಾಕಾಗುತ್ತಿರಲಿಲ್ಲ. ಅದಕ್ಕಾಗಿ ಇವರು ಕಾಡಿನಲ್ಲಿ ದೊರಕುವ ಪದಾರ್ಥಗಳನ್ನು ಸಂಗ್ರಹಿಸುತ್ತಿದ್ದರು. ನಾನಾ ಬಗೆಯ ಗೆಡ್ಡೆ ಗೆಣಸುಗಳನ್ನು, ಜೇನು ಮುಂತಾದವುಗಳನ್ನು ಸಂಗ್ರಹಿಸುತ್ತಿದ್ದರು.

ನಂತರದ ಕಾಲದಲ್ಲಿ ಮಲೆಕುಡಿಯರು ಹೊಟ್ಟೆಪಾಡಿಗಾಗಿ ಬೇರೆ ಬೇರೆ ಉದ್ಯೋಗಗಳನ್ನು ಹುಡುಕಾಡಿದರು. ಮುಖ್ಯವಾಗಿ ಕಾಡು ಮತ್ತು ಸಮಾಜದಿಂದ ಉಪಯೋಗವನ್ನು ಪಡೆದುಕೊಳ್ಳುತ್ತಾರೆ. ಬೇರೆಲ್ಲ ಕಸುಬುಗಳಿಗಿಂತ ಕಾಡಿನಲ್ಲಿ ತರಕಾರಿ, ಹಣ್ಣು ಹಂಪಲು, ಏಲಕ್ಕಿ ಮುಂತಾದವುಗಳನ್ನು ಬೆಳೆಯುವುದು, ಚಾಪೆ, ಬುಟ್ಟಿ ಮುಂತಾದವುಗಳನ್ನು ಹೆಣೆಯುವುದಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ತಾವು ಬೆಳೆದ ತರಕಾರಿ, ಹಣ್ಣು ಹಂಪಲು, ಬುಟ್ಟಿ ಮುಂತಾದವುಗಳನ್ನು ತಲೆಯ ಮೇಲೆ ಹೊತ್ತು ಕಾಲು ನಡಿಗೆಯಲ್ಲೇ ಕಾಡನ್ನು ದಾಟಿ ಹಳ್ಳಿಯ ಸಂತೆಗೆ ಹೋಗುತ್ತಾರೆ. ಕಾಡಿನಿಂದ ತಂದ ವಸ್ತುಗಳನ್ನು ಮಾರಿ ಬಂದ ಹಣದಿಂದ ತಮಗೆ ಬೇಕಾದ ಸಾಮಾನುಗಳನ್ನು ಕೊಂಡುಕೊಳ್ಳುತ್ತಿದ್ದರು. ಮೊದಲಿಗೆ ಕಾಡಿನಿಂದ ಸಂಗ್ರಹಿಸಿ ತಂದ ಪದಾರ್ಥಗಳನ್ನು ಹಣಕ್ಕೆ ಮಾರದೆ ಅವಶ್ಯಕ ವಸ್ತುಗಳ ವಿನಿಮಯಕ್ಕೆ ಬಳಸಿಕೊಳ್ಳುತ್ತಿದ್ದರು. ಈಗ ಆ ಪದ್ಧತಿ ಸಂಪೂರ್ಣ ಮಾಯವಾಗಿದೆ.

ಮಲೆಕುಡಿಯರು ಕಾಡಿನ ಗಿಡ ಮೂಲಿಕೆಗಳ ಸಂಗ್ರಹಣೆಯಲ್ಲೂ ಪರಿಣತರು. ವಿವಿಧ ಜಾತಿಯ ಪ್ರಾಣಿಗಳ ಕೋಡುಗಳು, ಮೂಳೆಗಳು, ಚರ್ಮ, ಮುಂತಾದವುಗಳ ಸಂಗ್ರಹಕ್ಕೂ ವಿಶೇಷ ಗಮನ ನೀಡುತ್ತಿದ್ದರು. ಕಾಡುಗಳಲ್ಲೇ ಇರುವುದರಿಂದ ಮಲೆಕುಡಿಯರು ಉತ್ತಮ ಬೇಟೆಗಾರರೂ ಹೌದು. ಕಾಡು ಮೃಗಗಳ ಸ್ವಭಾವವನ್ನು ಇವರು ಚೆನ್ನಾಗಿ ಅರಿತವರಾಗಿದ್ದಾರೆ. ಕಡವೆ, ಹಂದಿ, ಕಾಡೆಮ್ಮೆ, ಮುಂತಾದವುಗಳನ್ನು ಇವರು ಸುಲಭವಾಗಿ ಬೇಟೆಯಾಡುತ್ತಾರೆ. ಪುರುಷರು ಮಾತ್ರ ಬೇಟೆಯಾಡುವುದು ಸಾಮಾನ್ಯ. ಒಂಟಿಯಾಗಿಯೋ, ಗುಂಪಿನಲ್ಲೋ ಬೇಟೆಗೆ ಹೋಗುತ್ತಾರೆ. ಹಗಲು ಮತ್ತು ರಾತ್ರಿ –ಎರಡೂ ಹೊತ್ತು ಬೇಟೆ ನಡೆಸುವುದು ರೂಢಿ. ಕಾಡಿನಲ್ಲಿ ಬಹುವೇಗವಾಗಿ ಸಂಚರಿಸಬಲ್ಲರು. ಎದುರಿನಲ್ಲೇ ಕಾಡಾನೆ

ಬಂದರೂ ಸುಲಭವಾಗಿ ತಪ್ಪಿಸಿಕೊಂಡು ಹೋಗುವ ಚತುರರು. ಬಿಲ್ಲು ಬಾಣ ಉಪಯೋಗಿಸುವುದರಲ್ಲೂ ಇವರು ನಿಸ್ಸೀಮರು.

ಇತ್ತೀಚೆಗೆ ಕೆಲವು ಮಲೆಕುಡಿಯರು ನೆರೆಹೊರೆಯ ಹಳ್ಳಿಗಳಿಗೆ ಹೋಗಿ ರೈತರ ಆಳು ಮಕ್ಕಳಾಗಿ ದುಡಿಯುತ್ತಿದ್ದಾರೆ. ದಿನಗೂಲಿಗಳಾಗಿ ಒಂಟಿಯಾಗಿ ಹೋಗಿ ದುಡಿಯುವುದು ಸಾಮಾನ್ಯ. ಅವರು ಹೀಗೆ ಕೃಷಿ ಕಾರ್ಮಿಕರಾಗಿ ಹೋಗುವುದರ ಉದ್ದೇಶ ಮುಂಗಾರಿನಲ್ಲಿ ಹೊಟ್ಟೆ ಹೊರೆಯಲು ಬೇಕಾದ ದವಸ ಧಾನ್ಯಗಳನ್ನು ಶೇಖರಿಸಿಟ್ಟುಕೊಳ್ಳುವುದು. ಸಾಮಾನ್ಯವಾಗಿ, ಹಳ್ಳಿಗೆ ಬಂದಾಗ ಹಳ್ಳಿಯ ಸರಹದ್ದಿನಾಚೆ ಗುಡಿಸಲು ನಿರ್ಮಿಸಿಕೊಂಡು ವಾಸಮಾಡುತ್ತಾರೆ. ಅನೇಕ ವೇಳೆ ರೈತರಲ್ಲಿ ಸಾಲ ಸೋಲ ಮಾಡಿ ಹಳ್ಳಿಯ ವ್ಯವಹಾರದಲ್ಲಿ ತೊಡಗಿ ಅಲ್ಲಿಯೇ ನೆಲೆಸಿರುವ ನಿದರ್ಶನಗಳಿವೆ. ಹೀಗೆ ಅನೇಕ ಕುಟುಂಬಗಳು ತಮ್ಮ ಮೂಲಸ್ಥಾನದಿಂದ ಕಳಚಿಕೊಂಡಿವೆ.

ಇವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳದಿರಲು ಮುಖ್ಯವಾಗಿ ಈ ಕಾರಣಗಳನ್ನು ಗುರುತಿಸಬಹುದು.

೧. ಕಾಡಿನಲ್ಲೇ ನೆಲೆಸಿರುವ ಈ ಜನ ಮೂಲಸ್ಥಾನದಿಂದ ಕದಲದೆ ಜೀವನ ನಡೆಸಬಯಸುವುದು.

೨. ಭೂಮಿಯ ಫಲವತ್ತತೆಯನ್ನು ಅನುಸರಿಸಿ 'ಕುಮೇರಿ ಬೇಸಾಯಕ್ಕೆ' ತೊಡಗದಿರುವುದು.

೩. ಕಾಡಿನ ಸಂಪನ್ಮೂಲಗಳನ್ನು ಖಾಸಗಿಯವರಿಗೆ ಮಾರುವುದು.

೪. ಕೃಷಿ ಕಾರ್ಮಿಕರಾಗಿ ಹಳ್ಳಿಗೆ ಹೋದವರು ದುಶ್ಚಟಗಳಿಗೆ ಬಲಿಯಾಗಿ ಸಾಲದಲ್ಲಿ ಮುಳುಗುವುದು.

೫. ಹೊಸ ಆರ್ಥಿಕ ಚಟುವಟಿಕೆಗಳಲ್ಲಿ ಆಸಕ್ತಿ ಹೊಂದಿಲ್ಲದಿರುವುದು.

ಮಲೆಕುಡಿಯರು ಬದಲಾದ ಪರಿಸ್ಥಿತಿಯಲ್ಲಿ ವಿಭಿನ್ನ ಮಾದರಿಯ ಜೀವನ ಕ್ರಮವನ್ನು ರೂಪಿಸಿಕೊಳ್ಳುತ್ತಿದ್ದಾರೆ. ಬಹುತೇಕ ಎಲ್ಲ ಮಲೆಕುಡಿಯ ಜನರಲ್ಲೂ ಮಗ್ಗದ ಬಟ್ಟೆಗಳಿಗೆ ಬದಲಾಗಿ ಕಾರ್ಖಾನೆಗಳಲ್ಲಿ ತಯಾರಾಗುವ ಬಟ್ಟೆಗಳನ್ನು, ಸೀರೆಗಳನ್ನು ಧರಿಸಿಕೊಳ್ಳುತ್ತಿದ್ದಾರೆ. ಸಾಂಪ್ರದಾಯಿಕ ಶಿಕ್ಷಣವನ್ನು ರೂಢಿಸಿಕೊಂಡಿದ್ದಾರೆ. ಹೆಂಗಸರು ಕೊರಳಿಗೆ ಮಣಿಸರಗಳನ್ನೂ ಕಿವಿಗೆ ಒಡವೆಗಳನ್ನೂ ತೊಡಿಸುತ್ತಾರೆ. 'ಗೊರಬು' ಬಳಸುವುದಕ್ಕೆ ಬದಲಾಗಿ ಬಟ್ಟೆ ಛತ್ರಿಗಳನ್ನು ಬಳಸುತ್ತಾರೆ. ಹೆಚ್ಚು ಕಡಿಮೆ ಎಲ್ಲ ಮನೆಗಳಲ್ಲೂ ರೇಡಿಯೋ, ಟೀವಿ, ಫೋನ್‌ಗಳಿವೆ. ಕೆಲವು ನೆಲೆಗಳಂತೂ ವಿದ್ಯುದೀಕರಣಕ್ಕೊಳಗಾಗಿದೆ. ಬಹುತೇಕ ಎಲ್ಲ ಮುಖ್ಯ ನೆಲೆಗಳಲ್ಲೂ ಶಾಲೆಗಳಿವೆ.

ಇತ್ತೀಚಿನ ದಿನಗಳಲ್ಲಂತೂ ಮಲೆಕುಡಿಯರ ಮಹಿಳೆಯರು ಮತ್ತು ಮಕ್ಕಳು ಆಧುನೀಕರಣದ ಸೆಳೆತಕ್ಕೆ ಹೆಚ್ಚು ಹೆಚ್ಚು ಒಳಗಾಗುತ್ತಿದ್ದಾರೆ. ನಗರದ ಬಗೆ ಬಗೆಯ ಸಾಧನ ಸಲಕರಣೆಗಳಿಂದ ಆಕರ್ಷಿತರಾಗಿದ್ದಾರೆ. ಶಿಕ್ಷಣದ ಪ್ರವೇಶದಿಂದಾಗಿ ಮಲೆಕುಡಿಯ ಜನರ ಸಾಂಸ್ಕೃತಿಕ ಬದುಕಿನ ಮೇಲೆ

ಸಾಕಷ್ಟು ಪ್ರಭಾವ ಬೀರಿವೆ. ಇತ್ತೀಚಿನ ದಿನಗಳಲ್ಲಿ ಮಲೆಕುಡಿಯರ ಮಕ್ಕಳಲ್ಲಿ ತಮ್ಮ ಪರಂಪರಾಗತ ಕಲಾ ಪ್ರದರ್ಶನಗಳನ್ನು ಮರೆತುಬಿಡುತ್ತಿದ್ದಾರೆ.

ಮಲೆಕುಡಿಯರಲ್ಲಿ ಶಿಕ್ಷಣ ಹೊಂದಿದವರಿಗೆ ಸಾಮಾಜಿಕ ಪ್ರತಿಷ್ಠೆಯೂ ಲಭಿಸಿದೆ. ಶಿಕ್ಷಣವು ಮಲೆಕುಡಿಯ ಜನರ ವಿವೇಚನಾ ಶಕ್ತಿಯನ್ನು ವೃದ್ಧಿಸಿರುವುದರೊಂದಿಗೆ ಸಂಸ್ಕೃತಿ ಅನುಷ್ಠಾನದಲ್ಲಿ ಬದಲಾವಣೆ ತಂದಿದೆ. ನೆರೆಹೊರೆಯ ಸಮುದಾಯಗಳಲ್ಲಿ ಪ್ರಚಲಿತವಿರುವ ವಿಧಿ ನಿಷೇಧ ಸಂಪ್ರದಾಯಾಚರಣೆಗಳನ್ನಷ್ಟೇ ಮುಂದುವರಿಸಿಕೊಂಡು ಹೋಗುವ ಇಚ್ಛೆಯೂ ಪ್ರಕಟಗೊಂಡಿದೆ. ಇದು ಮಲೆಕುಡಿಯ ಸಮೂಹ ಯಾವ ದಿಕ್ಕಿನಲ್ಲಿ ಸಾಗುತ್ತಿವೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಮಲೆಕುಡಿಯರ ಬದಲಾದ ಆರ್ಥಿಕ ಜೀವನಕ್ಕೆ ಹೊಂದಿಕೊಂಡಂತೆ ಹೊಸ ಆಯಾಮವನ್ನೇ ಪಡೆದಿವೆ. ಹೋಬಳಿ, ತಾಲ್ಲೂಕು, ಜಿಲ್ಲೆ, ರಾಜ್ಯ ಮಟ್ಟಗಳಲ್ಲಿ ಪಾಲ್ಗೊಳ್ಳುತ್ತಿರುವ ಕಲಾ ತಂಡಗಳು ಪ್ರಶಸ್ತಿಗಳನ್ನು ಗಳಿಸುತ್ತಿವೆ. ಆಕಾಶವಾಣಿ, ದೂರದರ್ಶನ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಇಡೀ ಜಗತ್ತಿಗೆ ತಮ್ಮ ಕಲೆಗಳ ವೈಭವವನ್ನು ಪ್ರದರ್ಶಿಸುತ್ತಿವೆ. ಇವೆಲ್ಲಾ ಬಿಡಿಬಿಡಿಯಾದ ಪ್ರಯತ್ನಗಳು– ಪರಂಪರಾಗತ ತಮ್ಮ ಸಂಸ್ಕೃತಿ ವಿಕಾಸ ಹೊಂದಲು ಸಹಾಯಕವಾಗಿವೆ.

ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳು ಮಲೆಕುಡಿಯರ ಜೀವನ ಶೈಲಿಯ ಮೇಲೆ ಪರಿಣಾಮವನ್ನುಂಟು ಮಾಡಿವೆ. ಗುಂಪು ಜೀವನ ನಡೆಸುತ್ತಿದ್ದ ದುಡಿಮೆಯಲ್ಲಿ ಸಹಕಾರಿ ತತ್ವವನ್ನು ಅನುಸರಿಸುತ್ತಿದ್ದ ಮಲೆಕುಡಿಯರು ಇಂದು ಸ್ವತಂತ್ರ ಕುಟುಂಬಗಳಾಗಿ ಜೀವನ ನಡೆಸುತ್ತಾರೆ. ನಿಸರ್ಗ ಮತ್ತು ರಕ್ಷಣೆಯ ಕಾರಣದಿಂದ ಅನೇಕ ಕುಟುಂಬಗಳು ಒಂದೇ ಕಡೆ ಇರುವುದನ್ನು ಇಂದಿಗೂ ಕಾಣುತ್ತೇವೆ. ಸಾಮಾನ್ಯವಾಗಿ ೪೦ ರಿಂದ ೫೦ ಕುಟುಂಬಗಳು ಒಂದು ಕಡೆ ಇರುತ್ತದೆ. ಉದಾಹರಣೆಗೆ ಬೆಳ್ತಂಗಡಿ ತಾಲೂಕಿನ ನೆರಿಯ ಗ್ರಾಮದ ಅಲಂಗಾಯಿ ಕಾಲೋನಿ, ಕೊಲೊಡಿ ಕಾಲೋನಿ, ಅಂಬಟೆಮಲೆ, ಬಾಂಜಾರುಕಾಲೊನಿ, ಚಾರ್ಮಾಡಿಯ ಅನಾರುಕೋಲೊನಿ, ಧರ್ಮಸ್ಥಳದ ಮುಳಿಕ್ಕಾರುಕಾಲೊನಿ– ಇಂತಹ ಕಡೆಗಳಲ್ಲಿ ಮಲೆಕುಡಿಯರ ಕುಟುಂಬಗಳ ಗುಂಪುಗಳಿವೆ.

ಬದಲಾದ ಆರ್ಥಿಕ ವ್ಯವಸ್ಥೆಯಿಂದಾಗಿ ಮಲೆಕುಡಿಯರ ಸಮೂಹಗಳು ಸಣ್ಣ ಹಿಡುವಳಿದಾರರು ಮತ್ತು ಕೃಷಿ ಕಾರ್ಮಿಕರಾಗಿ ಪರಿವರ್ತನೆ ಹೊಂದಿರುವುದು ಈಚಿನ ಬೆಳವಣಿಗೆ, ನಗರೀಕರಣ, ಕೈಗಾರಿಕೀಕರಣಗಳು ಅವರ ಸಮಸ್ಯೆಗಳನ್ನು ಮತ್ತಷ್ಟು ತೀವ್ರಗೊಳಿಸಿವೆ. ಸಾಲಗಳಿಗೆ ಭೂಮಿಯನ್ನು ಪರಭಾರೆ ಮಾಡಿಕೊಡದಂತೆ ಶಾಸನ ತಂದರೆ ಮಾತ್ರ ಮಲೆಕುಡಿಯ ಸಮೂಹಗಳಲ್ಲಿ ಆತ್ಮವಿಶ್ವಾಸ ಮೂಡಲು ಸಾಧ್ಯ.

ಈಗೀಗ ಸಂಪೂರ್ಣವಾಗಿ ಕಾಡನ್ನೇ ಅವಲಂಬಿಸಿ ಬದುಕು ನಡೆಸುವ ಬುಡಕಟ್ಟು ಸಮೂಹಗಳು ಇಲ್ಲ. ಕಾಡಿನ ನಾಶವೇ ಅದಕ್ಕೆ ಕಾರಣ. ಆದರೂ ಎಲ್ಲೆಲ್ಲಿ ದಟ್ಟ ಕಾಡಿದೆಯೋ ಅಲ್ಲಲ್ಲಿ ಬುಡಕಟ್ಟು

ಸಮೂಹಗಳ ನೆಲೆಗಳು ಉಳಿದಿವೆ. ಆದರೆ ಮೊದಲಿನಂತೆ ಈಗ ಯಾವ ಬುಡಕಟ್ಟುಗಳೂ ಕಾಡಿನ ಯಾಜಮಾನ್ಯವನ್ನು ಉಳಿಸಿಕೊಂಡಿಲ್ಲ. ಅವರ ಹಕ್ಕುಗಳನ್ನು ಮಿತಿಪಡಿಸಲಾಗಿದೆ. ಆದರೆ ಅವರಲ್ಲಿ ಕೃಷಿಯನ್ನು ಉತ್ತೇಜಿಸುವ ಯತ್ನ ಸಾಗಿದೆ. ಸಾರಿಗೆ ಸಂಪರ್ಕ, ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯ ಒದಗಿಸುವ ವಿಷಯದಲ್ಲಿ ತಕ್ಕಷ್ಟು ಸುಧಾರಣೆ ಕಂಡು ಬಂದಿದೆ. ಅನೇಕ ನೆಲೆಗಳಲ್ಲಿ ಕೃಷಿ ಕಾರ್ಯಗಳಿಗಾಗಿ ಉತ್ತಮ ತಳಿಯ ಬೀಜ, ರಾಸಾಯನಿಕ ಗೊಬ್ಬರಗಳ ಬಳಕೆ ಜನಪ್ರಿಯವಾಗಿವೆ. ಹೀಗಾಗಿ ಭೂ ಒಡೆತನ ಹೊಂದಿರುವ ಬಹುತೇಕ ಎಲ್ಲ ಬುಡಕಟ್ಟು ಕುಟುಂಬಗಳೂ ವರ್ಷಕ್ಕೊಂದು ಬೆಳೆ ತೆಗೆಯುವುದು ಸಾಮಾನ್ಯ. ಸಂಪನ್ಮೂಲಗಳ ಕೊರತೆಯಿಂದಾಗಿ ಇನ್ನು ಎಷ್ಟೋ ಕುಟುಂಬಗಳು ಕೃಷಿ ರಂಗಕ್ಕೆ ಇಳಿದಿಲ್ಲದಿರುವುದೂ ಉಂಟು. ಆದರೂ ಪರಿಸ್ಥಿತಿ ಸುಧಾರಿಸುತ್ತಿದೆ. ಸಾಲ ಮಾಡುವುದು ಕಡಿಮೆಯಾಗುತ್ತಿದೆ. ಶಿಕ್ಷಣದ ವಿಸ್ತರಣೆ ಮತ್ತು ನಗರ ಪ್ರದೇಶಗಳಲ್ಲಿ ಉದ್ಯೋಗಾನ್ವೇಷಣೆ ಆರಂಭಗೊಂಡಿರುವುದೇ ಅದಕ್ಕೆ ಆಧಾರ.

ಬೇಸಾಯದ ಋತುಗಳಲ್ಲಿ, ಕೃಷಿ ಕಾರ್ಮಿಕರು ತಮ್ಮ ಸುತ್ತಿನ ಹಳ್ಳಿಗಳಿಗೆ ಕೆಲಸಕ್ಕೆ ಹೋಗುವುದು ಈಗ ರೂಢಿಯಾಗಿದೆ. ತಿಂಗಳ ಸಂಬಳ ಗೊತ್ತು ಮಾಡಿಕೊಂಡು ನಾಲ್ಕೈದು ತಿಂಗಳ ಕಾಲ ದುಡಿದು ಹಣ ಸಂಪಾದಿಸುತ್ತಾರೆ. ಬೇಸಾಯದ ಋತುವಿನಲ್ಲಿ ನಡೆಯುವ ಈ ವಲಸೆಯಲ್ಲಿ ಸಾಲದ ಸೌಲಭ್ಯವೂ ಇರುತ್ತದೆ. ಇದು ಸ್ಥಳೀಯ ಸಮುದಾಯದವರೊಡನೆ ನಿರಂತರ ಸಂಪರ್ಕ ಸಾಧನೆಗೆ ಅವಕಾಶ ಕಲ್ಪಿಸಿದೆ. ಪರಿಣಾಮವಾಗಿ ಗುಡಿ ಕೈಗಾರಿಕೆಗಳು ಜನಪ್ರಿಯವಾಗುತ್ತಿವೆ. ಆದರೆ ತಾಂತ್ರಿಕ ಜ್ಞಾನದ ಕೊರತೆಯಿಂದಾಗಿ ಕೈಗಾರಿಕಾ ಸಂಕೀರ್ಣಗಳಲ್ಲಿ ಉನ್ನತ ಹುದ್ದೆಗಳಿಗೆ ನೇಮಕ ಹೊಂದುವ ಅವಕಾಶ ಇಲ್ಲವಾಗಿದೆ.

ಸದ್ಯ ಕೈಗಾರಿಕೀಕರಣದ ಸುಳಿಗೆ ಸಿಕ್ಕಿ ಹಾಕಿಕೊಂಡಿರುವ ಮಲೆಕುಡಿಯರ ಜನತೆ ಸಾಕಷ್ಟು ಪರಿವರ್ತನೆಗೆ ಗುರಿಯಾಗಿದ್ದಾರೆ. ಕೈಗಾರಿಕಾ ನೀತಿಯು ಬಾಂಧವ್ಯ ವಿಸ್ತರಣೆಗೆ ಅವಕಾಶ ಮಾಡಿಕೊಟ್ಟಿದೆ. ಕೈಗಾರಿಕೆಯಲ್ಲಿ ಸಾಧನೆ ತೋರಿದವರಿಗೆ (ಕರಕುಶಲ ಕಲೆಗಳಲ್ಲಿ) ವಿಶೇಷ ಮನ್ನಣೆ ಪುರಸ್ಕಾರಗಳು ಲಭಿಸುತ್ತಿವೆ. ಮಲೆಕುಡಿಯರ ಸಮೂಹಗಳ ಕಾರ್ಮಿಕರು ಇತರ ಸಮುದಾಯದ ಕಾರ್ಮಿಕರೊಡನೆ ಪರಸ್ಪರ ಕ್ರಿಯೆಗೊಳಗಾಗುತ್ತಿರುವುದರಿಂದ ತಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಪ್ರತಿಯೊಂದು ನೆಲೆಯ ಮುಖ್ಯಸ್ಥರು ತಮ್ಮ ಗುಂಪಿನ ಜನರ ಮೇಲಿನ ಹಿಡಿತವನ್ನು ಕಳೆದುಕೊಳುತ್ತಿದ್ದಾರೆ.

ಕೈಗಾರಿಕಾ ಕ್ಷೇತ್ರದ ಪ್ರಭಾವದಿಂದಾಗಿ ಗುಂಪು ಅನನ್ಯತೆಯ (Group identity) ವಿಸ್ತರಣಾ ಪ್ರವೃತ್ತಿಗಳೂ ಕಾಣಿಸಿಕೊಳ್ಳುತ್ತಿವೆ. ಅಂತರ್‌ಜಾತಿಯ ಮದುವೆ, ವಾಣಿಜ್ಯ ಸಂಬಂಧಗಳು ಕುದುರುತ್ತಿವೆ. ರಾಜಕೀಯ ಸಂಘಟನೆಗಳಲ್ಲಿ ನೇರ ಸಹಭಾಗಿತ್ವ ಕಾಣಿಸುತ್ತಿದೆ. ಸಮೂಹ ಮಾಧ್ಯಮಗಳ ಸಂಪರ್ಕ ಏರ್ಪಡುತ್ತಿದೆ. ಉಡುಗೆ, ತೊಡುಗೆ, ಆಹಾರ ಪದ್ಧತಿ ಎಲ್ಲ ವಿಷಯಗಳಲ್ಲೂ ಆಧುನಿಕತೆ ನುಸುಳುತ್ತಿದೆ. ಈ ಎಲ್ಲಾ ಕಾರಣಗಳಿಂದಾಗಿ ಮಲೆಕುಡಿಯ ಜನ ಇತರ ಸಮುದಾಯಗಳೊಡನೆ ಮುಕ್ತವಾಗಿ

ಬೆರೆಯಲಾರಂಭಿಸಿದ್ದಾರೆ. ಇದು ರಾಷ್ಟ್ರ ಜೀವನದ ಮುಖ್ಯ ವಾಹಿನಿಗೆ ಅವರನ್ನು ಎಳೆದು ತರುವ ಪ್ರಯತ್ನವೇ ಆಗಿದೆ.

ಮಲೆಕುಡಿಯ ಸಮೂಹಗಳ ಏಳಿಗೆಗಾಗಿ ಖಾಸಗಿ ಸಂಘ ಸಂಸ್ಥೆಗಳೊಡನೆ ಸರ್ಕಾರವೂ ಶ್ರಮಿಸುತ್ತಿದೆ. ರಾಜ್ಯ ಸರ್ಕಾರ ಈಚಿನ ವರ್ಷಗಳಲ್ಲಿ ಬುಡಕಟ್ಟು ಕಲ್ಯಾಣ ಯೋಜನೆಗಳಿಗಾಗಿ ಯೋಜನಾ ವೆಚ್ಚದ ಪ್ರಮಾಣ ಏರಿಸಿದೆ. ಇತರ ರಾಜ್ಯಗಳಲ್ಲಿನಂತೆ ಇಲ್ಲಿಯೂ ಕೆಲವು ಜನಪ್ರಿಯ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ನೌಕರಿಯಲ್ಲಿ ಈ ಜನರಿಗೆ ಮೀಸಲಾತಿಯನ್ನು ಒದಗಿಸಲಾಗಿದೆ. ಶೈಕ್ಷಣಿಕ ಸಂಸ್ಥೆಗಳಿಗೆ, ವಿದ್ಯಾರ್ಥಿನಿಲಯಗಳಿಗೆ ವಿಶೇಷ ಧನಸಹಾಯ ನೀಡಲಾಗಿದೆ. ಅಂತ್ಯೋದಯ ಯೋಜನೆಯಡಿ ಬುಡಕಟ್ಟು ಸಮಾಜದ ಅಂತ್ಯ ಜನರನ್ನು ಗುರುತಿಸಿ ಅವರಿಗೆ ಸಹಾಯಧನ, ಅತಿ ಕಡಿಮೆ ದರದ ಬಡ್ಡಿಯಲ್ಲಿ ಸಾಲ ಹಾಗೂ ಕಡಿಮೆ ವೆಚ್ಚದ ಮನೆಯನ್ನು ಒದಗಿಸಲಾಗಿದೆ. ಅಂತೆಯೇ ಸಾಮಾಜಿಕ ಅರಣ್ಯ ಯೋಜನೆಯಡಿ ಕಾಡು ಭೂಮಿಯನ್ನು ಇವರಿಗೆ ಕೃಷಿಗಾಗಿ ಮಂಜೂರು ಮಾಡಲಾಗಿದೆ. ಸಾಮಾಜಿಕ ಸುರಕ್ಷತಾ ನೆಡುತೋಪು ಯೋಜನೆಯನ್ವಯ ಕಾಡಿನ ಉತ್ಪನ್ನದ ಅರ್ಧ ಭಾಗವನ್ನು ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಬಹುತೇಕ ಬುಡಕಟ್ಟುಗಳು ಇನ್ನೂ ಕಾಡು ಮೇಡುಗಳಲ್ಲೇ ನೆಲೆಸಿರುವುದು ಇಂದಿನ ಪ್ರಭುತ್ವದ ಲಕ್ಷ್ಯಕ್ಕೆ ಬಂದಿದೆ. ಈ ಜನರು ಹೊಟ್ಟೆ ಹೊರೆಯುವುದಕ್ಕಾಗಿ ಕಾಡಿನ ಉತ್ಪನ್ನಗಳಾದ ಜೇನುತುಪ್ಪ, ಹಣ್ಣು ಹಂಪಲು, ಮರದ ತೊಗಟೆಗಳನ್ನು ಶೇಖರಿಸಿ ಮಾರಾಟ ಮಾಡುವುದು ಸರಕಾರದ ಗಮನದಲ್ಲಿದೆ. ಅದಕ್ಕಾಗಿ ಈ ಪದಾರ್ಥಗಳಿಗೆ ಬೆಂಬಲ ಬೆಲೆಯನ್ನು ನಿಗದಿ ಮಾಡಿ ಅವುಗಳ ಮಾರಾಟಕ್ಕಾಗಿ ಸುಮಾರು ಇಪ್ಪತ್ತಕ್ಕೂ ಹೆಚ್ಚು ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಈ ಸಂಘಗಳು ಈ ಜನರನ್ನು ಒಂದುಗೂಡಿಸಲು, ಕಾಡಿನ ಉತ್ಪನ್ನಗಳನ್ನು ದೊರಕಿಸಿಕೊಳ್ಳಲು, ಇತರ ಸಮುದಾಯದವರೊಡನೆ ಈ ಜನರು ಸಂಪರ್ಕ ಸಾಧಿಸಲು ಸಹಾಯಕವಾಗಿವೆ.

ಮಲೆಕುಡಿಯ ಜನರ ಬದುಕನ್ನು ಸುಧಾರಿಸುವುದಕ್ಕಾಗಿ ಸರ್ಕಾರ ಅನೇಕ ತರಬೇತು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ; ಜೇನು ಸಾಕಣೆ, ಬಡಗಿ ಕೆಲಸ, ಕಮ್ಮಾರಿಕೆ, ಆಹಾರೋತ್ಪನ್ನಗಳ ಸಂಸ್ಕರಣಾ ಕ್ರಿಯೆ ಇದೇ ಮುಂತಾದವಕ್ಕೆ ಸೂಕ್ತ ರೀತಿಯಲ್ಲಿ ತರಬೇತು ನೀಡಲಾಗುತ್ತಿದೆ. ಅಲ್ಲದೇ ರೇಷ್ಮೆ ಇಲಾಖೆಯು ಕಾಡಿನಲ್ಲಿ ಮಲಬರಿ ಮರಗಳ ನೆಡುವಿಕೆಗೆ ಇವರಿಗೆ ವಿಶೇಷ ಅವಕಾಶ ಕಲ್ಪಿಸಿದೆ. ಈ ಮರಗಳನ್ನು ಬೀಳು ಬಿದ್ದ ಜಮೀನಿನಲ್ಲಿ ನೆಡಲಾಗುತ್ತಿದೆ.ಈ ಉದ್ದೇಶಕ್ಕಾಗಿ ಪ್ರತಿಯೊಂದು ಬುಡಕಟ್ಟು ಕುಟುಂಬಕ್ಕೂ ತಲಾ ಒಂದು ಎಕರೆ ಭೂಮಿಯನ್ನು ನೀಡಲಾಗಿದೆ.

ಬುಡಕಟ್ಟುಗಳ ಸರ್ವಾಂಗೀಣ ಪ್ರಗತಿ ಸಾಧಿಸಲು ಕರ್ನಾಟಕದ ಬುಡಕಟ್ಟುಗಳ ಅಭಿವೃದ್ಧಿ ಕಾರ್ಪೊರೇಶನ್ ಸ್ಥಾಪನೆಗೊಂಡಿದೆ. ಅಗತ್ಯ ಉದ್ದೇಶಗಳಿಗಾಗಿ ಜನರಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ

ಈ ಸಂಸ್ಥೆ ಶ್ರಮಿಸುತ್ತಿದೆ. ಸದ್ಯ ಇದರ ಲಾಭವನ್ನು ಪಡೆದುಕೊಂಡಿರುವ ಬುಡಕಟ್ಟು ಸಮೂಹಗಳು ಅತ್ಯಲ್ಪವೆಂದೇ ಹೇಳಬೇಕು.

ಒಟ್ಟಿನಲ್ಲಿ ಕರ್ನಾಟಕ ಸರ್ಕಾರ ಬುಡಕಟ್ಟು ಜನತೆಯ ಆರ್ಥಿಕ ಮಟ್ಟವನ್ನು ಸುಧಾರಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸಾಂಪ್ರದಾಯಿಕ ಶಿಕ್ಷಣ ನೀಡುವುದಕ್ಕಾಗಿ ರೂಪುಗೊಂಡ ಆಶ್ರಮ ಶಾಲೆಗಳು ಅವರಲ್ಲಿ ಶ್ರದ್ಧಾಸಕ್ತಿಯನ್ನು ಹುಟ್ಟಿಸಿಲ್ಲ. ಈ ಜನತೆ ಒಂದು ಹೊಸ ಸಾಮಾಜಿಕ – ಆರ್ಥಿಕ ಪರಿಸ್ಥಿತಿಯಲ್ಲಿ ಸಿಲುಕಿರುವುದೇ ಈ ಎಲ್ಲ ಗೊಂದಲಕ್ಕೆ ಕಾರಣವಾಗಿದೆ.

ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸಾಕಷ್ಟು ಲೋಪದೋಷಗಳಿದ್ದರೂ ಅಭಿವೃದ್ಧಿ ಸಂಸ್ಥೆಯ ಪ್ರಯತ್ನಗಳನ್ನು ಸಾರಸಗಟಾಗಿ ಕಡೆಗಣಿಸಲಾಗುವುದಿಲ್ಲ. ಮುಖ್ಯವಾಹಿನಿಯೊಂದಿಗೆ ಬೆರೆತು ಬಾಳುವೆ ನಡೆಸಲು ಅನುಕೂಲ ಕಲ್ಪಿಸುವ ಸಹಕಾರ ಸಂಘಗಳು ಇನ್ನೂ ಹೆಚ್ಚು ರಚನಾತ್ಮಕ ರೀತಿಯಲ್ಲಿ ಕಾರ್ಯಕ್ರಮಗಳನ್ನು ಯೋಜಿಸಿದಾಗ ಮಾತ್ರ ಅವುಗಳ ಉದ್ದೇಶ ಫಲ ನೀಡಿತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಬುಡಕಟ್ಟು ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಕೆಲವು ಅಧಿಕಾರಿಗಳು ತಮ್ಮ ಕರ್ತವ್ಯಗಳನ್ನು ಬದ್ಧತೆ ಮತ್ತು ನಿಷ್ಠೆಯಿಂದ ನಿರ್ವಹಿಸದಿರುವುದು. ಇದು ಬುಡಕಟ್ಟು ಅಭಿವೃದ್ಧಿ ಕಾರ್ಯಕ್ರಮಗಳು ಏಕೋ ಸಾಮಾಜಿಕ, ಆರ್ಥಿಕ ಜೀವನದ ಮೇಲೆ ಕಡಿಮೆ ಪ್ರಭಾವವನ್ನು ಬೀರಿವೆ ಎಂಬುದನ್ನು ಹೇಳುತ್ತದೆ.

ಕಳೆದ ಎರಡು ದಶಕಗಳಿಂದೀಚೆಗೆ ಬುಡಕಟ್ಟು ಜನರ ಜೀವನ ಮತ್ತು ಸಂಸ್ಕೃತಿಯ ಬಗೆಗೆ ಕಾಳಜಿಯಿರುವ ಸಂಶೋಧಕರು ಸಾಕಷ್ಟು ರಚನಾತ್ಮಕ ಮತ್ತು ಆಡಳಿತಾತ್ಮಕ ಸಲಹೆಗಳನ್ನು ನೀಡಿದ್ದಾರೆ. ಅಧಿಕಾರಶಾಹಿ ಇದನ್ನು ಲಕ್ಷ್ಯಕ್ಕೆ ತೆಗೆದುಕೊಂಡೇ ಇಲ್ಲ. ಇನ್ನಾದರೂ ಬುಡಕಟ್ಟು ಜನರ ಕಲ್ಯಾಣದ ಬಗೆಗೆ ನಿಜವಾಗಿಯೂ ಕಾಳಜಿ ಇರುವ ಅಧಿಕಾರಿಗಳ ನೇಮಕಕ್ಕೆ ಕ್ರಮ ಕೈಗೊಳ್ಳಬೇಕು. ಫಲಾನುಭವಿಗಳಿಗೆ ಫಲ ದೊರಕುವಂತೆ ನೋಡಿಕೊಳ್ಳಬೇಕಾಗಿದೆ.

ಆಧುನಿಕ ಸಾಧನ ಸಲಕರಣೆಗಳು, ರಾಸಾಯನಿಕ ಗೊಬ್ಬರಗಳು ಉತ್ತಮ ಬೀಜದ ತಳಿಗಳನ್ನು ಒದಗಿಸುವುದರ ಮೂಲಕ ಹಂತ ಹಂತವಾಗಿ ಸುಧಾರಣೆ ತರುವುದು ಯುಕ್ತ. ವಸಾಹತು ಯೋಜನೆಯನ್ನು ಕೊಂಚ ನಿಷ್ಠೆಯಿಂದ ಅನುಷ್ಠಾನಗೊಳಿಸಿದರೂ ಸಮಸ್ಯೆ ಪರಿಹಾರವಾಗಬಹುದು.

ಈ ಹಿನ್ನೆಲೆಯಲ್ಲಿ ಬುಡಕಟ್ಟು ಜನರ ಶ್ರೇಯೋಭಿವೃದ್ಧಿಗಾಗಿ ಕೆಳಗೆ ಕಾಣಿಸಿದ ಸಲಹೆಗಳನ್ನು ಕಾರ್ಯರೂಪಕ್ಕೆ ತರುವುದು ಒಳಿತು.

೧. ಬುಡಕಟ್ಟು ಜನರನ್ನು ರಾಷ್ಟ್ರ ಜೀವನದ ಮುಖ್ಯ ವಾಹಿನಿಗೆ ಎಳೆದು ತರುವ ಕೆಲಸ ಸಾವಕಾಶವಾಗಿ ಸಾಗಬೇಕು.

೨. ಸರಳ ರೀತಿಯ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಲು ಯತ್ನಿಸಬೇಕು.

೩. ಖಾಸಗಿ ಗುತ್ತಿಗೆದಾರರನ್ನು ಬುಡಕಟ್ಟು ಜನರ ನೆಲೆಗಳಿಂದ ದೂರವಿಡಬೇಕು.

೪. ಬುಡಕಟ್ಟು ಜನರ ಪರಂಪರಾಗತ ಕಲೆ ಮತ್ತು ಸಾಹಿತ್ಯ ಸಂವರ್ಧನೆಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

೫. ಅವರ ಜೀವನ ವಿಧಾನವನ್ನು ಗೌರವಿಸುವುದರ ಮೂಲಕ ಅವರ ಬದುಕು ಇನ್ನೂ ಹಸನಾಗುವಂತೆ ಸರ್ಕಾರಗಳು ನ್ಯಾಯಯುತವಾಗಿ ನಡೆದುಕೊಳ್ಳಬೇಕು.

೫. ೨ : ಮಲೆಕುಡಿಯರ ಸಂಸ್ಕೃತಿಯ ಮೇಲೆ ಅನ್ಯ ಸಂಸ್ಕೃತಿಯ ಪ್ರಭಾವ :

ಒಂದು ಸಮಾಜದ ವಿಕಾಸಕ್ಕೆ ಅಥವಾ ಬದಲಾವಣೆಗೆ ಒಂದು ಸಮಾಜದಿಂದ ಇನ್ನೊಂದು ಸಮಾಜಕ್ಕೆ ಸಂಸ್ಕೃತಿಯ ಪ್ರಸರಣವು ಬಹಳ ಮುಖ್ಯವಾದ ಅಂಶವಾಗಿದೆ. ಈ ಬಗೆಯ ಪ್ರಕ್ರಿಯೆಗೆ ಕೆಲವು ಮಾಧ್ಯಮಗಳು ತೀರ ಅಗತ್ಯವೆಂದು ಕಂಡುಬರುತ್ತದೆ. ಮಾಧ್ಯಮಗಳಾದ ಶಿಕ್ಷಣ, ಸಾರಿಗೆ, ಸಂಪರ್ಕ ಸಮೂಹ ಮಾಧ್ಯಮ ಇತ್ಯಾದಿಗಳ ಮೂಲಕ ಆವಿಷ್ಕಾರಗೊಂಡ ಪ್ರಭಾವಿ ಸಂಸ್ಕೃತಿಯು ಒಂದು ಸಮಾಜದಿಂದ ಇನ್ನೊಂದು ಸಮಾಜಕ್ಕೆ ಪ್ರಸಾರಗೊಂಡು ಆ ಸಮಾಜದ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿ ಸಂಸ್ಕೃತಿಯ ಸ್ವರೂಪ ಮತ್ತು ವಿನ್ಯಾಸಗಳಲ್ಲಿ ಬದಲಾವಣೆಗಳನ್ನು ತರುತ್ತದೆ. ಮಲೆಕುಡಿಯರ ಬದುಕು ಮತ್ತು ಸಂಸ್ಕೃತಿಯ ಮೇಲೆ ಅನ್ಯ ಸಂಸ್ಕೃತಿಗಳ ಪ್ರಭಾವ ಆಗಿರುವುದು ಬಹಳ ಮುಖ್ಯವಾಗಿ ಕಂಡುಬರುತ್ತದೆ. ಆದರೆ ಮಲೆಕುಡಿಯರಲ್ಲಿ ಈ ಸಂಸ್ಕೃತೀಕರಣ ಏಕಮುಖಿಯಾಗಿರದೆ ವಿವಿಧ ಜನಾಂಗಗಳು ಮತ್ತು ವಿವಿಧ ಭೌಗೋಳಿಕ ಪರಿಸರ ಮಲೆಕುಡಿಯರ ಮೇಲೆ ವಿಭಿನ್ನ ರೀತಿಯ ಪರಿಣಾಮವನ್ನುಂಟುಮಾಡಿದೆ. ಹೀಗೆ ವಿಭಿನ್ನ ರೀತಿಯ ಸಂಸ್ಕೃತಿಯಿಂದ ಪ್ರಭಾವಿತಗೊಂಡ ಮಲೆಕುಡಿಯರ ಸಂಸ್ಕೃತಿ ತನ್ನ ಹೆಚ್ಚಿನ ಮೂಲಾಂಶಗಳನ್ನು ಈಗಾಗಲೇ ಕಳೆದುಕೊಂಡಿದೆ. ಹೆಚ್ಚಿನ ಪ್ರದೇಶಗಳಲ್ಲಿ ಮಲೆಕುಡಿಯರ ಸಂಸ್ಕೃತಿ ಹಾಗೂ ಆ ಪರಿಸರದ ಸಂಸ್ಕೃತಿಗಳ ನಡುವೆ ಸಾಮ್ಯಗಳು ಕಂಡುಬರುತ್ತದೆ. ಉದಾಹರಣೆಗೆ ಮಲೆಕುಡಿಯರ ಉಡಿಗೆ ತೊಡಿಗೆ, ಆಹಾರ ಪದ್ಧತಿ, ಬೇಸಾಯ, ವಾಸ, ಮದುವೆ, ಧಾರ್ಮಿಕ ಆಚರಣೆ ಇತ್ಯಾದಿಗಳಲ್ಲಿ.

ಮಲೆಕುಡಿಯರ ಸಂಸ್ಕೃತಿ ಇತರ ಸಂಸ್ಕೃತಿಯೊಡನೆ ಸಂಪರ್ಕವನ್ನು ಹೊಂದಿ ಅದು ಇತರ ಸಂಸ್ಕೃತಿಯ ಶ್ರೇಷ್ಠತೆಯನ್ನು ಒಪ್ಪಿಕೊಂಡಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಯಾಕೆಂದರೆ ಹೆಚ್ಚಿನ ಎಲ್ಲಾ ಸಂದರ್ಭಗಳಲ್ಲಿ ಹೊರಗಿನ ಸಂಸ್ಕೃತಿಯು ಮಲೆಕುಡಿಯರ ಬದುಕಿಗೆ ಹರಿದು ಬಂದುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಹೀಗೆಂದಾಗ ಮಲೆಕುಡಿಯರ ಸಂಸ್ಕೃತಿ ಮತ್ತು ಪರಿಸರದ ಜನರ ಸಂಸ್ಕೃತಿಗಳ ಮಧ್ಯೆ ಸಾಂಸ್ಕೃತಿಕ ಅಂತರವಿಲ್ಲವೆಂದಲ್ಲ. ಬದುಕಿನ ಹಲವು ರಂಗಗಳಲ್ಲಿ ಮಲೆಕುಡಿಯರು

ತಮ್ಮ ಸಂಪ್ರದಾಯಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದುದು ಸ್ಪಷ್ಟವಾಗಿ ಕಂಡುಬರುತ್ತದೆ. ನೃತ್ಯ, ಸಂಗೀತ, ಸಾಹಿತ್ಯ, ನಂಬಿಕೆ, ಸಂಪ್ರದಾಯ ಇಂತಹ ಜಾನಪದ ಸಾಮಾಗ್ರಿಗಳಲ್ಲಿ ತಮ್ಮದೇ ಆದ ಸಾಂಸ್ಕೃತಿಕ ಅನನ್ಯತೆಯನ್ನು ಮಲೆಕುಡಿಯರು ಗುರುತಿಸಿಕೊಂಡಿದ್ದಾರೆ. ಆದರೆ ಸಾಂಸ್ಕೃತಿಕ ಬೇರುಗಳನ್ನು ಕಳೆದುಕೊಳ್ಳುತ್ತಿರುವ ಮಲೆಕುಡಿಯರ ಸ್ವಂತಿಕೆಯನ್ನು ಪುನರುಜ್ಜೀವನಗೊಳಿಸುವ ಸಮರ್ಪಕವಾದ ಪ್ರಯತ್ನಗಳು ಕಂಡುಬರದೇ ಅನ್ಯ ಸಂಸ್ಕೃತಿಯ ಪ್ರಸಾರ, ದಬ್ಬಾಳಿಕೆ ಅಡೆತಡೆಯಿಲ್ಲದೆ ಮುಂದುವರಿದಿದೆ.

ವಿನಾಶದ ಅಂಚಿನಲ್ಲಿರುವ ಮಲೆಕುಡಿಯರ ಸಾಂಸ್ಕೃತಿಕ ಪರಂಪರೆಯ ನೆಲೆಗಳನ್ನು ಗುರುತಿಸಿದ ಕೆ. ಚಿನ್ನಪ್ಪ ಗೌಡರು ಹೀಗೆಂದು ಅಭಿಪ್ರಾಯಪಟ್ಟಿದ್ದಾರೆ. ''ಸಾಂಸ್ಕೃತಿಕ ಸ್ವರೂಪದ ಉತ್ಸವಗಳಲ್ಲಿ ಮಲೆಕುಡಿಯರ ನೆಲ– ಬದುಕುಗಳ ಸಂಬಂಧ ಸ್ಪಷ್ಟವಾಗಿ ಗೋಚರವಾಗುತ್ತದೆ'' (೧೯೮೬:೧೧) ಆದರೆ ದುಡಿತದಿಂದ ಬಳಲಿದ ಮಲೆಕುಡಿಯರ ಬಾಳಿಗೆ ಸಂತೋಷದ ಸಾಧನಗಳಾಗಿದ್ದಂತಹ ಜೀವನಾವರ್ತನ ಮತ್ತು ವಾರ್ಷಿಕಾವರ್ತನದ ರೂಪದಲ್ಲಿರುವ ಹಬ್ಬಗಳು. ಹಾಡುಗಳು, ಕುಣಿತ, ನಂಬಿಕೆಗಳು ಬಹಳಷ್ಟು ಇಂದು ಇಲ್ಲವಾಗಿದೆ. ಒಂದೊಮ್ಮೆ ನಿಸರ್ಗದ ಭಾಗವಾಗಿ ಅದರ ಮಡಿಲಲ್ಲಿ ಸ್ವಾಯತ್ತವಾದ ಸಂಸ್ಕೃತಿಯನ್ನು ರೂಪಿಸಿಕೊಂಡು ನಿಶ್ಚಿಂತೆಯಿಂದ ಕ್ರಿಯಾಶೀಲವಾಗಿದ್ದ ಜೀವನಕ್ರಮವೊಂದು ಇಂದು ಕಣ್ಮರೆಯಾಗಿದೆ.

ಆರಂಭದ ದಿನಗಳಲ್ಲಿ ಮಲೆಕುಡಿಯರಿಗೆ ಸ್ವಂತ ಆಸ್ತಿಯ ಕಲ್ಪನೆ ಇರಲಿಲ್ಲ. ತೀರಾ ಮೊದಲಿಗೆ ಆಹಾರ ಸಂಗ್ರಹಣೆ ಮತ್ತು ಬೇಟೆಯಿಂದ ಹೊಟ್ಟೆ ಹೊರೆದುಕೊಳ್ಳುತ್ತಿದ್ದ ಇವರು ಕೃಷಿಯ ಅನ್ವೇಷಣೆಯ ನಂತರ ಕೂಡ ಒಂದೆಡೆ ನಿಂತು ಒಂದೇ ಭೂಮಿಯನ್ನು ನಂಬಿ ಬದುಕಿದವರಲ್ಲ. ಇವರು 'ಕುಮರಿ' ಬೇಸಾಯ ಮಾಡುತ್ತಾ ಜಾಗದಿಂದ ಜಾಗಕ್ಕೆ ಸ್ಥಳಾಂತರವಾಗುತ್ತಿದ್ದರು. ಅಂದರೆ ಕಾಡೊಳಗಿನ ಒಂದೆರಡು ಎಕರೆಯಷ್ಟು ಭೂಮಿಯನ್ನು ಹಸನು ಮಾಡಿ ಬಿತ್ತನೆ ಮಾಡುವ ಪದ್ಧತಿ ಈ 'ಕುಮರಿ' ಕೃಷಿಯನ್ನು ಅವಲಂಬಿಸಿ ಆ ಮೂಲಕ ಕಾಡಿಗೆ ಯಾವುದೇ ಅಪಾಯವೂ ಒದಗದಂತೆ ಸಮತೋಲನ ಕಾಪಾಡಿಕೊಂಡು ಬರುತ್ತಿದ್ದರು. ಹೀಗೆ ಇಡೀ ಕಾಡು ತಮ್ಮದು ಎಂಬ ಮನೋವೈಶಾಲ್ಯದಿಂದ ಬಾಳುವ ಮೂಲಕ ಅದರ ಅಸ್ತಿತ್ವಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳುತ್ತಿದ್ದರು.

''ಪಶ್ಚಿಮ ಘಟ್ಟ ಪ್ರದೇಶಗಳ ಮೇಲೆ ಪಾಶ್ಚಾತ್ಯರ ಪ್ರವೇಶದಿಂದ ಇಲ್ಲಿನ (ಕಾಡುಗಳಲ್ಲಿನ) ಅರ್ಥವ್ಯವಸ್ಥೆ ರೂಪಾಂತರಗೊಳ್ಳತೊಡಗಿದವು. ಭಾರತದ ಸಾಂಬಾರ ಪದಾರ್ಥಗಳ ಆಸೆಯಿಂದ ಬರತೊಡಗಿದ ಯುರೋಪಿಯನ್ನರು ತಮ್ಮ ವಸಾಹತುಗಳನ್ನು ಸ್ಥಾಪಿಸಿ ಆ ಮೂಲಕ ತಮ್ಮ ಆರ್ಥಿಕ ಹಿಡಿತವನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸಿದರು. ಈ ವಸಾಹತುಗಳ ವ್ಯಾಪಾರದ ಚಟುವಟಿಕೆಯಿಂದಾಗಿ ಪಶ್ಚಿಮ ಘಟ್ಟದ ಕಾಡುಗಳು ತೋಟಗಳಾಗಿ ಪರಿವರ್ತಿತಗೊಂಡವು. ಇಂತಹ ಆರ್ಥಿಕ ಚಟುವಟಿಕೆಯ

ಸಂದರ್ಭದಲ್ಲಿ ಮಲೆನಾಡಿನ ಕೆಲವು ಜಾಗಗಳಿಗೆ ಭೂಮಾಲಿಕರು ಬರತೊಡಗಿದ್ದು ಅಥವಾ ಯುರೋಪಿಯನ್ನರ ಬೆನ್ನ ಹಿಂದೆ ಬಂದು ಭೂಮಾಲಿಕರಾದವರು.

ಭಾರತದಲ್ಲಿ ವ್ಯಾಪಾರವನ್ನು ಸ್ಥಾಪಿಸಿದ ಬ್ರಿಟಿಷರು ರಾಜಕೀಯವಾಗಿ ಭಾರತವನ್ನು ಹಿಡಿದುದರ ಜೊತೆಗೆ ತಮ್ಮ ಮೂಲ ಉದ್ದೇಶವಾದ ಸಾಂಬಾರ ಪದಾರ್ಥಗಳ ರಫ್ತಿಗೂ ಹೆಚ್ಚು ಗಮನ ನೀಡಿದರು. ಇದರ ಪರಿಣಾಮವಾಗಿ ಕಾಡುಗಳು ಕಾಫಿ, ಟೀ, ಏಲಕ್ಕಿ, ಮೆಣಸು, ಕೋಕಾ, ಹಾಗೂ ರಬ್ಬರ್ ತೋಟಗಳಾಗಿ ಪರಿವರ್ತನೆಗೊಂಡವು. ಆದರೆ ಹೀಗೆ ಪರಿವರ್ತಿತಗೊಂಡ ತೋಟಗಳ ಇಡೀ ಮಾಲಿಕತ್ವವನ್ನು ಬ್ರಿಟೀಷರೇ ವಹಿಸಿಕೊಳ್ಳಲು ಸಾಧ್ಯವಿರಲಿಲ್ಲ. ಕೆಲವು ಕಡೆಗಳಲ್ಲಿ ಅವರು ತೋಟದ ಮಾಲಿಕರಾದರೆ, ಇನ್ನೂ ಹಲವಾರು ತೋಟಗಳಿಗೆ ನಮ್ಮವರೇ (ಅಂದರೆ ಮೇಲುವರ್ಗದವರು, ಸುಶಿಕ್ಷಿತರು ಮತ್ತು ವಿದ್ಯಾವಂತರೆನ್ನಿಸಿಕೊಂಡು ಬ್ರಿಟಿಷರ ಆಡಳಿತಕ್ಕೆ ಸಹಕಾರಿಯಾದ ನಮ್ಮವರು) ಮಾಲಿಕರಾದರು. ಉದಾಹರಣೆಗೆ ಬೆಳ್ತಂಗಡಿ ತಾಲೂಕಿನ ಬಾಂಜಾರು ಮಲೆಯಲ್ಲಿ ಮಂಗಳೂರಿನ ಮುಸ್ಲಿಂ ಒಬ್ಬರು ಮತ್ತು ನೆರಿಯದ ಅಂಬಟೆ ಮಲೆ, ಎಲಿಮಲೆ (ಕೋಲೋಡಿ) ಗಳಲ್ಲಿ ನೆರಿಯ ಹೆಬ್ಬಾರರಂಥವರು ಮಾಲಿಕತ್ವವನ್ನು ವಹಿಸಿಕೊಂಡಿರುವುದು ಕಂಡು ಬರುತ್ತದೆ. ಹೀಗೆ ಪರಿವರ್ತಿತಗೊಂಡ ತೋಟಗಳಲ್ಲಿ ದುಡಿಯುವವರು ಗಿರಿಜನರು ಮಾತ್ರ. ಹೀಗಾಗಿ ಭೂಮಿಯ ಸ್ವಾಧೀನವನ್ನು ಕೆಲವೇ ಕೆಲವರಿಗೆ ಒಪ್ಪಿಸುವ ಮೂಲಕ ಅದೇ ನೆಲದ ಮೂಲ ನಿವಾಸಿಗಳನ್ನು ಅತಂತ್ರರನ್ನಾಗಿಸುವ ಕೆಲಸ ಬ್ರಟಿಷರ ಕಾಲದಲ್ಲಿ ನಡೆಯಿತು. ಈ ತಂತ್ರ ಅವರಿಗೆ ಎರಡು ರೀತಿಯ ಪ್ರಯೋಜನವನ್ನು ಕೊಟ್ಟಿತು.

೧. ಹೀಗೆ ಕೆಲವರನ್ನು ಭೂ ಒಡೆಯರನ್ನಾಗಿ ಮಾಡುವ ಮೂಲಕ ಅವರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಕಾಡಿನ ಸ್ವಾಮ್ಯವನ್ನು ತಾವೇ ಹೊಂದುವುದು.

೨. ಈ ಮೂಲಕ ಭೂಮಿಯಿಂದ ಬೇರ್ಪಡಿಸಿ, ಕೂಲಿಯಾಳುಗಳನ್ನಾಗಿ ಪರಿವರ್ತಿಸಿದ ಗಿರಿಜನರನ್ನು ಮತಾಂತರಕ್ಕೆ ಪ್ರೇರೇಪಿಸುವುದು. ಮತಾಂತರಕ್ಕೆ ಒಪ್ಪಿದವರಿಗೆ ಭೂಮಿ ನೀಡುತ್ತೇವೆ ಎಂಬ ಭರವಸೆ ನೀಡಿ ಅವರಲ್ಲಿ ಆಸೆಯನ್ನು ಮೂಡಿಸುವುದು.

ಒಟ್ಟಿನಲ್ಲಿ ಬ್ರಿಟಿಷರ ಆಳ್ವಿಕೆಯ ಮುಖಾಂತರ ನಮ್ಮವರೇ ಆದ ಬಂಡವಾಳಶಾಹಿ ವ್ಯಕ್ತಿಗಳು ಮತ್ತು ಪುರೋಹಿತಶಾಹಿ ವ್ಯಕ್ತಿಗಳ ಪ್ರಭಾವ ಮಲೆಕುಡಿಯರ ಮೇಲೆ ಆಗಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ." (ಹಿ.ಚಿ. ಬೋರಲಿಂಗಯ್ಯ-ಕಾಡು, ಕಾಂಕ್ರೀಟ್ ಮತ್ತು ಜಾನಪದ-ಪುಟ ೩೩-೩೪)

ಯಾವುದೇ ಒಂದು ಜನಾಂಗದ ಶಿಕ್ಷಣ, ಉದ್ಯೋಗ, ಉಳಿತಾಯ, ಆದಾಯ ಮೂಲವನ್ನು ಪರಿಗಣಿಸುವುದು ಒಂದು ಕ್ರಮವಾದರೆ, ಅದಕ್ಕಿಂತಲೂ ಮಿಗಿಲಾಗಿ ಆ ಸಮುದಾಯ ಯಾವ ಪ್ರಮಾಣದ ನೈತಿಕತೆಯನ್ನೂ ಪರಂಪರೆಯಿಂದ ಬಂದ ದೇಶಿ ಜ್ಞಾನ ಕ್ರಮಗಳನ್ನೂ ಉಳಿಸಿಕೊಂಡಿದೆ ಎಂಬುದರಿಂದಲೂ ಅಭಿವೃದ್ಧಿಯನ್ನು ಗಮನಿಸಬೇಕಾಗುತ್ತದೆ. ಈ ಅರ್ಥದಲ್ಲಿ ಬುಡಕಟ್ಟು ಸಮುದಾಯಗಳು ಪರಂಪರೆಯಾದ

ದೇಶೀ ಬೌದ್ಧಿಕ ಜ್ಞಾನದಿಂದ ತುಂಬ ಸಂಪತ್‌ಭರಿತವಾದಂಥವು. ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಬುಡಕಟ್ಟುಗಳು ನಾಗರಿಕತೆಯ ಆವಿಷ್ಕಾರಗಳಲ್ಲಿ ಮಾತ್ರ ಹಿಂದುಳಿದಿವೆ. ಆಧುನೀಕರಣದ ರಂಗಭೂಮಿಗೆ ಅವುಗಳನ್ನು ಸ್ವಾಗತಿಸುವಲ್ಲಿ ನಮ್ಮ ತೊಡಕುಗಳಿವೆ.

ಬ್ರಿಟಿಷರು ಬಂದು ಹೋದ ನಂತರ ನಮ್ಮ ದೇಶದ ಅನೇಕ ಬುಡಕಟ್ಟುಗಳು ಅನೇಕ ರೂಪಾಂತರಗಳಿಗೆ ಒಳಗಾಗುತ್ತಿವೆ. ನಮ್ಮಲ್ಲಿ ಯಾರು ಅಲೆಮಾರಿಗಳು ಯಾರು ಕೆಳಜಾತಿಗಳು ಯಾರು ಆದಿವಾಸಿಗಳು ಯಾರು ಬುಡಕಟ್ಟುಗಳು ಎಂಬ ವರ್ಗೀಕರಣದ ಪಟ್ಟಿಯನ್ನು ತಯಾರಿಸಿದವರೇ ಇಂಗ್ಲೀಷರು. ಬುಡಕಟ್ಟುಗಳ ಭಾಷೆಯನ್ನು, ಸಾಹಿತ್ಯವನ್ನು, ಕಲೆಗಳನ್ನು ಮೊದಲಿಗೆ ಅವರೇ ಸಂಗ್ರಹಿಸಿದ್ದು; ಕ್ರಿಶ್ಚಿಯನ್ ಧರ್ಮದ ಪ್ರಭಾವದಿಂದ ಇಂತಹ ಅನೇಕ ಸಮುದಾಯಗಳು ಬಿಡಿಸಿಕೊಳ್ಳಲಾರದೆ ಮತಾಂತರವಾಗಿವೆ. ಹಾಗೆಯೇ ಎಂದೆಂದೂ ವಿದ್ಯೆ ಕಲಿಯಲು ಸಾಧ್ಯವಿಲ್ಲ ಎಂದುಕೊಂಡಿದ್ದವರಿಗೆ ಅದರಿಂದ ಇವತ್ತು ಯಾವುದೇ ಭಾಷೆಯ ಶಿಕ್ಷಣವೂ ದೊರೆಯಬಲ್ಲದಾಗಿದೆ. ಪರೋಕ್ಷವಾಗಿ ಒಟ್ಟು ಭಾರತೀಯರಿಗೆ ವಸಾಹತುಶಾಹಿ ಶಾಪವೂ ವರವೂ ಆಗಿ ಕಾಡಿ ಕೂಡಿದೆ.

ಬುಡಕಟ್ಟುಗಳೀಗ ಪ್ರತ್ಯೇಕ ಮೀಸಲಾತಿಯನ್ನು ಪಡೆದಿದೆ. ನಗರಗಳನ್ನೂ ವಿವಿಧ ದಾರಿಗಳಿಂದ ಪ್ರವೇಶಿಸುತ್ತಿವೆ. ಆದರೆ ಊರೊಳಗಿದ್ದ ಅಸ್ಪೃಶ್ಯರಿಗಿಂತ ಕಾಡೊಳಗಿದ್ದ ಈ ಬುಡಕಟ್ಟಿನ ಅಸ್ಪೃಶ್ಯರನ್ನು ಇಡೀ ನಾಗರಿಕತೆ ಕಂಡಿರುವ ರೀತಿಯೇ ಬೇರೆ, ಊಳಿಗಮಾನ್ಯ ವ್ಯವಸ್ಥೆ, ಪುರೋಹಿತ ಶಾಹಿಯ ವಿಕಾರಗಳ ನಡುವೆ ಸಿಲುಕಿ ನರಳುತ್ತಿದ್ದ ಕೆಳಜಾತಿಗಳ ಸಂಕಷ್ಟಗಳೇ ವಿಭಿನ್ನವಾಗಿದ್ದುವು. ಕಾಡಿನಿಂದ ನಾಡಿಗೆ ಆಗಮಿಸುತ್ತಿರುವ ಬುಡಕಟ್ಟುಗಳ ಇಂದಿನ ಅವಸ್ಥೆ ತುಂಬ ಸಂಕೀರ್ಣವಾದದ್ದು.ಅತ್ತ ಕಾಡಲ್ಲೂ ಇತ್ತ ಊರಲ್ಲೂ ಎರಡು ಕಡೆ ಪರ್ಯಾಯ ವ್ಯವಸ್ಥೆ ಇಲ್ಲದ ಸ್ಥಿತಿಯಿಂದ ಅನೇಕ ಬುಡಕಟ್ಟುಗಳು ಈಗ ಕಂಗೆಟ್ಟು ಹೋಗಿವೆ. ಪರಂಪರೆಯ ವಿವಿಧ ಕಾಲಘಟ್ಟಗಳಲ್ಲಿ ಸಂಸ್ಕೃತಿಯನ್ನು ಪುನರ್ ಪರಿಶೀಲಿಸುವಂತೆಯೇ ಆಯಾ ಸಮುದಾಯಗಳು ತಮ್ಮನ್ನೂ ಆಧುನಿಕ ಸವಾಲುಗಳಿಗೆ ತೆತ್ತುಕೊಳ್ಳಬೇಕಾಗುತ್ತದೆ.

ಹೀಗಾಗಿಯೇ ಇವತ್ತಿನ ಯಾವೊಂದು ಬುಡಕಟ್ಟು ಪೂರ್ಣ ಪ್ರಮಾಣದಲ್ಲಿ ತನ್ನ ಹಳೆಯ ಕಾಲದ ರೀತಿಯಲ್ಲೇ ಉಳಿಯಲು ಸಾಧ್ಯವಿಲ್ಲ. ನಮ್ಮಲ್ಲಿ ಈವರೆಗೆ ಆಗಿರುವ ಬುಡಕಟ್ಟುಗಳ ಸಾಂಸ್ಕೃತಿಕ ರೂಪಾಂತರಗಳನ್ನು ಹೀಗೆ ಗುರುತಿಸಬಹುದು.

೧. ಭಾಷಿಕ

೨. ತಾತ್ವಿಕ

೩. ಶೈಕ್ಷಣಿಕ

೪. ಸಾಂಸ್ಕೃತಿಕ

೫. ಆಧುನೀಕರಣ

೬. ಆರ್ಥಿಕ

೭. ವೈಜ್ಞಾನಿಕ

೧. **ಭಾಷಿಕ ರೂಪಾಂತರ** : ಬಹು ಭಾಷೆಯ ಸಂಸ್ಕೃತಿಯ ಬುಡಕಟ್ಟುಗಳ ಸಂದರ್ಭದಲ್ಲಿ ಭಾಷಿಕ ರೂಪಾಂತರ ಒಂದು ವಿಶಿಷ್ಟವಾದ ಬದಲಾವಣೆ. ವಸಾಹತುಶಾಹಿಯ ಅನುಭವಗಳಿಂದ ಪ್ರಾದೇಶಿಕ ಭಾಷೆಗಳು ಶಕ್ತಿ ಪಡೆದುಕೊಂಡವು. ಆ ಮೂಲಕ ಒಟ್ಟು ಭಾರತದಲ್ಲಿ ತಿರಸ್ಕೃತ, ಸಮುದಾಯಗಳ ಭಾಷಿಕ ಜಗತ್ತು ಅನಾವರಣಗೊಂಡಿತು. ಸಂಸ್ಕೃತ ಭಾಷೆಯ ಜೊತೆಯಲ್ಲೇ ಈ 'ಪೈಶಾಚಿಕ' ಭಾಷೆಗಳೂ ತಮ್ಮನ್ನು ಜಗತ್ತಿಗೆ ಪರಿಚಯಿಸಿಕೊಂಡವು. ಇದು ಒಂದು ನೆಲೆ. ಆದರೆ ಇದಕ್ಕಿಂತಲೂ ಮಿಗಿಲಾದದ್ದೆಂದರೆ ಇಡೀ ಬುಡಕಟ್ಟು ಸಮುದಾಯಗಳಿಗೆ ಒಂದು ಭಾಷಿಕ ಆಕೃತಿ ಸಾಮಾಜಿಕವಾಗಿ ತೆರೆದುಕೊಂಡಿತು. ಬಹು ಭಾಷೆಗಳ ಭಾರತದಲ್ಲಿ ಬಾಯಿಗೆ ಧ್ವನಿಯೇ ಇರದಂತಹ ಸ್ಥಿತಿಯಲ್ಲಿ ಮಾತನಾಡಲು ಅವಕಾಶ ಸಿಕ್ಕಿತು. ಕ್ರೈಸ್ತ ಧರ್ಮೀಯರು ಅನೇಕ ಬಗೆಯ ವಿದ್ವಾಂಸರು ಸಂಗ್ರಹಕಾರರು ಅವರ ಭಾವಾಕೃತಿಗಳನ್ನೂ ಭಾಷಿಕವಾಗಿ ರೂಪಾಂತರಿಸಿಕೊಳ್ಳುತ್ತಲೇ ಒಂದು ಬಗೆಯ ರೂಪಾಂತರಕ್ಕೆ ಅವರನ್ನು ಒಳಪಡಿಸಿದರು. ಶಿಕ್ಷಣದ ಕ್ರಮಕ್ಕೆ ಒಳಪಡಿಸಿದರು. ಭಿನ್ನ ಭಿನ್ನ ಪ್ರಾದೇಶಿಕ ಭಾಷೆಗಳ ಜೊತೆ ಒಂದಾಗುವ ರೀತಿಯನ್ನು ಬುಡಕಟ್ಟುಗಳು ಈ ಹಿಂದೆಯೇ ಪಡೆದಿದ್ದವು. ಭಾಷಿಕ ರೂಪಾಂತರ ಎನ್ನುವುದನ್ನು ಕೇವಲ ಅವರ ಭಾಷೆಗಳ ಸಾಹಿತ್ಯದ ಸಂಗ್ರಹ ಎಂದು ಭಾವಿಸಬಾರದು. ಅದು ಒಟ್ಟು ಆ ಸಮುದಾಯದ ಭಾವ ಜಗತ್ತಿನ ಎಚ್ಚರ ಎಂದೂ ಅದನ್ನು ಶಿಕ್ಷಣದ ರೂಪ ಎಂದು ತಿಳಿಯಬೇಕು. ಶಿಕ್ಷಣಕ್ಕೆ ಒಳಗಾದ ಬುಡಕಟ್ಟುಗಳು ಆ ದಿನಗಳ ಸ್ಥಿತಿಯೆಂದು ಭಾಷಿಕ ರೂಪಾಂತರವನ್ನು ಗ್ರಹಿಸಬೇಕು. ವಾಕ್ ಸ್ವಾತಂತ್ರ್ಯವೇ ಇರದ ಹೊತ್ತಿನಲ್ಲಿ ಒಂದು ಜನಾಂಗ ಅಧ್ಯಯನಕ್ಕೆ ಒಳಗಾಗುವುದು ಕೂಡ ಭಾಷಿಕ ರೂಪಾಂತರವಾಗಬಲ್ಲುದು. ಹೊರ ಜಗತ್ತಿಗೆ ಒಳಪಡಿಸುವುದು ಒಂದು ಬಗೆಯಲ್ಲಿ ಬೌದ್ಧಿಕ ರೂಪಾಂತರ. ಆಧುನಿಕ ಶಿಕ್ಷಣವೇ ಒಂದು ಬಗೆಯಲ್ಲಿ ಸಂಸ್ಕೃತಿಗಳ ಗದ್ಯದ ಕಥನ. ಆ ಗದ್ಯವೇ ಅವರವರ ಬಿಡುಗಡೆಯ ದಾರಿಯನ್ನು ತೋರಿಕೊಡುತ್ತದೆ.

ಬಹುಪಾಲು ಎಲ್ಲ ಬುಡಕಟ್ಟುಗಳಲ್ಲದಿದ್ದರೂ ಅನೇಕವು ಇಂತಹ ಭಾಷಿಕ ರೂಪಾಂತರಗಳಿಗೆ ಒಳಗಾಗಿವೆ. ತಮ್ಮ ಮಾತೃಭಾಷೆಯ ಜೊತೆಗೆ ಬೇರೆ ಬೇರೆ ಭಾಷೆಗಳನ್ನು ತಮ್ಮೊಳಕ್ಕೆ ಬಳಸಿಕೊಂಡಿವೆ. ಮಲೆಕುಡಿಯರ ಭಾಷೆಯನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಉದಾಹರಣೆಗೆ ಮಲೆಕುಡಿಯರಲ್ಲಿ ನದಿಗೆ ಅರ್ಮುಂಚಾರು ಎಂಬುದಾಗಿ, ಪದಾರ್ಥಕ್ಕೆ ಕೈಪು ಮುಂತಾದ ಅಪರೂಪದ ಪದಗಳು ಸಿಗುತ್ತವೆ. ಇವತ್ತು ನಗರ ಸಂಸ್ಕೃತಿ ಭಾಷೆಗಳಾದ ತುಳು, ಕನ್ನಡ ಭಾಷೆಗಳಿಂದ ಮಲೆಕುಡಿಯರ ಮೂಲ ಭಾಷೆ ಮಾಯವಾಗಿದೆ. ಒಟ್ಟಿನಲ್ಲಿ ಒಂದು ಸಂಸ್ಕೃತಿಯ ಸ್ಥಿತ್ಯಂತರಗಳಲ್ಲಿ ಭಾಷಿಕ ರೂಪಾಂತರ ಬಹಳ ಮಹತ್ವದ್ದು.

೨. ತಾತ್ವಿಕ ರೂಪಾಂತರ:

ಅನೇಕ ಬುಡಕಟ್ಟುಗಳು ಮತಾಂತರಗೊಂಡಿವೆ. ಹಾಗೆಯೇ ಕಾಡನ್ನು ಬಿಟ್ಟು ಗ್ರಾಮದ ವ್ಯಾಪ್ತಿಗೆ ಒಳಪಟ್ಟಿವೆ. ಮತ್ತೆ ಕೆಲವು ಜಾತಿಗಳಾಗಿ ರೂಪಾಂತರಗೊಂಡಿವೆ. ಪ್ರಾಚೀನ ಬುಡಕಟ್ಟುಗಳಲ್ಲಿ ಕೆಲವು ಕಣ್ಮರೆಯಾಗಿವೆ. ಹಾಗೆಯೇ ನಗರ ಸೇರಿ ಹೊಸ ವರ್ಗವಾಗಿಯೂ ಬೆಳೆದಿವೆ. ತಾವು ನಂಬಿದ್ದ ಹಳೆಯ ಜಗತ್ತಿನೊಂದಿಗೆ ಹೊಸಬಗೆಯ ನಂಬಿಕೆಗಳನ್ನೂ, ಧರ್ಮಗಳನ್ನೂ ಆಶ್ರಯಿಸಿವೆ. ಮುಖ್ಯ ಎಂದರೆ ಪರಂಪರಾಗತ ಪ್ರಾಚೀನ ಸಾಂಸ್ಕೃತಿಕ ಅನುಭವ ನಿರೂಪಿಸಿದ್ದ ತಾತ್ವಿಕತೆಯನ್ನು ಆಧುನಿಕ ಯುಗದ ಸಂವೇದನೆಗೆ ಬದಲಿಸಿಕೊಂಡಿವೆ. ಇದು ಅವರ ಬದುಕಿನ ಸಾಮಾಜಿಕ ಪರಿಸರದ ತಾತ್ವಿಕ ರೂಪಾಂತರ. ಅಷ್ಟೇ ಅಲ್ಲ, ಆಚರಣೆ ಮತ್ತು ಪುರಾಣಗಳ ರೂಪಾಂತರವೂ ಹೌದು. ಯುರೋಪಿನಲ್ಲೂ, ಆಫ್ರಿಕಾ ಖಂಡದಲ್ಲೂ ಇಂತಹ ತಾತ್ವಿಕ ರೂಪಾಂತರಗಳು ದೊಡ್ಡ ಪ್ರಮಾಣದಲ್ಲಿ ಆಗಿವೆ. ಭಾರತದಲ್ಲೂ ಅದರ ರೂಪಗಳಿವೆ. ಕ್ರೈಸ್ತ ಧರ್ಮಕ್ಕೆ ತಾತ್ವಿಕವಾಗಿ ರೂಪಾಂತರಗೊಂಡವರು ಇವತ್ತು ಬೇರೆಯದೇ ಜಗತ್ತಿನಲ್ಲಿ ಗುರುತಿಸಿಕೊಂಡಿದ್ದಾರೆ. ಇದರ ಜೊತೆಗೆ ಬೇರೆ ಬೇರೆ ಜನಪದ ಪರಂಪರೆಗಳ ಜೊತೆಗೂ ಮುಖಾಮುಖಿಯಾಗಿ ತಾತ್ವಿಕ ರೂಪಾಂತರಗಳಾಗಿವೆ.

ಬುಡಕಟ್ಟುಗಳು ತಾತ್ವಿಕವಾಗಿ ರೂಪಾಂತರಗೊಳ್ಳುತ್ತಿರುವುದೇ ಆಧುನಿಕ ನಾಗರಿಕತೆಗಳಿಗೆ ಸಂವಾದವನ್ನು ಏರ್ಪಡಿಸಿಕೊಳ್ಳುತ್ತಿವೆ ಎಂಬುದು. ಆದರೂ ಈ ತಾತ್ವಿಕ ರೂಪಾಂತರಗಳ ಆಳದಲ್ಲಿ ತಮ್ಮ ಪ್ರಾಚೀನ ರೂಪಗಳನ್ನೂ ಪೂರ್ಣವಾಗಿ ಅಳಿಸಿ ಹಾಕಿರುವುದಿಲ್ಲ. ಎಂಥದೇ ನಗರದಲ್ಲಾದರೂ ತಾಂತ್ರಿಕ ಆವಿಷ್ಕಾರಗಳ ನಡುವೆಯೂ ಆಯಾಯ ಬುಡಕಟ್ಟಿನ ಸಂವೇದನೆ ಅವರವರಲ್ಲಿ ಉಳಿದಿರುತ್ತದೆ. ಇಂತಹ ರೂಪಾಂತರಗಳ ಒಡಲಿನಿಂದಲೇ ಯಾವುದೇ ಬುಡಕಟ್ಟಿನ ಹೋರಾಟಗಳೂ ಬೌದ್ಧಿಕತೆಗಳೂ ವಿಕಾಸಗೊಳ್ಳುವುದು, ಆ ಮಟ್ಟಿಗೆ ಭಾರತದ ಬುಡಕಟ್ಟುಗಳು ತಮ್ಮ ಪೂರ್ವಿಕರ ಅರಿವಿನೊಂದಿಗೆಯೇ ಬುದ್ಧ, ಅಂಬೇಡ್ಕರ್, ಗಾಂಧಿ, ಮಾರ್ಕ್ಸ್, ಲೆನಿನ್‌ರಂಥವರನ್ನೆಲ್ಲ ಸಂಯೋಗಿಸಿ ತಮ್ಮದೇ ತಾತ್ವಿಕ ಲೋಕವನ್ನು ಕಟ್ಟಿಕೊಳ್ಳಬಲ್ಲರು. ವಸಾಹತುಶಾಹಿಯ ವಿಕಾರಗಳಿಂದಲೂ ಬುಡಕಟ್ಟುಗಳ ತಾತ್ವಿಕತೆ ಅನೇಕ ಬಗೆಯ ಗೊಂದಲಗಳಿಗೆ ಒಳಗಾಗಿದೆ. ಇವತ್ತಿನ ಬುಡಕಟ್ಟುಗಳ ಅಂತರಂಗದಲ್ಲಿ ನಿರ್ದಿಷ್ಟವಾಗಿ ಯಾವ ತಾತ್ವಿಕ ತಳಹದಿ ಇದೆ ಎಂದು ಗುರುತಿಸಲಾರದಷ್ಟು ರೂಪಾಂತರಗಳಾಗಿವೆ. ಸಮುದ್ರ ಮಾರ್ಗಗಳು, ನಾಗರಿಕತೆಗಳು, ಕೈಗಾರಿಕಾ ಕ್ರಾಂತಿ, ವಸಾಹತುಶಾಹಿ, ಊಳಿಗಮಾನ್ಯ ವ್ಯವಸ್ಥೆ, ವೈದಿಕಶಾಹಿ ಇವೆಲ್ಲವೂ ಬುಡಕಟ್ಟು ಸಮುದಾಯಗಳನ್ನು ಆಳಿರುವುದರಿಂದ, ಪ್ರಭಾವಿಸಿರುವುದರಿಂದ ಈ ಬಗೆಯ ವೈರುಧ್ಯಗಳು ಎದುರಾಗುತ್ತವೆ. ಇವುಗಳಿಂದ ಮುಕ್ತವಾಗಿ ಸ್ವತಂತ್ರವಾಗುವುದಕ್ಕೇ ಇವತ್ತಿಗೂ ಬುಡಕಟ್ಟುಗಳು ಪ್ರಯತ್ನಿಸುತ್ತಿವೆ. ಬುಡಕಟ್ಟುಗಳ ಸಾಲಿಗೆ ಸೇರಿರುವ ಮಲೆಕುಡಿಯರ ಬದುಕಿನಲ್ಲಿಯೂ ಈ ತಾತ್ವಿಕ ರೂಪಾಂತರವನ್ನು ಕಾಣಬಹುದು. ಉದಾಹರಣೆಗೆ ಮಲೆಕುಡಿಯರ ಮೂಲ ಸಂಸ್ಕೃತಿಯಾದ, ಸಾಂಪ್ರದಾಯಿಕ ಕೃಷಿಯಾದ ಕುಮೇರಿ ಬೇಸಾಯದಿಂದ ಆಧುನಿಕ ಕೃಷಿಗೆ ಬದಲಾವಣೆ, ವಸಹತುಶಾಹಿ,

ಉಳಿಗಮಾನ್ಯ ವ್ಯವಸ್ಥೆ ಮತ್ತು ಪುರೋಹಿತಶಾಹಿ (ಬಂಡವಾಳಶಾಹಿ) ವ್ಯಕ್ತಿಗಳಿಂದ ಬಿಡುಗಡೆ, ಆಧುನೀಕರಣ, ನಗರೀಕರಣ ಬದುಕಿಗೆ ತೆರೆದುಕೊಂಡ ರೀತಿಯನ್ನು ಮಲೆಕುಡಿಯರ ಬದುಕಿನಲ್ಲಿ ಕಾಣಬಹುದು.

೩. ಶೈಕ್ಷಣಿಕ ರೂಪಾಂತರ:

ಆಧುನಿಕ ಶಿಕ್ಷಣ ವ್ಯವಸ್ಥೆಗೆ ಒಳಗಾದ ಬುಡಕಟ್ಟುಗಳು ಹೊಸ ಬಗೆಯ ಎಚ್ಚರವನ್ನು ಪಡೆದಿವೆ. ತಮ್ಮ ಹಕ್ಕುಗಳನ್ನೂ ನೆನಪಿಸಿಕೊಡಿವೆ. ಹೋರಾಟದ ಹಾದಿಯನ್ನು ತುಳಿದಿವೆ. ಶಿಕ್ಷಣ ತಿರಸ್ಕೃತ ಸಮಾಜಕ್ಕೆ ಬಹುದೊಡ್ಡ ಶಕ್ತಿಯನ್ನೂ ತಂದುಕೊಡುತ್ತದೆ. ಆತ್ಮ ವಿಶ್ವಾಸವನ್ನು ತುಂಬುತ್ತದೆ. ತನ್ನ ಸುತ್ತಲಿರುವ ಸಂಸ್ಕೃತಿಯ ಮಿತಿಗಳನ್ನು ಮುರಿಯಲು ಮೀರಲು ರೂಪಾಂತರಿಸಲು ಪ್ರತಿಸೃಷ್ಟಿಸಲು ದಾರಿ ಮಾಡಿ ಕೊಡುತ್ತದೆ. ಶಿಕ್ಷಣಕ್ಕೆ ರೂಪಾಂತರಗೊಳ್ಳುವುದರಿಂದ ತನ್ನ ಸಂಸ್ಕೃತಿಯಿಂದ ದೂರ ಸಾಗುವ ಸಾಧ್ಯತೆಗಳೂ ಇರಬಲ್ಲವಾದರೂ ಅವರ ಅಭಿವೃದ್ಧಿಯ ಹಾದಿಯಲ್ಲಿ ಅವನ್ನು ಸಕಾರಾತ್ಮಕವಾಗಿಯೇ ಎಚ್ಚರದಿಂದ ಪರಿಶೀಲಿಸಬೇಕಾಗಿರುತ್ತದೆ. ಶೈಕ್ಷಣಿಕ ರೂಪಾಂತರಗಳಿಗೆ ಬುಡಕಟ್ಟು ಒಳಗಾಗುವುದೆಂದರೆ ಅದು ಸ್ವಾತಂತ್ರ್ಯವನ್ನು ಹುಡುಕುವುದೆಂದೇ ಅರ್ಥ. ಬುಡಕಟ್ಟುಗಳು ಶಿಕ್ಷಣದ ಆಯುಧಗಳಿಂದ ಬೌದ್ಧಿಕ ಸವಾಲುಗಳನ್ನು ಎದುರುಗೊಂಡಿರುವುದನ್ನು ಚರಿತ್ರೆಯ ಪರ್ಯಾಯ ಕ್ರಮ ಎಂದು ತಿಳಿಯಬಹುದು. ಹೀಗಾಗಿಯೇ ಬಹುಪಾಲು ಎಲ್ಲ ಬುಡಕಟ್ಟುಗಳು ಕಡ್ಡಾಯ ಶಿಕ್ಷಣ ಸವಲತ್ತುಗಳಿಗೂ ಅದರ ಪ್ರಕ್ರಿಯೆಗೂ ತೆರೆದುಕೊಂಡು ಆ ಬಗ್ಗೆ ಒತ್ತಾಯಗಳನ್ನು ತರುವುದು. ಹೀಗೆ ಶಿಕ್ಷಣಕ್ಕೆ ಒಳಗಾಗುವುದರಿಂದಲೇ ಬುಡಕಟ್ಟುಗಳ ಸಾಂಸ್ಕೃತಿಕ ಲೋಕ ವಿಸ್ತಾರವಾಗುತ್ತಾ ಹೊಸ ರೂಪ ಸೌಂದರ್ಯಗಳನ್ನು ತುಂಬಿಕೊಳ್ಳುತ್ತದೆ. ಬೌದ್ಧಿಕ ಎಲ್ಲೆಗಳು ವಿಸ್ತರಿಸಿಕೊಳ್ಳುತ್ತವೆ. ಅಂಬೇಡ್ಕರ್ ಇದಕ್ಕೊಂದು ಅತ್ಯುತ್ತಮ ಸಾಕ್ಷಿ. ಶಿಕ್ಷಣಕ್ಕೆ ತೆರೆದುಕೊಂಡಂತೆಯೇ ಇಡೀ ಆ ಸಮುದಾಯದ ಪೂರ್ವಿಕರ ಸಾಂಸ್ಕೃತಿಕ ಅನುಭವಗಳೆಲ್ಲ ಅಕ್ಷರ ರೂಪದಲ್ಲಿ ಜೀವಂತವಾಗುತ್ತವೆ. ಸಾಂಸ್ಕೃತಿಕ ಬಹುರೂಪತೆಗಳಿಗೊಂದು ವಿಶಿಷ್ಟ ಧ್ವನಿ ಶಕ್ತಿಯನ್ನೂ ತುಂಬುತ್ತದೆ.

ಶಿಕ್ಷಣದ ಮೂಲಕ ಹೊಸ ಹೊಸ ರೂಪವನ್ನು ಪಡೆದುಕೊಂಡ ಬುಡಕಟ್ಟುಗಳು ಯಾವ ಸವಾಲನ್ನಾದರೂ ನಿಭಾಯಿಸಬಲ್ಲವು. ಎಲ್ಲರಿಂದಲೂ ಆಳಿಸಿಕೊಂಡವರು ಎಲ್ಲರಿಂದಲೂ ತುಳಿಸಿಕೊಂಡವರು ಎಲ್ಲರಿಂದಲೂ ಅಪಮಾನಿತರಾದವರು ಎಲ್ಲರಿಂದಲೂ ವಂಚನೆಗೆ ಒಳಗಾದವರು ಎಲ್ಲರಿಂದಲೂ ತಿರಸ್ಕಾರಕ್ಕೆ ಒಳಗಾಗಿ ಪ್ರೀತಿಯಿಂದ ಮಾನವೀಯತೆಯಿಂದ ವಂಚಿತರಾದವರು ಅತ್ಯಂತ ಕಠೋರವಾದ ತಾಳಿಕೆಯ ಗುಣವನ್ನು ಪಡೆದಿರುತ್ತಾರೆ. ಗಾಢವಾದ ಪ್ರತಿರೋಧ ಶಕ್ತಿಯನ್ನು ತಮ್ಮ ಸಂಸ್ಕೃತಿಯ ಗರ್ಭದಲ್ಲಿ ತುಂಬಿಕೊಂಡಿರುತ್ತಾರೆ ಅಂತಹ ಸಮುದಾಯಗಳು ಸುಮ್ಮನೆ ಕಣ್ಮರೆಯಾಗಿ ಹೋಗುವುದಿಲ್ಲ. ಭಾರತದ ಬುಡಕಟ್ಟು ಜಗತ್ತು ಇಂಥಾದ್ದು. ಎಲ್ಲರಿಂದಲೂ ಬಗೆಬಗೆಯ ಅನುಭವಗಳನ್ನು

ಪಡೆದ ಜನಾಂಗಗಳು ಜಾತಿಗಳು ಎಲ್ಲರ ಅಂತರಾಳಗಳನ್ನೂ ಅಳೆಯಬಲ್ಲವು, ಅರಿಯಬಲ್ಲವು. ಇಲ್ಲಿನ ಒಂದೇ ಒಂದು ತಾಂತ್ರಿಕ ತೊಡಕೆಂದರೆ ಶೈಕ್ಷಣಿಕ ರೂಪಾಂತರದ ಮಾದರಿಗಳು ಸೂಕ್ತವಾದ ರೀತಿಯಲ್ಲಿ ಇನ್ನೂ ಇವರನ್ನು ಸರಿಯಾಗಿ ತಲುಪಿಲ್ಲ. ಅವುಗಳ ಅಗಾಧವಾದ ಸಾಂಸ್ಕೃತಿಕ ಅನುಭವಗಳು ಮತ್ತು ಶೋಷಣೆಯಿಂದ ಕಲಿತ ಪಾಠಗಳು ಅಂತಿಮವಾಗಿ ಈ ಸಮುದಾಯಗಳು ದಾರಿ ತಪ್ಪಿದರೂ ಎಚ್ಚರಿಕೆಯಿಂದ ತಿದ್ದಿಕೊಳ್ಳುವಂತೆ ಮಾಡಬಲ್ಲವು. ಶಿಕ್ಷಣದ ರೂಪಾಂತರಗಳಿಂದಲೇ ಭಾರತಕ್ಕೆ ವೈಚಾರಿಕ ಬಹುರೂಪಗಳು ಸಾಧ್ಯವಾಗಿರುವುದು. ಬುಡಕಟ್ಟು ಸಮುದಾಯಗಳ ಶೈಕ್ಷಣಿಕ ರೂಪಾಂತರದ ಕಥನಗಳು ಇನ್ನೂ ಮುಂದೆ ಮತ್ತೊಂದು ಅನುಭವವನ್ನೂ ತೆರೆಯಬಲ್ಲವು. ಈ ರೀತಿಯ ಅನುಭವ ಬುಡಕಟ್ಟು ಸಮುದಾಯಕ್ಕೆ ಸೇರಿರುವ ಮಲೆಕುಡಿಯರಲ್ಲೂ ಆಗಿರುವುದನ್ನು ಗಮನಿಸಬಹುದು. ಸರಕಾರದ ಕಡ್ಡಾಯ ಶಿಕ್ಷಣದ ಯೋಜನೆಯ ಮೂಲಕ, ಸಾಕ್ಷರತ ಆಂದೋಲನದ ಮೂಲಕ ಮಲೆಕುಡಿಯರಲ್ಲೂ ವಿದ್ಯಾವಂತರಾಗಿ ಉನ್ನತ ಶಿಕ್ಷಣವನ್ನು ಪಡೆದುಕೊಂಡು ಇವತ್ತು ವಿವಿಧ ಸರಕಾರಿ ಇಲಾಖೆಗಳಲ್ಲಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ದುಡಿಯುತ್ತಿದ್ದಾರೆ. ಶಿಕ್ಷಣದ ಮಹತ್ವದಿಂದಾಗಿ ಮಲೆಕುಡಿಯರು ಸಾಮಾಜಿಕವಾಗಿ ರಾಜಕೀಯವಾಗಿ, ಆರ್ಥಿಕವಾಗಿ ಗುರುತಿಸಿರುವುದನ್ನು ಕಾಣಬಹುದು.

೪. ಸಾಂಸ್ಕೃತಿಕ ರೂಪಾಂತರ:

ತಿರಸ್ಕೃತ ಸ್ಥಿತಿಗೆ ಒಳಗಾದ ಪ್ರತಿಯೊಂದು ಜನಾಂಗವೂ, ಸಂಸ್ಕೃತಿಯೂ, ಭಾಷೆಯೂ, ಚರಿತ್ರೆಯೂ, ಅತ್ಯಂತ ಸೂಕ್ಷ್ಮವಾಗಿ ತನ್ನ ಪರಂಪರೆಯನ್ನು ತಾನೇ ತನ್ನ ಸಂದರ್ಭದಲ್ಲಿ ಅಗತ್ಯದಲ್ಲಿ ಅರಿವಿನಲ್ಲಿ ರೂಪಾಂತರಿಸಿಕೊಳ್ಳುತ್ತದೆ. ಹಾಗೆ ಮಾಡದಿದ್ದರೆ ಅಂತಹ ಸಮುದಾಯವಾಗಲಿ, ಬುಡಕಟ್ಟುಗಳಾಗಲಿ ಜಾತಿಗಳಾಗಲಿ ಆಧುನೀಕರಣ ಇಲ್ಲವೆ ಜಾಗತೀಕರಣದ ಪ್ರವಾಹದಲ್ಲಿ ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳಲಾರವು. ಪ್ರತಿಯೊಂದು ಯುಗದ ಅಂತರದಲ್ಲಿ ಸಮುದಾಯಗಳ ಸಾಂಸ್ಕೃತಿಕ ರೂಪಾಂತರಗಳು ಘಟಿಸುತ್ತವೆ. ಕಾಲ ಮತ್ತು ಅವಕಾಶಗಳು ಸಮುದಾಯಗಳ ಭವಿಷ್ಯಕ್ಕೆ ಪೂರಕವಾಗದಿದ್ದರೆ ಸಾಂಸ್ಕೃತಿಕ ರೂಪಾಂತರಗಳಲ್ಲಿ ವೈಪರೀತ್ಯಗಳು ಎದುರಾಗುತ್ತವೆ.

ಬುಡಕಟ್ಟುಗಳ ಸಾಂಸ್ಕೃತಿಕ ರೂಪಾಂತರ ಕೆಳಜಾತಿಗಳ ರೂಪಾಂತರಕ್ಕಿಂತ ಕೊಂಚ ಭಿನ್ನವಾದದ್ದು. ಬಹಳ ಬೇಗನೇ ಹೊರಜಗತ್ತಿನ ಸಂಬಂಧಗಳಿಗೆ ತೆರೆದುಕೊಳ್ಳದ ಬುಡಕಟ್ಟುಗಳ ಸಾಂಸ್ಕೃತಿಕ ಮನಸ್ಸು ಬಹಳ ಸೂಕ್ಷ್ಮವೂ, ಸಂಕೀರ್ಣವೂ, ಪರಿಸರ ಪ್ರಧಾನವಾದದ್ದೂ ಹೌದು. ಪ್ರಭುತ್ವದ ಜೊತೆ ನೇರವಾಗಿ ಮುಖಾಮುಖಿಯಾಗಲು ಹಿಂಜರಿಯುವುದನ್ನು ಈಗ ತಾನೆ ಬುಡಕಟ್ಟುಗಳು ಕಡಿಮೆ ಮಾಡಿಕೊಳ್ಳುತ್ತಿವೆ. ಒಂದು ರೀತಿಯಲ್ಲಿ ಸಾಂಸ್ಕೃತಿಕ ರೂಪಾಂತರಗಳನ್ನು ಬಹಳ ಎಚ್ಚರಿಕೆಯಿಂದ ಗುಪ್ತವಾಗಿ ನಿಧಾನವಾಗಿ ಮಾಡಿಕೊಳ್ಳುವ ಪ್ರವೃತ್ತಿಯಿರುತ್ತದೆ. ಕಾಡಿನ ಸಾಂಸ್ಕೃತಿಕ ರೀತಿ ನೀತಿಗಳಿಗೂ, ನಾಡಿನ ಸಾಂಸ್ಕೃತಿಕ ನೆಲೆಗಳಿಗೂ ಅನೇಕ ವೈರುಧ್ಯಗಳಿರುವುದರಿಂದ ಇಲ್ಲಿ ಹಳೆಯ ಸಾಂಸ್ಕೃತಿಕ ಜಗತ್ತಿಗೂ ನಾಗರಿಕತೆಗಳ

ಆಧುನಿಕ ಸಾಂಸ್ಕೃತಿಕ ಪರಿಸ್ಥಿತಿಗೂ ಅಷ್ಟು ಸಲೀಸಾಗಿ ರೂಪಾಂತರಗಳು ಘಟಿಸುವುದಿಲ್ಲ. ಒಂದನ್ನೊಂದು ತಿರಸ್ಕರಿಸುವಂತೆ ಮೌಲ್ಯ ಪರಂಪರೆಗಳನ್ನು ಬೆಳೆಸಿಕೊಂಡಿರುತ್ತದೆ. ಕಾಡಿನಿಂದ ನಾಡನ್ನು ನೋಡುವ ನಾಡಿನಿಂದ ಕಾಡನ್ನು ನೋಡುವ ಎರಡು ಪ್ರತ್ಯೇಕತೆಗಳ ಅನನ್ಯತೆಯಲ್ಲಿ ಬುಡಕಟ್ಟುಗಳು ಸಂಕೀರ್ಣ ರೀತಿಯ ಸಾಂಸ್ಕೃತಿಕ ರೂಪಾಂತರಗಳಿಗೆ ಒಳಗಾಗುತ್ತವೆ. ಕಾಡು ನಾಡಿನ ಸಾಂಸ್ಕೃತಿಕ ರೂಪಾಂತರಗಳ ಘರ್ಷಣೆಗಳು ಹಿಂದಿನಿಂದಲೂ ನಡೆದುಕೊಂಡು ಬಂದಿವೆ. ನಾಗರಿಕತೆಗಳ ಸಾಂಸ್ಕೃತಿಕ ಚರಿತ್ರೆಯಲ್ಲಿ ಅವು ತಮ್ಮ ವಿಕಾಸದ ಹಂತದಲ್ಲಿ ಆಕ್ರಮಣಶೀಲವಾಗಿಯೇ ಬೆಳೆದಿವೆ. ಒಂದು ಸಂಸ್ಕೃತಿಯಿಂದ ಇನ್ನೊಂದು ಸಂಸ್ಕೃತಿಯು ಅಸ್ತಿತ್ವವನ್ನು ಸಮನಾರ್ಥದಲ್ಲಿ ಕಾಯ್ದುಕೊಳ್ಳುವ ವಿವೇಕವನ್ನು ಕಾಪಾಡಿಕೊಳ್ಳದಿದ್ದರೆ ಯಾವುದೇ ಬಗೆಯ ರೂಪಾಂತರಗಳಿಗೂ ಮಾನವೀಯತೆಯ ಸೌಂದರ್ಯ ಧಕ್ಕೆಯಾದಂತಾಗುತ್ತದೆ.

ನಮ್ಮ ಬುಡಕಟ್ಟುಗಳು ಇವತ್ತು ಈ ಸಮಸ್ಯೆಗಳ ಒಳಗೆಯೇ ಆಧುನೀಕರಣ ಮತ್ತು ಜಾಗತೀಕರಣದ ಜೊತೆ ಪರ ವಿರುದ್ಧ ಸಂವಾದವನ್ನು ನಡೆಸುತ್ತಿವೆ. ಉದಾಹರಣೆಗೆ ಮಲೆಕುಡಿಯರಲ್ಲಿದ್ದ ಮೂಲ ಸಂಸ್ಕೃತಿಗಳಾದ ಕುಮೇರಿ ಬೇಸಾಯ, ಅಹಾರ ಸಂಗ್ರಹ, ಬೇಟೆಯ ವಿಧಾನ, ಕೈಕಸುಬು, ಕುಟುಂಬ ಪದ್ದತಿ, ಗಂಡು–ಹೆಣ್ಣು ಸಂಬಂಧ, ಸಾಂಸ್ಕೃತಿಕ ಆಚರಣೆ–ಮುಂತಾದುವು ಸಂಸ್ಕೃತಿಗಳು ರೂಪಾಂತರ ಗೊಂಡಿರುವುದನ್ನು ವರ್ತಮಾನ ಕಾಲದಲ್ಲಿ ಕಾಣಬಹುದು.

೫. ಆಧುನೀಕರಣ :

ಆಧುನೀಕರಣವು ಸಂಸ್ಕೃತಿಗಳನ್ನು ರೂಪಿಸಿಕೊಂಡಿರುವ ಒಂದು ವಿಧಾನವಷ್ಟೇ. ಬುಡಕಟ್ಟುಗಳಿಗೆ ಈ ಆಧುನಿಕತೆ ಬೇಡವೆಂದೂ, ಅವು ಇನ್ನೂ ಅಂತಹುದಕ್ಕೆ ಪಕ್ವಾಗಿಲ್ಲವೆಂದೂ ಹೇಳುವವರುಂಟು. ಹಾಗೆ ನೋಡಿದರೆ ಎಲ್ಲ ಬಗೆಯ ಬದಲಾವಣೆಗಳ ಪ್ರತಿಬಿಂಬವೇ ಆಧುನೀಕರಣ. ನಾಗರಿಕತೆಗಳ ವಿಕಾಸದ ಪ್ರಕ್ರಿಯೆಯೇ ಆಧುನೀಕರಣ ಎಂದು ಗುರುತಿಸಬಹುದು.

ಸಂಸ್ಕೃತಿಯ ಸ್ಥಿತ್ಯಂತರಗಳ ಪರೀಕ್ಷೆಯಲ್ಲಿ ಆಧುನೀಕರಣದಂತಹ ಕ್ರಮಗಳೆಲ್ಲವೂ ಸ್ವತಃ ಆಯಾ ಸಮುದಾಯದ ಪರಂಪರೆಯನ್ನು ಬೆಳೆಸುವ ರೀತಿಯಾಗಿರುತ್ತವೆ. ಪರಂಪರೆ ಮತ್ತು ಸಂಸ್ಕೃತಿಯ ಪ್ರವಾಹದಲ್ಲಿ ಆಯಾ ಕಾಲದ ಆಧುನೀಕರಣ ಬುಡಕಟ್ಟು ಸಮುದಾಯಗಳಿಗೆ ಸಾಮಾಜಿಕ ಪ್ರತಿರೋಧ ಶಕ್ತಿಯನ್ನು ತಂದು ಕೊಡುತ್ತವೆ. ಮುಖ್ಯ ಎಂದರೆ ಈ ಆಧುನೀಕರಣವು ವ್ಯಕ್ತಿ ಮತ್ತು ಸಮುದಾಯದ ನಡುವಿನ ಒಂದು ಬೌದ್ಧಿಕ, ತಾಂತ್ರಿಕ ಹಾಗೂ ವೈಚಾರಿಕವಾದ ಹಾಗೆಯೇ ವೈಜ್ಞಾನಿಕವಾದ ಸಂವೇದನೆಯಿಂದ ಸ್ವತಃ ತನ್ನ ಸಂಸ್ಕೃತಿಯ ಮಿತಿಗಳನ್ನು ಮೀರುತ್ತ ವಿಸ್ತರಿಸುತ್ತ ನಿರಂತರವಾದ ಆಕರ್ಷಣೆ ವಿಕರ್ಷಣೆಗಳ ವಿಕಾಸವಾಗಿರುತ್ತದೆ.

ಆಧುನೀಕರಣದ ಮೂಲಕ ಬರುವ ಎಚ್ಚರಗಳಿಗೆ ನಮ್ಮ ಬುಡಕಟ್ಟುಗಳನ್ನು ಒಳಪಡಿಸಿದರೆ ಅವುಗಳ ಸ್ಥಿತಿಯಲ್ಲಿ ಹೆಚ್ಚಿನ ಸುಧಾರಣೆಗಳು ಸಾಧ್ಯ. ಇವತ್ತಿನ ಸಮಾಜದಲ್ಲಿ ಕೈಗಾರಿಕರಣ

ಆಧುನೀಕರಣ, ಜಾಗತೀಕರಣ – ಇವೆಲ್ಲ ಒಂದೊಂದು ಹಂತವಾಗಿ ಮನುಷ್ಯನ ಬದುಕನ್ನು ಆವರಿಸಿವೆ. ಇವುಗಳಿಂದ ಬಿಡಿಸಿಕೊಳ್ಳುವ ಮಾತಿನ ಅಗತ್ಯವೇ ಇಲ್ಲ. ಇವುಗಳಿಂದ ಹೊರತಾಗಿ ಬದುಕುತ್ತೇನೆ ಎಂಬುದು ಕೇವಲ ತನ್ನ ಸಾಂಸ್ಕೃತಿಕ ಅನನ್ಯತೆಯ ಸಲುವಾಗಿ ಮಾಡಿಕೊಳ್ಳುವ ಸಮಾಧಾನದ ಮಾತುಗಳಷ್ಟೆ.

ಬದಲಾವಣೆಯ ಸ್ಥಿತಿಗಳನ್ನು ಬುಡಕಟ್ಟುಗಳ ಅಂಕಿ ಅಂಶಗಳಿಂದ ತೋರಿಸುವುದಕ್ಕಿಂತಲೂ ಅವುಗಳು ಆಧುನಿಕ ಬದುಕಿಗೆ ಹೇಗೆ ಮುಖಾಮುಖಿಯಾಗಬಲ್ಲವು ಎಂಬುದು ಮುಖ್ಯ. ಜಗತ್ತಿನ ಬೇರೆಲ್ಲ ಬುಡಕಟ್ಟುಗಳು ಈಗಾಗಲೇ ಸ್ವತಃ ತಮ್ಮ ಮೂಲ ಬುಡಕಟ್ಟಿನ ನೆನಪನ್ನೇ ರೂಪವನ್ನೇ ಮರೆಯುವಷ್ಟು ಬದಲಾಗಿದ್ದಾರೆ. ಎಷ್ಟೋ ಬಾರಿ ಆಧುನೀಕರಣಗಳಿಂದ ಇಡೀ ಸಂಸ್ಕೃತಿಯೇ ಬೇರೆಯಾಗಿ ಹೋಗಿರುತ್ತದೆ.

ಈ ಮೇಲಿನ ಎಲ್ಲ ರೂಪಾಂತರಗಳೂ ಒಟ್ಟು ಒಂದು ಸಂಸ್ಕೃತಿಯ ವಿಕಾಸವನ್ನೇ ನಿರೂಪಿಸುವಂತಿದ್ದರೂ ಇವುಗಳ ಒಳಗೇ ಭಿನ್ನ ರೂಪಾಂತರ ಪಠ್ಯಗಳೂ ನಡೆಯುತ್ತಿರುತ್ತವೆ. ಆಧುನೀಕರಣವನ್ನು ಜಾಗತೀಕರಣವನ್ನು ಸಕರಾತ್ಮಕವಾಗಿ ರೂಪಾಂತರಿಸಿಕೊಳ್ಳುವಂತೆಯೇ ನಕಾರಾತ್ಮಕವಾಗಿ ವಿಕಾರವಾಗಿ ರೂಪಾಂತರಿಸಿಕೊಳ್ಳುವ ಅಪಾಯಗಳೂ ಇರುತ್ತವೆ. ಜಾಗತೀಕರಣವನ್ನು ನಿರೂಪಿಸುವಾಗ, ಅಂದರೆ ಅದನ್ನು ಸಮುದಾಯಕ್ಕೆ ಒಳಪಡಿಸುವಾಗ ಪ್ರಭುತ್ವ ಅಥವಾ ಶಕ್ತಿಶಾಲಿ ಜಾತಿ ವರ್ಗ ವರ್ಣಗಳು ತಮ್ಮ ಅನುಕೂಲಕ್ಕೆ ತಕ್ಕಂತೆಯೂ ದುರ್ಬಳಕೆ ಮಾಡಿಕೊಳ್ಳಬಲ್ಲವು. ಹೀಗಾಗಿಯೇ ವೈಚಾರಿಕತೆಯ, ಆಧುನೀಕರಣದ ವಿಚ್ಛಿದ್ರಕಾರಿ ಬೆಳವಣಿಗೆಗಳೂ ಹುಟ್ಟಿಕೊಳ್ಳುವುದು.

ಅಭಿವೃದ್ಧಿಯ ಕ್ರಮಗಳನ್ನೂ, ಆಧುನೀಕರಣದ ನೀತಿಗಳನ್ನೂ, ತಂತ್ರಗಳನ್ನೂ ರೂಪಿಸುವವರ ದೋಷಗಳಿಂದಾಗಿಯೇ ಎಷ್ಟೋ ಬಾರಿ ಅತ್ಯುತ್ತಮ ಬದಲಾವಣೆಯ ಆಶಯಗಳು ಸೋತು ಹೋಗುತ್ತವೆ. ವೈಜ್ಞಾನೀಕರಣಕ್ಕೆ ಮುಖಾಮುಖಿಯಾಗಿಸುವ ಯೋಜನೆಗಳು, ಸಂಸ್ಥೆಗಳು, ವ್ಯವಸ್ಥೆಗಳು, ಪ್ರಭುತ್ವಗಳು ಬುಡಕಟ್ಟುಗಳನ್ನು ಸೂಕ್ತವಾಗಿ ಬಳಸಿಕೊಳ್ಳುವಲ್ಲೂ ಹಿಂದುಳಿದಿವೆ. ಬಹುಪಾಲು ವೇಳೆ ವೈದಿಕ ಇಲ್ಲವೇ ಅಂತಹ ಯಾವುದೇ ತಾತ್ವಿಕತೆಯು ತನ್ನ ಅಸ್ತಿತ್ವಕ್ಕಾಗಿ ಕೆಳಜಾತಿಗಳಿಗೆ ಪಶ್ಚಿಮವನ್ನೂ ಅದರ ಸಕಾರಾತ್ಮಕ ರೂಪಗಳನ್ನೂ ಸರಿಯಾಗಿ ಪರಿಚಯಿಸುವುದಿಲ್ಲ. ಹೀಗಾಗಿ ಜಾಗತೀಕರಣವನ್ನು ಬುಡಕಟ್ಟುಗಳ ಸಮಸ್ಯೆಗಳನ್ನು ಗೊಂದಲದಿಂದ ಸಂಕಥಿಸುವುದನ್ನು ಉನ್ನತ ಜಾತಿಯ ಮನಸ್ಸು ಮತ್ತು ಮಾಧ್ಯಮಗಳು ಮೂಡುತ್ತಿರುತ್ತವೆ. ಇಷ್ಟಾಗಿಯೂ ಜಾಗತೀಕರಣದ ಸಂದರ್ಭದಲ್ಲಿ ಈ ಎಲ್ಲಾ ಸಾಧ್ಯಾಸಾಧ್ಯತೆಯನ್ನೂ, ಸಂಸ್ಕೃತಿ ರೂಪಾಂತರಗಳನ್ನೂ ನಾಳಿನ ತಲೆಮಾರುಗಳ ಬೌದ್ಧಿಕ ಲೋಕದ ವಿಕಾಸದ ಅವಸ್ಥಾಂತರಗಳಿಂದಲೇ ನೋಡಬೇಕಾಗಿರುತ್ತದೆ. 'ಪ್ರಗತಿ' ಪಥದ ಕಡೆ ಮುಖ ಮಾಡಿರುವ ಮಲೆಕುಡಿಯರ ಬದುಕಿನಲ್ಲೂ ಈ ಆಧುನಿಕತೆ ಪ್ರವೇಶವಾಗಿರುವುದನ್ನು ಕಂಡುಕೊಳ್ಳಬಹುದು.

೬. ಆರ್ಥಿಕ ತಾಂತ್ರಿಕ ರೂಪಾಂತರ :

ಸ್ವಾತಂತ್ರ್ಯಾನಂತರದ ಭಾರತದಲ್ಲಿ ಕರಕುಶಲ ತಂತ್ರಜ್ಞಾನದ ಸಮುದಾಯಗಳು ಮೂಲೆ ಗುಂಪಾದವು. ದೇಶೀ ಉತ್ಪಾದನಾ ವಿಧಾನಕ್ಕೆ ಮಾರುಕಟ್ಟೆಯನ್ನು ಇಲ್ಲದಂತೆ ವ್ಯವಸ್ಥೆಯನ್ನು ರೂಪಿಸಲಾಯಿತು. ಜೊತೆಗೆ ಸ್ವಾತಂತ್ರ್ಯಾನಂತರದ ಭಾರತದ ಆರ್ಥಿಕ ಯೋಜನೆಗಳು ದೇಶಿ ತಂತ್ರಜ್ಞಾನದ ವಿಧಾನಗಳನ್ನೇ ಕಡೆಗಣಿಸಿ ಯುರೋಪಿನ ಕೈಗಾರಿಕಾ ಕ್ರಾಂತಿಯ ಪೊಳ್ಳು ಮಾದರಿಗಳನ್ನು ಅನುಕರಿಸುವ ಮೂಲಕ ಅನೇಕ ಸಮುದಾಯಿಗಳ ಆರ್ಥಿಕ ವ್ಯವಸ್ಥೆಯನ್ನೇ ದುರ್ಬಲಗೊಳಿಸಿತು. ಜಾತಿಯ ಕೈಗಳಲ್ಲಿದ್ದ ಕರಕುಶಲ ಉದ್ಯೋಗವನ್ನು ಕ್ಷೀಣಿಸುವಂತೆ ಅಥವಾ ಅದಕ್ಕೆ ಯಾವ ಗೌರವವೂ ಇಲ್ಲದಂತೆ ಮಾಡಿತು. ಆಧುನಿಕ ಜಗತ್ತಿನ ಆರ್ಥಿಕ ವ್ಯವಸ್ಥೆಗೆ ಹೊಂದಿಕೊಳ್ಳಲು ಬುಡಕಟ್ಟುಗಳಿಗೆ ಇಲ್ಲ. ಅದೂ ಅಲ್ಲದೇ ನಮ್ಮ ಎಲ್ಲ ಯೋಜನೆಗಳೂ ಪಶ್ಚಿಮದ ಅಭಿವೃದ್ಧಿಯ ಮಾನದಂಡಗಳನ್ನು ಮಾದರಿಯಾಗಿಟ್ಟುಕೊಂಡು ಬಂದಂಥವು. ಇವತ್ತಿಗೂ ಬುಡಕಟ್ಟುಗಳಿಗೆ ಅರ್ಥಪೂರ್ಣವಾದ ಆರ್ಥಿಕ ಪ್ರವೇಶವೇ ಇಲ್ಲ. ಬುಡಕಟ್ಟುಗಳನ್ನು ಅತ್ಯಂತ ಕೆಳ ಮಟ್ಟದ ಕೂಲಿಯಾಳುಗಳಾಗಿ ಗುಲಾಮರಾಗಿ ಇವತ್ತಿಗೂ ಬಳಸಿಕೊಳ್ಳಲಾಗುತ್ತಿದೆ. ಇದು ನಿಜವಾದ ಉತ್ಪಾದನಾ ವಿಧಾನವಲ್ಲ.

ಬುಡಕಟ್ಟುಗಳು ಅನೇಕ ಇಕ್ಕಟ್ಟುಗಳ ನಡುವೆಯೇ ಆರ್ಥಿಕವಾಗಿ ಪರಾವಲಂಬಿಗಳಾಗಿ ರೂಪಾಂತರಗೊಳ್ಳುತ್ತಿವೆ. ಕಾಡಿನ ಉತ್ಪಾದನಾ ರೀತಿನೀತಿಗಳು ಕಾಡಿನ ಒಳಗೆ ಯಾರಿಗೆ ತಾನೇ ಬೇಕಿರುತ್ತದೆ. ಕೇವಲ ಕಳ್ಳದಂಧೆಗಳಿಗೆ. ಅರಣ್ಯ ಸಂಪತ್ತಿನ ಲೂಟಿಗೆ ನಾಗರಿಕ ಜಗತ್ತು ಅದನ್ನು ಬಳಸಿಕೊಳ್ಳುತ್ತಾರೆ. ಇವತ್ತು ಬುಡಕಟ್ಟು ಜನಾಂಗಗಳು ಅನಿವಾರ್ಯವಾಗಿ ವೃತ್ತಿಯೇ ಅಲ್ಲದ ಎಂತೆಂಥದೋ ವೃತ್ತಿಗಳನ್ನು ಅನುಸರಿಸುತ್ತಿವೆ. ಅವುಗಳ ಬಡತನ, ಅನಾರೋಗ್ಯ, ಶಿಕ್ಷಣ ಮತ್ತು ಉದ್ಯೋಗದ ಬಗ್ಗೆ ಸ್ಪಷ್ಟವಾದ ತಿಳುವಳಿಕೆಯೇ ನಮ್ಮ ಯೋಜನೆಗಳಿಗೆ ಇಲ್ಲ.

ಒಂದು ನೂರು ವರ್ಷಗಳ ಅವಧಿಯಲ್ಲಿ ಬುಡಕಟ್ಟುಗಳು ಅನೇಕ ಬಗೆಯ ಆರ್ಥಿಕ ರೂಪಾಂತರಗಳಿಗೆ ಒಳಗಾಗುತ್ತಲೇ ಬಂದಿವೆ. ಆಧುನಿಕತೆಗೂ, ಪ್ರಾಚೀನತೆಗೂ ಸಂಬಂಧವನ್ನು ನಿರೂಪಿಸಲು ಸಾಧ್ಯವಾಗದೆ ಅವೆರಡರ ಮಧ್ಯೆ ವಿಚಿತ್ರ ರೀತಿಯ ಆರ್ಥಿಕ ಅಸಮಾನತೆಗೆ ಒಳಗಾಗುವ ಅಭ್ಯಾಸವಾಗಿ ಹೋಗಿದೆ. ಎಂಭತ್ತರ ದಶಕದ ನಂತರ ಬುಡಕಟ್ಟು ಸಮಾಜಕ್ಕೆಂದೇ ಅನೇಕ ಹೊಸ ಯೋಜನೆಗಳನ್ನು ರೂಪಿಸುತ್ತಿದ್ದರೂ ಅವ್ಯಾವು ಫಲಕಾರಿಯಾಗುತ್ತಿಲ್ಲ. ತಾತ್ವಿಕವಾಗಿಯೂ ಬುಡಕಟ್ಟುಗಳು ಅತ್ಯಂತ ಕಡಿಮೆ ಕೂಲಿಯ ಅನಿರ್ದಿಷ್ಟ ಕೂಲಿ ಕಾರ್ಮಿಕರಾಗಿ ರೂಪಾಂತರಗೊಳ್ಳುತ್ತಿದ್ದಾರೆ. ಕುಶಲ ಕಾರ್ಮಿಕರನ್ನಾಗಿ ಅವರನ್ನು ಪರಿವರ್ತಿಸಲೂ ಅನೇಕ ತೊಡಕುಗಳಿವೆ. ತಾಳ್ಮೆಯಿಂದ ಅವರನ್ನು ಉತ್ಪಾದಕ ಸಮುದಾಯವಾಗಿ ಬದಲಿಸಲು ಆಗುತ್ತಿಲ್ಲ.

ಮೇಲೆ ಬಂದ ಯಾರೋ ಕೆಲವರ ಪ್ರತಿಭೆಯ ವಲಸೆಯನ್ನು ತಡೆದು ಪ್ರಗತಿಗೆ ಬಳಸಿಕೊಳ್ಳಬೇಕೆಂದು ವಾದಿಸುವವರು ಇಂತಹ ಅಲಕ್ಷಿತ ಸಮುದಾಯಗಳ ಮಾನವ ಸಂಪತ್ತನ್ನು ಮೊದಲು ಸರಿಯಾಗಿ ಉತ್ಪಾದನಾ ನೈಪುಣ್ಯತೆಗೆ ಒಳಪಡಿಸಬೇಕು. ಮಾನವ ಸಂಪತ್ತಿನ ದುರ್ಬಳಕೆ ಕೂಡ ಎಷ್ಟೋ ಸಮುದಾಯಗಳನ್ನು ಅಭಿವೃದ್ಧಿಯ ರೇಖೆಯಿಂದ ಹೊರಕ್ಕೆ ನೂಕಿದೆ. ಈ ಸಮುದಾಯಗಳ ಮಾನವ ಸಂಪತ್ತು ಪ್ರಧಾನ ಧಾರೆಯ ಉತ್ಪಾದನಾ ವಾಹಕಕ್ಕೆ ಸೂಕ್ತವಾಗಿ ಆರ್ಥಿಕ ರೂಪಾಂತರಗಳೇ ಘಟಿಸುತ್ತಿಲ್ಲ. ಗಾಂಧಿ ಹೇಳುತ್ತಿದ್ದ ಗ್ರಾಮೀಣ ಆರ್ಥಿಕ ನೀತಿಗಳು ಜಾಗತೀಕರಣದ ಸ್ಥಿತಿಯಲ್ಲಿ ಪ್ರಸ್ತುತವಾಗಲಾರವು. ಗಾಂಧಿಯ ಆರ್ಥಿಕ ವ್ಯವಸ್ಥೆಯನ್ನು ಅನುಸರಿಸಲಾರದಷ್ಟು ದೂರಕ್ಕೆ ನಮ್ಮ ಸರ್ಕಾರಗಳು, ಸಮಾಜಗಳು ಹೊರಟು ಹೋಗಿದೆ. ದೇಶೀ ನೈಪುಣ್ಯತೆ, ತಂತ್ರಜ್ಞಾನಗಳು ಕೂಡ ತಮ್ಮ ಆಕರ್ಷಣೆಗೆ ಸಾಮರ್ಥ್ಯವನ್ನು ಕಳೆದುಕೊಂಡಿವೆ.

ಬುಡಕಟ್ಟುಗಳ ಮಾನವ ಸಂಪತ್ತನ್ನು ಜಾಗತೀಕರಣದ ಈ ಹೊತ್ತಿನಲ್ಲಿ ಅರ್ಥಪೂರ್ಣ ಆರ್ಥಿಕ ರೂಪಾಂತರಗಳಿಗೆ ಒಳಪಡಿಸಲೇ ಬೇಕಾದ ಅನಿವಾರ್ಯತೆ ಇದೆ. ಭಾರತದ ನಿಜವಾದ ಮಾನವ ಸಂಪತ್ತು ಬಚ್ಚಿಟ್ಟುಕೊಂಡಂತೆ ಉಳಿದಿರುವುದೇ ಬುಡಕಟ್ಟುಗಳಲ್ಲಿ.

ಇಂದಿನ ತಂತ್ರಜ್ಞಾನ ಬಹಳ ಸೂಕ್ಷ್ಮವಾಗಿ ಉತ್ಪಾದನಾ ವಿಧಾನವನ್ನೇ ಬದಲಿಸಿದೆ. ಅದಕ್ಕಾಗಿಯೇ ಹಿಂದೆಯೇ ಕೈಗಾರಿಕಾ ಕ್ರಾಂತಿಗಳು ಘಟಿಸಿವೆ. ತಂತ್ರಜ್ಞಾನ ಇವತ್ತು ಜಗತ್ತನ್ನು ಆಳುತ್ತಿದೆ. ತಂತ್ರಜ್ಞಾನ ಮತ್ತು ವಿಜ್ಞಾನದ ಆವಿಷ್ಕಾರಗಳಿಂದ ಆರ್ಥಿಕ ಜಗತ್ತು ವಿಶಾಲವಾಗಿದೆ. ತಂತ್ರಜ್ಞಾನವಿಲ್ಲದೆ ಇವತ್ತಿನ ನಮ್ಮ ಯಾವ ಮಹತ್ವದ ಯೋಜನೆಗಳೂ ಒಂದಿಂಚೂ ಜರುಗಲಾರವು. ತಂತ್ರಜ್ಞಾನ ಪ್ರಣೀತವಾದ ಆರ್ಥಿಕ ಗುರಿ ಮತ್ತು ಅಭಿವೃದ್ಧಿಯ ಹಂತಗಳು ನಾಗರಿಕತೆಯ ಜೊತೆಯಲ್ಲೇ ಸೂಕ್ಷ್ಮವಾಗಿ ಅಂತರಗಳನ್ನು ಬೆಳೆಸಿ ಬಿಟ್ಟಿದೆ. ಸಂಸ್ಕೃತಿಯ ಹಳೆಯ ಜಗತ್ತಿನ ಆರ್ಥಿಕ ನಂಬಿಕೆಗಳಿಗೂ, ವೈಜ್ಞಾನಿಕ ಕ್ರಾಂತಿಯುಗದ ಆರ್ಥಿಕ ವ್ಯವಸ್ಥೆಗಳಿಗೂ ಹಿಂದಿನಿಂದಲೂ ಸರಿಯಾದ ಸಂಬಂಧಗಳು ಜಗತ್ತಿನ ಉದ್ದಕ್ಕೂ ಬೆಳೆದಿಲ್ಲ. ತಾಂತ್ರೀಕೃತ ಆರ್ಥಿಕ ವಿಕಾಸಗಳಲ್ಲಿ ಪಾರಂಪರಿಕ ಆರ್ಥಿಕ ಲೋಕ ಸಂಯೋಗವಾಗುವ ಬದಲು ದೂರ ಸರಿಯುವ ಪ್ರವೃತ್ತಿಯಿಂದಾಗಿಯೇ ಸಂಸ್ಕೃತಿಯ ಒಳಗಿನ ಸಾಂಪ್ರಾದಾಯಿಕ ಉತ್ಪಾದನಾ ವಿಧಾನಕ್ಕೂ ವೈಜ್ಞಾನಿಕ ಉತ್ಪಾದನಾ ವಿಧಾನಕ್ಕೂ ವಿರೋಧಗಳು ಹುಟ್ಟಿಕೊಂಡಿವೆ. ವಿಜ್ಞಾನ ಮತ್ತು ಸಂಸ್ಕೃತಿಗಳ ವೈರುಧ್ಯದ ಪರಿಣಾಮ ಇದು. ಸಂಸ್ಕೃತಿಗಳು ವಿಜ್ಞಾನವನ್ನೂ, ತಂತ್ರಜ್ಞಾನವನ್ನೂ ಸ್ವೀಕರಿಸುವಲ್ಲಿ ತಪ್ಪು ಮಾಡಿವೆ. ಹಾಗೆಯೇ ವಿಜ್ಞಾನವು ಅಥವಾ ವೈಜ್ಞಾನಿಕ ತಾಂತ್ರಿಕ ಸಮಾಜಗಳು ಹಳೆಯ ಸಾಂಸ್ಕೃತಿಕ ಸಮಾಜಗಳನ್ನು ತಿರಸ್ಕಾರದಿಂದ ನೋಡಿವೆ. ಇದು ನಿರಂತರವಾಗಿ ಅಸಮಾನತೆಗಳನ್ನು ಬೆಳೆಸಿರುವ ಪ್ರಕ್ರಿಯೆ.

ಪಶ್ಚಿಮದ ತಂತ್ರಜ್ಞಾನವನ್ನು ನಮ್ಮ ಪಾರಂಪರಿಕ ಕರಕುಶಲತೆಯ ಜೊತೆ ಸಂಯೋಗಿಸಬೇಕಾಗಿತ್ತು. ಅದನ್ನೇ ದೇಶಿ ಆರ್ಥಿಕ ಪದ್ಧತಿಗೂ, ವಿದೇಶಿ ಆರ್ಥಿಕ ನೀತಿಗಳಿಗೂ ವಿರೋಧಾಭಾಸಗಳು

ಹುಟ್ಟಿಕೊಳ್ಳುವಂತೆ ನೆಹರು ತರದವರು ದಾರಿ ತಪ್ಪಿಸಿದರು. ನಮ್ಮ ದೇಶೀ ಉತ್ಪನ್ನಗಳಿಗೆ ಮಾರುಕಟ್ಟೆಯಿಲ್ಲದಂತೆ ಮಾಡಿದ್ದರಲ್ಲಿ ನಮ್ಮ ಪಾಲೂ ಇದೆ. ಈಗಲೂ ಅಂಥದೇ ಸ್ಥಿತಿಯಿದೆ. ದೇಶೀ ಆರ್ಥಿಕ ವ್ಯವಸ್ಥೆಯ ವಿಕಾರಗಳನ್ನು ತೊಡೆದು ಹಾಕುವುದಕ್ಕಾಗಿ ಮಾತ್ರ ಆಧುನೀಕರಣವನ್ನೂ ತಾಂತ್ರೀಕರಣವನ್ನೂ ಅಳವಡಿಸಿಕೊಂಡಿದ್ದರೆ ಇಷ್ಟು ಹೊತ್ತಿಗೆ ಬಹುಪಾಲು ಎಲ್ಲ ತಮ್ಮ ಕೆಳಜಾತಿಯ ಕರಕುಶಲ ತಾಂತ್ರಿಕ ಸಮುದಾಯಗಳು ದೊಡ್ಡ ಮಾನವ ಶಕ್ತಿಯಾಗಿ ಬೆಳೆದುಬಿಟ್ಟಿರುತ್ತಿದ್ದವು. ಕರಕುಶಲ ಸಮುದಾಯಗಳ ಸಾಮಾಜಿಕ ರಚನೆಯ ವಿಕಾರವನ್ನು ನಿರ್ನಾಮ ಮಾಡಲು ಮಾತ್ರ ನಮಗೆ ಆಧುನೀಕರಣವೂ, ವಿಜ್ಞಾನವೂ, ತಂತ್ರಜ್ಞಾನವೂ ಬೇಕಾಗಿತ್ತು. ಗುಡಿ ಕೈಗಾರಿಕೆಗಳನ್ನು ಆಧುನಿಕತೆಯ ಬೆದರು ಗೊಂಬೆಯಂತೆ ನಮ್ಮ ಆರ್ಥಿಕ ವ್ಯವಸ್ಥೆ ನಿಲ್ಲಿಸಿತು. ಪಾಶ್ಚಾತ್ಯ ಕೈಗಾರಿಕಾ ಕ್ರಾಂತಿಯ ಮಾನವೀಯ ಸಂಬಂಧಗಳನ್ನು ಅದರ ನಾಗರಿಕತೆಯ ಮನುಷ್ಯ ಸಮಾಜಗಳ ಜಾಣತನವನ್ನು ಪ್ರಾದೇಶಿಕ ಸಾಂಸ್ಕೃತಿಕ ಅರಿವಿನ ಜೊತೆ ಹೊಂದಾಣಿಕೆಯನ್ನು ಮಾಡಿಕೊಳ್ಳಲೇಬೇಕಾದ ಯುಗವಿದು.

ಸಾಂಪ್ರದಾಯಿಕ ಕ್ರಮದಿಂದ ಇಂದು ವಿಕಾಸವಾಗಿರುವ ಅಲಕ್ಷಿತ ಸಮುದಾಯಗಳ ಮಾನವ ಸಂಪತ್ತು ತಮ್ಮ ಸಾಂಸ್ಕೃತಿಕ ಹಿಡಿತಗಳನ್ನು ಸಡಿಲಗೊಳಿಸಿಕೊಳ್ಳುತ್ತಿವೆ. ಸಾಂಸ್ಕೃತಿಕ ಪ್ರಾದೇಶಿಕ ಅರಿವಿನ ಜೊತೆಯಲ್ಲೇ ಆರ್ಥಿಕ ರೂಪಾಂತರಗಳನ್ನು ನಿರ್ಮಿಸಿಕೊಳ್ಳುತ್ತಿವೆ. ಹೀಗಾಗಿಯೇ ದೇಶಿಕರ ಕುಶಲ ತಂತ್ರಜ್ಞಾನದ ಅರ್ಥಪೂರ್ಣ ಸಂವಾದ ಜಾಗತೀಕರಣದ ಜೊತೆ ಸಾಧ್ಯವಾಗಬೇಕಾಗಿದೆ.
ದೇಶೀಕರಣದಿಂದಲೇ ಪ್ರಾದೇಶಿಕ ಸಮಸ್ಯೆಗಳು ಬಗೆಹರಿಯಲಾರವು. ಹಾಗೆಯೇ ಸಂಪೂರ್ಣವಾಗಿ ಜಾಗತೀಕರಣದಿಂದಲೇ ತೃತೀಯ ಜಗತ್ತಿನ ಅಲಕ್ಷಿತ ಸಮುದಾಯಗಳು ಏಳಿಗೆಯನ್ನು ಪಡೆಯಲಾರವು. ದೇಶೀಕರಣಕ್ಕೆ ವೈಜ್ಞಾನೀಕರಣದ, ತಾಂತ್ರೀಕರಣದ, ಆಧುನೀಕರಣದ ಸ್ಪರ್ಶವಿಲ್ಲದಿದ್ದರೆ ಜಡವಾಗುತ್ತದೆ. ಇವೆರಡನ್ನೂ ಸಂಯೋಗಿಸುವ ಮಾನವೀಕರಣದ ಪ್ರಕ್ರಿಯೆ ಪ್ರಾದೇಶಿಕವಾಗಿಯೇ ಉಂಟಾದರೆ ನಮ್ಮ ಎಲ್ಲ ಸಮಸ್ಯೆಗಳಿಗೂ ಬೇರೊಂದು ಪರಿಹಾರ ಸಾಧ್ಯವಾಗುತ್ತದೆ. ಆಗಲೇ ಕಾಡಿನ ಸಂಸ್ಕೃತಿಯೂ, ನಾಡಿನ ಸಂಸ್ಕೃತಿಯೂ, ವಿಜ್ಞಾನವೂ ಒಂದಾಗಿ ತೃತೀಯ ಜಗತ್ತಿನ ಅಲಕ್ಷಿತ ಸಮುದಾಯಗಳು ಒಂದಾಗುವುದು. ಸಾಂಸ್ಕೃತಿಕ ಮಾನವೀಕರಣ ಎನ್ನುವುದು ಇದನ್ನೇ. ಆಧುನೀಕರಣದ ಪ್ರಭಾವ ಮಲೆಕುಡಿಯರ ಆರ್ಥಿಕತೆ ಮತ್ತು ತಾಂತ್ರಿಕತೆಯು ಬದಲಾಗಿರುವುದನ್ನು ಕಾಣಬಹುದು. ಹಿಂದಿನ ಕಾಲದ ಕೃಷಿ ಪದ್ಧತಿಗೆ ವಿದಾಯ ಹೇಳಿ, ಹೊಸ ಬಗೆಯ ತಂತ್ರಜ್ಞಾನಗಳನ್ನು ಬಳಸಿಕೊಂಡು ವಾಣಿಜ್ಯ ಬೆಳೆಗಳಿಗೆ ಒತ್ತು ನಿಡುತ್ತಾ ಬಂದಿರುವುದನ್ನು ಕಾಣಬಹುದು. ಮಲೆಕುಡಿಯರು ಕಾಡಿನ ಸಂಸ್ಕೃತಿಯನ್ನು ಬಿಟ್ಟು ನಗರ ಸಂಸ್ಕೃತಿಯನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿರುವುದು ಕಾಣಬಹುದು. ಅವರ ಹಳೆಯ ಕಾಲದ ಗುಡಿಸಲುಗಳ ಬದಲಾಗಿ ಹೊಸ ಹಂಚಿನ ಮನೆಗಳು ಕೆಲವೊಂದು ಆರ್.ಸಿ,ಸಿ ಮನೆಗಳನ್ನು ನಿರ್ಮಿಸಿರುವುದನ್ನು ಕಾಣಬಹುದು.

೭. ವೈಜ್ಞಾನಿಕ ರೂಪಾಂತರ :

ಹೊಸ ಯುಗದ ಸಮುದಾಯಗಳು ತಮ್ಮ ಸಂಸ್ಕೃತಿಯನ್ನು ತಂತ್ರಜ್ಞಾನ ಮತ್ತು ವಿಜ್ಞಾನದಿಂದ ರೂಪಿಸಿಕೊಂಡಿವೆ. ಭಾರತದಂತಹ ಜಾತಿ ಶ್ರೇಣಿಯ ವ್ಯವಸ್ಥೆಗೆ ವೈಜ್ಞಾನಿಕ ರೂಪಾಂತರವೆಂದರೆ ಅದೊಂದು ಅಪವಿತ್ರವೆಂದೇ ತಿಳಿಯುತ್ತದೆ. ಆದರೆ ಸವಲತ್ತುಗಳ ಸಂದರ್ಭದಲ್ಲಿ ಉನ್ನತ ಜಾತಿಗಳು ವಿಜ್ಞಾನವನ್ನು ತಮ್ಮ ಖಾಸಗೀ ವಲಯವನ್ನಾಗಿಸಿಕೊಳ್ಳುತ್ತವೆ. ಪಾಶ್ಚಾತ್ಯ ವಿಜ್ಞಾನದ ಪುರೋಹಿತರಂತೆ ನಮ್ಮ 'ವಿಜ್ಞಾನಿ'ಗಳು ಕಾಣಿಸುತ್ತಾರೆ. ವಿಜ್ಞಾನವನ್ನು ಬುಡಕಟ್ಟುಗಳಿಗೆ ಮುಟ್ಟಿಸಲು ಇನ್ನೂ ಸಾಧ್ಯವಾಗಿಲ್ಲ. ವಿಜ್ಞಾನದ ಉದ್ದೇಶವನ್ನು ಸಂಸ್ಕೃತಿಗಳು ಧ್ಯಾನಿಸದೇ ಹೋದರೆ, ಹಾಗೆಯೇ ವಿಜ್ಞಾನಿಗಳು ಸಂಸ್ಕೃತಿಯ ವಿವೇಕವನ್ನು ಮರೆತರೆ ತಾಂತ್ರೀಕೃತ ವೈಜ್ಞಾನಿಕ ಸಮಾಜವಾಗಿ ರೂಪುಗೊಳ್ಳಲು ನಮಗಿನ್ನೂ ಒಂದು ಶತಮಾನ ಸಾಲದೇ ಹೋಗುತ್ತದೆ. ಹೊಸ ಜಗತ್ತಿನ ಸಮುದಾಯಗಳೂ ಹಳೆಯ ಜಗತ್ತಿನ ಸಮುದಾಯಗಳೂ ಬೌದ್ಧಿಕವಾಗಿ ಒಂದಾಗುವ ಮೂಲಕ ಜಗತ್ತಿನ ಎಲ್ಲ ಸಂಸ್ಕೃತಿಗಳ ವಿರೂಪಗಳನ್ನೂ ಕಳಚಿಕೊಳ್ಳಲು ಸಾಧ್ಯ. ಪಾಶ್ಚಾತ್ಯ ಪೌರತ್ವ ಎಂಬ ವಿಂಗಡನೆಯಂತೆಯೇ ವಿಜ್ಞಾನವೂ, ಸಂಸ್ಕೃತಿಯೂ ಅಂತರಗೊಂಡಿವೆ. ಆಧುನಿಕೋತ್ತರ ಯುಗದ ಹೊಸ ಆವಿಷ್ಕಾರಗಳ ಅನುಭವಗಳಿಂದ ರೂಪಿತಗೊಂಡ ಗಣಕೀಕೃತ ತಲೆಮಾರುಗಳು ಈಗಾಗಲೇ ಜಗತ್ತಿನ ಉದ್ದಕ್ಕೂ ಕಾಣಿಸಿಕೊಳ್ಳುತ್ತಿವೆ.

ಬುಡಕಟ್ಟುಗಳಿಗೆ ವಿಜ್ಞಾನವನ್ನೂ, ಸಂಸ್ಕೃತಿಯನ್ನೂ ಬಹಳ ಸುಲಭವಾಗಿ ಬದುಕಿಗೆ ಅಳವಡಿಸಿಕೊಳ್ಳುವ ಗುಣವಿದೆ. ಹೀಗಾಗಿಯೇ ಅನೇಕ ಸಂದರ್ಭಗಳಲ್ಲಿ ಬುಡಕಟ್ಟುಗಳು ಇವೆರಡನ್ನೂ ದೊಡ್ಡ ವ್ಯತ್ಯಾಸಗಳಲ್ಲಿ ವಿಂಗಡಿಸುವುದೇ ಇಲ್ಲ. ವಿಜ್ಞಾನದಲ್ಲಿ ದೇವರನ್ನೂ, ಸಂಸ್ಕೃತಿಯಲ್ಲಿ ವಿಜ್ಞಾನವನ್ನೂ ಸಮೀಕರಿಸುವ ಜಾಣ್ಮೆಯನ್ನು ಬುಡಕಟ್ಟುಗಳು ತಮ್ಮ ಪರಂಪರೆಯ ಕಥನಗಳಲ್ಲಿ ಆಚರಣೆಗಳಲ್ಲಿ ಕಲೆಗಳಲ್ಲಿ ನಂಬಿಕೆಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಈ ಬಗೆಯ ಸಂಯೋಗ ಸಂವೇದನೆಯು ಆಧುನೀಕರಣವನ್ನು ಯಥಾರ್ಥವಾಗಿ ಅರಗಿಸಿಕೊಳ್ಳಬಲ್ಲುದನ್ನು ಸೂಚಿಸುತ್ತದೆ. ಇದರ ಸೂಕ್ಷ್ಮವನ್ನು ಅರಿಯದವರು ಅಲಕ್ಷಿತ ಸಮುದಾಯಗಳನ್ನು ಸಂಪ್ರದಾಯಗಳ ಗೊಡ್ಡು ಎಂದು ಕರೆದು ತಿರಸ್ಕರಿಸುತ್ತಾರೆ. ಅಂಥವರಿಗೆ ಗೊತ್ತಿಲ್ಲ, ಅಂತಹ ಅಲಕ್ಷಿತರ ಸಂಸ್ಕೃತಿಯ ಊಹಾತ್ಮಕ ಹಾಗೂ ಅನುಭವ ಕಥನಗಳನ್ನು ಪರೀಕ್ಷಿಸುವುದರಿಂದಲೇ ವಿಜ್ಞಾನ ಬೆಳೆದಿದೆ ಎಂಬುದು. ಹೀಗಾಗಿಯೇ ನಿನ್ನೆಯ ಸಂಸ್ಕೃತಿ ಇವತ್ತಿನ ವಿಜ್ಞಾನ ಬೆಳೆದಿದೆ ಎಂಬುದು. ಹೀಗಾಗಿಯೇ ನಿನ್ನೆಯ ಸಂಸ್ಕೃತಿ ಇವತ್ತಿನ ವಿಜ್ಞಾನ. ಹಾಗೆಯೇ ಇವತ್ತಿನ ವಿಜ್ಞಾನವೇ ನಾಳೆಯ ಸಂಸ್ಕೃತಿ. ಇವೆರಡೂ ಪ್ರಕ್ರಿಯೆಗಳ ಅಲೆಗಳಲ್ಲಿ ಪ್ರಗತಿಯನ್ನು ವಿಶ್ವದ ಮಾನವೀಕರಣದ ಏಕೀಕರಣವನ್ನು ಎಚ್ಚರದಿಂದ ಕಟ್ಟಿಕೊಳ್ಳಬೇಕಾಗಿರುತ್ತದೆ. ಆ ಮಟ್ಟಿಗೆ ಅಲಕ್ಷಿತ ಜಗತ್ತಿನ ಮಾನವ ಸಂಪತ್ತನ್ನು ಸಂಸ್ಕೃತಿ ಮತ್ತು ವಿಜ್ಞಾನದ ಎರಡೂ ಕ್ರಮಗಳಿಗೆ ಅಳವಡಿಸಿ ಅಭಿವೃದ್ಧಿಯ ಕಥನಗಳನ್ನು

ಪುನರ್ ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಜಾಗತೀಕರಣದ ಒಳಗೆ ವಿಜ್ಞಾನ ಮತ್ತು ಸಂಸ್ಕೃತಿ ಎರಡೂ ಬೆರೆತಿರುತ್ತವೆ. ಬುಡಕಟ್ಟುಗಳಿಗೆ ಇಂತಹ ಒಂದು ಕಾಲಘಟ್ಟದ ಪಲ್ಲಟದ ಕ್ರಿಯೆಯ ಮುಖಾಮುಖಿ ಬಹಳ ಮಹತ್ವದ್ದಾಗಿರುತ್ತದೆ. ಈ ನಿಟ್ಟಿನಲ್ಲಿ ಡಾ। ಮೊಗಳ್ಳಿಗಣೇಶ್ ರವರ ದಲಿತರು ಮತ್ತು ಜಾಗತಿಕರಣ ಎಂಬ ಲೇಖನ ಮೌಲ್ಯಯುತ್ತವಾದುದು. ಈ ಬಗೆಯ ರೂಪಾಂತರವನ್ನು ನಾವು ಮಲೆಕುಡಿಯ ಬದುಕಿನಲ್ಲಿಯೂ ಕಾಣಬಹುದು. ಉದಾಹರಣೆಗೆ ಮಲೆಕುಡಿಯರು ಹಿಂದಿನ ಕಾಲದಲ್ಲಿ ತಮ್ಮ ಸುತ್ತಮುತ್ತಲಿನ ಮಲೆಗಳಲ್ಲಿ ದೊರೆಯುವ ನಾರು ಬೇರು ಚಿಗುರು ಸಿಪ್ಪೆಗಳನ್ನು ಬಳಸಿ ಮದ್ದು ತಯಾರಿಸುತ್ತಿದ್ದ ಮಲೆಕುಡಿಯರು ವರ್ತಮಾನದಲ್ಲಿ ಆಸ್ಪತ್ರೆಯ ಮದ್ದನ್ನು ಸೇವಿಸುತ್ತಾರೆ. ಸರಕಾರದ ಸಾರ್ವಜನಿಕ ಕಾಮಗಾರಿ ಇಲಾಖೆ, ತಾಲೂಕು ಅಭಿವೃದ್ದಿ ಮಂಡಳಿ ಮತ್ತು ಸರಕಾರಿ ಹಾಗೂ ಖಾಸಗಿ ಸಂಘ ಸಂಸ್ಥೆಗಳ ಪ್ರಯತ್ನಗಳಿಂದ ಮಲೆಕುಡಿಯರ ಬದುಕಿನಲ್ಲಿ ಅನೇಕ ಬದಲಾವಣೆಗಳಾಗಿವೆ. ಕೊಲೊನಿಗಳಲ್ಲಿ ಕೊಳವೆ ಬಾವಿಗಳನ್ನು ಕೊರೆದಿರುವುದರಿಂದ ಈಗ ಮಲೆಕುಡಿಯರು ಹೊಳೆ, ಬಾವಿಗಳ ನೀರು ಬಳಸುವುದಿಲ್ಲ. ಶಾಲೆ, ಅಸ್ಪತ್ರೆ ಅಂಗಡಿ, ಅಂಚೆಕಛೇರಿಗಳ ಸವಲತ್ತುಗಳನ್ನು ಬಳಸಿಕೊಳ್ಳುತ್ತಿದ್ದರೆ. ಸರಕಾರ ಕೊಡಮಾಡುವ ರಿಯಾಯಿತಿಗಳು ಸಾಲದ ಯೋಜನೆಗಳು ಉಚಿತವಾಗಿ ನೀಡುವ ಕೃಷಿ ಉಪಕರಣಗಳಿಂದಾಗಿ ಭೂ ಅಭಿವೃದ್ದಿಗೆ ಒತ್ತು ನೀಡುತ್ತಿದ್ದಾರೆ. ಸರಕಾರಿ ಹಾಗೂ ಖಾಸಗಿ ಸಂಘ ಸಂಸ್ಥೆಗಳ ಸದಸ್ಯರಾಗುವ ಮೂಲಕ ಮಲೆಕುಡಿಯರು ಸಾರ್ವಜನಿಕ ರಂಗಗಳಲ್ಲಿ ಕಾಣಿಸಿಕೊಳ್ಳತ್ತಿದ್ದಾರೆ.

ಒಟ್ಟಿನಲ್ಲಿ ಪರಿವರ್ತನೆಯ ಕಾಲಸ್ಥಿತಿಯಲಿ ಹಳೆಯ ಮತ್ತು ಹೊಸ ಸಂಸ್ಕೃತಿಗಳ ಅಂತರ ಮಲೆಕುಡಿಯರ ಜನಾಂಗದಲ್ಲಿಯೂ ನಡೆಯುತ್ತಿದೆ. ಇದನ್ನು ಅನಿವಾರ್ಯವಾಗಿ ಸ್ವೀಕರಿಸಬೇಕಾಗಿದೆ.

೫. ೩. ಬುಡಕಟ್ಟುಗಳ ಅಭಿವೃದ್ಧಿಗೆ ಪಂಚವಾರ್ಷಿಕ ಯೋಜನೆಗಳು :

ಬುಡಕಟ್ಟು ಸಮುದಾಯಕ್ಕೆ ಸೇರಿರುವ ಜನಾಂಗಗಳಲ್ಲಿ ಮಲೆಕುಡಿಯ ಜನಾಂಗವೂ ಒಂದು. ಜಾಗತೀಕರಣದ ಪ್ರವಾಹದಲ್ಲಿ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಅನನ್ಯತೆ ಅಳಿಸಿ ಹೋಗಬಾರದು ಎಂಬುದು ಎಷ್ಟು ಮುಖ್ಯವೋ, ಅವುಗಳು ರಾಷ್ಟ್ರ ಪ್ರಭುತ್ವವನ್ನು ಒಪ್ಪಿಕೊಂಡು ಜನತಾಂತ್ರಿಕ ಬಹುಸಂಸ್ಕೃತಿ ವ್ಯವಸ್ಥೆಯಲ್ಲಿ ಬದುಕನ್ನು ರೂಪಿಸಿಕೊಳ್ಳಬೇಕಾದುದು ಅಷ್ಟೇ ಮುಖ್ಯವಾದುದಾಗಿದೆ. ಬುಡಕಟ್ಟುಗಳು ರಾಷ್ಟ್ರೀಯ ಪ್ರವಾಹದಲ್ಲಿ ಮುಳುಗಿ ಹೋಗಬೇಕು ಎಂಬುದೇ ಅಭಿವೃದ್ಧಿಯಲ್ಲ. ಅವುಗಳ ಅನನ್ಯತೆಯ ಒಡಲಲ್ಲೇ ಅವರ ಬದುಕು ಉತ್ತಮವಾಗುವಂತೆ ಮಾಡುವುದೇ ಅಭಿವೃದ್ಧಿ. ಬುಡಕಟ್ಟುಗಳ ಅನನ್ಯತೆಯನ್ನು ಜನತಂತ್ರದ ಪ್ರಕ್ರಿಯೆಗೆ ಮತ್ತು ಜನತಂತ್ರವನ್ನು ಸಾಂಸ್ಕೃತಿಕ ಪ್ರಕ್ರಿಯೆಗೆ ಒಳಪಡಿಸುವ ಅಗತ್ಯವಿದೆ. ಜನ ತಂತ್ರವಿಲ್ಲದೆ ಬಹು ಸಂಸ್ಕೃತಿವಾದ ಉಳಿಯುವುದು ಸಾಧ್ಯವಿಲ್ಲ. ಬಹುಸಂಸ್ಕೃತಿಯಲ್ಲದೆ ಬುಡಕಟ್ಟುಗಳ ಅನನ್ಯತೆಯನ್ನು ಜನತಂತ್ರ ಒಪ್ಪಿಕೊಳ್ಳಬೇಕು. ಅಭಿವೃದ್ಧಿ ಮೀಮಾಂಸೆಯು ಜನತಂತ್ರ ಹಾಗೂ ಸಂಸ್ಕೃತೀಕರಣ ಪ್ರಕ್ರಿಯೆಗೆ ಒಳಗಾಗಬೇಕಾಗಿದೆ.

ಪಂಚವಾರ್ಷಿಕ ಯೋಜನೆಗಳ ಮೂಲಕ ದೊಡ್ಡ ದೊಡ್ಡ ಅಣೆಕಟ್ಟುಗಳ ನಿರ್ಮಾಣ, ವಿದೇಶಿ ಸ್ವರೂಪದ ರಸ್ತೆಗಳ ನಿರ್ಮಾಣ, ನಮ್ಮ ಅಭಿವೃದ್ಧಿಯ ದ್ಯೋತಕಗಳಾಗಿ ಇಂದು ಕಾಣುತ್ತಿವೆ.

ಭಾರತದಲ್ಲಿ ಬಹಳಷ್ಟು ಬುಡಕಟ್ಟು ಜನರು ಗಿರಿಗಳಲ್ಲಿರುವರು. ಇವರು ಗಿರಿ ಮೂಲದ ಸಹಜ ಜೀವನ ನಡೆಸುವವರಾಗಿದ್ದವರು. ಹೀಗಾಗಿ ಗಿರಿಜನರೆಂದು ಕರೆಯಲಾಗುವುದು. ಆದರೆ ಕಾರಣಾಂತರಗಳಿಂದಾಗಿ ಹಲವು ಬುಡಕಟ್ಟು ಜನರನ್ನು ಕಾಡಿನಿಂದ ನಾಡಿಗೆ ಅಟ್ಟಲಾಗುತ್ತಿದೆ. ಈ ಕಾರಣದಿಂದ ಬುಡಕಟ್ಟುಗಳು ಹಲವಾರು ಸಮಸ್ಯೆಗಳನ್ನು ಅನುಭವಿಸುತ್ತಿವೆ. ಇದನ್ನು ಮನಗಂಡ ಭಾರತ ಸರ್ಕಾರವು ಪರಿಶಿಷ್ಟ ಜಾತಿ ಜನರ ಅಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆಯನ್ನು ಪ್ರಾರಂಭಿಸುವ ರೀತಿಯಲ್ಲಿಯೇ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಗಿರಿಜನ ಉಪಯೋಜನೆಯೊಂದನ್ನು ೧೯೭೪-೭೫ರಲ್ಲಿ ಹುಟ್ಟು ಹಾಕಿತು.

ಭಾರತ ಸಂವಿಧಾನದ ಅನುಚ್ಛೇದ ೨೭೫(೧) ರ ಪ್ರಕಾರ ದೇಶದ ೨೧ ರಾಜ್ಯಗಳಲ್ಲಿ ಹಾಗೂ ೪ ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ಗಿರಿಜನ ಉಪಯೋಜನೆಯ ಕಾರ್ಯಕ್ರಮಗಳಿಗೆ ಭಾರತ ಸರ್ಕಾರವು ಅನುದಾನವನ್ನು ಬಿಡುಗಡೆ ಮಾಡುತ್ತಿದೆ. ಈ ಅನುದಾನವನ್ನು ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದಿಂದ ಅನುಮೋದಿತವಾದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಉಪಯೋಗಿಸಲಾಗುತ್ತಿದೆ. ಈ ಅನುದಾನದಲ್ಲಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಬೇಕಾಗಿರುವ ಮೂಲಭೂತ ಸೌಕರ್ಯಗಳಾದ ರಸ್ತೆ ಮತ್ತು ಸೇತುವೆ, ಸೌರಶಕ್ತಿಯ ವಿದ್ಯುದ್ಧೀಕರಣ, ಶಾಲೆಗಳ ನಿರ್ಮಾಣ, ವಸತಿ ನಿಲಯಗಳ ನಿರ್ಮಾಣ, ನೀರಾವರಿ ಸೌಲಭ್ಯ, ಇತ್ಯಾದಿ ಯೋಜನೆಗಳನ್ನು ಕೈಗೊಳ್ಳಬಹುದಾಗಿದೆ. ಈ ಉದ್ದೇಶಕ್ಕಾಗಿ ೨೦೦೨-೦೩ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ರೂ. ೨೮೦ ಕೋಟಿ ಬಿಡುಗಡೆ ಮಾಡಿರುತ್ತದೆ.

ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿಗಾಗಿ ಗಿರಿಜನ ಉಪಯೋಜನೆಯ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಸುಮಾರು ೨೮ ಅಭಿವೃದ್ಧಿ ಇಲಾಖೆ, ನಿಗಮ, ಮಂಡಳಿಗಳು ತಮ್ಮ ಯೋಜನಾ ಆಯವ್ಯಯದಲ್ಲಿ ಶೇ.೩ನ್ನು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಮೀಸಲಾಗಿಟ್ಟು ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗೆ ಹಲವಾರು ಆರ್ಥಿಕ ಸವಲತ್ತುಗಳ ಜೊತೆಗೆ ಶೈಕ್ಷಣಿಕ ಮತ್ತು ಸಾಮಾಜಿಕ ಸೌಲಭ್ಯಗಳನ್ನು ಒದಗಿಸುತ್ತಿವೆ. ಅಲ್ಲದೆ ಕುಡಿಯುವ ನೀರಿನ ಪೂರೈಕೆ, ವಿದ್ಯುದ್ದೀಕರಣ, ವೈದ್ಯಕೀಯ ಸೌಲಭ್ಯ, ವಸತಿ, ಸಂಪರ್ಕ ರಸ್ತೆ ಮುಂತಾದ ಮೂಲಭೂತ ಸೌಕರ್ಯಗಳಿಗೆ ಆದ್ಯತೆ ನೀಡಲಾಗುತ್ತಿದೆ. ಬುಡಕಟ್ಟು ಪರ ಯೋಜನೆಗಳನ್ನು ನೇರವಾಗಿ ಫಲಾನುಭವಿಗಳಿಗೆ ಮುಟ್ಟಲು ಹಾಗೂ ಅನಾವಶ್ಯಕ ವಿಳಂಬವನ್ನು ತಪ್ಪಿಸಲು ಮತ್ತು ಪರಿಣಾಮಕಾರಿಯಾಗಿ ಯೋಜನೆಗಳನ್ನು ಪರಿವೀಕ್ಷಿಸಲು ಅನುಕೂಲವಾಗುವಂತೆ ಜಿಲ್ಲಾ ಪಂಚಾಯತು, ತಾಲೂಕು ಪಂಚಾಯತುಗಳ ಮೂಲಕ ಕೇಂದ್ರ ಪುರಸ್ಕೃತ ಯೋಜನೆಗಳೆಂದು ವಿಭಜಿಸಿ ಅನುಷ್ಠಾನಗೊಳಿಸಲಾಗುತ್ತಿವೆ. ಈ ಯೋಜನೆಗಳನ್ನು ಸಮರ್ಪಕವಾಗಿ

ಅನುಷ್ಠಾನಗೊಳಿಸಲು, ಇದರ ಮೇಲುಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೋಸ್ಕರ ೦೭-೦೧-೧೯೯೮ರಿಂದ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯವನ್ನು ಪ್ರಾರಂಭಿಸಲಾಗಿದೆ.

ಗಿರಿಜನ ಉಪಯೋಜನೆಯ ವಿವರ ಈ ಕೆಳಗಿನಂತಿದೆ.

ಸಂವಿಧಾನ ಅನುಚ್ಛೇದ ೩೭೭ರಲ್ಲಿ ಪರಿಶಿಷ್ಟ ವರ್ಗದ ವಿವರಣೆಯನ್ನು ನೀಡಲಾಗಿದೆ. ಈ ಅನುಚ್ಛೇದದ ವ್ಯಾಪ್ತಿಯಲ್ಲಿ ಭಾರತ ಸರ್ಕಾರವು ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಒಟ್ಟು ೫೦ ಗುಂಪಿನ ಜಾತಿಗಳನ್ನು ಪರಿಶಿಷ್ಟ ವರ್ಗವೆಂದು ಘೋಷಿಸಿದೆ. ಈ ೫೦ ಬುಡಕಟ್ಟು ಸಮುದಾಯ ಗುಂಪುಗಳಲ್ಲಿ ಜೇನುಕುರುಬ ಹಾಗೂ ಕೊರಗ ಜಾತಿಗಳನ್ನು ಮೂಲನಿವಾಸಿ ಬುಡಕಟ್ಟು ಗುಂಪು ಎಂದು ಪರಿಗಣಿಸಿದೆ. ಕರ್ನಾಟಕ ರಾಜ್ಯದಲ್ಲಿ ೨೦೦೧ರ ಜನಗಣತಿ ಪ್ರಕಾರ ಪರಿಶಿಷ್ಟವರ್ಗದವರ ಒಟ್ಟು ಜನಸಂಖ್ಯೆ ೩೪,೬೩,೯೮೬ ಇದ್ದು ರಾಜ್ಯದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇಕಡಾ ೬.೫೫ರಷ್ಟು ಇರುತ್ತದೆ. ಈ ಜನಸಂಖ್ಯೆಯು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಂಡುಬರುತ್ತದೆ.

ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಈ ಪರಿಶಿಷ್ಟ ವರ್ಗದ ಸಮುದಾಯಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿವೆ. ಈ ಕಾರ್ಯಕ್ರಮಗಳ ಅನುಷ್ಠಾನ, ಉಸ್ತುವಾರಿ ನೋಡಿಕೊಳ್ಳಲು ಕರ್ನಾಟಕ ಸರ್ಕಾರವು ಸಮಾಜ ಕಲ್ಯಾಣ ಇಲಾಖೆಯಡಿ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯವನ್ನು ೧೯೯೮ರಲ್ಲಿ ಪ್ರತ್ಯೇಕವಾಗಿ ಪ್ರಾರಂಭಿಸಿ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕೆ ಎಡೆ ಮಾಡಿಕೊಟ್ಟಿದೆ. ಪರಿಶಿಷ್ಟ ವರ್ಗದವರಿಗೆ ಇರುವ ಕಾರ್ಯಕ್ರಮದ ಸಂಕ್ಷಿಪ್ತ ವಿವರಗಳ ಮಾಹಿತಿಯನ್ನು ಇಲ್ಲಿ ಒದಗಿಸಲಾಗಿದೆ.

೨೦೦೧ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಒಟ್ಟು ೩೪.೬೭ ಲಕ್ಷ ಪರಿಶಿಷ್ಟ ವರ್ಗಗಳ ಜನಸಂಖ್ಯೆ ಇದ್ದು, ಇದು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡಾ ೬.೫೫ ರಷ್ಟು ಇರುತ್ತದೆ. ೧೯೭೧ರ ಜನಗಣತಿಯ ಪ್ರಕಾರ ಮೂಲನಿವಾಸಿ ಪಂಗಡಗಳು ಹೆಚ್ಚಾಗಿದ್ದ ಮೈಸೂರು, ಕೊಡಗು, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ (ಇತ್ತೀಚೆಗೆ ಜಿಲ್ಲಾ ವಿಂಗಡಣೆಯಿಂದಾಗಿ ಚಾಮರಾಜನಗರ ಮತ್ತು ಉಡುಪಿ ಜಿಲ್ಲೆಗಳು ಹೊಸದಾಗಿ ಅಸ್ತಿತ್ವಕ್ಕೆ ಬಂದಿವೆ) ೫ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಘಟಕಗಳನ್ನು ಸ್ಥಾಪಿಸಿ ಅವುಗಳ ಉಸ್ತುವಾರಿಗೆ ೫ ಒಂದನೇ ವರ್ಗಕ್ಕೆ ಸೇರಿದ (ಕಿರಿಯ ಶ್ರೇಣಿಯ) ಯೋಜನಾ ಸಮನ್ವಯಾಧಿಕಾರಿಗಳಿದ್ದು ಇವರುಗಳು ಜಿಲ್ಲಾ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ೨೦೦೧-೦೨ನೇ ಸಾಲಿನಲ್ಲಿ ಹೊಸದಾಗಿ ಚಾಮರಾಜ ನಗರ, ಚಿತ್ರದುರ್ಗ, ಬೆಳಗಾಂ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕಛೇರಿಯನ್ನು ಸ್ಥಾಪಿಸಲಾಗಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಪರಿಶಿಷ್ಟ ವರ್ಗದವರು ವಾಸಿಸುತ್ತಿರುವುದರಿಂದ ಗಿರಿಜನ ಉಪಯೋಜನೆಯನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಅನುಷ್ಠಾನಗೊಳಿಸುವಂತೆ ೧೯೯೩ ರಲ್ಲಿ ಸರ್ಕಾರವು ನಿರ್ದೇಶನಗಳನ್ನು ನೀಡಿರುತ್ತದೆ. ೧೯೯೪-೯೫ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪರಿಶಿಷ್ಟ ವರ್ಗದವರ ಕಲ್ಯಾಣಕ್ಕಾಗಿ ಪ್ರತ್ಯೇಕ ನಿರ್ದೇಶನಾಲಯವನ್ನು ಸ್ಥಾಪಿಸುವುದಾಗಿ ಭರವಸೆ ನೀಡಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ : ಸಕೈ: ೨೩೬ : ಎಸಿಟಿ: ೯೩ ದಿನಾಂಕ : ३೦.೦೮.೧೯೯೪ರ ಪ್ರಕಾರ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯವನ್ನು ಸ್ಥಾಪಿಸಲಾಯಿತು.

ನಿರ್ದೇಶನಾಲಯವನ್ನು ದಿನಾಂಕ: ೦೭.೦೧.೧೯೯೯ ರಂದು ದಾವಣಗೆರೆಯಲ್ಲಿ ಪ್ರಾರಂಭಿಸಲಾಯಿತು. ತದನಂತರ ಆಡಳಿತಾತ್ಮಕ ಕಾರಣಗಳಿಂದಾಗಿ ಈ ನಿರ್ದೇಶನಾಲಯವನ್ನು ದಾವಣಗೆರೆಯಿಂದ ಬೆಂಗಳೂರಿಗೆ ಸ್ಥಳಾಂತರಿಸುವುದು ಸೂಕ್ತವೆಂದು ಮನಗಂಡು ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ಕೇಂದ್ರ ಸ್ಥಾನವನ್ನು ಬೆಂಗಳೂರಿಗೆ ಸ್ಥಳಾಂತರಿಸಲು ಆದೇಶ ಸಂಖ್ಯೆ : ಸಕೈ: ३೯೪: ಪಕಸೇ: ೯೯, ದಿನಾಂಕ: ೨೩.೧೧.೧೯೯೯ರಲ್ಲಿ ಅನುಮತಿ ನೀಡಿ ಆದೇಶ ಹೊರಡಿಸಿರುತ್ತದೆ. ಅದರಂತೆ, ದಿನಾಂಕ: ೨೯.೦೨.೨೦೦೦ ದಿಂದ ಈ ಕಛೇರಿಯು ೨ನೇ ಮಹಡಿ, ಕೃಷಿ ಭವನ, ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಆಡಳಿತ ವ್ಯವಸ್ಥೆ ಜಿಲ್ಲಾ ಮಟ್ಟದಲ್ಲಿ:

ಮೈಸೂರು, ಚಾಮರಾಜನಗರ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಪರಿಶಿಷ್ಟ ವರ್ಗದ ಅಭಿವೃದ್ಧಿ ಕಾರ್ಯಕ್ರಮಗಳ ಉಸ್ತುವಾರಿಗೆ ಜಿಲ್ಲಾ ಮಟ್ಟದಲ್ಲಿ ಯೋಜನಾ ಸಮನ್ವಯಾಧಿಕಾರಿಗಳು ಮುಖ್ಯಸ್ಥರಾಗಿರುತ್ತಾರೆ. ಇತರ ಜಿಲ್ಲೆಗಳಲ್ಲಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳೇ ಪರಿಶಿಷ್ಟ ವರ್ಗದ ಅಭಿವೃದ್ಧಿ ಕಾರ್ಯಕ್ರಮಗಳ ಉಸ್ತುವಾರಿಯನ್ನು ನಿರ್ವಹಿಸುತ್ತಿದ್ದಾರೆ. ೨೦೦೨-೦३ನೇ ಸಾಲಿನಲ್ಲಿ ನೂತನವಾಗಿ ಚಾಮರಾಜನಗರ, ಚಿತ್ರದುರ್ಗ, ಬೆಳಗಾಂ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಗಳನ್ನು ಪ್ರಾರಂಭಿಸಲಾಗಿದೆ. ತಾಲ್ಲೂಕು ಮಟ್ಟದಲ್ಲಿ ಸಮಾಜ ಕಲ್ಯಾಣಾಧಿಕಾರಿಗಳು ಇತರ ಸಿಬ್ಬಂದಿಯೊಂದಿಗೆ ಇಲಾಖೆಯ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದ್ದಾರೆ.

ಸಾಕ್ಷರತಾ ಮಟ್ಟ:

೨೦೦೧ರ ಜನಗಣತಿಯ ಪ್ರಕಾರ ಸಾಮಾನ್ಯ ಸಾಕ್ಷರತಾ ಮಟ್ಟ ಶೇಕಡಾ ೬೭% ಆಗಿರುತ್ತದೆ. ಇದರಲ್ಲಿ ಪರಿಶಿಷ್ಟ ಪಂಗಡದವರ ಸಾಕ್ಷರತಾ ಮಟ್ಟ ಶೇಕಡಾ ೪೮.३ರಷ್ಟು ಇದ್ದು ಶೇಕಡಾ ೫೯.೭ ಪುರುಷರು ಮತ್ತು ಶೇಕಡಾ ३೬.೬ ಮಹಿಳೆಯರದಾಗಿರುತ್ತದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ –ಸಾಮಾನ್ಯ ಮಾಹಿತಿ

೧.	ಕರ್ನಾಟಕ ರಾಜ್ಯದ ಒಟ್ಟು ವಿಸ್ತೀರ್ಣ	೧,೯೧,೭೪೩ ಚದರ ಕಿ.ಮೀ
೨	ಕರ್ನಾಟಕ ರಾಜ್ಯದ ಅರಣ್ಯ ಪ್ರದೇಶ	೩೮,೨೮೪ ಚದರ ಕಿ.ಮೀ
೩	ಒಟ್ಟು ಜಿಲ್ಲೆಗಳು	೨೭
೪	ಕರ್ನಾಟಕ ರಾಜ್ಯದ ಒಟ್ಟು ಜನ ಸಂಖ್ಯೆ (೨೦೦೧ನೇ ಸಾಲಿನ ಜನಗಣತಿ)	೫,೨೮,೫೦,೫೬೨
೫	ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಗೆ ಪರಿಶಿಷ್ಟ ವರ್ಗದ ಜನಸಂಖ್ಯೆ (೨೦೦೧ನೇ ಸಾಲಿನ ಜನಗಣತಿ)	೩೪,೬೩,೯೮೬
೬	ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಗೆ ಪರಿಶಿಷ್ಟ ವರ್ಗದ ಜನಸಂಖ್ಯೆಯ ಶೇಕಡಾವಾರು	೬.೫೫%
೭	ಸಾಮಾನ್ಯ ಸಾಕ್ಷರತೆ (೨೦೦೧ನೇ ಸಾಲಿನ ಜನಗಣತಿ)	೬೭%
೮	ಪರಿಶಿಷ್ಟ ವರ್ಗದ ಸಾಕ್ಷರತೆ (೧೯೯೧ ನೇ ಸಾಲಿನ ಜನಗಣತಿ)	೪೮.೩%
೯	ಕರ್ನಾಟಕ ರಾಜ್ಯದ ಪರಿಶಿಷ್ಟ ವರ್ಗದ ಜನಸಂಖ್ಯೆ ಹಂಚಿಕೆ	ಕರ್ನಾಟಕ ರಾಜ್ಯದ ೨೭ ಜಿಲ್ಲೆಗಳಲ್ಲಿಯೂ ಪರಿಶಿಷ್ಟ ವರ್ಗದ ಜನಸಂಖ್ಯೆಯು ಇರುತ್ತದೆ.
೧೦	ಒಟ್ಟು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಜಿಲ್ಲೆಗಳು	೫, ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು

೨೦೦೮ – ೨೦೦೯ರ ಸಾಲಿನ ಜಿಲ್ಲಾ ಯೋಜನೆ ದ. ಕ. ಜಿಲ್ಲಾ ಪಂಚಾಯತ್

ಯೋಜನೆಗಳ ವಿವರ	ಸರಕಾರದಿಂದ ಬಿಡುಗಡೆಯಾದ ಹಣ	ಮಾರ್ಚ್ ೨೦೦೮ರವರೆಗಿನ ವೆಚ್ಚ	ಶೇಕಡಾ
೧. ಗಿರಿಜನ ಉಪಯೋಜನೆ	೬೨.೨೭೦ ಲಕ್ಷ	೬೦.೫೯೬ ಲಕ್ಷ	೯೭%
೨.ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ	೧೪೬.೧೧೦ ಲಕ್ಷ	೧೧೨.೬೨೦ ಲಕ್ಷ	೭೭%
೩. ಸಮಾಜ ಕಲ್ಯಾಣ	೨೫೮.೩೩೦ ಲಕ್ಷ	೨೪೮.೯೧೧ ಲಕ್ಷ	೯೬%

ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಬಿಡುಗಡೆಯಾದ ಗಿರಿಜನ ಯೋಜನೆಯ ಹಣವನ್ನು ಪ್ರತಿ ವರ್ಷ ಒಂದು ತಾಲೂಕಿನಿಂದ ೨ ಗ್ರಾಮಗಳನ್ನು ಆಯ್ಕೆ ಮಾಡುತ್ತಾರೆ. ಉದಾಹರಣೆ ಬೆಳ್ತಂಗಡಿ ತಾಲೂಕಿನಲ್ಲಿ ೨೦೦೬–೦೭ ಮತ್ತು ೨೦೦೭–೦೮ ರಲ್ಲಿ ಫಲಾನುಭವಿಗಳಿಗೆ ನೀಡಿದ ವಿವರ ಈ ಕೆಳಗಿನಂತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ತಾಲೂಕಿನ ಫಲಾನುಭವಿ ಮಲೆಕುಡಿಯರ ಕುಟುಂಬಗಳ ಸಂಖ್ಯೆ :

ವರ್ಷ	ಪಂಪ್‌ಸೆಟ್	ಸ್ಪ್ರಿಂಕ್ಲರ್ ಸೆಟ್	ಪವರ್ ಟಿಲ್ಲರ್	ಹೈನುಗಾರಿಕೆ	ಕಿಂಡಿ ಅಣೆ ಕಟ್ಟು
೧. ಶಿಶಿಲ ಗ್ರಾಮ					
೨೦೦೬–೦೭	೦೬	೧೦	೦೧ (ಚಾಮುಂಡೇಶ್ವರಿ ಸ್ವಸಹಾಯ ಸಂಘ)	–	–
೨. ಹೊಸಂಗಡಿ ಗ್ರಾಮ					
೨೦೦೬–೦೭	೦೨	೦೬	–	೨	–
೩. ಧರ್ಮಸ್ಥಳ ಗ್ರಾಮ (ಮುಳಿಕ್ಕಾರು)					
೨೦೦೭–೦೮	೦೮	೧೦	–	೪	–
೪. ಬೆಳಾಲು ಗ್ರಾಮ					
೨೦೦೭–೦೮	೦೨	೦೪	–	೦೪	–
೫. ಚಾರ್ಮಾಡಿ ಗ್ರಾಮ					
೨೦೦೭–೦೮	–	–	–	೦೩	೦೧ (ಅನ್ನಾರು)
ಬಂಟ್ವಾಳ ತಾಲೂಕಿನ ಫಲಾನುಭವಿಗಳ ಮಲೆಕುಡಿಯರ ಕುಟುಂಬಗಳ ಸಂಖ್ಯೆ :					
೨೦೦೬–೦೭	೦೪	೦೫	–	೦೨	–
೨೦೦೭–೦೮	೦೩	೦೨	–	–	–

ಸುಳ್ಯ ತಾಲೂಕಿನ ಫಲಾನುಭವಿಗಳ ಮಲೆಕುಡಿಯರ ಕುಟುಂಬಗಳ ಸಂಖ್ಯೆ :					
೨೦೦೬–೦೭	೧೦	೧೪	೦೧	೦೫	–
೨೦೦೭–೦೮	೧೨	೧೩	–	೦೬	–

೨೦೦೧ನೇ ಸಾಲಿನ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪರಿಶಿಷ್ಟ ವರ್ಗದವರ ಜನಸಂಖ್ಯೆ ವಿವರ

ಕ್ರ. ಸಂ	ಜಿಲ್ಲೆಯ ಹೆಸರು	ಒಟ್ಟು ಜನಸಂಖ್ಯೆ					
		ಗ್ರಾಮಾಂತರ			ಪಟ್ಟಣ		
		ಗಂಡಸರು	ಹೆಂಗಸರು	ಒಟ್ಟು	ಗಂಡಸರು	ಹೆಂಗಸರು	ಒಟ್ಟು
೧	ದಕ್ಷಿಣ ಕನ್ನಡ	೫೭೪೬೫೭	೫೯೩೭೭೧	೧೧೬೮೪೨೮	೩೬೩೭೭೭	೩೬೫೫೨೫	೭೨೯೩೦೨

ಪರಿಶಿಷ್ಟ ವರ್ಗದವರ ಜನಸಂಖ್ಯೆ					
ಗ್ರಾಮಾಂತರ			ಪಟ್ಟಣ		
ಗಂಡಸರು	ಹೆಂಗಸರು	ಒಟ್ಟು	ಗಂಡಸರು	ಹೆಂಗಸರು	ಒಟ್ಟು
೨೭೧೭೧	೨೭೨೬೯	೫೪೪೪೦	೪೪೦೮	೪೦೮೮	೮೪೯೬

ಕರ್ನಾಟಕ ರಾಜ್ಯದಲ್ಲಿ ಸಾಕ್ಷರತೆಯ ಶೇಕಡಾವಾರು ಪ್ರಮಾಣ

೧೯೯೧ರ ಜನಗಣತಿ ಪ್ರಕಾರ	ಸಾಮಾನ್ಯ	೬೭.೨೪
	ಪರಿಶಿಷ್ಟ ವರ್ಗ	೩೬.೦೧
	ಪುರುಷರು	೩೮.೯೩
	ಮಹಿಳೆಯರು	೧೯.೧೦

೨೦೦೧ರ ಜನಗಣತಿ ಪ್ರಕಾರ	ಸಾಮಾನ್ಯ	೬೭
	ಪರಿಶಿಷ್ಟ ವರ್ಗ	೪೮.೦೩
	ಪುರುಷರು	೫೯.೭
	ಮಹಿಳೆಯರು	೩೬.೬

೨೦೦೧ರ ಜನಗಣತಿಯ ಪ್ರಕಾರ ದ. ಕ. ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗಗಳ ಜನಸಂಖ್ಯೆ ಮತ್ತು ಸಾಕ್ಷರತಾ ಪ್ರಮಾಣದ ಜಿಲ್ಲಾವಾರು ವಿವರ:

ಕ್ರ. ಸಂ	ಜಿಲ್ಲೆ	ಒಟ್ಟು ಜನಸಂಖ್ಯೆ			ಪರಿಶಿಷ್ಟ ವರ್ಗದ ಜನಸಂಖ್ಯೆ	ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ವರ್ಗದವರ ಶೇಕಡಾವಾರು ಪ್ರಮಾಣ	ಶೇಕಡಾವಾರು ಸಾಕ್ಷರತಾ ಪ್ರಮಾಣ		
		ಮಹಿಳೆಯರು	ಪುರುಷರು	ಒಟ್ಟು			ಮಹಿಳೆಯರು	ಪುರುಷರು	ಒಟ್ಟು
೧	ದಕ್ಷಿಣ ಕನ್ನಡ	೯೩೮೪೩೪	೯೫೯೨೯೬	೧೮೯೭೭೩೦	೬೨೯೩೬	೩.೩೨	೬೫.೭	೮೦.೨	೭೨.೯

ಬುಡಕಟ್ಟು ವರ್ಗದವರಿಗೆ ಸರ್ಕಾರ ನೀಡಿರುವ ಅನುದಾನವನ್ನು ಬಳಕೆ ಮಾಡಿಕೊಂಡ ವಿವರ.

	ಬೆಳ್ತಂಗಡಿ	ಪುತ್ತೂರು	ಬಂಟ್ವಾಳ	ಸುಳ್ಯ
೧) ಗೃಹನಿರ್ಮಾಣ	೮೦%	೭೩%	೮೯%	೮೮%
೨) ವಿದ್ಯಾಭ್ಯಾಸ	೯೦%	೯೦%	೮೫%	೯೨%
೩) ಕೃಷಿ	೮೦%	೭೨%	೬೯%	೮೫%
೪) ಸರ್ಕಾರಿ ಸಾಲಗಳು	೬೦%	೭೫%	೭೩%	೮೫%
೫) ಕೋಳಿ ಸಾಕಾಣಿಕೆ	೫೫%	೬೩%	೬೫%	೭೩%
೬) ಹಂದಿ ಸಾಕಾಣಿಕೆ	೪೫%	೫೨%	೪೩%	೪೦%
೭) ಸರ್ಕಾರಿ ಉದ್ಯೋಗ	೨೦%	೨೩%	೩೫%	೩೯%
೮) ವೃದ್ಯಾಪ್ಯ ವೇತನ	೨೦%	೨೨%	೧೫%	೨೨%
೯) ವಸತಿಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ	೫೦%	೪೨%	೪೦%	೪೫%

ಪಂಚವಾರ್ಷಿಕ ಯೋಜನೆಗಳು :

೧ನೇ ಪಂಚವಾರ್ಷಿಕ ಯೋಜನೆ (೧೯೫೧ –೧೯೫೬) : ಭಾರತದ ಮೊದಲನೇ ಪಂಚವಾರ್ಷಿಕ ಯೋಜನೆಯು ಸಮಾಜವಾದಕ್ಕೆ ಅಡಿಗಲ್ಲು ಹಾಕಿದೆ. ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಹಾಗೂ ಬುಡಕಟ್ಟು ಪ್ರದೇಶದಲ್ಲಿ ಸರ್ವತೋಮುಖ ಬದಲಾವಣೆಯನ್ನು ಸಮೂಹ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ತರಲು ಪ್ರಯತ್ನಿಸಲಾಗಿದೆ. ರಾಜ್ಯಗಳಲ್ಲಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ರೂಪಿಸಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ.

೧. ಶಿಕ್ಷಣ ಮತ್ತು ಸಂಸ್ಕೃತಿ. ೨. ಬುಡಕಟ್ಟುಗಳ ಆರ್ಥಿಕ ಅಭಿವೃದ್ಧಿ ೩. ಸಾರಿಗೆ ಮತ್ತು ಸಂವಹನ ೪. ಸಮಾಜ ಕಲ್ಯಾಣ (ಆರೋಗ್ಯ, ನೈರ್ಮಲೀಕರಣ ಮತ್ತು ವಸತಿ) ಇತ್ಯಾದಿ ವಿನೂತನ ಅಭಿವೃದ್ಧಿ

ಕಾರ್ಯಕ್ರಮಗಳನ್ನು ಈ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳಲಾಗಿದೆ. ಈ ಯೋಜನಾವಧಿಯಲ್ಲಿಯ ಅಭಿವೃದ್ಧಿ ಕಾರ್ಯಗಳು ಹೀಗಿವೆ.

ಅ. ೪೦೦೦ ಶಾಲೆಗಳ ಸ್ಥಾಪನೆ. ಇದರಲ್ಲಿ ೧೦೦೦ ಆಶ್ರಮ ಶಾಲೆ ಮತ್ತು ಸೇವಾಶ್ರಮ ಶಾಲೆಗಳು ಸೇರಿರುತ್ತವೆ. ೪,೫೦,೦೦೦ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದರು.೮೫೦೦ ಬುಡಕಟ್ಟು ವಿದ್ಯಾರ್ಥಿಗಳು ಹೆಚ್ಚಿನ ವ್ಯಾಸಂಗಕ್ಕಾಗಿ ವಿದ್ಯಾರ್ಥಿ ವೇತನವನ್ನು ಪಡೆದುಕೊಂಡಿರುತ್ತಾರೆ.

ಆ. ೨೪೦೦ ಮೈಲಿ ಉದ್ದದ ರಸ್ತೆ ಮತ್ತು ಸೇತುವೆಗಳು ಹಾಗೂ ಬೆಟ್ಟಗಳಲ್ಲಿ ಕಾಲು ದಾರಿಗಳ ನಿರ್ಮಾಣ.

ಇ. ಹೊಸದಾದ ಬೇಸಾಯ ಪದ್ಧತಿಯನ್ನು ಅಳವಡಿಸಲು ೫೦ ಕೃಷಿ ಫಾರಂಗಳ ಸ್ಥಾಪನೆ.

ಈ. ೮೦೦೦ ಬುಡಕಟ್ಟು ಕುಟುಂಬಗಳ ಶಾಶ್ವತ ನೆಲೆ. ಇವರಿಗಾಗಿ ೩೫೦ ಆಹಾರ ಬ್ಯಾಂಕುಗಳ ಸಂಘಟನೆ.

ಉ. ೩೧೦ ವಿವಿಧೋದ್ದೇಶ ಸಹಕಾರಿ ಸಂಘಗಳ ಸ್ಥಾಪನೆ.

ಋ. ೭೫೦ ಬುಡಕಟ್ಟು ಜನರಿಗೆ ನೇಯ್ಗೆ, ರೇಷ್ಮೆ, ಧಾನ್ಯ ಸಂರಕ್ಷಣೆಯ ತರಬೇತಿ.

ೠ. ೧೧೦ ಗೃಹ ಕೈಗಾರಿಕೆ, ೩೨೦೦ ವೈದ್ಯಕೀಯ, ೨೫ ಮಲೇರಿಯಾ ನಿಯಂತ್ರಣ, ೨೬ ಹೆರಿಗೆ ಆಸ್ಪತ್ರೆ ಮತ್ತು ಮಕ್ಕಳ ಕಲ್ಯಾಣ ಕೇಂದ್ರಗಳ ಸ್ಥಾಪನೆ.

ಎ. ಬುಡಕಟ್ಟು ಪ್ರದೇಶದಲ್ಲಿ ಕುಡಿಯುವ ನೀರಿನ ವ್ಯವಸ್ಥೆ.

ಏ. ಬಿಹಾರ, ಮಧ್ಯಪ್ರದೇಶ, ಪಶ್ಚಿಮ ಬಂಗಾಳಗಳಲ್ಲಿ ಬುಡಕಟ್ಟು ಸಂಶೋಧನಾ ಕೇಂದ್ರಗಳ ಸ್ಥಾಪನೆ. ಒರಿಸ್ಸಾದಲ್ಲಿ ಬುಡಕಟ್ಟು ಬ್ಯುರೋ ಪ್ರಾರಂಭ.

ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಸಹಜವಾಗಿಯೇ ಶಿಕ್ಷಣ, ಆರ್ಥಿಕ ಅಭಿವೃದ್ಧಿ, ಸಾರಿಗೆ ಮತ್ತು ಸಂವಹನಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿ ರೂ.೪೦೦ ರಿಂದ ೫೦೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ತದನಂತರ ಆರೋಗ್ಯ ಕ್ಷೇತ್ರಕ್ಕೆ ಪ್ರಾಮುಖ್ಯತೆ ನೀಡಿ ನಂತರ ಆಡಳಿತಕ್ಕೆ ಹೆಚ್ಚಿನ ಗಮನ ನೀಡಿರುವುದು ವ್ಯಕ್ತವಾಗುತ್ತದೆ. ಸ್ವಾತಂತ್ರ್ಯ ಪೂರ್ವದ ಕಾಲಕ್ಕೆ ಹೋಲಿಸಿದಲ್ಲಿ ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಅಭಿವೃದ್ಧಿಗಾಗಿ ಖರ್ಚು ಮಾಡಿರುವ ಆಯವ್ಯಯ ತೃಪ್ತಿಕರವಾಗಿದೆ.

೨ನೇ ಪಂಚವಾರ್ಷಿಕ ಯೋಜನೆ (೧೯೫೬ – ೫೭ ರಿಂದ ೧೯೬೦–೬೧) : ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಬೃಹತ್ ಪ್ರಮಾಣದ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳು ಅನುಷ್ಠಾನಗೊಂಡವು. ಸರಾಸರಿ ೨೫೦೦೦ ಬುಡಕಟ್ಟು ಜನರನ್ನು ಹೊಂದಿರುವ ಬುಡಕಟ್ಟು ಪ್ರದೇಶಗಳಲ್ಲಿ ಎನ್.ಇ.ಎಸ್.ಬ್ಲಾಕ್‌ಗಳನ್ನು ಗುರ್ತಿಸಲಾದವು. ಕೇಂದ್ರ ಸರ್ಕಾರವು ಬುಡಕಟ್ಟು ಜನರ ಹಾಗೂ ಬುಡಕಟ್ಟು ಪ್ರದೇಶ ಅಭಿವೃದ್ಧಿಗಾಗಿ ಕೆಲವು ವಿಶೇಷ ಯೋಜನೆಗಳನ್ನು ಜಾರಿಗೊಳಿಸಿತು.

ಇವುಗಳಲ್ಲಿ ಅತಿ ಮುಖ್ಯವಾದದ್ದು ವಿಶೇಷ ವಿವಿಧೋದ್ದೇಶ ಬುಡಕಟ್ಟುಗಳ ಗುಂಪು (Special Multipurpose Tribal Blocks). ಈ ಗುಂಪುಗಳ ಮುಖ್ಯ ಉದ್ದೇಶ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಮತ್ತಷ್ಟು ಹೆಚ್ಚಿನ ಗಮನ ಹರಿಸುವುದಾಗಿತ್ತು. ಈ ವಿಶೇಷ ವಿವಿಧೋದ್ದೇಶ ಬುಡಕಟ್ಟು ಗುಂಪುಗಳ ಪ್ರಗತಿಯನ್ನು ಪರಿಶೀಲಿಸಲು ವೆರಿಯರ್ ಎಲ್ವಿನ್‌ರವರ ನೇತೃತ್ವದಲ್ಲಿ ಅನೇಕ ತಂಡಗಳನ್ನು (Composite team) ರಚಿಸಲಾಗಿತ್ತು. ಈ ತಂಡಗಳು ಬುಡಕಟ್ಟು ಜನರ ಸಮಸ್ಯೆಗಳನ್ನು ಬಗೆಹರಿಸಲು ಬಹು ಹೆಚ್ಚು ಫಲಕಾರಿಯಾಗುವ ಶಿಫಾರಸ್ಸುಗಳನ್ನು ಮಾಡಿದವು. ಕಾಲಾನುಕ್ರಮ ಈ ಎಸ್.ಎಂ.ಪಿ.ಟಿ.ಬ್ಲಾಕ್‌ಗಳನ್ನು ಬುಡಕಟ್ಟು ಅಭಿವೃದ್ಧಿ ಬ್ಲಾಕ್ (Tribal Development Blocks) ಗಳೆಂದು ಕರೆಯಲ್ಪಟ್ಟವು. ಪ್ರತಿ ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳು ೨೫,೦೦೦ ಬುಡಕಟ್ಟುಗಳನ್ನು ಹೊಂದಿದ್ದವು.

ಎರಡನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಅಭಿವೃದ್ಧಿಯನ್ನು ಎರಡು ಪ್ರತ್ಯೇಕ ಯೋಜನೆಯಲ್ಲಿ ಕೈಗೊಳ್ಳಲಾಗಿತ್ತು. ಅವುಗಳೆಂದರೆ ರಾಜ್ಯ ಯೋಜನೆ ಮತ್ತು ಕೇಂದ್ರ ಯೋಜನೆ. ರಾಜ್ಯ ಯೋಜನೆಯ ಅಡಿಯಲ್ಲಿ ಕೈಗೊಂಡ ಕೇಂದ್ರ ಸರ್ಕಾರಗಳು ೫೦:೫೦ ಅನುಪಾತದಲ್ಲಿ ಭರಿಸಿದವು. ಕೇಂದ್ರ ಯೋಜನೆಯ ಅಡಿಯಲ್ಲಿ ರಾಜ್ಯ ಸರ್ಕಾರ ಕೈಗೊಂಡ ಕಾರ್ಯಕ್ರಮಗಳಿಗೆ ವಿನಿಯೋಗಿಸಿದ ಪೂರ್ಣ ಅನುದಾನವನ್ನು ಭಾರತ ಸರ್ಕಾರ ಭರಿಸಿದವು. ಕೇಂದ್ರ ಯೋಜನೆಯ ಆದಿಯಲ್ಲಿ ರಾಜ್ಯ ಸರ್ಕಾರ ಕೈಗೊಂಡ ಕಾರ್ಯಕ್ರಮಗಳಿಗೆ ವಿನಿಯೋಗಿಸಿದ ಪೂರ್ಣ ಅನುದಾನವನ್ನು ಭಾರತ ಸರ್ಕಾರ ಭರಿಸಿತು. ಈ ಯೋಜನೆಯ ಅವಧಿಯಲ್ಲಿ ಒಟ್ಟು ರೂ. ೪೨.೯೨ ಕೋಟಿ ಖರ್ಚು ಮಾಡಲಾಯಿತು.

ಈ ಯೋಜನೆಯ ಅವಧಿಯಲ್ಲಿ ಆರ್ಥಿಕ ಅಭಿವೃದ್ಧಿಗಾಗಿ ಹೆಚ್ಚಿನ ಪ್ರಾಮುಖ್ಯತೆ ನೀಡಿ ರೂ.೧೬.೮೬ ಕೋಟಿ ಖರ್ಚು ಮಾಡಲಾಯಿತು. ೪೩ ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳನ್ನು ತೆರೆಯಲಾಯಿತು. ಬುಡಕಟ್ಟು ಜನರಿಗೆ ಪುನರ್ವಸತಿಯನ್ನು ಕಲ್ಪಿಸಲು ರೂ.೨೦ ಲಕ್ಷ ಖರ್ಚು ಮಾಡಿ ೨೨೧೭ ಮನೆಗಳನ್ನು ನಿರ್ಮಿಸಲಾಯಿತು. ರಾಜ್ಯ ಯೋಜನೆಯ ಅಡಿಯಲ್ಲಿ ಬುಡಕಟ್ಟು ವಿದ್ಯಾರ್ಥಿಗಳಿಗಾಗಿ ೩೧೮೭ ಶಾಲೆಗಳು, ೩೯೮ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಹಾಗೂ ೩ ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಲು ರೂ.೮೨೧.೫೧ ಲಕ್ಷ ಖರ್ಚು ಮಾಡಲು ಯೋಜನೆಗಳನ್ನು ಕೈಗೊಳ್ಳಲಾಗಿತ್ತು. ಸಾರಿಗೆ ಸಂವಹನ ಕ್ಷೇತ್ರದಲ್ಲಿ ಮೊದಲನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಖರ್ಚು ಮಾಡಿದ ಅನುದಾನಕ್ಕಿಂತ ಎರಡರಷ್ಟು ಹೆಚ್ಚು ಖರ್ಚು ಮಾಡಲಾಯಿತು. ಬುಡಕಟ್ಟು ಜನರ ವಸತಿ ಪರಿಸ್ಥಿತಿ ಸಂಪೂರ್ಣ ಅತೃಪ್ತಿದಾಯಕವಾಗಿದ್ದರಿಂದ ರೂ.೬೦ ಲಕ್ಷ ಖರ್ಚು ಮಾಡಿ ೧೮ ಸಾವಿರ ಮನೆಗಳನ್ನು ನಿರ್ಮಿಸಲಾದವು.

೩ನೇ ಪಂಚವಾರ್ಷಿಕ ಯೋಜನೆ (೧೯೬೧-೬೨ ರಿಂದ ೧೯೬೫-೬೬) : ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಜಾರಿಗೆ ತಂದಿದ್ದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು ಹಿಂದುಳಿದ ಪರಿಶಿಷ್ಟ

ವರ್ಗಗಳ ಜನರ ಸಮಸ್ಯೆಗಳನ್ನು ಕಿಂಚಿತ್ತೂ ಬಗೆಹರಿಸದ ಕಾರಣ ಬುಡಕಟ್ಟು ಜನರ ಅತೃಪ್ತಿಗೆ ಕಾರಣವಾಯಿತು. ಇದರಿಂದ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಅಧ್ಯಯನ ಸಮಿತಿಗಳು, ಬುಡಕಟ್ಟು ಜನರ ಅಭಿವೃದ್ಧಿಗಾಗಿ ಇರುವ ಅಭಿವೃದ್ಧಿ ಯೋಜನೆಗಳನ್ನು ಪರಿಶೀಲಿಸಿ ಬುಡಕಟ್ಟು ಜನರನ್ನು ಅಭಿವೃದ್ಧಿಪಡಿಸಲು ಕೆಲವು ಜಾಗರೂಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಲಹೆಗಳನ್ನು ನೀಡಿದವು.

ಬುಡಕಟ್ಟು ಕೃಷಿ ಕಾರ್ಮಿಕ ಹಾಗೂ ಕುಶಲ ಕರ್ಮಿಗಳಿಗೆ ಬೇಕಾಗಿರುವ ಸಾಲ ಹಾಗೂ ಇನ್ನಿತರೆ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ವಿವಿಧೋದ್ದೇಶ ಸಹಕಾರ ಸಂಘಗಳ ಸ್ಥಾಪನೆಗೆ ಶಿಫಾರಸು ಮಾಡಿದ ಹಿನ್ನೆಲೆಯಲ್ಲಿ ಈ ಯೋಜನೆಯ ಅವಧಿಯಲ್ಲಿ ಭೂ ಅಭಿವೃದ್ಧಿ, ಭೂ ಸಂರಕ್ಷಣೆ, ಸಣ್ಣ ನೀರಾವರಿ ಇತ್ಯಾದಿಗಳಿಗೆ ಹೆಚ್ಚು ಒತ್ತು ಕೊಡಲಾಯಿತು. ಶೈಕ್ಷಣಿಕ ಕ್ಷೇತ್ರಕ್ಕೂ ಹೆಚ್ಚಿನ ಆದ್ಯತೆ ನೀಡಿ ಪ್ರಾಥಮಿಕ ಶಾಲೆಯ ಜೊತೆಗೆ ಫ್ರೀಶಿಪ್, ವಿದ್ಯಾರ್ಥಿವೇತನ ಮಾಧ್ಯಮಿಕ ಹಾಗೂ ಪ್ರೌಢ ಶಾಲೆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ಸೌಲಭ್ಯ ಜೊತೆಗೆ ತಾಂತ್ರಿಕ ತರಬೇತಿ ವಿದ್ಯಾರ್ಥಿಗಳಿಗೆ ಫ್ರೀಶಿಪ್ ಹಾಗೂ ವಿದ್ಯಾರ್ಥಿವೇತನವನ್ನು ನೀಡಲಾದವು.

ಈ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಆರ್ಥಿಕ ಅಭಿವೃದ್ಧಿಗಾಗಿ ಹೆಚ್ಚಿನ ಆದ್ಯತೆ ನೀಡಿದ್ದು, ಅದೇ ರೀತಿ, ಶಿಕ್ಷಣ, ಆರೋಗ್ಯ, ವಸತಿ, ಸಾರಿಗೆ ಮತ್ತು ಸಂವಹನಕ್ಕೆ ಆದ್ಯತೆ ನೀಡಲಾಯಿತು. ೨ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಖರ್ಚು ಮಾಡಿದ ಹಣವನ್ನು ಲೆಕ್ಕಾಚಾರ ಮಾಡಿ ನೋಡಿದಾಗ ೩ನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡ ೨೧.೫೬ರಷ್ಟು ಹೆಚ್ಚಾಗಿದ್ದು ದಾಖಲೆಗಳಿಂದ ಧೃಢಪಟ್ಟಿದೆ.

ಈ ಯೋಜನೆಯ ಅವಧಿಯಲ್ಲಿ ಒಟ್ಟು ರೂ. ೮,೫೭೭ ಕೋಟಿ ಖರ್ಚು ಮಾಡಲಾಗಿದೆ. ಅದರಲ್ಲಿ ರೂ. ೫೦.೫೩ಕೋಟಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಖರ್ಚು ಮಾಡಲಾಯಿತು. ಬುಡಕಟ್ಟು ಅಭಿವೃದ್ಧಿ ಬ್ಲಾಕ್ ಕಡೆಗೆ ಹೆಚ್ಚಿನ ಗಮನ ನೀಡಿ, ೨ ನೇ ಪಂಚವಾರ್ಷಿಕ ಯೋಜನೆಯಲ್ಲಿದ್ದ ೪೩ ಬ್ಲಾಕ್‌ಗಳನ್ನು ೪೫೮ ಬ್ಲಾಕ್‌ಗಳಿಗೆ ಹೆಚ್ಚಿಸಲಾಯಿತು. ೨ನೇ ಆದ್ಯತೆಯನ್ನು ಶಿಕ್ಷಣ ಕ್ಷೇತ್ರಕ್ಕೆ ನೀಡಲಾಗಿದ್ದು ಇದರಿಂದ ಬುಡಕಟ್ಟು ಜನರ ಸಾಕ್ಷರತಾ ಪ್ರಮಾಣ ೯.೧೬ಕ್ಕೆ ಏರಿತು.

ವಾರ್ಷಿಕ ಯೋಜನೆ (೧೯೬೬-೬೭) : ಈ ಯೋಜನೆಯ ಅವಧಿಯಲ್ಲಿ ಒಟ್ಟು ರೂ.೬೭೫೬ ಕೋಟಿ ಖರ್ಚು ಮಾಡಲಾಗಿದೆ. ಅದರಲ್ಲಿ ರೂ.೩೨.೩೨ ಕೋಟಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಖರ್ಚು ಮಾಡಲಾಯಿತು.

೪ನೇ ಪಂಚವಾರ್ಷಿಕ ಯೋಜನೆ (೧೯೬೯-೭೪) : ಕಳೆದ ಮೂರು ಪಂಚವಾರ್ಷಿಕ ಮತ್ತು ಒಂದು ವಾರ್ಷಿಕ ಯೋಜನೆ ಅವಧಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಜಾರಿಗೆ ತಂದಿದ್ದ ಯೋಜನೆಗಳು

ಕೇವಲ ತುಣುಕಾಗಿದ್ದು, ಯಾವುದೇ ಪರಿಪೂರ್ಣ ಯೋಜನೆಗಳಾಗಿರಲಿಲ್ಲ. ಬುಡಕಟ್ಟು ಜನರ ಮತ್ತು ಪ್ರದೇಶದ ಸಮಸ್ಯೆಗಳನ್ನು ಬಗೆಹರಿಸಲು ಯಾವುದೇ ಪ್ರಾಮಾಣಿಕ ಪ್ರಯತ್ನ ನಡೆಯದ ಕಾರಣ ಈ ಯೋಜನೆಯ ಅವಧಿಯಲ್ಲಿ ಸಮುದಾಯ ಅಭಿವೃದ್ಧಿ ಬ್ಲಾಕ್‌ಗಳನ್ನು ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳಾಗಿ ಪರಿವರ್ತಿಸಲು ಸಾಧ್ಯವಾಯಿತು. ೧೯೬೧ರಲ್ಲಿ ಯಾವುದೇ ಸಮುದಾಯ ಅಭಿವೃದ್ಧಿ ಬ್ಲಾಕ್‌ಗಳನ್ನು ಶೇ.೫೦ರಷ್ಟು ಬುಡಕಟ್ಟುಗಳಿದ್ದಲ್ಲಿ ಅಂತಹ ಬ್ಲಾಕ್‌ಗಳನ್ನು ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳಾಗಿ ಪರಿವರ್ತಿಸಲು ಅರ್ಹತೆ ಹೊಂದಿದ್ದವು. ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳಲ್ಲಿ ಜಾರಿಗೆ ತಂದಿದ್ದ ಹಿಂದುಳಿದ ವರ್ಗದ ಕಲ್ಯಾಣ ಯೋಜನೆಗಳು ಮತ್ತು ತುಣುಕುಗಳು ಸಾಕಷ್ಟು ಪ್ರಮಾಣದಲ್ಲಿ ಫಲಕಾರಿಯಾಗಲಿಲ್ಲ. ಈ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ೬ ಪೈಲಟ್ ಪ್ರಾಜೆಕ್ಟ್‌ಗಳನ್ನು ಪ್ರಾರಂಭಿಸಿತು. ಈ ಪೈಲಟ್ ಪ್ರಾಜೆಕ್ಟ್‌ಗಳನ್ನೇ ಆನಂತರದಲ್ಲಿ ಬುಡಕಟ್ಟು ಅಭಿವೃದ್ಧಿ ಏಜೆನ್ಸಿಗಳೆಂದು ಕರೆಯಲಾಯಿತು.

ಈ ಯೋಜನೆಯ ಅವಧಿಯಲ್ಲಿ ಒಟ್ಟು ರೂ.೧೫೯೦೨ ಕೋಟಿ ಖರ್ಚು ಮಾಡಲಾಗಿದೆ. ಅದರಲ್ಲಿ ರೂ.೨೫ ಕೋಟಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಖರ್ಚು ಮಾಡಲಾಯಿತು. ಆರ್ಥಿಕ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಕೃಷಿ, ಸಹಕಾರ, ನೀರಾವರಿ, ಸಣ್ಣ ಕೈಗಾರಿಕೆ ಇತ್ಯಾದಿ ಕ್ಷೇತ್ರಗಳಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಯಿತು. ಬುಡಕಟ್ಟು ಜನರಿಗೆ ಸುಧಾರಿತ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡಲಾಯಿತು. ಗೃಹ ಕೈಗಾರಿಕೆ ಯೋಜನೆಯ ಅಡಿಯಲ್ಲಿ ಬುಡಕಟ್ಟು ಕುಶಲ ಕರ್ಮಿಗಳಿಗೆ ತಮ್ಮ ವೃತ್ತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಧನ ಸಹಾಯವನ್ನು ನೀಡಲಾಯಿತು. ಇದರ ಜೊತೆಗೆ ಅವರು ತಯಾರಿಸುವ ವಸ್ತುಗಳಿಗೆ ಮಾರುಕಟ್ಟೆಯ ವ್ಯವಸ್ಥೆಯನ್ನು ಒದಗಿಸಲಾಯಿತು. ಸ್ಟೈಫಂಡ್‌ಸಹಿತ ತರಬೇತಿ ಜೊತೆಗೆ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲಾದವು. ಈ ರೀತಿ ತರಬೇತಿ ಪಡೆದ ಬುಡಕಟ್ಟು ಜನರಿಗೆ ಬಡ್ಡಿರಹಿತ ಸಾಲಸೌಲಭ್ಯ ಕಲ್ಪಿಸಲಾಯಿತು.

ಆರೋಗ್ಯ ಮತ್ತು ವಸತಿ ಕ್ಷೇತ್ರದಲ್ಲಿ ರಾಜ್ಯ ಯೋಜನೆಯಡಿಯಲ್ಲಿ ಬುಡಕಟ್ಟು ಜನರಿಗೆ ವಸತಿಗಾಗಿ ಸಹಾಯಧನ ಹಾಗೂ ಅವರ ಗ್ರಾಮಗಳಿಗೆ ಅಥವಾ ಪ್ರದೇಶಗಳಿಗೆ ವಿದ್ಯುದೀಕರಣ, ಕುಡಿಯುವ ನೀರಿನ ಪೂರೈಕೆ, ಪೌಷ್ಠಿಕ ಆಹಾರ ಮತ್ತು ಕಾನೂನು ಸಲಹೆಗಳನ್ನು ಒದಗಿಸಲಾಯಿತು. ಈ ಯೋಜನೆಯ ಅವಧಿಯಲ್ಲಿ ಪ್ರಾರಂಭವಾದ ಆರು ಪೈಲಟ್ ಪ್ರಾಜೆಕ್ಟ್‌ಗಳಿಗೆ ರೂ.೧೨ ಕೋಟಿಗಳನ್ನು ನೀಡಲಾಯಿತು. ಈ ಪೈಲಟ್ ಪ್ರಾಜೆಕ್ಟ್‌ಗಳು ಆರ್ಥಿಕ ಅಭಿವೃದ್ಧಿ, ರಸ್ತೆಗಳ ನಿರ್ಮಾಣ ಕಾರ್ಯಗಳನ್ನು ಒಳಗೊಂಡಿದ್ದವು. ಈ ಯೋಜನೆಯ ಅವಧಿಯಲ್ಲಿ ೬ ಪೈಲಟ್ ಪ್ರಾಜೆಕ್ಟ್‌ಗಳಿಗೆ ರೂ.೪೫೦ ಲಕ್ಷ ಅನುದಾನಿತ ಸಹಾಯಧನವನ್ನು ನೀಡಲಾಯಿತು. ಇವು ೫ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿಯೂ ಮುಂದುವರೆದವು.

೫ನೇ ಪಂಚವಾರ್ಷಿಕ ಯೋಜನೆ : (೧೯೭೪-೧೯೭೯) ಈ ಯೋಜನೆ ಬುಡಕಟ್ಟು ಜನರ ಅಭಿವೃದ್ಧಿ ದಿಸೆಯಲ್ಲಿ ಒಂದು ಮುಖ್ಯ ಮೈಲುಗಲ್ಲಾಗಿದ್ದು, ರಾಜ್ಯದ ಆದಾಯವನ್ನು ದ್ವಿಗುಣಗೊಳಿಸಿ, ಜೀವನ ಮಟ್ಟವನ್ನು ಸುಧಾರಿಸಿ ಪ್ರಾಂತೀಯ ಅಸಮತೋಲನವನ್ನು ಹೋಗಲಾಡಿಸುವುದು ಉದ್ದೇಶವಾಗಿತ್ತು. ಈ ಯೋಜನೆಯಲ್ಲಿ ಬಡತನ ನಿರ್ಮೂಲನ ಮತ್ತು ಸ್ವಾವಲಂಬನೆ ಸಹ ಅತಿ ಮುಖ್ಯ ಉದ್ದೇಶವಾಗಿತ್ತು. ಕಳೆದ ೪ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಂಡ ಯೋಜನೆಗಳಿಂದ ಬುಡಕಟ್ಟು ಜನರ ಜೀವನ ಮಟ್ಟ ಪರಿಣಾಮಕಾರಿಯಾಗಿ ಸುಧಾರಿಸಿರಲಿಲ್ಲ. ಈ ಯೋಜನೆಯ ಅವಧಿಯಲ್ಲಿ ಕೇಂದ್ರ ಸರ್ಕಾರ ಬುಡಕಟ್ಟುಗಳ ಸಮಸ್ಯೆಗಳನ್ನು ಹೋಗಲಾಡಿಸಲು ಒಂದು ಹೊಸ ಯೋಜನೆಯ ಹುಟ್ಟಿಗೆ ದಾರಿ ಮಾಡಿ ಕೊಟ್ಟಿತ್ತು. ಅದನೇ "ಉಪ-ಯೋಜನೆ" ಎನ್ನುವರು. ಈ ಯೋಜನೆಯು ಬುಡಕಟ್ಟು ಜನರ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಿದೆ. ಹಾಗೆಯೇ ಈ ಉಪಯೋಜನೆಯು ಪ್ರದೇಶ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಿದೆ. ಗಿರಿಜನ ಉಪ ಯೋಜನೆಯ ಪರಿಕಲ್ಪನೆ ಅಂದರೆ ಲಭ್ಯವಿರುವ ಎಲ್ಲಾ ಆರ್ಥಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಒಂದೆಡೆ ಕಲೆಹಾಕಿ ಅದನ್ನು ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿಗಾಗಿ ಉಪಯೋಗಿಸಿಕೊಳ್ಳುವುದಾಗಿರುವುದು.

ಪರಿಶಿಷ್ಟ ಜಾತಿಯ ಜನರ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಅಭಿವೃದ್ಧಿಗಾಗಿ ಕೇವಲ ರಾಜ್ಯ ಸರ್ಕಾರಗಳು ಆಯಾ ಇಲಾಖೆಯಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು ಸಾಕಾಗದ ಕಾರಣ ಇದಕ್ಕೆ ಹೆಚ್ಚು ಒತ್ತು ಕೊಡಲು ಕೇಂದ್ರ ಸರ್ಕಾರ "ವಿಶೇಷ ಘಟಕ ಯೋಜನೆ" ಎಂಬ ಹೊಸ ಹೆಸರಿನ, ಹೊಸ ಯೋಜನೆಯನ್ನು ರೂಪಿಸಿ, ಪರಿಶಿಷ್ಟ ಜಾತಿಯ ಸರ್ವಾಂಗೀಣ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವ ರೀತಿಯಲ್ಲಿಯೇ ಬುಡಕಟ್ಟು ಜನರ ಅಭಿವೃದ್ಧಿಗಾಗಿಯೂ ಸಹ ೧೯೭೪-೭೫ನೇ ಸಾಲಿನಲ್ಲಿ "ಗಿರಿಜನ ಉಪ ಯೋಜನೆ" ಎಂಬ ಹೊಸ ಯೋಜನೆಯಡಿಯಲ್ಲಿ ಬುಡಕಟ್ಟು ಜನರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಜೊತೆಗೆ ಅವರ ಜೀವನ ಮಟ್ಟವನ್ನು ಸುಧಾರಿಸಲು, ಹಲವಾರು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಕ್ರಮ ಕೈಗೊಂಡವು. ಈ ಯೋಜನೆಯ ಅವಧಿಯಲ್ಲಿ ಗಿರಿಜನ ಉಪ ಯೋಜನೆಯ ಅಡಿಯಲ್ಲಿ ಬುಡಕಟ್ಟು ಪ್ರದೇಶ ಮತ್ತು ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿಯಲ್ಲಿ ಅನಿರೀಕ್ಷಿತ ಪ್ರಗತಿಯಾಗಿರುವುದು ಗಮನಾರ್ಹ.

ಬಹಳಷ್ಟು ಬುಡಕಟ್ಟು ಜನರ ಮುಖ್ಯ ವೃತ್ತಿ ವ್ಯವಸಾಯವಾಗಿದ್ದು, ಅದು ಅವರ ಆದಾಯದ ಮೂಲವಾಗಿರುವುದು. ಬುಡಕಟ್ಟು ಜನರ ಆರ್ಥಿಕ ಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೋಸ್ಕರ ಅವರ ವ್ಯವಸಾಯದ ಅಭಿವೃದ್ಧಿಗಾಗಿ ಹೆಚ್ಚಿನ ಬಂಡವಾಳವನ್ನು ಹೂಡಲಾಯಿತು. ಕಾರಣ ಬುಡಕಟ್ಟು ಪ್ರದೇಶದ ಕೃಷಿ ಕ್ಷೇತ್ರದಲ್ಲಿ ಬರುತ್ತಿದ್ದ ಆದಾಯ ಈ ಕೆಳಕಂಡ ಕಾರಣಗಳಿಂದ ಬಹಳ ಕಡಿಮೆಯಾಗಿತ್ತು.

೧. ಬೆಟ್ಟ ಗುಡ್ಡಗಳಿಂದ ಕೂಡಿದ ಕಡಿಮೆ ಫಲವತ್ತತೆಯ ತುಂಡು ಭೂಮಿ.

೨. ಪ್ರಾಚೀನ ವ್ಯವಸಾಯ ಪದ್ಧತಿ.

೩. ಮಳೆ ಆಧಾರಿತ ವ್ಯವಸಾಯ ಹಾಗೂ ನೀರಾವರಿ ಸೌಕರ್ಯಗಳ ಕೊರತೆ.

ಈ ಕಾರಣದಿಂದ ೫ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬುಡಕಟ್ಟು ಪ್ರದೇಶದಲ್ಲಿ ವ್ಯವಸಾಯ ಅಭಿವೃದ್ಧಿಗೋಸ್ಕರ ಹಾಗೂ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ದೃಷ್ಟಿಯಿಂದ ವ್ಯವಸಾಯದಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಲಾಯಿತು. ನೀರಾವರಿ ಸೌಕರ್ಯಗಳನ್ನು ಒದಗಿಸುವುದಕ್ಕೋಸ್ಕರ ಹೆಚ್ಚಿನ ಬಂಡವಾಳವನ್ನು ಹೂಡಲಾಯಿತು. ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದ ಹಳೆಯ ಉಪಕರಣಗಳನ್ನು ಬದಲಾಯಿಸಿ, ಹೊಸ ವೈಜ್ಞಾನಿಕ ಉಪಕರಣಗಳ ಬಳಕೆಗೆ ಪ್ರೋತ್ಸಾಹಿಸಲಾಯಿತು. ವ್ಯವಸಾಯ ಕ್ಷೇತ್ರದಲ್ಲಿ ಬುಡಕಟ್ಟು ಮಹಿಳೆಯರು ಪ್ರಮುಖ ಪಾತ್ರ ವಹಿಸಿದ್ದರು.

೬ನೇ ಪಂಚವಾರ್ಷಿಕ ಯೋಜನೆ (೧೯೮೦-೮೫): ೬ನೇ ಪಂಚವಾರ್ಷಿಕ ಯೋಜನೆಯ ಹೊತ್ತಿಗೆ ಕೇವಲ ಶೇ.೪೦ ರಷ್ಟು ದೇಶದ ಬುಡಕಟ್ಟು ಜನರು ಮಾತ್ರ ಪ್ರಯೋಜನ ಪಡೆದಿದ್ದು, ಹಲವಾರು ವಿಶೇಷ ಉಪಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದರಿಂದ, ೫ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಶೇ.೩೫ರಷ್ಟು ಹರಿದು ಹಂಚಿ ಹೋಗಿರುವ ಬುಡಕಟ್ಟು ಜನರ ಸಮಸ್ಯೆಗಳಿಗೆ ಯಾವುದೇ ವಿಶೇಷ ಆಸಕ್ತಿಯನ್ನು ನೀಡಿರುವುದಿಲ್ಲ.

೬ನೇ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಶೇಕಡ ೫೦ಕ್ಕಿಂತ ಹೆಚ್ಚು ಬುಡಕಟ್ಟು ಜನರು ಬಡತನ ರೇಖೆಯನ್ನು ದಾಟಿ ಉತ್ತಮ ಜೀವನ ನಡೆಸುವ ವ್ಯವಸ್ಥೆಯನ್ನು ಕಲ್ಪಿಸುವ ಗುರಿಯನ್ನು ಹೊಂದಿತ್ತು. ಆ ಕಾರಣಕ್ಕಾಗಿ ದೇಶಾದ್ಯಂತ ಬುಡಕಟ್ಟು ಪ್ರದೇಶಗಳಲ್ಲಿ ಗಿರಿಜನ ಉಪ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸುಮಾರು ೧೮೦ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ (ಐ.ಟಿ.ಡಿ.ಪಿ) ಕೇಂದ್ರಗಳನ್ನು ಸ್ಥಾಪಿಸಲಾದವು.

ಈ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಜನರ ಮೇಲೆ ಆಗುತ್ತಿದ್ದ ಎಲ್ಲಾ ರೀತಿಯ ಶೋಷಣೆಯನ್ನು ನಿಲ್ಲಿಸುವುದಕ್ಕೆ ಹೆಚ್ಚಿನ ಪ್ರಧಾನ್ಯತೆ ನೀಡಲಾಗಿದೆ. ಇದರ ಜೊತೆಯಲ್ಲಿ ಕೃಷಿ ಮತ್ತು ಕೃಷಿಗೆ ಸಂಬಂಧಪಟ್ಟ ಸಣ್ಣ ನೀರಾವರಿ, ಸಹಕಾರ, ಮಾರುಕಟ್ಟೆ ಮತ್ತು ಇತರೆ ಸಾಮಾಜಿಕ ಸೇವೆಗಳಿಗೂ ಆದ್ಯತೆ ನೀಡಲಾಯಿತು.

೫ನೇ ಪಂಚವಾರ್ಷಿಕ ಯೋಜನೆಯಲ್ಲಿ ದೇಶದ ೧೬ ರಾಜ್ಯಗಳು ಮತ್ತು ೨ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಾತ್ರ ಗಿರಿಜನ ಉಪಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಂಡಿದ್ದವು. ೬ ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಿಕ್ಕಿಂ ರಾಜ್ಯವನ್ನು ಸೇರಿಸಿದ್ದಲ್ಲದೇ ಈ ಅವಧಿಯಲ್ಲಿ ೨೪೫ ಎಂ.ಎ.ಡಿ.ಎ.

ಪಾಕೇಟ್‌ಗಳನ್ನು ಗುರುತಿಸಿರುವುದು ಪ್ರಮುಖ ಸಾಧನೆಯಾಗಿತ್ತು. ಇದರ ಜೊತೆಗೆ ಇನ್ನೂ ೨೦ ಆದಿವಾಸಿ ಪಂಗಡಗಳನ್ನು ಗುರುತಿಸಲಾದವು. ಈ ಯೋಜನೆಯ ೪ನೇ ವರ್ಷದ ಕೊನೆಯಲ್ಲಿ ೧೮೧ ಐ.ಟಿ.ಡಿ.ಪಿ.ಗಳು ಹಾಗೂ ೨೪೫ ಎಂ.ಎ.ಡಿ.ಎ ಪಾಕೇಟ್‌ಗಳು ಮತ್ತು ೭೨ ಆದಿವಾಸಿ ಪಂಗಡಗಳ ವಿಶೇಷ ಯೋಜನೆಗಳು ದೇಶಾದ್ಯಂತ ಕಾರ್ಯಗತವಾದವು.

೭ನೇ ಪಂಚವಾರ್ಷಿಕ ಯೋಜನೆ (೧೯೮೫-೯೦) : ೧ ರಿಂದ ೭ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ೧೭ ರಾಜ್ಯಗಳಲ್ಲಿ ೨ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸುಮಾರು ಶೇ.೭೫ರಷ್ಟು ಬುಡಕಟ್ಟು ಜನರು ಗಿರಿಜನ ಉಪಯೋಜನೆಯ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಉಳಿದ ಶೇ. ೨೫ರಷ್ಟು ಬುಡಕಟ್ಟು ಜನರು ಈ ಗಿರಿಜನ ಉಪಯೋಜನೆಯಿಂದ ಹೊರಗೆ ಉಳಿದಿದ್ದು ಅವರ ಸ್ಥಿತಿಗತಿಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿದೆ. ಆ ಪ್ರಕಾರ ಉತ್ತರ ಪ್ರದೇಶದಲ್ಲಿರುವ ಬಹುಸಂಖ್ಯಾತ ಬುಡಕಟ್ಟು ಜನರು ಈ ಗಿರಿಜನ ಉಪಯೋಜನೆಯಿಂದ ಹೊರಗೆ ಉಳಿದಿರುತ್ತಾರೆ (ಶೇ.೪೭.೯೪), ಸಿಕ್ಕಿಂ (ಶೇ.೮೬.೯೨), ಕೇರಳ (ಶೇ.೮೨.೪೯), ಪಶ್ಚಿಮ ಬಂಗಾಳ (ಶೇ.೬೧.೧೯), ಇನ್ನುಳಿದ ರಾಜ್ಯಗಳಲ್ಲಿ ಶೇ.೫೦ಕ್ಕಿಂತ ಹೆಚ್ಚು ಬುಡಕಟ್ಟು ಜನರು ಗಿರಿಜನ ಉಪಯೋಜನೆಯಿಂದ ಪ್ರಯೋಜನ ಪಡೆಯದೆ ಹೊರಗೆ ಉಳಿದಿರುತ್ತಾರೆ.

ವಾರ್ಷಿಕ ಯೋಜನೆ ೧೯೯೦-೯೧ ರಿಂದ ೧೯೯೧-೯೨, ೮ನೇ ಪಂಚವಾರ್ಷಿಕ ಯೋಜನೆ (೧೯೯೨-೯೭), ೯ನೇ ಪಂಚವಾರ್ಷಿಕ ಯೋಜನೆ (೧೯೯೭ -೨೦೦೨) ಮತ್ತು ೧೦ನೇ ಪಂಚವಾರ್ಷಿಕ ಯೋಜನೆ (೨೦೦೨-೦೭)ಗಳಲ್ಲಿಯೂ ಬುಡಕಟ್ಟುಗಳ ಅಭಿವೃದ್ಧಿಗಾಗಿ ವಿಶೇಷ ಕಾಳಜಿ ವಹಿಸಲಾಗಿದೆ. ಶೇಕಡ ೫೦ಕ್ಕಿಂತ ಹೆಚ್ಚಿಗೆ ಜನಸಂಖ್ಯೆ ಹೊಂದಿರುವ ಬುಡಕಟ್ಟು ಜನರ ಪ್ರದೇಶವನ್ನು ಗುರುತಿಸಿ, ಅವರ ಅಭಿವೃದ್ಧಿಗಾಗಿ ಗಿರಿಜನರ ಉಪಯೋಜನೆ ಎಲ್ಲೆಡೆ ವಿಸ್ತರಿಸಲಾಗಿದೆ. ಈ ಯೋಜನೆಯಿಂದ ದೇಶದ ೨/೩ ಭಾಗದ ಬುಡಕಟ್ಟು ಜನರು ಮಾತ್ರ ಅಭಿವೃದ್ಧಿ ಹೊಂದಲು ಸಾಧ್ಯವಾಗುವುದು. ಉಳಿದ ೧/೨ ಭಾಗದ ಬುಡಕಟ್ಟಿನವರು ಈ ಯೋಜನೆಯ ಹೊರಗೆ ಉಳಿದಿರುವುದು ದಾಖಲಾತಿಗಳಿಂದ ಧೃಢಪಟ್ಟಿದೆ. ಭಾರತ ಸ್ವತಂತ್ರ ಹೊಂದಿ ಅರ್ಧ ಶತಮಾನ ಕಳೆದರೂ ಬುಡಕಟ್ಟುಗಳ ಅಭಿವೃದ್ಧಿಯ ಕಾರ್ಯ ಕುಂಟುತ್ತಾ ಸಾಗಿರುವುದನ್ನು ಮನಗಂಡು ಭಾರತ ಸರ್ಕಾರ ಬುಡಕಟ್ಟುಗಳ ಅಭಿವೃದ್ಧಿಗೆಂದೇ ಪ್ರತ್ಯೇಕ ಬುಡಕಟ್ಟು ವ್ಯವಹಾರಗಳ ಸಚಿವಾಲಯ (Ministry of Tribal Affairs) ಒಂದನ್ನು ೧೯೯೯ನೇ ಅಕ್ಟೋಬರ್ ತಿಂಗಳಲ್ಲಿ ಹೊಸದಾಗಿ ರಚಿಸಿತು. ಈ ಹಿಂದೆ ಈ ಖಾತೆಯನ್ನು ಸಾಮಾಜಿಕ ನ್ಯಾಯ ಮತ್ತು ಸ್ವಾಧಿಕಾರ ಸಚಿವಾಲಯ (Ministry of Social justice and empowerment) ನೋಡಿಕೊಳ್ಳುತ್ತಿತ್ತು. ಈ ಬುಡಕಟ್ಟು ಜನರ ಸರ್ವತೋಮುಖ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಲ್ಲಿ ಪ್ರತ್ಯೇಕ ಸಚಿವಾಲಯ ಮತ್ತು ನಿರ್ದೇಶನಾಲಯಗಳಿದ್ದು, ಇವುಗಳು ಇತ್ತೀಚಿನ ದಿನಗಳಲ್ಲಿ ಬುಡಕಟ್ಟುಗಳ ಸಮಸ್ಯೆಗಳನ್ನು ಬಗೆಹರಿಸಲು

ಅವರ ಜೀವನಮಟ್ಟವನ್ನು ಸುಧಾರಿಸಲು ಹಲವಾರು ವಿನೂತನ ಯೋಜನೆಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಈ ತರಹದ ಪ್ರತ್ಯೇಕ ಬುಡಕಟ್ಟುಗಳ ವ್ಯವಹಾರಗಳ ಖಾತೆಯನ್ನು ನೋಡಿಕೊಳ್ಳಲು ಬುಡಕಟ್ಟುಗಳಿರುವ ಪ್ರತಿ ರಾಜ್ಯಗಳಲ್ಲಿಯೂ ಸಚಿವಾಲಯ ರಚಿಸುವುದು ಅವಶ್ಯಕ. ೧೯೯೦ರಲ್ಲಿ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಆಯೋಗವನ್ನು ಪರಿಶಿಷ್ಟರ ಅಭಿವೃದ್ಧಿಗಾಗಿ ನವ ದೆಹಲಿಯಲ್ಲಿ ಸ್ಥಾಪಿಸಲಾಗಿದೆ. ಆದರೂ, ಗಣನೀಯ ಪ್ರಮಾಣದಲ್ಲಿ ಬುಡಕಟ್ಟು ಅಭಿವೃದ್ಧಿ ಸಾಧಿಸದೇ ಇರುವುದು ದಾಖಲೆಗಳಿಂದ ಧೃಢಪಟ್ಟಿರುವುದರಿಂದ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಹೆಚ್ಚು ಒತ್ತು ಕೊಡಲು ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಆಯೋಗವನ್ನು ಬೇರ್ಪಡಿಸಿ, ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿಯೇ ಪ್ರತ್ಯೇಕ ರಾಷ್ಟ್ರೀಯ ಆಯೋಗ ಸ್ಥಾಪನೆಯಾಗಿರುವುದು ಸ್ವಾಗತಾರ್ಹ.

೫. ೪ : ಬುಡಕಟ್ಟು ಅಭಿವೃದ್ಧಿ ಚಿಂತನೆಗಳು : ನೆಹರು ಚಿಂತನೆಗಳು :

ಆದಿವಾಸಿಗಳೆಂದರೆ ಬುಡಗಟ್ಟು ಸಮುದಾಯವಾಗಿದ್ದು ತಮ್ಮದೇ ಆದ ಸಂಸ್ಕೃತಿಯನ್ನು ಹೊಂದಿದ್ದು ಮುಖ್ಯವಾಹಿನಿಯಿಂದ ದೂರವಿದ್ದು ಕೆಲವೊಂದು ಕಳಂಕಕ್ಕೆ ಒಳಗಾಗಿರುವ ಜನಸಮೂಹವಾಗಿದೆ ಎನ್ನಬಹುದು.

ಆದಿವಾಸಿಗಳು ಬಹಳಷ್ಟು ಸಮಸ್ಯೆಗಳಿಂದ ಕೂಡಿದ್ದು ಅವರ ಏಳಿಗೆಯನ್ನು ಮಾಡುವುದು ಸರಕಾರದ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಜವಾಹರ್‌ಲಾಲ್‌ನೆಹರು ರವರು ಆದಿವಾಸಿಗಳ ಕಲ್ಯಾಣಕ್ಕಾಗಿ ಬಹಳಷ್ಟು ಶ್ರಮಪಟ್ಟವರಲ್ಲಿ ಒಬ್ಬರು ಎನ್ನಬಹುದು. ಇವರು ಆದಿವಾಸಿಗಳ ಸಮಸ್ಯೆಗಳಿಗೆ ಸ್ಪಂದಿಸಿ ಸುಧಾರಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಹೇಳಬಹುದು. ಆದಿವಾಸಿಗಳ ಏಳಿಗೆಗಾಗಿ, ಕಲ್ಯಾಣಕ್ಕಾಗಿ ಜವಾಹರ್‌ಲಾಲ್ ನೆಹರುರವರು ಜಾರಿಗೆ ತಂದಿರುವ ೫ ತತ್ವಗಳನ್ನು ಆದಿವಾಸಿ ಪಂಚಶೀಲ ಎನ್ನಬಹುದು.

ಆದಿವಾಸಿ ಪಂಚಶೀಲ ತತ್ವದಲ್ಲಿ ಜವಾಹರ್‌ಲಾಲ್ ನೆಹರೂರವರು ನೀಡಿರುವ ತತ್ವಗಳೆಂದರೆ.

೧) ಆದಿವಾಸಿಗಳನ್ನು ಅಭಿವೃದ್ದಿ ಪಡಿಸಲೆಂದು ನಾವು ಒತ್ತಾಯದಿಂದ ಅವರ ಮೇಲೆ ಏನನ್ನು ಹೇರಕೂಡದು.

೨) ಅವರನ್ನು ಅವರಷ್ಟಕ್ಕೆ ಬಿಟ್ಟು ಬಿಡಬಾರದು. ಅವರ ಅಭಿವೃದ್ಧಿಯನ್ನು ಮಾಡಬೇಕು.

೩.) ಅವರ ಅಭಿವೃದ್ಧಿಗೆ ಒಂದು ಸುವರ್ಣ ಮಾಧ್ಯಮ ಸೂತ್ರವನ್ನು ಕಂಡುಕೊಳ್ಳಬೇಕಿದೆ.

೪) ಆದಿವಾಸಿಗಳ ಸಂಸ್ಕೃತಿಗೆ ಯಾವುದೇ ರೀತಿಯಲ್ಲಿ ತೊಂದರೆ ಬಾರದೇ ಇರುವ ಹಾಗೆ ಅವರ ಅಭಿವೃದ್ಧಿಯಾಗಬೇಕಾಗಿದೆ.

೫) ಒಮ್ಮಿಂದೊಮ್ಮೆಲೇ ಸುಧಾರಣೆಯಾಗಬೇಕೆಂದು ಬಯಸಿ ಅವರ ತಾಣಗಳಿಗೆ ಹೆಚ್ಚಿನ ಪ್ರಯಾಣದ ತರಬೇತುದಾರರನ್ನು ನಿಯೋಜಿಸಬಾರದು.

ಆದಿವಾಸಿಗಳು ಅಭಿವೃದ್ಧಿಹೊಂದಬೇಕು. ಆದರೆ ಅವರ ಸಂಸ್ಕೃತಿ ಮತ್ತು ಪಾರಂಪರಿಕ ಮೌಲ್ಯಗಳು ಉಳಿಯಬೇಕು ಇದು ನಕಾರಾತ್ಮಕವಾಗಿ ಕಂಡರೂ ನೆಹರುರವರ ಪಂಚಶೀಲ ತತ್ವದಲ್ಲಿ ಆದಿವಾಸಿಗಳ ಸಂಸ್ಕೃತಿ, ಕಲೆ ಉಳಿಸಿಕೊಳ್ಳಬೇಕೆಂದರೆ ಅವರ ಸಂಸ್ಕೃತಿಯನ್ನು ಕಾಪಾಡುವ ಅವರ ಪಾರಂಪರಿಕ ಉತ್ಪಾದನಾ ಮೂಲಗಳನ್ನು ಗೌರವಿಸುವ ಯಾವ ಆಧುನಿಕ ಆಯಾಮಗಳು ಇವರ ಮೇಲೆ ಅಡ್ಡ ಪರಿಣಾಮ ಬೀರದಿರುವಂತೆ ಎಚ್ಚರವಹಿಸುವ ಒಂದು ಬಗೆಯ ರಕ್ಷಣಾತ್ಮಕ ಮನೋಭಾವ ಪಂಚಶೀಲ ತತ್ವಗಳಲ್ಲಿ ಅಡಗಿದೆ.

ಆದಿವಾಸಿಗಳ ಜೀವನದ ಬಗ್ಗೆ ಸುದಾರಣೆಯ ಬಗ್ಗೆ ಕನಸು ಕಾಣುತ್ತಾ ಆದಿವಾಸಿಗಳ ಏಳಿಗೆಗಾಗಿ ಬಹಳಷ್ಟು ಶ್ರಮಪಟ್ಟಿದ್ದಾರೆ ಎಂದು ಹೇಳಬಹುದು. ಆದಿವಾಸಿಗಳ ಅಭಿವೃದ್ಧಿಯೇ ನೆಹರೂರವರ ಗುರಿಯಾಗಿತ್ತು.

ನೇಫಾದ ತತ್ವಜ್ಞಾನಿ :

ವೆರಿಯರ್ ಎಲ್ವಿನ್ ಭಾರತಕ್ಕೆ ಹೊರದೇಶದಿಂದ ಬಂದವರು. ಭಾರತಕ್ಕೆ ಪಾದ್ರಿಯಾಗಲು ಬಂದ ಇವರು ಭಾರತದಲ್ಲಿ ಕಂಡು ಬಂದ ಆದಿವಾಸಿಗಳ ಬಗ್ಗೆ ಕಾಳಜಿವಹಿಸಿ ಅವರ ಸಮಸ್ಯೆಗಳಿಗೆ ಸ್ಪಂದಿಸಿದವರು. ಇವರು ಭಾರತಕ್ಕೆ ಬಂದು ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡು ಪಾದ್ರಿಯ ಕೆಲಸಕ್ಕೆ ಶರಣು ಹೊಡೆದು ಆದಿವಾಸಿಗಳ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ಪ್ರಯತ್ನಿಸಿದ್ದಾರೆ. ಆರಂಭದಲ್ಲಿ ಎಲ್ವಿನ್‌ರವರ ಗಮನವನ್ನು ಬಸ್ತಾರ್ ಪ್ರದೇಶದ ಆದಿವಾಸಿಗಳ ಕಡೆಗೆ ಸೆಳೆದವರು ಈ ದೇಶದ ಒಬ್ಬ ಬಂಡವಾಳಶಾಹಿ, ಉದ್ಯಮಿ ಆಗಿದ್ದ ಜಮ್ನಾಲಾಲ್ ಬಜಾಜ್ ದಟ್ಟವಾದ ಕಾಡಿಗೆ ಸ್ವತಃ ಪ್ರವೇಶಿಸಿ ಆದಿವಾಸಿಗಳ ಮಧ್ಯೆ ಜೀವಿಸುತ್ತಿದ್ದರು. ತಮ್ಮ ಅಂತ್ಯದವರೆಗೂ ಆದಿವಾಸಿಗಳ ಜೊತೆಗೆ ಆದಿವಾಸಿಯಾಗಿದ್ದುಕೊಂಡೇ ಅವರ ಸೇವೆ ಮಾಡಿದರು. ನೆಹರುರವರ ಸ್ನೇಹ ಸಂಪಾದಿಸಿ ಬುಡಕಟ್ಟುಗಳ ಅದ್ಭುತ ಜಗತ್ತಿನ ಕಡೆ ಗಮನ ಹರಿಸಿ ಕಾರ್ಯಕ್ರಮ ರೂಪಿಸುವಂತೆ ಪ್ರೇರೇಪಿಸಿದರು.

ಇವರಿಂದ ಪ್ರಭಾವಿತರಾದ ನೆಹರೂರವರು ಆದಿವಾಸಿಗಳ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡರು. ಇವರ ಆದಿವಾಸಿ ಪಂಚಶೀಲ ತತ್ವಗಳ ಹಿಂದೆ ಎಲ್ವಿನ್ನರ ಪ್ರಭಾವವು ಬಹಳಷ್ಟಿದೆ ಎಂದು ಹೇಳಬಹುದು. ಎಲ್ವಿನ್‌ರು ಆದಿವಾಸಿಗಳ ದುಃಖ ದುಃಮ್ಮಾನಗಳ ಭಾಗವಾಗಿಯೇ ಬೆಳೆದರು. ಆದಿವಾಸಿಗಳ ಏಳಿಗಾಗಿ ಶ್ರಮಿಸಿದರು. ಆದಿವಾಸಿಗಳನ್ನು ಅಂತಃಕರಣದ ಮೂಲಕ ನೋಡಬೇಕು ನಾಗರಿಕ ಅಹಂನ್ನು ಪ್ರದರ್ಶಿಸದೇ ಪ್ರೇಮದ ಮೂಲಕ ಮತ್ತು ಆದಿವಾಸಿಗಳ ಜೊತೆ ಅನುಸಂಧಾನದ ಮೂಲಕ ನೋಡಬೇಕು. ಅವರ ಅಭಿವೃದ್ಧಿ ನಮ್ಮೆಲ್ಲರ ಹೊಣೆ ಎಂಬುವುದು ಇವರ ನಿಲುವಾಗಿತ್ತು.

ಆದಿವಾಸಿಗಳ ಆರ್ಥಿಕ ಅಭಿವೃದ್ಧಿ :

ಆದಿವಾಸಿಗಳ ಬಗ್ಗೆ ಅವರ ಸಮಸ್ಯೆಗಳ ಬಗ್ಗೆ ಕಾಳಜಿ ವಹಿಸಿದವರಲ್ಲಿ ಹೈಮನ್ ಡಾರ್ಫ್ ಪ್ರಮುಖರು. ಇವರು ಯುನಿವರ್ಸಿಟಿ ಆಫ್ ಲಂಡನ್‌ನಲ್ಲಿ ಏಶಿಯನ್ ಆಂಥೋಪಾಲಜಿ ವಿಭಾಗದ ಮುಖ್ಯಸ್ಥರಾಗಿದ್ದರು.

ವಿವಿಧ ದೇಶಗಳಲ್ಲಿ ಪ್ರಾರಂಭವಾದ ಮಾನವ ಶಾಸ್ತ್ರದ ಅಧ್ಯಯನಗಳಿಂದ ಸ್ಫೂರ್ತಿಗೊಂಡು ಪ್ರಭಾವಿತರಾಗಿ ಡಾಕ್ಟರೇಟ್ ಪದವಿಯನ್ನು ಮಾನವಶಾಸ್ತ್ರದಲ್ಲಿ ಪಡೆದರು.

ಮೊದಲು ಇವರು ನೇಪಾಳದ ಗುಡ್ಡಗಾಡುಗಳಲ್ಲಿನ ಆದಿವಾಸಿಗಳನ್ನು ಅಧ್ಯಯನ ಮಾಡಿದರು. ನಂತರ ಆಂಧ್ರಪ್ರದೇಶದ ಉತ್ತರ ಭಾಗದ ಹಲವು ಜಿಲ್ಲೆಗಳಲ್ಲಿಯೂ ಆದಿವಾಸಿಗಳ ಕುರಿತಾಗಿ ಮಾಹಿತಿ ಸಂಗ್ರಹಿಸಿದರು. ಕಾಡು ಪ್ರದೇಶಗಳಲ್ಲಿ ವಾಸಿಸುತ್ತಿರುವ ಚೆಂಚು, ಕೊಂಡಾರೆಡ್ಡಿ, ಕೊಲಾಮ್ ಸಮುದಾಯಗಳನ್ನು ಅಧ್ಯಯನ ಮಾಡಿ ಅವರ ಜೊತೆ ಒಡನಾಡಿಗಳಾಗಿ ದಿನಗಳನ್ನು ಕಳೆದಿದ್ದಾರೆ. ಹೈಮನ್‌ಡಾರ್ಫ್‌ರವರು ಭಾರತದ ಆದಿವಾಸಿಗಳ ಜೊತೆ ಸುದೀರ್ಘ ಬದುಕನ್ನು ಕಳೆದವರು. ಅವರು ಭಾರತದ ಆದಿವಾಸಿಗಳ ಮೇಲೆ ಎಷ್ಟೊಂದು ಪ್ರಭಾವಿತರಾಗಿದ್ದರೆಂದರೆ ಅವರು ತಮ್ಮ ಆತ್ಮಚರಿತ್ರೆಗೆ Life among Indian tribes ಎಂದೇ ಶೀರ್ಷಿಕೆ ಕೊಟ್ಟಿದ್ದಾರೆ.

ಆದಿವಾಸಿಗಳ ಮುಖ್ಯ ಕಸುಬು ವ್ಯವಸಾಯ. ಇದು ವಂಶಪಾರಂಪರ್ಯವಾಗಿ ಬೆಳೆದು ಬಂದ ಉದ್ಯೋಗ ಇವರು ಗುಡ್ಡಗಾಡುಗಳಲ್ಲಿ ವಾಸಿಸುತ್ತಿದ್ದು ಬಾಹ್ಯ ಪ್ರಪಂಚದಿಂದ ದೂರವಿರುತ್ತಿದ್ದರು. ಪ್ರಾಣಿ ಸಾಕುವುದು, ಧಾನ್ಯಗಳನ್ನು ಬೆಳೆಯುವುದು ಮುಂತಾದವುಗಳನ್ನು ಬೆಳೆದು ತಮ್ಮ ಜೀವನವನ್ನು ಸಾಗಿಸುತ್ತಿದ್ದರು.

ಅಲ್ಲದೇ ಇವರಲ್ಲಿ ವಿವಿಧ ಜನಾಂಗೀಯ ಮೂಲಗಳನ್ನು ಗುರುತಿಸಬಹುದು. ಇವರೆಂದರೆ ಗೊಂಡರು, ಕೋಲಮ್, ಕೊಂಡಾರೆಡ್ಡಿ, ಕೊಯಾಗಳು ಇತ್ಯಾದಿ ಇವರು ಕೃಷಿಯನ್ನು ಬಹಳ ಉತ್ತಮವಾಗಿ ನಿರ್ವಹಿಸುತ್ತಿದ್ದು ವಾಣಿಜ್ಯ ಬೆಳೆಗಳನ್ನು ಬೆಳೆಸುತ್ತಿದ್ದರು. ಬುಡಕಟ್ಟು ಸಮುದಾಯಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಸಮುದಾಯವಾಗಿದೆ. ಅವರು ಮುಖ್ಯವಾಹಿನಿಯಿಂದ ವಂಚಿತರಾಗಿದ್ದ ಸಮುದಾಯ, ಇವರ ಕುಟುಂಬಗಳು ಬಹಳಷ್ಟು ಚಿಂತಾಜನಕ ಸ್ಥಿತಿಯಲ್ಲಿದ್ದವು ಶಿಕ್ಷಣದ ಜ್ಞಾನದಿಂದ ವಂಚಿತರಾಗಿ ಆದಿ ಮಾನವರಾಗಿ ಜೀವನ ಸಾಗಿಸುತ್ತಿದ್ದರು. ಮೂಲಭೂತ ಸೌಕರ್ಯಗಳಂತೂ ಇವರಲ್ಲಿ ಇರಲಿಲ್ಲ. ಇದೊಂದು ಸಮಾಜದಲ್ಲಿ ತುಳಿತಕ್ಕೆ ಒಳಗಾದ ಸಮೂಹ ಎನ್ನಬಹುದು.

ಈ ನಿಟ್ಟಿನಲ್ಲಿ ಸರಕಾರ ದೊಡ್ಡ ಮೊತ್ತದ ನಿಧಿಯನ್ನು ಬುಡಕಟ್ಟಿನ ಶ್ರೇಯಸ್ಸಿಗಾಗಿ ವಿನಿಯೋಗಿಸಿದರೆ ಸಾಧನೆಯ ದೃಷ್ಟಿಯಿಂದ ಅದು ಬಹಳ ಕಡಿಮೆ. ಯಾಕೆಂದರೆ ಅದೆಷ್ಟು ಮಟ್ಟಿಗೆ ಆದಿವಾಸಿಗಳಿಗೆ ತಲುಪಿದೆ ಎಂದು ಹೇಳಲು ಸಾಧ್ಯವಿಲ್ಲ. ಆದರೆ ಬಾವಿಯ ಅವಕಾಶ, ನೇಗಿಲು, ಎತ್ತುಗಳ ಹಂಚಿಕೆ ನಿಜವಾಗಿಯೂ ಲಾಭದಾಯಕ ಎಂದು ಹೇಳಬಹುದು.

ಆದಿವಾಸಿಗಳ ಅಭಿವೃದ್ಧಿಗಾಗಿ ಅನೇಕ ಸಮಾಜಶಾಸ್ತ್ರಜ್ಞರು ಬುದ್ಧಿಜೀವಿಗಳು. ಸರಕಾರ ಮುಂತಾದ ಸಂಘ ಸಂಸ್ಥೆಗಳು ಕೆಲಸ ಮಾಡಿರುವುದು ಪ್ರಶಂಸನಾರ್ಹ. ದೇಶ ವಿದೇಶಗಳಲ್ಲಿರುವ ಆದಿವಾಸಿಗಳ ಸಂಖ್ಯೆ ಈಗ ಬಹಳ ಕಡಿಮೆಯಾಗುತ್ತಿದೆ. ಸಂಸ್ಕೃತಿ ನಾಶವಾಗುತ್ತಿದೆ. ಸರಕಾರದ ಕೆಲವೊಂದು ನಿಲುವುಗಳಿಂದ ಆದಿವಾಸಿಗಳ ಸಂಸ್ಕೃತಿ ವಿನಾಶದತ್ತ ಹೋಗುತ್ತಿದ್ದು ದಟ್ಟವಾದ ಕಾಡುಗಳ ನಾಶ, ಕೈಗಾರಿಕೆಗಳ ಪ್ರಭಾವ,

ಕೃಷಿಯ ಹಿನ್ನಡೆ ಇವು ಆದಿವಾಸಿಗಳ ಬೆಳವಣಿಗೆಗೆ ತೊಡಕಾಗಿರುವ ಅಂಶಗಳಾಗಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಬುಡಕಟ್ಟುಗಳ ಅಭಿವೃದ್ಧಿ : (ಮಹಾಶ್ವೇತಾದೇವಿಯವರ ಚಿಂತನೆಗಳು)

ಮಹಾಶ್ವೇತಾದೇವಿ ಒಬ್ಬ ಸೃಜನಶೀಲ ಲೇಖಕಿಯಾಗಿ ಹೆಚ್ಚು ಪರಿಚಿತರು. ಮಹಾಶ್ವೇತಾದೇವಿಯವರು ಆದಿವಾಸಿಗಳ ಪ್ರಾಂಜಲ ಜಗತ್ತಿನ ಪ್ರೇಮ ಮತ್ತು ದುರಂತಗಳನ್ನು ಮುಗ್ಧತೆ ಮತ್ತು ಹೀನಾಯ ಶೋಷಣೆಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರೀಕರಿಸಿದ್ದಾರೆ.

ಆದಿವಾಸಿಗಳು ಒಂದು ಅಲಕ್ಷಿತ ಸಮಾಜ, ಈ ಜಗತ್ತಿನ ಮೇಲೆ ಮುಖ್ಯವಾಹಿನಿ ನಡೆಸುವ ಆಕ್ರಮಣ ಬಹಳ ಹೀನಾಯವಾದದ್ದು. ಮಹಾಶ್ವೇತಾ ದೇವಿಯವರು ನಾಲ್ಕೈದು ಶತಮಾನ ಕಾಲ ಆದಿವಾಸಿಗಳ ನಿರಂತರ ಸಂಪರ್ಕದಲ್ಲಿದ್ದು ನಿತ್ಯದ ಕಷ್ಟ ಸುಖಗಳಲ್ಲಿ ಪಾಲ್ಗೊಂಡು ಅವರ ಅನೇಕ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದು ಸರಕಾರವನ್ನು ಎಚ್ಚರಿಸಿದವರು.

ಆದಿವಾಸಿಗಳ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ನೀಡಿದವರು. ಸರಕಾರದ ಕೆಲವೊಂದು ನೀತಿಗಳಿಂದ ಇಂದಿನ ಹಳ್ಳಿಗಳು, ಗ್ರಾಮಗಳು ಸಾಯುತ್ತಿವೆ ಸತ್ತು ಹೋಗುತ್ತಿರುವ ಹಳ್ಳಿಗಳ ಅಂಚಿನ ಸಮುದಾಯಗಳ ಆದಿವಾಸಿಗಳ ದುಃಸ್ಥಿತಿಗೆ ಕಾರಣವಾಗಿದೆ ಎಂದು ಹೇಳಬಹುದು.

ಕೈಗಾರಿಕೀಕರಣ, ನಗರೀಕರಣಗಳಿಂದಾಗಿ ಇಂದಿನ ಸಮಾಜ ಬದಲಾಗುತ್ತಿದೆ. ಆದರೆ ಆಧುನಿಕ ಉತ್ಪಾದನಾ ವಿಧಾನಗಳು, ಆದಿವಾಸಿಗಳ ಜೀವನದ ಮೇಲೆ ಬಹಳ ಪ್ರಭಾವವನ್ನು ಬೀರುತ್ತಿದೆ. ಗ್ರಾಮಗಳ ಪಾರಂಪರಿಕ ಉತ್ಪಾದನಾ ಘಟಕಗಳ ಮೇಲೂ ಬಹಳಷ್ಟು ಕೆಟ್ಟ ಪರಿಣಾಮಗಳನ್ನು ಬೀರುತ್ತಿದೆ. ಇವುಗಳಿಂದಾಗಿ ದೇಶದ ಪರಿಸರ, ಕಾಡು, ಗ್ರಾಮ ಆದಿವಾಸಿಗಳಂತಹ ಅಮಾಯಕ ಜೀವ ಸಂಕುಲಗಳ ಮೇಲೆ ಮಾರಣಾಂತಿಕ ಹಲ್ಲೆ ನಡೆಯುತ್ತಿದೆ. ಈ ಜಾಗತಿಕ ಬಿರುಗಾಳಿಗೆ ಸಿಲುಕುತ್ತಿರುವ ಈ ಹಿಂದುಳಿದ ಸಮುದಾಯವನ್ನು ನಾಶಮಾಡುತ್ತಿದೆ. ಹಳ್ಳಿಗಳ ಜೀವನ ಪದ್ಧತಿ, ಸಂಸ್ಕೃತಿಗಳೆಲ್ಲವೂ ಮೆಲ್ಲನೆ ನಾಶವಾಗುತ್ತಿದೆ. ದೇಶಕ್ಕೆ ಅನ್ನ ನೀಡುವ ಭೂತಾಯಿಯ ಒಡಲು ತುಂಬಾ ಟಾಟಾ ಬಿರ್ಲದ ಸಿಮೆಂಟ್ ಕಾರ್ಖಾನೆಗಳ ಧೂಳು ತುಂಬಿವೆ. ದುಡಿಯುವ ವರ್ಗ ಶೋಚನೀಯ ಸ್ಥಿತಿಯಲ್ಲಿದೆ. ಬಿಹಾರ, ಚತ್ತೀಸ್‌ಗಡ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಹಲವು ಕಾರ್ಖಾನೆಗಳು ಆದಿವಾಸಿಗಳ ಜೀವನಕ್ಕೆ ಸವಾಲಾಗಿದೆ.

ಸರಕಾರವು ಈ ನಿಟ್ಟಿನಲ್ಲಿ ಅನೇಕ ಕಾನೂನು ಬದ್ಧವಾದ ಯೋಜನೆಗಳನ್ನು ಹಮ್ಮಿಕೊಂಡಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಬುಡಕಟ್ಟುಗಳನ್ನು ಸಬಲೀಕರಿಸಬೇಕೆಂಬ ಉದ್ದೇಶ ಸರಕಾರದ ಯೋಜನೆಗಳಿಗೆ ಸಹಜವಾಗಿಯೇ ಇದೆ. ಸರಕಾರದ ಯೋಜನೆಗಳಿಂದ ಸಮುದಾಯವು ಅನೇಕ

ರೋಧನೆಗಳಿಗೂ ಒಳಗಾಗುತ್ತವೆ. ಮುಖ್ಯವಾಗಿ ಅವರ ಸ್ಥಳಾಂತರ. ಇದರಿಂದಾಗಿ ಇವರು ಮಾನಸಿಕವಾಗಿ ನೋವನ್ನು ಅನುಭವಿಸುವರು. ಫಲಕಾರಿ ಯೋಜನೆಗಳನ್ನು ಸರಕಾರ ಜಾರಿಗೆ ತಂದರು. ಅದರ ಕುರಿತಾಗಿ ಆದಿವಾಸಿಗಳಿಗೆ ಕಿಂಚಿತ್ತೂ ಅರಿವಿಲ್ಲದಿರುವುದು ದುರಂತವೆಂದೇ ಹೇಳಬಹುದು. ಈ ನಿಟ್ಟಿನಲ್ಲಿ ಆದಿವಾಸಿಗಳ ಅಭಿವೃದ್ಧಿ ಎಂಬುವುದು ಅಭಿವೃದ್ಧಿಯನ್ನು ಕಾಣದೆ ಹಿಂದೆ ಬೀಳುತ್ತಿದೆ ಎಂದು ಹೇಳಿದರೂ ತಪ್ಪಾಗಲಾರದು. ಭಾರತದಲ್ಲಿ ಆದಿವಾಸಿಗಳು ಅನಾದಿಕಾಲದಿಂದ ಎಲ್ಲ ಬಗೆಯ ಸಾಮಾಜಿಕ, ಆರ್ಥಿಕ, ವಂಚನೆಗಳನ್ನು ಸಹಿಸಿಕೊಂಡು ಬಂದಿದ್ದಾರೆ. ಮುಖ್ಯವಾಹಿನಿಯ ಜನರು ಇವರನ್ನು ಅಸ್ಪರ್ಶರಂತೆ ಕಾಣುತ್ತಿದ್ದಾರೆ. ಸರಕಾರ ಪಂಚವಾರ್ಷಿಕ ಯೋಜನೆಗಳ ಮೂಲಕ ಆದಿವಾಸಿಗಳ ಏಳಿಗೆಗಾಗಿ ಪ್ರಯತ್ನಗಳನ್ನು ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಿದ್ದರು ಅದು ಆದಿವಾಸಿಗಳಿಗೆ ತಲುಪುತ್ತಿಲ್ಲ. ಯೋಜನೆಗಳು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ ಎಂದು ತಿಳಿದು ಬರುತ್ತಿರುವ ಸತ್ಯ. ಆದಿವಾಸಿಗಳ ಅಭಿವೃದ್ಧಿಗಾಗಿ ನಾನಾ ಪ್ರಯತ್ನಗಳನ್ನು ಮಾಡಬಹುದು, ಪರಿಣಾಮಕಾರಿ ಯೋಜನೆಗಳನ್ನು ಕೈಗೊಳ್ಳಬೇಕು, ಸಮೀಕ್ಷೆಗಳನ್ನು ನಡೆಸಬೇಕು, ನಿರ್ದಿಷ್ಟ ಯೋಜನೆಗೆ ಮೀಸಲಿರಿಸುವ ಹಣ ದುರುಪಯೋಗವಾಗದೇ ಇರುವ ಹಾಗೆ ಎಚ್ಚರ ವಹಿಸಬೇಕು. ಆದಿವಾಸಿಗಳ ಮೂಲಭೂತ ಅಗತ್ಯಗಳನ್ನು ಪೂರೈಸುವಂತಹ ರಚನಾತ್ಮಕ ಯೋಜನೆಗಳು ರೂಪಿತವಾಗಬೇಕು. ಆದಿವಾಸಿ ಪ್ರದೇಶಗಳ ಮೇಲೆ ಅವರಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಒದಗಿಸಿಕೊಡಬೇಕು ಸರಕಾರಿ ಅಧಿಕಾರಿಗಳು, ಪೋಲಿಸರು, ಅರಣ್ಯಾಧಿಕಾರಿಗಳ ಯಾವುದೇ ವರ್ಚಸ್ಸು ಅವರ ಮೇಲೆ ಬೀರದಂತೆ ಗಮನಹರಿಸಬೇಕು.

ಆದಿವಾಸಿಗಳ ಜೀವನದ ರೀತಿ ನೀತಿ, ಸಂಪ್ರದಾಯ, ಸಂಸ್ಕೃತಿಗಳಲ್ಲಿ ಸರಕಾರವಾಗಲಿ ಅಥವಾ ಇತರ ಯಾವುದೇ ಶಕ್ತಿಯೂ ಹಸ್ತಕ್ಷೇಪ ಮಾಡಬಾರದು.

ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು, ನಿರ್ಲಕ್ಷ್ಯ ಮತ್ತು ಉದಾಸೀನತೆಯ ಕಾರಣದಿಂದ ಸರಕಾರದ ಹಣ ಪೋಲಾಗುತ್ತದೆ. ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಬೇಕು.

೫.೫ : ಸಾಂಸ್ಕೃತಿಕ ಅನನ್ಯತೆ :

ಮಲೆಕುಡಿಯರು ಇತರ ಸಂಸ್ಕೃತಿಯ ಜನರ ಪರಿಚಯವಾಗುವ ಮೊದಲು ಅವರದ್ದೇ ಆದ ಒಂದು ಸಂಸ್ಕೃತಿಯನ್ನು ರೂಪಿಸಿಕೊಂಡಿದ್ದಾರೆ. ಆದರೆ ಆ ಸಂಸ್ಕೃತಿ ಅವರಲ್ಲಿ ಈಗ ಇಲ್ಲ. ಯಾಕೆಂದರೆ ಅವರು ಇತರ ಜನಾಂಗಗಳ ಜತೆ ಬೆರೆತಾಗ ಆ ಜನಾಂಗಗಳ ಆಚಾರ ವಿಚಾರಗಳು ಮಲೆಕುಡಿಯರ ಆಚಾರ ವಿಚಾರಗಳ ಮೇಲೆ ಪ್ರಭಾವವನ್ನು ಬೀರಿವೆ. ಇಂದು ನಮಗೆ ಸಿಗುವ ಮಲೆಕುಡಿಯರ ಜೀವನಾವರ್ತನದ ಆಚರಣೆಗಳು ಬದಲಾದ ಸಂಸ್ಕೃತಿಯ ಆಚರಣೆಗಳಂತೆ ಕಾಣುತ್ತದೆ. ಮಲೆಕುಡಿಯರಲ್ಲಿರುವ ಜೀವನಾವರ್ತನದ ಆಚರಣೆಗಳಾದ ಹುಟ್ಟು, ಹೆಣ್ಣು ಋತುಮತಿಯಾಗುವುದು, ಸೀಮಂತ, ಮದುವೆ, ಉತ್ತರ ಕ್ರಿಯೆ, ಮತ್ತು ವಾರ್ಷಿಕ ಆಚರಣೆಗಳಾದ ಆಟಿಅಮಾವಾಸ್ಯೆ, ಕೆಡ್ಡಸ, ಕಾವೇರಿ ಸಂಕ್ರಮಣ,

ದೀಪಾವಳಿ ಮತ್ತು ಮಕ್ಕಳ ಹುಣ್ಣಿಮೆ ಹಾಗೆಯೇ ಮಲೆಕುಡಿಯರಲ್ಲಿರುವ ಭಾಷೆ ಮತ್ತು ಸಾಹಿತ್ಯವನ್ನು ಗಮನಿಸಿದಾಗ ಈ ಎಲ್ಲಾ ವಿಚಾರದಲ್ಲಿ ಅನ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದರೂ, ಇದು ತನ್ನ ಸಾಂಸ್ಕೃತಿಕ ಅನನ್ಯತೆಯನ್ನು ಕಂಡುಕೊಂಡಿದೆ.

ಇತರ ಜನಾಂಗಗಳಂತೆ ಮಲೆಕುಡಿಯರು ಕೂಡ ವಿಶಿಷ್ಟವಾದ ಜೀವನ ಕ್ರಮವನ್ನು ರೂಪಿಸಿಕೊಂಡಿದ್ದರು. ನಿಸರ್ಗವೇ ಅವರ ಬದುಕನ್ನು ರೂಪಿಸಿತ್ತು. ಅವರಲ್ಲಿರುವ ಸಾಂಸ್ಕೃತಿಕ ಅನನ್ಯತೆಯನ್ನು ಈ ರೀತಿಯಲ್ಲಿ ಗುರುತಿಸಬಹುದು.

೧. ಆರಂಭದ ದಿನಗಳಲ್ಲಿ ಕುಮೇರಿ ಬೆಳೆಯ ಬೇಸಾಯ

೨. ಗುಹೆಗಳಲ್ಲಿ ವಾಸ

೩. ಕಾಡುತ್ಪತ್ತಿಗಳಾದ ಏಲಕ್ಕಿ, ಸೀಗೆಗಳ ಸಂಗ್ರಹ.

೪. ತಾಳೆಯ ಹಿಟ್ಟಿನಿಂದ ಅಂಬಲಿ ತಯಾರಿ

೫. ಬಯನಿ ಮರದ ಹೆಂಡ

೬. ಮಲೆಕುಡಿಯ ಹೆಂಗಸರು ಸೊಂಟ, ಎದೆ, ಬೆನ್ನು ಮುಚ್ಚುವಂತೆ 'ಗೇಂಟಿ' ವಸ್ತ್ರದ ಉಡುಗೆ.

೭. ಬರುವೆ, ನೆರೆ, ಕಬಲೆ, ಕರುವೊಳು ಮುಂತಾದ ಗೆಡ್ಡೆ ಗೆಣಸುಗಳನ್ನು ಆಹಾರಗಳನ್ನಾಗಿ ಸಂಗ್ರಹಿಸುತ್ತಿದ್ದರು.

೮. ಹಂದಿ, ಕಡವೆ, ಕಾಡುಕೋಳಿ, ಮೊಲ ಮುಂತಾದ ಪ್ರಾಣಿಗಳ ಬೇಟೆಯಾಡುತ್ತಿರುವುದು.

೯. ಕರಕುಶಲ ಕಲೆಗಳಾದ ಕೋಳಿ ಮುಚ್ಚುವ ಕೂಟಾಯಿ, ತರಗೆಲೆ ತರುವ ಕುರ್ಕಿಲ್ ಮುಂತಾದ ಅನೇಕ ರೀತಿಯ ವಸ್ತುಗಳನ್ನು ಬೆತ್ತದಿಂದ ತಯಾರಿಸುತ್ತಿದ್ದರು.

೧೦. ಬೇಟೆ, ಜೇನು ಸಂಗ್ರಹದ ಸಂದರ್ಭದಲ್ಲಿ ಗಂಡಸರ ಸೊಂಟದಲ್ಲಿ 'ಒಡಂಕ್' ಮತ್ತು ಅದಕ್ಕೆ ಸಿಕ್ಕಿಸುವ ಕತ್ತಿಯ ಬಳಕೆ.

೧೧. ದೀಪ ಉರಿಸಲು ಹೊನ್ನೆ, ನಾಣಿಲು ಮರದ ಕಾಯಿಗಳ ಎಣ್ಣೆಗಳನ್ನು ಬಳಸುವುದು.

೧೨. ಸೋರೆಬುರುಡೆಯಿಂದ 'ಮಾವೋರಿ' ಮತ್ತು 'ಈರಾನೋ' ಎಂಬ ಚರ್ಮವಾದ್ಯದ ಬಳಕೆ ಮಲೆಕುಡಿಯರಲ್ಲಿದೆ.

***

ಅಧ್ಯಾಯ ೬

ಈ ಅಧ್ಯಯನದಿಂದ ಕಂಡುಕೊಂಡ ವಿಶಿಷ್ಟ ಅಂಶಗಳು

ಅಧ್ಯಾಯ : ೬

ಈ ಅಧ್ಯಯನದಿಂದ ಕಂಡುಕೊಂಡ ವಿಶಿಷ್ಟ ಅಂಶಗಳು

ಮಲೆಕುಡಿಯರು ಸ್ವಾತಂತ್ರ್ಯಪೂರ್ವದಲ್ಲಿಯೇ ಮಲೆಗಳಲ್ಲಿ ವಾಸವಾಗಿದ್ದರು. ಆದರೆ ಕೆಲವು ಮಲೆಕುಡಿಯರು ಬೇರೆ ಬೇರೆ ಕಾರಣಗಳಿಂದ ಮಲೆಗಳನ್ನು ಬಿಟ್ಟು ನಾಡಿನಲ್ಲಿ ವಾಸವಾಗಿರುವುದು ಕಂಡುಬರುತ್ತದೆ. ಆದರೆ ಕೆಲವು ಕುಟುಂಬಗಳು ಇವತ್ತಿಗೂ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳಿಲ್ಲದೆ ಮಲೆಗಳಲ್ಲಿ ವಾಸವಾಗಿದ್ದಾವೆ. ಅವರು ಇಷ್ಟು ವರ್ಷಗಳ ಕಾಲ ಇಲ್ಲಿ ಜೀವಿಸಿದ್ದರೂ ಆರ್ಥಿಕವಾಗಿ ಇವರು ಸ್ವಾವಲಂಬಿಗಳಾಗಿಲ್ಲ. ಸಾಮಾಜಿಕ ಸ್ಥಾನಮಾನಗಳನ್ನಾಗಲೀ ರಾಜಕೀಯ ಪ್ರಾಮುಖ್ಯತೆಯನ್ನು ಶಿಕ್ಷಣದಲ್ಲಿ ಮೇಲ್ಮಟ್ಟವನ್ನಾಗಲಿ ಗಳಿಸಿರುವುದು ಕಡಿಮೆ. ಈ ರೀತಿಯ ಮಲೆಕುಡಿಯರಲ್ಲಿ ವಿದ್ಯಾವಂತರೂ ಕಡಿಮೆಯಾದ್ದರಿಂದ ತಮ್ಮ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲಾಗಿಲ್ಲ. ಸರ್ಕಾರ ಕೊಟ್ಟಿರುವ, ಕೊಡುತ್ತಿರುವ ಸೌಲಭ್ಯಗಳನ್ನು ಪಡೆಯುವ ತಿಳುವಳಿಕೆಯವರು ಇವರಲ್ಲಿ ಕಡಿಮೆ.

ಶಿಕ್ಷಣ:

ಮಲೆಕುಡಿಯರ ಹೆಚ್ಚಿನ ಮಕ್ಕಳು ತಮ್ಮ ವಿದ್ಯಾಭ್ಯಾಸವನ್ನು ಆಶ್ರಮ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ದ.ಕ.ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಗಿರಿಜನರ ಆಶ್ರಮ ಶಾಲೆಗಳಿವೆ. ಉದಾಹರಣೆಗೆ ಬೆಳ್ತಂಗಡಿ ತಾಲೂಕಿನ ಧರ್ಮಸ್ಥಳ ಮತ್ತು ಮುಂಡಾಜೆ ಗ್ರಾಮಗಳಲ್ಲಿ ಪರಿಶಿಷ್ಟ ವರ್ಗದ ಶಾಲೆಗಳಿವೆ. ಧರ್ಮಸ್ಥಳದಲ್ಲಿರುವ ಗಿರಿಜನ ಆಶ್ರಮ ಶಾಲೆಯೊಂದರಲ್ಲಿಯೆ ಸುಮಾರು ೫೦ಕ್ಕೂ ಹೆಚ್ಚು ಮಲೆಕುಡಿಯರ ಮಕ್ಕಳು ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ಇತ್ತೀಚೆಗೆ ಮಲೆಕುಡಿಯರು ಮಕ್ಕಳು ಕಾಲೇಜು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಈಗಿನ ಯುವಕರಲ್ಲಿ ಮೂಢನಂಬಿಕೆ ಕಡಿಮೆಯಾಗಿ ವಿದ್ಯಾಭ್ಯಾಸದ ಮಹತ್ವ ಅರಿವಾಗುತ್ತಿದೆ. ಸರ್ಕಾರ ಕೊಡುವ ನಗದು ಬಹುಮಾನ, ಪುಸ್ತಕ ನಿಧಿ ಅನುಕೂಲ, ವಿದ್ಯಾರ್ಥಿವೇತನವನ್ನು ಇವರು ಪಡೆದುಕೊಳ್ಳುತ್ತಿದ್ದಾರೆ.

ಉದ್ಯೋಗ:

ಮಲೆಕುಡಿಯರು ಮಾಡಿಕೊಂಡು ಬರುತ್ತಿರುವುದು ತಮ್ಮ ಹಿಂದಿನ ಕಸುಬಾದ ಬುಟ್ಟಿ ತಯಾರಿ ಮತ್ತು ಇತರ ಕರಕುಶಲ ಕಲೆಗಳನ್ನು ಮಾಡುವವರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಗೃಹ ಕೈಗಾರಿಕೆಗಾಗಿ ಬ್ಯಾಂಕುಗಳ ಮೂಲಕ ಸಾಲದ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ. ಹಿಂದುಳಿದ ವರ್ಗದವರು ವೃತ್ತಿ ತರಬೇತಿ ಪಡೆದರೆ ಅವರಿಗೆ ಸ್ಟೈಫಂಡ್ ಮತ್ತು ಉದ್ಯೋಗದ ಭರವಸೆ, ಪದವೀಧರರಾದರೆ ಮೀಸಲಾತಿ

ನಿಯಮದಂತೆ ಉದ್ಯೋಗ, ಸ್ವಯಂ ಉದ್ಯೋಗದಲ್ಲಿ ಆಸಕ್ತಿ ಇದ್ದಲ್ಲಿ ಅದಕ್ಕೆ ಸಾಲದ ಸೌಲಭ್ಯ. ಕೆಲಸಗಳಿಗೆ ಆದ್ಯತೆ ಮುಂತಾದ ಅನೇಕ ಸೌಲಭ್ಯಗಳನ್ನು ಪರಿಶಿಷ್ಟವರ್ಗ, ಪಂಗಡ ಮುಂತಾದವರಿಗಾಗಿ ಕಲ್ಪಿಸಲಾಗಿದೆ.

ಮಲೆಕುಡಿಯರು ತಮ್ಮ ಪರಂಪರಾಗತ ಬುಟ್ಟಿ ಮಾಡುವ ಉದ್ಯೋಗವನ್ನೇ ನಂಬಿದವರು. ಹಾಗಾಗಿ ಆ ತಲೆಮಾರಿನಲ್ಲಿ ಆರ್ಥಿಕ ಸ್ವಾವಲಂಬನೆ ಇಲ್ಲದೆ ಬಡತನದ ಮಟ್ಟದಲ್ಲೇ ಇದ್ದಾರೆ. ಆದರೆ ಇತ್ತೀಚಿನ ಯುವಕರು, ಸರ್ಕಾರಿ ಉದ್ಯೋಗಗಳನ್ನು ಪಡೆದುಕೊಂಡಿದ್ದಾರೆ. ವಿದ್ಯಾಭ್ಯಾಸದಲ್ಲಿ ಮುಂದುವರಿದಂತೆ ಆರ್ಥಿಕ ಅಭಿವೃದ್ಧಿಗಾಗಿ ಹೋರಾಡುತ್ತಿದ್ದಾರೆ. ಈಗ ಪೊಲೀಸ್, ಬ್ಯಾಂಕ್, ರಸ್ತೆಸಾರಿಗೆ, ಶಿಕ್ಷಣ ಮುಂತಾದ ಶಾಲೆಗಳಲ್ಲಿ ಸಾಕಷ್ಟು ಯುವಕರು ಕೆಲಸ ಮಾಡಿಕೊಡಿರುತ್ತಾರೆ.

ಗೃಹ ನಿರ್ಮಾಣ:

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಜನರು ತಮ್ಮದಲ್ಲದ ಜಾಗದಲ್ಲಿ (ಸರ್ಕಾರಿ ಸ್ಥಳ) ಮನೆ (ಗುಡಿಸಲು) ಕಟ್ಟಿಕೊಂಡಿದ್ದರೆ ಅದರ ಒಡೆತನದ ಹಕ್ಕನ್ನು ಅವರಿಗೆ ಬಿಟ್ಟುಕೊಡುವ ಕಾರ್ಯವನ್ನು ೧೯೭೯ರಿಂದ ಜಾರಿಗೊಳಿಸಿತು.ಮಲೆಕುಡಿಯರು ನೆಲೆಸಿರುವ ಕಾಲೊನಿಗಳಿಗೆ ಸರ್ಕಾರ ಬಾವಿ ಅಥವಾ ಬೋರ್‌ವೆಲ್ ಸೌಲಭ್ಯ ಹಾಗೂ ಹಂಚಿನ ಮನೆಗಳಿಗೆ ವಿದ್ಯುತ್ ಸೌಲಭ್ಯವನ್ನು ಒದಗಿಸಿದೆ.

ಇತ್ತೀಚೆಗೆ ಮಲೆಕುಡಿಯರಲ್ಲಿ ರಾಜಕೀಯದ ಅರಿವು ಉಂಟಾಗಿದೆ.ಇವರಲ್ಲಿ ಕೆಲವರು ಗ್ರಾಮಪಂಚಾಯತ್, ಜಿಲ್ಲಾ ಪಂಚಾಯತ್‌ಗಳ ಸದಸ್ಯರಾಗಿದ್ದಾರೆ. (ಉದಾಹರಣೆಗೆ ಬೆಳ್ತಂಗಡಿ ತಾಲೂಕಿನ ಶಿಶಿಲ ಗ್ರಾಮದ ನಾರಾಯಣ ಮಲೆಕುಡಿಯ ಜಿಲ್ಲಾ ಪಂಚಾಯತ್‌ನ ಸದಸ್ಯರಾಗಿದ್ದವರು) ಇವರು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಹೋರಾಡುತ್ತಿದ್ದಾರೆ.ಸರ್ಕಾರಿ ಉದ್ಯೋಗಕ್ಕೆ ಹೋಗಬೇಕೆಂಬ ಬಯಕೆಯ ತರುಣರು ಅಧಿಕವಾಗಿದ್ದಾರೆ.

ಮಲೆಕುಡಿಯರ ಅಭಿವೃದ್ಧಿಯ ದೃಷ್ಟಿಯಿಂದ ಕೆಲವು ಅವಕಾಶಗಳು ಅಗತ್ಯವಾಗಿದೆ.ಸರ್ಕಾರ ಸೌಲಭ್ಯಗಳನ್ನು ನೀಡಿದ್ದರೂ ಹೆಚ್ಚಿನ ಜನ ಸೌಲಭ್ಯಗಳನ್ನು ಪಡೆಯುವ ರೀತಿ ತಿಳಿದಂತಿಲ್ಲ.ಆರ್ಥಿಕ ಸ್ವಾವಲಂಬನೆ ಸಾಲದಾಗಿದೆ. ಈ ಕೆಳಗಿನ ಅಂಶಗಳು ಅವರ ಅಭಿವೃದ್ಧಿಗೆ ಅಗತ್ಯವಾದುದಾಗಿದೆ.

೧. ಕೃಷಿ ಭೂಮಿಯನ್ನು ನೀಡಿ ವ್ಯವಸಾಯದಲ್ಲಿ ತೊಡಗಿಸುವುದು.

೨. ಬೊಂಬು ಹಾಗೂ ಬೆತ್ತಗಳಲ್ಲಿ ಆಧುನಿಕ ಗೃಹೋಪಯೋಗಿ ಉಪಕರಣಗಳನ್ನು ಮಾಡಲು ಬೇಕಾಗುವ ತರಬೇತಿ.

೩. ಹೊಸದಾಗಿ ನೇಯ್ಗೆ, ಹಗ್ಗ, ಚಾಪೆ, ಹೊಲಿಗೆ ಮುಂತಾದ ಗೃಹ ಕೈಗಾರಿಕೆಗಳಲ್ಲಿ ಸ್ತ್ರೀಯರಿಗೆ ತರಬೇತಿ.

೪. ಗಂಡಸರಿಗೆ ಹೈನುಗಾರಿಕೆ,ಕುರಿ,ಹಂದಿ ಸಾಕಣೆಗಾಗಿ ಸಾಲ ಸೌಲಭ್ಯವಲ್ಲದೆ ಅದರ ಸದುಪಯೋಗವಾಗುವಂತೆ ನೋಡಿಕೊಳ್ಳುವುದು.

೫. ಕರಕುಶಲ ಕೈಗಾರಿಕೆಗಳಲ್ಲಿ ತರಬೇತಿ.

೬. ಶಿಕ್ಷಣದಲ್ಲಿ ಆಸಕ್ತಿ ಉಂಟುಮಾಡಿ ತರುಣರನ್ನು ವಿದ್ಯಾವಂತರನ್ನಾಗಿ ಮಾಡುವುದು.

೭. ಧಾರ್ಮಿಕ ಆಚರಣೆಗಳಲ್ಲಿನ ಮೂಢನಂಬಿಕೆಗಳನ್ನು ಬಿಡುವ ತಿಳುವಳಿಕೆ ನೀಡುವುದು.

೮. ವಿದ್ಯಾವಂತರಿಗೆ ಉದ್ಯೋಗಾವಕಾಶ ಕಲ್ಪಿಸುವುದು.

೯. ಸ್ವ ಸಹಾಯ ಸಂಘಗಳ ರಚನೆಗೆ ಆದ್ಯತೆ ನೀಡುವುದು.

೧೦. ಅನುಕೂಲಕರ ರಸ್ತೆ,ವಿದ್ಯುತ್, ಶಾಲೆ ಮುಂತಾದ ಕನಿಷ್ಟ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.

೧೧. ಈ ಜನಾಂಗವನ್ನು ಆತ್ಮವಿಶ್ವಾಸಕ್ಕೆ ತೆಗೆದುಕೊಳ್ಳುವ ಕಾರ್ಯವಾಗಬೇಕು.

೧೨. ಈ ಜನಾಂಗದ ಜೀವಕೇಂದ್ರವಾದ ಜಾನಪದ ಕಲೆಯನ್ನು ಅಭಿವೃದ್ಧಿಗೊಳಿಸುವ ಕೆಲಸವಾಗಬೇಕು.

೧೩. ಆರೋಗ್ಯದ ದೃಷ್ಟಿಯಿಂದ ಮಲೆಕುಡಿಯ ಜನಾಂಗದವರಿಗೆ ವಿಮೆಯ ಸವಲತ್ತು ನೀಡಬೇಕು.

೧೪. ಬುಡಕಟ್ಟು ಜನಾಂಗದ ಜನಪದ ಕಲೆಗಳಿಗೆ ಸಂಬಂಧಪಟ್ಟ ಉಪಕರಣಗಳ ಬಗ್ಗೆ ಸಂಶೋಧನಾ ಕಾರ್ಯ ನಡೆಯಬೇಕು.

****

ಅಧ್ಯಾಯ ೭

ಉಪಸಂಹಾರ

ಅಧ್ಯಾಯ : ೭

ಉಪಸಂಹಾರ

ಸಾಂಸ್ಕೃತಿಕವಾಗಿ ತಮ್ಮದೇ ಆದ ವಿಶಿಷ್ಟತೆಗಳನ್ನು ಹೊಂದಿರುವ ಮಲೆಕುಡಿಯರ ಅಧ್ಯಯನ ಅವರ ಬದುಕಿನ ಸಮಗ್ರತೆಯನ್ನು ತಂದು ಕೊಡುವಂಥದು. ಇಂಥ ಪರಿಶಿಷ್ಟ ವರ್ಗ ಈ ಜಿಲ್ಲೆಯಲ್ಲಿ ಹೆಚ್ಚಿದ್ದು ಆ ಜಾತಿಗಳ ಅಧ್ಯಯನ ಆಗಬೇಕಾದ್ದು ಅಗತ್ಯ. ಈ ದೃಷ್ಟಿಯಿಂದ ಈ ಜಿಲ್ಲೆಯ ಪರಿಶಿಷ್ಟ ಜಾತಿಯವರನ್ನು ಕುರಿತ, ಅವರ ಸ್ಥಿತಿಗತಿಗಳನ್ನು ಕುರಿತ ಅಧ್ಯಯನಗಳು ನಡೆಯುತ್ತಿದೆ. ಹೀಗಾಗಿ ಜಾನಪದಾಸಕ್ತರಿಗೂ, ಅದರಲ್ಲೂ ಜನಾಂಗಿಕ ಅಧ್ಯಯನದಲ್ಲಿ ತೊಡಗುವವರಿಗೆ ಇದು ಹುಲಸಾದ ಕ್ಷೇತ್ರವೆನಿಸಿದೆ.

ಸ್ವಾತಂತ್ರ್ಯ ಬಂದು ೬೦ ವರ್ಷಗಳು ಕಳೆದರೂ ಮಲೆಕುಡಿಯರು ಪ್ರತ್ಯೇಕವಾಗಿಯೇ ಉಳಿದಿದ್ದಾರೆ. ಆರ್ಥಿಕವಾಗಿ ಸ್ವಾವಲಂಬನೆಯಾಗಲಿ, ಸಾಮಾಜಿಕ ಸ್ಥಾನಮಾನಗಳಾಗಲಿ ಇಲ್ಲದಿರುವುದು ಶೋಚನೀಯ. ವಿದ್ಯಾವಂತರು ಕಡಿಮೆ ಇರುವ ಮಲೆಕುಡಿಯರಿಗೆ ಅವಕಾಶ ಹಾಗೂ ಸೌಲಭ್ಯಗಳಿರುವ ಅಂಶಗಳನ್ನು ತಿಳಿಸಿಕೊಡುವ ಅಗತ್ಯವೂ ಇದೆ. ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ತಿಳಿಸಿಕೊಡಬೇಕಾಗಿದೆ.

ಸಾಂಸ್ಕೃತಿಕವಾಗಿ ತಮ್ಮದೇ ಆದ ಕೆಲವಾರು ವಿಶಿಷ್ಟತೆ ಇರುವಂತೆ ವಿಭಿನ್ನ ಜಾತಿಯ ಆಚಾರ, ವಿಚಾರಗಳ ಪ್ರಭಾವಕ್ಕೆ ಒಳಗಾಗಿ ಆ ಪ್ರಭಾವದಲ್ಲಿ ತಮ್ಮ ಸಂಸ್ಕೃತಿಯ ಪರಂಪರಾಗತ ಮೌಲ್ಯಗಳಲ್ಲಿ ಬದಲಾವಣೆ ಆಗುತ್ತಿರುವುದು 'ಸಂಸ್ಕೃತಿ ಸ್ಥಿತ್ಯಂತರ'ಕ್ಕೆ ಕಾರಣವಾಗುತ್ತಿದೆ. ಹೀಗಾಗಿ ಅವರ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗಲು ಆರ್ಥಿಕ ಸ್ವಾವಲಂಬನೆಯ ಅಗತ್ಯವಿದೆ. ಅವರ ಗೃಹ ವೃತ್ತಿ ಹಾಗೂ ಪಶು ಸಂಗೋಪನೆಯ ಕಾರ್ಯಗಳಿಗೆ ಸೌಲಭ್ಯ ಮುಂತಾದವುಗಳನ್ನು ಒದಗಿಸುವುದು ಅಗತ್ಯ. ಇದರಿಂದ ಅವರು ಸ್ವಾವಲಂಬನೆಗಾಗಿ ಬದುಕಲು ಸಾಧ್ಯವಾಗಬಹುದು.

ಮಲೆಕುಡಿಯರು ಹಿಂದಿನಿಂದ ನಡೆಸಿಕೊಂಡು ಬರುತ್ತಿರುವ ಆರಾಧನಾ ಸಂಪ್ರದಾಯಗಳು ಶಿಷ್ಟ ಆರಾಧನೆಗಿಂತ ಭಿನ್ನವಾಗಿದ್ದು ಅದರ ಆಚರಣೆಯ ಬಗ್ಗೆ ತರುಣರಲ್ಲೇ ಆಸಕ್ತಿ ಇಲ್ಲವಾಗುತ್ತಿದೆ. ತಮ್ಮ ಸಂಪ್ರದಾಯಗಳು 'ಕೀಳು' ಎಂಬ ಭಾವನೆ ಹೆಚ್ಚಿನವರಲ್ಲಿ ಇದ್ದಂತಿದೆ. ಹಿರಿಯರು ಕಸುಬಾಗಿ ಮಾಡಿಕೊಂಡದ್ದನ್ನು ತರುಣರು ಮುಂದುವರಿಸುತ್ತಿಲ್ಲ. ಹೀಗಾಗಿ ಮಲೆಕುಡಿಯರ ಸಂಸ್ಕೃತಿ ಹಾಗೂ ಜೀವನ ಕ್ರಮ ತಮ್ಮ ಮೂಲಕ್ಕಿಂತ ಭಿನ್ನವಾಗಿ ಪೂರ್ಣ ಬದಲಾವಣೆಗೆ ಒಳಗಾಗುವ ಸಾಧ್ಯತೆ ಹೆಚ್ಚು. ಆಧುನಿಕ ಶಿಕ್ಷಣದ ಪ್ರಭಾವದಿಂದ ತರುಣರಲ್ಲಿ ಉಂಟಾಗಿರುವ ತಿರಸ್ಕಾರ ಭಾವನೆ ಹೋಗದಿದ್ದಲ್ಲಿ ಕೆಲವೇ ವರ್ಷಗಳಲ್ಲಿ ಮಲೆಕುಡಿಯರ ಆಚರಣೆಗಳು ತಮ್ಮ ಮೂಲಸಂಪ್ರದಾಯಕ್ಕಿಂತ ಭಿನ್ನವಾಗಬಹುದು. ಕಲಿತವರು ಮತ್ತು ಹಿರಿಯರು ನಡೆಸುವ ಆಚರಣೆಗಳನ್ನು ಗೇಲಿ ಮಾಡುವುದಲ್ಲದೆ ಅಂಥವುಗಳಲ್ಲಿ

ಭಾಗವಹಿಸಲು ಮುಂದಾಗದಿರುವುದು ಹಿರಿಯರ ದುಗುಡಕ್ಕೆ ಕಾರಣವಾಗಿದೆ. ಇಷ್ಟಾದರೂ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ಹಿರಿಯರು ಬಹು ಉತ್ಸುಕರಾಗಿದ್ದಾರೆ. ಇದರಿಂದ ವಿದ್ಯಾವಂತರು ಸ್ವಲ್ಪ ಮಟ್ಟಿಗೆ ಹೆಚ್ಚಾಗುತ್ತಿದ್ದಾರೆ. ಆದರೂ ಮಲೆಕುಡಿಯರು ಆರ್ಥಿಕವಾಗಿ ಸ್ವಾವಲಂಬನೆ ಸಾಂಸ್ಕೃತಿಕವಾಗಿ ಪ್ರೋತ್ಸಾಹ, ಸಾಮಾಜಿಕ ಸ್ಥಾನಮಾನ ಸರ್ಕಾರ ಸಹಕಾರ ಮುಂತಾದವುಗಳನ್ನು ಗಳಿಸಬೇಕೆಂಬ ಆಸೆಯನ್ನಿಟ್ಟುಕೊಂಡು ಜೀವನ ಪ್ರೇಮಿಗಳಾಗಿ ಬದುಕನ್ನು ಸೌಹಾರ್ದಮಯವಾಗಿ ನಡೆಸುತ್ತಿದ್ದಾರೆ.

ಅನುಬಂಧ

- ಐತಿಹ್ಯಗಳು
- ವೈದ್ಯ
- ಸಾಂಸ್ಕೃತಿಕ ಪದಕೋಶ
- ಕರ್ನಾಟಕದ ಅಲೆಮಾರಿ ಜನಾಂಗ – ಸಂಸ್ಕೃತಿ
- ಪರಿಶಿಷ್ಟವರ್ಗಗಳ ಕಲ್ಯಾಣ ಕಾರ್ಯಕ್ರಮಗಳ ವಿವರ
- ಛಾಯಾಚಿತ್ರಗಳು
- ಆಕರ ಗ್ರಂಥಗಳು
- ವಕ್ತೃಗಳ ವಿಳಾಸ

ಅನುಬಂಧ

ಐತಿಹ್ಯ :

೧. ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಸಂಬಂಧಿಸಿದಂತೆ : ಕುಕ್ಕೆ ಸುಬ್ರಹ್ಮಣ್ಯ ಪ್ರಸಿದ್ಧವಾದ ಯಾತ್ರಾಸ್ಥಳ. ಆ ದೇವಾಲಯಕ್ಕೂ ಕುಡಿಯರಿಗೂ ಹೊಂದಿಕೊಂಡಂತೆ ಇರುವ ಕತೆ ಇದು. ಕುಕ್ಕ ಮತ್ತು ಲಿಂಗ ಎಂಬ ಇಬ್ಬರು ಕುಡಿಯರು ಒಂದು ದಿನ ಕುಮಾರ ಪರ್ವತದಲ್ಲಿ ಬೇಟೆಯಾಡುತ್ತಿದ್ದರು. ಆಗ ಕಾಡಿನ ಒಂದು ಪೊದೆಯಲ್ಲಿ ಬೆಂಕಿ ಹೊತ್ತಿ ಉರಿಯುತ್ತಿತ್ತು. ಕುಕ್ಕ ಮತ್ತು ಲಿಂಗ ಅದನ್ನು ನೋಡಿಯೂ ನೋಡದಂತೆ ಮುಂದೆ ಹೋದರು. ಆಗ ಯಾರೋ ಅವರನ್ನು ಕರೆದಂತೆ ಆಯಿತು. ಹಿಂದಿರುಗಿ ನೋಡಿದರು. ದೊಡ್ಡ ಘಟ ಸರ್ಪವೊಂದು ಬೆಂಕಿಗೆ ಸಿಕ್ಕಿಬಿದ್ದಿತ್ತು. ಅದೇ ಇವರನ್ನು ಕರೆದದ್ದು. ಮೊದಲೇ ಸರ್ಪ. ಇವರು ಹೆದರಿದರು ಸರ್ಪ ಧೈರ್ಯ ಹೇಳಿತು. ಅವರ ಬಿಲ್ಲಿನ ಸಹಾಯದಿಂದ ತನ್ನನ್ನು ಬೆಂಕಿಯಿಂದ ಪಾರು ಮಾಡುವಂತೆ ಕೇಳಿತು. ಅವರು ತಮ್ಮ ಬಿಲ್ಲನ್ನು ಚಾಚಿದರು. ಸರ್ಪ ಅದಕ್ಕೆ ಸುತ್ತಿಕೊಂಡಿತು. ಇಬ್ಬರೂ ಸೇರಿ ಅದನ್ನು ಬೆಂಕಿಯಿಂದ ಹೊರಕ್ಕೆ ಎತ್ತಿಕೊಂಡರು. ನಂತರ ತಲೆಯ ಚೌಕದಿಂದ ಜೋಲಿಯನ್ನು ಮಾಡಿ – ಸರ್ಪವನ್ನು ಜೋಲಿಯಲ್ಲಿಟ್ಟುಕೊಂಡು ಬಿಲ್ಲಿನ ಎರಡು ತುದಿಗಳನ್ನು ತಾವು ಹೊತ್ತುಕೊಂಡರು. ಸರ್ಪ ಅವರನ್ನು ಕುರಿತು 'ನಿಮಗೆ ಸಾಧ್ಯವಾದಷ್ಟು ದೂರ ಹೊತ್ತುಕೊಂಡು ಹೋಗಿ ಇನ್ನು ಹೊರಲು ಸಾಧ್ಯವಿಲ್ಲವೆಂದೆನಿಸಿದಾಗ ಇಳಿಸಿ ಬಿಡಿ' ಎಂದು ನಿರ್ದೇಶಿಸಿತು. ತಕ್ಕಮಟ್ಟಿಗೆ ಭಾರವಾಗಿದ್ದ ಸರ್ಪವನ್ನು ಕವೆ ಕೋಲಿನ ನೆರವಿನಿಂದ ಬಹಳ ದೂರ ಹೊತ್ತರು. ಈಗ ದೇವಾಲಯದ ಗರ್ಭಗುಡಿ ಇರುವ ಸ್ಥಳಕ್ಕೆ ಬಂದಾಗ ಸರ್ಪ ಹೊರಲಾರದಷ್ಟು ಭಾರವಾಯಿತು. ಆಗ ಸರ್ಪ ಹೊರೆಯನ್ನು ಅಲ್ಲೇ ಇಳಿಸಿದರು. ಸರ್ಪಕ್ಕೆ ವಿಪರೀತ ಬಾಯಾರಿಕೆ ಆಗಿತ್ತು. ಕುಡಿಯಲು ನೀರು ಕೇಳಿತು. ಹತ್ತಿರದಲ್ಲಿ ಎಲ್ಲೂ ನೀರು ಇರಲಿಲ್ಲ. ಆಗ ಹತ್ತಿರದಲ್ಲಿದ್ದ ಬೈನೆ ಮರದ ಮೋತೆಯನ್ನ ಕತ್ತರಿಸಿ ರಸ ತರುವಂತೆ ಸರ್ಪ ಸೂಚಿಸುತ್ತದೆ. ಆಗ ಲಿಂಗ ಮತ್ತು ಕುಕ್ಕ ಗೇರು ಎಲೆಯ ದೊನ್ನೆ ಮಾಡಿ ಬೈನೆ ರಸವನ್ನು ಸಂಗ್ರಹಿಸಿ ಸರ್ಪಕ್ಕೆ ತಂದು ಕೊಡುತ್ತಾರೆ. ಅದು ಸ್ವಲ್ಪ ಕುಡಿದು ಉಳಿದದ್ದನ್ನು ಅವರು ಕುಡಿಯುವಂತೆ ಸೂಚಿಸುತ್ತದೆ. ಅವರು ಅಂತೆ ಗೈಯುತ್ತಾರೆ. ಹೀಗೆ ಸರ್ಪ ಮತ್ತು ಅವರ ಸ್ನೇಹ ಮುಂದುವರಿಯುತ್ತದೆ. ಬೈನೆ ರಸದ ರುಚಿ ಹತ್ತಿದ ಅವರು ಅದನ್ನು ಬೊಂಬಿನ ಕೊಳವೆಯಲ್ಲಿ ಸಂಗ್ರಹಿಸಿ ಇಡುವುದನ್ನು ಪ್ರಾರಂಭಿಸುತ್ತಾರೆ. ಮತ್ತೆ – ಮತ್ತೆ ಆ ರಸವನ್ನು ಕುಡಿದಾಗ ಮತ್ತೇರಿ ಸರ್ಪವನ್ನು ಅಲಕ್ಷಿಸಲು ಪ್ರಾರಂಭಿಸುತ್ತಾರೆ. ಆಗ ಸರ್ಪ ಒಬ್ಬ ಬ್ರಾಹ್ಮಣನನ್ನು ಕರೆದುಕೊಂಡು ಬರುವಂತೆ ಸೂಚಿಸುತ್ತದೆ. ಅಂದಿನಿಂದ ಸುಬ್ರಹ್ಮಣ್ಯನ ಪೂಜೆ ಬ್ರಾಹ್ಮಣನದಾಗುತ್ತದೆ. ಉಳಿದ ಸೇವೆ ಕುಡಿಯರ ಪಾಲಿಗೆ ಉಳಿಯುತ್ತದೆ.

ಈ ಐತಿಹ್ಯಕ್ಕೆ ಪುಷ್ಟಿ ಒದಗಿಸುವಂತೆ ಇಂದಿಗೂ ಸುಬ್ರಹ್ಮಣ್ಯ ದೇವಾಲಯದ ಪಶ್ಚಿಮ ಭಾಗದಲ್ಲಿ "ಕುಕ್ಕೆ ಲಿಂಗೇಶ್ವರ" ಎಂಬ ಹೆಸರಿನ ಸಣ್ಣ ದೇವಾಲಯವಿದೆ. ಜನವರಿ ತಿಂಗಳಿನಲ್ಲಿ ಬರುವ ಮಕರ ಸಂಕ್ರಾಂತಿ ದಿವಸ ಈ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲುತ್ತದೆ. ಕುಕ್ಕೆ ಮತ್ತು ಲಿಂಗರ ದಿವ್ಯ ಸಂಸ್ಕೃತಿಗೆ ನಿರ್ಮಾಣಗೊಂಡ ದೇವಾಲಯ.

ಎರಡನೆಯದಾಗಿ ವಾರ್ಷಿಕ ಜಾತ್ರೆಯ ಮುನ್ನ ಬರುವ ಏಕಾದಶಿಯಂದು ಸುಬ್ರಹ್ಮಣ್ಯ ದೇವಾಲಯದ ಗರ್ಭಗುಡಿಯ ಹುತ್ತದಿಂದ ಮೂರು ಮುಷ್ಟಿ ಮೃತ್ತಿಕೆ ತೆಗೆಯಲಾಗುತ್ತದೆ. ಮೊದಲ ಮುಷ್ಟಿಯ ಮೃತ್ತಿಕೆಯನ್ನು ಮೊದಲು ಪ್ರಸಾದವಾಗಿ ಕುಡಿಯರಿಗೆ ಹಂಚಲಾಗುತ್ತದೆ. ಎರಡನೆ ಮತ್ತು ಮೂರನೆ ಮುಷ್ಟಿಯ ಮೃತ್ತಿಕೆಯನ್ನು ಬ್ರಾಹ್ಮಣರು ಮತ್ತು ಇತರ ಯಾತ್ರಾರ್ಥಿಗಳು ದಕ್ಷಿಣೆ ನೀಡಿ ಪಡೆಯುತ್ತಾರೆ.

ಇಂದಿಗೂ ಉತ್ಸವದಲ್ಲಿ ಬಳಸುವ ಪಲ್ಲಕ್ಕಿ – ಮೊದಲು ಕುಕ್ಕೆ – ಲಿಂಗರು ಸುಬ್ರಹ್ಮಣ್ಯನನ್ನು ಕರೆತಂದ ಚಾರಿತ್ರಿಕ ಘಟನೆಯ ನೆನಪನ್ನು ಹಸುರಾಗಿಡಲು – ಅದೇ ರೀತಿಯದಾಗಿದೆ. ಅಂದಿನ ಬಿದಿರಿನ ಕವೆ ಕೋಲುಗಳ ಬದಲು ಚಿತ್ತಾರದ ಕರಿಮರದ ಕವೆಕೋಲುಗಳು ವೈಭವದ ಸಂಕೇತಗಳಾಗಿವೆ.

ನಾಲ್ಕನೆಯದಾಗಿ ಜಾತ್ರೆಯ ಮೊದಲ ದಿನ ಎಲ್ಲಾ ಕುಡಿಯರಿಗೂ ಹೊಸಬಟ್ಟೆ ಮತ್ತು ಎಣ್ಣೆ ಮಜ್ಜನಕ್ಕಾಗಿ ಎಣ್ಣೆಯನ್ನು ದೇವಾಲಯದಿಂದ ಕೊಡುವುದಲ್ಲದೆ ಆ ದಿನ ಅವರಿಗೆ ವಿಶೇಷ ಅನ್ನ ಸಂತರ್ಪಣೆ ನಡೆಯುತ್ತದೆ.

ಐದನೆಯದಾಗಿ – ಗರ್ಭಗುಡಿಯ ಪೂಜೆವೊಂದನ್ನುಳಿದು ದೇವಾಲಯದ ಎಲ್ಲಾ ಕಾರ್ಯಗಳಲ್ಲೂ ಕುಡಿಯರು ನಿಸ್ಸಂಕೋಚವಾಗಿ ಭಾಗವಹಿಸುತ್ತಾರೆ. (ಈ ಐತಿಹ್ಯವನ್ನು ಹೇಳಿದವರು ಪುತ್ತೂರು ತಾಲೂಕಿನ ಸಿರಿಬಾಗಿಲು ಗ್ರಾಮದ ಹೊನ್ನಪ್ಪ ಮಲೆಕುಡಿಯ)

ಐತಿಹ್ಯ – ೨ : ಬಳ್ಳಮಂಜ ದೇವಾಲಯಕ್ಕೆ ಸಂಬಂಧಿಸಿದ ಐತಿಹ್ಯ. ಇದು ಉಪ್ಪಿನಂಗಡಿ ತಾಲೂಕಿನ ಒಂದು ಗ್ರಾಮ. ಬಹಳ ಹಿಂದೆ ಇದಕ್ಕೆ ಏನು ಹೆಸರಿತ್ತು ಎನ್ನುವುದು ತಿಳಿಯದು. ಇಂದು ದೇವಾಲಯದ ಹೆಸರೆ, ಊರಿನ ಹೆಸರಾಗಿದೆ. ಬಹಳ ಹಿಂದೆ ಊರ ಹೊರಗೆ ಸೇಂದಿ ಕುಡಿಯಲು ಒಬ್ಬ ಬಿಲ್ಲವ ಬಂದಿದ್ದ. ಅವನ ಹತ್ತಿರ ಒಂದು ಸಣ್ಣ ಬಳ್ಳ ಇತ್ತು. ಆ ಬಳ್ಳದಲ್ಲಿ ಅವನು ನಾಣ್ಯಗಳನ್ನು ಸಂಗ್ರಹಿಸಿಟ್ಟುಕೊಳ್ಳುತ್ತಿದ್ದ. ಹೋದ ಕಡೆಯಲ್ಲೆಲ್ಲ ಅದನ್ನು ತೆಗೆದುಕೊಂಡು ಹೋಗುತ್ತಿದ್ದ. ಅವನು ಅಂದು ಕುಡಿದ ಮತ್ತಿನಲ್ಲಿ ಬಳ್ಳವನ್ನು ಪಡಖಾನೆಯ ಮುಂದಿನ ಅಂಗಳದಲ್ಲಿಯೇ ಮರೆತು ಹೋದ. ಮನೆಗೆ ಹೋದ ತರುವಾಯ ಬಳ್ಳದ ನೆನಪಾಗಿ, ಬಳ್ಳವನ್ನು ತೆಗೆದುಕೊಂಡು ಹೋಗಲು ಬಂದಾಗ ಬಳ್ಳದಲ್ಲಿ ನಾಣ್ಯದ ಬದಲು ಸುಬ್ರಹ್ಮಣ್ಯ ಹೆಡೆ ಬಿಟ್ಟು ಕುಳಿತಿದ್ದ. ಆಗ ಅಲ್ಲೇ ಕುಡಿಯಲು ಬಂದಿದ್ದ ಆರು ಜನ ಕುಡಿಯರು ಬಳ್ಳದಲ್ಲಿದ್ದ

ಸುಬ್ರಹ್ಮಣ್ಯನಿಗೆ ಚಪ್ಪರ ಹಾಕಿ ನೆರಳು ಮಾಡಿದರು. ಆಗ ಅಲ್ಲಿದ್ದ ಒಬ್ಬನ ಮೇಲೆ ದೇವರು ಕಾಣಿಸಿಕೊಂಡು – ಆ ಸ್ಥಳದಲ್ಲಿಯೇ ತನಗೆ ದೇವಾಲಯ ನಿರ್ಮಾಣವಾಗಬೇಕೆಂದೂ ತನಗೆ ಮೊದಲು ನೆರಳು ನೀಡಿದ ಕುಡಿಯರು ತನ್ನ ಒಕ್ಕಲಾಗಿ ನಡೆದುಕೊಳ್ಳತಕ್ಕದ್ದೆಂದೂ ಅಪ್ಪಣೆ ಮಾಡಿತು.

ಅಂದಿನಿಂದ ಇಂದಿನ ತನಕ ಆ ಆರು ಮನೆತನದ ಕುಡಿಯರು ದೇವಾಲಯದ ಕಾರ್ಯದಲ್ಲಿ ಭಾಗವಹಿಸುತ್ತಾ ಬಂದಿದ್ದಾರೆ. ಈಗಲೂ ತೇರು ಹರಿಯುವ ಮುನ್ನ ಆ ಆರು ಮನೆತನದವರು ಬಂದೇ ತೀರಬೇಕು.

ಕುಡಿಯರ ಬಗ್ಗೆ ಕ್ರಿ.ಶ. ೧೮೮೫ – ೧೯೬೨ರ ವರೆಗೆ ೧೪ ಜನ ಅಧ್ಯಯನ ಮಾಡಲು ಪ್ರಯತ್ನಿಸಿದ್ದರೂ ಇಲ್ಲಿಯವರೆಗೆ ಯಾವ ಸಾಹಿತ್ಯವೂ ಸಿಗದೆ, ಕುಡಿಯರಲ್ಲಿ ಯಾವ ಸಾಹಿತ್ಯವಾಗಲಿ, ಕಲೆಯಾಗಲಿ ಇಲ್ಲವೆಂದು ಸ್ಪಷ್ಟವಾಗಿ ದಾಖಲಿಸಿದ್ದಾರೆ. ಇದು ಡಾ. ಡಿ. ಬಿ. ರಾಮಚಂದ್ರಾಚಾರ್‌ರವರು ತಮ್ಮ 'ಕುಡಿಯರ ಸಂಸ್ಕೃತಿ' ಎಂಬ ಪುಸ್ತಕದಲ್ಲಿ ತಿಳಿಸಿದ್ದಾರೆ. ಆದರೆ ಇತ್ತೀಚೆಗೆ ಮಂಗಳೂರು ವಿಶ್ವ ವಿದ್ಯಾನಿಲಯದವರು ಹೊರತಂದ 'ಮಲೆಕುಡಿಯರು' ಎಂಬ ಗ್ರಂಥದಲ್ಲಿ ತಿಳಿಸಿರುವುದೇನೆಂದರೆ ಮಲೆಕುಡಿಯರಲ್ಲಿ ಜನಪದ ಕತೆಗಳು ಈಗ ಹೇರಳವಾಗಿ ಸಿಗುತ್ತವೆ. ಆದರೆ ಈ ಕತೆಗಳನ್ನು ಗಮನಿಸುವಾಗ ಇತರ ಜನಾಂಗದವರ ಜನಪದ ಕತೆಗಳಿಗೂ ಮಲೆಕುಡಿಯರ ಕತೆಗಳಿಗೂ ಅಂತಹ ರೀತಿಯ ವ್ಯತ್ಯಾಸಗಳು ಕಾಣುವುದಿಲ್ಲ. ಇವರಲ್ಲಿ ಕತೆಗಳು ಹುಟ್ಟಿಕೊಂಡದ್ದು ಇತರ ಜನಾಂಗದವರ ಜೊತೆಗೆ ಬೆರೆತು ಕೆಲಸ ಮಾಡಲು ಪ್ರಾರಂಭಿಸಿದ ನಂತರವೇ ಎಂದು ಕಾಣುತ್ತದೆ. ಈಗಲೂ ಕೂಡ ದೊಡ್ಡ ದೊಡ್ಡ ಮಲೆಗಳಲ್ಲಿ ವಾಸವಾಗಿರುವ ಹಿರಿಯ ಮಲೆಕುಡಿಯ ನಿವಾಸಿಗಳಲ್ಲಿ ಜನಪದ ಕತೆಗಳು ಸಿಗುವುದಿಲ್ಲ. ಇದೇ ರೀತಿ ಕಬಿತಗಳು ಕೂಡ. ಮಲೆಕುಡಿಯರು ತಮ್ಮ ಕುಮೇರಿ ಸಂಸ್ಕೃತಿಯನ್ನು ಬಿಟ್ಟು ಇತರ ಬೇಸಾಯ ಸಂಸ್ಕೃತಿಯ ಜನರೊಂದಿಗೆ ಸಂಪರ್ಕ ಬೆಳೆಸಿ ಮುಂದೆ ಬೆಟ್ಟದ ತಪ್ಪಲು ಪ್ರದೇಶಗಳಲ್ಲಿ ನೆಲವನ್ನು ಸಮತಟ್ಟುಗೊಳಿಸಿ ಗದ್ದೆಗಳನ್ನು ಮಾಡಿದರು. ನಂತರದ ಕಾಲಘಟ್ಟದಲ್ಲಿಯೇ ಇವರು ಕತೆ, ಕಬಿತಗಳನ್ನು ಕಲಿತುಕೊಂಡರು ಎಂದು ತಿಳಿಯುತ್ತದೆ ಎಂಬ ಅಭಿಪ್ರಾಯವನ್ನು ನೀಡುತ್ತಾರೆ.

ವೈದ್ಯ :

ಮಲೆಕುಡಿಯರು ತಮಗೆ ಮತ್ತು ತಾವು ಸಾಕುವ ಪ್ರಾಣಿಗಳಿಗೆ ಬರುವ ರೋಗ ರುಜಿನಗಳಿಗೆ ತಮ್ಮ ಸುತ್ತ ಮುತ್ತಲಿನ ಪ್ರದೇಶಗಳಲ್ಲಿರುವ ಸಸ್ಯಗಳನ್ನು ಔಷಧಿಯ ರೂಪದಲ್ಲಿ ಬಳಸುತ್ತಾರೆ. ತಮ್ಮ ಸುತ್ತ ಮುತ್ತಲಿನ ಎಲ್ಲಾ ಗಿಡ ಮರಬಳ್ಳಿಗಳು ಒಂದಲ್ಲ ಒಂದು ರೀತಿಯಿಂದ ಔಷಧಿಯ ರೂಪದಲ್ಲಿ ಉಪಯೋಗಕ್ಕೆ ಬರುತ್ತವೆ.ಔಷಧಿಯ ರೂಪದಲ್ಲಿ ಉಪಯೋಗಿಸುವ ಸಸ್ಯಗಳ ವಿವರ ಈ ರೀತಿ ಇದೆ.

೧. ಸುಕ್ರುಮ- ಭೇದಿಗೆ ಇದರ ಬೇರನ್ನು ಅರೆದು ಕುಡಿಯುತ್ತಾರೆ.

೨. ಕುಡೆಂಚಿ – ಕುತ್ತಿಗೆಯಲ್ಲಿ ಬಾವು ಎದ್ದರೆ ಇದರ ತೊಗಟೆ ಹಾಗೂ ಕಾವಟೆಯ ತೊಗಟೆಯನ್ನು ಅರೆದು ಲಿಂಬೆ ಹುಳಿಯ ನೀರಿನಲ್ಲಿ ಮಿಶ್ರ ಮಾಡಿ ಹಚ್ಚುತ್ತಾರೆ.

೩. ಸೀಮುಳ್ಳು – ಬೆಂಕಿ ತಾಗಿದರೆ ವೀಳ್ಯದೆಲೆ, ಈರುಳ್ಳಿ ಮತ್ತು ಇದರ ಎಲೆಯನ್ನು ತೆಂಗಿನ ಎಣ್ಣೆಯಲ್ಲಿ ಕಾಯಿಸಿ ಗಾಯಕ್ಕೆ ಹಚ್ಚುತ್ತಾರೆ.

೪. ಉಸಿಲು ತಪ್ಪು –ಎದೆ ನೋವಿದ್ದರೆ ಇದರ ಎಲೆಯನ್ನು ತೆಂಗಿನ ಎಣ್ಣೆಯಲ್ಲಿ ಅದ್ದಿ ಹಚ್ಚುತ್ತಾರೆ.

೫. ಪೇರಳೆ–ಅಜೀರ್ಣಕ್ಕೆ ಇದರ ಚಿಗುರನ್ನು ಜಗಿಯುತ್ತಾರೆ.

೬. ಕೆನರ ಬೂರು–ಗರ್ಭ ನಿಲ್ಲಲು ಇದರ ಬೇರನ್ನು ಅರೆದು ಮುಟ್ಟು ನಿಂತಲ್ಲಿಂದ ತಿಂಗಳಿನಲ್ಲಿ ಮೂರು ದಿವಸ ಮೂರು ತಿಂಗಳಲ್ಲಿ ಕೊಡಬೇಕು.

೭. ಚೂರಿ ಮುಳ್ಳು–ಜೇನು ನೊಣ ಕಚ್ಚಿದರೆ ಇದರ ಎಲೆಯನ್ನು ಅರೆದು ಹಚ್ಚುತ್ತಾರೆ.

೮. ಬಡ್ಡ್ ಪುಲಿ – ಕುತ್ತಿಗೆ ನೋವಿದ್ದರೆ ಇದರ ಹಣ್ಣನ್ನು ಅರೆದು ಹಚ್ಚುತ್ತಾರೆ.

೯. ಮಲೆಕಾಯಿ ತಪ್ಪು –ಶರೀರದಲ್ಲಿ ಗುಳ್ಳೆ ಬಿದ್ದರೆ ಇದರ ಎಲೆಯನ್ನು ಮೈಗೆ ತಿಕ್ಕುತ್ತಾರೆ.

೧೦. ಮುಂಡೇವು –ಹೊಟ್ಟೆ ಹುಳ ಹೋಗಲು ಇದರ ಎಲೆಯ ರಸ ತೆಗೆದು ಕುಡಿಯುತ್ತಾರೆ.

೧೧. ದಡ್ಡಲು – ಗಾಯವನ್ನು ತೊಳೆಯಲು ಇದರ ತೊಗಟೆಯ ಕಷಾಯವನ್ನು ಬಳಸುತ್ತಾರೆ.

೧೨. ಮಂಜನಾಯ್ಕೆ – ಬಿಳಿ ಸೆರಗಿಗೆ, ಹೊಟ್ಟೆ ನೋವಾದರೆ ಇದರ ಎಲೆಯ ರಸವನ್ನು ತೆಗೆದು ಕಲ್ಲು ಸಕ್ಕರೆ ಮಿಶ್ರ ಮಾಡಿ ಕುಡಿಯಬೇಕು.

೧೩. ಕಣ್ಣ ಬಲ್ಲು – ಕೋಣಗಳ ಪುಷ್ಟಿಗೆ ಈ ಗಿಡವನ್ನು ಹುರುಳಿಯೊಂದಿಗೆ ಬೇಯಿಸಿ ಕೊಡುತ್ತಾರೆ.

೧೪. ಮುಳ್ಳಂಕೊಲೆ–ಕೆಂಪು ರೋಗಕ್ಕೆ ಇದರ ಬೇರು, ಈಶ್ವರಬೇರು, ಗರುಡ ಪಾತಾಳ ಹಾಗೂ ಚೆಂಡೆಲನ್ನು ಒಟ್ಟಿಗೆ ಅರೆದು ಹಚ್ಚಬೇಕು.

೧೫. ಕುರ್ಮ– ತಂಪಿಗೆ ಇದರ ತೊಗಟೆಯ ಕಷಾಯ ಮಾಡಿ ಕುಡಿಯುತ್ತಾರೆ.

೧೬. ನೆಲಚರಿ – ಭೇದಿಗೆ ಇದರ ಎಲೆಗೆ ಜೀರಿಗೆ ಮಿಶ್ರ ಮಾಡಿ ರಸ ತೆಗೆದು ಸ್ವಲ್ಪ ಪ್ರಮಾಣದಲ್ಲಿ ಕುಡಿಯಬೇಕು.

೧೭. ಬಲುಪೊನ್ನೆ– ಮಕ್ಕಳ ತಾಮರೆ ರೋಗಕ್ಕೆ ಇದರ ತೊಗಟೆಯನ್ನು ಗಂಜಿಯೊಂದಿಗೆ ಬೇಯಿಸಿಕೊಡಬೇಕು.

೧೮. ನೆಲನೆಕ್ಕರೆ –ಕಫಕ್ಕೆ ಇದರ ಚಿಗುರು, ಕೇಪುಳದ ಚಿಗುರು ಅರೆದು ಕಾಯಿಸಿ ಮಕ್ಕಳಿಗೆ ಕೊಡುತ್ತಾರೆ.

೧೯. ಕತ್ತರಿ ಸೊಪ್ಪು – ಭೇದಿಗೆ ಹಾಗೂ ಹೊಟ್ಟೆನೋವಿಗೆ ಇದರ ಎಲೆಯನ್ನು ಗಂಜಿಯಲ್ಲಿ ಬೇಯಿಸಿ ಕೊಡುತ್ತಾರೆ.

೨೦. ನೆಕ್ಕಿ – ಮಕ್ಕಳಿಗೆ ಸೋಂಕಾದರೆ ಇದರ ಎಲೆಯನ್ನು ಹೊತ್ತಿಸಿ ಹೊಗೆ ಹಿಡಿಯುತ್ತಾರೆ.

೨೧. ತುಂಬೆ –ಕಫಕ್ಕೆ ಇದರ ಎಲೆಯ ರಸ ತೆಗೆದು ಮಕ್ಕಳಿಗೆ ಕೊಡುತ್ತಾರೆ.

೨೨. ಕುರೆಜ್ಜಿ–ಇದರ ಚಿಗುರನ್ನು ಮಕ್ಕಳಿಗೆ 'ಕಣೆರ್' ಕೊಡುತ್ತಾರೆ.

೨೩. ಬಾಗಿಕಾಯಿ –ಗರ್ಭ ನಿಲ್ಲಲು ಇದರ ಕಾಯಿಯನ್ನು ಅರೆದು ಜೀರಿಗೆ ಹಾಕಿ ಬೆಳಗ್ಗೆ ಕುಡಿಯಲು ಕೊಡಬೇಕು.

೨೪. ಕಾಮಕಸ್ತೂರಿ –ಜ್ವರ, ಮೈ, ಕೈ ನೋವಿಗೆ ಇದರ ಎಲೆಯನ್ನು ಬೆಳ್ಳುಳ್ಳಿ ಹಾಕಿ ತೆಂಗಿನ ಎಣ್ಣೆಯಲ್ಲಿ ಕಾಯಿಸಿ ಮೈಗೆ ಹಚ್ಚಬೇಕು.

೨೫. ಕುಡೆಂಚಿ –ಸೋಂಕಿಗೆ ಇದರ ಬೇರನ್ನು ಜೀರಿಗೆಯೊಂದಿಗೆ ಅರೆದು ಕುಡಿಯಲು ಕೊಡಬೇಕು.

೨೬. ಇಜಿನ್ –ತಲೆ ಸಿಡಿತಕ್ಕೆ ಇದರ ಎಲೆಯನ್ನು ಗುದ್ದಿ ತಲೆಗೆ ಲೇಪಿಸುತ್ತಾರೆ.

೨೭. ಪೆರೆದೆಣೆ ತಪ್ಪು –ತಂಪಿಗೆ ಇದರ ಎಲೆಯನ್ನು ನೀರಿನಲ್ಲಿ ಅರೆದು ಕುಡಿಯುತ್ತಾರೆ.

೨೮. ಊಟೆ ಕುರೆಜ್ಜಿ –ಕಾಲು ಹುಳ ತಿನ್ನುವುದಕ್ಕೆ ಇದರ ಬೇರನ್ನು ಲಿಂಬೆ ಹುಳಿಯಲ್ಲಿ ಅರೆದು ಪಾದಕ್ಕೆ ಹಚ್ಚುತ್ತಾರೆ.

೨೯. ಬೊಳ್ಚರೊಳಿ–ನಾಯಿಯ ರೋಮ ಉದುರುವುದಕ್ಕೆ ಇದರ ತೊಗಟೆಯನ್ನು ಗಂಜಿಯ ಜೊತೆಗೆ ಬೇಯಿಸಿ ಒಂದು ವಾರ ಕೊಡಬೇಕು.

೩೦. ನುಗ್ಗೆ – ಗರ್ಭಪಾತಕ್ಕೆ ಇದರ ತೊಗಟೆಯನ್ನು ಗಂಜಿಯಲ್ಲಿ ಬೇಯಿಸಿ ಮೂರು ದಿನ ಬೆಳಗ್ಗೆ ಕೊಡಬೇಕು.

೩೧. ಉಪ್ಪಲೀಗೆ – ಇದರ ದಂಟಿನಲ್ಲಿ ಬರುವ ಮೇಣವನ್ನು ಕುರುವಿಗೆ ಹಚ್ಚಬೇಕು.

೩೨. ಕುಂಟಾಲ್ –ಕಫಕ್ಕೆ ಇದರ ಚಿಗುರನ್ನು ಅರೆದು ಮಕ್ಕಳಿಗೆ ಕುಡಿಸುತ್ತಾರೆ.

೩೩. ಬೇಲಿ ಗುಲಾಬಿ –ಹೊಟ್ಟೆನೋವಿಗೆ ಇದರ ಚಿಗುರೆಲೆಯ ರಸವನ್ನು ತೆಗೆದು ಕುಡಿಯುತ್ತಾರೆ. ಮತ್ತು ರಕ್ತ ಹೆಪ್ಪು ಗಟ್ಟಲು ಇದರ ಎಲೆಯನ್ನು ಗುದ್ದಿ ಗಾಯಕ್ಕೆ ಇಟ್ಟು ಬಟ್ಟೆಯಿಂದ ಕಟ್ಟುತ್ತಾರೆ.

೩೪. ಅಲ್‌ಂಬುಡ–ಅಗ್ರಕ್ಕೆ ಇದರ ಎಲೆಯಲ್ಲಿ ಬರುವ ಹಾಲನ್ನು ಮಕ್ಕಳ ನಾಲಿಗೆಗೆ ಮುಟ್ಟಿಸುತ್ತಾರೆ.

೩೫. ಮಾದೇರಿ– ಮಕ್ಕಳ ಹೊಟ್ಟೆನೋವಿಗೆ ಇದರ ಚಿಗುರೆಲೆಯ ರಸವನ್ನು ಕುಡಿಸುತ್ತಾರೆ.

೩೬. ಕಾರಂಬಟೆ –ಜಿಗುಟೆ ಕಚ್ಚಿದರೆ ಇದರ ಕಾಯಿಯನ್ನು ಗುದ್ದಿ ಕಾಲಿಗೆ ಹಚ್ಚಬೇಕು.

೩೭. ಗರುಡಪಾತಾಳ–ಹಾವು ಕಡಿದರೆ ಮತ್ತು ಕೆಂಪು ರೋಗಕ್ಕೆ ಇದರ ಬೇರನ್ನು ಹಾಗೂ ಈಶ್ವರ ಬೇರನ್ನು ಲಿಂಬೆ ರಸದಲ್ಲಿ ಅರೆದು ಕುಡಿಯಬೇಕು.

೩೮. ಮರೋಳು–ಜಾನುವಾರುಗಳ ಶೀತಕ್ಕೆ ಇದರ ಎಲೆಯನ್ನು ಕರಿ ಮೆಣಸು ಹಾಕಿ ಅರೆದು ಬಿಸಿ ಮಾಡಿ ಕುಡಿಸುತ್ತಾರೆ.

೩೯. ಮುಖಬರೆ–ಜಾನುವಾರುಗಳ ಶೀತಕ್ಕೆ ಇದರ ಎಲೆಯನ್ನು ಅರೆದು ಕುದಿಸಿ ಕೊಡುತ್ತಾರೆ.

೪೦. ಕುಳಾಯಿ ಬೂರು – ಕಲ್ಲು ಕೆಂಪುವಿಗೆ ಇದರ ಎಲೆಯನ್ನು ಅರೆದು ಹಚ್ಚುತ್ತಾರೆ.ಜಾನುವಾರುಗಳಿಗೆ ಹಾಲು ಜಾಸ್ತಿಯಾಗಲು ಇದರ ಬೀಳನ್ನು ಬೇಯಿಸಿ ಕೊಡುತ್ತಾರೆ.

೪೧. ಕಾರದ ಬೂರು –ತಲೆಸಿಡಿತಕ್ಕೆ , ಶೀತಕ್ಕೆ ಇದರ ಎಲೆಯನ್ನು ಗುದ್ದಿ ತಲೆಗೆ ಹಚ್ಚಬೇಕು ಮತ್ತು ಮೂಗಿನಲ್ಲಿ ಸೇದಬೇಕು.

೪೨. ಕಾವಟೆ– ಕೆಪ್ಪಟರಾಯಕ್ಕೆ ಇದರ ಕಾಯಿಯನ್ನು ಗುದ್ದಿ ಗಂಧವನ್ನು ಮಿಶ್ರಮಾಡಿ ಹಚ್ಚಬೇಕು.

೪೩. ಮಾಕಾಳಿ–ಸೋಂಕಿಗೆ ಇದರ ಎಲೆಯನ್ನು ನೀರಿನಲ್ಲಿ ಅರೆದು ಮೈಗೆ ಹಚ್ಚಬೇಕು ಮತ್ತು ಕುಡಿಯಲು ಕೊಡಬೇಕು.

೪೪. ಅರಣೆ ಬೇರು– ಸೆಕೆ ಬೊಕ್ಕೆ, ಕಜ್ಜಿಗೆ ಇದರ ಬೇರನ್ನು ಅರೆದು ಲಿಂಬೆ ಹುಳಿಯ ರಸದಲ್ಲಿ ಹಚ್ಚಬೇಕು.

೪೫. ಕಟ್ರೆ –ವಿಷ ತಾಗಿದರೆ ಇದರ ತೊಗಟೆಯನ್ನು ಲಿಂಬೆಹುಳಿಯ ರಸದಲ್ಲಿ ಅರೆದು ಕುಡಿಯಲು ಕೊಡಬೇಕು ಮತ್ತು ಲೇಹವನ್ನು ಗಾಯಕ್ಕೆ ಹಚ್ಚಬೇಕು.

೪೬. ಕೊಳ್ಳುತಪ್ಪು –ಕುರುವಿಗೆ ಮತ್ತು ಕೆಂಪು ರೋಗಕ್ಕೆ ಇದರ ಎಲೆಯನ್ನು ಅಕ್ಕಿ ತೊಳೆದ ನೀರಿನಲ್ಲಿ ಅರೆದು ಹಚ್ಚಬೇಕು.

೪೭. ಕುಂಟಿರಿ –ಮೈಯಲ್ಲಿ ನೀರು ಬಂದರೆ ಇದರ ಎಲೆಯ ಕಷಾಯ ಮಾಡಿ ಅದರಲ್ಲಿ ಒಂದು ವಾರ ಸ್ನಾನ ಮಾಡಬೇಕು.

೪೮. ಬಣ್ಪು –ಹಾವು ಕಡಿದರೆ ಇದರ ತೊಗಟೆಯನ್ನು ಬೇಯಿಸಿ ಅದರ ಕಷಾಯದಿಂದ ಗಾಯವನ್ನು ತೊಳೆಯಬೇಕು ಮತ್ತು ಇದರ ಕಾಯಿಯನ್ನು ಅರೆದು ವಿಷದ ಗಾಯಕ್ಕೆ ಹಚ್ಚಬೇಕು.

೪೯. ಸದಾವರಿ –ಪಿತ್ತಕ್ಕೆ ಇದರ ಬೇರು, ಬಿಳಿ ಪೊಂಗರೆಯ ಬೇರನ್ನು ಗಂಜಿಯೊಂದಿಗೆ ಬೇಯಿಸಿ ಊಟಮಾಡಬೇಕು.

೫೦. ಮೊಡಂಬಡಿ–ದೇಹ ಪುಷ್ಟಿಗೆ ಇದರ ಹೂವು ಮತ್ತು ಪುರುಷ ರತ್ನವನ್ನು ಅರೆದು ಹಾಲಿನಲ್ಲಿ ಮಿಶ್ರಮಾಡಿ ನಲುವತ್ತೆಂಟು ದಿನ ಕುಡಿಯಬೇಕು. ಹೆಂಗಸರು ಇದನ್ನು ಕುಡಿಯಬಾರದು.ಕುಡಿದರೆ ಗರ್ಭ ಧರಿಸುವುದಿಲ್ಲ.

೫೧. ಕಾಟ್ ಮನೋಳಿ– ಇದರ ಎಲೆಯನ್ನು ಕಷಾಯ ಮಾಡಿ ಗಾಯ ತೊಳೆಯಲು ಬಳಸುತ್ತಾರೆ.

೫೨. ಕರಿಯ ಮಾದೆರಿ –ಕಣ್ಣಿನ ಸ್ವಚ್ಛತೆಗೆ ಇದರ ದಂಟಿನಲ್ಲಿ ಬರುವ ನೀರನ್ನು ಕಣ್ಣಿಗೆ ಬಿಡುತ್ತಾರೆ. ಮತ್ತು ತಂಪಿಗೆ ಇದರ ಎಲೆಯನ್ನು ಹಿಂಡಿ ಸಕ್ಕರೆ ಹಾಕಿ ಕುಡಿಯುತ್ತಾರೆ.

೫೩. ದಡ್ಪಲೆ–ಕೂದಲು ಉದುರುವುದಕ್ಕೆ ಇದರ ಎಲೆಯನ್ನು ಗಂಜಿ ಇಟ್ಟು ಊಟ ಮಾಡಬೇಕು.

೫೪. ಕಿನ್ಯ ತಪ್ಪು –ಹಾಲು ಹೆಚ್ಚಾಗಲು ಇದನ್ನು ಚೆನ್ನಾಗಿ ಬೇಯಿಸಿ ದನಗಳಿಗೆ ಕೊಡುತ್ತಾರೆ.

೫೫. ಚೆಂಡೆ–ಮೈಯಲ್ಲಿ ನೀರು ಬಂದರೆ ಇದರ ಸೊಪ್ಪನ್ನು ಕಷಾಯ ಮಾಡಿ ಸ್ನಾನ ಮಾಡುತ್ತಾರೆ.

೫೬. ಕಾಟ್ ಕಡೀರ್ –ಕಜ್ಜಿಗೆ ಇದರ ಎಲೆಯನ್ನು ತೆಂಗಿನ ಎಣ್ಣೆಯಲ್ಲಿ ಕಾಯಿಸಿ ಹಚ್ಚುತ್ತಾರೆ.

೫೭. ಒಳ್ಳೆಕೊಡಿ–ಮಕ್ಕಳಿಗೆ ಹೊಟ್ಟೆನೋವಾದರೆ ಇದರ ಎಲೆಯನ್ನು ಅರೆದು ಕುಡಿಸಬೇಕು.

೫೮. ನಾಯಿ ಚುಣಿಕಿ – ಕಜ್ಜಿಗೆ ಇದರ ಕಾಯಿಯನ್ನು ಕಾಯಿಸಿ ಮಸಿ ಮಾಡಿ ಎಣ್ಣೆಯಲ್ಲಿ ಹಚ್ಚುತ್ತಾರೆ.

೫೯. ನಲೆಕಣೆ–ಕಲ್ಲೊತ್ತು ,ಮುಳ್ಳುತಾಗಿದರೆ ಇದರ ಬೇರನ್ನು ಉಪ್ಪಿನೊಂದಿಗೆ ಅರೆದು ಹಚ್ಚಬೇಕು.

೬೦. ಕೋರಂಪತಿ –ಮಕ್ಕಳಿಗೆ ಕೋರ ಬಿದ್ದರೆ ಇದರ ಕಷಾಯದಲ್ಲಿ ಸ್ನಾನ ಮಾಡಿಸಬೇಕು.

೬೧. ಉದ್ರಿ ಕಂಡೆ –ದನಗಳಿಗೆ ಹಾಲು ಹೆಚ್ಚಾಗಲು ಇದರ ಗೆಡ್ಡೆಯನ್ನು ಬೇಯಿಸಿ ಕೊಡುತ್ತಾರೆ.

೬೨. ಬೀಟಿ–ಸೋಂಕಿಗೆ ಇದರ ತೊಗಟೆಯ ರಸವನ್ನು ಓಲೆ ಬೆಲ್ಲದಲ್ಲಿ ಬೆರೆಸಿ ಕುಡಿಯಬೇಕು.

೬೩. ಬೊಳ್ಳೆತಪ್ಪು –ಜಾನುವಾರುಗಳಿಗೆ ಪುಷ್ಟಿಗೆ ಇದರ ಎಲೆಯನ್ನು ಬೇಯಿಸಿ ಕೊಡುತ್ತಾರೆ.

೬೪. ಊರಂಟೆ –ನಾಯಿಯ ರೋಮ ಉದುರುವುದಕ್ಕೆ ಇದರ ಕಾಯಿಯನ್ನು ಗುದ್ದಿ ಕರಿ ಮಾಡಿ ಹಚ್ಚುತ್ತಾರೆ.

೬೫. ಪೊಂಗರೆ –ನಂಜು ಮತ್ತು ಕಜ್ಜಿಗೆ ಇದರ ಕಾಯಿಯನ್ನು ಗುದ್ದಿ ತೆಂಗಿನ ಎಣ್ಣೆಯಲ್ಲಿ ಕಾಯಿಸಿ ಹಚ್ಚುತ್ತಾರೆ.

೬೬. ಸಿಹಿ ಅಲ್‌ಂಬುಡ –ನೋವು ನಿವಾರಣೆಗೆ ಇದರ ಕಾಯಿಯ ಎಣ್ಣೆ ತೆಗೆದು ಹಚ್ಚುತ್ತಾರೆ.

೬೭. ಎಕ್ಕಮಲೆ –ಕಜ್ಜಿಗೆ ಇದರ ಬೇರನ್ನು ಕಷಾಯ ಮಾಡಿ ಸ್ನಾನ ಮಾಡಿಸುತ್ತಾರೆ. ಅಲ್ಲದೆ ಕೆಲ್ಲುಗುರು ಇದ್ದರೆ ಎಲೆಯಲ್ಲಿ ಬರುವ ಹಾಲನ್ನು ಉಗುರಿಗೆ ಬಿಡುತ್ತಾರೆ.

೬೮. ಕಾಟ್ಕೊರಿ–ನಂಜಿಗೆ ಇದರ ಬೇರನ್ನು ಅರೆದು ಹಚ್ಚುತ್ತಾರೆ.

೬೯. ಪಾಂಡಿಕುಕ್ಕು–ಉಬ್ಬಸಕ್ಕೆ ಇದರ ತೊಗಟೆಯನ್ನು ಅರೆದು ಉಡದ ತುಪ್ಪದಲ್ಲಿ ಕಾಯಿಸಿ ಹೊಟ್ಟೆಗೆ ತೆಗೆದುಕೊಳ್ಳಬೇಕು.

೭೦. ಮುಚ್ಚಿರ್–ಮಕ್ಕಳ ತಾಮರೆ ರೋಗಕ್ಕೆ ಅಲ್‌ಂಬುಡದ ತುಪ್ಪದಲ್ಲಿ ಕಾಯಿಸಿ ಹೊಟ್ಟೆಗೆ ತೆಗೆದುಕೊಳ್ಳಬೇಕು.

೭೧. ನೋಕೊಟೆ– ಬೆನ್ನು ನೋವಿಗೆ ಇದರ ತೊಗಟೆಯನ್ನು ಅರೆದು ಹಚ್ಚಬೇಕು.

೭೨. ಸುಕ್ರುಮ ಬೇರು –ಹೊಟ್ಟೆನೋವು ಇದ್ದರೆ ಮಕ್ಕಳಿಗೆ ಇದರ ಬೇರಿನ ರಸವನ್ನು ಕುಡಿಸುತ್ತಾರೆ.

೭೩. ವಿಷ ಮುಂಗುಲಿ –ಹಾವು ಕಚ್ಚಿದರೆ ಇದರ ಎಲೆಯ ರಸವನ್ನು ವಾಂತಿ ಮಾಡಲು ಕುಡಿಸುತ್ತಾರೆ.

೭೪. ನಾಚಿಕೆ ಮುಳ್ಳು–ವಾಂತಿ ಮತ್ತು ಭೇದಿ ಇದ್ದರೆ ಇದರ ಬೇರನ್ನು ಕಷಾಯ ಮಾಡಿ ಕುಡಿಯಲು ಕೊಡುತ್ತಾರೆ.

೭೫. ಅಣ್‌ಪಿಜ–ಉಗುರು ಸುತ್ತು ಇದ್ದರೆ ಇದರ ತೊಗಟೆಯ ರಸವನ್ನು ಉಗುರಿಗೆ ಬಿಡಬೇಕು.

೭೬. ಕದಳಿ ಬಾಳೆ–ಬಿಳಿಸೆರಗಿಗೆ ಇದರ ಗೆಡ್ಡೆಯನ್ನು ಗುದ್ದಿ ರಸ ತೆಗೆದು ಕಲ್ಲು ಸಕ್ಕರೆ ಹಾಗೂ ಹಾಲಿನಲ್ಲಿ ಮಿಶ್ರ ಮಾಡಿ ಕುಡಿಯಲು ಕೊಡುತ್ತಾರೆ.

೭೭. ಬದನೆ–ಗಾಯಕ್ಕೆ ಇದರ ಚಿಗುರೆಲೆಯನ್ನು ತೆಂಗಿನ ಎಣ್ಣೆಯಲ್ಲಿ ಕಾಯಿಸಿ ಹಚ್ಚುತ್ತಾರೆ.

೭೮. ಬೀಯದ ಮರ– ಉಳುಕು ಹಾಗೂ ನೋವಿಗೆ ಇದರ ತೊಗಟೆಯನ್ನು ಹುಡಿ ಮಾಡಿ ತೆಂಗಿನ ಎಣ್ಣೆಯಲ್ಲಿ ಕಾಯಿಸಿ ಹಚ್ಚುತ್ತಾರೆ. ಗಾಯಕ್ಕೆ ಇದರ ತೊಗಟೆ ಹಾಗೂ ನೆಲ್ಲಿಯ ತೊಗಟೆಯನ್ನು ಬಿಸಿ ಮಾಡಿ ಹಚ್ಚುತ್ತಾರೆ.

೭೯. ಕುರ್ಮ–ಕೈ ಕಾಲು ಮುರಿದರೆ ಇದರ ತೊಗಟೆ, ಕೇಪುಳದ ಬೇರನ್ನು ಹುಡಿಮಾಡಿ ತೆಂಗಿನ ಎಣ್ಣೆಯಲ್ಲಿ ಕಾಯಿಸಿ ಹಚ್ಚುತ್ತಾರೆ. ಗಾಯಕ್ಕೆ ಇದರ ತೊಗಟೆ ಹಾಗೂ ನೆಲ್ಲಿಯ ತೊಗಟೆಯನ್ನು ಬಿಸಿ ಮಾಡಿ ಹಚ್ಚುತ್ತಾರೆ.

೮೦. ಮದಿರೆಂಗಿ – ಹಳದಿ ರೋಗಕ್ಕೆ ಇದರ ಎಲೆಯನ್ನು ಅರೆದು ಇಡೀ ಮೈಗೆ ಹಚ್ಚಬೇಕು ಮತ್ತು ಸುಮಾರು ಇಪ್ಪತ್ತು ಕೊಡದಷ್ಟು ನೀರಿನಲ್ಲಿ ಸ್ನಾನ ಮಾಡಬೇಕು.

೮೧. ನಂದಿ ಬಟ್ಟಲು –ಗಂಟಲು ನೋವಿಗೆ ಇದರ ಬೇರನ್ನು ಲಿಂಬೆ ಹುಳಿ ರಸದಲ್ಲಿ ಅರೆದು ಕುಡಿಯುತ್ತಾರೆ.

೮೨. ಪಲ್ಲೆ–ಕಜ್ಜಿಗೆ ಇದರ ತೊಗಟೆ ಮತ್ತು ಶೀಗೆ ಕಾಯಿಯ ತೊಗಟೆಯನ್ನು ಅರೆದು ಹಚ್ಚುತ್ತಾರೆ. ಸಿಡುಬಿಗೆ ಲಿಂಬೆ ರಸದಲ್ಲಿ ಇದರ ತೊಗಟೆಯನ್ನು ಅರೆದು ಅದಕ್ಕೆ ಸ್ವಲ್ಪ ಶರಾಬು ಮಿಶ್ರ ಮಾಡಿ ಕುಡಿಯುತ್ತಾರೆ.

೮೩. ಹುರುಳಿ ಗಿಡ – ಕೈ ಕಾಲು ನೋವು ಇದ್ದರೆ ಇದರ ಎಲೆಯ ರಸ ತೆಗೆದು ಚೆನ್ನಾಗಿ ತಿಕ್ಕಬೇಕು.

೮೪. ಉತ್ರಾಣಿ –ಜಾನುವಾರುಗಳ ಎಲುಬು ತುಂಡಾದರೆ ಇದರ ಲೇಹವನ್ನು ತಯಾರಿಸಿ ತುಂಡಾದ ಭಾಗಕ್ಕೆ ಹಚ್ಚಿ ಬಟ್ಟೆಯಿಂದ ಕಟ್ಟಬೇಕು.

೮೫. ಕಾಡು ಬಸಳೆ–ಗಾಯಕ್ಕೆ ಇದರ ಎಲೆ ಹಾಗೂ ಹುರುಳಿ ಮಿಶ್ರ ಮಾಡಿ ತೆಂಗಿನ ಎಣ್ಣೆಯಲ್ಲಿ ಗಾಯಕ್ಕೆ ಹಚ್ಚಬೇಕು.

೮೬. ಉಂಬುಸ– ಕೆಪಟರಾಯ ಇದ್ದರೆ ಇದರ ಎಲೆಯ ರಸ ತೆಗೆದು ಸುಣ್ಣ ಬೆರೆಸಿ ಕೆನ್ನೆಗೆ ಹಚ್ಚುತ್ತಾರೆ.

೮೭. ಮಾದೇರಿ ಬಂದಣಿಗೆ – ಇದರ ಎಲೆಯನ್ನು ಬೆನ್ನು ನೋವಿಗೆ ಕಷಾಯ ಮಾಡಿ ಕುಡಿಯುತ್ತಾರೆ.

೮೮. ಕಾಡ್ ಕೂವೆ – ದನಗಳಿಗೆ ಪುಷ್ಟಿ ಬರಲು ಇದರ ಎಲೆಯನ್ನು ಬೇಯಿಸಿ ಕೊಡುತ್ತಾರೆ.

೮೯. ಕಾರೆಕಾಯಿ – ಹೊಟ್ಟೆನೋವಿಗೆ ಇದರ ಚಿಗುರು ಎಲೆಯನ್ನು ಅರೆದು ಕುಡಿಯುತ್ತಾರೆ.

೯೦. ಸೋಂಕಿನ ಮರ – ಸೋಂಕು ತಗುಲಿದರೆ ಇದರ ತೊಗಟೆಯನ್ನು ಅರೆದು ಕುಡಿಯುತ್ತಾರೆ.

೯೧. ನರುವೊಲು(ನೊರೆಕಾಯಿ)–ಜಾನುವಾರುಗಳಿಗೆ ಶೀತವಾದರೆ ಇದರ ಕಾಯಿಯನು ಗುದ್ದೆ ರಸ ತೆಗೆದು ಕುಡಿಸುತ್ತಾರೆ.

೯೨. ಉಪ್ಪು ಮೈತಾಲ್– ಪಿತ್ತಕೆ ಇದರ ಎಲೆಯನ್ನು ನೀರಿನಲ್ಲಿ ಅರೆದು ತಲೆಗೆ ಹಾಕುತ್ತಾರೆ.

೯೩. ನೆಕ್ಕರೆ – ಕಜ್ಜಿಗೆ ಇದರ ಬೇರನ್ನು ಲಿಂಬೆ ರಸದಲ್ಲಿ ಅರೆದು ಮುಟ್ಟಿಸಬೇಕು.

೯೪. ಸೆಡಿ ಬಲ್ಲ್ –ತಲೆ ಸಿಡಿತಕ್ಕೆ ಇದರ ದಂಟಿನ ರಸ ತೆಗೆದು ಮೂಗಿಗೆ ಬಿಡುತ್ತಾರೆ.

೯೫. ಬೆಡಿಕೆರಿ ಸೊಪ್ಪು –ದನಗಳಿಗೆ ಪುಷ್ಟಿಗೆ ಇದರ ಎಲೆಯನ್ನು ಬೇಯಿಸಿ ಕೊಡುತ್ತಾರೆ.

೯೬. ಪೆದಮ್ಮಳಿ– ಭೇದಿಗೆ ಇದರ ಎಲೆಯನ್ನು ನೀರಿನಲ್ಲಿ ಅರೆದು ಕುಡಿಸುತ್ತಾರೆ.

೯೭. ಮಜ್ಜಿಗೆ ಗಿಡ –ಶೀತ ಮತ್ತು ಜ್ವರಕ್ಕೆ ಈ ಗಿಡದ ಕಷಾಯ ಮಾಡಿ ಓಲೆ ಬೆಲ್ಲ, ಶುಂಠಿ ಮಿಶ್ರ ಮಾಡಿ ಕುಡಿಯುತ್ತಾರೆ.

೯೮. ಜತ್ತುಗ ಸೊಪ್ಪು – ಜಾನುವಾರುಗಳಿಗೆ ಹೆಗಲು ನೋವು ಬಂದರೆ ಇದರ ಎಲೆಯನ್ನು ಅರೆದು ಬಿಸಿ ಮಾಡಿ ಹಚ್ಚುತ್ತಾರೆ.

೯೯. ನೆಲಮೈತಾಳ್ –ಪಿತ್ತಕ್ಕೆ ಇದರ ಎಲೆಯನ್ನು ಹಿಂಡಿ ರಸ ತೆಗೆದು ತಲೆಗೆ ಹಾಕುತ್ತಾರೆ. ಅಥವಾ ಇದರ ಎಲೆಯನ್ನು ಗುದ್ದಿ ತೆಂಗಿನ ಎಣ್ಣೆಯಲ್ಲಿ ಕಾಯಿಸಿ ತಲೆಗೆ ಹಾಕುತ್ತಾರೆ.

೧೦೦. ನುಸಿ ತಪ್ಪು – ನೊಣ ಮತ್ತು ಸೊಳ್ಳೆಗಳ ನಿವಾರಣೆಗೆ ಇದರ ಸೊಪ್ಪನ್ನು ಹಟ್ಟಿ ಮತ್ತು ಮನೆಯಲ್ಲಿ ಇಡುತ್ತಾರೆ.

೧೦೧. ಇರ್‌ಪ್ಪೆ– ತಂಪಿಗೆ ಮತ್ತು ಪಿತ್ತಕ್ಕೆ ಇದರ ಸೊಪ್ಪನ್ನು ಅರೆದು ತಲೆಗೆ ಹಚ್ಚಬೇಕು. ಹಾಗೂ ನಂಜಿಗೆ ಇದರ ತೊಗಟೆಯ ಕಷಾಯವನ್ನು ಮಾಡಿ ಕುಡಿಯುತ್ತಾರೆ.

೧೦೨. ಹಾಗಲ ಕಾಯಿ -- ಇದರ ಎಲೆಯ ರಸ ತೆಗೆದು ಉಪ್ಪು ಸೇರಿಸಿ ಕರುಗಳಿಗೆ ಹೊಟ್ಟೆ ಹುಳ ಇದ್ದರೆ ಕುಡಿಸುತ್ತಾರೆ.

೧೦೩. ಕಕ್ಕೆ ಸೊಪ್ಪು -- ಗರ್ಭ ನಿಲ್ಲದಿದ್ದಾಗ ಬಿದಿರಿನ ಎಲೆಯ ರಸದಲ್ಲಿ ಇದರ ಎಲೆಯನ್ನು ಅರೆದು ಮುಟ್ಟು ಆದ ನಂತರ ಕುಡಿಯಲು ಕೊಡಬೇಕು.

೧೦೪. ನಿರ್ವಿಷ - ನಂಜಿಗೆ ಇದರ ಬೇರನ್ನು ಲಿಂಬೆ ರಸದಲ್ಲಿ ಅರೆದು ಕುಡಿಯಬೇಕು. ಪಕ್ಷವಾತಕ್ಕೆ ಇದರ ಬೇರನ್ನು ಗೋಮೂತ್ರದಲ್ಲಿ ಅರೆದು ಕಾಯಿಸಿ ಹಚ್ಚುತ್ತಾರೆ.

೧೦೫. ನರ್ಗೊಲ್ ಸೊಪ್ಪು -- ಕೆಮ್ಮಿಗೆ ಇದರ ಎಲೆಯನ್ನು ಅರೆದು ತೆಂಗಿನಕಾಯಿ , ಓಮ, ಜೀರಿಗೆ ಮತ್ತು ತುಪ್ಪದಲ್ಲಿ ಮಿಶ್ರ ಮಾಡಿ ತಿನ್ನಲು ಕೊಡುತ್ತಾರೆ.

೧೦೬. ಕಿರಾತ ಕಡ್ಡಿ -- ತಲೆ ನೋವಿಗೆ ಇದರ ಎಲೆಯ ಕಷಾಯ ಮಾಡಿ ಕುಡಿಯುತ್ತಾರೆ.

೧೦೭. ತಜಂಕ್ (ಚಗತೆ) --ಪಿತ್ತಕ್ಕೆ ಇದರ ಎಲೆಯ ಗಂಜಿ ಮಾಡಿ ತಿನ್ನುತ್ತಾರೆ.

೧೦೮. ಅಗ್ನಿ ಬೀಳು-- ಬೆಂಕಿ ತಾಗದ ಹಾಗೆ ಇದರ ಬೇರನ್ನು ಕಟ್ಟಿ ಕೊಳ್ಳುತ್ತಾರೆ. ಭೂತ ಕಟ್ಟುವವರು ಇದರ ಬೇರನ್ನು ಕೆಂಡ ಸೇವೆಯ ಸಮಯದಲ್ಲಿ ಮೈಗೆ ಕಟ್ಟಿಕೊಳ್ಳುತ್ತಾರೆ.

೧೦೯. ಕೊಯ ಮರುವ --ಬಿಳಿ ಸೆರಗಿಗೆ ಇದರ ತೊಗಟೆಯನ್ನು ಜೀರಿಗೆ ಹಾಕಿ ಅರೆದು ದಿನಕ್ಕೆ ಎರಡು ಸಲ ಕುಡಿಯಬೇಕು.

೧೧೦. ಕಡುಪಂತಿ--ಭೇದಿಗೆ ಇದರ ಎಲೆಯನ್ನು ಜೀರಿಗೆ ಹಾಕಿ ಕಷಾಯ ಮಾಡಿ ಕುಡಿಯುತ್ತಾರೆ.

೧೧೧. ಓಟೆ ಹುಳಿ-- ಪಿತ್ತಕ್ಕೆ ಇದನ್ನು ನೀರಿನಲ್ಲಿ ಕಲಸಿ ತಲೆಗೆ ಹಚ್ಚಬೇಕು. ನಂತರ ಅರ್ಧ ಗಂಟೆ ಕಳೆದು ಸ್ನಾನ ಮಾಡಬೇಕು.

೧೧೨. ಶೀತ ಸೊಪ್ಪು-- ಜಾನುವಾರುಗಳಿಗೆ ಶೀತಕ್ಕೆ ಓಮ, ಕರಿಮೆಣಸು, ಸಣ್ಣಮೆಣಸು ಹಾಕಿ ಅರೆದು ಕಾಯಿಸಿ ಕುಡಿಯಲು ಕೊಡುತ್ತಾರೆ.

೧೧೩. ಲಾವ-- ಕುರುವಿಗೆ ಇದರ ತೊಗಟೆಯನ್ನು ಅರೆದು ಹಚ್ಚಬೇಕು.

೧೧೪. ಈಶ್ವರ ಬೇರು --ವಿಷ ತಾಗಿದರೆ ಇದರ ಬೇರು, ಗರುಡ ಪಾತಾಳದ ಬೇರನ್ನು ಲಿಂಬೆ ರಸದಲ್ಲಿ ಅರೆದು ಸ್ವಲ್ಪ ಚಹಾಹುಡಿ ಮಿಶ್ರ ಮಾಡಿ ಗುಳಿಗೆ ತಯಾರಿಸಿ ನುಂಗಬೇಕು.

೧೧೫. ಕಂದಡಿ ಬೂರು -- ಹೆಂಗಸರ ಸವಿ ರೋಗಕ್ಕೆ ಇದರ ಗೆಡ್ಡೆಯನ್ನು ಗಂಜಿ ಇಟ್ಟು ಕೊಡುತ್ತಾರೆ.

೧೧೬. ಕಲ್ಲ್‌ಮುಂಡಿ--ಕಲ್ಲೊತ್ತಾದರೆ ಇದರ ಸೊಪ್ಪನ್ನು ಬಿಳಿ ಕಲ್ಲಿನಲ್ಲಿ ಗುದ್ದಿ ಗೆರಟೆಯಲ್ಲಿ ಹಾಕಿ ಬಿಸಿ ಮಾಡಿ ಕಲ್ಲೊತ್ತಾದ ಜಾಗಕ್ಕೆ ಗಟ್ಟಿಯಾಗಿ ಹಿಡಿಯಬೇಕು.

೧೧೭. ಸನ್ಯಾಸಿ ಬೂರು -- ಸವಿ ರೋಗಕ್ಕೆ ಇದರ ಗಿಡವನ್ನು ಗಂಜಿಯಲ್ಲಿ ಬೇಯಿಸಿ ಕೊಡುತ್ತಾರೆ.

೧೧೮. ಪೆತ್ತಜೆಂಕ್ –ಎತ್ತುಗಳಿಗೆ ಹೆಗಲು ಬಾವು ಬಂದರೆ ಇದರ ಎಲೆಯನ್ನು ಗುದ್ದಿ ಹೆಗಲಿಗೆ ಹಚ್ಚುತ್ತಾರೆ.

೧೧೯. ಆಡುಸೋಗೆ –ಚಿನ್ನೆಗೆ ಮತ್ತು ಕಫಕ್ಕೆ ಇದರ ಎಲೆಯ ರಸವನ್ನು ತೆಗೆದು ಕುಡಿಯಲು ಕೊಡುತ್ತಾರೆ.

೧೨೦. ಬಲ್ಪ ಸೊಪ್ಪು –ಇದರ ಎಲೆಯನ್ನು ತಲೆ ತೊಳೆಯಲು ಉಪಯೋಗಿಸುತ್ತಾರೆ.

೧೨೧. ಕಾಯರ್ ಬಂದಣಿಗೆ– ನಾಯಿಯನ್ನು ಕೊಲ್ಲಲು ಇದರ ದಂಟನ್ನು ಗಂಜಿ ಇಟ್ಟು ಕೊಡುತ್ತಾರೆ.

೧೨೨. ಎದ್ರೋಳಿ– ತಂಪಿಗೆ ಇದರ ಎಲೆಯ ರಸ ತೆಗೆದು ಸಕ್ಕರೆ ಹಾಕಿ ಕುಡಿಯುತ್ತಾರೆ.

೧೨೩. ತಿಮರೆ–ಮಕ್ಕಳಿಗೆ ಬುದ್ಧಿ ಬೆಳೆಯಲು ಇದರ ರಸವನ್ನು ಕುಡಿಸುತ್ತಾರೆ.

೧೨೪. ಬಲ್ಪ ಕೊಡಿ –ಮುಟ್ಟಿನಿಂದ ಬರುವ ಹೊಟ್ಟೆನೋವಿಗೆ ಮುಟ್ಟು ನಿಲ್ಲುವ ಸಮಯದಲ್ಲಿ ಇದರ ತೊಗಟೆಯನ್ನು ಜೀರಿಗೆಯೊಂದಿಗೆ ಕಷಾಯ ಮಾಡಿ ಕೊಡುತ್ತಾರೆ.

೧೨೫. ಅಮವಾಸೆ ಬೂರು–ಜಾನುವಾರುಗಳಿಗೆ ಶೀತ, ಜ್ವರ ಬಂದರೆ ಹುಣಿಸಿ ಹುಳಿ, ಬೆಳ್ಳುಳ್ಳಿ, ಒಳ್ಳೆಮೆಣಸು ಹಾಗೂ ಇದರ ಎಲೆಯನ್ನು ಕುದಿಸಿ ಕುಡಿಯಬೇಕು.

೧೨೬. ಕಮ್ಯುನಿಸ್ಟ್ ಗಿಡ – ಕತ್ತಿ ತಾಗಿದರೆ ಇದರ ಎಲೆಯನ್ನು ಗುದ್ದಿ ರಸ ತೆಗೆದು ಗಾಯಕ್ಕೆ ಹಚ್ಚುತ್ತಾರೆ.

೧೨೭. ಎಂಟಾರ್–ಒರ್ಕೆನ್ನಿಗೆ ಇದರ ತೊಗಟೆಯನ್ನು ಬೆಳ್ಳುಳ್ಳಿಯೊಂದಿಗೆ ನೀರಿನಲ್ಲಿ ಅರ್‌ದು ರಸ ತೆಗೆದು ಮೂಗಿಗೆ ಬಿಡುತ್ತಾರೆ.

೧೨೮. ಕರಂಡೆ ಹುಳಿ– ವಿಷದ ಹಾವು ಕಡಿದರೆ ಇದರ ರಸವನ್ನು ಕುಡಿಸುತ್ತಾರೆ.

೧೨೯. ರಾಮಪಾತ್ರೆ– ಮಳೆಗಾಲದಲ್ಲಿ ಕಾಲಲ್ಲಿ ಉಂಟಾಗುವ ಗಾಯಕ್ಕೆ ಇದರ ಕಾಯಿಯ ಎಣ್ಣೆಯನ್ನು ಹಚ್ಚುತ್ತಾರೆ.

೧೩೦. ಬೊಲ್‌ಂದುರು ಕಾಯಿ –ಜೇಡ ಕಚ್ಚಿದರೆ ಇದರ ಕಾಯಿಯನ್ನು ನೀರಿನಲ್ಲಿ ಅರೆದು ಮೈಗೆ ಹಚ್ಚಬೇಕು ಮತ್ತು ಒಂದು ವಾರ ದಿನಕ್ಕೊಮ್ಮೆ ಇದರ ನೀರನ್ನು ಕುಡಿಯಬೇಕು.

೧೩೧. ಜಂಗಮೆ– ಕಜ್ಜಿ ಬಿದ್ದರೆ ಈ ಮರದ ಸೊಪ್ಪಿನ ಕಷಾಯ ಮಾಡಿ ಸ್ನಾನ ಮಾಡಬೇಕು.

೧೩೨. ಕಹಿ ಕುದನೆ– ಮಕ್ಕಳಿಗೆ ಹೊಟ್ಟೆನೋವು ಇದ್ದರೆ ಹೊಟ್ಟೆಯ ಹುಳ ಹೋಗಲು ಇದರ ಬೇರಿನ ಕಷಾಯ ಮಾಡಿ ಕುಡಿಸುತ್ತಾರೆ.

೧೩೩. ಕಹಿ ಜೀರಿಗೆ – ಭೇದಿ ಇದ್ದರೆ ಇದರ ಕಷಾಯ ಮಾಡಿ ಕುಡಿದರೆ ಕಡಿಮೆಯಾಗುತ್ತದೆ. ಅಲ್ಲದೆ ಬಾಣಂತಿಯರಿಗೆ ಮೂರು ದಿನ ಇದರ ಕಷಾಯ ಮಾಡಿ ಕೊಡುತ್ತಾರೆ.

೧೩೪. ಕೈರೊಲಿ –ಕಣ್ಣು ಮಂದ ಇದ್ದರೆ ಇದರ ಎಲೆಯನ್ನು ಗುದ್ದಿ ರಸವನ್ನು ಕಣ್ಣಿಗೆ ಬಿಡಬೇಕು.

೧೩೫. ಮೂಂಡಿ –ಬೇಗ ಹೆರಿಗೆಯಾಗಲು ಇದರ ದಂಟಿನ ಸಿಪ್ಪೆ ತೆಗೆದು ಬೇಯಿಸಿ ಕೊಡುತ್ತಾರೆ.

೧೩೬. ಚಿತ್ರ ಮುಳ್ಳು –ಗಾಯಕ್ಕೆ ಇದರ ಸೊಪ್ಪನ್ನು ಜೀರಿಗೆ ಹಾಕಿ ಅರೆದು ಹಚ್ಚಬೇಕು.

೧೩೭. ಸೊರಗೆ– ನಾಯಿ ಮರಿ ಇಡದ ಹಾಗೆ ಇದರ ತೊಗಟೆಯನ್ನು ಗಂಜಿಯಲ್ಲಿ ಬೇಯಿಸಿ ಕೊಡುತ್ತಾರೆ.

೧೩೮. ಕಡೇ ತುದಿ ಅರೆಯುವ ಗಿಡ – ಇದರ ಒಂದು ತುದಿಯನ್ನು ಅರೆದು ಕುಡಿದರೆ ಭೇದಿ ವಾಸಿಯಾಗುತ್ತದೆ. ಇನ್ನೊಂದು ತುದಿಯನ್ನು ಅರೆದು ಕುಡಿದರೆ ವಾಂತಿಯಾಗುವುದು ನಿಲ್ಲುತ್ತದೆ.

೧೩೯. ನೆರ್ವಿಸ– ನಂಜಿಗೆ ಲಿಂಬೆಹುಳಿಯ ರಸದಲ್ಲಿ ಇದರ ಬೇರು ಅರೆದು ಹಚ್ಚಬೇಕು ಮತ್ತು ಪಕ್ಷವಾತಕ್ಕೆ ಎಮ್ಮೆಯ ಮೂತ್ರದಲ್ಲಿ ಬೇರನ್ನು ಅರೆದು ಕಾಯಿಸಿ ಹಚ್ಚಬೇಕು.

೧೪೦. ಮುಖಬಾರೆ – ದನಗಳಿಗೆ ಕಣ್ಣು ನೋವು ಬಂದರೆ ಇದರ ಬೇರನ್ನು ಅರೆದು ಕಣ್ಣಿನ ಮೇಲ್ಭಾಗಕ್ಕೆ ಹಚ್ಚುತ್ತಾರೆ.

ಮಲೆಕುಡಿಯರು ಉಪಯೋಗಿಸುವ ಕಾಡಿನ ಸಂಪನ್ಮೂಲಗಳು:

ಮಲೆಕುಡಿಯರು ಗುಡಿ ಕೈಗಾರಿಕೆಗಳಲ್ಲಿಯೂ ಬಹಳ ಪ್ರಸಿದ್ಧರು. ತಮಗೆ ಬೇಕಾದ ಸಲಕರಣೆಗಳನ್ನು ಕಾಡಿನಲ್ಲಿ ಸಿಗುವ ಗಿಡ ಬಳ್ಳಿಗಳ ಮೂಲಕ ತಯಾರಿಸಿಕೊಳ್ಳುತ್ತಾರೆ. ಸಲಕರಣೆಗಳನ್ನು ತಯಾರಿಸಲು ಉಪಯೋಗಿಸುವ ಸಸ್ಯಗಳ ವಿವರಗಳು ಈ ರೀತಿ ಇವೆ.

ಮುಡಿ ಕಟ್ಟಲು ಉಪಯೋಗಿಸುವ ಬೀಳುಗಳು:

೧. ಬನಬಳ್ಳ್

೨. ಮೊಂಟೆಬಳ್ಳ್

೩. ಮುಡಿಬಳ್ಳ್

೪. ಕೆಂಬಳ್ಳ್

ಬುಟ್ಟಿ ಹೆಣೆಯಲು ಉಪಯೋಗಿಸುವ ಬೀಳುಗಳು:

೧. ಚೆಂಡೆ

೨. ಎಂಜಿರ್

೩. ಮಾದೆರಿ

೪. ನೆಡಿಲ್ (ಗಿಡ)

೫. ಇಲ್ಲ್ ಬೂರು

೬. ಬಿದಿರು

೭. ಪರಂಟೊಳು

೮. ಕಾವೇರಿ ಬೂರು

೯. ಕರಿ ಬೂರು

೧೦. ಬೂರು ಕಾಯೆರ್

೧೧. ಕೊಕ್ಕೆ ಮುಳ್ಳು

೧೨. ಕೆನ್ನಾರ ಬೂರು

೧೩. ಓಟೆ

೧೪. ಬೆತ್ತ

ಗೊರಬು ತಯಾರಿಸಲು ಉಪಯೋಗಿಸುವ ವಸ್ತುಗಳು:

೧. ಓಟೆ

೨. ಬಿದಿರು

೩. ಕುಂಬೂರು

ಆಹಾರದ ರೂಪದಲ್ಲಿ ಬಳಸುವ ಕೆಲವು ಸಸ್ಯಗಳು:

೧.	ನೋಕಟೆ	ಬೀಜ
೨.	ಉಣ್ವಲ ಕಾಯಿ	ಹಣ್ಣು
೩.	ಕೆಂಪು ಪದ್ಪೆ	ಎಲೆ
೪.	ಉಂಡೆಪುಳಿ	ಕಾಯಿ
೫.	ಚೀಮುಳ್ಳು	ಎಲೆ
೬.	ಪಪ್ಪಾಯಿ	ಹಣ್ಣು
೭.	ತಜಂಕ್(ತಗಚೆ)	ಎಲೆ
೮.	ಬಡ್ಡ್‌ಪುಳಿ	ಹಣ್ಣು
೯.	ನರೆ	ಗೆಡ್ಡೆ
೧೦.	ಕುರುಡು	ಗೆಡ್ಡೆ
೧೧.	ಬೀರಪುಳಿ	ಹಣ್ಣು
೧೨.	ಶಾಂತಿ	ಬೀಜ
೧೩.	ಪಲ್ಲೆ	ಬೀಜ
೧೪.	ಅರ್ಪು	ಹಣ್ಣು
೧೫.	ಪುನರ್ಪುಳಿ	ಹಣ್ಣು
೧೬.	ಪಾಂಡಿಲು	ಹಣ್ಣು
೧೭.	ಕೈರಪುಳಿ	ಹಣ್ಣು
೧೮.	ಮುಳ್ಳಂಕೋಲು	ಹಣ್ಣು
೧೯.	ಕೇಪುಳ	ಹಣ್ಣು
೨೦.	ನಾಣಿಲ್	ಹಣ್ಣು
೨೧.	ನೆಕ್ಕರೆ	ಹಣ್ಣು
೨೨.	ಕಂಚಲ್(ಹಾಗಲಕಾಯಿ)	ಹಣ್ಣು
೨೩.	ನುಗ್ಗೆ	ಕಾಯಿ

೨೪.	ನೆಲ್ಲಿ	ಕಾಯಿ
೨೫.	ಪಾಂಡವರ ಬಸಳೆ	ಎಲೆ
೨೬.	ಪೇರಳೆ	ಹಣ್ಣು
೨೭.	ಅಂಬಟೆ	ಹಣ್ಣು
೨೮.	ನೇರಳೆ	ಹಣ್ಣು
೨೯.	ಚಿರುವೆ	ಬೀಜ
೩೦.	ಕೊಟ್ಟೆ	ಹಣ್ಣು
೩೧.	ಉದ್ರಿಕಂಡೆ	ಗೆಡ್ಡೆ
೩೨.	ಈಂದ್	ಚಿಗುರು
೩೩.	ಕೂವೆ	ಗೆಡ್ಡೆ
೩೪.	ಮುಂಡೇವು	ಕಾಯಿ
೩೫.	ಮರಸೇವು	ಎಲೆ, ದಂಟು
೩೬.	ಕಾಡ್ ಸೇವು	ಕಾಂಡ
೩೭.	ಮೂಂಡಿ	ಗೆಡ್ಡೆ
೩೮.	ಜಾರಿಗೆ	ಹಣ್ಣು
೩೯.	ತಿಮರೆ	ಎಲೆ /ಗೆಡ್ಡೆ
೪೦.	ಸರೊಳಿ	ಹಣ್ಣು
೪೧.	ಕುಂಟಾಲ್	ಹಣ್ಣು
೪೨.	ಬೇವು	ಎಲೆ
೪೪.	ಪುಳ್ಚಪ್ಪು	ಎಲೆ
೪೫.	ಬೇಲಿ ಗುಲಾಬಿ	ಕಾಯಿ
೪೬.	ಸಬ್ಲ್ಕ್	ಹಣ್ಣು
೪೭.	ಕಾರೊಳು	ಹಣ್ಣು

೪೮.	ಅಡ್ಕೆರೆ	ಕಾಯಿ
೪೯.	ಉಯ್ಯೆರೆ	ಗೆಡ್ಡೆ
೫೦.	ಚೇವು	ಎಲೆ
೫೧.	ಮಂತ್‌ಪುಳಿ	ಕಾಯಿ
೫೨.	ನೆಲಪುಳಿ ಚಪ್ಪು	ಎಲೆ
೫೩.	ಬಿದಿರು (ಕಣಿಲೆ)	ಚಿಗುರು
೫೪.	ಅಣಬೆ	ಗಿಡ
೫೫.	ಕಾಡ್‌ಕೈಪುರ	ಕಾಯಿ
೫೬.	ಕಬಳೆ	ಗೆಡ್ಡೆ
೫೭.	ಬೆಲ್ಲತ್ರೆ	ಹಣ್ಣು

ಮೀನು ಹಿಡಿಯಲು ಉಪಯೋಗಿಸುವ ಸಸ್ಯಗಳು:

೧. ಐರೋಲು ಕಂಡೆ	–	ಗೆಡ್ಡೆ
೨. ಕಾಟ್ ಮಂಜೊಟ್ಟಿ	–	ತೊಗಟೆ
೩. ಕಾರೆಕಾಯಿ	–	ಕಾಯಿ
೪. ಜಿಗಿಜಿಗಿ ಕಾಯಿ	–	ಗಿಡ
೫. ಬ್ಯಾರಿ ಬಿತ್ತ್	–	ಬೀಜ
೬. ಕರ್ಮರ	–	ಮರದ ಪುಡಿ
೭.ಎಡ್ಡೆಮುಂಚಿ (ಕರಿ ಮೆಣಸು)	–	ಬೀಳು
೮. ನರ್ವೊಳು	–	ಕಾಯಿ
೯.ಕಣಪಡೆ	–	ಸೊಪ್ಪು
೧೦.ಪಲ್ಲೆ	–	ತೊಗಟೆ
೧೧.ಬೀಟಿ	–	ಮರದ ಪುಡಿ

೧೨.ಬಾಗಿ ಮರ – ತೊಗಟೆ

೧೩. ಮಡೆಂಜಲ್ – ಬೀಳು

ಬಾಣಂತಿ ಮದ್ದುಗಳು

೧. ಕರಿಜೀರಿಗೆ

೨. ಆತಪ್ಪೆ

೩. ಓಮ

೪. ಕರಿ ಮೆಣಸು

೫. ಮೆಣಸು

೬. ಕೆತ್ತೆಪುಳಿ

೭. ಕೊತ್ತಂಬರಿ

೮. ಬೆಳ್ಳುಳ್ಳಿ

೯. ಓಲೆ ಬೆಲ್ಲ

೧೦. ಶುಂಠಿ

(ಈ ಮೇಲಿನ ಮಾಹಿತಿಯನ್ನು ಜನಪದ ವೈದ್ಯೆಯಾದ ಬೆಳ್ತಂಗಡಿ ತಾಲೂಕು ಪುದುವೆಟ್ಟು ಗ್ರಾಮದ ಎಲ್ಯಪ್ಪೆ, ಪುತ್ತೂರು ತಾಲೂಕಿನ ಸಿರಿಬಾಗಿಲು ಗ್ರಾಮದ ದೇವಕಿಯವರಿಂದ ಮತ್ತು ಡಾ. ಬಿ. ಎ. ವಿವೇಕ ರೈಯವರ 'ಮಲೆಕುಡಿಯರು' ಪುಸ್ತಕದಿಂದ ಸಂಗ್ರಹಿಸಲಾಗಿದೆ.)

ಸಾಂಸ್ಕೃತಿಕ ಪದಕೋಶ :

೧. ಮರಾಯಿ – ಮರಿಗೆ

೨. ಅಂಗಯಿ – ಅಂಗೈ

೩. ಅಂಜೋವು – ಗಂಡಸು

೪. ಅಚಿಡಿಪುನಾರ್ – ಒಂದು ಜಾತಿಯ ಮರ

೫. ಅಂಡುರ್ಲಿ – ಚಂಡುರ್ಲಿ

೬. ಅಂಡೆ ಪಾಜೋವು – ಒಂದು ಬಗೆಯ ಗಿಡ

೭. ಅಂಡ್ಕಾಯಿ – ಒಂದು ಬಗೆಯ ಕಾಯಿ

೮. ಅಂದಾಜಿ – ಅಂದಾಜು (ಊಹೆ)

೯. ಅಂಬಡೆ – ಅಮಟೆಕಾಯಿ

೧೦. ಅಂಪು – ತಂಪು

೧೧. ಅಂಬಡೆದ ಕೊರಂಟ್ – ಅಮಟೆ ಕಾಯಿಯ ಬೀಜ

೧೨. ಅಂಬಡೆಸೂಡಿ – ಹೆಂಗಸರ ತಲೆಕೂದಲಿನ ಮುಡಿ

೧೩. ಪಿಂಗಾರ – ಹಿಂಗಾರ

೧೪. ಅಗರ್ – ದರೆ

೧೫. ಅಗೆಲ್ – ಎಡೆ

೧೬. ಇಲ್ಲ್ – ಮನೆ

೧೭. ಕೊಟ್ಯ – ಕೊಟ್ಟಿಗೆ

೧೮. ಅಜಕ್ಕಳ – ಬೇಟೆಯಲ್ಲಿ ದೊರೆತ ಪ್ರಾಣಿಗಳನ್ನು ಪಾಲುಮಾಡುವ ಕಳ.

೧೯. ಅಜಮ್ಮರ – ತಜಮ್ಮರ – ಪ್ರಾಣಿಗಳ ಮಾಂಸವನ್ನು ತುಂಡರಿಸಲು ಬಳಸುವ ಮರದ ತುಂಡು

೨೦. ಅಜ್ಜನ ಮೀಸೆ – ಎಕ್ಕದ ಹೂ

೨೧. ತಡಮೆ – ಬೇಲಿ

೨೨. ಅಟ್ಟ – ಮಾಳಿಗೆ

೨೩. ಕುರುಂಟು – ವಧುವಿನ ಸಂಗಾತಿ

೨೪. ಅಡ್ಯೆ – ತಿಂಡಿ

೨೫. ಅಪ್ಪಳ – ಹಪ್ಪಳ

೨೬. ಅಯಿತ್ತಾರೊ – ಆದಿತ್ಯವಾರ

೨೭. ಆರತಿ – ದೀಪ ಬೆಳಗುವುದು

೨೮. ಆನೆಕಂದಡಿ – ದೊಡ್ಡ ಜಾತಿಯ ಮಂಡಲ ಹಾವು

೨೯. ಇಂಗೊಳು – ತಿಂಗೊಳು

೩೦. ಇಂಜೀರ್ ಪಕ್ಕಿ – ಒಂದು ಜಾತಿಯ ಹಕ್ಕಿ

೩೧. ಇಲ್ಲ್‌ಬೂರು – ಒಂದು ಬಗೆಯ ಬಳ್ಳಿ (ಕೂಗಲ್ ಬಳ್ಳಿ)

೩೨. ಉಂಬುರು – ಜಿಗಣೆ

೩೩. ಈಸರ ಬೇರ್ – ಈಶ್ವರ ಬೇರು

೩೪. ಈರೊಳು – ತಾಳೆಹಣ್ಣು

೩೫. ಬೊಟ್ಟು – ಕಿವಿಯ ಆಭರಣ

೩೬. ಬೊಲ್ಲೆರ್ ಮನಿ – ಒಂದು ಜಾತಿಯ ಪಕ್ಷಿ

೩೭. ಟಿಕ್ಕಿ – ಕಿವಿಯ ಆಭರಣ

೩೮. ಓಲೆ – ಕಿವಿಯ ಆಭರಣ

೩೯. ಪುಲಕ್ – ಮೂಗಿನ ಆಭರಣ

೪೦. ಮಿಸಿರ್ – ಕೊರಳ ಆಭರಣ

೪೧. ಲೋಲಕ್ – ಕಿವಿಯ ಆಭರಣ

೪೨. ಓಟೆ – ಒಂದು ಜಾತಿಯ ಬಿದಿರು

೪೩. ಕೊಡಂಗೆ – ಕಿವಿಯ ಆಭರಣ

೪೪. ಆಯನ – ಜಾತ್ರೆ

೪೫. ಚಟ್ಟೆ – ಉಡದ ಜಾತಿಯ ಒಂದು ಪ್ರಾಣಿ

೪೬. ಮುಂಡೆವು – ಚಾಪೆ ತಯಾರಿಸುವ ಸಾಧನ

೪೭. ಮರಿ – ಹಾವು

೪೮. ಸೂಂಟಾಯಿ – ಹಂದಿಯ ಕೊಬ್ಬು ಉಳ್ಳ ಭಾಗ

೪೯. ಕಲ್ಯಟೆ – ಒಂದು ಜಾತಿಯ ಕಾಯಿ ಇರುವ ಗಿಡ

೫೦. ಬೆಂಡು – ಕಿವಿಯ ಆಭರಣ

೫೧. ಪುಂಡಿಕೇನೆ – ಕಾಡಿನಲ್ಲಿರುವ ಗೆಡ್ಡೆ

೫೨. ಕೆಂಕನ್ – ಕಾಡಿನಲ್ಲಿರುವ ಸಣ್ಣ ಕೋಳಿ

೫೩. ಬಜ್ಜೇಯಿ – ಅಡಿಕೆ

೫೪. ತಾರಾಯಿ – ತೆಂಗಿನ ಕಾಯಿ

ಕರ್ನಾಟಕದ ಅಲೆಮಾರಿ ಜನಾಂಗ – ಸಂಸ್ಕೃತಿ :

ಕರ್ನಾಟಕದಲ್ಲಿ ಮೊದಲಿಗೆ ೧೯೦೩ ರಲ್ಲಿ ಕರ್ನಾಟಕದ ಬುಡಕಟ್ಟುಗಳನ್ನು ಕುರಿತಾದಂತಹ ಅಧ್ಯಯನ ಪ್ರಾರಂಭವಾಯಿತು. ಎಚ್. ವಿ. ನಂಜುಂಡಯ್ಯ ಅವರು ಮೈಸೂರಿನಲ್ಲಿ ಇರುವಂತಹ ಬುಡಕಟ್ಟುಗಳನ್ನು ಕುರಿತು ಅಧ್ಯಯನ ಮಾಡಿದರು. ಅನಂತರದಲ್ಲಿ ಅನಂತ ಕೃಷ್ಣಯ್ಯ ಮತ್ತು ಎಡ್ಗರ್ ಥರ್‌ಸ್ಟನ್ ಎನ್ನುವವರು ಇಲ್ಲಿಯ ಬುಡಕಟ್ಟುಗಳನ್ನು ಕುರಿತು ಅಧ್ಯಯನ ಮಾಡಿರುವುದನ್ನು ನಾವು ಕಾಣಬಹುದು. ಹೀಗಾಗಿ ಇಲ್ಲಿ ಬುಡಕಟ್ಟುಗಳನ್ನು ಕುರಿತಾದ ಅಧ್ಯಯನ ಬ್ರಿಟಿಷ್ ಅಧಿಕಾರಿಗಳ ಮೂಲಕ ಪಾದ್ರಿಗಳ ಮೂಲಕ ಆದ ನಂತರ ಮೈಸೂರು ಅರಸರು ಈ ಎಚ್. ವಿ. ನಂಜುಂಡಯ್ಯನವರಿಗೆ ಮೈಸೂರಿನಲ್ಲಿರುವಂತಹ ಬುಡಕಟ್ಟುಗಳನ್ನು ಕುರಿತು ಅಧ್ಯಯನ ಮಾಡಲು ತೊಡಗಿಸುವುದರ ಮೂಲಕ ಅಲ್ಲಿರತಕ್ಕಂತಹ ಬುಡಕಟ್ಟುಗಳ ಒಂದು ಸಮಸ್ಯೆಗಳನ್ನು ಅರಿತುಕೊಳ್ಳಲಿಕ್ಕೆ ಅವರು ಪ್ರಯತ್ನ ಮಾಡುವುದರ ಮೂಲಕ ಆ ಬುಡಕಟ್ಟುಗಳಿಗೆ ಇರತಕ್ಕಂತಹ ಸಮಸ್ಯೆಗಳಿಗೆ ಸ್ಪಂದಿಸುವಂತಹ, ಸಹಾಯ ನೀಡತಕ್ಕಂತಹ ಹಿನ್ನೆಲೆಯಲ್ಲಿ ಆ ಅಧ್ಯಯನ ಕರ್ನಾಟಕದಲ್ಲಿ ಪ್ರಾರಂಭವಾಯಿತು. ಹಾಗಾಗಿ ಕರ್ನಾಟಕದಲ್ಲಿ ಆ ನಂತರದಲ್ಲಿ ಆಗಿರತಕ್ಕಂತಹ ಅಧ್ಯಯನ ಇಲ್ಲ. ಆದರೆ ನಮ್ಮ ಭಾರತ ದೇಶದ ಯಾವ ರಾಜ್ಯಕ್ಕಿಂತಲೂ ಹೆಚ್ಚಿನ ಅಧ್ಯಯನ ಕರ್ನಾಟಕದಲ್ಲಿ ನಡೆದಿದೆ ಎನ್ನುವುದನ್ನು ನಾವೆಲ್ಲ ಒಪ್ಪಿಕೊಳ್ಳಬೇಕಾದ ವಿಷಯವೇ. ಆದರೆ ಬುಡಕಟ್ಟುಗಳನ್ನು ಕುರಿತಾದ ಅಧ್ಯಯನ ಹೆಚ್ಚಿಗೆ ಆಗಲಿಲ್ಲ. ಇವತ್ತು ಈಶಾನ್ಯ ವಲಯದಲ್ಲಿರತಕ್ಕಂತಹ ಮಧ್ಯಪ್ರದೇಶದ ಬೇರೆ ಬೇರೆ ಭಾಗದಲ್ಲಿರತಕ್ಕಂತಹ ಬುಡಕಟ್ಟುಗಳನ್ನು ಕುರಿತಾದಂತಹ ಅಧ್ಯಯನದ ನಂತರ ನಮ್ಮ ಕರ್ನಾಟಕದಲ್ಲಿ ಬುಡಕಟ್ಟುಗಳನ್ನು ಕುರಿತಾದಂತಹ ವಿಶಿಷ್ಟವಾದ ಅಧ್ಯಯನ ಪ್ರಾರಂಭವಾಯಿತು ಎನ್ನುವುದನ್ನು ನಾವು ನೋಡ್ತಾ ಇದ್ದೇವೆ. ಇವತ್ತು ಅಲೆಮಾರಿ ಬುಡಕಟ್ಟುಗಳ ಅಧ್ಯಯನ ಸಮೀಕ್ಷೆ ಅಥವಾ ಇಡೀ ಬುಡಕಟ್ಟುಗಳ ಸಮೀಕ್ಷೆ ಆಗಬೇಕಾಗಿದೆ. ಅಲೆಮಾರಿ ಬುಡಕಟ್ಟುಗಳು ಬಹಳ ಕಡಿಮೆ ಇವೆ. ಪರಿಶಿಷ್ಟ ಬುಡಕಟ್ಟುಗಳೇ ಹೆಚ್ಚಿವೆ. ಅಲೆಮಾರಿ ಬುಡಕಟ್ಟುಗಳು ಎಂದಾಗ ಯಾವುದನ್ನು ಅಲೆಮಾರಿ, ಸಂಪೂರ್ಣ ಅಲೆಮಾರಿ, ಯಾವುದನ್ನು ಅರೆ ಅಲೆಮಾರಿ ಎನ್ನಬೇಕು ಅನ್ನುವ ಚರ್ಚೆ ಕೂಡಾ ಇರತಕ್ಕಂತಹದ್ದು. ಶ್ರೀಯುತ ಭಾಸ್ಕರ್‌ರವರ ಅಭಿಪ್ರಾಯದಂತೆ ಅಲೆಮಾರಿಗಳು ಆಹಾರಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗ್ತಾ ಇರುವುದನ್ನು ಅಲೆಮಾರಿಗಳು ಎಂದು ಕರೆಯುತ್ತಿದ್ದಾರೆ. ಇನ್ನು ಕೆಲವರು ಆಹಾರಕ್ಕಾಗಿ ಹೋಗಿ ಮತ್ತೆ ತಮ್ಮ ವಾಸಸ್ಥಾನಕ್ಕೆ ಒಂದೇ ಪ್ರದೇಶಕ್ಕೆ ಬರುವವರನ್ನು ಅರೆ ಅಲೆಮಾರಿಗಳು ಎಂದು ಕರೆಯುತ್ತಾರೆ. ಈ ಅಲೆಮಾರಿಗಳು ಅರೆ ಅಲೆಮಾರಿಗಳ್ತಾ ಇದ್ದಾರೆ. ಆ ಮೇಲೆ ಅಲೆಮಾರಿಗಳು ಹೋಗಿ ಒಂದು ಕಡೆ ನೆಲೆಯಾಗಿ ಕೂಡಾ ನಿಲ್ಲುತ್ತಾ ಇದ್ದಾರೆ. ಹೀಗಾಗಿ ಇದನ್ನು ದಾಖಲೆ ಮಾಡುವಂತಹದ್ದು ಕಷ್ಟಕರವಾದ ಸಂಗತಿ. ಕರ್ನಾಟಕದ ಅಲೆಮಾರಿಗಳನ್ನು ನಾವು ನೋಡುವಾಗ ಕಿಳ್ಳೇಕ್ಯಾತರು, ಹಕ್ಕಿಪಿಕ್ಕಿಯರು, ಪಾದ್ರಿಯರು, ಬುಡು

ಬುಡುಕಿಯರು, ದೊಂಬಿದಾಸರು, ಕಿನ್ನರಿಜೋಗಿಗಳು, ಕೊರವಂಜಿಯವರು, ಚೊಂಚಿ ಚೊಂಚವಾರರು, ಅಡವಿ ಚೊಂಚರು, ರಾಜಗೊಂಡರು ಈ ರೀತಿಯ ಉಲ್ಲೇಖಗಳಿವೆ.

ಕಿಳ್ಳೇಕ್ಯಾತ :

ಕಿಳ್ಳೇಕ್ಯಾತ ಎಂಬ ಹೆಸರು ಹೇಗೆ ಬಳಕೆಯಲ್ಲಿ ಬಂದಿತೆಂಬುದು ವಾದ ಗ್ರಸ್ತ ವಿಷಯವಾಗಿದ್ದರೂ, ಈ ಜಾತಿಯ ಸಾಂಪ್ರದಾಯಿಕ ವೃತ್ತಿಯ ಬಗ್ಗೆ ಯಾವುದೇ ಭಿನ್ನಾಭಿಪ್ರಾಯಗಳು ಇಲ್ಲ. ಚರ್ಮದ ಗೊಂಬೆಗಳ ಆಟ ಆಡಿಸಿ ಗ್ರಾಮೀಣ ಜನತೆಗೆ ಮನರಂಜನೆಯೊಂದಿಗೆ ವೈದಿಕ ಸಂಸ್ಕೃತಿಯ ಕಥಾ ಭಾಗಗಳನ್ನು ಗ್ರಾಮೀಣ ಜನತೆಗೆ ಪ್ರಚುರ ಪಡಿಸುತ್ತಿದ್ದರು.

ಪ್ರತಿಯೊಂದು ಸಮುದಾಯ ತನ್ನ ಉಗಮದ ಬಗ್ಗೆ ದಂತಕಥೆಗಳನ್ನು ರೂಪಿಸಿಕೊಂಡು ಅತೀ ಪ್ರಾಚೀನ ಕಾಲದಿಂದ ತಮ್ಮ ಅಸ್ತಿತ್ವವನ್ನು ಸಾಬೀತು ಪಡಿಸಿಕೊಳ್ಳಲು ಯತ್ನಿಸುವಂತೆ, ಕಿಳ್ಳೇಕ್ಯಾತರು ಇದಕ್ಕೆ ಹೊರತಾಗಿಲ್ಲ. ಸರಸ್ವತಿಯ ಮನರಂಜನೆಗಾಗಿ ಬ್ರಹ್ಮನಿಂದ ಈ ಜಾತಿ ಸೃಷ್ಟಿಯಾಗಿದೆಯೆಂದು ಹೇಳಲಾಗುತ್ತದೆ. ಇವರ ವಂಶಜಳೊಬ್ಬಳು ಮಹಾರಾಷ್ಟ್ರದ ಕಾಳಾಚಾರಿ ಎಂಬವನೊಡನೆ ಸಂಬಂಧ ಹೊಂದಿ, ಏಳು ಜನ ಮಕ್ಕಳನ್ನು ಪಡೆದರು. ಕಾಳಾಚಾರಿಯೆ ಇವರಿಗೆ ತೊಗಲುಗೊಂಬೆ ಮಾಡುವ ಹಾಗೂ ಆಡುವ ವಿದ್ಯೆ ಕಲಿಸಿದನೆಂದು ಹೇಳಲಾಗುತ್ತದೆ. ಆದರೆ ಈ ಕಥೆಯಲ್ಲಿ ಯಾವುದೇ ಸತ್ಯಾಂಶ ಇಲ್ಲವೆಂದು ಕೆಲವು ತಜ್ಞರ ಅಭಿಪ್ರಾಯ. ಕಲಿಯುಗದ ಆರಂಭದಲ್ಲಿ ಗೊಂಬೆ ಕುಣಿಸುವ ವೃತ್ತಿ ದೇವರಿಂದಲೇ ಈ ಜಾತಿಗೆ ನೇಮಕವಾಯಿತೆಂದು, ಆದ್ದರಿಂದ ಕಲಿಕ್ಯಾತ ಎಂಬ ಪದ ಕಿಳ್ಳೇಕ್ಯಾತವಾಯಿತೆಂದು ಹೇಳಲಾಗುತ್ತದೆ. ಕೀಳು ಕಥಾ ಎಂಬ ಪದವು ಕ್ರಮೇಣವಾಗಿ ಕಿಳ್ಳೇಕ್ಯಾತವಾಯಿತೆಂದು ಹೇಳಲಾಗುತ್ತದೆ. ಮಹಾರಾಷ್ಟ್ರದಲ್ಲಿ ಈ ಜಾತಿಗೆ ಕಟಬು ಜಾತಿ ಎಂದು ಕರೆಯಲಾಗುತ್ತದೆ. ಕಟಬು ಎನ್ನುವುದು ತೊಗಲುಗೊಂಬೆ ಆಟದಲ್ಲಿ ಬರುವ ಒಂದು ವಿದೂಷಕನ ಪಾತ್ರ, ಕಿಳ್ಳಿ ಎಂದರೆ ಚೇಷ್ಟೆ, ತುಂಟ, ಹುಡುಗಾಟಿಕೆ ಎಂದು ಕನ್ನಡ ನಿಘಂಟಿನ ಅರ್ಥ. ಇವರ ಆಟದಲ್ಲಿ ತುಂಟತನದ ಅಶ್ಲೀಲ ಪದಗಳ ಬಳಕೆ ಹೆಚ್ಚು. ಆ ದೃಷ್ಟಿಯಿಂದ ಕಿಳ್ಳಿ ಎಂಬ ಪದವೇ ಜಾತಿಗೂ ಅನ್ವಯವಾಗಿರಬಹುದು. ಆದರೂ ಮರಾಠಿಯ ಕಟಬು ಹಾಗೂ ಕನ್ನಡದ ಕಿಳ್ಳೇ ಶಬ್ದಗಳಿರುವ ಸಂಬಂಧವು ಇನ್ನು ಹೆಚ್ಚು ಸಂಶೋಧನೆಗೆ ವಿಷಯವಾಗಿದೆ. ಸಂಸ್ಕೃತ ಮೂಲದಿಂದಲೇ ಎಲ್ಲ ವಿಷಯದ ಮೂಲವನ್ನು ವಿಶ್ಲೇಷಿಸುವ ಹವ್ಯಾಸ ಇಂದು ಹೆಚ್ಚು ಕಾಣುತ್ತಿದೆ. ಭಾಷಾ ವಿಜ್ಞಾನಿ ಬ್ರೊ ಎಂಬುವರ ಪ್ರಕಾರ ಕೇಲಿಕ್ಯಾತ ಎಂಬ ಸಂಸ್ಕೃತ ಪದ ಅಪಭ್ರಂಶ ರೂಪತಾಳಿ ಕಿಳ್ಳೇಕ್ಯಾತವಾಗಿದೆ. ಕಿಳ್ಳೇಕ್ಯಾತ ಜಾತಿ ಹಾಗೂ ಆ ಹೆಸರಿನ ವಾದ ವಿವಾದಗಳು ಏನೇ ಇದ್ದರೂ ಕರ್ನಾಟಕದ ಜಾತಿಗಳ ಸಾಮಾಜಿಕ ಸ್ತರ ವಿನ್ಯಾಸದಲ್ಲಿ ಈ ಜಾತಿ ತೀರ ಕೆಳಗಿನ ಸ್ಥಾನವನ್ನು ಹೊಂದಿದೆ.

ತೊಗಲು ಗೊಂಬೆಯಾಟದವರು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಂಡು ಬರುತ್ತಾರೆ. ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಅಂಗೂರು ಎಂಬ ಗ್ರಾಮದಲ್ಲಿ ಸಂಪೂರ್ಣವಾಗಿ ಕಿಳ್ಳೇಕ್ಯಾತರೆ

ವಾಸಿಸುತ್ತಿದ್ದಾರೆ. ಹಾಸನ, ಮೈಸೂರು, ತುಮಕೂರು ಜಿಲ್ಲೆಗಳಲ್ಲಿ ಇವರನ್ನು ಗೊಂಬೆರಾಮ ಎಂದು ಕರೆಯುತ್ತಾರೆ. ಜೊತೆಗೆ ಚಕ್ಕಳದ ಗೊಂಬೆಯಾಟದವರು, ತೊಗಲು ಬೊಂಬೆಯಾಟದವರು, ಶಿಳ್ಳೇಕ್ಯಾತ, ಚಳ್ಳೇಕ್ಯಾತ ಎಂಬ ಇತರ ಹೆಸರುಗಳು ಕೇಳಿಬರುತ್ತವೆ. ಚಿತ್ರದುರ್ಗ, ಬಳ್ಳಾರಿ, ಕೊಪ್ಪಳ, ಗದಗ, ಹಾವೇರಿ, ದಾವಣಗೆರೆ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಇವರನ್ನು ಕಿಳ್ಳೇಕ್ಯಾತ ಎಂದು ಕರೆಯುತ್ತಾರೆ. ಬೆಳಗಾವಿ, ಬಿಜಾಪುರ, ಗುಲ್ಬರ್ಗ, ಬೀದರ ಜಿಲ್ಲೆಗಳಲ್ಲಿ ಇವರನ್ನು ಕಟಬರೆಂದು ಗುರುತಿಸುತ್ತಾರೆ. ಕಿಳ್ಳಿಕೆತುರು / ಛಾತ್ರಿಗಳೆಂಬ ಹೆಸರೂ ಇವರಿಗೆ ಇವೆ. ಇವರ ಪ್ರದರ್ಶನ ಕಲೆಗೆ ಗೊಂಬೇರಾಮರ ಆಟ, ಕಿಳ್ಳೇಕ್ಯಾತರಾಟ, ತೊಗಲು ಬೊಂಬೆಯಾಟ, ಚಕ್ಕಳದ ಬೊಂಬೆಯಾಟ, ಕಟಬರಾಟ ಮೊದಲಾದ ಪ್ರಾದೇಶಿಕ ಹೆಸರುಗಳಿವೆ. ಶ್ರೀರಾಮನ ಕಥೆಯನ್ನು ಹಾಡುವುದರಿಂದ ಇವರಿಗೆ ಗೊಂಬೆರಾಮರು ಎಂಬ ಹೆಸರಾಯಿತು. ಕಿಳ್ಳೇಕ್ಯಾತ ಎಂಬುದು ಕಿಳ್ಳೇಕ್ಯಾತ ಎಂಬ ರೂಪದಿಂದ ಬಂದಿರಬಹುದು. ಇವರಿಗೆ ಚಿತ್ರ ಮರಾಠರೆಂಬ ಹೆಸರೂ ಇದೆ. ಇವರು ಮೂಲತಃ ಬೇಸಾಯ ವೃತ್ತಿಯವರಾದ್ದರಿಂದ ತಮ್ಮನ್ನು ಮರಾಠ ಒಕ್ಕಲಿಗರೆಂದು ಕರೆದುಕೊಳ್ಳುತ್ತಾರೆ.

ಕಿಳ್ಳೇಕ್ಯಾತರಲ್ಲಿ ಹಲವು ಬೆಡಗುಗಳು ಇವೆ. ಮೋಹರ್, ನೆಕ್ಕಾರ್, ಆಟೋಕ್, ಧೂರ್ವಿಯಾ, ಸಾಸ್ಕಿನ್, ಆವೇಚ್, ಶಿಂಧ್ಯಾ, ಸಾಳ್ವಿಯ, ಧುಮಾಳ, ಸಿಸಗಾನ್ ಇತ್ಯಾದಿ. ಬೆಡಗುಗಳು ವಿವಾಹ ಸಂಬಂಧ ಮುಂತಾದ ಸಂದರ್ಭದಲ್ಲಿ ಬೆಳಕಿಗೆ ಬರುವುದಂತೂ ಸಹಜ. ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಿಂದ ಪಿತೃಪ್ರಧಾನ ಕುಟುಂಬ ವ್ಯವಸ್ಥೆಗೆ ಒಲಿದಂತೆ ಕಂಡು ಬರುತ್ತದೆ. ನಮೂದಿಸಿದಂತೆ ಇವರು – "ಪಾಂಡವರು ರಾಜ್ಯ ಕಳೆದುಕೊಂಡ ನಂತರ ವನವಾಸದಲ್ಲಿ ಅಲೆದಾಡುವಾಗ ಅವರನ್ನು ಹಿಂಬಾಲಿಸಿದ ಕ್ಷತ್ರಿಯರ ತಲೆಮಾರಿನವರೆಂದು ಹೇಳಿಕೊಳ್ಳುತ್ತಾರೆ." ಆದರೆ ಇವರ ಜೀವನ ಶೈಲಿಯನ್ನು ಅವಲೋಕಿಸಿದರೆ ಕ್ಷತ್ರಿಯರಲ್ಲವೆಂಬುದು ಕೆಲವರ ಅಭಿಪ್ರಾಯ. ಇವರು ಮಹಾರಾಷ್ಟ್ರದಿಂದ ವಲಸೆ ಬಂದವರೆಂದು ತಿಳಿದು ಬರುತ್ತದೆ. ಸಮುದಾಯದ ಜನರು ಬೆಳಗಾವಿ, ಬಿಜಾಪುರ, ಗದಗ, ಹಾವೇರಿ, ಕೊಪ್ಪಳ, ಧಾರವಾಡ, ಚಿತ್ರದುರ್ಗ, ಬಳ್ಳಾರಿ, ಹಾಸನ, ಮಂಡ್ಯ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಮರಾಠಿಯು ಇವರ ಮಾತೃಭಾಷೆಯಾದರೂ ಬೇರೆಯವರೊಂದಿಗೆ ಕನ್ನಡವನ್ನು ಬಳಸುತ್ತಾರೆ. ಗ್ರಾಮ ಮತ್ತು ನಗರಗಳ ಹೆಸರನ್ನು ತಮ್ಮ ಹೆಸರಿನೊಂದಿಗೆ ಸೇರಿಸಿಕೊಳ್ಳುತ್ತಾರೆ.

ಸಮುದಾಯ ಮಟ್ಟದಲ್ಲಿ ಒಳಬಾಂಧವ್ಯ ವಿವಾಹ ಮತ್ತು ಬೆಡಗು ಮಟ್ಟದಲ್ಲಿ ಹೊರಬಾಂಧವ್ಯ ವಿವಾಹ ಪದ್ಧತಿ ರೂಢಿಯಲ್ಲಿದೆ. ಸೋದರ ಸಂಬಂಧಿ ವಿವಾಹಕ್ಕೆ ಅವಕಾಶವಿದೆ. ಕಿಳ್ಳೇಕ್ಯಾತರ ಸಾಂಪ್ರದಾಯಿಕ ವೃತ್ತಿ ತೊಗಲು ಬೊಂಬೆ ಆಟವನ್ನು ಆಡಿಸುವುದು ಹಾಗೂ ಕೌದಿಗಳನ್ನು ಹೊಲಿಯುವುದು ಕೆಲವರಿಗೆ ಜಮೀನು ಇದೆ, ಲೋಹದ ಕೆಲಸ, ಚಿಕ್ಕಪುಟ್ಟ ವ್ಯಾಪಾರ ಇವು ಇತ್ತೀಚೆಗೆ ಅನುಸರಿಸುತ್ತಿರುವ ವೃತ್ತಿಗಳಾಗಿವೆ. ಮನೆ, ಕುಲ ಮತ್ತು ಗ್ರಾಮ ದೇವತೆಗಳು ಹಾಗೂ ಪ್ರಾದೇಶಿಕ ದೈವವಾದ ಎಲ್ಲಮ್ಮನನ್ನು

ಪೂಜಿಸುತ್ತಾರೆ. ವಧು ದಕ್ಷಿಣೆಯನ್ನು ಹಣದ ರೂಪದಲ್ಲಿ ಕೊಡುತ್ತಾರೆ. ವಿವಾಹ ವಿಚ್ಛೇದಿತರು, ವಿಧವೆ, ವಿಧುರರು ಮದುವೆಯಾಗಬಹುದು. ಇವರಲ್ಲಿ ಗಂಡು ಮಗುವಿಗೆ ಹೆಚ್ಚಿನ ಪ್ರಾಶಸ್ತ್ಯ. ಜನಪದ ಸೂತಕವನ್ನು ಐದು ದಿನಗಳವರೆಗೆ ಆಚರಿಸಿ, ನಾಮಕರಣವನ್ನು ಮಾಡುತ್ತಾರೆ. ಋತುಮತಿಯಾದಾಗ 'ಶೋಭ' ಎಂಬ ಆಚರಣೆ ಮಾಡುತ್ತಾರೆ. ಶವವನ್ನು ಹೂಳಿ, ಸಾವಿನ ಸೂತಕವನ್ನು ಮೂವತ್ತೈದು ದಿನಗಳ ವರೆಗೆ ಆಚರಿಸುತ್ತಾರೆ. ಇವರಲ್ಲಿ ಬಹುಮಂದಿ ಭೂರಹಿತರು. ಅದರ ಜೊತೆಗೆ, ಇವರು ದಿನಗೂಲಿಗಳಾಗಿ, ಮೀನು ಹಿಡಿಯುವುದು ಹಾಗೂ ಹಾಳಾದ ಪಾತ್ರೆಗಳನ್ನು ಸರಿಪಡಿಸುತ್ತಾ ಜೀವನ ಸಾಗಿಸುತ್ತಾರೆ. ಇವರ ಕೋಮಿನ ದೇವತೆ 'ಮೊಸಬ'. ಊರ ಹಾಗೂ ಪ್ರಾಂತ್ಯದ ದೇವರುಗಳು ಬೇರೆ ಇವೆ. ಇವರು ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ಉದಾ : ಯುಗಾದಿ, ದೀಪಾವಳಿ, ಇತ್ಯಾದಿ ಬೊಂಬೆಯಾಟದಲ್ಲಿ ಕಥೆ ಹೇಳುವಾಗ ತಬಲ, ಹಾರ್ಮೋನಿಯಂ ಇತ್ಯಾದಿ ವಾದ್ಯಗಳನ್ನು ಬಳಸುತ್ತಾರೆ. ಆಧುನಿಕ ವಿದ್ಯಾಭ್ಯಾಸ ಇವರಲ್ಲಿ ಅತ್ಯಂತ ಕೆಳಮಟ್ಟದಲ್ಲಿದೆ. ಕುಟುಂಬ ಕಲ್ಯಾಣ ಯೋಜನೆಯಲ್ಲಿ ಇವರಿಗೆ ಆಸಕ್ತಿಯಿಲ್ಲ. ಇವರಲ್ಲಿ ಬಹಳಷ್ಟು ಜನರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ.

ಹಕ್ಕಿಪಿಕ್ಕಿಗಳು :

ಹಕ್ಕಿಪಿಕ್ಕಿಗಳು ಇವರು ಗುಜರಾತ, ರಾಜಸ್ಥಾನದ ಗಡಿಯಿಂದ ಆಂಧ್ರದ ಮೂಲಕ ಕರ್ನಾಟಕಕ್ಕೆ ಬಂದರು. ಇವರು ಹೆಚ್ಚಾಗಿ ಬೆಂಗಳೂರು, ಮೈಸೂರು, ಕೋಲಾರ, ಶಿವಮೊಗ್ಗ, ಚಿತ್ರದುರ್ಗ, ಹಾಸನ, ಬಳ್ಳಾರಿ, ಜಿಲ್ಲೆಗಳಲ್ಲಿ ವಾಸವಾಗಿದ್ದರೂ ಇವರನ್ನು ಕರ್ನಾಟಕದ ಎಲ್ಲಾ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಕಾಣಬಹುದು. ಪಿಕ್ಕಿ ಇವರ ಸಾಂಪ್ರದಾಯಿಕ ವೃತ್ತಿಯಾದ ಹಕ್ಕಿ ಹಿಡಿಯುವುದರಿಂದ ಹಕ್ಕಿ ಪಿಕ್ಕಿ ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. ಕನ್ನಡದಲ್ಲಿ "ಹಕ್ಕಿ" ಎಂದರೆ ಪಕ್ಷಿ ಎಂದು ಅರ್ಥ. ಹಕ್ಕಿಗೆ 'ಪಿಕ್ಕಿ' ಎನ್ನುವ ಜೋಡಿ ಶಬ್ದ ಪ್ರಯೋಗವಾಗಿದೆ. ಇವರು ಮೂಲತಃ ಗುಜರಾತಿನ ಗಡಿಯವರೆಂದೇ ಹೇಳುತ್ತಾರೆ. ಇವರು ಇಂಡೋ ಆರ್ಯನ್ ಭಾಷೆಯಾದ ವಾಘ್ರಿಯನ್ನು ಮಾತನಾಡುತ್ತಾರೆ. ಹಕ್ಕಿಪಿಕ್ಕಿಯವರಲ್ಲಿ ಗುಜರಾತಿ, ಪನವಾರ್, ಕಾಲಿವಾಲ ಹಾಗೂ ಮೇವಾರ ಎಂಬ ನಾಲ್ಕು ಬೆಡಗುಗಳಿವೆ. ಇವುಗಳನ್ನು ಸಾಮಾಜಿಕ ಹಾಗೂ ಧಾರ್ಮಿಕ ಆಚರಣೆಯ ಆಧಾರಗಳ ಮೇಲೆ ವಿಭಾಗಿಸಲಾಗಿದೆ. ತಂದೆಯ ಸಹೋದರಿಯ ಮಗಳ ಜೊತೆ ಅಥವಾ ತಾಯಿಯ ಸಹೋದರನ ಮಗಳ ಜೊತೆ ಮದುವೆ ಸಾಧ್ಯವಿದೆ. ವಿಧುರ, ವಿಧವೆಯರ ಮರುವಿವಾಹ ಹಾಗೂ ವಿಚ್ಛೇದನೆಗಳು ನಡೆಯುತ್ತವೆ. ಹಕ್ಕಿಗಳನ್ನು ಹಿಡಿಯುವುದು, ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸುವುದು ಇವರ ವೃತ್ತಿಯಾಗಿದೆ. ಅಲಂಕಾರಿಕ ಸಾಮಗ್ರಿಗಳನ್ನು ಮಾರುತ್ತ ಬಹಳಷ್ಟು ಜನ ಅಲೆಮಾರಿ ಬದುಕನ್ನೇ ಬದುಕುತ್ತಾರೆ. ಇತ್ತೀಚೆಗೆ ಕೆಲವರು ಕೃಷಿ ಕೂಲಿಗಳಾಗಿಯೂ ದುಡಿಯುತ್ತಾರೆ. ಇವರು ಚಾಮುಂಡಿ, ದುರ್ಗಮ್ಮ, ಕಲ್ಲಮ್ಮ ಮತ್ತು ಎಲ್ಲಮ್ಮ ದೇವತೆಗಳನ್ನು

ಆರಾಧಿಸುತ್ತಾರೆ. ಆಧುನಿಕ ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿ ಕಂಡು ಬರುವುದಿಲ್ಲ. ಕುಟುಂಬ ಯೋಜನೆಯ ಬಗ್ಗೆ ಇವರಿಗೆ ಅಷ್ಟೇನೂ ಕಾಳಜಿಯಿಲ್ಲ ಇವರನ್ನು ಹಲವಾರು ಅಭಿವೃದ್ಧಿ ಯೋಜನೆಗಳಲ್ಲಿ ಸೇರಿಸಿಕೊಳ್ಳಲಾಗಿದೆ. ಇವರ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ.

ಬುಡುಬುಡಿಕೆ :

ಬುಡಬುಡಿಕೆ ಕಣಿ ಹೇಳುವ ಒಂದು ಸಮುದಾಯ. ಇವರು ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದಲ್ಲಿ ಸಿಗುತ್ತಾರೆ. ಬುಡಬುಡಿಕೆ ಎನ್ನುವ ಪದ ಭಿಕ್ಷೆ ಬೇಡುವಾಗ ಬಳಸುವ ಬುಡುಬುಡು ಎಂದು ಶಬ್ದ ಮಾಡುವ ಸಾಧನದಿಂದ ಬಂದಿರಬಹುದು. ಆಂಧ್ರ ಪ್ರದೇಶದಲ್ಲಿ ಇವರನ್ನು 'ಬುಡುಬುಡಿಕ್ಕಿ' ಎಂದು ಉಚ್ಚರಿಸುತ್ತಾರೆ. ಇವರನ್ನು ಅಲೆಮಾರಿಗಳು ಭಿಕ್ಷೆ ಬೇಡುವವರು ಹಾಗೂ ಕಣಿ ಹೇಳುವವರೆಂದು ಹೇಳುತ್ತಾರೆ. ಮರಾಠರ ಸಾಮ್ರಾಜ್ಯದಲ್ಲಿ ಬೇಹುಗಾರರಾಗಿದ್ದರೆಂದು ಇವರ ಮೌಖಿಕ ಪರಂಪರೆ ತಿಳಿಸುತ್ತದೆ. ಇವರು ತಮ್ಮ ಮೂಲವನ್ನು ಮಹಾರಾಷ್ಟ್ರದಿಂದ ಶತಮಾನಗಳ ಹಿಂದೆಯೇ ವಲಸೆ ಬಂದಿರುವುದನ್ನು ಗುರುತಿಸಿಕೊಳ್ಳುತ್ತಾರೆ. ಮಹಾರಾಷ್ಟ್ರ ಮೂಲದ ಬುಡಬುಡಿಕೆ ಅಲೆಮಾರಿ ಜನಾಂಗ ಇಂದು ಕನ್ನಡವನ್ನು ಮಾತನಾಡಿ, ಕನ್ನಡ ಲಿಪಿಯನ್ನು ಬಳಸುತ್ತಾರೆ. ಸಣ್ಣ ಡಮರುವಿನ ಆಕಾರದಲ್ಲಿರುವ 'ಬುಡಬುಡಿಕೆ' ಯನ್ನು ಚರ್ಮದಿಂದ ತಯಾರಿಸಿ ವೈವಿಧ್ಯಮಯವಾಗಿ ನುಡಿಸುತ್ತಾ, ಕೇಳುಗರ ಗಮನ ಸೆಳೆಯುವ ಈ ಕಲೆ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಬುಡಬುಡಿಕೆ ಸಮುದಾಯದ ಉಗಮವನ್ನು ನಿಖರವಾಗಿ ಹೇಳುವುದು ಕಷ್ಟ. ಇವರಲ್ಲಿ ಕಂಡುಬರುವ ಮುಖ್ಯ ಉಪಪಂಗಡಗಳೆಂದರೆ ಬಟ್ಟಂಗಿ, ಗೊಂದಲಿಗ ಇತ್ಯಾದಿ.

ಈ ಸಮುದಾಯದಲ್ಲಿ ಅನೇಕ ದಂತ ಕಥೆಗಳನ್ನು ಹೊಂದಿದೆ. ಒಂದು ದಂತ ಕಥೆ ಪ್ರಕಾರ, ಶಿವನು ದಕ್ಷ ಬ್ರಹ್ಮನ ದಂಡನ್ನು ಸಂಪೂರ್ಣವಾಗಿ ನಾಶ ಮಾಡಿದಾಗ ಪಾರ್ವತಿದೇವಿಯು "ಸ್ವಾಮಿ, ನನ್ನ ವಂಶ ಸರ್ವನಾಶವಾಗದಂತೆ ಮಾತೊಂದು ನಡೆಸಿ– ಕೊಡಬೇಕು" ಎಂದು ಬೇಡಿದಳಂತೆ. ಆಗ ಶಿವನು ದಕ್ಷ ಬ್ರಹ್ಮನ ರಕ್ತದಿಂದ ಒಬ್ಬನನ್ನು ಸೃಷ್ಟಿಸಿದನೆಂದೂ ಅವನು ಮೇಲೇಳುವಾಗ ಬಡ ಬಡಿಸುತ್ತಾ ಎದ್ದು ಕುಳಿತನೆಂದೂ, ಆಗ ಅವನಿಗೆ ಶಿವನು ತನ್ನ ಕೈಯಲ್ಲಿದ್ದ ಡಮರನ್ನು ನೀಡಿ "ಸೂರ್ಯ ಚಂದ್ರರಿರುವ ತನಕ ಜೀವಿಸು" ಎಂದು ಆಶೀರ್ವದಿಸಿ ಕಳುಹಿಸಿಕೊಟ್ಟನೆಂದೂ, ಅವನೇ ಬುಡ ಬುಡಿಕೆಯುವನೆಂದು ಹೇಳುವರು. ಊರ ಹೊರವಲಯದ ಜಾಗದಲ್ಲಿ ಜೋಪಡಿ ಹಾಕಿಕೊಂಡು ಮಳೆ ಗಾಳಿ ಬಿಸಿಲೆನ್ನದೇ ಅದರಲ್ಲಿ ನಿತ್ಯ ಜೀವನ ಸಾಗಿಸುವ ಬುಡಬುಡಿಕೆ ಸಮುದಾಯ ಬಹು ವೈವಿಧ್ಯಮಯ ಸಂಪ್ರದಾಯವನ್ನು ಹೊಂದಿದೆ.

ತಲೆಗೆ ಬಣ್ಣದ ಪೇಟ, ಉದ್ದನೆಯ ನಿಲುವಂಗಿ, ಕೋಟು, ಕಚ್ಚೆಪಂಚೆ, ಸೊಂಟಕ್ಕೆ ವಸ್ತ್ರ, ಬಗಲಿಗೆ ಇಳಿಬಿದ್ದಿರುವ ಎರಡು ಮೂರು ಜೋಳಿಗೆ, ಹೆಬ್ಬೆಟ್ಟಿನಲ್ಲಿ ಗಗ್ಗರ, ಕೈಗೆ ಕಡಗ, ಉದ್ದನೆಯ ನಾಮ ಇವು ಬುಡಬುಡಿಕೆ ಜನರ ವೇಷ ಭೂಷಣಗಳು. ಸೂರ್ಯೋದಯದ ಮುನ್ನ ಎದ್ದು, ದೇವರನ್ನು ಪೂಜಿಸಿ, ವೇಷಧರಿಸಿ ಹಳ್ಳಿ ಹಳ್ಳಿಗೆ ಹೋಗಿ ಶಕುನ ನುಡಿಯುತ್ತಾರೆ. ಇದನ್ನು 'ಹಾಲಕ್ಕಿ ಶಾಸ್ತ್ರ' ಎಂದು ಹೇಳುತ್ತಾರೆ. ಈ ಶಾಸ್ತ್ರ ಸತ್ಯವಾಗುತ್ತದೆ ಎಂಬ ನಂಬಿಕೆ ಈ ಬುಡಬುಡಿಕೆವರದು. ಪ್ರತಿ ಮನೆಯ ಬಾಗಿಲಿಗೆ ಹೋಗಿ ತಮ್ಮ ವಾದ್ಯವನ್ನು ನುಡಿಸುತ್ತಾ 'ಜಯವಾಗಲಿ' ಎನ್ನುತ್ತಾ, ಶುಭವನ್ನು ಬಹು ಜಾಣ್ಮೆಯಿಂದ ಹೇಳುವ ಇವರು ಅಶುಭ ಇದ್ದಾಗ ಅದಕ್ಕೆ ಶಾಂತಿ ಪರಿಹಾರವನ್ನು ಸೂಚಿಸಬಲ್ಲರು.

ಭವಿಷ್ಯ ಹೇಳುವುದು ಇವರ ಸಾಂಪ್ರದಾಯಿಕ ವೃತ್ತಿ. ಶಕುನ ನುಡಿಯುವ ಹಾಲಕ್ಕಿಯ ಭಾಷೆ ಬುಡಬುಡಿಕೆಯವರಿಗೆ ಮಾತ್ರ ಅರ್ಥವಾಗುತ್ತದೆ ಎಂಬುದು ಇತರ ಜನರ ನಂಬಿಕೆಯಾಗಿದೆ. ಈ ಸಮುದಾಯದಲ್ಲಿ ತಮ್ಮ ಕುಲಗಳನ್ನೇ ಮನೆತನದ ಹೆಸರುಗಳಾಗಿ ಇಟ್ಟುಕೊಳ್ಳುತ್ತಾರೆ. ಉದಾಹರಣೆಗೆ ವಾಷ್ಟರ, ದೋಸಿ, ಗಾಯಕ್ವಾಡ, ಪಾಟಂಜ್, ಬಾವೆ, ಜಾಧವ, ಲಿಂಬಲ ಕರ ಹಾಗೂ ಭಾಗವತ. ತಮ್ಮ ಸಮುದಾಯದಲ್ಲಿ ಒಳಬಾಂಧವ್ಯ ಹಾಗೂ ಕುಲದ ಮಟ್ಟದಲ್ಲಿ ಹೊರ ಬಾಂಧವ್ಯ ವಿವಾಹವು ರೂಢಿಯಲ್ಲಿದೆ. ಮದುವೆಯು ತಂದೆಯ ಸಹೋದರಿಯ ಮಗಳು, ತಾಯಿಯ ಸಹೋದರನ ಮಗಳು ಅಥವಾ ಹಿರಿಯಕ್ಕನ ಮಗಳ ಜೊತೆ ಸಾಧ್ಯವಿದೆ. ಏಕಪತ್ನಿತ್ವ / ಏಕಪತಿತ್ವ ಮದುವೆಯ ಪದ್ಧತಿ ತಾಳಿ, ವಧುದಕ್ಷಿಣೆಯಾಗಿ ನೂರ ಮೂವತ್ತು ರೂಪಾಯಿಗಳನ್ನು ಸಾಂಪ್ರದಾಯಿಕವಾಗಿ ಕೊಡಬೇಕು. ಬುಡಬುಡುಕಿಯವರು ಗಂಡು ಸಂತಾನಕ್ಕೆ ಪ್ರಾಧಾನ್ಯತೆ ನೀಡುತ್ತಾರೆ. ಹಿರಿಯ ಮಗ ತಂದೆ ನಂತರ ಮನೆಯ ವಾರಸುದಾರನಾಗುತ್ತಾನೆ. ಮಗು ಹುಟ್ಟಿದಾಗ ಸೂತಕವು ಹನ್ನೆರಡು ದಿನ ಇರುತ್ತದೆ. ಮದುವೆಯ ಸಮಾರಂಭಗಳಲ್ಲಿ ವೀಳ್ಯಶಾಸ್ತ್ರ, ಮನೆಯ ದೇವರುಗಳ ಆರಾಧನೆ, ತಾಳಿಕಟ್ಟುವುದು, ಕಾಲುಂಗುರ ತೊಡಿಸುವುದು ಇತ್ಯಾದಿಗಳು ಮುಖ್ಯ.

ಸಾಂಪ್ರದಾಯಿಕ ವೃತ್ತಿಯನ್ನು ಬಿಟ್ಟು ಇವರು ಪಾತ್ರೆ ಮಾರುವ ವೃತ್ತಿಗೆ ಬದಲಾಗಿದ್ದಾರೆ. ಇವರ ಇತ್ತೀಚಿನ ವೃತ್ತಿ ಎಂದರೆ ಜೋತಿಷ್ಯ ಹೇಳುವುದು. ಹೆಂಗಸರು ಕೌದಿಗಳನ್ನು ಹೊಲಿಯುತ್ತಾರೆ ಮತ್ತು ವ್ಯವಸಾಯದ ಕೂಲಿಗಳಾಗಿಯೂ ದುಡಿಯುತ್ತಾರೆ. ಊರಿಂದೂರಿಗೆ ಅಲೆಯುವ ಈ ಸಮುದಾಯದ ಬದುಕು ನಿಜಕ್ಕೂ ಶೋಚನೀಯ. ಅಂಬಾ ಭವಾನಿ, ಯಲ್ಲಮ್ಮ, ಮಹಾಲಕ್ಷ್ಮೀ, ಇವರು ಪೂಜಿಸುವ ದೇವರುಗಳು. ಆಧುನಿಕ ವಿದ್ಯಾಭ್ಯಾಸ ಹಾಗೂ ಇತರ ಅಭಿವೃದ್ಧಿ ಯೋಜನೆಗಳ ಬಗ್ಗೆ ಇವರಿಗೆ ಒಲವಿದೆ. ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಪರಿಸ್ಥಿತಿ ಸುಧಾರಣೆಯಾಗಬೇಕಾಗಿದೆ.

ದೊಂಬಿದಾಸರು :

ದೊಂಬಿದಾಸರನ್ನು, ಕಾಳಿದಾಸ, ಬಾಳಶೆಟ್ಟಿ ಮತ್ತು ಹೆಣ್ಣು ವೇಷದವರು ಎಂದೂ ಕರೆಯುತ್ತಾರೆ. ಇವರಲ್ಲಿ ಎರಡು ಉಪಜಾತಿಗಳಿವೆ. ಗೊಲ್ಲದಾಸ ಮತ್ತು ಶೆಟ್ಟಿದಾಸ. ಇವರು ತುಂಬಾ ಹಿಂದೆ ಆಂಧ್ರಪ್ರದೇಶದಿಂದ ವಲಸೆ ಬಂದಿರುವರೆಂದು ಹೇಳಲಾಗುತ್ತದೆ. ಮೂಲತಃ ಇವರನ್ನು 'ದಾಸರು' ಎಂದು ಹೇಳಲಾಗುತ್ತಿತ್ತು. ದೊಂಬಿ ಪದವು ಗತಕಾಲದ ಒಂದು ಘಟನೆಯ ನಂತರ ಬಳಕೆಗೆ ಬಂದಿದೆ. ಇವರು ಹರಿಕಥೆ ಕಥನ ಮಾಡುವಾಗ ಪ್ರೇಕ್ಷಕರಲ್ಲಿ ಒಂದು ದೊಂಬಿ ನಡೆಯಿತು. ಇದರಿಂದ ಇವರಿಗೆ ಈ ಹೆಸರು ಬಂತು ಎಂದು ಹೇಳಲಾಗುತ್ತದೆ. ಇನ್ನೊಂದು ವಿವರಣೆ ಎಂದರೆ ಇವರು ಪುರಾಣ ಸಂಬಂಧಿ ಜ್ಞಾನವನ್ನು ದುಂಬಿಗಳಷ್ಟು ಮಧುರವಾಗಿ ಹಾಡುವರು. ದುಂಬಿ ನಂತರದಲ್ಲಿ ದೊಂಬಿಯಾಗಿ ಬದಲಾವಣೆ ಹೊಂದಿರಬಹುದು ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ.

ಗೊಲ್ಲ ಮತ್ತು ಶೆಟ್ಟಿ ಎಂಬ ಎರಡು ಉಪಜಾತಿಗಳು ಮುಂದೆ ಹಲವಾರು ಬೆಡಗುಗಳಾಗಿ ವಿಭಜನೆಯಾಗಿವೆ. ಸೋದರ ಸಂಬಂಧಿ ವಿವಾಹಗಳಿಗೆ ಅನುಮತಿಯಿದೆ. ಏಕಪತಿತ್ವ / ಏಕ ಪತ್ನಿತ್ವ ನಿಯಮವನ್ನು ಆಚರಿಸುವರು. ಸಾಂಪ್ರದಾಯಿಕವಾಗಿ ವಧುದಕ್ಷಿಣೆಯನ್ನು ನೀಡಲಾಗುತ್ತದೆ. ವಿವಾಹ ವಿಚ್ಛೇದನಕ್ಕೆ ಅನುಮತಿಯಿದೆ. ವಿಧವೆ, ವಿಧುರ ಮತ್ತು ವಿಚ್ಛೇದಿತರ ವಿವಾಹಕ್ಕೆ ಅವಕಾಶವಿದೆ. ತಂದೆಯ ನಂತರ ಹಿರಿಯ ಮಗನು ಉತ್ತರಾಧಿಕಾರಿಯಾಗುವನು. ದೊಂಬಿಗಳಲ್ಲಿ ಕೆಲವು ಮುಖ್ಯ ವಿವಾಹ ಆಚರಣೆಗಳೆಂದರೆ ವಿವಾಹ ನಿಶ್ಚಯ ಬಳೆ ತೊಡಿಸುವುದು, ತಾಳಿಕಟ್ಟುವುದು ಮುಂತಾದವುಗಳು. ಶವವನ್ನು ಸುಟ್ಟು, ಸೂತಕವನ್ನು ಹತ್ತು ದಿನಗಳವರೆಗೆ ಆಚರಿಸಲಾಗುವುದು.

ಈ ಸಮುದಾಯದ ಕೆಲವೇ ಜನರಿಗೆ ಕೃಷಿ ಭೂಮಿ ಇರುತ್ತದೆ. ಇವರಲ್ಲಿ ಹೆಚ್ಚಿನ ಜನರು, ಕೂಲಿ ಕೆಲಸ, ಸಣ್ಣ ಪುಟ್ಟ ವ್ಯಾಪಾರ ಇತರ ಉದ್ಯೋಗವನ್ನು ಅವಲಂಬಿಸಿರುವರು. ಇದನ್ನು ಹಾಡು ಮತ್ತು ಜಾನಪದ ಕಥೆಗಳನ್ನು ಹೇಳುವುದರ ಜೊತೆಗೆ ಮುಂದುವರೆಸುತ್ತಿದ್ದರು. ಈಗ ಇದು ನಿಧಾನವಾಗಿ ಮರೆಯಾಗುತ್ತಿದೆ. ದೊಂಬಿದಾಸರು ಸಾಮೂಹಿಕವಾಗಿ ತಿರುಪತಿಯ ವೆಂಕಟರಮಣ ದೇವರನ್ನು ಆರಾಧಿಸಿ, ಅವನ ಹೆಸರಿನಲ್ಲಿ ಭಕ್ತಿಪರ ಯೋಚನೆಯನ್ನು ಮಾಡುತ್ತಾರೆ. ಜಾನಪದ ಕಥೆಗಾರರು ಹಾಗೂ ನಾಟಕಕಾರರು ಈ ಸಮುದಾಯದಲ್ಲಿ ಇರುವರು. ಗಂಡು ಮಗುವಿನ ಶಿಕ್ಷಣದ ಬಗ್ಗೆ ಇವರ ಮನೋವೃತ್ತಿ ಉತ್ತಮವಾಗಿದೆ. ಆದರೆ ಅದು ಹೆಣ್ಣು ಮಕ್ಕಳಿಗೆ ಇಲ್ಲವಾಗಿದೆ. ಇವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಪರಿಸ್ಥಿತಿಯ ಸುಧಾರಣೆಯಾಗಬೇಕಾದ ಅವಶ್ಯಕತೆ ಇದೆ.

ಅಡವಿ ಚೆಂಚರು :

ಅಡವಿ ಚೆಂಚರನ್ನು ಚೆಂಡು, ಚೆಂಚುಕುಲಂ, ಚಂಚುವಾಡ, ಅಡವಿ ಚೆಂಡರು, ಚಿಕ್ಕುಚೆಂಚು ಮುಂತಾದ ಹೆಸರಿನಿಂದ ಕರೆಯುತ್ತಾರೆ. ಕೆಂಚಗೆ ಇರುವ ಚೆಂಡರನ್ನು 'ಕೆ' ಕಾರಕ್ಕೆ ಬದಲಾಗಿ 'ಚೆ' ಕಾರವನ್ನು ಹಚ್ಚಿ, ಚೆಂಚರು ಎಂದು ಕರೆದಿರಬೇಕು. ಸದಾಕಾಲ ಕಾಡಿನಲ್ಲಿ ವಾಸಿಸುವ ಈ ಸಮುದಾಯದ ಜನರನ್ನು ಅಡವಿ ಚೆಂಡರು ಎಂದು ರೂಢಿಗತವಾಗಿ ಕರೆದಿರಬಹುದು. ಅಪರಾಧಿ ಬುಡಕಟ್ಟು ಪಟ್ಟಿಯಲ್ಲಿ ಬರುವ ಲಂಬಾಣಿ, ಗಂಟಿಚೋರ, ಚಪ್ಪರಬಂದ ಇತ್ಯಾದಿ ಬುಡಕಟ್ಟು ಸಮುದಾಯಗಳ ಜೊತೆ ಅಡವಿ ಚೆಂಚರನ್ನು ಸಹ ಬ್ರಿಟಿಷರು ಗುರುತಿಸಿ ಪಟ್ಟಿ ಮಾಡಿದ್ದರು. ಮರಗೊಲ್ಲಿ, ಯನಾದಿ, ಇರುಳ, ಚೆಕ್ಕುಚೆಂಚು, ಲಂಬಾಣಿ ಮುಂತಾದ ಅರಣ್ಯವಾಸಿ ಬುಡಕಟ್ಟಿನವರನ್ನು ಚರಿತ್ರೆಕಾರರು ಚೆಂಚರನ್ನು ಅಡವಿ ಚೆಂಚರೆಂದು ಗುರುತಿಸಿರಬಹುದು.

ಅಡವಿ ಚೆಂಚರ ಪೂರ್ವಜರು ಮಧ್ಯಭಾರತದ ವಿಂಧ್ಯ ಪರ್ವತದ ಕಾಡುಗಳಲ್ಲಿ ನೆಲೆಸಿ, ಬೇಟೆಗಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುತ್ತಿದ್ದರು. ಅವರಲ್ಲಿ ಕೆಲವರು ಗುಜರಾತ, ಮಹಾರಾಷ್ಟ್ರ, ಕರ್ನಾಟಕ ಮುಂತಾದ ಪ್ರದೇಶಗಳಿಗೆ ವಲಸೆ ಬಂದಿರಬಹುದು. ಆಗಿನ ಮುಂಬೈ ಸರ್ಕಾರವು ೧೯೨೪ರಲ್ಲಿ ಜಾರಿಗೆ ತಂದ ಅಪರಾಧಿ ಬುಡಕಟ್ಟು ಕಾಯ್ದೆ ಪ್ರಕಾರ ಇಪ್ಪತ್ತನಾಲ್ಕು ನೆಲೆಗಳಲ್ಲಿ ಈ ಸಮುದಾಯದ ಜನರನ್ನು ಹಿಡಿದಿಟ್ಟರು. ಈ ನೆಲೆಗಳು ಮುಂಬೈ ಕರ್ನಾಟಕದಲ್ಲಿ ಖಾನಪುರ, ಹುಬ್ಬಳ್ಳಿ, ಗದಗ, ಬಾಗಲಕೋಟೆ, ವಿಜಾಪುರ, ಇಂಡಿ ಮುಂತಾದ ಕಡೆ ಇವೆ.

ಅಡವಿ ಚೆಂಚರು ಧಾರವಾಡ, ವಿಜಾಪುರ, ರಾಯಚೂರು, ಗುಲ್ಬರ್ಗಾ, ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬಂದರೆ, ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ಮೈಸೂರು ಮತ್ತು ಚಾಮರಾಜ ಜಿಲ್ಲೆಗಳಲ್ಲಿ ವಿರಳವಾಗಿ ಇದ್ದಾರೆ. ಚೆಂಡರು ನಾಲ್ಕು ಪ್ರಮುಖ ಗುಂಪುಗಳಾಗಿ ವಿಂಗಡಣೆ ಹೊಂದಿದ್ದಾರೆ. ಅವುಗಳೆಂದರೆ ತೆಲುಗು ಚೆಂಚರು, ಅಡವಿಚೆಂಚರು, ಕೃಷ್ಣಾ ಚೆಂಚರು, ಬೊಂಟಾ ಚೆಂಚರು ಎಂದು ರಿಸ್ಲೆ ದಾಖಲಿಸುತ್ತಾರೆ. ಚೆಂಚರು ಮಾತನಾಡುವ ಭಾಷೆಗೆ ಲಿಪಿ ಇಲ್ಲ. ಮನೆಯಲ್ಲಿ ಮರಾಠಿ ಮಿಶ್ರಿತ ಗುಜರಾತಿ ಭಾಷೆಯನ್ನು ಮಾತನಾಡುತ್ತಾರೆ. ಹೊರಗಡೆ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಇವರು ಮಾತನಾಡುವ ಭಾಷೆಯ ಮೇಲೆ ಲಂಬಾಣಿ ಭಾಷೆಯ ಪ್ರಭಾವ ಹೆಚ್ಚಾಗಿ ಆಗಿರುತ್ತದೆ ಎಂದು ತಜ್ಞರು ಗುರುತಿಸಿದ್ದಾರೆ.

ಮೊದಲ ಬಾರಿಗೆ ಮುಂಬೈ ಸರಕಾರವು ೧೯೨೪ರಲ್ಲಿ ಅಪರಾಧಿ ಬುಡಕಟ್ಟಿನ ಒಂಭತ್ತು ಉಪಜಾತಿಗಳನ್ನು ಸಹ ಗುರುತಿಸಿತ್ತು. ಅವುಗಳೆಂದರೆ ಪಾರ್ಥಿ, ಪಾನ್ಸೇಪಾರ್ಥಿ, ರಾಜಪಾರ್ಥಿ, ವಾಗ್ರಿಪಾರ್ಥಿ, ತಾಕಣಕರಿ, ಪರಿಣಶಿಕಾರಿ, ಚಿಗರಿ ಬೇಟೆಗಾರರು, ನೀರಶಿಕಾರಿ, ಪಾಶೇಕಾರಿ. ಅಡವಿ ಚೆಂಚರಲ್ಲಿ ಮುಖ್ಯವಾಗಿ ಆರು ಬೆಡಗುಗಳಿವೆ. ಅವೆಂದರೆ ವೆಂಪಳಜ್ಯಾ, ಖೋಡಿಯಾರ, ಹರಕ್ಯಾ, ಕೊರಬ್ಯಾ, ಇಕೋತ್ಯಾ ಮತ್ತು ಸಾವುಂಡ್ಯಾ. ಇವುಗಳಲ್ಲಿ ಮೊದಲ ಮೂರು ಬೆಡಗಿನವರು ಅಣ್ಣ ತಮ್ಮಂದಿರ ವಂಶದವರಾಗಿದ್ದರಿಂದ

ಹೆಣ್ಣು ಗಂಡು ಕೊಡುಕೊಳ್ಳುವಿಕೆ ನಡೆಯುವುದಿಲ್ಲ. ಬೇರೆ ಬೆಡಗಿನವರು ಅಂದರೆ ಕೊರಬ್ಯಾ, ಇಕೋತ್ಯಾ, ಸಾವುಂಡ್ಯಾರವರ ಜೊತೆಗೆ ವಿವಾಹ ಸಂಬಂಧವನ್ನು ಬೆಳೆಸುತ್ತಾರೆ.

ಇವರು ಮಹುವಾ ಎಂಬ ಹೂವಿನಿಂದ ಮದ್ಯವನ್ನು ತಯಾರಿಸುತ್ತಿದ್ದರೆಂದು ಗುರುತಿಸಿದ್ದಾರೆ. ಹಿಂದೆ ಅಡವಿ ಚೆಂಚರು ಅರಣ್ಯದ ಉಪ ಉತ್ಪನ್ನಗಳನ್ನು ಸಂಗ್ರಹಿಸುತ್ತಿದ್ದರು ಎಂದು ಗುರುತಿಸಿದ್ದಾರೆ. ಚೆಂಚರು ಪೂಜಿಸುವ ದೇವತೆ "ಚೆಂಚುದೇವತೆ". ನರಸಿಂಹ ದೇವರು ಸುಂದರಿಯಾದ ಚಂಚಿತಾಳನ್ನು ಹೊತ್ತುಕೊಂಡು ಹೋಗಿ ಮದುವೆಯಾದನೆಂದು ನಂಬಿದ್ದಾರೆ. ನರಸಿಂಹದೇವರನ್ನು ಇವರು 'ಓಬಳೇಸುಡು' ಎಂದು ಕರೆಯುತ್ತಾರೆ. ಓಬಳೇಸುಡುವನ್ನು ಅಳಿಯನನ್ನಾಗಿ ಭಾವಿಸಿ ಚೆಂಚರು ವರ್ಷಕ್ಕೊಮ್ಮೆ ಉಡುಗೊರೆಯನ್ನು ಕೊಟ್ಟು ಪೂಜೆ ಸಲ್ಲಿಸುತ್ತಾರೆ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಅಡವಿಚೆಂಚರು ತೀರಾ ಹಿಂದುಳಿದ ಒಂದು ಸಮುದಾಯ ಎಂದು ೧೯೮೭ ರಲ್ಲಿ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸಿದ ಸಮೀಕ್ಷಾ ವರದಿಯಿಂದ ತಿಳಿದು ಬರುತ್ತದೆ. ಈ ವರದಿಯಲ್ಲಿ ಇವರನ್ನು ಪರಿಶಿಷ್ಟ ಪಂಗಡದಲ್ಲಿ ಸೇರಿಸುವುದರಿಂದ ಮಾತ್ರ ಇವರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಲು ಸಾಧ್ಯವೆಂದು ಶಿಫಾರಸು ಮಾಡಲಾಗಿದೆ.

ರಾಜಗೊಂಡರು :

'ಗೊಂಡ' ಎಂಬ ಶಬ್ದ ತೆಲುಗು ಭಾಷೆಯ 'ಕೊಂಡ' ಎಂಬ ಶಬ್ದದಿಂದ ಬಂದದ್ದೆಂದು ಭಾಷಾ ವಿಜ್ಞಾನಿಗಳ ಅಭಿಪ್ರಾಯ 'ಕೊಂಡ' ಎಂದರೆ ತೆಲುಗಿನಲ್ಲಿ ಗುಡ್ಡ ಅಥವಾ ಬೆಟ್ಟ ಎಂದು ಅರ್ಥ. ಕಾಲಾನಂತರ 'ಕ' ಕಾರ 'ಗ' ಕಾರವಾಗಿ ಪರಿವರ್ತನೆಯಾಗಿ 'ಗೊಂಡ' ಎಂದು ರೂಪಾಂತರ ಹೊಂದಿರಬೇಕು. ವಿಂಧ್ಯ ಪರ್ವತದಲ್ಲಿ ಇವರು ಒಂದು ಬುಡಕಟ್ಟು ಸಮುದಾಯ ಮತ್ತು ಆ ಸಮುದಾಯಕ್ಕೆ ಸೇರಿದ ವ್ಯಕ್ತಿ ಎಂದು ಕನ್ನಡ ನಿಘಂಟಿನಲ್ಲಿ ತಿಳಿಸಲಾಗಿದೆ. ಗೊಂಡ ಮತ್ತು ಗೌಡ ಎರಡೂ ಪದಗಳು ಒಂದೇ ಮೂಲದಿಂದ ಬಂದವು. ಬಯಲು ಸೀಮೆಯ ಕಡೆ ಗೌಡ ಪದಕ್ಕೆ ಬದಲಾಗಿ 'ಗೊಂಡ' ಎಂದು ಬಳಸುವುದು ಕಂಡುಬರುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಗೊಂಡರನ್ನು ಗೌಡರೆಂದೇ ಕರೆಯುತ್ತಾರೆ. ಗೊಂಡರು ತಮ್ಮನ್ನು 'ಕೋಯಿತುರ' ಅಥವಾ 'ಕೋಯಿ' ಎಂದು ಕರೆದುಕೊಳ್ಳುತ್ತಾರೆ. ಗೌಡರೇ ಗೊಂಡರಾಗಿರುವುದಾಗಿ ಜನರಲ್ ಕನ್ನಿಂಗ್ ಹ್ಯಾಮ್ ಹಲವಾರು ಸಾಕ್ಷಿಗಳೊಂದಿಗೆ ಹೇಳುತ್ತಾರೆ. ಗೊಂಡ ಶಬ್ದವನ್ನು ಹಲವಾರು ಅರ್ಥಗಳಲ್ಲಿ ವಿದ್ವಾಂಸರು ಚರ್ಚಿಸಿದ್ದಾರೆ. ಗೊಂಡರು 'ಗೋಂಡಿ' ಎಂಬ ಭಾಷೆಯನ್ನು ಮಾತನಾಡುತ್ತಾರೆ. 'ಗೋಂಡಿ' ಎಂಬುದು ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಒಂದು ಭಾಷೆ. ಆದರೆ 'ಗೊಂಡರು' ಎಂದು ಕರೆಯಲ್ಪಡುವ ವಿವಿಧ ಬುಡಕಟ್ಟಿನ ಜನರೂ ಗೊಂಡಿ ಭಾಷೆಯನ್ನು ಮಾತ್ರ ಮಾತನಾಡುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಬೇರೆ ಬೇರೆ ಪ್ರದೇಶಗಳಲ್ಲಿ ಚದುರಿರುವ ಗೊಂಡರು

[illegible]

ತಾವು ವಾಸಿಸುವ ಪ್ರದೇಶದ ಭಾಷೆಯನ್ನು ಮಾತನಾಡುತ್ತಾರೆ. ಹೀಗಾಗಿ ಗೊಂಡರಲ್ಲಿ ಗೊಂಡಿ ಭಾಷೆಯೇ ಗೊತ್ತಿಲ್ಲದೆ ಇತರ ಭಾಷೆಗಳನ್ನು ಮಾತನಾಡುವ ಜನರೂ ಇದ್ದಾರೆ.

ಕರ್ನಾಟಕದಲ್ಲಿ ಇವರು ಉತ್ತರ ಕನ್ನಡ, ಗುಲ್ಬರ್ಗಾ, ಶಿವಮೊಗ್ಗ, ದಕ್ಷಿಣ ಕನ್ನಡ ಹಾಗೂ ಬೀದರ್ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡು ಬಂದರೂ, ಇತರ ಜಿಲ್ಲೆಗಳಲ್ಲಿ ಇವರ ನೆಲೆಗಳನ್ನು ಗುರುತಿಸಬಹುದು. ಇವರ ಪೂರ್ವಜರು ಆಂಧ್ರಪ್ರದೇಶದಿಂದ ವಲಸೆ ಬಂದವರೆಂದು ಇವರು ನಂಬಿಕೊಂಡಿದ್ದಾರೆ ಗೊಂಡರು ಆಂದ್ರ ಪ್ರದೇಶದಿಂದ ಬಂದವರೆಂದು ಸಮರ್ಥಿಸಲು ಇವರ ಕುಲದೇವತೆ ತಿರುಪತಿ ತಿಮ್ಮಪ್ಪನಾಗಿರುವುದು ಒಂದು ಆಧಾರ. ಗೊಂಡರಲ್ಲಿ ಹಲವಾರು ಬಳಿಗಳಿವೆ. ಅವುಗಳೆಂದರೆ ಅಜ್ಜರಬಳಿ, ಆನೆಬಳಿ, ಸೆಟ್ಟಿಬಳಿ ಸಿರಿನ ಬಳಿ, ಹೊನ್ನಬಳಿ, ಹಾಲಬಳಿ, ರಾಯಬಳಿ, ದಾವತರಬಳಿ, ನಾಗಬಳಿ, ಮಲ್ಲಿಗೆಬಳಿ ಇತ್ಯಾದಿ. ಗೊಂಡರಲ್ಲಿ ಕಾಣುವ ಕೆಲವು ಬಳಿಗಳು ಉತ್ತರ ಹಾಗೂ ದಕ್ಷಿಣ ಕನ್ನಡದ ಕೆಲವು ಬುಡಕಟ್ಟು ಹಾಗೂ ಜಾತಿಗಳಲ್ಲಿಯೂ ಕಂಡು ಬರುತ್ತವೆ.

ಗೊಂಡರ ಕುಟುಂಬಗಳಲ್ಲಿ ಪಿತೃಪ್ರಧಾನ ವ್ಯವಸ್ಥೆ ಕಂಡುಬರುತ್ತದೆ. ಹಿಂದೆ ಇವರಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆ ಹೆಚ್ಚಾಗಿರುವುದು ತಿಳಿದುಬರುತ್ತದೆ. ಇತ್ತೀಚೆಗೆ ವಿಭಕ್ತ ಕುಟುಂಬ ಪದ್ಧತಿ ಇವರಲ್ಲಿ ಕಂಡುಬರುತ್ತದೆ. ಗೊಂಡರಲ್ಲಿ ಬಾಲ್ಯ ವಿವಾಹದಿಂದ ಹಿಡಿದು ವಿಧವೆ, ವಿಧುರ, ವಿಚ್ಛೇದಿತರ ವಿವಾಹಕ್ಕೂ ಅವಕಾಶವಿದೆ. ಇವರಲ್ಲಿ ವಧು-ವರರ ವಯಸ್ಸಿಗೆ ಮಹತ್ವ ಇಲ್ಲದಿದ್ದರೂ ಬಳಿಯ ವಿಷಯದಲ್ಲಿ ಹೆಚ್ಚು ಮಹತ್ವ ಕೊಡುತ್ತಾರೆ. ಒಂದೇ ಬಳಿಯ ಹೆಣ್ಣು ಗಂಡುಗಳ ವಿವಾಹ ನಿಷಿದ್ಧವಾಗಿದೆ. ಆದ್ದರಿಂದ ವಿವಾಹದಲ್ಲಿ ಬಳಿ ನೋಡಿ ಹೆಣ್ಣು ತರುವುದು ಪದ್ಧತಿ. ಹೆಂಗಸರು ವ್ಯವಸಾಯ, ಉರುವಲು ಸಂಗ್ರಹಣೆ, ಸಾಮಾಜಿಕ ಆಚರಣೆ, ಧಾರ್ಮಿಕ ಕಾರ್ಯಕ್ರಮ ಎಲ್ಲದರಲ್ಲಿಯೂ ಸಕ್ರಿಯವಾಗಿ ಭಾಗವಹಿಸುತ್ತಾರೆ.

ಗೊಂಡರು ಮೂಲತಃ ಪಶುಸಂಗೋಪನೆ ಮಾಡುವವರು. ಚಿಲ್ಲರೆ ವ್ಯಾಪಾರ, ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಯಲ್ಲಿ ನೌಕರಿ ಇತ್ತೀಚೆಗೆ ಮಾಡುತ್ತಿದ್ದಾರೆ. ಚಾಪೆಗಳನ್ನು ಹೆಣೆಯುವುದು ಇವರ ವಿರಾಮ ಕಾಲದ ಹವ್ಯಾಸ. ಇವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಗಮನಿಸಿದರೆ ಈ ಸಮುದಾಯದ ಜನರು ಹಿಂದುಳಿದ ಒಂದು ಸಮುದಾಯವೆಂದು ತಿಳಿದು ಬರುತ್ತದೆ.

ಕೊರವಂಜಿ :

ಅಲೆಮಾರಿ ಜನಾಂಗಗಳಲ್ಲಿ ಒಂದು ಪಂಗಡದವರಾದ 'ಕೊರವಂಜಿ'ಗಳು ಜನಪದ ಗಾಯಕರೂ ಹೌದು. ಒಂದು ಕಾಲದಲ್ಲಿ ದಕ್ಷಿಣ ಭಾರತದಲ್ಲೆಲ್ಲಾ ಇವರ ಹೆಸರು ಪ್ರಸಿದ್ಧವಾಗಿತ್ತು. ಕೊರವಂಜಿ ಶಬ್ದ ಪ್ರಮುಖ ದ್ರಾವಿಡ ಭಾಷೆಗಳಲ್ಲೆಲ್ಲಾ ಕಂಡುಬರುತ್ತದೆ. 'ಕೊರವಂಜಿ'ಯನ್ನು ಕೊರವತಿಯರೆಂದೂ ಕರೆಯಲಾಗುತ್ತದೆ. ಇವರು ಹೆಚ್ಚಾಗಿ ವಾಸಿಸುವುದು ಗುಡ್ಡಗಾಡುಗಳಲ್ಲಿಯೇ. ಪಶುಪಾಲನೆ, ಬೇಟೆ ಮತ್ತು

ಬುಟ್ಟಿ ಹೆಣೆಯುವುದು ಇವರ ಮುಖ್ಯ ಕೆಲಸ. ಭವಿಷ್ಯ ಹೇಳುವ ಕಸುಬನ್ನು ಅವಲಂಬಿಸಿರುವ ಹೆಂಗಸರು 'ಕೊರವಂಜಿ'ಗಳೆಂದು ಪರಿಚಿತರಾಗಿದ್ದಾರೆ. ಈ ಜನ ಅಲೆಮಾರಿಗಳಾಗಿರುವುದರಿಂದಲೇ ದಕ್ಷಿಣ ಭಾರತದ ಭಾಷೆಗಳನ್ನೆಲ್ಲಾ ಆಡಲು ಕಲಿತಿರುತ್ತಾರೆ. ಇವರ ಮೂಲದ ಬಗೆಗೆ ಅನೇಕ ಕಥೆಗಳಿವೆ. ಒಮ್ಮೆ ಪಾರ್ವತಿಯು ಕೊರವಂಜಿಯ ವೇಷ ಧರಿಸಿ ಭವಿಷ್ಯ ಹೇಳಿದಳಂತೆ. ಇವರೆಲ್ಲಾ ಆಕೆಯ ಮಕ್ಕಳಾದುದರಿಂದ ಅವರಿಗೂ ಕೊರವಂಜಿಗಳೆಂಬ ಹೆಸರು ಬಂದಿತೆಂಬ ಕಥೆ ಇವರಲ್ಲಿ ಪ್ರಚಾರದಲ್ಲಿದೆ. ಇನ್ನೊಂದು ಕಥೆಯ ಪ್ರಕಾರ ಪಾರ್ವತಿಯು ಒಮ್ಮೆ ಹಾವೊಂದನ್ನು ಕೊಂದು ಅದರಲ್ಲಿ ವಜ್ರ ವೈಢೂರ್ಯಗಳನ್ನು ತುಂಬಿ ತನ್ನ ಮಗುವಿಗೆ ಒಂದು ತೊಟ್ಟಿಲನ್ನು ಮಾಡಿಕೊಡುವಂತೆ ಮೇದರವನಿಗೆ ಹೇಳಿದಳಂತೆ. ಅವನು ಭಯದಿಂದ ಹಿಂದೆ ಮುಂದೆ ನೋಡಿದಾಗ ಅದೇ ಮಾತನ್ನು ಕೊರಚನೊಬ್ಬನಿಗೆ ಹೇಳಿದಳಂತೆ. ಆಗ ಅವನು ಯಾವ ಮಾತನ್ನೂ ಆಡದೆ ತೊಟ್ಟಿಲನ್ನು ಮಾಡಿಕೊಟ್ಟಾಗ ಆ ಕೊರಚನಿಗೆ ತನ್ನಲ್ಲಿದ್ದ ಮಂತ್ರದಂಡ ಮತ್ತು ಮೊರವನ್ನಿತ್ತು ಭವಿಷ್ಯ ಹೇಳುವ ಶಕ್ತಿಯನ್ನು ಅನುಗ್ರಹಿಸಿದಳಂತೆ. ಧರ್ಮರಾಯ ವನವಾಸದಲ್ಲಿದ್ದಾಗ ಅವನನ್ನು ಮೋಹಿಸಿದ್ದ ಹೆಣ್ಣೊಬ್ಬಳು ಭವಿಷ್ಯಗಾರ್ತಿಯಂತೆ ವೇಷ ಹಾಕಿಕೊಂಡು ಅವನಲ್ಲಿಗೆ ಹೋಗಿ ಅವನನ್ನು ವರಿಸಿದಳೆಂದು ಆಕೆಯ ಮಕ್ಕಳೇ ಕೊರವರೆಂದೂ ಮತ್ತೊಂದು ಕಥೆಯಿದೆ. ಪುರಾಣ ಕಾಲದಿಂದಲೂ ಕೊರವಂಜಿಗಳು ಕಣಿ ಹೇಳುತ್ತಲೇ ಬಂದಿದ್ದಾರೆ. ವೆಂಕಟೇಶ್ವರನು ಪದ್ಮಾವತಿಗೆ ಕೊರವಂಜಿಯ ವೇಷದಲ್ಲಿ ಕಣಿ ಹೇಳಿದ್ದು, ಮಹಾಭಾರತದಲ್ಲಿಯ ಕೃಷ್ಣನು ಕೊರವಂಜಿ ವೇಷ ಧರಿಸಿ ರುಕ್ಮಿಣಿಗೆ ಕಣಿ ಹೇಳಿದ್ದು – ಇವೆಲ್ಲಾ ಪುರಾಣ ಪ್ರಸಿದ್ಧ ಪ್ರಸಂಗಗಳು. ಈ ಕಾರಣದಿಂದಲೋ ಏನೋ ಕೃಷ್ಣನನ್ನು ಕೊರವಂಜಿಗಳು ಭಕ್ತಿಯಿಂದ ನೆನೆಯುತ್ತಾರೆ. ಅದಕ್ಕಾಗಿಯೇ ಕೃಷ್ಣನು ಕೊಟ್ಟಂಥ ಕೊರವಂಜಿ ಬುಟ್ಟಿ ತಪ್ಪಿಲ್ಲ, ಜಂಗಮನಿಗೆ ಜೋಳಿಗೆ ತಪ್ಪಿಲ್ಲ ಎಂಬ ಗಾದೆಯಿದೆ. ಶಿವ ಕೊರವಂಜಿ, ವಿಷ್ಣು ಕೊರವಂಜಿ, ಮನ್ಮಥ ಕೊರವಂಜಿಗಳು ಹೇಳುವುದರ ಜೊತೆಗೆ ಕೊರವಂಜಿ ಹಾಡು, ಕಾವ್ಯ ಹಾಗೂ ಪಾರಿಜಾತದಂಥ ಬಯಲಾಟಗಳಲ್ಲಿ ಕೊರವಂಜಿಯ ಪಾತ್ರ ಕಂಡು ಬರುತ್ತದೆ. ಶಕ್ತಿ ದೇವತೆ ಇವರ ಕುಲದೈವವೆಂದೂ, ಕೃಷ್ಣನೇ ಇವರ ಮೂಲ ಪುರುಷನೆಂದೂ ಹೇಳುತ್ತಾರೆ. ಕೆಲವರ ಪ್ರಕಾರ ಶ್ರೀನಿವಾಸನು ಇವರ ಸಂಪ್ರದಾಯ ಹಾಕಿಕೊಟ್ಟವನೆಂದು ವಾದವಿದೆ. ಆಯಾ ಪ್ರದೇಶಗಳಿಗನುಗುಣವಾಗಿ ಇವರು ತಮ್ಮ ಕುಲದೇವತೆಗಳ ಹೆಸರು ಹೇಳುತ್ತಾರೆ. ಮಹಾಕಾಳಿ, ಸವದತ್ತಿ ಎಲ್ಲಮ್ಮ, ಚಂದ್ರಗುತ್ತಿ ರೇಣುಕೆ, ಕಾತ್ಯಾಯಿನಿ, ಕಾಳಿಕಾದೇವಿ, ಮಹಾಲಕ್ಷ್ಮೀ, ದುರ್ಗಾದೇವಿ ಹುಲಿಗೆಮ್ಮ, ಮೂಕಮ್ಮ, ಮಾರಮ್ಮ, ದ್ಯಾವಮ್ಮ ಮುಂತಾದವು.

ಇವರು ಕೊರವ ಜಾತಿಯವರು. ಮನೆಗೊಂದು ಹೆಣ್ಣು ಕೊರವಂಜಿಯಾಗಲೇ ಬೇಕೆಂಬ, ಇಲ್ಲದಿದ್ದರೆ ಎಲ್ಲಮ್ಮ ಕಾಡುತ್ತಾಳೆಂಬ ನಂಬಿಕೆ ಇದೆಯಂತೆ. ಕೊರವಂಜಿಗಳು ಸಾಮಾನ್ಯ ಹೆಂಗಸರಂತೆ ಗುಜರಾತಿ, ಮಾರ್ವಾಡಿ ಹೆಣ್ಣು ಮಕ್ಕಳಂತೆಯೂ ಸೀರೆ ಕುಪ್ಪಸ ಉಟ್ಟು, ದೊಡ್ಡ ಕುಂಚಿಗೆಯಂತಿರುವ ದುಪ್ಪಟಿಯನ್ನು ತಲೆಗೆ ಧರಿಸಿ ಮಗು ಇದ್ದರೆ ಹೆಗಲಿಗೆ ಜೋಳಿಗೆ ಕಟ್ಟಿ ಬೆನ್ನಿಗೆ ಬಿಟ್ಟಿರುತ್ತಾರೆ. ತಲೆಯ

ಮೇಲೆ ಬುಟ್ಟಿಯಿರುತ್ತದೆ. ಆ ಬುಟ್ಟಿಯಲ್ಲಿ ಎಲ್ಲಮ್ಮ ದೇವಿಯದೆಂದು ಹೇಳುವ ಚೌಕಾಕಾರದ ಚಿಕ್ಕ ಪೆಟ್ಟಿಗೆಯೊಂದಿರುತ್ತದೆ. ಜೊತೆಗೆ, ಎಲೆಯ ತುಣುಕುಗಳೂ, ಎಲುಬಿನ ತುಣುಕುಗಳೂ ಇರುತ್ತವೆ. ಕೈಯಲ್ಲಿ ಉದ್ದವಾದ ಕೋಲಿರುತ್ತದೆ. ಹಣೆಗೆ ಕುಂಕುಮ, ರಟ್ಟೆಗಳಿಗೆ ಬೆಳ್ಳಿ ವಂಕಿಗಳನ್ನು ಧರಿಸಿರುತ್ತಾರೆ. ಇವರು ಮಾತಿನಲ್ಲಿ ಚತುರರು. ಸ್ವಭಾವವನ್ನು ಬೇಗ ಅರಿಯುವವರು. ಕಣಿ ಹೇಳುವೆನೆಂದಾಗ ಒಲ್ಲೆನೆಂದರೂ 'ಅಪ್ಪಾ ತಂದೆ, ಅಣ್ಣ ಧಣಿ, ತಾಯಿ ಎಲ್ಲಮ್ಮಾ ಆದಿಶಕ್ತಿ ಎಂದು ತಮ್ಮ ಆರಾಧ್ಯ ದೈವವನ್ನು ಸ್ಮರಿಸಿ ಕಣಿ ಕೇಳುವಂತೆ ಸಿಕ್ಕಿದವರನ್ನೆಲ್ಲ ಪೀಡಿಸುತ್ತಾರೆ. ಮಾತಿಗೆ ಮರುಳಾಗಿ ಆಸಕ್ತಿ ತೋರಿದರೆ ''ನಿಮ್ಮನ್ನು ಭಾಳ ವರ್ಷದಿಂದ ಶನಿ ಕಾಡಾಕತ್ತೈತಿ ಇನ್ನು ಒಂದು ತಿಂಗಳಾದಾಗ ಎಲ್ಲಾ ಚಲೋ ಆಕ್ತೈತಿ'', ''ನಿಮ್ಮ ಮುಖದ ಮ್ಯಾಲ ಲಕ್ಷಾಧಿಪತಿ ಕಳೆ ಐತಿ'', ''ನಿನ್ನ ಕಂಕಣಬಲ (ಬಾಸಿಂಗಬಲ) ಕೂಡಿ ಬಂದೈತಿ'', ''ನಿನ್ನ ಅತ್ತಿಮಾವ ಪ್ರೀತಿಯಿಂದ ನೋಡಿಕೊಳ್ಳೋ ದಿನಾ ಸಮೀಪ ಆದಾವು'' ಇತ್ಯಾದಿ ಶನಿಕಾಟವನ್ನು ಹೋಗಲಾಡಿಸುತ್ತೇವೆಂದು ಹೇಳುತ್ತಾರೆ. ತಮ್ಮಲ್ಲಿರುವ ಎಲ್ಲಮ್ಮನ ಕವಡೆಯನ್ನು ತೆಗೆದು ಅದರ ಮೇಲೆ ತುಂಡು ಎಲೆಗಳನ್ನು ಇರಿಸಿ ಎರಡು ಮೂರು ರೂಪಾಯಿ ದಕ್ಷಿಣೆ ಇಡುವಂತೆಯೂ ಒತ್ತಾಯಿಸಿ, ಆಮೇಲೆ ಅದನ್ನು ಹಿಂತಿರುಗಿಸುತ್ತೇವೆಂದು ಭಾಷೆ ಕೊಡುತ್ತಾರೆ. ಎಲೆಯೊಂದಿಗೆ ಹಣದ ನೋಟನ್ನು ಅವರ ಮುಖಕ್ಕೆ ನೀವಳಿಸಿ ಪೆಟ್ಟಿಗೆಯ ಮೇಲಿಟ್ಟು ಅದನ್ನು ಹರಿಯುವ ನೀರಿಗೆ ಎಸೆಯುವಂತೆ ಹೇಳಿ ''ನಿಮ್ಮ ಕಾಟ ದೂರ ಆಕ್ತೈತಿ ನಿಮಗ ಚಲೋ ಆಕ್ತೈತಿ'' ಎಂದೆಲ್ಲ ಹೇಳಿ ನೋಟನ್ನು ಚೆಂಡಿನೊಳಕ್ಕಿಟ್ಟುಕೊಳ್ಳುತ್ತಾರೆ. ಕಣಿ ಕೇಳುವವರು ಮತ್ತೆ ಹಣವನ್ನು ಕೇಳಿದಾಗ ''ಅದು ಶನಿ ಪುನಃ ಕಾಡಬೇಕಂತೀರೇನು? ಒಮ್ಮೆ ಹೋದ ಶನಿ ಮತ್ತೆ ಬರಬಾರದು, ದೇವರಿಗೆ ಇಟ್ಟದ್ದು ತಿರುಗಿ ಕೇಳಬಾರದು'' ಎಂದವರ ಬಾಯಿ ಬಡಿಯುತ್ತಾರೆ. ಪದೇ ಪದೇ ಆಣೆ ಭಾಷೆಗಳನ್ನು ಮಾಡುತ್ತಾರೆ.

ಕಿನ್ನರಿ ಜೋಗಿ :

ಕರ್ನಾಟಕದ ವೃತ್ತಿಗಾಯಕ ಪರಂಪರೆಯಲ್ಲಿ ಅತ್ಯಂತ ಮುಖ್ಯವಾದ ಈ ಗಾಯಕ ಜನವರ್ಗ ಹಾಡಿನಲ್ಲಿಯೇ ಬಾಳು ಸವೆಸಿದ ವೈಶಿಷ್ಟ್ಯತೆಯುಳ್ಳದ್ದು. ತಲೆಗೆ ಬಣ್ಣದ ಮುಂಡಾಸು, ಮುಂಡಾಸಿಗೊಂದು ತ್ರಿಶೂಲ, ಮುಂಡಾಸಿಗೆ ಅಂಟಿಕೊಂಡಂತೆ ಗಾಜಿನ ಕಡ್ಡಿಯ ಗುಳೋಪು, ತಲೆ ತುಂಬ ಬಣ್ಣಬಣ್ಣದ ತುರಾಯಿ, ಕರಿಯ ನಿಲುವಂಗಿ, ಕಚ್ಚೆಪಂಚೆ, ಕುತ್ತಿಗೆ ತುಂಬ ಉದ್ದನೆಯ ಮುತ್ತಿನ ಸರಗಳು, ಕರಿಯ ಕೋಟಿನ ಮೇಲೆ ಕಸೂತಿಯ ಚಿತ್ತಾರದ ಅಡ್ಡ ಶಲ್ಯ, ಕಿವಿಗೆ ಕರ್ಣಕುಂಡಲ ಮತ್ತು ಕಾಪಾಲಿ, ಕೈಯಲ್ಲಿ ಕಿನ್ನರಿ, ಕಾಲಿಗೆ ಗೆಜ್ಜೆ, ಹೆಗಲಿಗೆ ಜೋಳಿಗೆ, ತೀಡಿದ ಹುಬ್ಬು, ಪೊದೆ ಮೀಸೆಯ ಅಂಚಲ್ಲಿ ನಸು ನಗುವ ಮುಖ, ಇಂಥ ರಂಗಿನ ವೇಷದ ಕಿನ್ನರಿ ಜೋಗಿಗಳು ಊರ ಬೀದಿಗಳಲ್ಲಿ ಹೊರಟರೆಂದರೆ, ಅವರ ಹಿಂದೆ ಮಕ್ಕಳ ದಂಡೋದಂಡು. ಮನೆ ಮನೆಯ ಮುಂದೆ ನಿಂತು ಸುಮಧುರ ಕಿನ್ನರಿಯನ್ನು ಮೀಟಿ ನುಡಿಸುತ್ತ,

ಕಿರುಗೆಜ್ಜೆಯ ಲಯದೊಂದಿಗೆ ಹಾಡಲು ತೊಡಗಿದರೆಂದರೆ, ಮೊರದ ತುಂಬ ಧಾನ್ಯ ತುಂಬಿ ನೀಡಲು ಬಂದ ಗರತಿ ಹಾಗೆ ಪರವಶಳಾಗಿ ನಿಲ್ಲಬೇಕು ! ಅಂಥ ಕಂಠ ಮಾಧುರ್ಯ ಅವರದು.

ಚಂಚು ಚೆಂಚರು :

ಮೂಲತಃ ಆಂಧ್ರ ಪ್ರದೇಶದ ಕರ್ನೂಲ ಮತ್ತು ನೆಲ್ಲೂರು ಜಿಲ್ಲೆಗಳ ಕಾಡು, ಬೆಟ್ಟಗುಡ್ಡಗಳಲ್ಲಿ ವಾಸಿಸುವ ಚಂಚು ಚೆಂಚರು ಬೇರೆ ಬೇರೆ ಕಡೆ ಚದುರಿ ಹೋಗಿ ನಾನಾ ಹೆಸರುಗಳ ಮೂಲಕ ಕರೆಸಿಕೊಂಡು ಈಗ ಪ್ರತ್ಯೇಕ ಜನಾಂಗವೇನೋ ಎಂಬಷ್ಟರಮಟ್ಟಿಗೆ ಸ್ಥಳೀಯ ಅಗತ್ಯಗಳಿಗನುಗುಣವಾಗಿ ಬದಲಾಗಿ ಹೋಗಿದ್ದಾರೆ. ದಖನ್ ಪ್ರಸ್ಥಭೂಮಿಯ ಕೃಷ್ಣಾ ನದಿಯ ಕೆಳಭಾಗದ ಕರ್ನಾಟಕದಲ್ಲಿ ಚದುರಿದಂತೆ ಅಲ್ಲಲ್ಲಿ ಕಾಣುವ ಚಂಚು ಚೆಂಚರನ್ನು ಅಡವಿ ಚೆಂಚರೆಂದೂ, ಯಾನಾದಿಗಳೆಂದೂ, ಇರುಳಿಗರೆಂದೂ, ಇಲ್ಲಿಗರೆಂದೂ ನಾನಾ ಹೆಸರುಗಳಿಂದ ಕರೆಯುತ್ತಾರೆ. ಚಂಚು ಚೆಂಚರನ್ನು ಈ ಬಗ್ಗೆ ಕೇಳಿದರೆ ಅವರೆಲ್ಲ ನಮ್ಮ ಒಳಶಾಖೆಗಳಲ್ಲಿ ಒಬ್ಬರೆಂದೂ, ಅವರಲ್ಲಿ ಮದುವೆ ಸಂಬಂಧಗಳನ್ನೇರ್ಪಡಿಸಿಕೊಳ್ಳುವುದಾಗಿಯೂ ತಿಳಿಸುತ್ತಾರೆ.

1694ರಲ್ಲಿ ಔರಂಗಜೇಬನ ಮಗ ಮಹಮ್ಮದ್ ಮಾಸೂಮ್ ಕರ್ನೂಲ್ ಜಿಲ್ಲೆಯ ಮೂಲಕ ಹಾದು ಹೋಗುವ ಸಂದರ್ಭದಲ್ಲಿ ಚಂಚು ಚೆಂಚರನ್ನು ಅವನ ಮುಂದೆ ಹಾಜರುಪಡಿಸಿದಾಗ ಅವನ ವರ್ಣನೆ ಹೀಗೆ ಬರುತ್ತದೆ. "ದಟ್ಟ ಕಪ್ಪು ಬಣ್ಣದ ಉದ್ದ ಕೂದಲಿನ, ಎಲೆಸೊಪ್ಪುಗಳಿಂದ ಮಾಡಿದ ಟೊಪ್ಪಿಗೆ ಧರಿಸಿದ ಈ ಜನ ಕೈಯಲ್ಲಿ ಬಿಲ್ಲು ಬಾಣಗಳನ್ನು ಹಿಡಿದು ಬೇಟೆಯಾಡುವವರು". ರಾಜಕುಮಾರ ಸ್ವಲ್ಪ ಚಿನ್ನ ಮತ್ತು ಬೆಳ್ಳಿಯನ್ನು ದಯಪಾಲಿಸಿದಾಗ ಅವರು ಅದರ ಬೆಲೆ ತಿಳಿಯದೆ ನಿರ್ಲಕ್ಷ್ಯ ಮಾಡಿದರು ಎಂದು ದಾಖಲಿಸಲಾಗಿದೆ. ಟೇಲರ್‌ರವರ ಓರಿಯಂಟಲ್ ಮ್ಯಾನ್ ಸ್ಕ್ರಿಪ್ಟ್ ಕೆಟಲಾಗನಲ್ಲಿ ಚೆಂಚರನ್ನು ಅಹೋಬಲಮ್ ಹಾಗೂ ಶ್ರೀಶೈಲ ಬೆಟ್ಟ ಪ್ರದೇಶಗಳ ಪಶ್ಚಿಮಭಾಗಗಳಲ್ಲಿ ವಾಸಿಸುವರೆಂದೂ ಸದಾಕಾಲ ತಮ್ಮ ಬಳಿಯಲ್ಲಿ ಬಿಲ್ಲುಬಾಣಗಳನ್ನು ಹೊಂದಿರುವರೆಂದೂ ಕಾಡಿನ ಎಲೆ ಸೊಪ್ಪುಗಳಿಂದ ಮೈಯನ್ನು ಮುಚ್ಚಿಕೊಳ್ಳುವರೆಂದೂ ವರ್ಣಿಸಲಾಗಿದೆ. ಇದರ ಜೊತೆಗೆ ಇವರನ್ನು ಪ್ರಯಾಣಿಕರನ್ನು ದೋಚುವ ಕಳ್ಳರ ವರ್ಗಕ್ಕೆ ಸೇರಿಸಿ ಕ್ರಿಮಿನಲ್ ಟ್ರೈಬ್ ಎಂದು ಗುರುತಿಸಲಾಗಿದೆ.

ಇದೆಲ್ಲವನ್ನು ಒಪ್ಪಿಕೊಂಡರೂ ಥರ್ಸ್ಟನ್ ಅವರು ಚೆಂಚರನ್ನು ಅರೆಕ್ರೂರಿಗಳೆಂದೂ, ಮುಗ್ಧರೆಂದೂ, ಅಪರಾಧರಹಿತರಾದ ಗಿರಿಜನ ಬುಡಕಟ್ಟೆಂದೂ ಗುರುತಿಸಿದ್ದಾರೆ. ಇವರ ಮುಖ್ಯವಾದ ಕಸುಬೆಂದರೆ ಬೇಟೆಯಾಡುವುದು, ಜೇನು ಕೀಳುವುದು, ಗೆಡ್ಡೆ ಗೆಣಸು ಸಂಗ್ರಹಿಸುವುದು, ಕುಲಕಸುಬಿನ ರೀತಿ ಆಗಾಗ ಹಳ್ಳಿಗಳಲ್ಲಿ ಲೆವಿ ವಸೂಲಿ ಮಾಡುವುದು, ಯಾತ್ರಿಕರಿಂದ ದವಸ ಧಾನ್ಯ ಸುಲಿಗೆ ಮಾಡುವುದು ಎಂದೂ ತಿಳಿಸಿದ್ದಾರೆ. ಒಟ್ಟಾರೆ ಕ್ರಿಮಿನಲ್ ಟ್ರೈಬ್ ಎಂಬ ವರ್ಗಕ್ಕೆ ಈ ಚೆಂಚು ಚೆಂಚರನ್ನು ಥರ್ಸ್ಟನ್ ಸೇರಿಸಿದ್ದಾರೆ.

ಇಲ್ಲಿಗರು ಬುಡಕಟ್ಟು ಜನ, ತಮ್ಮ ಆಹಾರ ಸಂಪಾದನೆಗೆ ಬೇಟೆಯನ್ನು ಮುಖ್ಯ ಕಸುಬನ್ನಾಗಿ ಮಾಡಿಕೊಂಡಿದ್ದಾರೆ. ಅಚ್ಚಕಪ್ಪು ಬಣ್ಣದ ಉದ್ದ ಕೂದಲಿನ, ಸೊಪ್ಪು ಸದೆಗಳಿಂದ ಮೈಮುಚ್ಚಿಕೊಳ್ಳುವ, ತಲೆಗೆ ಎಲೆಗಳಿಂದ ಮಾಡಿದ ಟೋಪಿ ಹಾಕಿಕೊಳ್ಳುವ ನಾಗರಿಕತೆಗೆ ಸಂಪೂರ್ಣ ಹೊರತಾದ ಜನ ಎಂಬುದು ಐವತ್ತು ಅರವತ್ತು ವರ್ಷಗಳಷ್ಟು ಹಿರಿಯರಾದವರಿಂದ ತಿಳಿದು ಬರುವ ವಿಷಯ. ಇವರುಗಳ ಬಗ್ಗೆ ಅಧ್ಯಯನ ಮಾಡಿರುವ ಇ. ಥರ್ಸ್ಟನ್ ಮತ್ತು ರಂಗಾಚಾರಿಯವರು, ತೆಲುಗಿನಲ್ಲಿ ಅಧ್ಯಯನ ಮಾಡಿರುವ ವೆನ್ನೆಲ ಚಂದ್ರಯ್ಯನವರು ಕನ್ನಡದಲ್ಲಿ ಅಧ್ಯಯನ ಮಾಡಿರುವ ಡಾ. ಕೆಂಪೇಗೌಡರು ಬುಡಕಟ್ಟು ಜನರನ್ನಾಗಿಯೇ ಇವರನ್ನು ಕಂಡಿದ್ದಾರೆ. ಆದರೆ ಈಗೀಗ ಇವರು ತಮ್ಮ ಮೂಲ ಲಕ್ಷಣಗಳನ್ನು ಕಳೆದುಕೊಂಡು ನಾಗರಿಕತೆಯ ಸಂಪರ್ಕಕ್ಕೆ ಬಂದಿದ್ದಾರೆ.

1885 ರಲ್ಲಿ ಕರ್ನೂಲು ಜಿಲ್ಲೆಯ ವಿಷಯ ಸಂಗ್ರಹಣೆಯ ಹೊತ್ತಗೆಯಲ್ಲಿ ಮಿ. ನೇವಿಲರು "ಚೆಂಚರ ಭಾಷೆ ಲಂಬಾಣಿ ಭಾಷೆಯನ್ನು ಹೋಲುತ್ತದೆ" ಎಂದಿರುವುದನ್ನು ಥರ್ಸ್ಟನ್ ಅವರು ಅಲ್ಲಗಳೆದು ಲಂಬಾಣಿಗಳೂ ಬೆಟ್ಟಗುಡ್ಡಗಳಲ್ಲಿ ಅಲೆಮಾರಿಗಳಾಗಿದ್ದುದರಿಂದ ಇವರನ್ನೇ ನೇವಿಲರು ಚೆಂಚರೆಂದು ಭಾವಿಸಿರಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ. ಅಶುದ್ಧ ಹಿಂದಿ ಅಥವಾ ಉರ್ದು ಮಾತುಗಳನ್ನು ಸೇರಿಸಿಕೊಂಡು ಬಂಗಾಳಿ ಭಾಷೆಯಿಂದ ಬೇರ್ಪಟ್ಟ ಒಂದು ಭಾಷೆಯನ್ನಾಡುವ ಜನ ವಿಶಾಖಪಟ್ಟಣದಲ್ಲಿ ವಾಸಿಸುತ್ತಿದ್ದಾರೆ ಎಂದು ಬೆಂಗಾಲ್ ಏಸಿಯಾಟಿಕ್ ಸೊಸೈಟಿಗೆ ಪತ್ರದಲ್ಲಿ ಮೊದಲಿಗೆ ತಿಳಿಸಿದ ಮಿ. ನೇವಿಲರು ಬೊಂಟೆಕ್ ಸವರಾಸರನ್ನು ಚೆಂಚು ಜನಾಂಗವೆಂದು ತಪ್ಪಾಗಿ ಭಾವಿಸಿದ್ದರಿಂದ ಈ ಗೊಂದಲ ಉಂಟಾಗಿದೆ ಎಂದು ಥರ್ಸ್ಟನ್ ಭಾವಿಸಿದ್ದಾರೆ. ಅಶುದ್ಧ ಹಿಂದಿಯನ್ನು ಸೇರಿಸಿಕೊಂಡು ಕಚ್ಚಾ ಒರಿಯಾ ಮಾತನಾಡುವ ಬಂಟಕ್ ಸವರಾಸರು ಚೆಂಚರ ತರಹ ಅಹೋಬಲಮ್ಮಿನ ನರಸಿಂಹ ದೇವರು ತಮ್ಮ ಜನಾಂಗದ ಹೆಣ್ಣನ್ನು ಮದುವೆಯಾದುದಾಗಿ ನಂಬುತ್ತಾರೆ. ಆದರೆ ಚಂಚು ಚೆಂಚರು ದಕ್ಷಿಣ ಭಾರತದ ಮೂಲನಿವಾಸಿಗಳು ಇವರ ಭಾಷೆ ತೆಲುಗು. ಕರ್ನೂಲು, ನೆಲ್ಲೂರು, ಮಹಬೂಬ್ ನಗರಗಳಿಂದ ವಲಸೆ ಹೊರಟು ಶ್ರೀಹರಿಕೋಟ ಅನಂತರ ಚಿತ್ತೂರು, ಅನಂತಪುರ ಜಿಲ್ಲೆಗಳಿಗೆ, ತಮಿಳು ನಾಡಿನ ಉತ್ತರ ಆರ್ಕಾಟು ಜಿಲ್ಲೆಗಳಿಗೆ ಚದುರಿ ಹೋಗಿದ್ದಾರೆ. ಅನಂತಪುರ, ಚಿತ್ತೂರು ಮುಂತಾದ ಬಯಲು ಸೀಮೆ ಸೇರಿದ ಈ ಜನ ಆ ಮೂಲಕ ಕರ್ನಾಟಕದ ಕೆಲವು ಜಿಲ್ಲೆಗಳಿಗೆ ಪ್ರವೇಶ ಮಾಡಿ ಕಾಡು ಮೇಡು ಇರುವ ಕಡೆ ವಸತಿ ಸ್ಥಾನಗಳನ್ನು ನಿರ್ಮಿಸಿಕೊಂಡಿದ್ದಾರೆ. ಕರ್ನಾಟಕದ ಕೋಲಾರ, ಚಿಕ್ಕಮಗಳೂರು, ವಿಜಾಪುರ, ಧಾರವಾಡ, ರಾಯಚೂರು, ಬಳ್ಳಾರಿ, ಗುಲಬರ್ಗಾ ಜಿಲ್ಲೆಗಳಲ್ಲಿ ಹರಡಿದ್ದಾರೆ.ಒಂದು ಕಾಲಕ್ಕೆ ದಟ್ಟವಾದ ಕಾಡುಗಳಲ್ಲಿ ಬೇಟೆಯಿಂದಲೇ ಜೀವನ ಸಾಗಿಸುತ್ತಿದ್ದ ಚಂಚು ಚೆಂಚರು ಈಗಲೂ ಬೇಟೆಯನ್ನು ಬಿಟ್ಟಿಲ್ಲ. ಆಗಿನ ಕಾಲಕ್ಕೆ ಮುಖ್ಯವಾಗಿದ್ದ ಬಿಲ್ಲು ಬಾಣಗಳ ಬದಲು ಈಗ ಹಾರೆ, ಗುದ್ದಲಿ, ಬಲೆ, ಚಾಟರ್ ಬಿಲ್ಲು, ಕಿರುಗತ್ತಿಗಳನ್ನು ಇಟ್ಟುಕೊಂಡು ಆಹಾರ ಸಂಪಾದನೆ ಮಾಡಿ ಕೊಳ್ಳುತ್ತಾರೆ. ಹಿಂದೆಲ್ಲ ಕಾಡುಪ್ರಾಣಿಗಳನ್ನು

ಬೇಟೆಯಾಡುತ್ತಿದ್ದ ಈ ಜನ ಈಗ ಹಾವು ಹಿಡಿಯುವುದು, ಇಲಿ ಹಿಡಿಯುವುದು, ಮೊಲ ಹಿಡಿಯುವುದು ಕೆಲವು ಹಕ್ಕಿಗಳ ಬೇಟೆ, ಜೇನು ಸಂಗ್ರಹಣೆ, ಮುಂತಾದ ಕಸುಬುಗಳನ್ನು ಹಿಡಿದಿದ್ದಾರೆ. ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸಿ ಅದನ್ನು ಪೇಟೆಯಲ್ಲಿ ಮಾರಾಟ ಮಾಡಿ ತಮಗೆ ಬೇಕಾದ ದವಸ ಧಾನ್ಯ ಪಡೆಯುತ್ತಾರೆ.

ಚೆಂಚು ಜನಾಂಗದ ಹುಟ್ಟಿನ ಬಗ್ಗೆ ಇರುವ ಪೌರಾಣಿಕ ಹಿನ್ನೆಲೆಯನ್ನು ಕ್ಯಾನ್ಯೂಬೋಲ್ಡ್ ಸಂಗ್ರಹಿಸಿದ್ದಾರೆ. “ದ್ವಾಪರ ಯುಗದ ಕೃಷ್ಣಾವತಾರಕ್ಕೂ ಹಿಂದೆ ಚೆಂಚವಾರರು ಯರಗಲ್ಲು ಮತದ ಕುರುಬರಾಗಿ ಕುರಿ ಕಾಯುತ್ತಿದ್ದರು. ಓಬಳ ಮಾನ ಓಬಳೇಶ್ವರ ಸ್ವಾಮಿ ವಾಸವಾಗಿರುವ ಪವಿತ್ರ ಬೆಟ್ಟ ನಲ್ಲಾಮಲೈನಲ್ಲಿ ಯರಗೊಲ್ಲ ಕನ್ಯೆಯಾದ ಚಂಚಿತಾಳನ್ನು ಎತ್ತಿಕೊಂಡು ಹೋದನು. ಹೀಗೆ ಯರಗೊಲ್ಲರ ‘ಚೆಂಚರ ಓಬಳೇಶ್ವರಸ್ವಾಮಿಗೆ’ಹುಟ್ಟಿದ ಮಕ್ಕಳೇ ಮುಂದೆ ಚಂಚರಾದರು.

ಇದು ಪುರಾಣ ಮೂಲದ ಕತೆಯಾದರೆ ಜನಪದ ಮೂಲದ್ದು ಇನ್ನೊಂದು ಕತೆಯಿದೆ. ‘ಕಾಣ್ ಮಲ್ಯೊ’ ಎಂಬ ಚಂಚರ ಜನಪದ ಕತೆಯಲ್ಲಿ ಚಂಚರ ಮೂಲಪುರುಷನ ಉಲ್ಲೇಖವಿದೆ. ಕಾಣ್ ಮಲ್ಯೊ ಮತ್ತು ಸೋನಾಚಾಂದಿ ಎಂಬ ದಂಪತಿಗಳಿಗೆ ಭಗವಾನ್ ಮತ್ತು ಬಾಲಣ್ ಎಂಬ ಇಬ್ಬರು ಮಕ್ಕಳಾದರು. ಇವರು ನಿಪುಣರಾದ ಬೇಟೆಗಾರರಾಗಿ ಬೆಳೆದರು. ಒಂದು ದಿನ ಒಂದು ದೊಡ್ಡ ಉಡವನ್ನು ಬೇಟೆಯಾಡಿ ರಾಜನ ವಿಶ್ವಾಸ ಸಂಪಾದಿಸಿ, ಅವನಿಂದ ಊರಿನ ಜಟ್ಟಿ ಪೈಲ್ವಾನನ್ನು ಸೋಲಿಸುವ ಪಂದ್ಯ ಸ್ವೀಕರಿಸಿ ದೇವರ ಸಹಾಯದಿಂದ ಅವನನ್ನು ಸೋಲಿಸಿ ಅರ್ಧರಾಜ್ಯಕ್ಕೆ ಹಕ್ಕುದಾರರಾಗುತ್ತಾರೆ.ರಾಜ ‘ಕುದುರಿ ಲಗಾಮು ಹಿಡಕೊಳ್ಳಿರಿ’ (ಅಂದರೆ ಅರ್ಧರಾಜ್ಯಕ್ಕೆ ರಾಜರಾದಿರಿ ಎಂದರ್ಥ) ಎಂದು ಹೇಳಿದಾಗ ಈ ಭಗವಾನ್ ಮತ್ತು ಚಾಲಣ್ ‘ಕುವುದಿ ಹಾಸ್ಕೊಂಡು ಕುಂತ್ರಂತೆ’. ನಾವು ಇರೋದು ಮೂರು ಜನಾ ನಮಗ್ಯಾಕೆ ಅರ್ಧರಾಜ್ಯ ಅಂತ ಕುಸ್ತಿಯಾಡುವಾಗ ಬಂದ ಹಣದಿಂದ ಎರಡು ಹೋತಗಳನ್ನು ಕೊಂಡು ದೇವರ ಹೆಸರಿನಲ್ಲಿ ಬಲಿ ಕೊಟ್ಟು ಉಂಡು ಕಾಡು ಸೇರಿದರು. ರಾಜ್ಯದಾಗೆ ಇದ್ದ ಶ್ರೀಮಂತರಾಗಿ ರಾಜ್ಯವಾಳಿದರೆ ಇವರು ಅಡವಿ ಸೇರಿ ಚಂಚರಾದರು. ಭಗವಾನ್ ಮತ್ತು ಬಾಲಣ್ ಅವರಿಗೆ ಮುಂದೆ ರುಪ್ಪೋ ಟಿಲ್ಲೋ ಎನ್ನುವ ಮಕ್ಕಳಾಗಿ ಚಂಚರ ಸಂತತಿ ಮುಂದುವರಿದು ಕೊಂಡು ಬಂತು.

ಚಂಚು, ಚೆಂಚುಕುಲಂ, ಚಂಚುವಾಡ, ಅಡವಿ ಚಂಚರು, ಬೆಕ್ಕು ಚಂಚರು, ಕಾಡುಚಂಚರು, ಕೃಷ್ಣಾ ಚಂಚರು ಚಂಚು ಚೆಂಚರು ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಇವರು ಕೃಷ್ಣಾನದಿಯ ಆಸುಪಾಸಿನಲ್ಲಿ ದಟ್ಟ ಅಡವಿಗಳಿಂದ ತುಂಬಿರುವ ಶ್ರೀಶೈಲದ ಪರ್ವತ ತಪ್ಪಲಿನವರು ಎಂಬುದರಲ್ಲಿ ಸಂದೇಹವಿಲ್ಲ. ಎತ್ತರದ ಮರವನ್ನು ಸರಸರನೆ ಹತ್ತುವ ಮತ್ತು ಪ್ರಪಾತಕ್ಕೆ ಚಾಚಿಕೊಂಡಿರುವ ಪರ್ವತ

ಶಿಖರಗಳ ಕೆಳಗೆ ಕಟ್ಟಿರುವ ಜೇನನ್ನು ಕೀಳುವ ಕಾಯಕದಲ್ಲಿ ನಿಷ್ಣಾತರಾಗಿರುವುದರಿಂದ ಎತ್ತರದ ಪರ್ವತ ಪ್ರಾಂತಗಳಲ್ಲಿ ಮೊದಲಿಗೆ ವಾಸಿಸುತ್ತಿದ್ದರೆಂಬುದರಲ್ಲಿ ಅನುಮಾನವಿಲ್ಲ.

1961 ರ ಜನಗಣತಿಯ ಪ್ರಕಾರ ಚೆಂಚಕೀ ಉತ್ತರ ಆರ್ಕಾಟ್ ಜಿಲ್ಲೆಯ ಮೈಸೂರು ಜಿಲ್ಲೆಯ ಮತ್ತು ಮೈಸೂರು ಜಿಲ್ಲೆಯ ಕಾಡುಗಳಲ್ಲಿ ವಾಸ ಮಾಡುತ್ತಿರುವ 'ಇರುಳಿಗಲಿರಾಗಿದ್ದಾರೆ. ಕೋಲಾರ ಜಿಲ್ಲೆಯಲ್ಲಿರುವ 'ಯಾನಾಡಿಗಳು' ಎಂಬ ಉಪವಿಭಾಗ 1881ರ ಜನಗಣತಿಯ ಪ್ರಕಾರ ಚಂಚುಮೂಲದಿಂದ ಬಂದಿರುವಂತಹದೇ ಆಗಿದೆ.

ದಂತಕತೆಗಳ ಪ್ರಕಾರ ಚಂಚರು ಅಡವಿ ಮೂಲದವರಾಗಿದ್ದು ಬೇಟೆಯನ್ನೇ ಕಸುಬನ್ನಾಗಿ ಉಳ್ಳವರೆಂಬುದು ತಿಳಿದುಬರುತ್ತದೆ. ಇದನ್ನು ಸಮರ್ಥಿಸುವಂತಹ ರೀತಿಯಲ್ಲಿ ಚೆಂಚರ ಪ್ರತಿನಿಧಿಗಳು ಬೆಳಗಾಂ ವಿಭಾಗಾಧಿಕಾರಿಗಳಿಗೆ ಸಲ್ಲಿಸಿದ ಮನವಿಪತ್ರದಲ್ಲಿ ತಮ್ಮನ್ನು ಅಲೆಮಾರಿಗಳೆಂದೂ ಹಾಗೂ ಬೇಟೆಯಾಡಿಯೇ ಬದುಕು ಸಾಗಿಸಬೇಕಾಗಿದೆಯೆಂದೂ ಹೇಳಿಕೊಂಡಿದ್ದಾರೆ.

ಚಂಚು ಚೆಂಚರ ಮುಖ್ಯ ಲಕ್ಷಣವೆಂದರೆ ಸಮಾಜದ ಜೊತೆಸೇರದೆ ಪ್ರತ್ಯೇಕವಾಗಿ ತಮ್ಮ ಗುಂಪಿನೊಂದಿಗೆ ದೂರವಿರುವುದು.ಸುಮಾರು ನಾಲ್ಕು ಅಥವಾ ಐದುನೂರು ಅಡಿ ಎತ್ತರವಿರುವ ಪರ್ವತ ಪ್ರಾಂತಗಳಲ್ಲಿ ಅಥವಾ ಕಣಿವೆಗಳಲ್ಲಿ ವಾಸಿಸುತ್ತಾ ತಮ್ಮದೇ ಆದ ಆಚಾರ ವಿಚಾರ ಹಾಗೂ ಆಹಾರ ಪಾನೀಯಗಳೊಂದಿಗೆ ಬದುಕು ಸಾಗಿಸುತ್ತಾರೆ. ಪ್ರಾಕೃತಿಕ ವಿಕೋಪಗಳಿಂದ ಈಗ ವಾಸಿಸುವ ಜಾಗಗಳನ್ನು ಬದಲಾಯಿಸಿದರೂ ಊರುಗಳಿಂದ ಹೊರಗಡೆಯೇ ವಾಸಮಾಡುತ್ತ ತಮ್ಮ ಪ್ರತ್ಯೇಕತೆಯನ್ನು ಅನನ್ಯತೆಯನ್ನು ಉಳಿಸಿಕೊಂಡೇ ಬರುತ್ತಿದ್ದಾರೆ. ಆಯಾ ಪರಿಸರದ ಭಾಷೆಯನ್ನು ಕಲಿಯುವುದರಿಂದ ಚೆಂಚರಿಗೆ ತಮಿಳು ತೆಲುಗು, ಕನ್ನಡ ಮೂರು ಭಾಷೆಗಳ ಪರಿಚಯವಿರುವುದು ಕಂಡುಬರುತ್ತದೆ.

ಚಂಚು ಚೆಂಚರು ಮರ ಹತ್ತುವುದನ್ನು ಕಲೆಯನ್ನಾಗಿ ರೂಢಿಸಿಕೊಂಡಿದ್ದಾರೆ. ಹೆಣ್ಣು ಮಕ್ಕಳೂ ಗಂಡಸರಂತೆಯೇ ಮರ ಏರುವುದರಲ್ಲಿ ನಿಪುಣರಾಗಿರುತ್ತಾರೆ. ಎರಡು ನೂರು ಅಡಿ ಎತ್ತರವಿರುವ ಮರವನ್ನು ಹತ್ತುವ ಹೆಂಗಸರು ಈ ಜನಾಂಗದಲ್ಲಿ ಈಗಲೂ ಕಂಡುಬರುತ್ತಾರೆ. ಆದರೆ ಹೆಂಗಸರು ಗಂಡಸರಂತೆ ದೃಢಕಾಯರಾಗಿರುವುದಿಲ್ಲ. ಜಿಗುಟು ಕೂದಲನ್ನು ಕೆದರಿಕೊಂಡು ಅರೆಬೆತ್ತಲೆಯಲ್ಲಿ ಇರುತ್ತಾರೆ. ಇದಕ್ಕೆ ಅವರು ಸಮರ್ಥನೆ ಕೊಡಲು ಚಂಚಿತಾ ಮದುವೆಯಾದ ಸಂದರ್ಭದಲ್ಲಿ ಕೊಟ್ಟ ಶಾಪವನ್ನು ಬಳಸಿಕೊಳ್ಳುತ್ತಾರೆ. ಅಹೋಬಲಮ್ಮಿನ ನರಸಿಂಹ ದೇವರು (ಓಬಲೇಶುಡು) ಚಂಚಿತಾಳ ಸೌಂದರ್ಯಕ್ಕೆ ಮನಸೋತು ಅಪಹರಿಸಿಕೊಂಡು ಮದುವೆಯಾದಂತೆ ಬೇರೆ ಯಾರೂ ತಮ್ಮ ಚೆಂಚರ ಹೆಣ್ಣುಗಳಿಗೆ ಮನಸೋಲದಿರಲೆಂದು ತೇಜೋಹೀನರಾಗಿ, ಕುರೂಪಿಗಳಾಗಿ ಹುಟ್ಟಲಿ ಎಂದು ದೇವರನ್ನು ಬೇಡಿಕೊಂಡರಂತೆ.

ಚೆಂಚರ ಉಪವಿಭಾಗವಾದ ಇರುಳಿಗರಲ್ಲಿ ಇನ್ನೊಂದು ದಂತಕತೆಯಿದೆ. ಇರುಳಿಗರ ಮೂಲ ಪುರುಷನನ್ನು ಕರೆದು ಶಿವ ಅವನಿಗೆ ಅನುಕೂಲ ಮಾಡಿಕೊಡಲು ಏನೇನೋ ಸೃಷ್ಟಿಸುತ್ತಾನೆ. ಇವನು ಅವುಗಳನೆಲ್ಲ ತಿರಸ್ಕರಿಸಿ ಕೆಟ್ಟದ್ದನ್ನೇ ಆರಿಸಿಕೊಳ್ಳುತ್ತಾನೆ.ಆಗ ಸುಂದರವಾದ ಹೆಣ್ಣುಗಳನ್ನು ಸೃಷ್ಟಿಸಿ ಸಾಲಾಗಿ ನಿಲ್ಲಿಸಿ ಇವರಲ್ಲಿ ನಿನಗಿಷ್ಟವಾದವಳನ್ನು ಆರಿಸಿಕೋ ಎಂದಾಗ ಇವನು ಇಂಥ ಸುಂದರಿ ಬೇಕೆಂದು ಕೈಹಿಡಿದರೆ ಆಕೆ ಕೆನ್ನೆಗೆ ಬಾರಿಸಿದರೆ ಏನು ಗತಿ ಎಂದು ಚಿಂತಿಸಿ ಕೊನೆಯಲ್ಲಿ ನಿಂತಿದ್ದ ತರಕುತಲೆ, ಸಿಂಬಳ ಬರುಕಿ, ಹರಿದಸೀರೆ ಉಟ್ಟು ನಿಂತಿದ್ದ ಕರ್ರಗಿನ ಒಬ್ಬಳನ್ನು ಆರಿಸಿಕೊಂಡನಂತೆ. ಅವತ್ತಿನಿಂದ ಇವತ್ತಿನವರೆಗೂ ಚೆಂಚರ ಹೆಂಗಸರು ತರಕುತಲೆ, ಹರಿದ ಸ್ಯಾಲೆ, ಸಿಂಬಳಬುರುಕ ಹೆಣ್ಣು ಮಕ್ಕಳಾಗಿದ್ದಾರೆ.ಇದು ಶಿವನ ಶಾಪ ಎಂದು ಚೆಂಚರು ನಂಬಿದ್ದಾರೆ.ಈ ಶಾಪ, ದಂತಕತೆಗಳ ಸತ್ಯಾಸತ್ಯತೆ ಏನೇ ಇರಲಿ ಅಲೆಮಾರಿ ಜನಾಂಗಗಳ ಹೆಂಗಸರಿಗೆ ಬೇರೆ ಗಂಡಸರಿಂದ ಅಪಾಯ ತಪ್ಪಿದ್ದಲ್ಲ. ಆದ್ದರಿಂದ ಆಯಾ ಜನಾಂಗಗಳ ಗಂಡಸರು ಅವರ ಅಲಂಕಾರ, ಸೌಂದರ್ಯಗಳ ಬಗ್ಗೆ ಹೆಚ್ಚು ಗಮನ ಕೊಡುತ್ತಿರಲಿಲ್ಲ. ಜೊತೆಗೆ ಆರ್ಥಿಕವಾಗಿ ಅನುಕೂಲವಂತರಲ್ಲ. ಹೊಟ್ಟೆಯ ಬಗ್ಗೆ ಚಿಂತೆಯೇ ಹೆಚ್ಚಿರುವಾಗ ಅಲಂಕಾರದ ಬಗ್ಗೆ ಗಮನ ಕೊಡಲು ಪುರುಸೊತ್ತು ಎಲ್ಲಿರುತ್ತದೆ? ಈ ದೃಷ್ಟಿಯಿಂದ ಚೆಂಚರ ಹೆಣ್ಣು ಮಕ್ಕಳು ಸುಂದರವಾಗಿ ಕಾಣುವುದರ ಬಗ್ಗೆ ಹೆಚ್ಚು ತಲೆಕೆಡಿಸಿ ಕೊಳ್ಳುವುದಿಲ್ಲ.

ಪರ್ದಿ :

ಪರ್ದಿ ಜನಾಂಗವು ಮುಖ್ಯವಾಗಿ ಔರಂಗಾಬಾದ್ ಜಿಲ್ಲೆಯಲ್ಲಿ ಹಣ್ಣು ವ್ಯಾಪಾರ ಮತ್ತು ಡೊಂಬರಾಟವಾಡುತ್ತಾ ಜೀವನ ಸಾಗಿಸುವ ಒಂದು ಜನಾಂಗವಾಗಿದೆ. ಇಂತಹ ಆದಿವಾಸಿ ಜನಾಂಗವನ್ನು ನಂದರ್, ರಾಯಚೂರು, ಉಸ್ಮಾನ್‌ಬಾದ್, ಗುಲ್ಬರ್ಗಗಳಲ್ಲಿ ಹೆಚ್ಚಾಗಿ ಕಾಣಬಹುದು. ಇವರನ್ನು ಹೆಚ್ಚಾಗಿ ಹೈದರಾಬಾದ್ ನಗರದಲ್ಲಿ ಹಣ್ಣು ಮತ್ತು ಹಕ್ಕಿಗಳನ್ನು ಮಾರಾಟ ಮಾಡುವ ಉದ್ಯೋಗದಲ್ಲಿ ಕಾಣಬಹುದು. ಇವರನ್ನು ಗುಜರಾತಿನ 'ಭವಾರಿ' ಜನಾಂಗಕ್ಕೆ ಸೇರಿದವರು ಎನ್ನಲಾಗುತ್ತಿದೆ.

ಪರ್ದಿ ಜನಾಂಗವು ಬಹಳ ಸುಂದರವಾದ ಮೈಕಟ್ಟನ್ನು ಹೊಂದಿದ ಜನಾಂಗ. ಅವರು ಹೆಚ್ಚಾಗಿ ಉತ್ತರ ಭಾರತದ ಜನರನ್ನು ಹೋಲುವವರಾಗಿದ್ದಾರೆ. ಇವರು ತಮ್ಮ ತಲೆಗೂದಲನ್ನು ಜೀವನದಲ್ಲಿ ಬಾಲ್ಯದಲ್ಲಿ ಒಮ್ಮೆ ಮಾತ್ರ ತೆಗೆಯುತ್ತಾರೆ. ನಂತರ ಎಲ್ಲೂ ತಮ್ಮ ತಲೆಗೆ ಕತ್ತರಿ, ಬ್ಲೇಡಾಗಲಿ ಮುಟ್ಟಿಸಲಾರರು. ಕತ್ತಿನ ಸುತ್ತಲು ಸುಂದರವಾದ ಸರವನ್ನು ಧರಿಸುತ್ತಾರೆ. ತಲೆಗೆ ಮುಂಡಾಸು ಮತ್ತು ಬಹಳ ತೆಳುವಾದ ಬಟ್ಟೆಯನ್ನು ಧರಿಸುತ್ತಾರೆ. ಕೆಲವೊಮ್ಮೆ ಹೆಗಲಿಗೆ ಶಾಲನ್ನು ಹಾಕಿಕೊಳ್ಳುವುದನ್ನು ಕಾಣಬಹುದು. ಹೆಂಗಸರು ಲಂಗ ರವಿಕೆಯನ್ನು ಧರಿಸುತ್ತಾರೆ. ಇತ್ತೀಚೆಗೆ ಮರಾಠರ ಪ್ರಭಾವದಿಂದಾಗಿ ಹೆಂಗಸರ ಉಡುಪಿನಲ್ಲೂ ಬದಲಾವಣೆಗಳು ಆಗಿದೆ ಸಾರಿ ಮತ್ತು ಚೋಲಿಯನ್ನು ಧರಿಸುತ್ತಿದ್ದಾರೆ.

ಹೈದರಾಬಾದಿನ ಪರ್ದಿಗಳನ್ನು ಮುಖ್ಯವಾಗಿ ೨ ವಿಧಗಳಾಗಿ ವಿಂಗಡಿಸಿರುವುದು ಕಾಣಬಹುದು. ಅವುಗಳೆಂದರೆ.

೧. ಲಂಗೋಟಿ ಪರ್ದಿ ಮತ್ತು ೨. ಚಿಟೇವಾಲ ಪರ್ದಿ.

ಲಂಗೋಟಿ ಪರ್ದಿಯರನ್ನು ಪಾಲ್ ಪರ್ದಿಯೆಂದೂ ಕರೆಯಲಾಗುತ್ತದೆ. ಇವರು ಅಲೆಮಾರಿ ಜನರಾಗಿರುತ್ತಾರೆ. ಇವರು ತಮ್ಮ ದೇಹವನ್ನು ಮುಚ್ಚಲು ಕೇವಲ ಲಂಗೋಟಿಯನ್ನು ಮಾತ್ರ ಧರಿಸುತ್ತಾರೆ. ಇವರು ಸಣ್ಣ ಗುಡಿಸಲುಗಳಲ್ಲಿ ವಾಸಿಸುತ್ತಿರುತ್ತಾರೆ. ಇವರು ಹಕ್ಕಿಗಳನ್ನು ಹಿಡಿದು, ಜಿಂಕೆ, ಮೊಲ, ನವಿಲುಗಳನ್ನು ಬಳಸಿಕೊಂಡು ವಿವಿಧ ಆಟಗಳನ್ನು ನಡೆಸುತ್ತ ಜೀವನ ಸಾಗಿಸುವವರು. ಚಿಟ್ಟೇವಾಲೇ ಪರ್ದಿಗಳು ಹೆಚ್ಚಾಗಿ ಹಲ್ಲಿ ಜಾತಿಗೆ ಸೇರಿದ ಬೃಹತ್ ಪ್ರಾಣಿಗಳನ್ನು ಬೇಟೆಯಾಡಿ ಬೇಡಿಕೆ ನೀಡಿದ ರಾಜರಿಗೆ ಮಾರಾಟ ಮಾಡುತ್ತಾರೆ.

ಬಾಹ್ಯ ರಚನೆ:

ಪರ್ದಿಗಳಲ್ಲಿ ವಿವಿಧ ಗೋತ್ರ, ಕುಲಗಳನ್ನು ಕಾಣಬಹುದು. ಇವರು ಮರಾಠ ಕುಟುಂಬಗಳಿಗೆ ಹೊಂದಿಕೊಂಡವರಾಗಿದ್ದಾರೆ. ಇವರ ಕೆಲವು ಕುಟುಂಬಗಳೆಂದರೆ ಪವರ್, ಡೊಂಗ್ಲೆ, ಜಾದವ, ಚವನ, ಕರೆ ಕುಟುಂಬದೊಳಗಿನ ಸಂಬಂಧಗಳಿಂದ ವಿವಾಹವಾಗುವುದನ್ನು ನಿಷೇಧಿಸಲಾಗಿದೆ. ಮಾವನ, ಅತ್ತೆಯ ಮಗ ಮಗಳನ್ನು ಮದುವೆಯಾಗಬಹುದು. ಇಬ್ಬರು ಸಹೋದರಿಯರು ಒಬ್ಬನನ್ನು ವಿವಾಹವಾಗುವುದನ್ನು ಅನುಮತಿಸಲಾಗಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳ ವಿವರಗಳು :

- **ಶೈಕ್ಷಣಿಕ ನೆರವಿನ ಯೋಜನೆಗಳು**

೧. ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು:

ಪರಿಶಿಷ್ಟ ವರ್ಗದವರ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಶಾಲೆಗೆ ಹೋಗುವ ಅಭ್ಯಾಸ ರೂಢಿಸಲು ಈ ಯೋಜನೆ ರೂಪಿಸಲಾಗಿದೆ. ರಾಜ್ಯದಲ್ಲಿ ಇಂತಹ ೩೮ ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳಿದ್ದು, ೧೮೮೦ ಮಕ್ಕಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಮೂರರಿಂದ ಐದು ವರ್ಷ ವಯಸ್ಸಿನ ಮಕ್ಕಳು ಇಂತಹ ಕೇಂದ್ರದಲ್ಲಿ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. ಪ್ರತಿ ಕೇಂದ್ರದಲ್ಲಿ ೫೦ ಮಕ್ಕಳಿಗೆ ಪ್ರವೇಶಾವಕಾಶ ಇರುತ್ತದೆ. ಈ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳಲು ಒಬ್ಬ ಮಹಿಳಾ ಸಂಚಾಲಕಿ ಹಾಗೂ ಒಬ್ಬ ನಿರ್ವಾಹಕಿ ಇರುತ್ತಾರೆ.

ನಿರ್ವಾಹಕಿಯು ಮಕ್ಕಳನ್ನು ನೋಡಿಕೊಳ್ಳುವುದರ ಜೊತೆಗೆ ಅಕ್ಷರಾಭ್ಯಾಸ, ನೀತಿಕಥೆ, ಹಾಡು ಹಾಗೂ ಅವರ ಚಿಂತನಾಕ್ರಮ ಬೆಳೆಯಲು ಅಗತ್ಯವಾದ ಪಠ್ಯವನ್ನು ಬೋಧಿಸಬೇಕಾಗುತ್ತದೆ.

ದೊರೆಯುವ ಸೌಲಭ್ಯ:

ಈ ಕೇಂದ್ರದಲ್ಲಿ ಪ್ರಾಥಮಿಕಪೂರ್ವ ಶಿಕ್ಷಣದ ಜೊತೆಗೆ ವಾರದ ದಿನಗಳಲ್ಲಿ ಒಂದು ಮಗುವಿಗೆ ಮಧ್ಯಾಹ್ನದ ಉಪಾಹಾರ ನೀಡಲಾಗುತ್ತದೆ. ಪ್ರತಿ ಮಗುವಿಗೂ ರೂ.೫.೦೦ ಮೌಲ್ಯದ ಸೋಪು, ಮೈಗೆ ಎಣ್ಣೆ ಮುಂತಾದವುಗಳನ್ನು ನೀಡಲಾಗುತ್ತದೆ. ಅಲ್ಲದೆ ಎರಡು ಜೊತೆ ಸಮವಸ್ತ್ರ, ಆಟಿಕೆಗಳು, ಕಲಿಕೆಯ ಸಲಕರಣೆಗಳು ಹಾಗೂ ಬಣ್ಣದ ಚಿತ್ರಪಟಗಳನ್ನು ಸಹಾ ಒದಗಿಸಲಾಗುತ್ತದೆ.

೨. ಆಶ್ರಮ ಶಾಲೆಗಳು :

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆಶ್ರಮ ಶಾಲೆಗಳನ್ನು ಸ್ಥಾಪಿಸಲಾಗಿದೆ. ವಿದ್ಯಾರ್ಥಿಗಳಿಗೆ ಉಚಿತ ಊಟ, ಸಮವಸ್ತ್ರ, ಪುಸ್ತಕ, ಲೇಖನ ಸಾಮಗ್ರಿ ಇತ್ಯಾದಿ ಅನೇಕ ಸವಲತ್ತುಗಳನ್ನು ಒದಗಿಸಲಾಗುವುದು. ರಾಜ್ಯದಲ್ಲಿ ಒಟ್ಟು ೧೨೨ ಆಶ್ರಮ ಶಾಲೆಗಳಿದ್ದು ೯೭೦೦ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಗ್ರಾಮಾಂತರ ಪ್ರದೇಶದ ಬಡ ಕುಟುಂಬದ ಮಕ್ಕಳಿಗೆ ಇದರಿಂದ ಉಪಯೋಗವಾಗುತ್ತಿದೆ. ರಾಜ್ಯಾದ್ಯಂತ ೭೪ ಮೆಟ್ರಿಕ್ ಪೂರ್ವ ಬಾಲಕರ ಮತ್ತು ೩೯ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳಿದ್ದು ಇವುಗಳಲ್ಲಿ ಒಟ್ಟು ೫೪೨೦ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಅರ್ಹತೆ:

೫ನೇ ತರಗತಿಯಿಂದ ೧೦ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಾಗಿರಬೇಕು. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಯಾಗಿದ್ದು ಅಂಗೀಕೃತ ವಿದ್ಯಾಸಂಸ್ಥೆಯಲ್ಲಿ ಓದುತ್ತಿರಬೇಕು.

ದೊರೆಯುವ ಸೌಲಭ್ಯಗಳು:

ಉಚಿತ ತಿಂಡಿ, ಊಟದ ವ್ಯವಸ್ಥೆಗೆ ಪ್ರತಿ ವಿದ್ಯಾರ್ಥಿಗೆ ತಿಂಗಳೊಂದಕ್ಕೆ ರೂ.೪೦೦.೦೦ಗಳನ್ನು ಭೋಜನಾ ವೆಚ್ಚಕ್ಕಾಗಿ ನೀಡಲಾಗುತ್ತಿದೆ. ಉಚಿತ ವಸತಿ ಸೌಲಭ್ಯ, ಪುಸ್ತಕ, ಲೇಖನ ಸಾಮಾಗ್ರಿ, ಉಡುಪು ಹಾಗೂ ಇನ್ನಿತರ ಅಗತ್ಯ ಪರಿಕರಗಳನ್ನು ಉಚಿತವಾಗಿ ಒದಗಿಸಲಾಗುತ್ತದೆ.

೩. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು:

ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ಬಾಲಕ/ಬಾಲಕಿಯರ ೧೧ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ. ಪ್ರತಿ ವಿದ್ಯಾರ್ಥಿಗೆ ತಿಂಗಳೊಂದಕ್ಕೆ ರೂ.೪೫೦.೦೦ಗಳ ವೆಚ್ಚದಲ್ಲಿ ಊಟ ತಿಂಡಿ ಒದಗಿಸಲಾಗುವುದು.

ಅರ್ಹತೆ:

೧. ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಯಾಗಿರಬೇಕು

೨. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಅರ್ಹರಾಗಿರಬೇಕು.

೫. ಅನುದಾನರಹಿತ ವಿದ್ಯಾರ್ಥಿನಿಲಯಗಳಿಗೆ ಧನಸಹಾಯ:

ವಿದ್ಯಾರ್ಥಿ ನಿಲಯಗಳನ್ನು ನಡೆಸುವ ಸ್ವಯಂ ಸಂಸ್ಥೆಗಳಿಗೆ ಉತ್ತೇಜನ ನೀಡಲು ಖಾಸಗಿ ವಿದ್ಯಾರ್ಥಿನಿಲಯಗಳಿಗೂ ಧನ ಸಹಾಯ ನೀಡಲಾಗುತ್ತಿದೆ. ರಾಜ್ಯದಲ್ಲಿ ಒಟ್ಟು ೨೫ ಅನುದಾನಿತ ವಿದ್ಯಾರ್ಥಿ ನಿಲಯಗಳಿವೆ. ಸದರಿ ನಿಲಯಗಳಲ್ಲಿ ೧೨೯೬ ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ.

ದೊರೆಯುವ ಸೌಲಭ್ಯಗಳು:

೧. ಪ್ರವೇಶ ಉಚಿತ

೨. ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಸಮನಾಗಿ ತಿಂಗಳೊಂದಕ್ಕೆ ಪ್ರತಿಯೊಬ್ಬ ವಿದ್ಯಾರ್ಥಿಗೆ ೩೫೦.೦೦ರೂಗಳನ್ನು ಭೋಜನ ವೆಚ್ಚಕ್ಕಾಗಿ ನೀಡಲಾಗುತ್ತದೆ.

ವಿದ್ಯಾರ್ಥಿ ವೇತನಗಳು:

೧. ೧ರಿಂದ ೪ನೇ ತರಗತಿ ವಿದ್ಯಾರ್ಥಿ ವೇತನ:

ಕರ್ನಾಟಕ ಸರ್ಕಾರ ೧೯೯೫-೯೬ನೇ ಸಾಲಿನಿಂದ ೧ ರಿಂದ ೪ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಮಧ್ಯದಲ್ಲಿ ಶಾಲೆ ಬಿಡುವುದನ್ನು ತಡೆಗಟ್ಟಲು ಹಾಗೂ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಉತ್ತೇಜಿಸುವ ಸಲುವಾಗಿ ಪ್ರತಿ ವಿದ್ಯಾರ್ಥಿಗೆ ವಾರ್ಷಿಕ ರೂ. ೭೫.೦೦ಗಳ ವಿದ್ಯಾರ್ಥಿವೇತನ ನೀಡುವ ಯೋಜನೆ ಜಾರಿಗೊಳಿಸಿದೆ. ೧ ರಿಂದ ೪ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಎಲ್ಲಾ ಪರಿಶಿಷ್ಟ ವರ್ಗದ ಬಾಲಕ /ಬಾಲಕಿಯರು ಈ ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ. ಯಾವುದೇ ಆದಾಯ ಮಿತಿ ಇರುವುದಿಲ್ಲ.

೨. ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ:

ಸರ್ಕಾರಿ ಅಥವಾ ಅನುದಾನಿತ ವಿದ್ಯಾರ್ಥಿ ನಿಲಯಗಳಲ್ಲಿ ಸೌಲಭ್ಯ ಪಡೆಯದ ಪರಿಶಿಷ್ಟ ವರ್ಗಕ್ಕೆ ಸೇರಿದ ಮೆಟ್ರಿಕ್‌ಪೂರ್ವ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿವೇತನ ನೀಡಲಾಗುತ್ತದೆ.

ಅರ್ಹತೆ:

೫ನೇ ತರಗತಿಯಿಂದ ೧೦ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಈ ವಿದ್ಯಾರ್ಥಿ ವೇತನ ಪಡೆಯಲು ಅರ್ಹರಾಗಿರುತ್ತಾರೆ.

ವಿದ್ಯಾರ್ಥಿ ವೇತನಕ್ಕೆ ಅರ್ಜಿಗಳನ್ನು ಆಹ್ವಾನಿಸಿದಾಗ ಶಾಲಾ ಮುಖ್ಯೋಪಾಧ್ಯಾಯರ ಮೂಲಕ ಸಂಬಂಧಿಸಿದ ತಾಲೂಕು ಸಮಾಜ ಕಲ್ಯಾಣಾಧಿಕಾರಿಗಳಿಗೆ ಕಳುಹಿಸಿ ಮಂಜೂರಾತಿ ಪಡೆಯಬೇಕು.

ವಿದ್ಯಾರ್ಥಿ ವೇತನದ ಮೊತ್ತ:

೧. ೫ರಿಂದ ೭ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. ೭೫.೦೦ರೂ ಗಳು.

೨. ೮ರಿಂದ ೧೦ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಾರ್ಷಿಕ ೧೦೦.೦೦ ರೂ ಗಳು

೩. ೮ರಿಂದ ೧೦ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ವಾರ್ಷಿಕ ೧೦೦.೦೦ರೂ ಗಳು.

೪. ಪ್ರತಿಭಾ ವಿದ್ಯಾರ್ಥಿ ವೇತನ:

ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆಯುವಂತೆ ಪ್ರೋತ್ಸಾಹಿಸಲು ಹಾಗೂ ಅವರಲ್ಲಿ ಆರೋಗ್ಯಕರ ಸ್ಪರ್ಧಾ ಮನೋಭಾವ ತುಂಬುವ ಉದ್ದೇಶದಿಂದ ಪ್ರತಿಭಾ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.

ಅರ್ಹತೆ:

ವಿದ್ಯಾರ್ಥಿನಿಲಯದಲ್ಲಿ ವಾಸಿಸುವ, ವಾಸಿಸದ ಎಲ್ಲ ವಿದ್ಯಾರ್ಥಿಗಳು ಇದಕ್ಕೆ ಅರ್ಹರಾಗಿರುತ್ತಾರೆ. ವಾರ್ಷಿಕ ಪರೀಕ್ಷೆಗಳಲ್ಲಿ ಶೇಕಡಾ ೬೦ಕ್ಕಿಂತ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳು ಪ್ರತಿಭಾ ವಿದ್ಯಾರ್ಥಿ ವೇತನ ಪಡೆಯಲು ಅರ್ಹರಾಗಿರುತ್ತಾರೆ.

ವಿದ್ಯಾರ್ಥಿ ವೇತನದ ಮೊತ್ತ:

೧. ೫ರಿಂದ ೭ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. ೭೫.೦೦ ಗಳು.

೨. ೮ ರಿಂದ ೧೦ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ರೂ .೧೦೦.೦೦ ಗಳು.

೬. ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ:

ಭಾರತ ಸರ್ಕಾರದ ನಿಬಂಧನೆಗಳ ಮೇರೆಗೆ ಕುಟುಂಬದ ವಾರ್ಷಿಕ ವರಮಾನ ೧,೦೦,೦೦೦/- ರೂ.ಗಳಿಗೆ ಮೀರದ ಎಲ್ಲಾ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಪಡೆಯಲು ಅರ್ಹರಾಗಿರುತ್ತಾರೆ. ವಿದ್ಯಾರ್ಥಿ ವೇತನದ ಮೊತ್ತ ಬೇರೆ ಬೇರೆ ಕೋರ್ಸು ಬೇರೆ ಬೇರೆಯಾಗಿದ್ದಲ್ಲಿ ಕೋರ್ಸುವಾರು ವಿದ್ಯಾರ್ಥಿವೇತನದ ಮೊತ್ತದ ವಿವರ ಈ ಕೆಳಕಂಡಂತಿವೆ:

ವಿದ್ಯಾರ್ಥಿವೇತನದ ದರಗಳು:

ಗುಂಪು	ಕೋರ್ಸ್	ವಿದ್ಯಾರ್ಥಿ ನಿಲಯ ವಾಸಿಗಳಲ್ಲದವರಿಗೆ ಮಾಹೆಯನ ರೂ.ಗಳು	ವಿದ್ಯಾರ್ಥಿ ನಿಲಯ ವಾಸಿಗಳಿಗೆ ಮಾಹೆಯಾನ ರೂ.ಗಳು
1	Degree and Post graduate level Courses (including M.Phil, Ph.d and Doctoral research) in Medicines (Allopathi, Indian and other recognized system of medicines) Engineering, Technology, Agriculture, veterinary and Allied Sciences, Management, Business, Finance, Business Administration and Computer Application / Science, Commercial Pilot licence (including Helicopter Pilot & Multi Engine Rating) course	330.00	740.00
2	Other Professional and technical graduate and post graduate (including M.Phil, Ph.D. and Post Doctoral research) level courses not covered in Group I. CA / CWA/ CS etc., courses, All Post	330.00	510.00

	Graduate, Graduate level Diploma Courses, all certificate level courses		
3	All other courses leading to a graduate or above degree (not covered in group –I & II)	185.00	355.00
4	All post matriculation level courses before taking up graduation like classes XI and XII in 10+2 system and intermediate examination etc., not covered in Group II orIII ITI courses, other vocational courses (if minimum required qualification to pursue the course is at least matriculation).	140.00	235.00

ಮಂಜೂರಾತಿ ವಿಧಾನ:

ಈ ವಿದ್ಯಾರ್ಥಿ ವೇತನಕ್ಕೆ ಅರ್ಜಿಗಳನ್ನು ಎಲ್ಲಾ ಕಾಲೇಜುಗಳಲ್ಲೂ ನೀಡಲಾಗುತ್ತಿದೆ. ಇದನ್ನು ಭರ್ತಿ ಮಾಡಿ, ಕಾಲೇಜು ಪ್ರಾಂಶುಪಾಲರ ಮೂಲಕ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಕಳುಹಿಸಬೇಕು. ವಿದ್ಯಾರ್ಥಿ ವೇತನ ಮಂಜೂರಾದ ನಂತರ ಮಂಜೂರಾತಿ ಪಟ್ಟಿಯನ್ನು ಚೆಕ್ ಸಮೇತ ಸಂಬಂಧಪಟ್ಟ ಕಾಲೇಜುಗಳಿಗೆ ಕಳುಹಿಸಿಕೊಡಲಾಗುತ್ತದೆ.

೭. ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ:

ಭಾರತ ಸರ್ಕಾರದ ವಿದ್ಯಾರ್ಥಿ ವೇತನಕ್ಕೆ ಅನರ್ಹರಾದ ಮತ್ತು ಪರಿಶಿಷ್ಟ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಂದುವರೆಸಲು ಅನುಕೂಲವಾಗುವಂತೆ ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವೇತನ ಮಂಜೂರು ಮಾಡಲಾಗುತ್ತದೆ.

ಅರ್ಹರು:

೧. ವೈದ್ಯಕೀಯ ಹಾಗೂ ತಾಂತ್ರಿಕ ಪದವಿಗಳಲ್ಲಿ ಎರಡು ಬಾರಿ ಅನುತ್ತೀರ್ಣರಾದವರೂ ಸಹ ಇದಕ್ಕೆ ಅರ್ಹರಾಗಿರುತ್ತಾರೆ.

೨. ಇತರ ಸಾಮಾನ್ಯ ಪದವಿಗಳಲ್ಲಿ ಒಂದು ಬಾರಿ ಅನುತ್ತೀರ್ಣರಾದವರೂ ಇದಕ್ಕೆ ಅರ್ಹರು.

೩. ಒಂದೇ ಕುಟುಂಬದ ಇಬ್ಬರು ಮಕ್ಕಳು ವ್ಯಾಸಂಗ ಮಾಡುತ್ತಿದ್ದರೂ ಈ ವಿದ್ಯಾರ್ಥಿ ವೇತನ ಪಡೆಯಲು ಅರ್ಹರು.

ವಿದ್ಯಾರ್ಥಿ ವೇತನದ ದರಗಳು:

೧. ವೈದ್ಯಕೀಯ ಹಾಗೂ ತಾಂತ್ರಿಕ ತರಗತಿಗಳ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.೭೫.೦೦ರಂತೆ ೧೦ ತಿಂಗಳಿಗೆ ರೂ. ೭೫೦.೦೦

೨. ಸ್ನಾತಕೋತ್ತರ ತರಗತಿಗಳಲ್ಲಿ ವ್ಯಾಸಂಗ ಮಾಡುವವರಿಗೆ ತಿಂಗಳಿಗೆ ರೂ.೫೦.೦೦ ರಂತೆ ೧೦ ತಿಂಗಳಿಗೆ ೫೦೦.೦೦ ರೂಗಳು.

೩. ಇತರ ಸಾಮಾನ್ಯ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುವವರಿಗೆ ತಿಂಗಳಿಗೆ ರೂ.೪೦ ರಂತೆ ೧೦ ತಿಂಗಳಿಗೆ ರೂ. ೪೦೦.೦೦ ಗಳ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.

ಮಂಜೂರಾತಿ ವಿಧಾನ:

ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ತಾವು ವ್ಯಾಸಂಗ ಮಾಡುತ್ತಿರುವ ಕಾಲೇಜುಗಳಲ್ಲಿ ಅರ್ಜಿಯನ್ನು ಪಡೆದು ಭರ್ತಿ ಮಾಡಿ ಕಾಲೇಜು ಪ್ರಾಂಶುಪಾಲರ ಮೂಲಕ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು / ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಕಳುಹಿಸಬೇಕು. ಅದನ್ನು ಪರಿಶೀಲಿಸಿ ಅರ್ಹ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿ ವೇತನ ಮಂಜೂರು ಮಾಡಿ ಅದರ ಪಟ್ಟಿ ಹಾಗೂ ಚೆಕ್‌ಗಳನ್ನು ಸಂಬಂಧಪಟ್ಟ ಕಾಲೇಜುಗಳಿಗೆ ಕಳುಹಿಸಲಾಗುತ್ತದೆ.

ನಗದು ಬಹುಮಾನ:

ಪರಿಶಿಷ್ಟವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರೆ ಅಂತಹ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಲಾಗುತ್ತದೆ.

ಬಹುಮಾನದ ವಿವರ:

೧.	ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ	ರೂ.೫೦೦.೦೦
೨	ದ್ವಿತೀಯ ಪಿ.ಯು.ಸಿ.ವಿದ್ಯಾರ್ಥಿಗಳಿಗೆ	ರೂ.೭೫೦.೦೦
೩	ಪದವಿ ತರಗತಿ ವಿದ್ಯಾರ್ಥಿಗಳಿಗೆ	ರೂ.೧೦೦೦.೦೦
೪	ಸ್ನಾತಕೋತ್ತರ ಪದವಿ (ಎಂ.ಎ., ಎಂ.ಎಸ್ಸಿ, ಎಂ.ಕಾಂ)	ರೂ.೧೨೫೦.೦೦
೫	ತಾಂತ್ರಿಕ, ವೈದ್ಯಕೀಯ, ಕೃಷಿ ಪಶು ವೈದ್ಯ ಪದವಿಗಳು	ರೂ.೧೫೦೦.೦೦

ಮಂಜೂರಾತಿ ವಿಧಾನ:

೧. ಈ ನಗದು ಬಹಮಾನಕ್ಕಾಗಿ ಅರ್ಜಿ ಕರೆಯಲಾಗುತ್ತದೆ.

೨. ಸಂಸ್ಥೆಯ ಮುಖ್ಯಸ್ಥರ ಮೂಲಕ ಭರ್ತಿ ಮಾಡಿದ ಅರ್ಜಿಗಳನ್ನು ಅಂಕಪಟ್ಟಿಯ ಜೆರಾಕ್ಸ್ ಪ್ರತಿಗಳೊಂದಿಗೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಕಳುಹಿಸಬೇಕು. ಇದರೊಂದಿಗೆ ಜಾತಿ ಪ್ರಮಾಣ ಪತ್ರ ತಪ್ಪದೇ ಲಗತ್ತಿಸಬೇಕು.

೩. ಜಿಲ್ಲಾ ಸಮಾಜ ಕಲ್ಯಾಣಧಿಕಾರಿಗಳು ಅರ್ಜಿ ಪರಿಶೀಲಿಸಿ ಮಂಜೂರಾತಿ ನೀಡಿ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಬಹುಮಾನದ ಹಣದ ಚೆಕ್‌ನ್ನು ಕಳುಹಿಸುವರು.

೧೦. ರ್‍ಯಾಂಕ್ ವಿದ್ಯಾರ್ಥಿಗಳಿಗೆ ನಗದು ಬಹುಮಾನ:

ಎಸ್.ಎಸ್.ಎಲ್.ಸಿ, ಪಿ.ಯು.ಸಿ ಪದವಿ ಮತ್ತು ಸಾರ್ವತ್ರಿಕ ಪರೀಕ್ಷೆಗಳಲ್ಲಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಅತ್ಯುತ್ತಮ ಅಂಕ ಪಡೆದು ಉತ್ತೀರ್ಣರಾಗುವಂತೆ ಪ್ರೋತ್ಸಾಹಿಸಲು ಮೇಲ್ಕಂಡ ಪರೀಕ್ಷೆಗಳಲ್ಲಿ ೧ ರಿಂದ ೧೦ ರ್‍ಯಾಂಕ್ ಪಡೆದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ೧ ರಿಂದ ೩ನೇ ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳಿಗೆ ರೂ.೫೦೦೦.೦೦ಗಳ ಬಹುಮಾನ ನೀಡಲಾಗುತ್ತದೆ.

ಅರ್ಹತೆ:

೧. ಅರ್ಜಿ ಸಲ್ಲಿಸುವ ವಿದ್ಯಾರ್ಥಿಯು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು.

೨. ಎಸ್.ಎಸ್.ಎಲ್.ಸಿ.ಯಿಂದ ಪದವಿವರೆಗಿನ ಯಾವುದೇ ಪರೀಕ್ಷೆಯಲ್ಲಿ ೧ ರಿಂದ ೧೦ನೇ ರ್‍ಯಾಂಕ್ ಪಡೆದಿರಬೇಕು.

೩. ಸ್ನಾತಕೋತ್ತರ ಪದವಿಯಾದರೆ ೧ ರಿಂದ ೩ನೇ ರ್‍ಯಾಂಕ್ ಪಡೆದಿರಬೇಕು.

ಮಂಜೂರಾತಿ ವಿಧಾನ:

ಪರಿಶಿಷ್ಟ ಪಂಗಡದ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳು ಅರ್ಜಿಯನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಬೇಕು. ಅರ್ಜಿಯೊಂದಿಗೆ ಅಂಕಪಟ್ಟಿಯ ನಕಲು, ವಿದ್ಯಾಸಂಸ್ಥೆಯ ಮುಖ್ಯಸ್ಥರು ನೀಡಿದ ದೃಢೀಕರಣ ಪತ್ರ. ಜಾತಿ ಪ್ರಮಾಣ ಪತ್ರಗಳನ್ನು ಲಗತ್ತಿಸಬೇಕು. ನೀಡಿರುವ ಮಾಹಿತಿಗಳನ್ನು ಪರಿಶೀಲಿಸಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಮಂಜೂರಾತಿ ನೀಡಿದ ನಂತರ ಜಿಲ್ಲಾ ಮಟ್ಟದಲ್ಲಿ ಏರ್ಪಡಿಸುವ ಸಾರ್ವಜನಿಕ ಸಮಾರಂಭದಲ್ಲಿ ಬಹುಮಾನದ ಚೆಕ್ಕನ್ನು ನೀಡಲಾಗುವುದು.

೧೧. ಎಂ.ಫಿಲ್. ಮತ್ತು ಪಿಹೆಚ್. ಡಿ ವಿದ್ಯಾರ್ಥಿಗಳಿಗೆ ಫೆಲೋಶಿಪ್ :

ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾನಿಲಯವೂ ಸೇರಿದಂತೆ ಒಟ್ಟು ಹನ್ನೆರಡು ವಿಶ್ವವಿದ್ಯಾನಿಲಯಗಳಿದ್ದು, ಈ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ವಿಷಯಗಳಲ್ಲಿ ಸಂಶೋಧನೆಗೆ ತೊಡಗಿರುವ ಪರಿಶಿಷ್ಟವರ್ಗದ ವಿದ್ಯಾರ್ಥಿಗಳಿಗೆ ಸಂಶೋಧನೆ ಮಾಹಿತಿ ಸಂಗ್ರಹಣೆ ಮುಂತಾದವುಗಳಿಗೆ ಹೆಚ್ಚಿನ ವೆಚ್ಚ ಭರಿಸಬೇಕಾಗುತ್ತದೆ. ಆದ್ದರಿಂದ ಎಂ.ಫಿಲ್ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. ೮,೦೦೦/- ಮತ್ತು ಪಿಹೆಚ್.ಡಿ. ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ.೧೦,೦೦೦/- ಗಳನ್ನು ನೀಡಲಾಗುತ್ತದೆ.

೧೨. ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆಯುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಧನ ಸಹಾಯ:

ಅರ್ಹತಾ ಷರತ್ತುಗಳು:

೧. ಈ ಯೋಜನೆಯಲ್ಲಿ ಪ್ರಯೋಜನ ಪಡೆಯಲು ವಿದ್ಯಾರ್ಥಿಯು ಕರ್ನಾಟಕ ರಾಜ್ಯದ ಮೂಲ ನಿವಾಸಿಯಾಗಿದ್ದು ಪರಿಶಿಷ್ಟ ವರ್ಗಕ್ಕೆ ಸೇರಿದವನಾಗಿರಬೇಕು.

೨. ರಾಜ್ಯದ ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದ ಯಾವುದೇ ವಿಭಾಗದಲ್ಲಿ ಪದವಿ, ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಶೇಕಡಾ ೬೦ ಅಂಕ ಗಳಿಸಿರಬೇಕು. ವಿದೇಶದ ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗಕ್ಕಾಗಿ ಅಭ್ಯರ್ಥಿಯು ಆಯ್ಕೆಯಾಗಿರಬೇಕು.

೩. ನಿಯೋಜನೆಗೆ ಆಯ್ಕೆಯಾದ ವಿದ್ಯಾರ್ಥಿಯು ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣವನ್ನು ಪೂರ್ಣಗೊಳಿಸಲು ಬದ್ಧನಾಗಿರಬೇಕು. ಮಧ್ಯದಲ್ಲಿ ಶಿಕ್ಷಣವನ್ನು ತೊರೆದ ಪಕ್ಷದಲ್ಲಿ ಸರ್ಕಾರದಿಂದ ಮಾಡಿರುವ ವೆಚ್ಚವನ್ನು ಭರಿಸಿಕೊಡಬೇಕು. ವ್ಯಾಸಂಗದಲ್ಲಿ ಅನುತ್ತೀರ್ಣನಾದ ಪಕ್ಷದಲ್ಲಿ ಸ್ವಂತ ಖರ್ಚಿನಲ್ಲಿ ವ್ಯಾಸಂಗವನ್ನು ಪೂರ್ಣಗೊಳಿಸಬೇಕು.

೪. ಆಯ್ಕೆಯಾದ ಅಭ್ಯರ್ಥಿಯ ಕುಟುಂಬದ ಯಾವುದೇ ಸದಸ್ಯರು ವಿದೇಶದಲ್ಲಿ ನೆಲೆಸಿರಬಾರದು.

೫. ವಿದ್ಯಾರ್ಥಿಗೆ ಸರ್ಕಾರ ನೀಡುವ ವೆಚ್ಚಕ್ಕಿಂತ ಹೆಚ್ಚುವರಿ ತಗಲುವ ವೆಚ್ಚವನ್ನು ವಿದ್ಯಾರ್ಥಿಯು ಸ್ವಂತ ಮೂಲದಿಂದ ಭರಿಸಬೇಕು.

೬. ಆಯ್ಕೆಯಾಗಿರುವ ಅಭ್ಯರ್ಥಿಯ ವಯಸ್ಸು ತರಬೇತಿಯ ಪ್ರಾರಂಭದಲ್ಲಿ ೩೦ ವರ್ಷಗಳಿಗಿಂತ ಮೀರಬಾರದು.

೧೩. ಪರಿಶಿಷ್ಟ ವರ್ಗದ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ಪೈಲಟ್ ತರಬೇತಿ:

ಇತ್ತೀಚಿನ ದಿನಗಳಲ್ಲಿ ಭಾರತ ಸರ್ಕಾರವು ಇಂಡಿಯನ್ ಏರ್‌ಲೈನ್ಸ್ ಮತ್ತು ಏರ್‌ಇಂಡಿಯಾಗಳಲ್ಲಿ ಖಾಲಿ ಇರುವ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಕಾಯ್ದಿರಿಸಿದ ಪೈಲಟ್ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸುತ್ತಿರುತ್ತಾರೆ. ಆದರೆ ಪೈಲಟ್ ತರಬೇತಿ ಪಡೆಯುವುದು ಬಡ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಕಷ್ಟ ಸಾಧ್ಯವಾಗಿರುವುದರಿಂದ ಪರಿಶಿಷ್ಟ ವರ್ಗದ ಕಲ್ಯಾಣ ಇಲಾಖೆಯ ವತಿಯಿಂದ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ತರಬೇತಿ ಅವಧಿ ೧೨ ರಿಂದ ೧೮ ತಿಂಗಳು

ವಯೋಮಿತಿ ೧೮ ರಿಂದ ೨೨ ವರ್ಷ

ವಿದ್ಯಾರ್ಹತೆ ೧೦+೨/ಪಿಯುಸಿ/ಜಿಸಿಇ–ಎ ಲೆವೆಲ್‌ಗಳಲ್ಲಿ ಭೌತಶಾಸ್ತ್ರ ಮತ್ತು ಗಣಿತ ವಿಷಯಗಳನ್ನು ತೆಗೆದುಕೊಂಡು ಉತ್ತೀರ್ಣರಾದ ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ.

ಪ್ರತಿ ಅಭ್ಯರ್ಥಿಗೆ ತರಬೇತಿ ವೆಚ್ಚ ಬಾಬ್ತು ರೂ.೧೨.೦೦ ಲಕ್ಷಗಳಾಗಿದ್ದು ತರಬೇತಿ ಪಡೆದ ಅಭ್ಯರ್ಥಿಗಳು ಉದ್ಯೋಗ ದೊರೆತ ನಂತರ, ತಮ್ಮ ಒಟ್ಟು ಮಾಸಿಕ ವೇತನದಲ್ಲಿ ಶೇ.೫೦ರಷ್ಟು ಮೊತ್ತವನ್ನು ಎರಡು ವರ್ಷಗಳವರೆಗೆ ಸರ್ಕಾರಕ್ಕೆ ಪಾವತಿಸಬೇಕಾಗಿರುತ್ತದೆ.

೧೪. ವೃತ್ತಿ ತರಬೇತಿ ಕಾರ್ಯಕ್ರಮ:

ಗಿರಿಜನ ಉಪಯೋಜನೆಯಡಿ ಕ್ರೋಢೀಕರಿಸಿದ ಅನುದಾನದಲ್ಲಿ ಪರಿಶಿಷ್ಟ ವರ್ಗದ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ವಿವಿಧ ಟ್ರೇಡ್‌ಗಳಲ್ಲಿ ತರಬೇತಿ ನೀಡಲಾಗುವುದು. ತರಬೇತಿ ಕೋರ್ಸ್‌ಗಳ ವಿವರ ಈ ಕೆಳಕಂಡಂತಿದೆ:

೧. ಎಲ್. ಎಂ. ವಿ /ಹೆಚ್. ಎಂ. ವಿ. ಡ್ರೈವಿಂಗ್

೨. ಆಟೋಮೊಬೈಲ್ ಸರ್ವಿಸಿಂಗ್

೩. ವೆಲ್ಡಿಂಗ್ / ಫ್ಯಾಬ್ರಿಕೇಷನ್

೪. ಎಲೆಕ್ಟ್ರಿಷಿಯನ್

೫. ಫಿಟ್ಟರ್

೬. ರೇಡಿಯೋ / ಟಿವಿ ರಿಪೇರಿ.

೭. ಕಾರ್ಪೆಂಟರಿ

೮. ಕಟ್ಟಿಂಗ್ / ಟೈಲರಿಂಗ್

೧೫. ಪುಸ್ತಕ ಭಂಡಾರ:

ವೈದ್ಯಕೀಯ, ತಾಂತ್ರಿಕ ಮತ್ತು ವೃತ್ತಿಪರ ವಿಷಯಗಳು, ಕೃಷಿ ವಿಜ್ಞಾನ, ಪಶು ವಿಜ್ಞಾನ ಕಾಲೇಜುಗಳಲ್ಲಿ ಅಭ್ಯಸಿಸುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ನಿಗದಿಪಡಿಸಿರುವ ಪಠ್ಯ ಪುಸ್ತಕ ಮತ್ತು ಇತರ ಉಪಯುಕ್ತ ಪುಸ್ತಕಗಳನ್ನು ಕೇಂದ್ರ ಪುರಸ್ಕೃತ ಯೋಜನೆಯಡಿ ಬುಕ್ ಬ್ಯಾಂಕ್‌ಗಳನ್ನು ಆಯಾ ಕಾಲೇಜುಗಳಲ್ಲಿ ಸ್ಥಾಪಿಸಲಾಗುವುದು.

೧೬. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ:

ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರ ಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಗಿರುವುದರಿಂದ ಇನ್ನು ಮುಂದೆ ಈ ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸ ಮುಂದುವರೆಸುವಂತೆ ಉತ್ತೇಜಿಸಲು ಹೆಚ್ಚುವರಿಯಾಗಿ ಪ್ರತಿ ವಿದ್ಯಾರ್ಥಿನಿಗೆ ರೂ. ೫೦೦.೦೦ ಗಳ ವಾರ್ಷಿಕ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.

೧೭. ಅಧ್ಯಯನ ಪ್ರವಾಸಕ್ಕೆ ನೆರವು:

ತಾಂತ್ರಿಕ ಮತ್ತು ಇತರ ವೃತ್ತಿಪರ ವಿಷಯಗಳಲ್ಲಿ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸ ಕಡ್ಡಾಯವಾಗಿದ್ದರೆ ಅಂತಹ ವಿದ್ಯಾರ್ಥಿಗೆ ಪ್ರವಾಸ ಕೈಗೊಳ್ಳುವುದು ಆರ್ಥಿಕವಾಗಿ ಕಷ್ಟವಾಗಬಹುದು. ಆದ್ದರಿಂದ ಈ ಯೋಜನೆಯಲ್ಲಿ ಪ್ರತಿ ವಿದ್ಯಾರ್ಥಿಗೆ ಅಧ್ಯಯನ ಪ್ರವಾಸ ವೆಚ್ಚವಾಗಿ ರೂ.೧೦೦೦.೦೦ಗಳನ್ನು ನೀಡಲಾಗುವುದು. ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ತಮ್ಮ ಅಧ್ಯಯನ ಪ್ರವಾಸದ ವಿವರಗಳನ್ನು ವಿದ್ಯಾಸಂಸ್ಥೆಯ ಮುಖ್ಯಸ್ಥರ ಮೂಲಕ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಮಂಜೂರಾತಿಗಾಗಿ ಕಳುಹಿಸಬೇಕು. ಪ್ರವಾಸ ನಂತರ ಪ್ರವಾಸ ಕೈಗೊಂಡ ವಿದ್ಯಾರ್ಥಿಗಳು ಈ ಬಗ್ಗೆ ವಿದ್ಯಾಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಿಸಿದ ವೆಚ್ಚ ಪಟ್ಟಿಯನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ಕಳುಹಿಸಬೇಕು.

೧೮. ತರಬೇತಿ:

ಪರಿಶಿಷ್ಟ ವರ್ಗಕ್ಕೆ ಸೇರಿದ ನಿರುದ್ಯೋಗಿ ಯುವ ಜನರಿಗೆ ಉದ್ಯೋಗ, ಸ್ವಯಂ ಉದ್ಯೋಗ ಕೈಗೊಳ್ಳಲು ನೆರವಾಗುವಂತೆ ವಿವಿಧ ವಿಭಾಗಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ.

ನವಚೇತನ (ವೃತ್ತಿ ತರಬೇತಿ) ಕಾರ್ಯಕ್ರಮ:

ಪರಿಶಿಷ್ಟ ಪಂಗಡದ ನಿರುದ್ಯೋಗಿ ಅಭ್ಯರ್ಥಿಗಳಿಗೆ ೪೧ ವಿವಿಧ ವೃತ್ತಿ ಪರ ಟ್ರೇಡ್‌ಗಳಲ್ಲಿ ತರಬೇತಿಯನ್ನು ನವಚೇತನ ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ. ವಿವರಗಳು ಈ ಕೆಳಕಂಡಂತಿದೆ.

೧. ಮೋಟಾರ್ ವೈಂಡಿಂಗ್ ಅಂಡ್ ಹೋಮ್ ಅಪ್ಲೈಯನ್ಸ್‌ಸ್
೨. ರೇಡಿಯೋ ಅಂಡ್ ಟಿ.ವಿ.ಸರ್ವಿಸಿಂಗ್ ಅಂಡ್ ರಿಪೇರ್
೩. ಎಲೆಕ್ಟ್ರಿಕಲ್ ಹೌಸ್ ವೈರಿಂಗ್
೪. ರೆಫ್ರಿಜರೇಟರ್ ಅಂಡ್ ಏರ್‌ಕಂಡೀಷನ್
೫. ಸ್ಕ್ರೀನ್ ಪ್ರಿಂಟಿಂಗ್
೬. ವೆಲ್ಡಿಂಗ್ ಟ್ರೈನಿಂಗ್
೭. ಫಿಟ್ಟರ್ ಟ್ರೈನಿಂಗ್
೮. ಟರ್ನರ್
೯. ಕಾರ್ಪೆಂಟರಿ
೧೦. ಶಿಲ್ಪಕಲಾ ಟ್ರೈನಿಂಗ್
೧೧. ಮ್ಯಾನುಫ್ಯಾಕ್ಚರಿಂಗ್ ಆಫ್ ಕೇನ್ ಪ್ರಾಡಕ್ಟ್ಸ
೧೨. ಕಾಯರ್ ಪ್ರಾಡಕ್ಟ್ಸ
೧೩. ಹ್ಯಾಂಡ್‌ಲೂಮ್ ಟ್ರೈನಿಂಗ್
೧೪. ಪವರ್‌ಲೂಮ್ ಟ್ರೈನಿಂಗ್
೧೫. ಸಿಲ್ಕ್‌ರೀಲಿಂಗ್ ಟ್ರೈನಿಂಗ್
೧೬. ಹ್ಯಾಂಡ್ ವರ್ಕ್ ಅಂಡ್ ಎಂಬ್ರಾಯಿಡರಿ ಟ್ರೈನಿಂಗ್
೧೭. ಬ್ಯೂಟಿಷಿಯನ್ ಟ್ರೈನಿಂಗ್
೧೮. ಫ್ಯಾಷನ್ ಡಿಸೈನಿಂಗ್ ಟ್ರೈನಿಂಗ್
೧೯. ಟ್ರೈನಿಂಗ್ ಫಾರ್ ಮಶ್‌ರೂಮ್ ಕಲ್ಟಿವೇಶನ್
೨೦. ಟ್ರೈನಿಂಗ್ ಇನ್ ಹೋಂ ಮೇಡ್ ಪ್ರಾಡಕ್ಟ್ಸ
೨೧. ಪ್ಲಂಬಿಂಗ್ ಟ್ರೈನಿಂಗ್
೨೨. ಟ್ರೈನಿಂಗ್ ಫಾರ್ ಬ್ಲಾಂಕೆಟ್ ವೀವಿಂಗ್
೨೩. ಖೈರಿ ಟ್ರೈನಿಂಗ್
೨೪. ಡ್ರೈವಿಂಗ್ ಟ್ರೈನಿಂಗ್
೨೫. ಮ್ಯಾನುಫಾಕ್ಚರಿಂಗ್ ಆಫ್ ಬೇಕರಿ ಪ್ರಾಡಕ್ಟ್ಸ
೨೬. ಬಿದ್ರಿ ವರ್ಕ್ಸ್
೨೭. ಮ್ಯಾಸನರಿ ಅಂಡ್ ಪೇಂಟಿಂಗ್
೨೮. ಆಟೋಮೊಬೈಲ್ ಸರ್ವಿಸಿಂಗ್

೨೯. ಟೈಲರಿಂಗ್

೩೦. ಕಂಪ್ಯೂಟರ್ ರಿಲೇಟೆಡ್ ಟ್ರೈನಿಂಗ್

೩೧. ಇಂಟೀರಿಯರ್ ಡೆಕೊರೇಟರ್ ಅಸಿಸ್ಟಿಂಗ್

೩೨. ಡೀಸೆಲ್ ಇಂಜಿನ್ ಅಂಡ್ ಟ್ರಾಕ್ಟರ್ ರಿಪೇರ್ಸ್

೩೩. ಪ್ಯಾಕೇಜಿಂಗ್

೩೪. ಅಸೆಂಬಲಿಂಗ್ ಎಲೆಕ್ಟ್ರಿಕಲ್ಸ್

೩೫. ಮ್ಯಾನುಫ್ಯಾಕ್ಚರ್ ಆಫ್ ಲೆದರ್ ಗೂಡ್ಸ್

೩೬. ಸರ್ವಿಸಿಂಗ್ ಎಲೆಕ್ಟ್ರಾನಿಕ್ಸ್ ವಾಚಸ್

೩೭. ಟೈರ್ ರಿಟ್ರೇಡಿಂಗ್

೩೮. ಅಲ್ಯುಮಿನಿಯಂ ಫ್ಯಾಬ್ರಿಕೇಷನ್

೩೯. ಲ್ಯಾಂಡ್ ಸ್ಕೇಪಿಂಗ್

೪೦. ಫೋಟೋಗ್ರಾಫಿ ಅಂಡ್ ವೀಡಿಯೋಗ್ರಾಫಿ

೪೧. ಹೋಮ್ ಸರ್ವಿಸಿಂಗ್

೪೨. ಸೆಕ್ಯೂರಿಟಿ ಏಜೆನ್ಸೀಸ್

ವಿವರ:

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾದ ಆಯ್ಕೆ ಸಮಿತಿಯ ಮೂಲಕ ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲಾಗುವುದು. ತರಬೇತಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಮಾಸಿಕ ರೂ. ೨೫೦.೦೦ರಂತೆ ೬ ತಿಂಗಳಿಗೆ ಶಿಷ್ಯ ವೇತನ ನೀಡಲಾಗುವುದು. ಹಾಗೂ ತರಬೇತಿ ನೀಡುವ ಸಂಸ್ಥೆಗೆ ರೂ.೨೫೦.೦೦ರಂತೆ ತರಬೇತಿ ಶುಲ್ಕ ನೀಡಲಾಗುವುದು.

ಅರ್ಹತೆ:

೧. ಅಭ್ಯರ್ಥಿಯು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬೇಕು.

೨. ನಿರುದ್ಯೋಗಿಯಾಗಿರಬೇಕು

೩. ಕನಿಷ್ಟ ೭ನೇ ತರಗತಿ ತೇರ್ಗಡೆಯಾಗಿರಬೇಕು.

ಬೆರಳಚ್ಚು ಮತ್ತು ಶೀಘ್ರಲಿಪಿಯಲ್ಲಿ ತರಬೇತಿ:

ಬೆರಳಚ್ಚು ಮತ್ತು ಶೀಘ್ರ ಲಿಪಿಯಲ್ಲಿ ತರಬೇತಿ ಪಡೆಯಲು ಇಚ್ಛಿಸುವ ಪರಿಶಿಷ್ಟವರ್ಗಗಳಿಗೆ ಸೇರಿದಂತಹ ಅಭ್ಯರ್ಥಿಗಳಿಗೆ ಕೆಳಕಂಡಂತೆ ಆರ್ಥಿಕ ನೆರವು ಒದಗಿಸಲಾಗುವುದು.

ವಿವರ:	ರೂ.
೧. ಬೆರಳಚ್ಚು ತರಬೇತಿಗೆ ಪ್ರತಿ ತಿಂಗಳು	: ೩೦.೦೦
೨. ಶೀಘ್ರ ಲಿಪಿ (ಎಸ್.ಎಸ್.ಎಲ್.ಸಿ) ತೇರ್ಗಡೆಯಾದವರಿಗೆ	: ೭೫.೦೦
೩. ಶೀಘ್ರ ಲಿಪಿ (ಪದವಿ ವ್ಯಾಸಂಗ ಮಾಡಿದವರಿಗೆ)	: ೨೦೦.೦೦

ಇದಲ್ಲದೆ ನಿಗದಿತ ದರದಲ್ಲಿ ವಾಣಿಜ್ಯ ಸಂಸ್ಥೆಗಳಿಗೆ ತರಬೇತಿ ಶುಲ್ಕವನ್ನು ಸಹ ನೀಡಲಾಗುತ್ತದೆ.

ಅರ್ಹತೆ:

೧. ಅಭ್ಯರ್ಥಿಯು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು.

೨. ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವವರು ಈ ತರಬೇತಿಗೆ ಅರ್ಹರಾಗಿರುವುದಿಲ್ಲ.

೩. ತರಬೇತಿ ಪಡೆಯಲಿಚ್ಛಿಸುವ ಅಭ್ಯರ್ಥಿಯು ೧೮ ವರ್ಷಕ್ಕೆ ಮೇಲ್ಪಟ್ಟು ೩೦ ವರ್ಷದೊಳಗಿರಬೇಕು.

೪. ಅಭ್ಯರ್ಥಿಯ ಪೋಷಕರ/ ಪಾಲಕರ ವಾರ್ಷಿಕ ಆದಾಯ ರೂ.೨೪,೦೦೦/-ಗಳಿಗಿಂತ ಕಡಿಮೆಯಿರಬೇಕು.

೧೯. ಕಾನೂನು ಪದವೀಧರರಿಗೆ ಶಿಷ್ಯ ವೇತನ:

ಪರಿಶಿಷ್ಟ ಪಂಗಡಗಳಿಗೆ ಸೇರಿದ ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ಹೆಚ್ಚು ಜ್ಞಾನಗಳಿಸಿಕೊಳ್ಳಲು ನೆರವಾಗುವಂತೆ ತರಬೇತಿ ನೀಡಲಾಗುತ್ತಿದೆ. ಈ ತರಬೇತಿಯ ಅವಧಿಯು ನಾಲ್ಕು ವರ್ಷದ್ದಾಗಿದೆ. ತರಬೇತಿಯ ಅವಧಿಯಲ್ಲಿ ತಿಂಗಳಿಗೆ ರೂ. ೧೦೦೦/- ದಂತೆ ಶಿಷ್ಯ ವೇತನ ನೀಡಲಾಗುವುದು.

ಅರ್ಹತೆ:

೧. ಅಭ್ಯರ್ಥಿಯು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು.

೨. ಕಾನೂನು ಪದವೀಧರರಾಗಿರಬೇಕು.

೩. ಪ್ರತಿವರ್ಷ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಈ ನೆರವು ನೀಡಲಾಗುವುದು.

೪. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ವಕೀಲರ ಸಂಘದ ಅಧ್ಯಕ್ಷರು, ಸರ್ಕಾರಿ ವಕೀಲರು, ಜಿಲ್ಲಾ ಕಾನೂನು ನೆರವು ಸಮಿತಿಯ ಕಾರ್ಯದರ್ಶಿಗಳು ಜಿಲ್ಲಾ ಸರ್ಕಾರಿ ವಕೀಲರು ಹಾಗೂ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳನ್ನೊಳಗೊಂಡ ಆಯ್ಕೆ ಸಮಿತಿಯಲ್ಲಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

೨೦. ಕಾನೂನು ಪದವೀಧರರಿಗೆ ಧನಸಹಾಯ:

ಪರಿಶಿಷ್ಟ ಪಂಗಡಕ್ಕೆ ಸೇರಿದ ನಿರುದ್ಯೋಗಿ ಕಾನೂನು ಪದವೀಧರರು ಸ್ವತಂತ್ರವಾಗಿ ವಕೀಲಿ ವೃತ್ತಿಯನ್ನು ಕೈಗೊಳ್ಳಲು ಹಾಗೂ ವಕೀಲರ ಸಂಘದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಸಹಾಯವಾಗುವಂತೆ ರೂ. ೫೦೦೦.೦೦ಗಳ ಧನ ಸಹಾಯವನ್ನು ನೀಡಲಾಗುತ್ತದೆ.

೨೧. ಸ್ವಯಂ ಉದ್ಯೋಗ ತರಬೇತಿ (ಮೋಟಾರು ವಾಹನ ತರಬೇತಿ) :

ಪರಿಶಿಷ್ಟ ವರ್ಗಕ್ಕೆ ಸೇರಿದ ನಿರುದ್ಯೋಗಿ ಯುವ ಜನರು ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಜಿಲ್ಲಾ ವಲಯ ಯೋಜನೆಯಡಿಯಲ್ಲಿ ಲಘು ವಾಹನ ಚಾಲನೆ ಮತ್ತು ಆಟೋರಿಕ್ಷಾ ಚಾಲನೆಯಲ್ಲಿ ೧ ತಿಂಗಳ ತರಬೇತಿ ನೀಡಿ ನಂತರ ವಾಹನ ನಡೆಸಲು ಪರವಾನಗಿ ಸಹ ಒದಗಿಸಲಾಗುತ್ತದೆ. ತರಬೇತಿ ಅವಧಿಯಲ್ಲಿ ರೂ.೧೫೦.೦೦/೩೦೦.೦೦ ಶಿಷ್ಯ ವೇತನ ನೀಡಲಾಗುವುದು.

೨೨. ರುದ್ರಭೂಮಿಗಾಗಿ ಭೂಸ್ವಾಧೀನ ವೆಚ್ಚ:

ಪರಿಶಿಷ್ಟ ವರ್ಗದವರ ಕಾಲೋನಿಗಳಲ್ಲಿನ ಜನರಿಗೆ ರುದ್ರ ಭೂಮಿಯನ್ನು ಒದಗಿಸಲು ಭೂಸ್ವಾಧೀನ ಮತ್ತು ಸಂಬಂಧಪಟ್ಟ ವೆಚ್ಚಗಳನ್ನು ಭರಿಸಲಾಗುವುದು.

ಗಿರಿಜನ ಉಪಯೋಜನೆ:

ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿಗಾಗಿ ಗಿರಿಜನ ಉಪಯೋಜನೆಯನು ೧೯೭೬-೭೭ರಿಂದ ಪ್ರಾರಂಭಿಸಲಾಗಿದೆ. ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯು ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ೧೯೯೨ರಿಂದ ಗಿರಿಜನ ಉಪಯೋಜನೆಯ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಗಿದೆ.

ಗಿರಿಜನ ಉಪ ಯೋಜನೆಯ ಧ್ಯೇಯೋದ್ದೇಶಗಳು:

- ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಪ್ರದೇಶಗಳು ಹಾಗೂ ಇತರ ಪ್ರದೇಶಗಳಲ್ಲಿರುವ ಪರಿಶಿಷ್ಟ ವರ್ಗದ ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲೆ ತರಲು ಸಹಕಾರಿಯಾಗುವಂತಹ ಸವಲತ್ತುಗಳನ್ನು ಒದಗಿಸುವುದು.

- ಪರಿಶಿಷ್ಟ ವರ್ಗದವರ ಕಲೆ ಮತ್ತು ಸಂಸ್ಕೃತಿಗಳನ್ನು ಕಾಪಾಡಲು ಸಹಕಾರಿಯಾಗುವಂತಹ ನೀತಿ ನಿಯಮಗಳನ್ನು ಜಾರಿಗೊಳಿಸುವುದು.

- ಪರಿಶಿಷ್ಟವರ್ಗದ ಕಾಲೋನಿಗಳಿಗೆ / ಹಾಡಿಗಳಿಗೆ ಕನಿಷ್ಟ ಮೂಲಭೂತ ಸೌಲಭ್ಯ ಒದಗಿಸುವುದು.

- ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನವನ್ನು ತೀವ್ರಗೊಳಿಸುವುದು ಮತ್ತು ಆ ದಿಸೆಯಲ್ಲಿ ಎದುರಾಗುವ ತೊಡಕುಗಳನ್ನು ನಿವಾರಿಸುವುದು.

- ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಆರ್ಥಿಕ ಸೌಲಭ್ಯಗಳು, ಶೈಕ್ಷಣಿಕ ಕಾರ್ಯಕ್ರಮಗಳು, ವಸತಿ, ಕುಡಿಯುವ ನೀರು, ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ, ರಸ್ತೆ, ಚರಂಡಿ ಕಾಮಗಾರಿಗಳು, ಆರೋಗ್ಯ ಕೇಂದ್ರ ಇತ್ಯಾದಿ ಸೌಲಭ್ಯಗಳನ್ನು ಗಿರಿಜನ ಉಪಯೋಜನೆಯಡಿ ಒದಗಿಸಲಾಗುತ್ತದೆ.

ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೆ ಗಿರಿಜನ ಉಪ ಯೋಜನೆಯಡಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ:

೧. ಕೃಷಿ:

ಕೃಷಿ ಇಲಾಖೆಯ ವತಿಯಿಂದ ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಕೆಳಕಂಡ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

೧.ಕೃಷಿ ಪರಿಕರಗಳು:

(ಶೇಕಡಾ ೧೦೦ ಸಹಾಯಧನ, ರೂ.೨,೮೦೦/-ಪ್ರತಿ ಹೆಕ್ಟೇರ್)

೨. ಧಾನ್ಯ ಸಂಗ್ರಹಣಾ ಕಣಜಗಳು:

(ಶೇಕಡಾ ೭೫ರ ಸಹಾಯಧನ, ರೂ.೧,೦೦೦/-ರ ಗರಿಷ್ಠಮಿತಿಯಲ್ಲಿ)

೩. ಆಧುನಿಕ ಕೃಷಿ ಉಪಕರಣಗಳು:

(ಶೇಕಡಾ ೭೫ರ ಸಹಾಯಧನ, ರೂ.೫,೦೦೦/-ರ ಮಿತಿಯಲ್ಲಿ)

೪. ಕೈಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು:

(ಶೇಕಡಾ ೭೫ರ ಸಹಾಯಧನ, ರೂ.೧,೦೦೦/-ರ ಗರಿಷ್ಠಮಿತಿಯಲ್ಲಿ)

೫. ಡೀಸೆಲ್ / ಸೀಮೆ ಎಣ್ಣೆ ಪಂಪ್ ಸೆಟ್‌ಗಳು:

(ಶೇಕಡಾ ೭೫ರ ಸಹಾಯಧನ, ರೂ.೧೦,೦೦೦/-ರ ಗರಿಷ್ಠಮಿತಿಯಲ್ಲಿ)

೬. ಪವರ್ ಟಿಲ್ಲರ್‌ಗಳು:

(ಶೇಕಡಾ ೭೫ರ ಸಹಾಯಧನ, ರೂ.೫೦,೦೦೦/-ರ ಗರಿಷ್ಠಮಿತಿಯಲ್ಲಿ)

೭. ಜಲಂತರ್ಗ ಪಂಪ್‌ಸೆಟ್‌ಗಳು:

(ಶೇಕಡಾ ೭೫ರ ಸಹಾಯಧನ, ರೂ.೨೫,೦೦೦/-ರ ಗರಿಷ್ಠಮಿತಿಯಲ್ಲಿ).

೨. ತೋಟಗಾರಿಕೆ:

೧. ರೂ.೨,೧೬೫/-ರಿಂದ ರೂ.೨,೭೦೦/-ವರೆಗಿನ ವೆಚ್ಚದಲ್ಲಿ ಅರ್ಧ ಎಕರೆ ತೆಂಗಿನ ತೋಟ / ೧ ಎಕರೆ ಹಣ್ಣಿನ ತೋಟ / ಹೂವಿನ ತೋಟ ನಿರ್ಮಾಣ.

೨. ತೋಟಗಳ ಪಾಲನೆಗೆ ಮೊದಲನೆಯ ವರ್ಷ ರೂ.೬೫೦.೦೦ ಮತ್ತು ಎರಡನೆಯ ವರ್ಷ ರೂ. ೩೫೦.೦೦ ಗಳ ಸಹಾಯಧನ ನೀಡುವುದು.

೩. ತೋಟಗಾರಿಕೆಯಲ್ಲಿ ತರಬೇತಿ.

೩. ಪಶುಸಂಗೋಪನೆ:

ಪರಿಶಿಷ್ಟ ವರ್ಗದ ಫಲಾನುಭವಿಗೆಳಿಗೆ ನಬಾರ್ಡ್ ದರಗಳಲ್ಲಿ ಶೇಕಡಾ ೭೫ರ ಸಹಾಯಧನದಲ್ಲಿ ಮಿಶ್ರತಳಿ ಹಸುಘಟಕ, ಎಮ್ಮೆಘಟಕ, ಕುರಿಘಟಕ ಮತ್ತು ಹಂದಿ ಘಟಕಗಳ ಪೂರೈಕೆ.

೪. ಅರಣ್ಯ ಇಲಾಖೆ:

ಸಾಮಾಜಿಕ ಭದ್ರತಾ ನೆಡುತೋಪು ರೂ.೨೫೦೦/-ಗಳ ವೆಚ್ಚದಲ್ಲಿ ಸ್ಥಾಪಿಸುವುದು. ಕುಶಲಕರ್ಮಿಗಳಿಗೆ ಉಚಿತ ಬಿದಿರು, ಬೆತ್ತ ಸರಬರಾಜು. ಮನೆಗಳ ನಿರ್ಮಾಣಕ್ಕೆ ರೂ.೧೦,೦೦೦/- ಮಿತಿಯಲ್ಲಿ ಗೃಹ ನಿರ್ಮಾಣ ವಸ್ತುಗಳ ಸರಬರಾಜು.

೫. ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು:

೨. ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಆಸಕ್ತಿ ಹೊಂದಿರುವ ಪರಿಶಿಷ್ಟ ಪಂಗಡದ ಯುವಕರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಸಹಕಾರಿಯಾಗುವಂತಹ ಜೇನು ಸಾಕಾಣಿಕೆ, ಬಡಗಿತನ, ಬಿದಿರು ಬೆತ್ತ ಮತ್ತು ಇತರ ವೃತ್ತಿಗಳಲ್ಲಿ ತರಬೇತಿ.

೩. ವಿವಿಧ ವೃತ್ತಿಗಳನ್ನು ನಿರ್ವಹಿಸುವ ಗ್ರಾಮೀಣ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ಉಚಿತ ಉಪಕರಣಗಳ ವಿತರಣೆ.

೪. ಪರಿಶಿಷ್ಟ ಪಂಗಡದವರಿಗೆ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಲು ಲಿವಿಂಗ್ ಕಮ್ ವರ್ಕ್ ಶೆಡ್‌ಗಳನ್ನು ನಿರ್ಮಿಸಲು ಘಟಕಕ್ಕೆ ರೂ.೨೫,೦೦೦/-ಗಳ ಸಹಾಯಧನ ಮಂಜೂರಾತಿ.

೬. ರೇಷ್ಮೆ ಕೃಷಿ:

೧. ಹಿಪ್ಪು ನೇರಳೆ ಬೇಸಾಯಕ್ಕೆ ರೂ.೨,೦೦೦/-ಗಳವರೆಗೆ ಸಹಾಯಧನ.

೨. ರೇರಿಂಗ್ ಹೌಸ್‌ಗಳ ನಿರ್ಮಾಣಕ್ಕೆ ಶೇಕಡಾ ೬೦ರ ಸಹಾಯಧನ ಗರಿಷ್ಠ ರೂ.೨೫,೦೦೦/-ಗಳಿಗೆ ಒಳಪಟ್ಟು ನೀಡಲಾಗುವುದು.

೩. ಪ್ಯಾಕೇಜ್ ಆಫ್ ಬೆನಿಫಿಟ್ಸ್ ಯೋಜನೆ.

೪. ನೀರಾವರಿ ಪಂಪ್ ಸೆಟ್ಟುಗಳಿಗೆ ಸಹಾಯ.

೫. ರೇಷ್ಮೆ ಹುಳುಗಳನ್ನು ಸಾಕುವ ಸಲಕರಣೆಗಳ ಸರಬರಾಜು.

೭. ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ:

೧. ಪರಿಶಿಷ್ಟವರ್ಗದ ಕಾಲೋನಿಗಳ ವಿದ್ಯುದೀಕರಣ

೨. ಪರಿಶಿಷ್ಟ ವರ್ಗದವರ ನೀರಾವರಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು.

೩. ಕುಟೀರ ಜ್ಯೋತಿ ಯೋಜನೆಯಡಿ ಪರಿಶಿಷ್ಟ ಪಂಗಡದವರ ಮನೆಗಳಿಗೆ ವಿದ್ಯುತ್ ಸೌಲಭ್ಯ ಒದಗಿಸುವುದು.

೮. ಉದ್ಯೋಗ ಮತ್ತು ತರಬೇತಿ:

೧. ಹೊಲಿಗೆ ಮುಂತಾದ ವೃತ್ತಿಯಲ್ಲಿ ತರಬೇತಿ ನೀಡುವುದು.

೨. ತರಬೇತಿ ಅವಧಿಯಲ್ಲಿ ಅಭ್ಯರ್ಥಿಗೆ ಮಾಸಿಕ ರೂ.೫೦೦.೦೦ ಶಿಷ್ಯ ವೇತನ.

೩. ಅಭ್ಯರ್ಥಿಗಳ ಪೋಷಕರಿಗೆ ರೂ.೧೦೦.೦೦ ಪ್ರೋತ್ಸಾಹ ಧನ.

೪. ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಉಚಿತ ಹೊಲಿಗೆ ಯಂತ್ರಗಳ ಪೂರೈಕೆ.

೯. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:

೧. ಗ್ರಾಮೀಣ ಪ್ರದೇಶಗಳಲ್ಲಿ ಪರಿಶಿಷ್ಟ ಪಂಗಡದ ಬಾಲಕಿಯರಿಗೆ ಹಾಜರಾತಿ ವಿದ್ಯಾರ್ಥಿ ವೇತನ.

೨. ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಸ್ತ್ರೀ ಶಕ್ತಿ ಯೋಜನೆಯಡಿ ಸಹಾಯಧನ.

೩. ವಿಧವೆಯರಿಗೆ ಆರ್ಥಿಕ ಸೌಲಭ್ಯ ನೀಡಲು ನವಜೀವನ ಕಾರ್ಯಕ್ರಮದಡಿಯಲ್ಲಿ ಧನ ಸಹಾಯ.

೪. ಪರಿಶಿಷ್ಟ ವರ್ಗದ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಿಕೆ ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ.

೫. ಪರಿಶಿಷ್ಟ ವರ್ಗದ ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿಗೆ ವೃತ್ತಿಪರ ತರಬೇತಿ.

೬. ಉದ್ಯೋಗಿನಿ ಯೋಜನೆಯಡಿ ಆರ್ಥಿಕ ಅಭಿವೃದ್ಧಿಗೆ ಗರಿಷ್ಠ ರೂ.೭,೫೦೦/-ಗಳ ಸಹಾಯಧನ.

೧೦. ತಾಂತ್ರಿಕ ಶಿಕ್ಷಣ ಇಲಾಖೆ:

ತಾಂತ್ರಿಕ ಶಿಕ್ಷಣ ಇಲಾಖಾ ವತಿಯಿಂದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಸಹಕಾರಿಯಾಗುವಂತೆ ರೂ. ೧,೨೦೦/-ಮಿತಿಯೊಳಗೆ ಡ್ರಾಯಿಂಗ್ ಉಪಕರಣಗಳ ಉಚಿತ ವಿತರಣೆ.

೧೧. ಕಾಲೇಜು ಶಿಕ್ಷಣ ಇಲಾಖೆ:

ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಮತ್ತಿತರ ಸಾಮಗ್ರಿಗಳ ಉಚಿತ ವಿತರಣೆ.

೧೨. ಸಾರ್ವಜನಿಕ ಶಿಕ್ಷಣ ಇಲಾಖೆ:

೧. ವಿದ್ಯಾವಿಕಾಸ ಕಾರ್ಯಕ್ರಮದಡಿ ೧ ರಿಂದ ೭ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರಗಳನ್ನು ಒದಗಿಸುವುದು.

೨. ೧ ರಿಂದ ೭ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಪಂಗಡದ ಬಾಲಕಿಯರಿಗೆ ಶಾಲಾ ಬ್ಯಾಗ್‌ಗಳನ್ನು ವಿತರಿಸುವುದು.

೩. ಪ್ರಾಥಮಿಕ ೫ ರಿಂದ ೭ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿ.

೪. ೭ರಿಂದ ೧೦ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿ.

೫. ಪರಿಶಿಷ್ಟ ವರ್ಗದ ಮಕ್ಕಳಿಗೆ ಉಚಿತ ಪಠ್ಯಪುಸ್ತಕ ಪೂರೈಕೆ.

೬. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸರ್ಕಾರೇತರ ಶುಲ್ಕ ಮರು ಪಾವತಿ.

೧೩. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಆರ್ಥಿಕ ಸಹಾಯ ಉದ್ಯೋಗ ಮತ್ತು ಜೀವನ ಮಟ್ಟವನ್ನು ಸುಧಾರಿಸಲು ಕೆಳಕಂಡ ಕಾರ್ಯಕ್ರಮಗಳಡಿಯಲ್ಲಿ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

೧. ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆ

೨. ಎಸ್.ಜಿ.ಆರ್.ವೈ

೩. ಸಮಗ್ರ ಗ್ರಾಮೀಣ ವಸತಿ ಯೋಜನೆ

೪. ಪ್ರಧಾನ ಮಂತ್ರಿ ಗ್ರಾಮೀಣ ಯೋಜನೆ

೫. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಅಭಿವೃದ್ಧಿಗೆ ಅನುದಾನ.

೧೪. ರಸ್ತೆ ಮತ್ತು ಸೇತುವೆ:

ಗ್ರಾಮೀಣಾಭಿವೃದ್ಧಿ ಇಂಜಿನಿಯರ್ ಇಲಾಖೆ ವತಿಯಿಂದ ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಸಂಪರ್ಕ ರಸ್ತೆ ಮತ್ತು ಸೇತುವೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮಗಳನ್ನು ಗಿರಿಜನ ಉಪ ಯೋಜನೆಯಡಿ ಜಿಲ್ಲಾವಲಯದಲ್ಲಿ ಕೈಗೊಳ್ಳಲಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಪರಿಶಿಷ್ಟ ಪಂಗಡದ ಕಾಲೋನಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಗ್ರಾಮೀಣ ನೀರು ಪೂರೈಕೆ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳು ಹಾಗೂ ಕಿರು ನೀರು ಸರಬರಾಜು ಯೋಜನೆಗಳ ಮೂಲಕ ಒದಗಿಸಲಾಗುತ್ತದೆ.

೧೫. ಲ್ಯಾಂಪ್ ಸಹಕಾರ ಸಂಘಗಳು:

ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಪ್ರದೇಶಗಳಾದ ಮೈಸೂರು, ಚಾಮರಾಜನಗರ, ಕೊಡಗು ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆ ಹಾಗೂ ಮಂಡ್ಯ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಹಕಾರಿ ತತ್ವದ ಆಧಾರದ ಮೇಲೆ ೨೧ ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರ ಸಂಘಗಳು (ಲ್ಯಾಂಪ್ಸ್) ಕಾರ್ಯನಿರ್ವಹಿಸುತ್ತಿವೆ. ಈ ಸಂಘಗಳಲ್ಲಿ ಪರಿಶಿಷ್ಟ ಪಂಗಡದ ೬೨,೩೩೬ ಜನರನ್ನು ಸದಸ್ಯರನ್ನಾಗಿ ನೋಂದಾಯಿಸಿಕೊಂಡು ಅವರಿಗೆ ವಿವಿಧ ಸವಲತ್ತುಗಳನ್ನು ಒದಗಿಸಲಾಗುತ್ತಿದೆ. ಸದಸ್ಯರು ಸಂಗ್ರಹಿಸಿರುವ ಕಿರು ಅರಣ್ಯ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಗೆ ಮಾರಾಟ ಮಾಡಿ ಲಾಭಾಂಶವನ್ನು ಸದಸ್ಯರಿಗೆ ವಿತರಿಸಲಾಗುತ್ತಿದೆ. ಅವಶ್ಯವಿರುವ ಸದಸ್ಯರಿಗೆ ಅಲ್ಪಾವಧಿ ಸಾಲವನ್ನು ಕೂಡ ಈ ಸಂಘಗಳು ನೀಡುವುದರಿಂದ ಸ್ಥಳೀಯ ಲೇವಾದೇವಿಗಾರರಿಂದ ಶೋಷಣೆಗೊಳಗಾಗುವುದನ್ನು ತಪ್ಪಿಸಲು ಸಾಧ್ಯವಾಗುತ್ತಿದೆ. ಕೆಲವು ಸಂಘಗಳು ಕಿರು ಅರಣ್ಯ ಉತ್ಪನ್ನಗಳ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿದ್ದು ಸಂಸ್ಕರಿಸಿ ಮಾರಾಟ ಮಾಡುವುದರಿಂದ, ಹೆಚ್ಚಿನ ಲಾಭ ಪಡೆಯಲು ಅವಕಾಶವಿರುತ್ತದೆ. ಈ ಸಂಸ್ಥೆಗಳಿಗೆ ಕೇಂದ್ರ ಸರ್ಕಾರದ 'ಟ್ರೈಫೆಡ್' ಸಂಸ್ಥೆ ಮೂಲಕ ಹೆಚ್ಚಿನ ಸಹಾಯ ದೊರೆಯುತ್ತದೆ.

ಗಿರಿಜನ ಪ್ರದೇಶಗಳಲ್ಲಿ ಈ ಸಹಕಾರ ಸಂಘಗಳು ಜೀವನಾವಶ್ಯಕ ಪದಾರ್ಥಗಳನ್ನು ನ್ಯಾಯಬೆಲೆಗೆ ವಿತರಿಸುವುದರ ಜೊತೆಗೆ ಸದಸ್ಯರು ಹೆಣೆದ ಬುಟ್ಟಿ ಮತ್ತಿತರ ಬಿದಿರು ಮತ್ತು ಬೆತ್ತದ ಸಾಮಗ್ರಿಗಳನ್ನು ಮಾರಾಟ ಮಾಡುವ ವ್ಯವಸ್ಥೆ ಇರುತ್ತದೆ. ರಾಜ್ಯದಲ್ಲಿರುವ ೨೧ ಲ್ಯಾಂಪ್ಸ್ ಸಹಕಾರ ಸಂಘಗಳ ವಿವರ ಈ ಕೆಳಕಂಡಂತಿದೆ:

ಕ್ರ.ಸಂ	ಜಿಲ್ಲೆ	ಲ್ಯಾಂಪ್ಸ್ ಸಂಘದ ಹೆಸರು
೧	ಮೈಸೂರು	ಹೆಗ್ಗಡದೇವನ ಕೋಟೆ ಹುಣಸೂರು
೨	ಚಾಮರಾಜನಗರ	ಚಾಮರಾಜನಗರ, ಹನೂರು ಬಿಳಿಗಿರಿರಂಗನಬೆಟ್ಟ ಗುಂಡ್ಲುಪೇಟೆ
೩	ಕೊಡಗು	ಬಸವನಹಳ್ಳಿ, ಭಾಗಮಂಡಲ ತಿತಿಮತಿ
೪	ಚಿಕ್ಕಮಗಳೂರು	ಮೂಡಿಗೆರೆ, ಕೊಪ್ಪ
೫	ದಕ್ಷಿಣ ಕನ್ನಡ	ಮಂಗಳೂರು, ಬಂಟ್ವಾಳ ಪುತ್ತೂರು, ಬೆಳ್ತಂಗಡಿ, ಸುಳ್ಯ
೬	ಉಡುಪಿ	ಉಡುಪಿ, ಕಾರ್ಕಳ, ಕುಂದಾಪುರ
೭	ಮಂಡ್ಯ	ಮುತ್ತತ್ತಿ
೮	ಉತ್ತರ ಕನ್ನಡ	ಭಟ್ಕಳ

ಕೇಂದ್ರ ಸರ್ಕಾರದ ಯೋಜನೆಗಳು:

ಕೇಂದ್ರ ಸರ್ಕಾರವು ಪರಿಶಿಷ್ಟ ವರ್ಗದವರ ಸರ್ವಾಂಗೀಣ ಅಭಿವೃದ್ಧಿಗೆ ಕೆಳಕಂಡ ಯೋಜನೆಗಳಡಿ ಅನುದಾನ ಬಿಡುಗಡೆ ಮಾಡಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಹಕರಿಸುತ್ತಿದೆ.

೧. ವಿದ್ಯಾರ್ಥಿ ನಿಲಯ ಹಾಗೂ ಆಶ್ರಮ ಶಾಲೆಗಳ ಕಟ್ಟಡಗಳ ನಿರ್ಮಾಣ:

ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಇಲಾಖೆಯ ವಿದ್ಯಾರ್ಥಿ ನಿಲಯಗಳು ಹಾಗೂ ಆಶ್ರಮ ಶಾಲೆಗಳಲ್ಲಿ ವಾಸ ಮಾಡುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸ್ವಂತ ಕಟ್ಟಡಗಳನ್ನು ನಿರ್ಮಿಸುವ ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ.

೨. ತರಬೇತಿ ಮತ್ತು ಸಂಬಂಧಿತ ಯೋಜನೆಗಳು:

ಅರ್ಹ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಪರೀಕ್ಷಾ ಪೂರ್ವ ತರಬೇತಿಯನ್ನು ನೀಡಲಾಗುತ್ತದೆ. ಪ್ರಮುಖವಾಗಿ ಕೇಂದ್ರ ಲೋಕ ಸೇವಾ ಆಯೋಗದಿಂದ ನಡೆಸಲಾಗುತ್ತಿರುವ ಕೇಂದ್ರ ನಾಗರಿಕ ಸೇವೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ (ಐ.ಎ.ಎಸ್., ಐ.ಎಫ್.ಎಸ್., ಐ.ಪಿ.ಎಸ್) ಹಾಗೂ ಸಿಬ್ಬಂದಿ ನೇಮಕಾತಿ ಆಯೋಗ, ರೈಲ್ವೆ ಹಾಗೂ ಬ್ಯಾಕಿಂಗ್ ನೇಮಕಾತಿ ಆಯೋಗಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಸರ್ಕಾರಿ ಅಥವಾ ಪ್ರತಿಷ್ಠಿತ ಖಾಸಗಿ ತರಬೇತಿ ಸಂಸ್ಥೆಗಳ ಮುಖಾಂತರ ಪರೀಕ್ಷಾ ಪೂರ್ವ ತರಬೇತಿಯನ್ನು ನೀಡಲಾಗುವುದು.

೩. ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟವರ್ಗಗಳ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದಿಂದ ನಿಗದಿ ಮಾಡಿರುವ ದರದಲ್ಲಿ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುತ್ತಿದೆ.

೪. ವೃತ್ತಿಪರ ತರಬೇತಿ ಕಾರ್ಯಕ್ರಮಗಳು :

ಅ) ಕಂಪ್ಯೂಟರ್ ತರಬೇತಿ:

ಪರಿಶಿಷ್ಟ ವರ್ಗದ ವಿದ್ಯಾವಂತ ನಿರುದ್ಯೋಗಿ ಯುವಕ / ಯುವತಿಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಕೋರ್ಸ್‌ಗಳಲ್ಲಿ ೬ ತಿಂಗಳ ತರಬೇತಿ ನೀಡಲು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ತರಬೇತಿ ನೀಡಲಾಗುತ್ತದೆ. ತರಬೇತಿ ಅವಧಿಯಲ್ಲಿ ಅಭ್ಯರ್ಥಿಗಳಿಗೆ ರೂ. ೫೦೦.೦೦ ಸ್ಟೈಫಂಡ್ ನೀಡಲಾಗುತ್ತದೆ.

ಆ) ಲಘುವಾಹನ ಮತ್ತು ಭಾರಿ ವಾಹನ ಚಾಲನೆ ತರಬೇತಿ:

ಪರಿಶಿಷ್ಟ ವರ್ಗಕ್ಕೆ ಸೇರಿದ ನಿರುದ್ಯೋಗಿ ಯುವ ಜನರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಜಿಲ್ಲಾ ವಲಯ ಯೋಜನೆಯಲ್ಲಿ ಲಘು ವಾಹನ ಚಾಲನೆ ಮತ್ತು ಭಾರಿ ವಾಹನ ಚಾಲನೆಯಲ್ಲಿ ಒಂದು ತಿಂಗಳ ತರಬೇತಿ ನೀಡಿ ನಂತರ ವಾಹನ ನಡೆಸಲು ಪರವಾನಗಿ ಸಹ ಒದಗಿಸಲಾಗುತ್ತದೆ. ತರಬೇತಿ ಅವಧಿಯಲ್ಲಿ ರೂ.೧೫೦.೦೦ ಮತ್ತು ೫೦೦.೦೦ ರಷ್ಟು ಶಿಷ್ಯವೇತನ ನೀಡಲಾಗುವುದು.

ಇ) ಬೆರಳಚ್ಚು ಮತ್ತು ಶೀಘ್ರ ಲಿಪಿ ತರಬೇತಿ:

ಪರಿಶಿಷ್ಟವರ್ಗದ ವಿದ್ಯಾವಂತ ನಿರುದ್ಯೋಗಿ ಯುವಕ ಯುವತಿಯರಿಗೆ ಉದ್ಯೋಗಾವಕಾಶ ಕಲ್ಪಿಸಲು ಔದ್ಯೋಗಿಕ ಕೇಂದ್ರಗಳಲ್ಲಿ ಬೆರಳಚ್ಚು / ಶೀಘ್ರ ಲಿಪಿ ಮುಂತಾದ ತರಬೇತಿಗಳಿಗೆ ಶಿಷ್ಯವೇತನ ಮಂಜೂರು ಮಾಡಲಾಗುತ್ತದೆ.

ಅ. ಬೆರಳಚ್ಚು ತರಬೇತಿಗೆ ಪ್ರತಿ ತಿಂಗಳು	–ರೂ.೩೦.೦೦
ಆ. ಶೀಘ್ರ ಲಿಪಿ ಎಸ್.ಎಸ್.ಎಲ್.ಸಿ.ತೇರ್ಗಡೆಯಾದವರಿಗೆ	–ರೂ.೭೫.೦೦
ಇ. ಶೀಘ್ರ ಲಿಪಿ ಪದವಿ ವ್ಯಾಸಂಗ ಮಾಡಿದವರಿಗೆ	–ರೂ.೭೦೦.೦೦

ಈ) ಟೈಲರಿಂಗ್ ತರಬೇತಿ:

ಪರಿಶಿಷ್ಟ ವರ್ಗದ ನಿರುದ್ಯೋಗಿ ಯುವತಿಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಟೈಲರಿಂಗ್‌ನಲ್ಲಿ ತರಬೇತಿ ನೀಡಲಾಗುತ್ತದೆ. ಈ ತರಬೇತಿಗೆ ಎಸ್. ಎಸ್. ಎಲ್.

ಸಿ ತೇರ್ಗಡೆ ಹೊಂದಿದ ಹೆಣ್ಣು ಮಕ್ಕಳು ಅರ್ಹರಾಗಿರುತ್ತಾರೆ. ತರಬೇತಿಯ ಅವಧಿಯಲ್ಲಿ ಪ್ರತಿ ಅಭ್ಯರ್ಥಿಗೆ ರೂ. ೫೦೦.೦೦ಗಳ ಸ್ಟೈಫಂಡ್ ನೀಡಲಾಗುತ್ತದೆ.

೫. ಗಿರಿಜನ ಸಂಶೋಧನಾ ಕೇಂದ್ರ:

೨೦೦೪-೦೫ನೇ ಸಾಲಿನಲ್ಲಿ ಕೇಂದ್ರ, ಪುರಸ್ಕೃತ ಯೋಜನೆಯಡಿ ರಾಜ್ಯದಲ್ಲಿ ಗಿರಿಜನ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಕೇಂದ್ರ ಸರ್ಕಾರದವರು ಅನುಮತಿ ನೀಡಿರುತ್ತಾರೆ. ಈ ಸಂಶೋಧನಾ ಕೇಂದ್ರದ ಅಡಿಯಲ್ಲಿ ಈ ಕೆಳಕಂಡಂತೆ ವಿಭಾಗಗಳನ್ನು ಸ್ಥಾಪಿಸಲು ಪ್ರಸ್ತಾಪಿಸಿರುತ್ತೇವೆ.

೧. ಸಂಶೋಧನಾ ವಿಭಾಗ

೨. ತರಬೇತಿ ವಿಭಾಗ

೩. ಸಾಂಸ್ಕೃತಿಕ ವಿಭಾಗ

೪. ಮುದ್ರಣಾ ವಿಭಾಗ

೨೦೦೪-೦೫ನೇ ಸಾಲಿನಲ್ಲಿ ಸಂಶೋಧನೆ ಮತ್ತು ತರಬೇತಿ ಕಾರ್ಯಕ್ರಮಕ್ಕಾಗಿ ಕೇಂದ್ರ ಸರ್ಕಾರದಿಂದ ರೂ. ೨.೦೦ ಲಕ್ಷಗಳು ಬಿಡುಗಡೆಯಾಗಿದ್ದು, ರಾಜ್ಯ ಸರ್ಕಾರದ ಪಾಲು ರೂ. ೨.೦೦ ಲಕ್ಷಗಳೂ ಸೇರಿ ಒಟ್ಟು ರೂ.೪.೦೦ ಲಕ್ಷಗಳಿಗೆ ಈ ಕೆಳಕಂಡಂತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಿದೆ.

	ಲಕ್ಷ ರೂ.ಗಳು
೧. ಸಂಶೋಧನೆ	– ೨.೦೦
೨. ತರಬೇತಿ	– ೧.೦೦
೩. ಮೌಲ್ಯ ಮಾಪನ	– ೧.೦೦

೬. ಗಿರಿಜನ ಉಪಯೋಜನೆಗೆ ವಿಶೇಷ ಕೇಂದ್ರೀಯ ಸಹಾಯ:

ಪರಿಶಿಷ್ಟ ವರ್ಗದವರ ಆರ್ಥಿಕ ಅಭಿವೃದ್ಧಿಗೆ ಗಿರಿಜನ ಉಪಯೋಜನೆಗೆ ಕೇಂದ್ರ ಸರ್ಕಾರವು ವಿಶೇಷ ಕೇಂದ್ರೀಯ ಸಹಾಯವನ್ನು ಮಂಜೂರು ಮಾಡುತ್ತಿದ್ದು ಈ ಅನುದಾನವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಕೆಳಕಂಡ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗುವುದು.

೧. ಪರಿಶಿಷ್ಟ ವರ್ಗದವರ ಕುಟುಂಬಗಳಿಗೆ ಬಡತನ ರೇಖೆಯಿಂದ ಮೇಲೆ ಬರಲು ಸಹಕಾರಿಯಾಗುವಂತಹ ನಿರಂತರ ಆದಾಯ ತರುವಂತಹ ಕೃಷಿ, ತೋಟಗಾರಿಕೆ, ಪಶು

ಸಂಗೋಪನೆ, ರೇಷ್ಮೆ, ಗ್ರಾಮೀಣ ಸಣ್ಣ ಕೈಗಾರಿಕೆ, ಮೀನುಗಾರಿಕೆ ಕಾರ್ಯಕ್ರಮಗಳಿಗೆ ಸಹಾಯಧನ ಮಂಜೂರಾತಿ.

೨. ಆರ್ಥಿಕ ಅಭಿವೃದ್ಧಿಗೆ ಪೂರಕವಾಗುವ ಮೂಲಭೂತ ಸೌಲಭ್ಯ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಧನ ಸಹಾಯ.

೩. ಪರಿಶಿಷ್ಟ ವರ್ಗದ ನಿರುದ್ಯೋಗಿ ಯುವಕ – ಯುವತಿಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಮಾಹಿತಿ ತಂತ್ರಜ್ಞಾನವೂ ಸೇರಿದಂತೆ ವಿವಿಧ ವೃತ್ತಿಪರ ತರಬೇತಿ ಕಾರ್ಯಕ್ರಮಗಳ ಅನುಷ್ಠಾನ.

೭. ಭಾರತ ಸಂವಿಧಾನ ಅನುಚ್ಛೇದ ೨೭೫ (೧) ರಡಿ ರಾಜ್ಯ ಯೋಜನೆಗಳಿಗೆ ಕೇಂದ್ರೀಯ ನೆರವು:

ಭಾರತ ಸಂವಿಧಾನ ಅನುಚ್ಛೇದ ೨೭೫ (೧)ರಡಿ ರಾಜ್ಯ ಯೋಜನೆಗಳಿಗೆ ಕೇಂದ್ರೀಯ ನೆರವಿನಡಿ ಕೇಂದ್ರ ಸರ್ಕಾರವು ಕೆಳಕಂಡ ನಿರ್ದಿಷ್ಟ ಯೋಜನೆಗಳಿಗೆ ಅನುದಾನವನ್ನು ಮಂಜೂರು ಮಾಡುತ್ತಿದೆ.

೧. ಪರಿಶಿಷ್ಟವರ್ಗದವರ ಕಾಲೋನಿಗಳಿಗೆ ಹ್ಯಾಂಡ್‌ಪಂಪ್ ಕೊಳವೆ ಬಾವಿ ಮತ್ತು ಕಿರು ನೀರು ಸರಬರಾಜು ಯೋಜನೆಯಡಿ ಕುಡಿಯುವ ನೀರು ಪೂರೈಕೆ.

೨. ಪರಿಶಿಷ್ಟವರ್ಗದವರ ಆರೋಗ್ಯ ತಪಾಸಣೆ ಮತ್ತು ಔಷಧೋಪಚಾರಕ್ಕೆ ಸಂಚಾರಿ ಆರೋಗ್ಯಗಳ ಘಟಕ ಸ್ಥಾಪನೆ.

೩. ಪರಿಶಿಷ್ಟ ವರ್ಗದ ಕಾಲೋನಿಗಳಲ್ಲಿ ಚರಂಡಿ ಮತ್ತು ನೈರ್ಮಲೀಕರಣ ಕಾಮಗಾರಿಗಳ ಅನುಷ್ಠಾನ.

೪. ಪರಿಶಿಷ್ಟವರ್ಗದವರ ಕಾಲೋನಿಗಳಿಗೆ ಸಂಪರ್ಕ ರಸ್ತೆ ನಿರ್ಮಾಣ ಮತ್ತು ಅಭಿವೃದ್ಧಿ

೫. ಲ್ಯಾಂಪ್ ಸಹಕಾರ ಸಂಘಗಳ ಮೂಲಕ ಕಿರು ಅರಣ್ಯ ಉತ್ಪನ್ನಗಳ ಸಂಸ್ಕರಣಾ ಘಟಕ ಸ್ಥಾಪನೆ

೬. ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಸೋಲಾರ್ ಬೀದಿ ದೀಪ ಸೌಲಭ್ಯ ಒದಗಿಸುವುದು.

೭. ಪರಿಶಿಷ್ಟ ವರ್ಗದವರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಕಾಲೋನಿಗಳಲ್ಲಿ ಸಮುದಾಯ ಭವನ ನಿರ್ಮಾಣ.

೮. ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ಏತ ನೀರಾವರಿ, ತುಂತುರು ನೀರಾವರಿ ಮತ್ತು ಹನಿ ನೀರಾವರಿ ಸೌಲಭ್ಯ ಒದಗಿಸುವ ಕಾರ್ಯಕ್ರಮಗಳ ಅನುಷ್ಟಾನ.

೯. ಪರಿಶಿಷ್ಟ ವರ್ಗದ ರೈತರಿಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವೈಯುಕ್ತಿಕ ಕೊಳವೆ ಬಾವಿ ಮತ್ತು ಸಾಮೂಹಿಕ ನೀರಾವರಿ ಬಾವಿಗಳ ನಿರ್ಮಾಣಕ್ಕೆ ಸಹಾಯಧನ.

೧೦. ಪರಿಶಿಷ್ಟ ವರ್ಗದವರಿಗೆ ಜಮೀನಿನಲ್ಲಿ ಕೃಷಿ ಇಲಾಖೆಯ ವತಿಯಿಂದ ಜಲಾನಯನ ಕಾಮಗಾರಿಗಳ ಅನುಷ್ಠಾನ.

೮. ಮೂಲನಿವಾಸಿ ಬುಡಕಟ್ಟು ಗುಂಪುಗಳ ಅಭಿವೃದ್ಧಿ ಯೋಜನಾ ಕಾರ್ಯಕ್ರಮಗಳು:

ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ವರ್ಗದ ಜೇನುಕುರುಬ ಮತ್ತು ಕೊರಗ ಜಾತಿಗಳನ್ನು ಮೂಲ ನಿವಾಸಿ ಬುಡಕಟ್ಟು ಗುಂಪುಗಳೆಂದು ಗುರುತಿಸಲಾಗಿದೆ. ಈ ಜನಾಂಗದವರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನ ಮಾಡುತ್ತಿವೆ. ಸದರಿ ಕಾರ್ಯಕ್ರಮಗಳ ವಿವರಗಳು ಕೆಳಕಂಡಂತಿವೆ:

ಮೂಲಭೂತ ಸೌಲಭ್ಯ:

೧. ಜೇನು ಕುರುಬ ಮತ್ತು ಕೊರಗ ಕಾಲೋನಿಗಳಲ್ಲಿ ಸಂಪರ್ಕ ರಸ್ತೆ ನಿರ್ಮಾಣ

೨. ಜೇನು ಕುರುಬ ಮತ್ತು ಕೊರಗ ಕಾಲೋನಿಗಳಲ್ಲಿ ಕಿರು ನೀರು ಸರಬರಾಜು ಯೋಜನೆ / ಹ್ಯಾಂಡ್ ಪಂಪ್ ಕೊಳವೆ ಬಾವಿ ಮೂಲಕ ಕುಡಿಯುವ ನೀರಿನ ವ್ಯವಸ್ಥೆ.

೩. ಜೇನು ಕುರುಬ ಮತ್ತು ಕೊರಗ ಕಾಲೋನಿಗಳಲ್ಲಿ ಚರಂಡಿ ನಿರ್ಮಾಣ

೪. ಜೇನು ಕುರುಬ ಮತ್ತು ಕೊರಗ ಮನೆಗಳಿಗೆ ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುದ್ದೀಪ ಸೌಲಭ್ಯ.

೫. ಆರೋಗ್ಯ ತಪಾಸಣೆಗೆ ಸಂಚಾರಿ ಆರೋಗ್ಯ ಘಟಕ ಸ್ಥಾಪನೆ.

ಆರ್ಥಿಕ ಕಾರ್ಯಕ್ರಮಗಳು:

೧. ಕೃಷಿ ಅಭಿವೃದ್ಧಿಗೆ ವ್ಯವಸಾಯ ಉಪಕರಣಗಳು ಮತ್ತು ಬೀಜ ಗೊಬ್ಬರ ವಿತರಣೆ, ನಬಾರ್ಡ್ ದರದಲ್ಲಿ ಉಳುಮೆ ಎತ್ತುಗಳು ಮತ್ತು ಗಾಡಿ ಸರಬರಾಜಿಗೆ ಸಹಾಯಧನ, ಜಲಾನಯನ ಕಾರ್ಯಕ್ರಮಗಳ ಅನುಷ್ಠಾನ.

೨. ತೋಟಗಾರಿಕೆ ಕಾರ್ಯಕ್ರಮದಡಿ ಉಚಿತ ಹಣ್ಣು , ತೆಂಗು, ಹೂವಿನ ತೋಟ, ರಬ್ಬರ್ ತೋಟ ಇತ್ಯಾದಿಗಳ ಸ್ಥಾಪನೆ ಮತ್ತು ೨ ವರ್ಷಗಳ ನಿರ್ವಹಣೆ.

೩. ಹೈನುಗಾರಿಕೆ ಕಾರ್ಯಕ್ರಮದಡಿ ನಬಾರ್ಡ್ ದರದಲ್ಲಿ ಎಮ್ಮೆ, ಸೀಮೆಹಸು, ಹಂದಿ ಘಟಕಗಳ ಸ್ಥಾಪನೆಗೆ ಶೇಕಡಾ ೭೫ರಷ್ಟು ಸಹಾಯಧನ.

೪. ಅರಣ್ಯ ಇಲಾಖೆಯಿಂದ ಬೆತ್ತ ಮತ್ತು ಬಿದಿರು ವಿತರಣೆ.

೫. ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳ ವತಿಯಿಂದ ವಸತಿ ಕಾರ್ಯಾಗಾರ ಮತ್ತು ಸಾಮೂಹಿಕ ಕಾರ್ಯಾಗಾರ ನಿರ್ಮಾಣ ಹಾಗೂ ತರಬೇತಿಗಳ ಅನುಷ್ಠಾನ.

೬. ತರಬೇತಿ ಮತ್ತು ಸ್ವಯಂ ಉದ್ಯೋಗ ಕಾರ್ಯಕ್ರಮಗಳಡಿ ಬೆತ್ತ ಮತ್ತು ಬಿದಿರು, ಮರಗೆಲಸ, ಲಘು ವಾಹನ ಚಾಲನೆ, ಹೊಲಿಗೆ ತರಬೇತಿ ಮತ್ತು ಸಿಮೆಂಟ್ ಹಾಲೋಬ್ರಿಕ್ ತಯಾರಿಕೆಯಲ್ಲಿ ತರಬೇತಿಗಳನ್ನು ಉಚಿತವಾಗಿ ನೀಡುವುದು. ತರಬೇತಿ ಅವಧಿಯಲ್ಲಿ ಮಾಸಿಕ ೫೦೦/-ರೂ ಗಳ ಶಿಷ್ಯ ವೇತನ ನೀಡಲಾಗುತ್ತಿದೆ.

೭. ಲ್ಯಾಂಪ್ ಸಹಕಾರ ಸಂಘಗಳಿಗೆ ಸದಸ್ಯರನ್ನಾಗಿ ಮಾಡುವುದು, ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ ಮತ್ತು ಮಾರಾಟಕ್ಕೆ ಲ್ಯಾಂಪ್ ಸಂಘಗಳ ಮುಖಾಂತರ ಸಹಕಾರ.

ವಸತಿ:

೧. ವಸತಿ ರಹಿತ ಜೇನುಕುರುಬ ಮತ್ತು ಕೊರಗ ಜನಾಂಗದವರಿಗೆ ಅಂಬೇಡ್ಕರ್ / ಆಶ್ರಯ ಯೋಜನೆಗಳಡಿ ರೂ.೨೦,೦೦೦ ಸಾವಿರ ವೆಚ್ಚದಲ್ಲಿ ಉಚಿತ ಮನೆಗಳ ನಿರ್ಮಾಣ

೨. ಜೇನುಕುರುಬ ಮತ್ತು ಕೊರಗ ಜನರು ವಾಸಿಸುವ ಹಳೆಯ ಮನೆಗಳ ದುರಸ್ತಿಗೆ ರೂ.೧೦,೦೦೦ ಸಹಾಯಧನ.

ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳು:

ಸರ್ಕಾರವು ಪರಿಶಿಷ್ಟ ವರ್ಗದವರ ಅಭಿವೃದ್ಧಿಗೆ ಹಾಕಿಕೊಂಡಿರುವ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳ ಜೊತೆಗೆ ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಕೂಡಾ ಹಲವಾರು ಕಾರ್ಯಕ್ರಮಗಳನ್ನು / ಯೋಜನೆಗಳನ್ನು ಅನುಷ್ಟಾನಗೊಳಿಸಲು ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಸಹಾಯಧನ ನೀಡಲು ಅವಕಾಶವಿರುತ್ತದೆ.

ಭಾರತ ಸರ್ಕಾರದ ಇತ್ತೀಚಿನ ಮಾರ್ಗಸೂಚಿಯ ಪ್ರಕಾರ ಕೆಳಕಂಡ ಯೋಜನೆ/ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರದ ಸಹಾಯಧನ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಕೆಲವು ಪ್ರಮುಖ ಕಾರ್ಯಕ್ರಮಗಳ ವಿವರ ಕೆಳಕಂಡಂತಿವೆ:

೧. ಪರಿಶಿಷ್ಟಪಂಗಡದ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳು

೨. ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಸತಿ ರಹಿತ ಶಾಲೆಗಳು.

೩. ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ರಾತ್ರಿ ಶಾಲೆಗಳು

೪. ಲೈಬ್ರೆರಿ

೫. ಸಂಚಾರಿ ಲೈಬ್ರರಿ ಮತ್ತು ಆಡಿಯೋ ವಿಶುಯಲ್ ಘಟಕ

೬. ೧೦ ಹಾಸಿಗೆಗಳ ಆಸ್ಪತ್ರೆ / ಡಿಸ್ಪೆನ್ಸರಿ.

೭. ಸಂಚಾರಿ ಆರೋಗ್ಯ ಘಟಕ

೮. ಕಂಪ್ಯೂಟರ್ ತರಬೇತಿ ಕೇಂದ್ರ

೯. ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ ಕೇಂದ್ರ

೧೦. ಮರಗೆಲಸ ತರಬೇತಿ.

೧೧. ಟಿವಿ / ವಿಸಿಆರ್/ ಟೇಪ್‌ರೆಕಾರ್ಡರ್/ ರೇಡಿಯೋ ತರಬೇತಿ ಕೇಂದ್ರ

೧೨. ಬೆತ್ತ ಮತ್ತು ಬಿದಿರು ತರಬೇತಿ ಕೇಂದ್ರ

೧೩. ತೆಂಗು ನಾರಿನ ತರಬೇತಿ ಕೇಂದ್ರ ಮತ್ತು ಅಗರ್ ಬತ್ತಿ ತಯಾರಿಕಾ ಕೇಂದ್ರ

೧೪. ಪ್ರಿಂಟಿಂಗ್ ಕಂಪೋಸಿಂಗ್ ಮತ್ತು ಬುಕ್ ಬೈಂಡಿಂಗ್ ತರಬೇತಿ

೧೫. ಫಿಟ್ಟರ್ ಮತ್ತು ವೆಲ್ಡಿಂಗ್ ಮತ್ತು ಹ್ಯಾಂಡ್‌ಲೂಮ್ ತರಬೇತಿ

೧೬. ನಿಟ್ಟಿಂಗ್, ವೀವ್‌ಂಗ್ ಮತ್ತು ಹ್ಯಾಂಡ ಲೂಮ್ಸ್ ತರಬೇತಿ.

೧೭. ಸ್ಕೂಟರ್ ಮತ್ತು ಮೋಟಾರ್ ಸೈಕಲ್ ರಿಪೇರಿ ತರಬೇತಿ

೧೮. ಬಾಲವಾಡಿ / ಶಿಶುವಿಹಾರ ಕೇಂದ್ರಗಳು

೧೯. ಪರಿಶಿಷ್ಟವರ್ಗದವರಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.

ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಮೇಲ್ಕಾಣಿಸಿದ ಯಾವುದೇ ಯೋಜನೆಗಳನ್ನು ಹಮ್ಮಿಕೊಳ್ಳಲು ಬಯಸಿದಲ್ಲಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಜಿಲ್ಲಾಧಿಕಾರಿಗಳ ತಪಾಸಣಾ ವರದಿಯೊಂದಿಗೆ ಸಲ್ಲಿಸುವ ಪ್ರಸ್ತಾವನೆಗಳನ್ನು ನಿರ್ದೇಶನಾಲಯದಿಂದ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸರ್ಕಾರಕ್ಕೆ ಕಳುಹಿಸಲಾಗುವುದು.

ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ :

ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ವರ್ಗದ ಜನರ ಸಮಗ್ರ ಅಭಿವೃದ್ಧಿ ಮತ್ತು ಹಿತರಕ್ಷಣೆಗೆ ಕುರಿತು ಕೆಲಸ ಮಾಡಲು ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಆಯೋಗದ ಮಾದರಿಯಲ್ಲಿಯೇ ಕರ್ನಾಟಕ ಸರ್ಕಾರವು ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗವನ್ನು ೧೦.೧೦.೨೦೦೨ರಂದು ಕಾರ್ಯಾರಂಭ ಮಾಡಿದೆ. ಈ ಆಯೋಗವು ಅಧಿಕೃತವಾಗಿ

೧೦.೦೪.೨೦೦೩ ರಿಂದ ನ. ೧೪ : ೩ಸಿ. ಎಫ್. ಸಿ. ಕಟ್ಟಡ, ೨ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಕಾಯ್ದೆ ೨೦೦೨ರ ಪ್ರಕಾರ ಆಯೋಗವು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತದೆ.

ಎ. ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಕಲ್ಯಾಣ ಮತ್ತು ಇತರ ಸಂರಕ್ಷಣೆಗಾಗಿ ಭಾರತ ಸಂವಿಧಾನದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಸರ್ಕಾರದ ಯಾವುದೇ ಆದೇಶದ ಅಡಿಯಲ್ಲಿ ಉಪಬಂಧಿಸಲಾದ ವಿವಿಧ ರಕ್ಷಾಕ್ರಮಗಳ ಕಾರ್ಯ ಕ್ಷಮತೆಯನ್ನು ಪರಿಶೋಧಿಸುವುದು ಮತ್ತು ಪರೀಕ್ಷಿಸುವುದು.

ಬಿ. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿರುವವರನ್ನು ಅವರ ಹಕ್ಕುಗಳಿಂದ ಮತ್ತು ಸಂರಕ್ಷಣೆಯಿಂದ ವಂಚಿತಗೊಳಿಸಿರುವುದಕ್ಕೆ ಸಂಬಂಧಿಸಿದ ನಿರ್ದಿಷ್ಟ ದೂರುಗಳನ್ನು ವಿಚಾರಿಸುವುದು ಮತ್ತು ಅಂತಹ ವಿಷಯದ ಬಗ್ಗೆ ಸೂಕ್ತ ಪ್ರಾಧಿಕಾರಗಳನ್ನು ಸಂಪರ್ಕಿಸುವುದು.

ಸಿ. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಯೋಜನಾ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಮತ್ತು ಸಲಹೆಗಳನ್ನು ನೀಡುವುದು. ರಾಜ್ಯದಲ್ಲಿ ಅವರ ಅಭಿವೃದ್ಧಿಯಲ್ಲಾದ ಪ್ರಗತಿಯ ಮೌಲ್ಯ ನಿರ್ಣಯ ಮಾಡುವುದು.

ಡಿ. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಸಂರಕ್ಷಣೆ, ಕಲ್ಯಾಣ ಮತ್ತು ಸಾಮಾಜಿಕ ಆರ್ಥಿಕ ಅಭಿವೃದ್ಧಿಗಾಗಿ ರಕ್ಷಾ ಕ್ರಮಗಳನ್ನು ಮತ್ತು ಇತರ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡಬಹುದು ಮತ್ತು ವಾರ್ಷಿಕವಾಗಿ ಆಯೋಗವು ತಾನು ಸೂಕ್ತವೆಂದು ಭಾವಿಸಬಹುದಾದಂತಹ ಇತರ ಸಮಯದಲ್ಲಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸುವುದು.

ಇ. ನಿಯಮಿಸಬಹುದಾದಂಥ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಸಂರಕ್ಷಣೆ, ಕಲ್ಯಾಣ ಅಭಿವೃದ್ಧಿ ಮತ್ತು ಪ್ರಗತಿಗೆ ಸಂಬಂಧಪಟ್ಟಂತೆ ಇತರ ಕಾರ್ಯಗಳನ್ನು ನಿರ್ವಹಿಸುತ್ತದೆ.

ಆಯೋಗದಿಂದ ಪಡೆಯಬಹುದಾದ ನೆರವು:

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಯಾವುದೇ ರೀತಿಯಲ್ಲಿ ತೊಂದರೆಗೆ ಒಳಗಾದಲ್ಲಿ ಅಂದರೆ ಭೂ ವಿವಾದ, ಒತ್ತುವರಿ, ಸರ್ಕಾರಿ ಅಥವಾ ನಿಗಮ, ಮಂಡಳಿಗಳಲ್ಲಿ ನಗರಪಾಲಿಕೆ, ಪುರಸಭೆಗಳಲ್ಲಿ ನೇಮಕಾತಿ ಹಾಗೂ ಬಡ್ತಿಯಲ್ಲಿ ಮೀಸಲಾತಿ ಉಲ್ಲಂಘನೆ, ದೌರ್ಜನ್ಯ, ಅಸ್ಪೃಶ್ಯತೆ ಆಚರಣೆ, ಪ್ರಕೃತಿ ವಿಕೋಪಕ್ಕೆ ತೊಂದರೆಗೊಳಗಾದಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಅಧ್ಯಕ್ಷರು ಅಥವಾ

ಕಾರ್ಯದರ್ಶಿಗಳು ಇವರನ್ನು ಕಛೇರಿ ವೇಳೆಯಲ್ಲಿ ಖುದ್ದಾಗಿ ಭೇಟಿ ಮಾಡಿ ಅಥವಾ ಲಿಖಿತ ಮೂಲಕ ಮನವಿ ಸಲ್ಲಿಸಬಹುದಾಗಿದೆ. ಇಂತಹ ಪ್ರಕರಣಗಳ ಬಗ್ಗೆ ಆಯೋಗವು ಸಂಬಂಧಪಟ್ಟ ಪ್ರಾಧಿಕಾರಗಳಿಂದ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ತೆಗೆದುಕೊಳ್ಳುವುದು.

ಇದಲ್ಲದೆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ನೀಡುವ ಸೌಲಭ್ಯದಲ್ಲಿ ಯಾವುದೇ ರೀತಿಯ ದುರ್ಬಳಕೆ ಅಥವಾ ಶೇ.೧೮ರ ಮೀಸಲಾತಿ ಹಣವನ್ನು ಖರ್ಚು ಮಾಡದಿದ್ದಲ್ಲಿ ಆಯೋಗದ ಗಮನಕ್ಕೆ ತರಬಹುದಾಗಿದೆ. ಗ್ರಾಮೀಣ ಭಾಗದಲ್ಲಿ ಬಡತನ ನಿವಾರಣೆ ಆಗಬೇಕಾದರೆ ಜನರಿಗೆ ನಿರಂತರ ಆದಾಯ ತರುವಂತಹ ಉದ್ಯೋಗ ದೊರಕಬೇಕು. ಉದ್ಯೋಗ ದೊರಬೇಕಾದರೆ, ಗ್ರಾಮೀಣ ಭಾಗದಲ್ಲಿ ಹೆಚ್ಚು ಹೆಚ್ಚು, ಗೃಹ ಕೈಗಾರಿಕೆಗಳು ಸ್ಥಾಪನೆಯಾಗಬೇಕು. ಈ ದಿಸೆಯಲ್ಲಿ ಗ್ರಾಮೀಣ ಮತ್ತು ಸಣ್ಣ ಉದ್ಯಮ ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ಗಿರಿಜನ ಉಪಯೋಜನೆ ಅಡಿಯಲ್ಲಿ ಗ್ರಾಮೀಣ ಭಾಗದ ಬುಡಕಟ್ಟು ಸ್ತ್ರೀ-ಪುರುಷರಿಗೆ ಸ್ವಯಂ ಉದ್ಯೋಗಾವಕಾಶ ಕಲ್ಪಿಸಿಕೊಡುವುದು, ಅಂದರೆ ಉದ್ಯೋಗ ಕೈಗೊಳ್ಳಲು ಮುಂದೆ ಬರುವವರಿಗೆ ಅವರು ಸ್ಥಾಪಿಸುವ ಚಿಕ್ಕ ಕೈಗಾರಿಕಾ ಘಟಕಗಳಿಗೆ ಯೋಜನಾ ವೆಚ್ಚದ ಶೇ.೬೦ರಷ್ಟು ಸಹಾಯಧನ ನೀಡುವುದು.



ಮಲೆಗಳಲ್ಲಿ ವಾಸವಾಗಿರುವ ಕುಟುಂಬ



ಸ್ನಾನ ಗೃಹ








ಮಲೆಕುಡಿಯರ ಕುಟುಂಬ



ಗೇಂಟಿ ವಸ್ತ್ರ ಧರಿಸಿದ ಮಹಿಳೆ



ಬಾಂಜಾರು ಮಲೆ



ತೋರಣ ಮುಹೂರ್ತ



ಮದರಂಗಿ ಶಾಸ್ತ್ರ



ಮದು ಮಗ ಮತ್ತು ಮದು ಮಗಳು







ಧಾರಾಮುಹೂರ್ತ



ನಾಗಾರಾಧನೆ



ದೈವಸ್ಥಾನ



ಭೈರವ ದೈವ



ಗುಳಿಗ ದೈವ



ಅಣ್ಣಪ್ಪ ದೈವ



ಮನೆಯೊಳಗಿನ ಕಲ್ಲುರ್ಟಿ ಭೂತದ ಮಣೆ



ಮಲೆರಾಯಿ ಭೂತ



ಗಣಪತಿ ದೇವಸ್ಥಾನ



ಬೆತ್ತದ ಬುಟ್ಟಿ ಹೆಣೆಯಲು ತಯಾರಿ







ಸಿದ್ಧಗೊಂಡ ಬೆತ್ತದ ಬುಟ್ಟಿ



ಕೋಳಿ ಗೂಡು (ಕೂಟಾಯಿ)








ಕೂರಿ (ಮೀನು ಹಿಡಿಯಲು ಬಳಸುವ ಸಾಧನ)




ಬೆತ್ತದ ತೊಟ್ಟಿಲು



ಪಣೆ (ಗೊರಬು)



ಅಕ್ಕಿ ಮುಡಿ




ಮಲೆಕುಡಿಯರ ವಾದ್ಯಗಳು



ಮಾವೊರಿ ವಾದಕ



ಬಿದಿರು ಚೆಂಡೆ



ಮಲೆಕುಡಿಯರು ಉಪಯೋಗಿಸುತ್ತಿರುವ ಕತ್ತಿ ಮತ್ತು ದಟ್ಟಿ



ಶೇಂದಿ ತೆಗೆಯುವುದು



ಕುಮೆರಿ ಕೃಷಿ







ಮಲೆ ಕುಡಿಯರು ರೂಪಿಸಿದ ನಿಸರ್ಗ ನೀರು ಸರಬರಾಜು ವ್ಯವಸ್ಥೆ



ವಿದ್ಯುತ್ ಉತ್ಪಾದನೆ



ಮಲೆಕುಡಿಯರ ಆಶ್ರಮ ಶಾಲೆ



ಕರಕುಶಲ ಕಲೆಗಾಗಿ 2009ರ ಜಾನಪದ ಅಕಾಡೆಮಿ ಪ್ರಶಸ್ತಿ ಪಡೆದ ವೆಂಕಪ್ಪ ಮಲೆಕುಡಿಯ

ಆಕರ ಗ್ರಂಥಗಳು

❖ ಅಂಬಳಿಕೆ ಹಿರಿಯಣ್ಣ- ಜಾನಪದ ಕೆಲವು ವಿಚಾರಗಳು, ಚೇತನ ಬುಕ್ ಹೌಸ್,ಮೈಸೂರು. ೧೯೯೪

❖ ಅಂಬಳಿಕೆ ಹಿರಿಯಣ್ಣ-ಸೈದ್ಧಾಂತಿಕ ಜಾನಪದ, ಚೇತನ ಬುಕ್ ಹೌಸ್, ಮೈಸೂರು. ೨೦೦೧

❖ ಅಂಬಳಿಕೆ ಹಿರಿಯಣ್ಣ-ಜಾನಪದ ಕೆಲವು ಅಧ್ಯಯನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು. ೧೯೯೪

❖ ಅಕ್ಕಮಹಾದೇವಿ – ಬುಡಕಟ್ಟು ನ್ಯಾಯ – ಮೈಸೂರು ವಿಶ್ವವಿದ್ಯಾಲಯ ೧೯೮೪.

❖ ಅನಂತರಾಮು ಕೆ. – ದಕ್ಷಿಣದ ಸಿರಿನಾಡು, ಅನಂತ ಪ್ರಕಾಶನ ದೇವಾಂಬಾ ಅಗ್ರಹಾರ, ಮೈಸೂರು. ೧೯೯೭

❖ ಅಭಯ ಕುಮಾರ ಕೌಕ್ರಾಡಿ-ಮುಗೇರರು ಜಾನಪದ ಅಧ್ಯಯನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಂಗಳೂರು. ೧೯೯೭

❖ ಅಮೃತ ಸೋಮೇಶ್ವರ (ಸಂ)- ತುಳು ಪಾಡ್ದನ ಸಂಪುಟ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೭

❖ ಅಮೃತ ಸೋಮೇಶ್ವರ-ಅವಿಲು, ಕನ್ನಡ ಸಂಘ, ವಿವೇಕಾನಂದ ಕಾಲೇಜು, ಪುತ್ತೂರು. ೧೯೭೮

❖ ಅಮೃತ ಸೋಮೇಶ್ವರ-ತುಳು ಪಾಡ್ದನ ಕತೆಗಳು, ಸಾಹಿತ್ಯಾಂಜಲಿ ಗ್ರಂಥ ಮಾಲೆ, ಕೋಟೆಕಾರು, ಮಂಗಳೂರು. ೧೯೬೨

❖ ಅಮೃತ ಸೋಮೇಶ್ವರ-ತುಳು ಬದುಕು, ಪ್ರಕೃತಿ ಪ್ರಕಾಶನ, ಕೋಟೆಕಾರು. ೧೯೮೪

❖ ಉಪಾಧ್ಯಾಯ ಯು. ಪಿ. (ಪ್ರ.ಸಂ) ತುಳು ನಿಘಂಟು, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ. ೧೯೯೨

❖ ಕಮಲಾಕ್ಷ.ಪಿ. ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ- ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು-೧೯೯೪.

❖ ಕವಲಿ ಚೆ.ಎ-ಕನ್ನಡ-ಕನ್ನಡ ಕಸ್ತೂರಿ ಕೋಶ ರಾಮಾಶ್ರಯ ಬುಕ್ ಡಿಪೋ, ಧಾರವಾಡ. ೧೯೫೭

❖ ಕಾಳೇಗೌಡ ನಾಗವಾರ ಮತ್ತು ಹುಚ್ಚಪ್ಪ ಮಾಸ್ತರ್ – ಗಿರಿಜನ ಸಂಸ್ಕೃತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

❖ ಕಿಲ್ಲೆ, ಎನ್. ಎಸ್. ಎನ್. ಎ. ಶೀನಪ್ಪ ಹೆಗ್ಡೆ-ಪ್ರಾಚೀನ ತುಳುನಾಡು, ಶ್ರೀಮತಿ ಇಂದಿರಾ ಕಿಲ್ಲೆ, ಮಂಗಳೂರು. ೧೯೫೪

❖ ಕಿಟ್ಟೆಲ್ ರೆವ-ಎಫ್-ಕನ್ನಡ-ಇಂಗ್ಲೀಷ ನಿಘಂಟುಗಳು ಬಾಸೆಲ್ ಮಿಶನ್ ಬುಕ್ ಅಂಡ್ ಟ್ರ್ಯಾಕ್ಟ್ ಡಿಪೊಸಿಟರಿ, ಮಂಗಳೂರು. ೧೮೯೪

❖ ಗಂಗಾಧರ ದೈವಜ್ಞ – ಬುಡಕಟ್ಟು ಸಮಾಜ : ಹುಟ್ಟು ಸಾವಿನ ನಡುವೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦.

❖ ಗಾಯತ್ರಿ ನಾವಡ-ಕರಾವಳಿ ಜಾನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ-ಸಿರಿ ಪ್ರಕಾಶನ ಹೊಸಪೇಟೆ. ೧೯೯೯

❖ ಗುರುಲಿಂಗಯ್ಯ ಎಂ. – ಬುಡಕಟ್ಟುಗಳು ಮತ್ತು ಅಭಿವೃದ್ಧಿ- ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾನಿಲಯ –೨೦೦೪.

❖ ಗುರುಲಿಂಗ ಕಾಪಸೆ (ಸಂಪಾದಕರು) – ಶಿವರಾಮ ಕಾರಂತ ಸಾಂಸ್ಕೃತಿಕ ಅನುಸಂಧಾನ-ಕರ್ನಾಟಕ ಸಾಹಿತ್ಯ ಅಕಾಡೆಮಿ-೨೦೦೩

❖ ಚಂದ್ರಪೂಜಾರಿ ಎಂ. – ಸಮಾಜ ಸಂಶೋಧನೆ – ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ- ೨೦೦೫.

❖ ಚಂದ್ರಪೂಜಾರಿ ಎಂ. –ಸಂಶೋಧಕರು ಮತ್ತು ಕ್ಷೇತ್ರಕಾರ್ಯ –ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ –೨೦೦೫.

❖ ಚಂದ್ರಶೇಖರ ಕಂಬಾರ- ಕನ್ನಡ ಜಾನಪದ ವಿಶ್ವಕೋಶ-ಸಂಪುಟ-೧ ಮತ್ತು ೨ –ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೯೭, ೨೦೦೦.

❖ ಚಂದ್ರಶೇಖರ- ಟಿ. ಆರ್ ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರೀಕರಣ ರಾಜಕೀಯ ವೈಫಲ್ಯದ ಒಂದು ಸಂಕಥನ-, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ- ೨೦೦೪

❖ ಚಿನ್ನಪ್ಪ ಗೌಡ ಕೆ –ಭೂತಾರಾಧನೆ ಜಾನಪದೀಯ ಅಧ್ಯಯನ, ಮುದಿಪು ಪ್ರಕಾಶನ, ಮಂಗಳ ಗಂಗೋತ್ರಿ ೧೯೯೦

❖ ಚಿನ್ನಪ್ಪ ಗೌಡ ಕೆ.- ಭೂತಾರಾಧನೆ : ಕೆಲವು ಅಧ್ಯಯನಗಳು, ತುಳುವ ಪ್ರಕಾಶನ ಮಂಗಳೂರು. ೧೯೮೩

❖ ಚಿನ್ನಪ್ಪ ಗೌಡ.ಕೆ (ಸಂ)- ಸೇರಿಗೆ, ಮುದಿಪು ಪ್ರಕಾಶನ, ಮಂಗಳಗಂಗೋತ್ರಿ. ೨೦೦೦

❖ ಚಿನ್ನಪ್ಪ ಗೌಡ.ಕೆ (ಸಂ)- ಜಾಲಾಟ, ಚಿಂತನ ಪ್ರಕಾಶನ, ಉಜಿರೆ. ೧೯೮೫

❖ ಚಿನ್ನಪ್ಪ ಗೌಡ ಕೆ. – ಸಂಸ್ಕೃತಿ ಸಿರಿ- ಮಲೆಕುಡಿಯ ಜನಾಂಗ ಐತಿಹಾಸಿಕ –ಸಾಂಸ್ಕೃತಿಕ ವಿಶ್ಲೇಷಣೆ.

❖ ಚಿನ್ನಪ್ಪ ಗೌಡ ಕೆ. – ಪನಿಯಾರ (ನೆಂಪು ಸಂಚಿಕೆ)-ಸಂಪಾದಕೆ- –ತುಳುಕೂಟ (ರಿ) ಮಂಗಳೂರು ೧೯೮೯.

❖ ಚಿನ್ನಪ್ಪ ಗೌಡ ಕೆ (ಸಂಪಾದಕರು)– ಗೌಡ ಜನಾಂಗ ಇತಿಹಾಸ ಮತ್ತು ಸಂಸ್ಕೃತಿ –೨೦೦೩

❖ ಚಿನ್ನಸಾಮಿ ಸೋಸಲೆ ಎಸ್. – ನಮ್ಮ ಗ್ರಾಮಗಳು ಅಂದು –ಇಂದು –ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ–೨೦೦೪.

❖ ನಾಗೇಗೌಡ ಎಚ್.ಎಲ್ (ಸಂ) –ವೆರಿಯರ್ ಎಲ್ವಿನ್‌ರವರ ಗಿರಿಜನ ಪ್ರಪಂಚ––೧೯೭೯

❖ ನಾಗೇಶ್ ಎಚ್.ವಿ – ಕರ್ನಾಟಕ ಬುಡಕಟ್ಟುಗಳಲ್ಲಿ ನ್ಯಾಯ ತೀರ್ಮಾನ– ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಉಪನ್ಯಾಸ ಗ್ರಂಥಮಾಲೆ–೨೦೦೩.

❖ ನಾವಡ ಎ .ವಿ– ಒಂದು ಸೊಲ್ಲು ನೂರು ಸೊರ –ಕರ್ನಾಟಕ ಸಂಘ, ಪುತ್ತೂರು, ೧೯೯೯.

❖ ನಾವಡ. ಎ. ವಿ. –ಜಾನಪದ ಸಮಾಲೋಚನೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು. ೧೯೯೩

❖ ಪರಶಿವಯ್ಯ ಜೀ.ಶಂ–ಜಾನಪದ, ಚೇತನ ಬುಕ್ ಹೌಸ್, ಮೈಸೂರು. ೧೯೮೯

❖ ಪಾದೇಕಲ್ಲು ವಿಷ್ಣು ಭಟ್ಟ (ಸಂಪಾದಕ) ತುಳುವರಿವರು– ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ –೧೯೯೭.

❖ ಪಾದೇಕಲ್ಲು ವಿಷ್ಣು ಭಟ್ಟ – ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ–ಸಂಪಾದಕ –ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ –೨೦೦೪.

❖ ಪಾಂಡುರಂಗ ಡಿ. ಆರ್. – ದಕ್ಷಿಣ ಕನ್ನಡ ಜಿಲ್ಲೆಯ ಭೈರರು; ಸಾಹಿತ್ಯಿಕ ಸಾಂಸ್ಕೃತಿಕ ಅಧ್ಯಯನ – ಪ್ರಕಾಶಕರು, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ. ಜಿ. ಎಂ. ಕಾಲೇಜು, ಉಡುಪಿ–೨–೧೯೯೦.

❖ ಪುರುಷೋತ್ತಮ ಬಿಳಿಮಲೆ–ಕರಾವಳಿ ಜಾನಪದ, ಮಂಗಳಗಂಗೋತ್ರಿ ದ.ಕ ೧೯೯೦

❖ ಪುರುಷೋತ್ತಮ ಬಿಳಿಮಲೆ, ಶ್ರೀ. ಎ. ವಿ. ನಾವಡ ಮತ್ತುವಿದ್ವಾನ್ ರಾಮಚಂದ್ರ ಉಚ್ಚಿಲ–(ಸಂಪಾದಕರು) – ಸಿರಿ –ಅಮೃತ ಸೋಮೇಶ್ವರ ಅಭಿನಂದನ ಗ್ರಂಥ –,–ಕಲಾಗಂಗೋತ್ರಿ ಅಮೃತ ಸೋಮೇಶ್ವರ ಅಭಿನಂದನಾ ಸಮಿತಿ, ಸೋಮೇಶ್ವರ ಉಚ್ಚಿಲ –೧೯೯೫.

❖ ಪ್ರಭಾಕರ ಜೋಶಿ, ಎಂ. ಕೆ. ಅನಂತರಾಮರಾವ್ (ಸಂಪಾದಕ) – ದಕ್ಷಿಣ ಕನ್ನಡ (ಮಂಗಳೂರು ಮತ್ತು ಉಡುಪಿ ಜಿಲ್ಲೆಗಳು) – ವಿದ್ಯಾಪಬ್ಲಿಶಿಂಗ್ ಹೌಸ್ 'ಶ್ರೀನಿಲಯ' ಮಂಗಳೂರು–೧೯೯೭.

❖ ಪ್ರಭಾಕರ ಎಸ್. (ಸಂ.) – ಆದಿವಾಸಿ ಆಖ್ಯಾನ; ಸಮುದಾಯಗಳ ಅಧ್ಯಯನಕ್ಕೊಂದು ಆಕರ.

❖ ಪ್ರಭಾಕರ, ಎಸ್. ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦.

❖ ಪ್ರಭಾಕರ ಎ. ಎಸ್. (ಸಂಪಾದಕ) ಬುಡಕಟ್ಟು ಅಭಿವೃದ್ಧಿ ಮೀಮಾಂಸೆ–ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೦೪.

❖ ಪ್ರಶಾಂತ್ ಹೆಚ್. ಡಿ. –(ಸಂಪಾದಕ) ಕರ್ನಾಟಕ ರಾಜ್ಯ ಕೋಶ–೪–ಜನಸಮುದಾಯ ಸಂಪುಟ,., ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

❖ ಬರಗೂರು ರಾಮಚಂದ್ರಪ್ಪ – (ಪ್ರಧಾನ ಸಂಪಾದಕರು) ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು – ಕರ್ನಾಟ್ಕಕ ಸಾಹಿತ್ಯ ಅಕಾಡೆಮಿ–೧೯೯೩.

❖ ಬೋರಲಿಂಗಯ್ಯ ಹಿ.ಚಿ, –ಕಾಡು, ಕಾಂಕ್ರೀಟ್ ಮತ್ತು ಜಾನಪದ , ಅಕ್ಷರ ಪ್ರಕಾಶನ, ಹೆಗ್ಗೊಡು, ಸಾಗರ – ೧೯೯೫

❖ ಬೋರಲಿಂಗಯ್ಯ ಹಿ. ಚಿ. ಡಾ. ಎ. ಎಸ್. ಪ್ರಭಾಕರ (ಸಂಪಾದಕರು), ಬುಡಕಟ್ಟು ಅಧ್ಯಯನ ಸಂಪುಟ ೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಜೂನ್ ೩೦–೨೦೦೫, ಸಂಪುಟ – ೪, ಜುಲೈ–ಡಿಸೆಂಬರ್ ೨೦೦೬.

❖ ಬೋರಲಿಂಗಯ್ಯ ಹಿ. ಚಿ. ಗಿರಿಜನ ನಾಡಿನ ಪಯಣ, ಬೆಂಗಳೂರು, ರಾಗಿರೊಟ್ಟಿ ಪ್ರಕಾಶನ ೧೯೯೧.

❖ ಭಟ್ಟ ಜಿ. ಎಸ್. (ಸಂಪಾದಕರು)– ಜಾನಪದ –೧೯೯೧

❖ ಭೈರೇಗೌಡ ಎಂ. – ಕಾಡು ಬಿಡಲೊಲ್ಲದವರು– ಪ್ರಕಾಶಕರು, ದಾಮಿನಿ ಸಾಹಿತ್ಯ ನಂ. ೫೪೯, ೯ನೇ ಮುಖ್ಯ ರಸ್ತೆ, ಎಂ. ಸಿ. ಬಡಾವಣೆ, ವಿಜಯನಗರ, ಬೆಂಗಳೂರು–೪೦.

❖ ಮಂಜುನಾಥ ಬೇವಿನಕಟ್ಟೆ–ಜಾನಪದ ನಂಬಿಕೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೬

❖ ಮಂಜುನಾಥ ಬೇವಿನಕಟ್ಟೆ, ಜನಪದ ಸಂಸ್ಕೃತಿ – ಹ್ಯಾರಡ, ತೇಜಸ್ವಿ ಪ್ರಕಾಶನ ೧೯೯೪.

❖ ಮಂದಾಕಿನಿ ಪುರೋಹಿತ್–ತುಳುನಾಡಿನಲ್ಲಿ ಜಾನಪದ ಅಧ್ಯಯನ, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

❖ ಮರಿಯಪ್ಪ ಭಟ್ಟ ಎಂ. (ಸಂ) –ಕಿಟೆಲ್ಲರ ಕನ್ನಡ ಇಂಗ್ಲೀಷ್ ನಿಘಂಟು (ನಾಲ್ಕು ಸಂಪುಟಗಳು) ಮದರಾಸು ವಿಶ್ವವಿದ್ಯಾಲಯ ಮದರಾಸು. ೧೯೬೯

❖ ಮೊಗಳ್ಳಿ ಗಣೇಶ್ – ದಲಿತರು ಮತ್ತು ಜಾಗತೀಕರಣ–, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

❖ ಮೈತ್ರಿ ಕೆ.ಎಂ. – ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

❖ ರಮೇಶ್ ಕೆ. ವಿ. –ತುಳುನಾಡಿನ ಇತಿಹಾಸ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ. ೧೯೬೮

❖ ರಮೇಶ ಕೆ. ವಿ. – ತುಳುನಾಡ ಇತಿಹಾಸ– –ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ –೧೯೬೯.

- ರಮೇಶ ಸ. ಚಿ. ಅಲೆಮಾರಿಗಳ ಸ್ಥಿತಿಗತಿ –ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ–೨೦೦೨
- ರಹಮತ್ ತರೀಕೆರೆ – ಕನ್ನಡ ಸಂಶೋಧನೆ ತಾತ್ವಿಕ ವಿಚಾರ– ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೭.
- ರಾಮಚಂದ್ರಾಚಾರ್ ಡಿ.ಬಿ. – ಕುಡಿಯರ ಸಂಸ್ಕೃತಿ–, (ಉಪಸಂಸ್ಕೃತಿ ಅಧ್ಯಯನ ಮಾಲೆ) ಕರ್ನಾಟಕ ಸಾಹಿತ್ಯ ಅಕಾಡೆಮಿ–೧೯೯೩.
- ವಿವೇಕ ರೈ ಬಿ. ಎ. –ಅನ್ವಯಿಕ ಜಾನಪದ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು. ೧೯೯೫
- ವಿವೇಕ ರೈ. ಬಿ. ಎ. ಯದುಪತಿ ಗೌಡ, ರಾಜಶ್ರೀ (ಸಂ) –ಭೂತಾರಾಧನೆಯ ಬಿಲ್ಲುಗಾರಿಕೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. ೨೦೦೧
- ವಿವೇಕ ರೈ. ಬಿ. ಎ–ತುಳು ಜಾನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜ ಪೇಟೆ, ಬೆಂಗಳೂರು. ೧೯೮೫
- ವಿವೇಕ ರೈ. ಬಿ. ಎ. ಯದುಪತಿ ಗೌಡ – ಮಲೆಕುಡಿಯರು – ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳುಪೀಠ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ –೧೯೯೬.
- ವಿವೇಕ ರೈ ಬಿ.ಎ. – ಅನ್ವಯಿಕ ಜಾನಪದ– ಕರ್ನಾಟಕ ಸರಕಾರ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು–೧೯೯೫.
- ವೀರಣ್ಣ ದಂಡೆ (ಸಂ) –ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು. ೧೯೯೨
- ವಾಮನ ನಂದಾವರ– ಕೋಟಿಚೆನ್ನಯ–ಹೇಮಾಂಶು ಪ್ರಕಾಶನ ಮಂಗಳೂರು. ೨೦೦೨
- ಶಿವರಾಮ ಕಾರಂತ – ಕುಡಿಯರ ಕೂಸು, ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು–೧೯೮೬.
- ಶೆಟ್ಟಿ ಎಸ್. ಡಿ. (ಸಂಪಾದಕರು)– ಬೆಳ್ತಂಗಡಿ ಪರಿಸರದ ಜನಾಂಗೀಯ ಅಧ್ಯಯನ. –೨೦೦೩.
- ಸವಿತಾ ನಾಯಕ – ಬುಡಕಟ್ಟು ಮಹಿಳೆಯರು ಪ್ರಸಾಧನ ಕಲೆ–, ಪ್ರಸಾಂರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ–೨೦೦೦.
- ಸುಬ್ಬಣ್ಣ ರೈ. ಎ. –ದ.ಕ. ಜಿಲ್ಲೆಯ ಐತಿಹ್ಯಗಳು, ಚೇತನ ಪ್ರಿಂಟರ್ಸ್, ಕಲ್ಲಡ್ಕ. ೧೯೮೪

ಲೇಖನಗಳು :

❖ ಚಿನ್ನಪ್ಪ ಗೌಡ ಕೆ. – ನೆಲೆತಪ್ಪಿದ ಮಲೆಕುಡಿಯರು, ಮುಂಗಾರು ಹುಟ್ಟುಹಬ್ಬದ ಪುರವಣಿ ಸಪ್ಟೆಂಬರ್ ೯– ೧೯೮೬.

❖ ಚಿನ್ನಪ್ಪ ಗೌಡ ಕೆ. – ಮಲೆಕುಡಿಯ ಜನಾಂಗ – ಐತಿಹಾಸಿಕ – ಸಾಂಸ್ಕೃತಿಕ ವಿಶ್ಲೇಷಣೆ– ಸಂತುಷ್ಟಿ, ಎಂ. ಎಸ್. ಲಕ್ಕೆ ಅಭಿನಂದನಾ ಗ್ರಂಥ – ೧೯೯೩.

❖ ಬೋರಲಿಂಗಯ್ಯ ಹಿ.ಚಿ. – ಗಿರಿಜನರು ಇನ್ನೂ ಕನಸಾಗಿರುವ ಅಭಿವೃದ್ಧಿ, ಪ್ರಜಾವಾಣಿ, ದೀಪಾವಳಿ ವಿಶೇಷಾಂಕ ಪುಟ – ೧೧೪,೧೨೫–೧೯೯೧.

❖ ರಾವ್ ಕೆ. ವಿ. –ಬದಲಾದ ಮಲೆನಾಡ ಬದುಕು, ಮುಂಗಾರು ಎರಡನೇ ಹುಟ್ಟು ಹಬ್ಬದ ಪುರವಣಿ ಸಪ್ಟೆಂಬರ್ ೯ – ೧೯೮೬.

❖ ಶ್ರೀಧರ ಗೌಡ ಪಿ. : ಮಲೆಕುಡಿಯರು–ಒಂದು ವಿವೇಚನೆ–ಸಿರಿ—ಅಮೃತ ಸೋಮೇಶ್ವರ ಅಭಿನಂದನಾ ಸಂಪುಟ ಪುಟ ೩೧೧.

BIBLIOGRAPHY

- AMIT VERMA - TRIBAL RELIGION CHANGE AND CONTINUITY-PUBLISHED BY FOR COMMON WEALTH PUBLISHED NEW DELHI 2000.
- ANANTHA KRISHNA IYAR L.K-THE MYSORE TRIBES AND CASTED VOL.III-PAGE 600-604 - MYSORE.
- ANURADHA SHARMA - CASTES AND TRIBES IN INDIA COMMONWEALTH PUBLISHERS -1998.
- BAIDYANATH SARASWATHI - TRIBAL THOUGHT AND CULTURE-EDITEDBY- -CONCEPT PUBLISHING COMPANY, NEW DELHI-PUBLISHED AND PRINTED BY ASHOK KUMAR MITTAL. 1991
- BHAGWAT BHANDARI - TRIBAL MARRAIGES AND SEX RELATION-HIMANSHU PUBLICATIONS, UDAIPUR (RAJASTHAN) 1989.
- CENSES OF INDIA -KARNATAKA SERIES-9-PARTS 5. 1981
- CENSUS OF INDIA - KARNATAKA –SPECIAL FOR SCHEDULES TRIBES-B.K.DAS OF THE INDIAN ADMINISTRATIVE SERVICE DIRECTOR OF CENSUS OPERATION, KARNATAKA. 1981
- DEVENDRA AND D.N.THAKUR (EDITORS) - TRIBAL LIFE INDIA- VOL-I-X-DEEP AND DEEP PUBLICATIONS NEW DELHI.
- G.K.GHOSE - TRIBAL AND THEIR CULTURE-VOL-I AND II- ASHISH PUBLISHING HOUSE, NEWDELHI-1992.
- GURURAJA BHAT.P-1975-STUDIES IN TULUVA HISTORY AND CULTURE, KALLIANPUR, SOUTH CANARA.
- HASNAIN NANDEEM - TRIBAL INDIA TODAY- -NEW DELHI-HARNAM PUBLICATIONS.
- .H.M.MARULASIDDIAH PATEL - MALEKUDIA- PAGE 353-360-IN PRAKASHCHANDRA MEHTA-ETHNOGRAPHIC ATLAS OF INDIAN TRIBES-PUBLISHED BY DISCOVERY PUBLISHING HOUSE, NEW DELHI-2004.

- ❖ K.M. ARI MITTAL - TRIBAL FAMILIES AND FERTILITY AT CROSS – ROADS- S.PATEL-PUBLISHED FOR MITTAL PUBLICATIONS 1993.
- ❖ K.S.SINGH (EDITED) - THE TRIBAL SITUVATION IN INDIA.
- ❖ K.S.SINGH, RAMESH JAIN (EDITED) - TRIBAL MOVEMENT IN INDIA – VOL-I -PUBLISHED, MANOHAR PUBLICATIONS, NEW DELHI -1982.
- ❖ K.S.SINGH-MUL (EDITOR)-. TRIBAL MOVEMENT IN INDIA.
- ❖ KARNATAKA STATE SOUTH CANARA DISTRICT-GOVT OF KARNATAKA PUBLICATION-1973.
- ❖ KISHORE C. PADHY -THE CHALLENGES OF TRIBAL DEVELOPMENT- PUBLISHED BY SARUP AND SONS , NEW DELHI.
- ❖ M.A.SHERRING.M.A.LLB - THE TRIBES AND CASTES OF THE MADRAS PRESIDENECY -COSMO PUBLICATIONS DELHI -VOL-III. 1975
- ❖ M.GURULINGAIAH - TRIBAL CULTURE CHANGE AND MOBNILITY- ANMOL PUBLICATIONS PVT.LIMITED, NEW DELHI-2007.
- ❖ MARIAPPA BHAT, SHANKAR KEDILAYA-TULU-ENGLISH DICTIONARY, UNIVERSITY OF MADRAS 1967.
- ❖ MICHAEL YORKE JAYA PRAKASH RAOCO - TRIBES OF INDIA-THE STRUGGLE FOR SURVIVAL-CHRISTOPH VON FURER-HAMIENDROF.WITH CONTRIBUTIOUS -DELHI, OXFORD UNIVERSITY PRESS, BOMBAY, CALUTTA, MADRAS.
- ❖ MISRA.P.K NOMADS IN THE MYSORE CITY, ANTHROPOLOGICAL SURVEY OF INDIA, CALCUTTA. 1971
- ❖ N.N.VYAS, .R.S.MANN RAWAT - INDIAN TRIBES IN TRANSITION – EDITED BY- PUBLICATIONS, JAIPUR DELHI-1980.
- ❖ PEER, MOHAMMAD – " TRIBAL DEVELOPMENT PROGRAMME, A CASTE STUDY OF KARNATAKA : AN EVALUATION REPORT SUBMITTED TO THE MINISTRY OF WELFARE, GOVT. OF INDIA" – 1992.
- ❖ PRAKASHCHANDRA MEHTA - ETHNOGRAPHIC ATTLAS OF INDIA TRIBES-EDI-DR..DISCOVERY PUBLISHING HOUSE-NEW DELHI-2004.

- R.S.MANN - TRIBAL CULTURES AND CHANGE-,K.MAUN MITTAL PUBLICATIONS, NEW DELHI -1989.
- RAMESH.K.V-A HISTORY OF SOUTH CANARA, KARNATAKA UNIVERSITY, DHARWAD. 1970
- S.NARAYAN - PERSPECTIVE ON TRIBAL DEVELOPMENT(GANDHIAN APPROACH TO PLAN DEVELOPMENT)- COMMONWEALTH PUBLISHERS, NEW DELHI INDIA -1997.
- S.NARAYAN - PERSPECTIVES ON TRIBAL DEVELOPMENT(GANDHIAN APPROACH TO PLAN DEVELOPMENT)-,-COMMONWEALTH PUBLISHERS NEW DELHI-1997.
- SACHCHIDANANDA, R.R.PRASAD (EDITOR) - ENCYCLOPAEDIC PROFILE OF INDIAN TRIBES, -VOL-I-IV, DISCOVERY PUBLISHING HOUSE NEW DELHI-1996.
- SINGH K.STHE - SCHEDULES CASTES, PEOPLE OF INDIA-OXFORD UNIVERSITY PRESS, NEW DELHI. 1993
- SRIDHARA GOWDA P – " IMPACT OF SCIENCE AND TECHNOLOGY ON TRIBAL OCCUPATION : A STUDY ON MALEKUDIYAS OF BELTHANGADY TALUK" (M. Phil THESIS) 1995.
- SRIDHARA GOWDA P – " SOCIAL CHANGE AMONG MALEKUDIYAS IN DAKSHINA KANNADA DISTRICT " (Ph.D THESIS) 1996.
- SURYANTHA U KAMATH (CHIEF EDITOR) - KARNATAKA STATE GAZETTER PART-I- - -GOVT OF KARNATAKA PUBLICATION-1982.
- SYED SIRAJ UL HASSAN -THE CASTES AND TRIBES-H.E.H.THE NIZAM'S DO MIRONS-.
- THE TRIBAL PEOPLE OF INDIA-PUBLICATION DIVISION-MINISTRY OF INFORMATION AND BROADCASTING GOVERNMENT OF INDIA PRESENTED BY THE MANAGER, GOVERNMENT OF INDIA PRESS COIMBATORE-19

- THE TRIBALS OF INDIA, NEW DELHI EDITION- THROUGH THE LESS OF SUNIL JANATH-OXFORD UNIVERSITY PRESS, NEW EDITION-PUBLISHED BY OXFORD UNIVERSITY PRESS, NEW DELHI 2003.

THURSTON.E:CASTES AND TRIBES OF SOCUTHERN INDIA, CASMO PUBLICATION, VOL.VI,NEW DELHI. 1909

ವಕ್ತೃಗಳ ಹೆಸರು ಮತ್ತು ವಿಳಾಸ:

೧. ಹೆಸರು : ಆನಂದ
ವಿದ್ಯಾಭ್ಯಾಸ : ಇಲ್ಲ
ಪ್ರಾಯ : ಅಂದಾಜು ೪೦
ಮದುವೆ : ಆಗಿಲ್ಲ
ಕುಟುಂಬ : ಅವಿಭಕ್ತ
ಮನೆಯ ಹೆಸರು : ಪೇಳ
ಗ್ರಾಮ : ಶಿರ್ಲಾಲು
ತಾಲೂಕು : ಬೆಳ್ತಂಗಡಿ

೨. ಹೆಸರು : ಗಂಗಮ್ಮ
ವರ್ಷ : ೪೫
ಜಾತಿ : ಮಡಿವಾಳ
ಬಿಳಿನೆಲೆ ಗ್ರಾಮ
ಪುತ್ತೂರು ತಾಲೂಕು

೩. ಹೆಸರು : ರಾಮ ಮಲೆಕುಡಿಯ
ಪ್ರಾಯ : ೧೦೧
ಜಾತಿ : ಮಲೆಕುಡಿಯ (ಗುರಿಕಾರ)
ವಿದ್ಯಾಭ್ಯಾಸ : ಇಲ್ಲ
ಉದ್ಯೋಗ : ಕೃಷಿ
: ಸುಳ್ಯ ತಾಲೂಕು

೪. ಹೆಸರು : ಕುಂಡ ಮಲೆಕುಡಿಯ
ವರ್ಷ : ೭೦
ವಿದ್ಯಾಭ್ಯಾಸ : ಇಲ್ಲ
ಉದ್ಯೋಗ : ಕೃಷಿ
: ಸುಳ್ಯ ತಾಲೂಕು

೫. ಹೆಸರು : ಹೊನ್ನಪ್ಪ ಮಲೆಕುಡಿಯ (ಗುರಿಕಾರ)
ಪ್ರಾಯ : ೬೦
ವಿದ್ಯಾಭ್ಯಾಸ : ೩ನೇ ತರಗತಿ
ಉದ್ಯೋಗ : N.H ರಸ್ತೆಯ
: ಉಸ್ತುವಾರಿ
: ಸಿರಿಬಾಗಿಲು ಗ್ರಾಮ
: ಪುತ್ತೂರು ತಾಲೂಕು.

೬. ಹೆಸರು : ಬಾಲಕಿ
ಪ್ರಾಯ : ೫೨
ಉದ್ಯೋಗ : ಕೃಷಿ
: ಸಿರಿಬಾಗಿಲು
: ಪುತ್ತೂರು ಬಾಗಿಲು

೮. ಹೆಸರು : ದೇರಪ್ಪ
ಪ್ರಾಯ : ೪೫
ವಿದ್ಯಾಭ್ಯಾಸ : ೧೦ನೇ ತರಗತಿ
ಉದ್ಯೋಗ : ಕೃಷಿ
: ಕೋಲೋಡಿ ಗ್ರಾಮ
ಮೂಲ : ಎಲಿಮಲೆ
ಬೆಳ್ತಂಗಡಿ ತಾಲೂಕು

೯. ಜಾರಪ್ಪ
ಮಲೆಕ್ಕಿನ ಮನೆ
ಶಿರ್ಲಾಲು
ಬೆಳ್ತಂಗಡಿ ತಾಲೂಕು

೧೦. ರುಕ್ಮಯ್ಯ
ಹೆಂಡೇಲು ಮನೆ
ಶಿರ್ಲಾಲು
ಬೆಳ್ತಂಗಡಿ ತಾಲೂಕು

೧೧. ಶ್ರೀಧರ್ಣಪ್ಪ
ಬೈಲಡ್ಕ ಮನೆ
ಶಿರ್ಲಾಲು ಮನೆ
ಬೆಳ್ತಂಗಡಿ ತಾಲೂಕು.

೧೨. ಹೆಸರು : ಶ್ರೀ ಜಿ. ವೆಂಕಪ್ಪ ಮಲೆಕುಡಿಯ
ಪ್ರಾಯ : ೫೨
ವಿದ್ಯಾಭ್ಯಾಸ : ೭ನೇ ತರಗತಿ
: ಗುಡ್ಡೆ ತೋಟ ಮನೆ
: ಶಿಶಿಲ,
: ಬೆಳ್ತಂಗಡಿ ತಾಲೂಕು.

೧೩. ಹೆಸರು : ಗೋಪಿ
ಪ್ರಾಯ : ೫೦
ವಿದ್ಯಾಭ್ಯಾಸ : ೩ನೇ ತರಗತಿ
ವೃತ್ತಿ : ಕೂಲಿ
: ಶಿಶಿಲ

೧೪. ಹೆಸರು : ಎಂ.ಸೋಮ
ಪ್ರಾಯ : ೫೦
ವಿದ್ಯಾಭ್ಯಾಸ : ೩ನೇ ತರಗತಿ
: ಬಾಂಜಾರು ಮಲೆ

೧೫. ಹೆಸರು : ಬಿ. ಗಣೇಶ
ವಿದ್ಯಾಭ್ಯಾಸ : ೭ನೇ ತರಗತಿ
ಪ್ರಾಯ : ౩೨
: ಬಾಂಜಾರು ಮಲೆ

೧೬. ಹೆಸರು : ಸುರೇಶ
ಪ್ರಾಯ : ೩೫
ಶಾಲೆ : ೧೦ನೇ ತರಗತಿ
ಬಾಂಜಾರು ಮಲೆ

೧೭. ಹೆಸರು : ಕೃಷ್ಣ ಮಲೆಕುಡಿಯ
: ಕನ್ಯಾನ ಗ್ರಾಮ
: ಬಂಟ್ವಾಳ ತಾಲೂಕು

೧೮. ರಾಮ ಮಲೆಕುಡಿಯ
ಕನ್ಯಾನ ಗ್ರಾಮ
ಬಂಟ್ವಾಳ ತಾಲೂಕು

೧೯. ಸೋಮ ಮಲೆಕುಡಿಯ
ಪೆರಿಯಡ್ಕ
ಬೆಳ್ತಂಗಡಿ ತಾಲೂಕು

೨೦. ವಿಶ್ವನಾಥ ಮಲೆಕುಡಿಯ
ಧರ್ಮಸ್ಥಳ
ಬೆಳ್ತಂಗಡಿ ತಾಲೂಕು

೨೧. ತಿಮ್ಮಯ್ಯ
ಕೋಲ್ನ ಮನೆ (ಕೋಲೋಡಿ)
ನೆರಿಯ – ಬೆಳ್ತಂಗಡಿ ತಾಲೂಕು

೨೨. ರಾಜಶೇಖರ
ಸಮಾಜ ಕಲ್ಯಾಣಾಧಿಕಾರಿಗಳು
ಬೆಳ್ತಂಗಡಿ

೨೩. ಎಲ್ಯಪ್ಪೆ
ಬರೆಮೇಲು ಮನೆ
ಪುದುವೆಟ್ಟು

೨೪. ಕೃಷ್ಣಪ್ಪ ಮಲೆಕುಡಿಯ
ಆಲಂಗಾಯಿ ಕೊಲೋನಿ
ನೆರಿಯ ಗ್ರಾಮ ಬೆಳ್ತಂಗಡಿ ತಾಲೂಕು

೨೫. ದಯಾನಂದ ಮಲೆಕುಡಿಯ
ನೇತ್ರಾವತಿ
ಧರ್ಮಸ್ಥಳ ಗ್ರಾಮ
ಬೆಳ್ತಂಗಡಿ ತಾಲೂಕು

೨೬. ಜಾರಪ್ಪ
ಅಧ್ಯಕ್ಷರು, ಲ್ಯಾಂಪ್ ಸೊಸೈಟಿ, ಸುಳ್ಯ
ಸುಳ್ಯ ತಾಲೂಕು

೨೭. ಗೋವಿಂದರಜ್
ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ
ಮಂಗಳೂರು ವಿಶ್ವವಿದ್ಯಾಲಯ

೨೮. ಎಲ್ಯಣ್ಣ ಮಲೆಕುಡಿಯ
ಕೊಲೋಡಿ
ನೆರಿಯ ಗ್ರಾಮ ಬೆಳ್ತಂಗಡಿ ತಾಲೂಕು

೨೯. ಕೃಷ್ಣಪ್ಪ ಮಲೆಕುಡಿಯ
ಮುಂಡಾಜೆ ಗ್ರಾಮ
ಬೆಳ್ತಂಗಡಿ ತಾಲೂಕು